If not delivered please return to
.. KODAGU" OFFICE, MERCARA

ಕೊಡಗು.

ಸಕ್ಕೇನ ಭೂಷಯತೇ ವಿದ್ಯಾ ಶೀಲ ಪ್ರಯತ್ನತಾ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಬಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಪುಟ ೩] ಕೊಡಗು, ಸ ೧೯೨೬ನೇ ಇಸವಿ ಸಪ್ಟೆಂಬರ್ ತಾರೀಕು ೩ನೇ ಶುಕ್ರವಾರ [ಸಂಚಿಕೆ ೧೩

SPENCER & CO., LTD.

MERCARA & POLLIBETTA.

STATE TOOLS DEPARTMENT.

Yate's hammer headed mamooties	4 lbs- Rs 30/ 4 1/2 lbs- Rs. 33/ 5 lbs- Rs. 36/-Doz.	
Digging forks 4 prongs	.. ..	Rs. 48/ Doz
Mamooty forks 4 prongs	.. ..	Rs. 39/ Doz.
Felling axes — Each	.. ..	Rs. 3/ & 3/4/
Planting bars— Each	.. ..	,, 3/12/
Weeding forks — Each	.. ..	,, 1/12/
Garden trowels	.. ..	,, 1/12/

GET IT AT SPENCERS- The House for all requisites

52—33

ಸ್ಥಾಪಿತವಾದದ್ದು 1874. ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು.— ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮಾವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ. 1,74,00,000
1924 ,, 2,37,00,000
1925 ,, 2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಲ್. ಆರ್. ಕೃಷ್ಣಸಾಮೈಯ್ಯರ್
ಬ್ರಾಂಚ್ ಸೆಕ್ರೆಟರಿ.

—72

ಸತ್ಯಮೇವಜಯತೇ.

(ಗುಣವಾಗದಿದ್ದರೆ ದಣ ಪರತ.)

ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶ್ರೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯು ಸೇವನೆಯಿಂದ ಗುಣಾಂತವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತ ಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ಶಕ್ತಿಯೂ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦.

ಪ್ರಮೇಹವಿನಾಶಿನಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು, ಹಳದಿಯಂತೆ ಹೋಗತಕ್ಕ ಕೀವು ಉರಿ, ವಗೈರೆ ಅಗದಿಜಾಗ್ರತೆಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩—೮—೦ ಟಪಾಲು ಖರ್ಚು ಬೇರೆ ಅನುಪಾನವಗೈರೆ ಔಷಧದ ಸಂಗಡ.

ಅಂಚೆಯ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಜಿ. ಎ. ಜೋಶಿ ಮತ್ತು ಕಂಪೆನಿ.

32 ನಂ 6. ಪೋಸ್ಟ್ ಬನವಾಸಿ, ಉತ್ತರ ಕಾನಡಾ.

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವುದು, ಹಳದಿ ಕಣ್ಣುರಿ, ಕಿವಿಯಿಂದ ಕೀವು ಸೋರುವುದು ಉಷ್ಣತನ, ಕಣ್ಣುನೋವು, ಅಪಸ್ಮಾರ ನಿದ್ದೆ ಬರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ಖಂಡಿತ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0.

ಚಂದನಾಸವ.—ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0; 3—8—0; 6—12—0.

ರೋಮನಾಶಿನಿ— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು. ಡಬ್ಬಿ ೧ಕ್ಕೆ 6 ಅಣೆ, 3 ಡಬ್ಬಿಗಳಿಗೆ 1, 1 ರೂಪಾಯಿ 3-8-0.

ಚಳಿಜ್ವರಾಯ ನಾಶಿನೀ ರಕ್ಷೆ.—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ, ದಿನಬಿಟ್ಟು ದಿನ ಬರುವ ಜ್ವರ, 3—4 ದಿನಕ್ಕೊಂದು ಬರುವ ಜ್ವರ, ಸಂದು ಬರುವ ಜ್ವರ, ಮತ್ತು ಜ್ವರಗಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣವಾಗುತ್ತದೆ. ಸೀಸೆ 1ಕ್ಕೆ ರೂ. 1—8—0; 3ಕ್ಕೆ ರೂ. 4—0—0, 6ಕ್ಕೆ ರೂ 7—0—0;

ವಿಳಾಸ—ಮನೋಲ್ಲಾಸಿನಿ ಕಂಪೆನಿ.
9 ಮಂಗಳೂರು, ಕೊಳನಾಡು.

52—37

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3

Telegraphic Address:-"SHOOTER" Bombay.

[52—1] Please write for Reduced net prices list for 1926

"ಕೊಡಗು"

ಸ ೧೯೩೬ನೇ ಇಸವಿ ಸೆಪ್ಟೆಂಬರ್ ತಾ. ೪ನೇ ಶುಕ್ರವಾರ

ತಿದ್ದುಪಡಿಯಾದ ಪಂಚಾಯತಿ ಬಿಲ್

ಕಳೆದ ನವಂಬರ್ 6 ನೇ ಸಂಚಿಕೆಯಲ್ಲಿ ನಾವು ಪ್ರಕಟಿಸಿದ ಗ್ರಾಮ ಪಂಚಾಯತಿ ಬಿಲ್ ಕೌನ್ಸಿಲಿನ ಮುಂದೆ ತರಲ್ಪಟ್ಟು ಕೌನ್ಸಿಲಿನವರು ನೇಮಿಸಿದ ಸಿಲೆಕ್ಟ್ ಕಮಿಟಿಯವರ ವಿಮರ್ಶೆಗೆ ಕೊಡಲ್ಪಟ್ಟಿತ್ತೆಂತ ವಾಚಕರಿಗೆ ಮೊದಲೇ ತಿಳಿದಿದೆಯಷ್ಟೆ. ಆ ಸಿಲೆಕ್ಟ್ ಕಮಿಟಿಯವರಿಂದ ತಿದ್ದಲ್ಪಟ್ಟ ಬಿಲ್ ಕೌನ್ಸಿಲ್ ಮೆಂಬರುಗಳಿಗೆ ಈ ವಾರ ಕಳುಹಿಸಲ್ಪಟ್ಟಿದೆ ಈ ಬಿಲ್ಲಿನ ಮೇಲೆ ಬದಲಾವಣೆಗಳನ್ನು ಸೂಚಿಸತಕ್ಕದ್ದಿದ್ದರೆ ಈ ಸಪ್ಟೆಂಬರ್ ತಿಂಗಳು 15ರ ವಳಗೆ ಕೌನ್ಸಿಲ್ ಆಫೀಸಿಗೆ ತಲುಪಬೇಕೆಂತ ಇದೆ ಇಂಥಾ ಬದಲಾವಣೆಯ ಸೂಚನೆಗಳು ಮುಖ್ಯವಾಗಿದ್ದರೆ ಅಂಥಾ ಬದಲಾವಣೆಗಳು ಕೌನ್ಸಿಲ್ ಚರ್ಚೆಗೆ ತರಲ್ಪಡಬೇಕಾದರೆ ಇಂಡಿಯಾ ಸರಕಾರದ ಮಂಜೂರಾತಿ ಬೇಕಾಗಿರುವದರಿಂದ ಸೂಚನೆಗಳು ಬೇಗನೆ ಬರಬೇಕೆಂತ ಮಾಡಿರುವದಾಗಿದೆಯೆಂತ ನೋಟೀಸಿನಲ್ಲಿ ಇದೆ ಸೂಚನೆಗಳನ್ನು ಕಳುಹಿಸಲು ಕೊಟ್ಟ ಸಮಯವು ಬಹಳ ಕಡಿಯಾಗಿದೆ ಬಿಲ್ಲಿಗೆ ಕೌನ್ಸಿಲ್ ಮುಂದೆ ತರುವ ಬದಲಾವಣೆಗಳಿಗೆ ಸಹ ಇಂಡಿಯಾ ಸರಕಾರದ ಮಂಜೂರಾತಿ ಮುಂದಾಗಿ ಪಡೆಯಬೇಕೆಂಬದು ಈ ಕೌನ್ಸಿಲಿಗೆ ಬಹಳ ಅವಮಾನಕರವಾದ ಸಂಗತಿಯಾಗಿದೆ ಬಿಲ್ಲನ್ನು ಚರ್ಚಿಸಿ ಮಂಜೂರ್ ಮಾಡಿದ ಆಕ್ಟಂತೂ ಇಂಡಿಯಾ ಸರಕಾರದ ಮಂಜೂರಾತಿ ಪಡೆಯಲೇ ಬೇಕಾಗಿರುವದರಿಂದ ಇಂಥಾ ಬದಲಾವಣೆಯ ಸೂಚನೆಗಳು ಇಂಡಿಯಾ ಸರಕಾರಕ್ಕೆ ಹೋಗಬೇಕೆಂತ ಮಾಡಿರುವದು ಅನಾವಶ್ಯದ ಮತ್ತು ತೊಂದರೆ ಕೊಡುವಂಥಾ ಸಂಗತಿಯಾಗಿದೆ ಈ ರೂಲನ್ನು ಆದಷ್ಟು ಬೇಗನೆ ತಿದ್ದಲು ಪ್ರಯತ್ನಿಸಬೇಕು

ಸಿಲೆಕ್ಟ್ ಕಮಿಟಿಯವರು ಮಾಡಿರುವ ಮುಖ್ಯ ತಿದ್ದುಪಡಿಗಳನ್ನು ನಾವು ವಿಮರ್ಶಿಸಿ ದೇಶಕ್ಕೆ ತಿಳುಹಿಸಿ ಕೊಡಬೇಕಾದದ್ದು ಅವಶ್ಯವಿದೆ. ಮೂಲ ಬಿಲ್ಲಿನ ಮೇಲೆ ನಾವು ಕಳೆದ ಆಕ್ಟೋಬರ್ 2 ಮತ್ತು 9 ನೇ ಸಂಚಿಕೆಗಳಲ್ಲಿ ಟೀಕಿಸಿದ್ದೆವು. ಆ ಟೀಕೆಗಳಲ್ಲಿ ಸೂಚಿಸಲ್ಪಟ್ಟ ಮುಖ್ಯ ಕಲವು ಸಂಗತಿಗಳನ್ನು ಸಿಲೆಕ್ಟ್ ಕಮಿಟಿಯವರು ಪರ್ಯಾಲೋಚಿಸಿ ಅಂಗೀಕರಿಸಿಕೊಂಡಿರುತ್ತಾರೆ.

ಬಿಲ್ಲಿನ 4 ನೇ ಸೆಕ್ಷನಿನಲ್ಲಿ ಯಾವ ಗ್ರಾಮಕ್ಕಾದರೂ ಚೀಪ್ ಕಮೀಶನರು ಗಸೆಟ್ಟಿನಲ್ಲಿ ಪ್ರಕಟಿಸುವದರ ಮೂಲಕ ಪಂಚಾಯತಿಯನ್ನು ಏರ್ಪಡಿಸಬಹುದೆಂತ ಇದೆ ಆ ಗ್ರಾಮವಾಸಿಗಳ ಅಭಿಪ್ರಾಯವನ್ನು ಮುಂದಾಗಿ ತೆಗೆದುಕೊಂಡು ಪಂಚಾಯತಿಯನ್ನು ನೇಮಿಸಬೇಕೆಂತ ಸಿಲೆಕ್ಟ್ ಕಮಿಟಿಯಲ್ಲು ಚರ್ಚೆ ನಡೆದು ಗ್ರಾಮದವರ ಅಭಿಪ್ರಾಯವನ್ನು ಮುಂದಾಗಿಯೇ ತೆಗೆದುಕೊಳ್ಳದೆ ಪಂಚಾಯತಿಯನ್ನು ಏರ್ಪಡಿಸುವದಿಲ್ಲವೆಂತ ಸಿಲೆಕ್ಟ್ ಕಮಿಟಿಯು ಒಹುಮತವಾದ್ದರಿಂದ ಬಿಲ್ಲಿನಲ್ಲಿ ಈ ಸಂಗತಿಯನ್ನು ಕಾಣಿಸಬೇಕೆಂತ ಇಲ್ಲವೆಂತ ತೀರ್ಮಾನಿಸಿದ್ದಾರೆ ಗ್ರಾಮದ ಅಭಿಪ್ರಾಯವನ್ನು ಮುಂದಾಗಿ ತೆಗೆದುಕೊಳುತ್ತಾರೆಂತಾದರೆ ಹೀಗೆ ಮಾಡಬೇಕೆಂತ ಆಕ್ಟಿನಲ್ಲೇ ನಿರ್ಬಂಧ ಪಡಿಸಿದ್ದರೆ ಕೆಡಕೇನೂ ಇರುತ್ತಿರಲಿಲ್ಲ

ಪಂಚಾಯತಿಯ ಮೆಂಬರುಗಳ ಸಂಖ್ಯೆ 7 ರಿಂದ 15 ರ ವರೆಗೆ ಇರಬೇಕೆಂತ ಇದ್ದದ್ದನ್ನು 5 ರಿಂದ 15 ರ ವಳಗೆ ಬದಲಾಯಿಸಲು ಯೋಚಿಸಿ ಹಾಗೆಯೇ ಬಿಟ್ಟಿದ್ದಾರೆ. ಸಂಖ್ಯೆ ಐದಾಗಲೀ ಏಳಾಗಲೀ ಅಷ್ಟೊಂದು ದೋಷವಿಲ್ಲ ಪಂಚಾಯಿತರನ್ನು ಚುನಾಯಿಸುವ ಓಟ್ ಕೊಡಲು 25 ವರ್ಷ ಪ್ರಾಯದವರಾಗಿರಬೇಕೆಂತ ಇದ್ದದ್ದನ್ನು ತಿದ್ದುಪಡಿಮಾಡಿ 21 ವರ್ಷದವರಿಗೆಲ್ಲಾ ಓಟಿನ ಹಕ್ಕು ಕೊಟ್ಟಿದ್ದಾರೆ. ಇದು ತೃಪ್ತಿಕರವಾಯಿತು. ಆದರೆ ಪಂಚಾಯತಿ ಮೆಂಬರಾಗಲು 25 ವರ್ಷದವರೇ ಆಗಬೇಕೆಂತ ಇಟ್ಟಿದ್ದಾರೆ.

ಪಂಚಾಯತರನ್ನು ಚುನಾಯಿಸುವ ಮತ್ತು ಪಂಚಾಯತರಾಗುವ ಅರ್ಹತೆಯು ಮೂಲಬಿಲ್ಲಿನಲ್ಲಿ ಹೆಂಗಸರಿಗೆ ಇತ್ತಿಲ್ಲ ಈ ಹಕ್ಕನ್ನು ಹೆಂಗಸರಿಗೆ ಕೊಡುವಂತೆ ತಿದ್ದುಪಡಿ ಮಾಡಿದ್ದಾರೆ ಈ ತಿದ್ದುಪಡಿಯು ಕೌನ್ಸಿಲಿನಲ್ಲಿಯೂ ಮಂಜೂರಾದೀತೆಂತ ನಂಬಿದ್ದೇವೆ. ಈ ಬದಲಾವಣೆಯಿಂದ ದೇಶದ ಹೆಂಗಸರೆಲ್ಲರೂ ಗ್ರಾಮದ ಆಡಳಿತದಲ್ಲಿ ಅಭಿರುಚಿತೆಗೆದುಕೊಳ್ಳುವವರಾಗುತ್ತಾರೆಂತ ನಂಬುತ್ತೇವೆ. ಇದರಿಂದ ಹೆಂಗಸರ ಗೌರವವೇ ಹೆಚ್ಚಾದಂತೆ ಆಗುತ್ತದೆ ಹೆಂಗಸರು ಒರೇ ಮನೆವಾರ್ತೆ ಕೆಲಸಮಾಡುವದೇ ಅವರ ಅರ್ಹತೆಯಾಗಿದೆಯೆಂಬ ಭಾವನೆಯನ್ನು ಅನೇಕರು ಇಟ್ಟುಕೊಂಡಿರುತ್ತಾರೆ ಗ್ರಾಮದಲ್ಲಿ ವಾಸಮಾಡುವ ಪ್ರತಿಯೊಬ್ಬ ಹೆಂಗಸಿಗೂ ಗ್ರಾಮದ ಆಡಳಿತದಲ್ಲಿ ಅಭಿರುಚಿತೆಗೆದುಕೊಳ್ಳಲು ಅವಕಾಶದೊರೆತದ್ದರಿಂದ ಗ್ರಾಮದ ಆಡಳಿತದ ಹಿತಚಿಂತಕರ ಸಂಖ್ಯೆ ಹೆಚ್ಚಾಯಿತು ಈ ಹಕ್ಕನ್ನು ಉಪಯೋಗಿಸಲು ಬಿಡುವದು ಗಂಡಸರ ಕೈಯಲ್ಲಿದೆ ಗಂಡಸರ ಮಾತು ಮೀರಿ ಹೆಂಗಸರು ಗ್ರಾಮದ ಜಗಳದಲ್ಲಿ ಸೇರಲಾರರು ಪಂಚಾಯತ್ ಆಕ್ಟಿನಲ್ಲಿ ಹೆಂಗಸರಿಗೆ ಈ ಹಕ್ಕು ಕೊಡಲ್ಪಟ್ಟಿದ್ದರೂ ಹೆಂಗಸರು ಓಟ್ ಕೊಡಲು ಹೋಗಿಯೇ ಹೋಗುತ್ತಾರೆಂತಲೂ, ಅದರಿಂದ ಮನೆಯ ಶಾಂತತೆಯು ಕಡಿಮೆಯಾಗುತ್ತದೆಂತಲೂ ಯಾರೂ ಯೋಚಿಸಕೂಡದು ಗ್ರಾಮ ಕೆಲಸಗಳಲ್ಲಿ ಭಾಗತೆಗೆದುಕೊಳ್ಳಲು ಅರ್ಹತೆ ಮತ್ತು ಅನುಮತಿಇರುವವರು ಮಾತ್ರ ಓಟ್ ಕೊಡುವ ಏಟಿಗೆ ಹೋಗುತ್ತಾರಷ್ಟೆ

ಸರಕಾರಿ ನೌಕರರು, ಪಟೇಲರು ವಿನಹ ಬೇರೆ ಯಾರೂ ಪಂಚಾಯತಿಯ ಮೆಂಬರಾಗಕೂಡದೆಂತ ಮಾಡಿದ ತಿದ್ದುಪಡಿಯು ಬಹಳ ಯುಕ್ತವಾಗಿದೆ ಈ ವಿನಾಯಿತಿಯನ್ನು ಸ್ಪಷ್ಟವಾಗಿ ಕಾಣಿಸದೆ ಇದ್ದರೆ ಬೇರೆ ರೈತರಂತೆಯೇ ನಾವು ರೈತರೇ ಆಗಿದ್ದೇವೆಂಬ ಕಾರಣ ಹೇಳಿ ಇಂಥಾ ಚುನಾಯಿತ ಸಭೆಗಳ ಮೆಂಬರುಗಳಾಗಲು ಪ್ರಯತ್ನಿಸುತ್ತಾರೆ ಹಾಗ ಮೆಂಬರುಗಳಾದರೆ ಅವರ ಮುಂದೆ ಇತರರು ಸ್ವಂತ ಬುದ್ಧಿಯನ್ನು ಉಪಯೋಗಿಸಿ ಕಲಸ ಮಾಡುವದು ಕಷ್ಟವಾಗುತ್ತದೆ ಪಂಚಾಯತಿಯ ಚುನಾವಣೆಯು ಎರಡು ವರ್ಷಕ್ಕೊಂದಾವರ್ತಿ ಆಗಬೇಕೆಂತ ಬದಲಾಯಿಸಿದ್ದಾರೆ ಗ್ರಾಮಗಳಲ್ಲಿ ಬಲಾಢ್ಯರು ಪಂಚಾಯತರಾಗಿ ಚನಾಯಿತರಾಗಿ ಗ್ರಾಮಕ್ಕೆ ಕೆಡಕಾಗುವ ಸಂಭವವಿದೆಯೆಂತ ಅನೇಕರಿಗೆ ಭಯವಿದೆ ಆದ್ದರಿಂದ ಚುನಾಯಿತ ಪಂಚಾಯತರು ಮಾಡುವ ಎರಡು ವರ್ಷದ ಕೆಲಸದಿಂದಲೇ ಅವರ ಕಡಕುಗಳನ್ನು ಗ್ರಾಮದವರು ತಿಳಿದುಕೊಂಡು ಅನಂತರ ಬೇರೆಯವರನ್ನು ಚುನಾಯಿಸುವ ಅನುಕೂಲಕೊಟ್ಟದ್ದು ಲೇಸಾಯಿತು. ಕೆಡಕುಮಾಡಲು ಎರಡು ವರ್ಷಕ್ಕಿಂತ ಹೆಚ್ಚಿಗೆ ಅವಕಾಶವಿಲ್ಲದಿರುವದು ಒಳ್ಳೇದು

15 ನೇ ಸೆಕ್ಷನಿನಲ್ಲಿ ಬಾವಿಗಳ ರಿಪೇರಿ, ಕೆರೆ ರಿಪೇರಿ, ಕುಡಿಯುವ ನೀರಿನ ಸರಬರಾಯಿ ಮುಂತಾದ ಕೆಲಸಗಳಿಗೆ ಪಂಚಾಯತಿ ಫಂಡನ್ನು ಖರ್ಚುಮಾಡಿದರೆ ಅಂಥಾ ಬಾವಿ ಮುಂತಾದ್ದರ ಉಪಯೋಗವು ಜಾತಿಭೇದವಿಲ್ಲದೆ ಎಲ್ಲಾ ಜಾತಿಯವರಿಗೂ ಉಪಯೋಗಕ್ಕೆ ದೊರಕಬೇಕು ಎಂಬ ಒಂದು ಹೊಸ ಶರತ್ತನ್ನು ಸೇರಿಸಿದ್ದಾರೆ. ಅಸ್ಪೃಶ್ಯವರ್ಗದವರಿಗೂ ಸಹ ಇಂಥಾ ಸಮುದಾಯಕ ಆಸರೆಗಳ ಉಪಯೋಗ ಇರಬೇಕೆಂತ ಇಡುವದು ಯುಕ್ತವಾಗಿದೆ ಕಟ್ಟಡಗಳನ್ನು ಹೇಗೆ ಕಟ್ಟಬೇಕೆಂಬದನ್ನು ನಿರ್ಣಯಿಸುವ ಹಕ್ಕು ಸಹ ಮೂಲಬಿಲ್ಲಿನಲ್ಲಿ ಇತ್ತು. ಕಟ್ಟಡಗಳನ್ನು ಕಟ್ಟಲಿಕ್ಕೆ ಪಂಚಾಯತರ ಅನುಮತಿ ಪಡೆಯಬೇಕೆಂತ ನಿರ್ಬಂಧ ಇಡುವದು ಯುಕ್ತವಲ್ಲ.

ಈ ಪಂಚಾಯತಿ ಬಿಲ್ಲಿನಲ್ಲಿಯೇ ಪಂಚಾಯತರಿಗೆ ಸಿವಿಲ್ ಕ್ರಿಮಿನಲ್ ಮೊಕದ್ದಮೆಗಳನ್ನು ವಿಚಾರಿಸುವ ಹಕ್ಕು ಕೊಡಬೇಕೆಂತ ದೇಶದಲ್ಲಿ ಅನೇಕರ ಅಭಿಪ್ರಾಯವಾಗಿದೆ ಈ ಹಕ್ಕನ್ನು ಪಂಚಾಯತರಿಗೆ ಕೊಡುವ ಸೆಕ್ಷನ್‌ಗಳನ್ನು ಸೇರಿಸಬೇಕೆಂಬ ವಿಷಯ ಚರ್ಚೆ ನಡೆದು ಸೇರಿಸಲಿಕ್ಕಾಗುವದಿಲ್ಲವೆಂತ ತೀರ್ಮಾನ ಮಾಡಿದ್ದಾರೆ ಇಂಥಾ ಪಂಚಾಯತಿ ಕೋರ್ಟುಗಳು ಬೇಕೆಂತ ಜನರ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರೆ ಆ ಬಗ್ಗೆ ಪ್ರತ್ಯೇಕ ಆಕ್ಟ್ ಮಾಡಿಕೊಳ್ಳಬಹುದೆಂಬದು ಸರಿಯಾಗಿಯೇ ಕಾಣುತ್ತದೆ. ಮದ್ರಾಸ್ ಆಧಿಪತ್ಯದಲ್ಲಿ ಗ್ರಾಮಗಳ ಆಡಳಿತದ ಪಂಚಾಯತಿಗಳೂ ಮೊಕದ್ದಮೆ ವಿಚಾರದ ಪಂಚಾಯತಿಗಳೂ ಬೇರೆ ಬೇರೆ ಆಕ್ಟುಗಳ ಮೇಲೆ ನೇಮಕವಾಗುವವಾಗಿವೆ ಆದಷ್ಟು ಬೇಗನೆ ಪಂಚಾಯತಿ ಕೋರ್ಟುಗಳನ್ನು ಏರ್ಪಡಿಸುವ ಬಿಲ್ಲನ್ನು ಕೌನ್ಸಿಲ್ ಮುಂದೆ ತರುವಂತೆ ಸರಕಾರವನ್ನು ವಶ್ಯಾಯಪಡಿಸುವದು ದೇಶದವರ ಕೈಯ

ಪಂಚಾಯತರ ಪೈಕಿ ಯಾವ ಮೆಂಬರನಾದರೂ ಗ್ರಾಮದ ರೈತರ ಯಾವ ಆಸ್ತಿಯೊಳಗಾದರೂ ಪಂಚಾಯತಿ ಕೆಲಸ ನಡಿಸಲಿಕ್ಕಾಗಿ ಪ್ರವೇಶಿಸಬಹುದೆಂತ ಇತ್ತು. ಪಂಚಾಯತಿ ಅಧ್ಯಕ್ಷರಿಗೂ ಅವರ ಆಫೀಸರುಗಳಿಗೂ ಮಾತ್ರ ಹಕ್ಕು ಇರಬೇಕೆಂತಲೂ ಹಾಗೆ ಪ್ರವೇಶಿಸಬೇಕಾದರೆ ಮೊದಲೇ ತಿಳಿಸಬೇಕೆಂತಲೂ ವ್ಯತ್ಯಾಸ ಮಾಡಿದ್ದಾರೆ.

ಗ್ರಾಮ ಪಂಚಾಯತಿಗಳಿಗೆ ಹೊಸ ಕಂದಾಯ ಹಾಕಿದ ವಿನಹ ಬೇರೆ ಹಣವೇ ಇಲ್ಲದೆ ಇರಬಾರದು ಪಂಚಾಯತಿಗಳಿಗೆ ಹಣಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿಯ ... ದು ಭಾಗವನ್ನು ಕೊಡಬೇಕೆಂತ ನಮ್ಮ ಅಭಿಪ್ರಾಯ ... ಮೊದಲೇ ಸೂಚಿಸಿರುತ್ತೇವೆ. ಸಿಲೆಕ್ಟ್ ಕಮಿಟಿಯವರು ಮಾಡಿರುವ ತಿದ್ದುಪಡಿಯಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿಯ ಭಾಗವನ್ನು ಹಕ್ಕಿನ ಮೇಲೆ ಪಂಚಾಯತಿಗೆ ಸಿಕ್ಕುವಂತೆ ಆಗಲಿಲ್ಲ ಡಿ. ಬೋರ್ಡಿಗೆ ಯುಕ್ತ ತೋರಿದಷ್ಟು ಹಣವನ್ನು ಅವರು ನಿರ್ಣಯಿಸುವ ಶರತ್ತುಗಳಿಗೆ ಒಳಪಟ್ಟು ಪಂಚಾಯತರಿಗೆ ಕೊಡಬಹುದೆಂತ ಮಾತ್ರ ಮಾಡಿದ್ದಾರೆ ಸರಕಾರದಿಂದಾಗಲೀ ಡಿ ಬೋರ್ಡಿನಿಂದಾಗಲೀ ನಿಯಮಿತ ಮೊಬಲಗು ಪಂಚಾಯತಿಗೆ ಸಿಕ್ಕಬೇಕೆಂತ ತಿದ್ದುಪಡಿ ಮಾಡಿಕೊಳ್ಳಬೇಕಾದದ್ದು ಅವಶ್ಯವಾಗಿದೆ ಮದ್ರಾಸ್ ಪಂಚಾಯತಿಗಳು ಹಣವಿಲ್ಲದೆ ಹೆಚ್ಚು ಕೆಲಸ ಮಾಡಲಿಕ್ಕೆ ಆಗುವದಿಲ್ಲವೆಂತ ಅನುಭವದಿಂದ ತಿಳಿದ ಸಂಗತಿಯಾಗಿದೆ ಪಂಚಾಯತಿ ಬಿಲ್ಲನ್ನು ಪೂರ್ತಿಯಾಗಿ ಜನರು ಒಪ್ಪಿಕೊಳ್ಳಬೇಕಾದರೆ ಪಂಚಾಯತರು ಹೊಸ ಕಂದಾಯ ಹಾಕದೆ ಪಂಚಾಯತರಿಗೆ ಖರ್ಚಿಗೆ ಹಣ ಸಿಗುವದೆಂಬದು ಖಾತ್ರಿಯಾಗಬೇಕು.

ಹೊಸಕಂದಾಯ ಹಾಕಬೇಕಾದರೆ ಪಂಚಾಯತರಲ್ಲಿ ಅರ್ಧ ಸಂಖ್ಯೆಯವರಾದರೂ ಒಪ್ಪಬೇಕೆಂತ ಇದ್ದದ್ದನ್ನು ಮೂರರಲ್ಲಿ ಎರಡು ಭಾಗ ಒಪ್ಪಬೇಕೆಂತ ತಿದ್ದಿದ್ದಾರೆ. ಇದು ಯುಕ್ತವಾದ ತಿದ್ದುಪಡಿಯಾಗಿದೆ

ಪಂಚಾಯತರ ತೀರ್ಮಾನಗಳ ಮೇಲೆ ಮೂಲಬಿಲ್ಲಿನಲ್ಲಿ ಅಪ್ಪೀಲ್ ಇರಲಿಲ್ಲ ಸುಭೇದಾರರಿಗೆ ಅಪ್ಪೀಲು ಇರಬೇಕೆಂತ ತಿದ್ದುಪಡಿ ಮಾಡಿದ್ದಾರೆ ಅಪ್ಪೀಲು ಇರಬೇಕಾದದ್ದು ಅವಶ್ಯವಾಗಿದೆ ಆದರೆ ಅಪ್ಪೀಲ್ ಸುಭೇದಾರರಿಗೆ ಇರಬೇಕೋ ಅಥವಾ ಅಸಿಸ್ಟೆಂಟ್ ಕಮೀಶನರಿಗೆ ಇರಬೇಕೋ ಎಂತ ಭಿನ್ನಾಭಿಪ್ರಾಯವಿರಬಹುದು ತತ್ಕಾಲ ಸುಭೇದಾರರಿಗೆ ಈ ಹಕ್ಕುಕೊಟ್ಟು ಅನಂತರ ಅನುಭವದಿಂದ ತಿದ್ದುಪಡಿಮಾಡಿಕೊಳ್ಳಬಹುದು

ಪಂಚಾಯತರು ಪಂಚಾಯತಿ ಫಂಡನ್ನು ಅಕ್ರಮವಾಗಿ ಉಪಯೋಗಿಸಿದರೆ ಚೀಪ್ ಕಮೀಶನರು ಅಂಥಾ ಅಕ್ರಮವಾಗಿ ಉಪಯೋಗವಾದ ಮೊಬಲಗನ್ನು ಪಂಚಾಯತರು ಕೊಡಬೇಕೆಂತ ತೀರ್ಮಾನಿಸಬಹುದೆಂತ ಇದ್ದದ್ದನ್ನು ತಿದ್ದಿ ಪಂಚಾಯತರಿಂದ ಇಂಥಾ ನಷ್ಟ ವಸೂಲ್ ಮಾಡಬೇಕಾದರೆ ಸಿವಿಲ್ ಕೋರ್ಟಿನಲ್ಲಿ ಫೈಸಲಾಗಬೇಕೆಂತ ತಿದ್ದಿರುವದು ತೃಪ್ತಿಕರವಾಗಿದೆ ಅಧಿಕಾರಿಗಳಿಗೆ ಅಧಿಕಾರಬಲದಿಂದ ತೀರ್ಮಾನಕ್ಕೆ ಇಡುವದರ ಬದಲಿಗೆ ಪಬ್ಲಿಕ್ ಕೋರ್ಟುಗಳಲ್ಲಿ ನ್ಯಾಯವಾಗಿ ವಿಚಾರವಾಗಿ ತೀರ್ಮಾನಿಸುವದು ಯುಕ್ತವೆಂಬ ಒಳ್ಳೇ ತತ್ವವನ್ನು ಸಾಧ್ಯವಾದಾಗಲೆಲ್ಲಾ ಅನುಸರಿಸುವದು ಆಗತ್ಯವಾಗಿದೆ.

ಈಗ ಇರುವ ಕೌನ್ಸಿಲಿನಲ್ಲೇ ಈ ಬಿಲ್ಲನ್ನು ಮಂಜೂರ್ ಮಾಡಿಕೊಳ್ಳುವದು ಅವಶ್ಯವಾಗಿದೆ ಡಿಸೆಂಬರ್ ಒಳಗೆ ಬಿಲ್ಲು ಮಂಜೂರಾಗದಿದ್ದರೆ ಈ ಬಿಲ್ಲಿನ ಚರ್ಚೆಯು ಪುನಃ ಮೊದಲಿನಿಂದಲೇ ಆರಂಭವಾಗಬೇಕಾಗುತ್ತದೆ. ಗ್ರಾಮದವರಿಗೆ ಗ್ರಾಮಾಡಳಿತದಲ್ಲಿ ಹೆಚ್ಚಿಗೆ ಹಕ್ಕನ್ನು ಆದಷ್ಟು ಬೇಗನೇ ಒದಗಿಸಿಕೊಳ್ಳುವದು ಒಳ್ಳೇದು

WANTED

A field writer from 1st October 1936, who can keep his own coolies about 20 to 25 during working season. State salary required.

Apply to.—

A. R.

3—1 C/o Editor "Kodagu"

Mercara

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ ೮ನೆಯ ಪ್ರಕರಣ.

'ನಟಾಲನ್ನು ಸೇರುದು

ಆಂಗ್ಲದೇಶಕ್ಕೆ ಪ್ರಯಾಣಮಾಡಿದಾಗ್ಗೆ ಬಂಧುವರ್ಗವನ್ನು ಬಿಟ್ಟುಹೋಗಬೇಕೆಂಬ ಸಂತಾಪವು ನನಗೆ ವಿಶೇಷವಾಗಿತ್ತು, ಆದರೆ ದಕ್ಷಿಣಾಫ್ರಿಕೆಗೆ ಹೊರಡುವ ವೇಳೆಯಲ್ಲಿ ಅಂಥ ಸಂತಾಪವೇನೂ ಹುಟ್ಟಲಿಲ್ಲವು. ನನ್ನ ತಾಯಿಯು ನಾನು ಆಂಗ್ಲದೇಶದಲ್ಲಿರುವಾಗಲೇ ಸತ್ತುಹೋದಳು. ಪ್ರಪಂಚಾನುಭವವು ಕೊಂಚವುಂಟಾಗಿದ್ದಿತು. ಹೊರಗೆ ಪ್ರಯಾಣಮಾಡುತ್ತಲೇ ಇದ್ದೆನು. ಮಾತುಮಾತಿಗೂ ರಾಜಕೋಟೆಯಿಂದ ಬೊಂಬಾಯಿಗೆ ಹೋಗುತ್ತಲೇ ಇದ್ದೆನು. ಹೆಂಡತಿಯನ್ನು ಬಿಟ್ಟುಹೋಗಬೇಕೆಂಬ ಯೋಚನೆಯು ಮಾತ್ರ ಹುಟ್ಟಿತು. ನಾನು ಆಂಗ್ಲದೇಶದಿಂದ ಬಂದಮೇಲೆ ಮತ್ತೊಂದು ಮಗುವು ಹುಟ್ಟಿತು. ಸಂಭೋಗ ಸೌಖ್ಯಾನುಭವಶಕ್ತಿಯು ಇನ್ನೂ ಕಡಮೆಯಾಗಿರಲಿಲ್ಲವಾದರೂ ಅದರ ಉದ್ರೇಕವು ಒಂದುಮಟ್ಟಿಗೆ ತಗ್ಗಿತು. ಪವಿತ್ರ ಪ್ರೇಮವು ಸ್ಥಿರಗೊಳ್ಳ ತೊಡಗಿತು. ಆಂಗ್ಲದೇಶದಿಂದ ನಾನು ಬಂದ ಮೇಲೆ ನಾನೂ ನನ್ನ ಹೆಂಡತಿಯೂ ಬಹಳ ಕಾಲ ಒಂದೇ ಕಡೆ ವಾಸಿಸಲು ಸಾಧ್ಯವಾಗದಿದ್ದರೂ ನಾನು ಅವಳ ಓದುವುದನ್ನು ಕಲಿಸ ಪ್ರಾರಂಭಿಸಿದೆನು. ಅದು ಸರಿಯಾಗಿ ಸಾಗಲಿಲ್ಲವಾಗಿ ಅದರಲ್ಲಿ ಕೊಂಚ ಬದಲಾವಣೆಯನ್ನು ಮಾಡಲುದ್ಯುಕ್ತನಾದೆನು. ಇದರಿಂದ ಅದರಭಿವೃದ್ಧಿಯನ್ನು ಕಾಣಬೇಕಾಗಿತ್ತು. ಕಲಿತವಳೆಂದು ನಾವಿಬ್ಬರೂ ಅಪೇಕ್ಷಿಸಿದೆವು. ಗರ್ಭಾವಸ್ಥೆಯನ್ನು ನೋಡಬೇಕೆಂಬ ಅಪೇಕ್ಷೆಯು ಪ್ರಬಲವಾಗಿದ್ದುದರಿಂದ ನನಗೆ ವಿಯೋಗವು ದುಸ್ಸಹವಾಗಿ ತೋರಲಿಲ್ಲವು. ಇನ್ನೊಂದು ವರ್ಷದಲ್ಲಿ ತಪ್ಪದೆ ಬರುತ್ತೇನೆಂದು ನನ್ನ ಪತ್ನಿಗೆ ಹೇಳಿ ರಾಜಕೋಟೆಯಿಂದ ಬೊಂಬಾಯಿಗೆ ಪ್ರಯಾಣಮಾಡಿದೆನು. ಅಲ್ಲಿ ಅಬ್ದುಲ್ಲಾ ಕಂಪೆನಿ ಏಜೆಂಟು ನನಗೆ ಸ್ಟೀಮರಿನ ಟಿಕೆಟನ್ನು ಕೊಡಿಸಿಕೊಡಬೇಕಾಗಿದ್ದಿತು. ಆ ಸ್ಟೀಮರಿನಲ್ಲಿ ಸ್ಥಳವಿರಲಿಲ್ಲವು. ಆಗ ಹೊರಡದಿದ್ದರೆ ಬೊಂಬಾಯಿನಲ್ಲಿರಬೇಕಾಗಿದ್ದಿತು. ನಾನು ಬಹಳ ಪ್ರಯತ್ನಪಟ್ಟರೂ ಮೊದಲನೆಯ ತರಗತಿಯಲ್ಲಿ ಸ್ಥಳದೊರೆಯಲಿಲ್ಲ. "ನೀವು ಡೆಕ್ಕ ಪ್ರಯಾಣಿಕರಾಗಿ ಹೊರಡಬೇಕು. ಸಲೂನಿನಲ್ಲಿ ನಿಮಗೆ ಊಟವೂ ದೊರೆಯಲಾರದು" ಎಂದು ಏಜೆಂಟು ಹೇಳಿದನು. ಇವ್ರಿಗೆ ಡೆಕ್ಕ ಪ್ರಯಾಣಿಕನಾಗಿ ಹೋಗುವುದು ಬಹಳ ಅಗೌರವಕರವೆಂದು ನನಗೆ ತೋರಿತಾದುದರಿಂದ ಅದಕ್ಕೆ ನಾನು ಸಮ್ಮತಿಸಲಿಲ್ಲ. ಏಜೆಂಟು ನಿಜಸ್ಥಿತಿಯನ್ನು ಹೇಳಲಿಲ್ಲವೆಂದು ನನಗೆ ಅನುಮಾನವುಟ್ಟಿತು. 1ನೇ ತರಗತಿಯಲ್ಲಿ ಸ್ಥಳವು ದೊರಕಬಹುದೆಂದು ಯೋಚಿಸಿ ನಾನು ಏಜೆಂಟಿಗೆ ಹೇಳಿ ಸ್ಟೀಮರನ್ನು ನೋಡಲಿಕ್ಕೆ ಹೋಗಿ ಚೀಫ್ ಆಫೀಸರ ಕೂಡ ಮಾತನಾಡಿದೆನು. "ಸಾಧಾರಣವಾಗಿ ಆಸನಗಳು ಖಾಲಿಯಾಗಿಯೇ ಇರುವುವಾದರೂ ಈ ಸಾರಿ ಮೊಜಾಂಬಿಗೆ ಗವರ್ನರ್ ಜನರಲರು ತಮ್ಮ ಪರಿವಾರದೊಡನೆ ಈ ಸ್ಟೀಮರಿನಲ್ಲಿ ಹೊರಡುವರಾದುದರಿಂದ ಎಲ್ಲಾ ಸ್ಥಾನಗಳನ್ನೂ ಅವರೇ ಆಕ್ರಮಿಸಿಕೊಂಡಿರುವರು' ಎಂದು ಹೇಳಿದನು. "ನನಗೂ ಕೂಡ ಹೇಗಾದರೂ ಒಂದು ಸ್ಥಾನವನ್ನು ನೋಡಲಾಗುವುದಿಲ್ಲವೇ? ಎಂದು ಕೇಳಿದೆನು. ನನ್ನ ಬಳಿ ಒಂದು ಸ್ಥಾನವು ಮಿಗಿಸಲಾಗಿರುವುದು. ಅದನ್ನು ಪ್ರಯಾಣಿಕರಿಗೆ ಕೊಡುವ ಪದ್ಧತಿಯಿಲ್ಲವಾದರೂ ನಿಮಗೆ ಕೊಡುತ್ತೇನೆ" ಎಂದು ಅತನು ಹೇಳಿದನು. ನಾನು ಅತನಿಗೆ ನನ್ನ ಕೃತಜ್ಞತೆಯನ್ನು ತಿಳಿಸಿ ಏಜೆಂಟನ್ನು ಕೇಳಲು ಅತನು ಟಿಕೆಟನ್ನು ಕೊಂಡುಕೊಟ್ಟನು. 1893 ನೇ ಏಪ್ರಿಲಿನಲ್ಲಿ ವಿಶೇಷ ಉತ್ಸಾಹದಿಂದ ನಾನು ದಕ್ಷಿಣಾಫ್ರಿಕಗೆ ಹೊರಟೆನು.

ನಾನು ಮೊಟ್ಟಮೊದಲು ಸೇರಿದ ರೇವೆಯು ಲಾಮೂ ಆಗಿತ್ತು. ಬೊಂಬಾಯಿಯಿಂದ ಹೊರಟವರಿಂದ 13ನೇ ದಿವಸಕ್ಕೆ ನಮ್ಮ ಹಡಗು ಲಾಮೂಯನ್ನು ಸೇರಿತು. ಹಡಗಿನ ಕ್ಯಾಪ್ಟನ್ನಿಗೂ ನನಗೂ ಬಹಳ ಸ್ನೇಹವುಂಟಾಯಿತು. ಅತನಿಗೆ ಚದರಂಗದ ಮೇಲೆ ಬಹಳ ಪ್ರೀತಿಯಿದ್ದಿತಾದರೂ ಅನುಭವವಿರಲಿಲ್ಲ. ನನಗೂ ಅದರ ಪರಿಚಯವಿಲ್ಲದಿದ್ದಾಗ್ಯೂ ಅತನು ಆಡಲು ನನ್ನನ್ನು ಕರೆದನು. ಚದುರಂಗವನ್ನು ಕುರಿತು ನಾನು ಬಹಳವಾಗಿ ಕೇಳಿದ್ದೇನಾದರೂ, ಯಾವಾಗಲೂ ಆಡಿರುವುದಿಲ್ಲ. ಅದಕ್ಕೆ ಒಳ್ಳೇ ಆಲೋಚನಾಶಕ್ತಿಯಿರಬೇಕೆಂದು ಕೇಳಿದ್ದೆನು. ಕ್ಯಾಪ್ಟನ್ನನು ಅದನ್ನು ನನಗೆ ಕಲಿಸಿಕೊಡುತ್ತೇನೆಂದನು. ಬಹಳ ಶ್ರದ್ಧೆಯಿಂದ ಕಲಿತುಕೊಳ್ಳುತ್ತಿದ್ದೆನು. ಪ್ರತಿಸಾರಿಯೂ ನಾನೇ ಸೋತುಹೋಗುತ್ತಿದ್ದೆನು. ಅದರಿಂದಾಗಿ ಅತನು ಇನ್ನಷ್ಟು ಶ್ರದ್ಧೆಯಿಂದ ಕಲಿಸಲಾರಂಭಿಸಿದನು. ನನಗೆ ಆಯಾಟವು ಇಂಬಿತಾದರೂ ಹಾ ಕೊಡಲು ಒರಲಿಲ್ಲ. ಲಾಮೂ ಹತ್ತಿರ ಹಡಗು ನಿಲ್ಲುತ್ತಲೆ ನಾನು ರೇವೆಯನ್ನು ನೋಡಲು ಇಳಿದೆನು. ಕ್ಯಾಪ್ಟನನೂ ಇಳಿದನು. ಈ ರೇವೆಯು ಅನಾಯಕರವಾದುದೆಂದು ಅತನು ನನ್ನನ್ನು ಎಚ್ಚರಿಸಿದನು. ಅದು ಚಿಕ್ಕ ಪಟ್ಟಣವು. ನಾನು ಪೋಸ್ಟಾಫೀಸಿಗೆ ಹೋದೆನು. ಅಲ್ಲಿ ಭಾರತೀಯರೇ ಕರಣಿಕರಾಗಿದ್ದರು. ಅವರನ್ನು ನೋಡುತ್ತಲೇ ನನಗೆ ಸಂತೋಷವಾಯಿತು. ಅವರ ಕೂಡ ಮಾತನಾಡಿದೆನು. ಅವರ ಪದ್ಧತಿಯನ್ನು ನೋಡಿ ನನಗೆ ಸಂತೋಷವಾಯಿತು. ಅವರನ್ನು ಗ್ರಹಿಸಲಿಚ್ಛೆಸಿದೆನು. ಮುಂದಕ್ಕೆ ಪ್ರಯಾಣ ಕಾಲದಲ್ಲಿ ಕೆಲವರೊಡನೆ ನನಗೆ ಪರಿಚಯವಾಗಿತ್ತು. ಕೆಳಗೆ ಇಳಿಗೆ ಮಾಡಿ ಹಾಯವಾಗಿ ಊಟಮಾಡಲು ಅವರು ಕೂಡ ಅಲ್ಲಿಳಿದರು. ನಾನು ಆಫ್ರಿಕೆಯವರನ್ನು ನೋಡಿಕೊಂಡು ಬರುವಷ್ಟರಲ್ಲಿ ಕೊಂಚಹೊತ್ತಾಗಿದ್ದಿತು. ಅಡಿಗೆಮಾಡಿ ಊಟಮಾಡಿದವರು ಬಂದು ದೋಣಿಯನ್ನು ಹತ್ತುತ್ತಿದ್ದಾಗ್ಗೆ ನಾನು ಕೂಡ ಆ ದೋಣಿಯನ್ನೇ ಹತ್ತಿದೆನು. ಅವರಲ್ಲಿ ಒಬ್ಬರು ಜಹಜವಾಗಿದ್ದರು. ಅಲೆಯು ಹೆಚ್ಚಾಗಿದ್ದಿತು. ದೋಣಿಯು ಹಡಗಿನ ಸಮೀಪಕ್ಕೆ ಬಂದಾಗ್ಯೆ ಅದನ್ನು ಏಣಿಗೆ ಕಟ್ಟಿಹಾಕಲು ಅವಕಾಶವಿಲ್ಲದಂತೆ ಸಮುದ್ರವು ಅಲ್ಲೋಲಕಲ್ಲೋಲವಾಗಿದ್ದಿತು. ಸ್ಟೀಮರು ಹೊರಡುವ ಸಮಯದಲ್ಲಿ ಸೀಟಿ ಹಾಕಲಾಯಿತು. ಕ್ಯಾಪ್ಟನನು ಮೇಲಿನಿಂದ ಕ್ಯಾಪ್ಟನನು ನನ್ನ ಆತಂಕವನ್ನು ನೋಡುತ್ತಿದ್ದನಾದುದರಿಂದ ಐದು ನಿಮಿಷಗಳಲ್ಲಿ ಬರುವುದಕ್ಕೆ ಅನುಜ್ಞೆಯನ್ನಿತ್ತನು. ಸ್ಟೀಮರಿನ ಬಳಿ ಮತ್ತೊಂದು ದೋಣಿ ಇದ್ದಿತು. ಅದನ್ನು ನನ್ನ ಸ್ನೇಹಿತರೊಬ್ಬರು ನನಗಾಗಿ 10 ರೂಪಾಯಿಗಳಿಗೆ ಮಾತನಾಡಿದನು. ಅಷ್ಟರಲ್ಲಿ ಏಣಿಯನ್ನು ಕಳಗೆ ಬಿಟ್ಟರು. ಅದರಿಂದ ಒಂದು ಹಗ್ಗವನ್ನು ಬಿಟ್ಟು ನನ್ನನ್ನು ಮೇಲಕ್ಕೆ ಸೆಳೆದುಕೊಂಡರ. ಹಡಗು ಹೊರಟಿತು. ಅಡಿಗೆಮಾಡಿ ಊಟಮಾಡಿಕೊಂಡು ಬಂದವರು ಅಲ್ಲಿಯೇ ಉಳಿದುಕೊಂಡರು. ಅಲ್ಲಿಂದ ಮುಂದಕ್ಕೆ ಮೊಂಬಾಸರೇವೆಯು ತರುವಾಯ ಜಾಂಜಿಬಾರ, ರೇವೆಯಲ್ಲಿ ಹಡಗು ನಿಂತಿತು. ಜಾಂಜಿಬಾರಿನಲ್ಲಿ 10 ದಿನದ ಕಳೆದಿತು. ಅಲ್ಲಿ ಮತ್ತೊಂದು ಹಡಗಿಗೆ ಬದಲಾಯಿಸಿಕೊಂಡೆವು.

ಕ್ಯಾಪ್ಟನ್ನಿಗೆ ನನ್ನ ಮೇಲೆ ಬಹಳ ದಯೆ ಇದ್ದಿತಾದರೂ ಅದರಿಂದ ವಿಪರೀತಫಲವುಂಟಾಯಿತು. ವಿಲಾಸಾರ್ಥವಾಗಿ ಹೊರಕ್ಕೆ ಹೋಗುವ ಜಾಗಕ್ಕೆ ನನ್ನನ್ನು ಒಬ್ಬ ಆಂಗ್ಲೇಯ ಕ್ಯಾಪ್ಟನು ಕರೆದನು. ಅದೇತಕ್ಕೋ ನನಗೆ ತಿಳಿಯದು. ನನ್ನ ಸಂಗತಿ ಅವನಿಗೆ ತಿಳಿಯದು. ಒಬ್ಬ ನೀಗ್ರೋ ಸ್ತ್ರೀಯ ಮನೆಗೆ ನಮ್ಮನ್ನು ಕರೆದುಕೊಂಡುಹೋದನು. ನಾವು ಮೂವರಿಗೂ ಮೂರು ಕೊಠಡಿಗಳನ್ನು ತೋರಿಸಿದರು. ಅಲ್ಲಿ ನಾನು ನಾಚಿಗೆಯಿಂದ ಬಾಯಿ ಬಿಡದೆ ಸ್ತಂಭೀಭೂತನಾಗಿ ನಿಂತುಕೊಂಡೆನು. ಆ ಸ್ತ್ರೀಯು ನನ್ನನ್ನು ನೋಡಿ ಏನೆಂದು ಕೊಂಡಳೋ ದೇವರೇ ಬಲ್ಲನು. ಕ್ಯಾಪ್ಟನು ಕೂಗಲಾಗಿ ಒಡನೆ ಹೊರಗೆ ಬಂದೆನು. ನಾನು ಆ ವ್ಯಭಿಚಾರಿಣಿಯಲ್ಲಿ ರಮಿಸಲಿಲ್ಲವೆಂದು ಕ್ಯಾಪ್ಟನು ತಿಳಿದುಕೊಂಡನು. ಮೊದಲು ನನಗೆ ಕೊಂಚ ಲಜ್ಜೆ ಹುಟ್ಟಿತು. ತರುವಾಯ ಧೈರ್ಯ ಹುಟ್ಟಿತು. ಏಕಾಂತ ಸ್ಥಳದಲ್ಲಿ ಆ ಸ್ತ್ರೀಯ ಸಂಗಡ ಸ್ವಲ್ಪವನ್ನೂ ಹೋಗದೆ ಪಾಪವನ್ನು ಕೊಟ್ಟದ್ದಕ್ಕಾಗಿ ದೇವರನ್ನು ಭಕ್ತಿಯಿಂದ ಧ್ಯಾನಿಸಿದೆನು. ಆ ಕೋಣೆಯೊಳಕ್ಕೆ ನಾನು ಹೋದುದರಿಂದ ಹೇಳಲು ಧೈರ್ಯ ಸಾಲದೆ ಹೋದದ್ದಕ್ಕಾಗಿ ನನಗೆ ವ್ಯಸನವಾಗುತ್ತಿದೆ. ನನ್ನ ಜೀವಿತದಲ್ಲಿ ಇದು ವ್ಯಭಿಚಾರ ವಿಷಯವಾದ ಮೂರನೆಯ ಪರೀಕ್ಷೆಯು. ಅನೇಕ ಯುವಕರ ನನ್ನ ಸ್ವಭಾವದಿಂದಿದ್ದರೂ ಇಂತಹ ಸಂದರ್ಭದಲ್ಲಿ ತಪ್ಪಿದ್ದರೆ, ಆ ಸ್ತ್ರೀಯರು ತಮ್ಮನ್ನು ನಪುಂಸಕರೆಂದು ಭಾವಿಸಿ ಪರಿಹಾಸ ಮಾಡುವರೆಂಬ ಭೀತಿಯಿಂದ ತಮ್ಮ ನಿಯಮವನ್ನು ಬಿಟ್ಟು ಅವರೊಡನೆ ಸಂಭೋಗಿಸುವರೆಂದು ನಾನು ಭಾವಿಸಿದೆನು. ಇದರಲ್ಲಿ ನನ್ನ ಬುದ್ಧಿಸಂತಿಕೆಯೇನೂ ಇಲ್ಲವು. ದಯಾಮಯನಾದ ಭಗವಂತನೇ ನನಗಂತಹ ಶಕ್ತಿಯನ್ನು ಕೊಟ್ಟು ಕಾಪಾಡಿದನು. ಅದರಿಂದ ನನಗೆ ಭಗವಂತನಲ್ಲಿ ವಿಶ್ವಾಸವು ಅಧಿಕವಾಯಿತು. ಜಾಂಜಿಬಾರಿನಲ್ಲಿ ಒಂದು ವಾರ ನಿಲ್ಲಬೇಕಾಗಿ ಬಂದುದರಿಂದ ನನ್ನನ್ನು ವ್ಯಾಪಾರಿಗಳಾಯ ಮನೆಗೆ ಕರೆದುಕೊಂಡು ಹೋಗಲ್ಪಟ್ಟೆನು. ಆ ಸುತ್ತಲಿನ ಪ್ರದೇಶವನ್ನೂ ತಿರುಗಿನೋಡಿದೆನು. ಜಾಂಜಿಬಾರಿನಲ್ಲಿರುವ ವೃಕ್ಷಜಾತಿಯು ಮಲೆಯಾಳದ ವಿನಹ ಬೇರೆ ಎಲ್ಲಿಯೂ ಕಾಣ ಬರುವುದಿಲ್ಲ. ಆ ದೊಡ್ಡ ದೊಡ್ಡ ಮರಗಳನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅಲ್ಲಿ ಹಣ್ಣುಗಳು ಕೂಡ ಬಹಳ ದೊಡ್ಡವು. ಅಲ್ಲಿಂದ ಮುಂದಕ್ಕೆ ಮೊಜಾಂಬಿಗೆ ಹೋದೆವು. ಮೇ ತಿಂಗಳ ಅಂತ್ಯದಲ್ಲಿ ನೆಟಾಲನ್ನು ಸೇರಿದೆವು.

ನಿರುದ್ಯೋಗದ ಸಮಸ್ಯೆ.

(The Unemployment Problem)

ಪ್ರಾಂತಿಕ ಸರಕಾರಗಳಿಗೊಂದು ಸರ್ಕ್ಯುಲಾರ್.

ಇಂಡಿಯಾ ಸರಕಾರದ ಅಭಿಪ್ರಾಯಗಳು.

ಇಂಡಿಯಾ ಸರಕಾರದವರು ಕೈಗಾರಿಕೆ ಮತ್ತು ಕಸುಬು ವಾರ್ತಾ ಇಲಾಖೆಯ ಮೂಲಕ ಕಳೆದ ಜನವರಿ 16ರಲ್ಲಿ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ನಿರುದ್ಯೋಗದ ಸಮಸ್ಯೆಯ ಮೇಲಾದ ಚರ್ಚೆಯ ಸಾರಾಂಶವನ್ನೊಳಗೊಂಡ ಸರ್ಕ್ಯುಲಾರೊಂದನ್ನು ಹೊರಡಿಸಿರುವರು. ಆ ಸರ್ಕ್ಯುಲಾರಿನಿಂದ ನಿರುದ್ಯೋಗದ ಪ್ರಶ್ನೆಯ ಮೇಲೆ ಇಂಡಿಯಾಸರಕಾರದ ಅಭಿಪ್ರಾಯಗಳು ವಿಶದವಾಗಿ ತಿಳಿಯುವುವು. ಅವರು ಹಳೆಯ ಮೇಗಳ ಎಸೆಂಬ್ಲಿಯಲ್ಲಿ ನಿರುದ್ಯೋಗ ಪ್ರಶ್ನೆಯ ಚರ್ಚೆಗೆ ಇಂಡಿಯಾಸರಕಾರದವರು ವಿರೋಧಿಸಿದರು. ಆ ಪ್ರಶ್ನೆಯನ್ನು ಮೊದಲು ಪ್ರಾಂತಿಕ ಸರಕಾರಗಳೂ ಪ್ರಾಂತಿಕ ಸಮಸ್ಯೆಗಳಾಗಿ ಚರ್ಚಿಸಿ ನಿರ್ಮಿಸಬೇಕೆಂದೇ. ಹಿಂದೂದೇಶದ ಬೇರೆ ಬೇರೆ ಭಾಗಗಳಲ್ಲಿ ನಿರುದ್ಯೋಗದ ಪ್ರಶ್ನೆಯು ಸ್ವಭಾವದಲ್ಲಿಯೂ ವಿಶಾಲತೆಯಲ್ಲಿಯೂ ಬೇರೆ ಬೇರೆ ರೂಪವನ್ನು ತಾಳಿರುವುದು ಮಾತ್ರವಲ್ಲ: ಅದನ್ನು ನಿವಾರಿಸುವುದಕ್ಕೆ ಉಪಯೋಗಿಸಬಹುದಾದ ಸಾಧನಗಳು ಪ್ರಾಂತಿಕ ಸರಕಾರಗಳು. ಅದರಲ್ಲಿ ಪ್ರಾಂತಿಕ ಸರಕಾರಗಳ ವರ್ಗಾಯಿಸಿದ ಖಾತೆಗಳು ಪ್ರಯೋಗಿಸಬಹುದಾದ ಸಾಧನಗಳೆಂದು ಇಂಡಿಯಾ ಸರಕಾರಕ್ಕೆ ಕಂಡುಬಂದಿದೆ. ಕೈಗಾರಿಕೆಯ ಅಭಿವೃದ್ಧಿ ಮತ್ತು ವಿದ್ಯಾ ಇಲಾಖೆಯ ಏರ್ಪಾಡುಗಳನ್ನು ಮಂತ್ರಿಮಂಡಲಿಯು ಸರಿಪಡಿಸಿ ತಾವೇ ಮಾಡಬೇಕಾದ ಕಾರ್ಯ. ಆದ್ದರಿಂದ ಮಧ್ಯವರ್ತಿ ಸರಕಾರವು ಒಡನೇ ಒಂದು ವಿಚಾರಣಾ ಸಭೆಯನ್ನೇರ್ಪಡಿಸುವುದು (Committee) ಇಂಡಿಯಾ ಸರಕಾರದ ಅಭಿಪ್ರಾಯದಲ್ಲಿ ಪ್ರಯೋಜನಕಾರಿಯಾಗುವಂತಿಲ್ಲ. ರಿಂದಾವಿನ ವಾಕ್ಯರಚನಾತ್ಮಕಮುಖಂಡಲಿ ಚರ್ಚೆಯು ನಡೆದ ಕ್ರಮದಿಂದಲೂ ತರಾವನ್ನು ಸಮರ್ಥಿಸಿದ ಸದಸ್ಯರಲ್ಲಿ ಹೆಚ್ಚಿನವರು ತಮ್ಮ ಮನಸ್ಸಿನಲ್ಲಿ ವಿಶೇಷವಾಗಿ ವಿದ್ಯೆಯನ್ನು ಹೊಂದಿದ ವರ್ಗಗಳಿಗೆ ಸಂಬಂಧಿಸುವ ನಿರುದ್ಯೋಗದ ಪ್ರಶ್ನೆಯನ್ನು ಯೋಚಿಸಿದ್ದರೆಂಬುದು ಸ್ಪಷ್ಟವಾಗಿತ್ತು. ಆದರೆ ವಾದವಿವಾದಗಳು ನಡೆಯುತ್ತಿರುವಾಗ ಈ ವಿಚಾರವನ್ನು ಒಂದಿಸಿ ಆಡಿದ ಕೆಲವು ಮಾತುಗಳಿಂದ ಸರಕಾರವು ಈ ಪ್ರಶ್ನೆಯ ಮಹತ್ವವನ್ನು ಕಡಿಮೆ ಮಾಡುವುದಕ್ಕೆ ಎಂದೂ ಯತ್ನಿಸಲಿಲ್ಲವೆಂದು ತಿಳಿಯುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲದೆ ಈ ಪ್ರಶ್ನೆಯು ಬಹು ಮಹತ್ವದ್ದು ಮತ್ತು ಶೀಘ್ರದಲ್ಲಿಯೇ ಪರಿಹರಿಸಬೇಕಾದುದು ಎಂದು ಸರಕಾರವು ಚೆನ್ನಾಗಿ ತಿಳಿದಿದೆ. ಬಹುಮಟ್ಟಿಗೆ ಹಿಂದೂದೇಶದ ಪ್ರತಿಯೊಂದು ಭಾಗದಲ್ಲಿಯೂ ಗುಮಾಸ್ತ ಮತ್ತು ಔದ್ಯೋಗಿಕ ವೃತ್ತಿಗಳಲ್ಲಿ ನೌಕರಿಯು ದೊರಕುವುದು, ನೌಕರಿ ಬೇಡುವವರ ಸಂಖ್ಯೆಗಿಂತ ಎಷ್ಟೋ ಕಡಿಮೆ ಇದೆಯೆಂಬುದಕ್ಕೆ ಬೇಕಷ್ಟು ದೃಷ್ಟಾಂತಗಳು ಸಿಕ್ಕುತ್ತವೆ. ಈ ತರದ ಸ್ಥಿತಿಯಿಂದ ಉಂಟಾಗುವ ಆರ್ಥಿಕ ಸಂಕಷ್ಟವು ರಾಜಕೀಯ ಅತೃಪ್ತತೆಗೆ (Political discontent) ಬಹುಮಟ್ಟಿಗೆ ಕಾರಣಭೂತವಾಗಿದ್ದಿತು. ಆದಕಾರಣ ಕೆಲವು ತರ್ಕವಾದಿಗಳು (Critics) ಇಂಡಿಯಾದೇಶದಲ್ಲಿ ಸರಕಾರವು ನಿರುದ್ಯೋಗದ ಪ್ರಶ್ನೆಯನ್ನು ಮನುಷ್ಯತ್ವದ (Humanitarian) ದೃಷ್ಟಿಯಿಂದ ನೋಡುವುದಿಲ್ಲ ಎಂದು ತಪ್ಪಾಗಿ ಹೇಳುವಂತೆ ನಿಜಸ್ಥಿತಿಯು ಇದ್ದರೂ ತಮ್ಮ ರಕ್ಷಣೆಗಾಗಿಯಾದರೂ ದೇಶದಲ್ಲಿ ಸುವ್ಯವಸ್ಥೆಯ ಸ್ಥಾಪನೆಗೂ ಪ್ರಜೆಗಳಿಗೂ ಇಂಡಿಯಾ ಸರಕಾರವು ತಮ್ಮಿಂದಾಗುವಷ್ಟು ಪ್ರಯತ್ನಿಸಲೇ ಬೇಕಾಗ ಬೇಕು.

ನಿರುದ್ಯೋಗದ ಸಮಸ್ಯೆ

ನಿರುದ್ಯೋಗ ಸಮಸ್ಯೆಗೆ ದುಷ್ಟಕಾರಣವಲ್ಲ. ಮೂಲಕಾರಣಗಳು ಗೂಢವಾಗಿಯೂ ಸಂಪೂರ್ಣವಾಗಿಯೂ ಇವೆ. ಈಗಿನ ವಿದ್ಯಾಭ್ಯಾಸ ಕ್ರಮ, ಕೈಗಾರಿಕೆಗಳ ಏಳಿಗೆ ಸಾಮಾಜಿಕ ಕಟ್ಟುಗಳನ್ನು ನಿರ್ಧಾರವಾಗಿ ಆಗ ಸ್ಥಿರವು ಜಾತಿಪದ್ಧತಿಗಳ ಒಡಂಬಡಿಕೆಗಳು ಅಲ್ಲದೆ ಮುಖ್ಯವಾಗಿ ಜನರಲ್ಲಿ ನಡೆಯುವ ಪದ್ಧತಿಗಳು ಮತ್ತು ಆಚರಣೆಗಳಲ್ಲಿ ಅಡಗಿರುವ ಮಾನಸಿಕ ಭಿನ್ನಾಭಿಪ್ರಾಯಗಳು, ಇವೆಲ್ಲಾ ಸೇರಿ ಉಂಟಾದ ಈ ಸ್ಥಿತಿಗೆ ಯಾವ ಸರಕಾರವೂ ಪರಿಹಾರವನ್ನು ಕಂಡುಹಿಡಿಯಲಾರದು. ಒನ್ನೇ ಬದಲಾವಣೆಯನ್ನುಂಟುಮಾಡಬಲ್ಲರು. ಆದುದರಿಂದ ಬದಲಾವಣೆಯು ಕಾರ್ಯರೂಪಕ್ಕೆ ಬರುವುದಕ್ಕೆ ಸಾಕಷ್ಟು ಕಾಲವು ಬೇಕಾಗುವುದು. ಆದರೆ ಸರಕಾರವು ಈ ಅಡಚಣೆಗಳನ್ನು ಎಣಿಸದೆ ಈಗಿನ ದುಸ್ಥಿತಿಯನ್ನು ತಪ್ಪಿಸಲಿಕ್ಕೆ ಕೆಲಸಮಾಡಬೇಕೆಂದೇ ಸರಕಾರದ ಅಭಿಪ್ರಾಯ. ಪ್ರಾಂತಿಕ ಪ್ರಯತ್ನಗಳನ್ನು ಒಟ್ಟುಗೂಡಿಸುವುದಕ್ಕೆ (Co-ordinate) ಮಧ್ಯವರ್ತಿ ಕಮಿಟಿಯ ಆವಶ್ಯಕತೆಯು ಈಗಿಲ್ಲವೆಂದು ಇಂಡಿಯಾ ಸರಕಾರವು ಯೋಚಿಸುವುದಿಲ್ಲ. ಹಾಗೆ ಒಟ್ಟುಗೂಡಿಸುವುದು ಪ್ರಯೋಜನಕಾರಿಯಾಗುವುದು ಎಂದು ಗೊತ್ತಾಗುವವರೆಗೆ ಅಂಥಾ ಕಮಿಟಿಯನ್ನು ಸ್ಥಾಪಿಸಬೇಕೆಂಬ ಎಸೆಂಬ್ಲಿಯ ಠರಾವನ್ನು ಸರಕಾರವು ಜಾರಿಗೆ ತರುವುದಿಲ್ಲ.' ನಿರುದ್ಯೋಗದ ಪ್ರಶ್ನೆಯ ಕಠಿಣತೆಯನ್ನು ಇಂಡಿಯಾ ಸರಕಾರದವರು ತಿಳಿದಿರುವುದರಿಂದ ಈ ಪ್ರಶ್ನೆಯನ್ನು ಪ್ರಾಂತಿಕ ಸರಕಾರಗಳು ಬಹಳ ಜಾಗರೂಕತೆಯಿಂದ ವಿಮರ್ಶಿಸಬೇಕೆಂದು ಇಂಡಿಯಾ ಸರಕಾರದವರು ಅಪೇಕ್ಷಿಸುತ್ತಾರೆ.

ಪ್ರಾಥಮಿಕ ಶಿಕ್ಷಣವನ್ನು ಒತ್ತಾಯವಾಗಿ ಕೊಡಬೇಕು.

(ಬರೆದು ಬಂದದ್ದು)

(ಲೇಖಕ— "ರಾಷ್ಟ್ರಪ್ರಿಯ")

ಒಂದು ರಾಷ್ಟ್ರವು ಉನ್ನತಿಯನ್ನು ಹೊಂದಬೇಕಾದರೆ ಆ ರಾಷ್ಟ್ರದ ಜನರಲ್ಲಿ ಹೆಚ್ಚು ಮಂದಿ ವಿದ್ಯಾವಂತರಾಗಿರಬೇಕು. ನಮ್ಮ ಈ ಕೊಡಗುದೇಶವು ಒಂದು ಪ್ರಮುಖವಾದ ದೇಶವಾದ್ದರಿಂದ ಇಲ್ಲಿನ ಜನರು ಬಹಳ ಒಡವೆ ಇರುವರು, ವಿದ್ಯೋಗಿಕ ಶಿಕ್ಷಣಗಳನ್ನು ಕೊಡದ ಈಗಿನ ವಿದ್ಯಾಭ್ಯಾಸದ ಮೇಲೆ ಅವರಿಲ್ಲದಿರುವರು. ಆದ್ದರಿಂದ ಇಲ್ಲಿ ಪ್ರಥಮ [illegible] ಇಲ್ಲಿ [illegible] ಶಿಕ್ಷಣವು ಸಹ ಬೇಕಾದ [illegible] ಜಿಲ್ಲೆಯಲ್ಲಿ ಪ್ರಚಾರವಾಗಲಿಕ್ಕೆ ಇದು [illegible] ಒತ್ತಾಯದ ಶಿಕ್ಷಣವು ಕೊಡಬೇಕೆಂದು ಆವಶ್ಯಕವೆಂದು [illegible] ಬಹಳ ಮುಖ್ಯವಿದ್ದಾರೆಂದು ತಿಳಿಯಬೇಕಾಗುತ್ತದೆ. ನಮ್ಮ ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿ ಜನ ಪ್ರತಿನಿಧಿಗಳು ದೇಶದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಬೇಕಲು. ಸರಕಾರವು ಹೆಚ್ಚು ಹಣ ಕೊಡಲಿಲ್ಲ ಎಂದು ದೂರುವಾಗ, ಅಧಿಕಾರಿಗಳು 'ಕೊಡಗಿನಲ್ಲಿ ವಿದ್ಯೆಯನ್ನು ಹೊಂದಿದವರ ಸಂಖ್ಯೆಯು ಬೇರೆ ಪ್ರಾಂತ್ಯಗಳಿಗಿಂತ ಎಷ್ಟೋ ಮೇಲ್ಮಟ್ಟದಲ್ಲಿದೆ" ಎಂದು ಹೇಳಿದರು. ಈ ವಾದವು ನಿಜವಲ್ಲ. ದುರ್ಭಾಗ್ಯವಶಾತ್

ಭಾರತ ವರ್ಷವು ವಿದ್ಯೆಯಲ್ಲಿ ಪರರಾಷ್ಟ್ರಗಳಿಗಿಂತ ಅದೆಷ್ಟೋ ಹಿಂದೆ ಬಿದ್ದಿರುವುದು. ಹೀಗಿರುವಲ್ಲಿ ಸ್ವದೇಶೀಯರುಳ್ಳ ಇಂಡಿಯಾದೇಶದ ಮತ್ತೊಂದು ಪ್ರಾಂತ್ಯದಲ್ಲಿ ವಿದ್ಯೆ ಹೊಂದಿದವರ ಸಂಖ್ಯೆಯೊಂದಿಗೆ ಹೋಲಿಸುವುದು ಅದೆಷ್ಟು ಸಮಂಜಸ! ಪ್ರಾಥಮಿಕ ಶಿಕ್ಷಣವನ್ನು ಬಿಟ್ಟರೆ ಉನ್ನತ ಶಿಕ್ಷಣವನ್ನು ಪಡೆದವರ ಸಂಖ್ಯೆಯು ಈ ದೇಶದಲ್ಲಿ ಕಮ್ಮಿ ಇರುವುದು. ಪ್ರಾಥಮಿಕ ಶಿಕ್ಷಣವೂ ಸಹ ಸಾಕಷ್ಟು ಮಟ್ಟಿಗೆ ಪ್ರಸಾರವಾಗಲಿಲ್ಲ.

ಅಧಿಕಾರ ವರ್ಗವು ಕೆಲವು ಕಡೆಗಳಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡುವಂತೆ ಏರ್ಪಡಿಸಿದ್ದರೂ ಸಹ ಇದರ ಲಾಭವನ್ನು ಹೊಂದಿಕೊಳ್ಳಲು ಜನರು ಇಚ್ಛಿಸ್ಸೊಂಡು ಮುಂದೆ ಬಂದಿಲ್ಲ. 'ಪ್ರೈಮರೀ ವಿದ್ಯಾಭ್ಯಾಸವನ್ನು ಹೊಂದಿದ ಬಾಲಕರು ಶಾಲೆಯನ್ನು ಬಿಟ್ಟರೆಂದರೆ ಸ್ವಲ್ಪ ಸಮಯದಲ್ಲಿಯೇ ಅವರು ಕಲಿತುದನ್ನೆಲ್ಲಾ ಮರೆತುಬಿಡುವರು. ಬಾಲಕರು ಶಿಕ್ಷಣವನ್ನು ಹೊಂದಿದ ಈ ಐದು ವರ್ಷಗಳೂ ಯಾವ ಉಪಯೋಗಕ್ಕೂ ಬಾರದ್ದನ್ನು ಕಂಡು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಕೇವಲ ನಿಷ್ಪ್ರಯೋಜನವೆಂದು ಅವರ ತಂದೆ ತಾಯಿಗಳು ತಿಳಿದುಕೊಂಡಿರುತ್ತಾರೆ. ಇದರಿಂದ ಜನರು ಶಿಕ್ಷಣವು ಪ್ರಯೋಜನಕಾರಿಯಾಗಿ ಸಿಕ್ಕುತ್ತದಲ್ಲ ಎಂದು ಕೆಲಸವಿಲ್ಲದ ಸಮಯಗಳಲ್ಲಿ ಮಾತ್ರ ಹುಡುಗರನ್ನು ಶಾಲೆಗೆ ಕಳುಹಿಸುತ್ತಾರೆ. ಜೂನ್, ಆಗಸ್ಟು ಮೊದಲಾದ ತಿಂಗಳುಗಳಲ್ಲಿ ನಲ್ವತ್ತು, ಐವತ್ತು ವಿದ್ಯಾರ್ಥಿಯರಿರುವ ಶಾಲೆಗಳಲ್ಲಿ ಒಬ್ಬಿಬ್ಬರು ವಿದ್ಯಾರ್ಥಿಗಳು ಮಾತ್ರ ಹಾಜರಿರುವುದುಂಟು. ಇದು ಎಷ್ಟೊಂದು ಶೋಚನೀಯ! ಈ ಸಂದರ್ಭದಲ್ಲಿ ಸರಕಾರವು ಕೈಕಟ್ಟಿ ಕೂತಿರುವುದು ರಾಷ್ಟ್ರದ ಉನ್ನತಿಗೇನು? ವಿದೇಶಗಳಲ್ಲಿ ಪ್ರಾಥಮಿಕ ಶಿಕ್ಷಣವು ಮಾತ್ರ ಕಡ್ಡಾಯ. ಮತ್ತು ಒತ್ತಾಯವಾಗಿ ಕೊಡಲ್ಪಟ್ಟರೆ ಸಾಲದು ಎಂದೂ ಮಧ್ಯಮ ತರಗತಿಯ ವಿದ್ಯಾಭ್ಯಾಸವನ್ನು ಸಹ ಪುಕ್ಕಟೆ ಮತ್ತು ಒತ್ತಾಯವಾಗಿ ಕೊಡಬೇಕೆಂಬ ಯೋಚನೆ ಮಾಡುವರಿರುವರು. ಹೀಗಿರುವಲ್ಲಿ ಓಡುತ್ತಿರುವ ಲೋಕದೊಡನೆ ನಮ್ಮ ಈ ರಾಷ್ಟ್ರವು ಮೆಲ್ಲನೆಯಿಂದ ನಡೆಯುತ್ತಾದರೂ ಹೋಗಬೇಡವೇ? ಶಿಕ್ಷಣವನ್ನು ಒತ್ತಾಯವಾಗಿ ಕೊಡಬೇಕೆಂದರೆ ಆಳರಸರು "ಖರ್ಚು! ಖರ್ಚು!!" ಎಂದು ಒಂದು ಕುಂಟ ನೆವನವನ್ನು ಹೂಡುವರು. ಇದು ಸರಿಯಲ್ಲ. ಸರಕಾರದ ಧ್ಯೇಯವು ರಾಷ್ಟ್ರದ ಉನ್ನತಿ ಎಂದಿದ್ದಲ್ಲಿ ಈ ನೆವವು ಎಂದೂ ಸರಿಯಾಗದು. ಎಲ್ಲಾ ಕಡೆಗಳಲ್ಲೂ ಒಂದೇ ಸಲಕ್ಕೆ ಒತ್ತಾಯವಾಗಿ ಶಿಕ್ಷಣ ಕೊಡುವಂತೆ ಏರ್ಪಾಟು ಮಾಡಲಾಗದಿದ್ದರೆ ಮಾತ್ರ ಮೊದಲು ಕೆಲವೆಡೆಗಳಲ್ಲಿಯಾದರೂ ಪ್ರಾರಂಭಮಾಡುವುದು ಉಚಿತವು. ಇದರಿಂದ ಸರಕಾರಕ್ಕೆ ಖಂಡಿತ ಯಶಸ್ಸು ಸಿಕ್ಕುವುದರಲ್ಲಿ ಸಂಶಯವಿಲ್ಲ.

ಅಮೇರಿಕಾ ದೇಶದವರು ತಮ್ಮ ಪ್ರಜೆಗಳ ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರತಿವರ್ಷ ಪ್ರತಿಯೊಬ್ಬನಿಗ 12 ರೂಪಾಯಿಗಳನ್ನೂ, ಸ್ವಿಟ್ಜರ್ಲಂಡಿನವರು 10 ರೂಪಾಯಿಗಳನ್ನೂ, ಆಸ್ಟ್ರೆಯಾದವರು 8½ ರೂಪಾಯಿಗಳನ್ನೂ, ಜರ್ಮನಿಯವರು 5 ರೂಪಾಯಿಗಳನ್ನೂ ಹೀಗೆ ವೆಚ್ಚ ಮಾಡುತ್ತಿರುವಾಗ ನಾವಾದರೂ ಎಷ್ಟು ಖರ್ಚು ಮಾಡಬೇಕು? ಆದರೆ ಪ್ರಾಚೀನಕಾಲದಲ್ಲಿ ಅತಿ ಉಚ್ಚ್ರಾಯಸ್ಥಿತಿಯಲ್ಲಿದ್ದ ಈ ಹಿಂದುಸ್ಥಾನವನ್ನು ನೋಡಿರಿ! ಪ್ರತಿವರ್ಷ ಪ್ರತಿ ಒಬ್ಬನಿಗ ಒಂದು ನಾಣ್ಯಕ್ಕಿಂತಲೂ ಕಮ್ಮಿ! ಇದು ಶ್ರೇಯಸ್ಕರವಲ್ಲವೇ?

FOR SALE.

One second hand ford motor car p-
Rupees seven hundred only. N
May be seen and tried at ice
Apply to—C. A. o offers.
St. E ollibetta
2—2 ahon,
mund's Estate,
Pollibetta.

ಜಾತಿಭಕ್ತಿ.

ಮದ್ರಾಸಿನ 'ನ್ಯೂ ಇಂಡಿಯಾ' ಆಫೀಸಿನಲ್ಲಿ ಇರುವ ಮ. ತೆಲಂಗರು ಇತ್ತೀ ಕೆಲವು ದಿವಸಗಳ ಹಿಂದೆ ಗೋಕುಲ ಹಾಲಿನಲ್ಲಿ ಜರುಗಿದ ಸಂಯುಕ್ತ ಗೌಡ ಸಾರಸ್ವತ ಸಭೆಯ ವಾರ್ಷಿಕ ಸಮ್ಮೇಳನದಲ್ಲಿ ಆಧ್ಯಕ್ಷ್ಯಸ್ಥಾನದಿಂದ ಕೊಟ್ಟ ಭಾಷಣವು ಈಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಬಹು ಬೋಧಪ್ರದವಾಗಿತ್ತು. ಅವರ ಭಾಷಣದ ಸಾರಾಂಶವು—ಯಾವ ಜಾತಿ ಪಂಗಡವೇ ಆಗಲಿ ತನ್ನ ಮೇರೆ ತಪ್ಪಿ ನಡೆಯತೊಡಗಿದರೆ ಅದರಿಂದ ದೇಶಕ್ಕೆ ದುಸ್ಸಹವಾದ ಹಾನಿಯುಂಟಾಗದೆ ಇರದು. ಗೌಡ ಸಾರಸ್ವತ ವ್ಯಕ್ತಿಗೆ ಮಾನಸಿಕ ಶಕ್ತಿ, ಮತ್ತು ನೀತಿಯುಕ್ತ ನಡವಳಿಕೆಯ ಮೇಲೆ ದೃಷ್ಟಿಯಿದೆಯೆಂಬುದರಲ್ಲೇನೂ ಸಂದೇಹವಿಲ್ಲ. ಈ ಗುಣಗಳು ಸ್ವಂತ ಜಾತಿಯ ಉಪಯೋಗಕ್ಕಾಗಿ ಇರ ಪದಲ್ಲ. ಆದುದರಿಂದ ಈ ಗುಣಗಳನ್ನು ಒಂದು ಪಂಗಡದ ವಿರೋಧವಾಗಿಯೂ ಬೇರೊಂದು ಪಂಗಡದ ಪರವಾಗಿಯೂ ವೃದ್ಧಿಗೊಳಿಸುವುದು ಸರಿಯಲ್ಲ. ಹಾಗೆ ವೃದ್ಧಿಗೊಳಿಸಿದರೆ ದೇಶದ ಅವನತ ಸ್ಥಿತಿಗೆ ಪ್ರಯತ್ನಿಸಿದಂತಾಗುವುದು. ಈ ಗುಣಗಳನ್ನು ಯಾವುದಾದರೂ ಒಂದೇ ಕೋಮಿನ ಪ್ರಯೋಜನಕ್ಕೆ ಮಾತ್ರ ಉಪಯೋಗಿಸಿದರೆ ಹಾಗೆ ಉಪಯೋಗಿಸುವ ವ್ಯಕ್ತಿಗೂ ಆತನ ಕೋಮಿಗೂ ವಿ... ...ನಿಂದಲೇ ನಾನು ಪರಜಾತಿಯವರನ್ನೂ ಬಿಟ್ಟು ಕೋಮುವಾರಾಗಿ ಕೂಡುವ ಕೂಟಗಳನ್ನು ವಿರೋಧಿಸಿ ನಿಂತದ್ದು. ಒಂದು ಪಂಗಡವನ್ನು ಬೇರೊಂದು ಪಂಗಡದಿಂದ ವಿಭಾಗಿಸುವ ಗೋಡೆಯನ್ನು ಕಿತ್ತು ತೆಗೆಯುವುದೇ ಮೇಲು. ನನ್ನೊಬ್ಬನ ಸಂಗತಿಯನ್ನು ಹೇಳುವುದಾದರೆ ನಾನು ದೃಢ ಮನಸ್ಸಿನ, ಜಾತಿವಾರು ಭೇದಗಳನ್ನೆಣಿಸಿಡ ಮನುಷ್ಯನು ಎಂತಹ ಸಂದರ್ಭಗಳಲ್ಲೂ ಯಾ ವಿಷಯವನ್ನೂ ಮತ, ಜಾತಿದೃಷ್ಟಿಯಿಂದ ನೋಡಲು ತಿರಸ್ಕರಿಸುತ್ತೇನೆ. ವಾರ್ಷಿಕ ವರದಿಗಳಲ್ಲಿ ಜನರನ್ನು ಮತದೃಷ್ಟಿಯಿಂದ ಅಭಿನಂದಿಸುವುದು ಕಡಿಮೆಯಾಗಬೇಕೆಂದೇ ನನ್ನ ಇಚ್ಛೆ. ಒಬ್ಬ ವ್ಯಕ್ತಿಯು ಸಾರಸ್ವತನೆಂದು ನಾನು ಅವನ ಗೆಲುವಿನಲ್ಲಿ ಸಂತೋಷಪಡುವುದಿಲ್ಲ; ಆ ವ್ಯಕ್ತಿಯು ಒಬ್ಬ ಹಿಂದೀಯನೆಂದು ಆತನ ಜಯದಲ್ಲಿ ಆನಂದಪುಕ್ತನಾಗುವೆನು. ಈ ವಿಧದ ಅಭಿನಂದನೆಗಳಲ್ಲಿ ಬೇರೆಯವರೂ ಸಮಭಾಗಿಗಳಾಗಬಹುದು. ಸಾರಸ್ವತರು ಆಗಾಗ ತಮ್ಮ ಪಂಗಡದ ಜನರ ಏಳಿಗೆಯನ್ನು ಕುರಿತು ಮಾತನಾಡುತ್ತಾರೆ. ಆದರೆ ಯಾವ ಪಂಗಡದ ಏಳಿಗೆಯೋ ಆಗಲಿ ಇಡೀ ದೇಶದ ಅಭಿವೃದ್ಧಿಯಾಗದೆ ಆಗುವಂತಿಲ್ಲವೆಂಬುದು ಖಂಡಿತವಾದ ವಿಷಯ. ಆದುದರಿಂದ ನನ್ನ ಅರಿಕೆಯು ಇಷ್ಟೇ. ನೀವು ನಿಮ್ಮ ಮನಸ್ಸನ್ನೂ, ಹೃದಯವನ್ನೂ ದೇಶದ ಎಲ್ಲಾ ಜನಾಂಗಗಳ ಅಭಿವೃದ್ಧಿಯನ್ನು ನಿರೀಕ್ಷಿಸುವಂತೆಯೂ, ಹಾರೈಸುವಂತೆಯೂ ಕ್ರಮಪಡಿಸಿಕೊಳ್ಳಬೇಕು.

ಮಡಿಕೇರಿಯ ಶ್ರೀ ಆಂಜನೇಯ.

ಸೀಸಂ ||

ಕೈಮುಗಿದು ಭಕ್ತಿಯಿಂ ಶ್ರೀರಾಮ ಚಂದ್ರನಂ।
ಪ್ರೇಮದಿಂ ನುತಿಸುತಿಹೆ ಪ್ರಾಣದೇವ ||
ಕಂಗಳಂ ಮುಚ್ಚುತ್ತ ಏಕಧ್ಯಾನದಿ ನಿಂದು।
ಶೃಂಗಾರ ಶ್ರೀ ಹರಿಯ ದಿವ್ಯಪದವ, ||
ಫಲಗಳನು ಬಯಸದೆಯೆ ಏಕಾಂಗಿಯಾಗಿನೀ।
ಸುಲಭದಿಂದೊಲಿಸುತಿಹೆ ತಳೆದು ಮುದವ ||
ಘಾನುಗೆದುರಲಿ ನಿಂದು ಭಾನುಕುಲಜನಾತ್ಮನ।
ಏನು ಕಾರಣದಿಂದ ಒಲಿಸುತಿರುವೆ? ||

ಎಷ್ಟು ವರ್ಷಗಳಿನ್ನು ಇಂತು ತಪವ,।
ದಿಟ್ಟ ಹನುಮಂತನೀ ಹರಿಯ ಪದವ, ||
ಇಂತು ಧ್ಯಾನವಗೈದು ನಿಂತು ಇರುವೆ,
ಶಾಂತ ಮೂರುತಿ ಏಕೆ ಸುಮ್ಮನಿರುವೆ. || ೧ ||

ಕಂ || ತವಕದಿ ಮನದೊಳ್ ಸತತಂ,
ನವವಿಮಲ ರಘುಕುಲಜನಂಸ್ಮರಿಯಂ ನೆನೆಯು ತಮ ||
ಸವೆದುದು ನಿನ್ನಯ ದೇಹಂ, |
ಕವಿದುದು ಕತ್ತಲೆಯು ನಿನ್ನ ದೇಹದ ಸುತ್ತಲ್ || ೨ ||

ಕಂ || ಹೊಳೆವುದು ತೇಜೋರಾಶಿಯು,
ಬೆಳಗುತದಿಶೆಗಳ ಸುಲಭದಿ ಬಲು ಸೊಗದಿಂದಂ, ||
ಸೆಳೆವುತ ಭಕ್ತರ ಮನವಂ; |
ತಳೆವುತ ಪ್ರೀತಿಯ ಸರಸದಿ ಮಿಗೆ ಭರದಿಂದಂ. || ೩ ||

ಸೀಸಂ || ನೀನಾರ ನೋಡುತಿಹೆ ಛಲದಿಂದ ನಿಂತು |
ನೀನಾರ ಬೇಡುತಿಹೆ ಕೈಗಳ ಮುಗಿದು! ||
ನೀನೇಕೆ ನಿಂದಿರುವೆ ... ...ತಿರೆ ಕಾಲುಗಳ್ |
ನೀನೇನ ... ...ಕೇಳುತಿಹೆ ಮನದಿ ಪಡೆದು! ||
...ಸರ್ವೇಶಕ ನಿನಗೆ ಪ್ರಾಣದೇವನೆ ಇಂತು, |
ಸಾನುರಾಗದಿ ನೋಡು ಜಗವನೆಸದು ||
ಮೌನದಿಂದೇಕಿರುವೆ ಚಕ್ಕರಂ ನಿರುಕಿಸದೆ |
ನೀನೇಕೆ ಮುಳಿದಿರುವೆ ತೋಷವುಳಿದು ||
ಪ್ರಾಣದೇವನೆ ನೋಡು ಜಗವ ನಿರುತಂ, |
ಧ್ಯಾನಿಪರ ಕರುಣಿಸುತ ಪೊರೆಯೊ ಕರುಣಿ ||
ನಿನ್ನ ಮೌನವ ನುಳಿದು ಸತತ ನಲುಹೋ |
ನನ್ನಿಯಿಂ ಶ್ರೀ ರಾಮ ಭಕ್ತಶರಣು || ೪ ||

ಪಸುಮ.

ವರ್ತಮಾನ ಸಂಗ್ರಹ.

ಒಳದೇಶ

ಮಡಿಕೇರಿಯಲ್ಲಿ ತಾ 21—8—26ರಿಂದ 2—8—25ರ ವರೆಗೆ 3 41 ಇಂಚು ಮಳೆಯಾಗಿದೆ.

ಮ. ಎ. ಎಸ್ ರಾಮಯ್ಯ ಬಿ. ಎ., ಎಲ್. ಎಲ್. ಬಿ. ಯವರು ವೀರರಾಜಪೇಟೆಯಲ್ಲಿ ಲಾಯರ್ ಕೆಲಸವನ್ನು ಪ್ರಾರಂಭಿಸಿರುವರು.

"ಕೊಡಗು" ಕಂಪನಿಯ ಡೈರೆಕ್ಟರುಗಳ ಮೀಟಿಂಗ್ ಇದೇ ತಾ-12ನೇ ಆದಿತ್ಯವಾರ ದಿನ ಸಾಯಂಕಾಲ 4 ಗಂಟೆಗೆ ವೀರರಾಜಪೇಟೆ ಸಿದ್ದರ್ ಸ್ಟೋರಿನಲ್ಲಿ ನಡೆಯುತ್ತೆ.

ಎಡನಾಲ್ಕುನಾಡು ಮಲೆಮಹಾ ದೇವರ ದೇವಸ್ಥಾನದಲ್ಲಿ ಸದರಿ ನಾಡಿನವರ ಜನರಲ್ ಮೀಟಿಂಗ್ ಇದೇ ತಾ. 12ನೇ ಆದಿತ್ಯವಾರ ದಿನ ಹಗಲು 1 ಗಂಟೆಗೆ ನಡೆಯುವುದೆಂದು ತಿಳಿಯ ಬರುತ್ತದೆ.

ಶನಿವಾರಸಂತೆ ಪಾರುಪತ್ಯಗಾರರು ಮ. ಪಾಲೆಕಂಡ ಪೂಣಚ್ಚನವರು ಮೂರು ತಿಂಗಳು ಸೆಟಲ್‌ಮೆಂಟ್ ಆಫೀಸಿಗಾಗಿ ನೇಮಿಸಲ್ಪಟ್ಟದ್ದಾರೆ. ಅವರ ಬದಲಿಗೆ ಮ. ಕಂಡ್ರಕಂಡ ಪೊನ್ನಪ್ಪನವರು ಪಾರುಪತ್ಯಗಾರರಾಗಿ ನೇಮಿಸಲ್ಪಟ್ಟಿದ್ದಾರೆ.

ಕಳೆದ ತಾ. 28ರಲ್ಲು ಕೊಡಗು ಸೆಂಟ್ರಲ್ ಸಹಕಾರ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗ್ ನಡೆದು ಸುಂಟಿಕೊಪ್ಪ ಸೊಸೈಟಿಗೆ 1000 ರೂ., ಕೋಕೇರಿ ಸೊಸೈಟಿಗೆ 500ರೂ. ಭಾಗಮಂಡಲ ಸೊಸೈಟಿಗೆ 600 ರೂ., ಕೋತೂರು ಸೊಸೈಟಿಗೆ 500 ರೂ ಸಾಲ ಮಂಜೂರಾಗಿದೆ.

ಕಳೆದ ವಾರ ನಾಪೋಕ್ಲುನಾಡು ಬೇತುಗ್ರಾಮದ ಕಾಳೇಯಂಡ ಬೆಳ್ಯಪ್ಪನೆಂಬವನ ಮೇಲೆ ನೌಕರಿಬದಾರು ವೆ... ಮಾಡಿದ ವಾರಂಟನ್ನು ಜಾರಿಮಾಡಲಿಕ್ಕೆ ಪೊಲೀಸ್ ಕಾನ್ಸ್‌ಟೇಬಲ್ ಹೋದಾಗ್ಯೆ ಆತನು ಬಟ್ಟೆ ಹಾಕಿಕೊಂಡು ಬರುತ್ತೇನೆಂತ ಒಳಗೆ ಹೋಗಿ ಗುಂಡುಹೊಡೆದುಕೊಂಡು ಸತ್ತಿರುತ್ತಾನೆ.

ಸಬ್ ಇನ್ಸ್‌ಪೆಕ್ಟರ್ ಕೆಲಸಕ್ಕೆ ಅರ್ಜಿ ಬರಕೊಂಡವರ ಪೈಕಿ ಬೇಕಾದವರನ್ನು ಚುನಾಯಿಸುವ ಒಗ್ಗೆ ಕಮಿಶನರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಮತ್ತು ಪೊಲೀಸ್ ಡಿಪ್ಯುಟಿ ಸುಪರಿಂಟೆಂಡೆಂಟರು ಸಹ ತಾರೀಕು 25—9—26ರಲ್ಲಿ ಬೆಳಿಗ್ಗೆ ... ಗಂಟೆಗೆ ಮಡಿಕೇರಿಯಲ್ಲಿ ಸೇರುತ್ತಾರೆ. ಉಮೇದುವಾರುಗಳು ತಮ್ಮ ನಡತೆ ವಿಷಯ ಸರ್ಟಿಫಿಕೇಟುಗಳನ್ನೂ ಅವರ ... ಮತ್ತು ಇಂಗ್ಲಿಷ್ ಕೈ ಬರಹದ ಮಾದರಿಗಳನ್ನೂ, ಸ್ಕೂಲ್ ಫೈನಲ್ ಅಥವಾ ಮೇಲಿನ ತರಗತಿಯ ಪರೀಕ್ಷೆ ಸರ್ಟಿಫಿಕೇಟುಗಳನ್ನೂ ಈ ಮೊದಲೇ ಕಳುಹಿಸದಿದ್ದರೆ ತೆಗೆದುಕೊಂಡು ಹಾಜರಾಗಬೇಕಂತ ಇಲಾಖೆಯವರು ಕೇಳಿಕೊಳ್ಳುತ್ತಾರೆ.

ಬೆಂಗಳೂರಿನಲ್ಲಿ ಈಗಾಗಲೇ ಶುರು ಆಗಿರುವ ವೈ. ಎಂ. ಸಿ. ಎ. (Y. M. C. A.) ಹಾಕಿ ಟೂರ್ನಮೆಂಟಿಗೆ ಕೊಡಗರ ಒಂದು ಟೀಮನ್ನು ಹಾಕಿರುವರು. ಪರ ಊರಿನಲ್ಲಿ ... ಟೀಮ ಟೂರ್ನಮೆಂಟಿಗೆ ಕೊಡಗರು ಆಡುವುದು ಇದೇ ಮೊದಲು. ಈಗ ಕೆಲವು ದಿವಸಗಳಲ್ಲಿ ಮುಗಿದ "ಸ್ಪರ್ಲಿಂಗ್" ಎಂಬ ... ಟೀಮ ಟೂರ್ನಮೆಂಟಿಗೂ ಕೊಡಗರು ತಮ್ಮ ಒಂದು ಟೀಮನ್ನು ಹಾಕಿದ್ದರು. ಕ್ಲೀವಲೆಂಡ್ ಸೋಶಿಯಲ್ ಜೊತೆಯಲ್ಲಿ ನಾಲ್ಕು ದಿವಸ ಆಡಿದರೂ ಯಾರೂ ಗೆಲ್ಲಲಿಲ್ಲ. ಐನೇ ದಿವಸ ಸೋಶಿಯಲ್‌ನವರು ಕೊಡಗರನ್ನು ಒಂದು ಗೋಲಿನಿಂದ ಸೋಲಿಸಿದರು. ಮ. ಗೋವಿಂದ ಸಿಂಗಾರವರು ಜನ್ನಾಗಿ ಆಡಿ ... ಸೇರಿದ್ದ ಜನರ ಮೆಚ್ಚಿಗೆಗೆ ಒಳಗಾದರೆಂದು ಬರ...

ಹಿಂದೂದೇಶ.

ಆಂಧ್ರ ವಿಶ್ವವಿದ್ಯಾಲಯದ ಕೆಲಸ ಪ್ರಾರಂಭಿಸುವ ಸಮಾರಂಭವನ್ನು ಮದ್ರಾಸ್ ಗವರ್ನರಿಂದ ತಾ. 30ರಲ್ಲಿ ಬೇಜವಾಡದಲ್ಲಿ ನಡಿಸಲ್ಪಟ್ಟಿತು.

ಡಿಲ್ಲಿಯಲ್ಲಿ ತಾ 28ರಲ್ಲಿ ಹಿಂದೂ ಮುಸಲ್ಮಾನರೊಳಗೆ ಹೋರಾಟವಾಯಿತು. 23 ಹಿಂದುಗಳಿಗೂ 21 ಮುಸಲ್ಮಾನರಿಗೂ ಗಾಯಗಳಾಗಿವೆ.

ಅಹಮದಾಬಾದ್ ಮುನಿಸಿಪಾಲಿಟಿಯವರು ಕೈಗಾರಿಕಾ ಕಲಾಪ್ರದರ್ಶನ ಮಂದಿರ ಒಂದನ್ನು ಸ್ಥಾಪಿಸಲಿಕ್ಕಾಗಿ 3...000 ರೂಪಾಯಿ ಮಂಜೂರು ಮಾಡಿರುತ್ತಾರೆ.

ಕಲ್ಕತ್ತಾ ಪಟ್ಟಣದಲ್ಲಿ ತಾ. ೬ರಲ್ಲಿ ಒಟ್ಟು ಹಿಂದುಸ್ಥಾನದ ಸಂಸ್ಕೃತ ಪರಿಷತ್ತು ನಡೆಯಿತು. ಎಲ್ಲಾ ವಿಶ್ವವಿದ್ಯಾಲಯಗಳಲ್ಲೂ ಹಿಂದೂಗಳಿಗೆ ಸಂಸ್ಕೃತ ಅಭ್ಯಾಸವನ್ನು ಕಡ್ಡಾಯ ಪಡಿಸಬೇಕೆಂಬ ಠರಾವು ಮತ್ತು ಬೇರೆ ಕೆಲವು ಠರಾವುಗಳೂ ಪಾಸಾದವು.

ಮೈಸೂರು ದಿವಾನರವರ ಪ್ರಯತ್ನಗಳಿಂದ ಕೆಲಸಗಾರರು ಶಾಂತರಾಗಿ ಬೆಂಗಳೂರಿನ ಹತ್ತಿಗಿರಣಿಗಳಲ್ಲಿ ಪುನಃ ಕೆಲಸ ಪ್ರಾರಂಭಿಸಿರುವರು. ಕೆಲಸಗಾರರು ಕೆಲಸ ಪ್ರಾರಂಭಿಸುವ ಮೊದಲು ಮೀಟಿಂಗುಮಾಡಿ ದಿವಾನರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

ಆಂಧ್ರ ಯುನಿವರ್ಸಿಟಿಯ ಪ್ರೋಚಾನ್ಸ್‌ಲರಾದ ವಿಜಯನಗರ ಮಹಾರಾಜರವರು ಆ ಯುನಿವರ್ಸಿಟಿಗೆ ಒಂದು ಲಕ್ಷ ರೂಪಾಯಿಯನ್ನು ಉಚಿತವಾಗಿ ಕೊಟ್ಟಿರುವರು. ಕೃಷ್ಣಾ ಡಿಸ್ಟ್ರಿಕ್ಟ್ ಬೋರ್ಡಿನವರು ಇದೇ ವಿಶ್ವವಿದ್ಯಾಲಯಕ್ಕೆ ಮೂರು ಲಕ್ಷ ರೂಪಾಯಿ ಕೊಟ್ಟಿರುತ್ತಾರೆ.

ಮದ್ರಾಸ್ ವಿಶ್ವ ವಿದ್ಯಾಲಯಕ್ಕೆ ಸೇರಿದ ಪುಸ್ತಕ ಭಂಡಾರವನ್ನು ಇಡಲಿಕ್ಕಾಗಿ ಮದ್ರಾಸ್ ಸೆನೆಟ್ ಹೌಸ್ ... ಹೊಸ ಕಟ್ಟಡದ ಕೆಲಸ ಪ್ರಾರಂಭಿಸುವ ಸಮಾರಂಭವನ್ನು ... ವೈಸ್ ಚಾನ್ಸಲರ್ ನಡೆಸಿದರು. ಈ ಲೈಬ್ರೆರಿ ...ಗಾಗಿ 12 ಲಕ್ಷ ರೂಪಾಯಿ ತಯಾರಿಸಿಯಂತೆ.

ಲಾಲಾಲಜಪತರಾಯರು ಸ್ವರಾಜ್ಯಪಾರ್ಟಿಗೆ ರಾಜೀನಾಮೆ ಕೊಟ್ಟಿರುತ್ತಾರೆ. ಸ್ವರಾಜ್ಯಪಾರ್ಟಿಯು ಕೌನ್ಸಿಲಿನಿಂದ ಹೊರಗೆ ಬಂದದ್ದರಿಂದ ಹಿಂದೂ ಜಾತಿಯವರಿಗೆ ... ಕೆಡಕಾಗಿದೆಯೆಂತಲೂ ಸ್ವರಾಜ್ಯಪಾರ್ಟಿಯ ಗೈರ್ಹಾಜರಿನಲ್ಲಿ ಹಿಂದುಗಳಿಗೆ ಕೆಡಕಾದ ಕಾನೂನುಗಳನ್ನು ಮಾಡಿಕೆ... ...ದಿದ್ದಾರೆಂತಲೂ ಕಾಂಗ್ರೆಸ್ಸಿನ ಹೆಸರಿನಲ್ಲಿ ಕೌನ್ಸಿಲ್ ... ವರಿಗೆ ಕೆಲಸ ಮಾಡುವುದು ಯುಕ್ತವಲ್ಲ ಎಂತ ಮುಂತಾಗಿ ರಾಜೀನಾಮೆಯ ಕಾಗದದಲ್ಲಿ ಬರೆದಿರುತ್ತಾರೆ.

ಬೊಂಬಾಯಿಯ ಮುನ್ಸಿಪಾಲಿಟಿಯಲ್ಲಿ ಹೊಸ ... ...ಗಳ ಸಂಬಳವನ್ನು ಕಡಿಮೆ ಮಾಡಿದಕ್ಕಾಗಿ ಸ್ವೀಪರು ತೋಟಿಗಳು ಈ ವಾರ ಎರಡು ದಿನ ಕೆಲಸಕ್ಕೆ ಹೋಗದೆ ಸ್ಟ್ರೈಕ್ ಹಿಡಿದರು. ಪಟ್ಟಣವು ದುರ್ವಾಸನೆಮಯವಾಗಿತ್ತು. ಆದರೆ ಅಲ್ಲಿಯ ಮುನ್ಸಿಪಲ್ ರೆಗ್ಯುಲೇಶನ್ ... ರ ಎರಡು ತಿಂಗಳ ನೋಟೀಸು ಕೊಡದೆ ಮುಷ್ಕರ ...

ಗಿ ಮುತ್ತುಕರಗಾರರನ್ನು ನೇಮಿಸಿದ್ದು ಪೆ(ಜಿಸ್ಟ್ರೇಟರ ಮುಂ ವಿಚಾರಿಸಿ ಇಬ್ಬರಿಗೆ ಶಿಕ್ಷೆ ವಿಧಿಸುವಷ್ಟರಲ್ಲಿ ಬಾಕಿಯುಳಿ ದ ಕೆಲಸಮಾಡಲು ಒಪ್ಪಿಕೊಂಡರು)

ಬಂಗಾಳದ ಒಂದು ಪ್ರಾಂತ್ಯದ ಸಹಕಾರಿ ಪರಿಷತ್ತಿನಲ್ಲಿ ಬಂಗಾಳದ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರು ಹೇಳಿದ್ದೇನೆಂ ದರೆ ಸಹಕಾರಿ ಲೇವಾದೇವಿ ಸಂಘಗಳ ಸಂಗಡಲೇ ಸಾಮಾನು ಮಾರಾಟದ ಮತ್ತು ಸಾಮಾನುಗಳನ್ನು ಒದಗಿಸಿಕೊಡುವ ಸಂಘಗಳನ್ನೂ ಸ್ಥಾಪಿಸಬೇಕೆಂಬದೇ ಇಲಾಖೆಯ ಉದ್ದೇಶ ವಾಗಿದೆ. ಕೃಷಿಕರಿಗ ತಮ್ಮ ಉತ್ಪತ್ತಿಗಳಿಗೆ ಒಂದು ರೂಪಾ ಯಿ ಸಿಕ್ಕಬೇಕಾದಲ್ಲಿ 5 ಆಣೆಯೇ ಸಿಕ್ಕುತ್ತಿದೆ, ತಾವು ಎಂಟು ಆಣೆಯೇ ಕೊಡಬೇಕಾದದ್ದಕ್ಕೆ ಒಂದು ರೂಪಾಯಿ ಕೊಡಬೇ ಕಾಗಿದೆ ಈ ಸ್ಥಿತಿಯನ್ನು ಹೇಗಾದರೂ ಹೋಗಲಾಡಿಸಬೇಕು.

ಪೇಸಂಬಾರಿಯಲ್ಲಿ ಒಂದು ಕಳವು ಕೇಸಿನ ಸಂಬಂಧ ವಾಗಿ ಐದು ಜನರನ್ನು ದಸ್ತಗಿರಿ ಮಾಡಿ ಅವರು ತಪ್ಪನ್ನು ಒ ಪ್ಪಿಕೊಳ್ಳದ್ದರಿಂದ ಅವರಿಗೆ ಹೊಡೆದು ಅವರಿಂದ ಒಪ್ಪಿಗೆ ತೆಗೆ ದುಕೊಳ್ಳಬೇಕೆಂತ ಪೋಲೀಸ್ ಇನ್ಸ್‌ಪೆಕ್ಟರು ಆರ್ಡರ್ ಮಾಡಿ ದರಂತಲೂ, ಹಾಗೆ ಹೊಡೆಯುವಾಗ ಅವರ ಪೈಕಿ 60 ವರ್ಷ ಪ್ರಾಯದವನೊಬ್ಬನು ಪೆಟ್ಟಿನಿಂದ ಸತ್ತನೆಂತಲೂ ಆ ದಸ್ತಗಿರಿ ಮಾಡಲ್ಪಟ್ಟವರು ಸರಕಾರಕ್ಕೆ ತಿಳಿಸಿ ವಿಚಾರ ನಡೆದು ಮೂ ವರು ಜನ ಕಾನ್‌ಸ್ಟೇಬಲರಿಗೆ ಎರಡೆರಡು ವರ್ಷ ಸಜೆ ವಿಧಿಸಿದ್ದು ಹೈಕೋರ್ಟಿನಲ್ಲಿ ಖಾಯಂ ಆಗಿದೆ. ಇನ್ಸ್‌ಪೆಕ್ಟರನ್ನು ಕು ಲಾಸ್ ಮಾಡಿದ್ದರ ಮೇಲೆ ಸರಕಾರವು ಅಪ್ಪೀಲು ಮಾಡಿದ್ದಾ ರೆ. ಈ ಅಪ್ಪೀಲಿನಲ್ಲಿ ಇನ್ನೂ ಜಜ್ಜ್‌ಮೆಂಟ್ ಹೊ ರಡುವುದಿಲ್ಲ.

ದಕ್ಷಿಣ ಕನ್ನಡಜಿಲ್ಲೆ ರಾಮಕುಂಜ ಎಂಬಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಕಲಿಯುವ ಬಡ ವಿದ್ಯಾರ್ಥಿಗಳ ಊಟದ ಬಗ್ಗೆ ಈ ಮೊದಲು ಏರ್ಪಡಿಸಿದ ಬ್ರಹ್ಮಚರ್ಯಾಶ್ರಮ ಎಂಬ ಸಂಘಕ್ಕೆ ಕೊಡಿಪಾಡಿ ಗ್ರಾಮದಲ್ಲಿರುವ ಶ್ರೀಯುತ ಸೆಂಗಲ್ರ ಮಣ ಎರಕಡಿತಾಯ ಎಂಬವರು ಸ್ವಂತ ಜವಾಬ್ದಾರಿಯಿಂದ ಶಾಶ್ವತವಾಗಿ ವರ್ಷ 1ರ ಅಕ್ಕಿ ಮುಡಿ ಹನ್ನೆರಡರಂತೆ ಕೊ ಡುವುದಾಗಿಯೂ, ಶ್ರೀಯುತ ರಾಮಕುಂಜ ಗ್ರಾಮದಲ್ಲಿರುವ ಕಾನೋವು ನಾರಾಯಣ ಕಲ್ಲೂರಾಯ ಎಂಬವರು ಅದೇ ರೀ ತಿ ಅಕ್ಕಿ ಮುಡಿ ಎರಡರಂತೆ ಕೊಡುವುದಾಗಿ ತಾ 16—8—26ರಲ್ಲಿ ರಿಜಿಸ್ಟ್ರಾದ ದಾನ ಶಾಸನಗಳನ್ನು ಮಾಡಿ ಕೊಟ್ಟಿರುತ್ತಾರಾಗಿ ಸದರಿ ಸಂಘದ ಕಾರ್ಯದರ್ಶಿ ವಿ. ಯಶ ಶ್ರೀನಿವಾಸ ಪಟ್ಟಿಲಾಯರು ನಮಗೆ ಬರೆದು ತಿಳಿಸಿರುತ್ತಾರೆ.

ವಿದೇಶ.

ಸರ್ ಸಿ. ಪಿ ರಾಮಸ್ವಾಮಿಅಯ್ಯರವರು ಲಂಡನಿನಲ್ಲಿ ಮುಖ್ಯ ಮುಖ್ಯ ಜನರ ಭೇಟಿ ತೆಗದುಕೊಳ್ಳುತ್ತಲಿದ್ದಾರೆ.

ಫ್ರಾನ್ಸ್ ದೇಶದಲ್ಲಿ ಯುದ್ಧದಲ್ಲಿ ಸತ್ತ ಹಿಂದೀ ಸೈನಿಕ ರ ಜ್ಞಾಪಕಾರ್ಥದ ಕಟ್ಟಡವನ್ನು ಕಟ್ಟಲು ಫ್ರೆಂಚ್ ಸರಕಾ ರದ ಮಂಜೂರಾತಿ ದೊರಕಿದೆ.

ಫ್ರೆಂಚರೊಂದಿಗೆ ಯುದ್ಧ ಮಾಡಿದ ರಿಫ್ ಜನಾಂಗದ ಮುಖಂಡರಾದ ಅಬ್ದುಲ್ ಕ್ರೀಂ ಎಂಬವನನ್ನು ಮಡಗಾಸ್ಕರ್ ದ್ವೀಪಕ್ಕೆ ಗಡೀಪಾರು ಮಾಡಿರುತ್ತಾರೆ. ಅವನು ತನ್ನ ತಂದೆ ಮತ್ತು ಚಿಕ್ಕಪ್ಪನಿಂದ ಒಡಗೂಡಿ ಅಲ್ಲಿಗೆ ಹೊರಟುಹೋದನು.

ಅಲೆಕ್ಸಾಂಡ್ರಾ, ರಾಣೀಯವರ ಪ್ರೇಮದ ಮರಿಸಸ್ಥಾನ ವಾದ ಸಾಂಡ್ರಿಂಗ್‌ಹ್ಯಾಮ್ ಎಂಬ ಅರಮನೆಗೆ ಚಕ್ರವರ್ತಿಯವ ರು ವಾಸಕ್ಕೆ ಹೋಗಬೇಕೆಂದಿರುವದರಿಂದ ಚಕ್ರವರ್ತಿನಿಯವ ರು ಸ್ವತಃ ಉಸ್ತುವಾರಿಯಿಂದ ಅರಮನೆಯ ಜವಳಿವಳಿ ಮತ್ತು ಮರಮುಟ್ಟಿನ ಕೆಲಸವನ್ನು ನಡಿಸುತ್ತಿದ್ದಾರೆ.

ಫ್ರೆಂಚರ "ಲೆಸೋಟಸ್" ಎಂಬ ಹಡಗದ ಒಬ್ಬ ಆಫೀಸ ರನ್ನು ಕಾನ್‌ಸ್ಟಾಂಟಿನೋಪಲಿನಲ್ಲಿ ಟರ್ಕಿಸರಕಾರದವರು ದಸ್ತಗಿರಿ ಮಾಡಿರುತ್ತಾರೆ. ಈ ಹಡಗವು ಟರ್ಕಿಯ ಒಂದು ಸಾಮಾನಿನ ಹಡಗಕ್ಕೆ ತಗಲಿದ್ದಕ್ಕಾಗಿ ದಸ್ತಗಿರಿಮಾಡಿದ್ದಾಗಿ ದೆ. ಫ್ರೆಂಚರು ಟರ್ಕಿಸರಕಾರಕ್ಕೆ ಈ ವಿಷಯವಾಗಿ ಪತ್ರಬ ರೆದಿರುತ್ತಾರೆ.

ಸರ್ ಟಿ. ವಿಜಯರಾಘವಾಚಾರ್ಯರು ಹಿಂದುಸ್ಥಾನ ದ ಪ್ರತಿನಿಧಿಯಾಗಿ ಹೋಗಿ ಅಮೇರಿಕಾ ಖಂಡದ ಕಾನಡಾ ರಾಜ್ಯದಲ್ಲಿ ರಾಷ್ಟ್ರೀಯ ಪ್ರದರ್ಶನವನ್ನು ತೆರೆದರು. ಹಿಂ ದುಸ್ಥಾನದ ಹೆಚ್ಚಿನ ಜನರು ಹಿಂದುಸ್ಥಾನದ ಅಭ್ಯುದಯಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಒಳಗ ಇರುವದು ಅವಶ್ಯವೆಂದ ನಂ ಬಿರುತ್ತಾರೆಂತ ತಮ್ಮ ಭಾಷಣದಲ್ಲಿ ಹೇಳಿರುತ್ತಾರೆ.

ಪ್ರಪಂಚದ ಎಲ್ಲಾ ಜನಾಂಗಗಳ ಪರವಾಗಿ ಪ್ರಪಂಚದ ಪ್ರಖ್ಯಾತ ಪುರುಷರನೇಕರು ಸೇರಿ "ಜನಾಂಗಗಳ ಕೂಟ" ಕ್ಕೆ ಮಿಲಿಟರಿ ಕೆಲಸಕ್ಕೆ ಜನರನ್ನು ಬಲಾಂ ಪಡಿಸಬಾರದೆಂತ ಕೇಳಿಕೊಳ್ಳುವ ಒಂದು ಅರ್ಜಿಯನ್ನು ತಯಾರಿಸುತ್ತಿದ್ದಾರೆ ಇದಕ್ಕೆ ಮಹಾತ್ಮ ಗಾಂಧಿ, ಲಾಲಾಲಜಪತರಾಯ್, ರವೀಂ ದ್ರನಾಥ ಟಾಗೂರ್ ಮತ್ತು ಸಿ. ಯಫ್. ಆಂಡ್ರ್ಯೂಸ್ ಸಿಗ್ನೇ ಚರ್ ಮಾಡಿದ್ದಾರೆ

ನೋಟೀಸ್.

ಪೌತಿ ಬಡೆಖಾನ್‌ಸಾಬರ ಹಕ್ಕುದಾರಳಾಗಿದ್ದ ಬೀಬಿ ತುಂಬಿ ಎಂಬವಳು ಈಚೆಗೆ ಪೌತಾಗಿ ಇರುವದರಿಂದ ಅವಳ ಹಕ್ಕುದಾರಳು ನಾನೇ ಹೊರತು ಬೇರೆಯಾರೂ ಇಲ್ಲ. ಆ ದ್ದರಿಂದ ಸದರಿಯವರ ಸೊತ್ತನ್ನು ಬೇರೆ ಯಾರೊಬ್ಬರಾದರೂ ಕೊಂಡುಕೊಳ್ಳಬಾರದೆಂತ ಈ ಮೂಲಕ ಪ್ರಕಟಿಸಿರುತ್ತೇನೆ ಕೊಂಡುಕೊಂಡರೆ ಅವರಿಗೆ ಸೊತ್ತು ಸಿಕ್ಕುವದಿಲ್ಲ

3—2

ಹುಸೇನ್ ಬಿ.

ನೋಟೀಸ್.

ಜಮೀನ್‌ದಾರರ ಸಂಘದ ಆರ್ಗನೈಜರ್ ಕೆಲಸ ಮಾಡ ಲು ಜನರು ಬೇಕಾಗಿದ್ದಾರೆ ಅಪೇಕ್ಷೆ ಇರುವವರು ಜನರ ಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಈ ಕೆಲಸವ ನ್ನು ವಹಿಸಿಕೊಳ್ಳಬೇಕಾದರೆ ಯಾವ ಶರತ್ತುಗಳಿಗೆ ಒಳಪಡ ಬೇಕೆಂಬದನ್ನು ಸಂಘದ ಮಡಿಕೇರಿ ಆಫೀಸಿನಿಂದ ತಿಳಿದುಕೊ ಳ್ಳಬಹುದು

ಮಡಿಕೇರಿ, ಸಿ. ಯಮ್ ವೆಂಕಪ್ಪಯ್ಯ,

ತಾ 1—9—1926 ಜನರಲ್ ಸೆಕ್ರೆಟರಿ.

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕ ರ್ತರು ಜವಾಬ್ದಾರರಲ್ಲ. ಸಂ.]

ಕೋಟೆರ ಚಿಣ್ಣಪ್ಪನವರ ಉತ್ತರಕ್ಕೆ ಪ್ರತಿಯುತ್ತರ

ಅಯ್ಯಾ ಚಿಣ್ಣಪ್ಪನವರೇ,

ನಾನು ನಿಮ್ಮ ಮೇಲೆ ಆರೋಪಣೆಯನ್ನು ಎಂದೂ ಹೊರಿಸಲಿಲ್ಲ. ನೀವು ಆತಿದ ನುಡಿಗಳನ್ನು ಮಾಡಿದ ಕೆಲಸ ವನ್ನು ಮಾತ್ರ ನ್ಯಾಯಕ್ಕೂ ನನ್ನ ಕಷ್ಟ ತಡೆಯಲಾರದೆ ಹೇಳಿ ದೆನು. ನಿಮಗೆ ಓಟು ಕೊಟ್ಟವರ ಪೈಕಿ ನಾನು ಒಬ್ಬನಾ ದುದರಿಂದ ನಿಮ್ಮನ್ನು ಹೇಳಬೇಕಾಯಿತು ನೀವು ನಮಗೆ ನಿಮ್ಮ ಮೂರು ವರ್ಷಗಳ ಕೌನ್ಸಿಲ್ ಮೆಂಬರುತನದಲ್ಲಿ ಮಾಡಿದ ಉಪಕಾರವನ್ನು ದಯಮಾಡಿ ಈ ಪತ್ರಿಕೆಯಲ್ಲಿ ವಿ ವರಿಸಿದರೆ ದೇಶದವರಿಗೂ ನನಗೂ ಸಹ ಚೆನ್ನಾಗಿ ವೇದ್ಯವಾ ಗುವದು ನಾನು ಒಮ್ಮೆ ನೀವು ನಮ್ಮ ನಾಡಿಗ ಬೇಕಾ ಗಿ ಹೋರಾಡಿ ಮಂಜೂರು ಪಡಿಸಿದ ಸಂಗತಿಯನ್ನು ಮರೆ ತುಹೋಗಿರಲಿಕ್ಕೂ ಸಾಕು ಹಾಗೆ ಪ್ರಕಟನೆ ಮಾಡದೆ ಮುಂಲೆ ಮಂತ್ರಗಳಲ್ಲು ನಂದುಗೊಂದುಗಳಲ್ಲಿ ನಾನು ಹಾ ಗೆ ಮಾಡಿದೆನು, ಹೀಗ ಮಾಡಿದೆನೆಂದು ಹೇಳಬೇಡಿರಿ ನಾನು ಕಡಿಯತ್ರನಾಡು, ಬೆಪ್ಪುನಾಡಿನ ಸಂಗತಿ ಬರೆಯಲಿಲ್ಲ. ನಾ ಡಿನಾಲ್ಕುನಾಡಿನ ಸಂಗತಿ ಮಾತ್ರ ಬರೆದದ್ದಾಗಿದೆ

ನಾನು ಕಂಡಿತವಾಗಿ "ಕೊಡವ" ನಾದದರಿಂದ ನಮ್ಮ "ಕೊಡವ" ಸಭೆಗೆ ಪಕ್ಷಪಾತಿಯಾಗಿರುವದರಲ್ಲಿ ಏನಾಶ್ಚ ರ್ಯ? ಕೊಡವರಲ್ಲದ ಆದರೆ 'ಕೊಡವರ' ಆಚಾರ ವಿ ಚಾರದಲ್ಲಿ ಇಲ್ಲದವರು ಮಾತ್ರ "ಕೊಡವ" ಸಭೆಯನ್ನು ತು ಚ್ಛೀಕರಿಸುವರೆಂದು ನೀವೂ ನಾನೂ ಸಹ ಯೋಚಿಸಬೇಕಾ ಗಿದೆ.

ನಾನು ಹೇಳುವ ಪಾಲು ಮತ್ತು ದಾರಿಗಾಗಿ ನೀವು ಎ ಷ್ಟೋ ಸಲ ಹೋಗಿರಬಹುದು ಮತ್ತು ನೀವು ಕೋಡಿಮಣಿ ಯಂಡ ನಂಜುಂಡನವರ ಜೊತೆಯಲ್ಲಿ ಹೋಗುವಾಗ್ಗೆ ಎ ಷ್ಟೋ ಸಲ ಹೇಳುತ್ತೇವೆ ನೀವು ಹೇಳುವುದು ನಿಜ ಬ ರಿಯಲಿಲ್ಲ. ಇದು ನಮ್ಮ ನಾಡಿನವರ ತಪ್ಪು ನಾವಿರ ಅಡಿದ್ದರಿಂದ ಫಲವೇನು? ಅದರಂತೆ ನೀವು ಸಾವಿರಾರು ರ ಜಾವು ಕೂಂತ ಹೋದದ್ದರಿಂದ ಫಲವೇನು? ತಾವು ನ ಮ್ಮ ನಾಡಿಗೆ ನೀವು ಮಾಡಿದ ಕೆಲಸ ಯಾವದೂ ಕಾಣಲಿಲ್ಲ.

ನನ್ನ ಲೇಖನದಿಂದ ನಿಮ್ಮ ಮುಂದಿನ ಏಳಿಗೆಗೆ ಕುಂದಕ ತರಬೇಕೆಂಬ ಭಾವನೆ ನನಗೆಂದೂ ಇಲ್ಲ. ನಿಮ್ಮ ಒಳ್ಳೇ ಮಾ ತಿಗ ಮರುಳಾಗ ಬೇಡಿರಿ ಎಂಬದನ್ನು ಮಾತ್ರ ನಾಡಿನವರಿ ಗೂ ಮತ್ತು ನೀವು ಸಹ ಇನ್ನು ಮುಂದೆ ಈ ಮೇರೆ ದುರ್ಬೋ ಧನೆ ಮಾಡಬ್ಯಾಡಿರೆಂಬುದೇ ನನ್ನ ಹಾರೈಕೆ.

ನಾನು 'ಕೊಡವ" ಸಭೆಯ ಪಕ್ಷಪಾತಿಯಾದ್ದರಿಂದ ನಿ ಮ್ಮ ಮೇಲೆ ಆರೋಪಣೆ "ಲೋಕಪಾವನ" ದಲ್ಲಿ ಕಂಡಿರಿ. ಸದರಿ "ಲೋಕಪಾವನ" ದಲ್ಲಿ ಕಂಡದನ್ನೇ "ಕೊಡಗು" ಪ ತ್ರಿಕೆಗ ಸಹ ಬರೆದಿದ್ದೆನು. ನೀವು ಕೊಡಗು ಪತ್ರಿಕೆಯವರಾ ದುದರಿಂದ ನಿಮ್ಮ ಸಂಗತಿಯನ್ನು ಬರೆಯಬೇಡಿರೆಂದು ನಿಮ್ಮ ಪಕ್ಷಪಾತಿಯವರನ್ನು ಕೇಳಿಕೊಂಡಿದ್ದೇನೆಯೇ?

ನನ್ನ ಸಹಾಯ ನಿಮಗೆ ಅವಶ್ಯವಿಲ್ಲವೆಂದು ಖಂಡಿಸುವಿ ರಿ ನನಗಾದರೋ ನ್ಯಾಯಶಾಲಿಗಳ ಸಹಾಯವೆಂದೂ ಬೇಕು. ನ್ಯಾಯಶಾಲಿಗಳಲ್ಲದವರ ಸಹಾಯ ನನಗೆಂದೂ ಅವಶ್ಯ ಇಲ್ಲವು.

ಉದಯಂಡ ಮೊಣ್ಣಯ್ಯ.

[ಈ ಲೇಖನದಲ್ಲಿ ಹೇಳಿರುವ ಮೇಲೆ ಯಾರ ಮಾತು ಕೇ ಳಿದರೂ ವ್ಯಕ್ತಿ ದೂಷಣೆಯನ್ನು ನಾವು ಪ್ರಕಟಿಸದೆ ಇದ್ದದ್ದಿ ಲ್ಲ. ವ್ಯಕ್ತಿದೂಷಣೆಮಾಡುವದು ಯೋಗ್ಯ ಪತ್ರಿಕೆಗಳಿಗೆ ಸಲ್ಲ ದು ಎಂಬ ತತ್ವವನ್ನು ಅವಲಂಬಿಸಿ ನಮ್ಮ ಕರ್ತವ್ಯವನ್ನು ಮಾ ಡುತ್ತಿದ್ದೇವೆ. ಸಂ. ಕೊ]

ಕೊಡವಸಭೆಯೂ, ಗೌಡರೂ.

ದೇಶಬಾಂಧವರೆ,

ಆಗೋಸ್ತು 19ನೇ ತಾರೀಕಿನ "ಲೋಕಪಾವನ" ಪತ್ರಿ ಕೆಯಲ್ಲಿ ಅಮ್ಮತ್ತಿನಾಡಿನ ಒಬ್ಬ ಮಹನೀಯರ ಟಾಕ್ಕಿಯನ್ನು ನೋಡಿದೆನು. ಅದರಲ್ಲಿ ಗೌಡರು ಶಕ್ಕಡ ಪೂವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿಸಿ ಕೊಡವ ಸಭೆ ಬೇಡವೆಂತಲೂ ಗ ಜಟೆಡ್ ಉದ್ಯೋಗಸ್ಥರನ್ನು ಐನುವರ್ಷಕ್ಕೊಂದಾವರ್ತಿ ವ ರ್ಗಾಯಿಸಬೇಕೆಂತಲೂ ಠರಾವು ಪಾಸುಮಾಡಿರುವುದರಿಂದ ಗೌಡರ ವಿದ್ಯಾಸಂಘವು ರಾಜಕೀಯ ಮತ್ತು ಸಾಮಾಜಿಕ ಸಭೆಯಾಗಿದೆಯೆಂದು ಅವರು ಬರೆದಿದ್ದಾರೆ. ಈ ಬಾತ್ಮಿದಾ ರರು ಸಂಗತಿಯನ್ನು ಸರಿಯಾಗಿ ತಿಳಿದುಕೊಂಡಿರುವದಿಲ್ಲ. ಯಾತಕ್ಕೆಂದರೆ ಮಿ. ಶಕ್ಕಡ ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆದುದು ವಿದ್ಯಾಸಂಘದ ಮೀಟಿಂಗಲ್ಲ. ವಿದ್ಯಾಸಂಘಕ್ಕೂ ಆ ಸಭೆಗೂ ಏನೊಂದೂ ಸಂಬಂಧವಿರಲಿಲ್ಲ. ಆ ಸಭೆಯು ಗೌ ಡರ ಒಂದು ತಾತ್ಕಾಲಿಕ ಮೀಟಿಂಗ್ ಮಾತ್ರವಾಗಿತ್ತು. ಅದು ಖಾಯಮ್ಮಾಗಿ ಸ್ಥಾಪಿಸಲ್ಪಟ್ಟು ಇನ್ನು ಮುಂದಕ್ಕೂ ನಡೆ ಯಿಸಿಕೊಂಡು ಬರುವ ರಾಜಕೀಯ ಅಥವಾ ಸಾಮಾಜಿಕ ಸ ಭೆಯೇನೂ ಆಗಿರಲಿಲ್ಲ. ತತ್ಕಾಲಕ್ಕೆ ಕೆಲವು ಅಭಿಪ್ರಾಯಗ ಳನ್ನು ಸರಕಾರಕ್ಕೆ ತಿಳಿಸಬೇಕಾಗಿತ್ತು. ಅದಕ್ಕಾಗಿ ಒಂದು ಸಭೆಕೂಡಿ ಕೆಲವು ಠರಾವುಗಳು ಪಾಸಾದವು. ಕೊಡಗು ದೇ ಶದ ಪ್ರತಿ ಒಂದು ಸಭೆಯೂ, ಕೂಟವೂ, ಪ್ರತಿ ಒಂದು ನಾಡಿನ ಜನರೂ, ನಾಲದಿದ್ದರೆ ಪ್ರತಿ ಒಂದು ಕೋಮಿನ ಜನರೂ ಕೊ ಡವ ಸಭೆಯ ಅನಾವಶ್ಯಕತೆಯನ್ನು ಮತ್ತು ಅದರಿಂದುಂಟಾ ಗುವ ಕೆಡುಕನ್ನು ಮತ್ತು ಗಜೆಟೆಡ್ ಉದ್ಯೋಗಸ್ಥರ ವರ್ಗಾ ವರ್ಗಿಯ ಅವಶ್ಯಕತೆಯನ್ನು ಸರಕಾರಕ್ಕೆ ಆಗಾಗ್ಗೆ ತಿಳಿಸುತ್ತಿರ ಬೇಕೆಂಬುದೇ ಈ ಗೌಡರ ಕೂಟದ ಉದ್ದೇಶವಾಗಿತ್ತು. ಅ ಲ್ಲದೆ ಗೌಡರು ಪ್ರತ್ಯೇಕ ಒಂದು ಸಮೂಹ (Association) ವನ್ನು ಸ್ಥಾಪಿಸಿ ಅದನ್ನು ಕ್ರಮವಾಗಿ ನಡೆಯಿಸಿಕೊಂಡು ಬ ರಬೇಕೆಂಬ ಉದ್ದೇಶವನ್ನೇನೂ ಇಟ್ಟುಕೊಂಡಿರಲಿಲ್ಲ. ಹಾ ಗೆ ಸಭೆಯನ್ನು ನಡೆಯಿಸುತ್ತಲೂ ಇಲ್ಲ. ಮೇಲೆ ಹೇಳಿದ ರೀ ತಿಯಲ್ಲಿ ಸದುದ್ದೇಶಕ್ಕಾಗಿ ಕೂಡಿದ ತಾತ್ಕಾಲಿಕ (Momentary) ಸಭೆಯನ್ನು ತಪ್ಪು ದೃಷ್ಟಿಯಿಂದ ನೋಡುವುದು ತಿಳುವಳಿಕೆ ಯ ಲಕ್ಷಣವಲ್ಲ.

ಅಲ್ಲದೆ ಕೊಡವಸಭೆಯು ಬೇಡವೆಂದು ಹೇಳಲು ಗೌ ಡರಿಗೆ ಹಕ್ಕೇನಿದೆಯೆಂದು ಸಹ ಅವರು ಕೇಳುವರು. ಇದು ಸಹ ಇನ್ನೊಂದು ತಿಳುವಳಿಕೆಯಿಲ್ಲದ ಪ್ರಶ್ನೆ. ದೇಶದ ಹಿತವ ನ್ನು ಬಯಸುತ್ತಿರುವ ಕೊಡವಸಭೆಯು ತಮಗೆ ಬೇಡವೆಂದು ಹೇಳಲು ಕೊಡಗು ಮಾತೆಯ ಪುತ್ರರಾದ ಗೌಡರಿಗೆ ಸಂಪೂ ರ್ಣವಾದ ಹಕ್ಕಿಲ್ಲವೇ? ಅದು ಹಾಗಿರಲಿ, ಇನ್ನು ಕೊಡವ ಸ ಭೆಯ ವಿಷಯವಾಗಿ ವಿಚಾರಿಸಿ ನೋಡಿದರೆ, ಕೊಡವಸಭೆಗ ಹದಿನೆಂಟು ವರ್ಷಕ್ಕೆ ಮೀರಿದ ಪ್ರತಿಯೊಬ್ಬ ಕೊಡವನೂ ಮೆಂ ಬರನಾಗಬಹುದಂತೆ! ಇಂಥಾ ಮೆಂಬರರಿಂದ ಕೂಡಿದ ಒಂದು ಸಭೆಯು ಕೊಡವರ ಸಹೋದರರಾದ ಹದಿನಾಲ್ಕು ಸಾವಿರ ಗೌಡರ ಪೈಕಿ 65 ಗೌಡರನ್ನು ನೇಮಿಸ (Nomination) ಕೊಳ್ಳುವುದಂತೆ! ಎಷ್ಟು ಸಹೋದರ ಪ್ರೇಮ? ಹೇಗೂ ಕೊಡವಸಭೆಗೆ ಗೌಡರ ಸೇರಲು ಅಪ ಪೇಕ್ಷೆ ಆಯಿತು ಇಂಥಾ ಒಂದು ಸಭೆಯು ದೇಶಕ್ಕೆ ಹಿತವಲ್ಲವೆಂದೂ ಅದಕ್ಕೆ ಗೌಡರ್ಯಾರೂ ಮೆಂಬರರಾಗಕೂಡದೆಂದೂ ಠರಾವು ಪಾಸು ಮಾಡಲು ಗೌಡರಿಗೆ ಹಕ್ಕಿಲ್ಲವೇ?

ದೇಶಬಾಂಧವರೇ, ಇಂಥಾ ಕಾನೂನುಗಳನ್ನು ಇಟ್ಟು ಕೊಂಡು ತಮ್ಮ ಕಾರ್ಯಸಾಧನೆಗಾಗಿ ಬೇರೆಯವರನ್ನು ಅ ನಾವಶ್ಯಕವಾಗಿ ದೂರುವವರ ಮಾತಿಗೆ ಮರುಳಾಗಬೇಡಿರಿ. ನಮ್ಮ ದೇಶದಲ್ಲಿ ಒಡಕುತಂದು ಪಂಗಡಭೇದಗಳನ್ನು ಹುಟ್ಟಿಸ ಲು ಇಷ್ಟಪಡುವ ಈ ಕೊಡವಸಭೆಗೆ ಗೌಡರು ಮಾತ್ರವಲ್ಲ, ಅ ವರ ಸಹೋದರರಾದ ಕೊಡವರೂ ಸಹ ಯಾರೊಬ್ಬರೂ ಮೆಂಬರರಾಗಕೂಡದೆಂದು ಎಲ್ಲರಲ್ಲಿಯೂ ನನ್ನ ವಿನಂತಿ ಇದೆ.

ಇತಿ ದೇಶಸೇವಕ

ಎನ್. ಸೋಮಣ್ಣಗೌಡ.

ಫಾರೆಸ್ಟು ಇಲಾಖೆ.

(Forest Department)

ಫಾರೆಸ್ಟು ಗಾರ್ಡುಗಳ ದುಃಖವನ್ನು ಯಾರಲ್ಲಿ ತಾನೇ ಹೇಳಿ ಪೂರೈಸುವದು? ಇನ್ಯಾರಲ್ಲು ಹೇಳಿದರೂ ಮತ್ತು ಈ ಲೇಖಕನಲ್ಲು ಹೇಳಿದರೂ ಸಹ ನ್ಯಾಯ ಸಿಕ್ಕಲಾರದು. ಘ ನ ಸರಕಾರದವರಲ್ಲೇ ಹೋರಾಡಬೇಕಲ್ಲವೇ? ಸರಕಾರದವ ರೆಂದರೆ ಫಾರೆಸ್ಟು ಡಿ ಕನ್‌ಸರ್‌ವೇಟರಲ್ಲಿ ಅಲ್ಲವೇ? ಅವರ ಲ್ಲಿ ಹ್ಯಾಗೆ ಒಬ್ಬ ಫಾರೆಸ್ಟರ್ ಹೋರಾಡುವದು. ಒಬ್ಬನು ಬ ರೆದರೆ ಅವನ ಮೇಲೆ ಪೂರ ಕಣ್ಣು ಬಿದ್ದು ಅವನ 17—18 ವ ರ್ಷಗಳ ಸರ್ವಿಸಿನ ಜಾಯಿಗೆ ಮಣ್ಣಾಗಲಾರದೇ? ಹಾಗಾದ ರೆ ಇನ್ನೇನು ಮಾಡುವದು! ನಮ್ಮ ಕೊಡಗಿನ ಕಷ್ಟ ನಷ್ಟ ಗಳನ್ನು ಈ ಮೊದಲು ನಮ್ಮ "ಕೊಡಗು" ಪತ್ರಿಕೆಯಲ್ಲು ಪ್ರಕ ಟಿಸಿದಲ್ಲು ನ್ಯಾಯ ದ ತನ್ನಿಯಿಂದ ನ್ಯಾಯ ದೊರಕಿದೆಯೂ ಗಿ ನಮಗೆ ಚೆನ್ನಾಗಿ ಗೊತ್ತಿರುವಾಗ್ಗೆ ಯಾಕೆ ನಿಮ್ಮ ಹಾ ಲನ್ನು ಪತ್ರಿಕೆ ಮೂಲಕ ಹೇಳಿಕೊಳ್ಳಬಾರದು. ನಾಗೆ ಹೇ ಳಿಕೊಂಡಲ್ಲು ಮೇಲಧಿಕಾರಿಗಳು ಒಪ್ಪರಲ್ಲದಿದ್ದರೆ ಇನ್ನೊ ಬ್ಬರಾದರೂ ತನ್ನಿಮಾಡಿ ನ್ಯಾಯಕೊಟ್ಟೇ ಕೊಡುವರು. ಇ ದಕ್ಕೆ ಯಾಕೆ ಅಂಜುವದು. ಹಾಗಾದರೆ ಹೇಳುತ್ತೇನೆ, ಚೆನ್ನಾ ಗಿ ಆಲಿಸಿ ನ್ಯಾಯವನ್ನು ಕೊಡಿಸಿರಿ.

ಸ್ವಾಮಿ, ಈ ಕೊಡಗುದೇಶವು ಗುಡ್ಡಬೆಟ್ಟಗಳಿಂದಲೂ, ಕೋಡು ಹೊಳೆಗಳಿಂದಲೂ, ಆನೆ ಕಾಟಗಳಿಂದಲೂ, ಹುಲಿ ಕರಡಿಗಳಿಂದಲೂ ಕೂಡಿದ ಮಲೆನಾಡು ದೇಶವಾಗಿ ನಶ್ಯಾಯ ವಾದ ಕೂಲಿಕಾರರಲ್ಲದೆ ಎಲ್ಲಾ ಪರದೇಶದಿಂದ ಕೂಲಿ ಆಳು ಗಳನ್ನು ಒದಗಿಸಿಕೊಳ್ಳಬೇಕೆಂಬುದು ತಮಗೆ ಚೆನ್ನಾಗಿ ವೇದ್ಯವಿ ದೆಯಷ್ಟೆ. ಜಕ್ಕ ಹೌದು, ಯಾರು ಅಲ್ಲವೆಂದು ಹೇಳುವ ರು? ಇಂಥಾ ಮಲೆನಾಡಿನಲ್ಲಿ ಮೇಲ್ಕಂಡ ದುಷ್ಟ ಮೃಗಗ ಳ ಬಳಿಯಿಂದ ತಪ್ಪಿಸಿಕೊಂಡು, ಪರದೇಶದಿಂದ ಆಳುಗಳ ಒದ ಗಿಸಿಕೊಂಡು ಗುಡ್ಡಬೆಟ್ಟಗಳಲ್ಲು ಅನೇಕ ಸಾರಿ ಅನ್ನ ನೀರಿಲ್ಲ ದೆ ತಾನು ಚೆನ್ನಾಗಿ ಕೆಲಸಮಾಡಿ ತನ್ನ ಮೇಲಧಿಕಾರಿಗಳಿಗೆ ಮೆಚ್ಚುವಂತ ಕೆಲಸಮಾಡಿದರೆ ನಮಗೆ ಬತ್ತಿ ದೊರೆಯುವದು

ಬ ಆಸೆಯಿಂದಲ್ಲವೇ ನಾವು ಕಷ್ಟಪಟ್ಟು ಕೆಲಸಮಾಡುವದು ಮತ್ತು ಮಾಡಿದ್ದು, ಯಾರು ಅಲ್ಲ ಅನ್ನುವರು? ಚೆನ್ನಾಗಿ ಕೆಲಸಮಾಡಿ ಸರ್ವಿಸ್ ಜಾಸ್ತಿಯಾಗಿ ಕೆಲಸದಲ್ಲಿ ಮೊದಲಾಗಿ ಇರುವವರಿಗೆ ಖಂಡಿತವಾಗಿಯೂ ಮೇಲಧಿಕಾರಿಗಳು ಬಡ್ತಿ ಕೊಟ್ಟೇ ಕೊಡುತ್ತಾರೆ. ಹಾಗೆ ಕೊಟ್ಟಿದ್ದರೆ ಈ ಗೋಳು ಹೇಳಲು ನಾನು ಬರುತ್ತಿರಲಿಲ್ಲ. ಆದೇನು ಅನ್ಯಾಯ ನಡೆದಿದೆ ಹೇಳಿರಿ. ನಮ್ಮ ಮೇಲಧಿಕಾರಿಗಳು ಹಳೇ ಸರ್ವಿಸ್ ಆದ ಕೆಲಸದಲ್ಲಿ ಮೊದಲಾಗಿದ್ದ 18, 17, 16, 15 ಇತ್ಯಾದಿ ವರ್ಷಗಳ ಸರ್ವಿಸ್‌ದಾರರನ್ನು ಮಾಸ್ಟರ್ ಕೆಲಸ ಕೊಡಬೇಕಾದರೆ ಟ್ರೈನಿಂಗ್ ಆಗಬೇಕೆಂದು ಕೆಲವರನ್ನು ಕಳುಹಿಸಿ ಟ್ರೈನಿಂಗ್ ಆಗಿ ಬರುವ ಒಂದವರು ಇದ್ದಂತೆ ಮೇಲ್ಕಂಡ ಸರ್ವಿಸ್ ನೋಡದೆಯೂ ಸರ್ವಿಸಿನ ಅರ್ಧಭಾಗಕ್ಕಿಂತ ಜಾಸ್ತಿಯಾಗಿ ಗಾರ್ಡ್ ಕೆಲಸದಲ್ಲೇ ನರಳುತ್ತಿರುವವರನ್ನು ಬಿಟ್ಟು, ಈಗೀಗಲೇ ಶಾಲೆಯಿಂದ ಹೊರಬಂದ ಮತ್ತು ಸರ್ವಿಸಿಲ್ಲದ ಯುವಕರಿಗೆ ಸರ್ವಿಸಾಗಿ ಟ್ರೈನಿಂಗ್ ಆಗಿ ಇರುವವರನ್ನು ಬಿಟ್ಟು ಮಾಸ್ಟರ್ ಕೆಲಸ ಕೊಟ್ಟದ್ದನ್ನು ನೀವು ಇದುವರೆಗೂ ತಿಳಿಯಲಿಲ್ಲವೇ? ಇಲ್ಲ, ಅದು ಯಾರಿಗೆ ಹಾಗೆ ಕೊಟ್ಟದ್ದು, ದಯಮಾಡಿ ಹೇಳಿರಿ. 18, 17, 16, 15 ವಗೈರೆ ವರ್ಷ ಸರ್ವಿಸಾಗಿ ಟ್ರೈನಿಂಗ್ ಆದ ಗಾರ್ಡ್‌ಗಳನ್ನು ಬಿಟ್ಟು ಹೊಸಬರಿಗೆ ಮಾಸ್ಟರ್ ಕೆಲಸ ಕೊಟ್ಟದ್ದು ಅಧಿಕಾರಿಗಳಿಗೆ ಚೆನ್ನಾಗಿ ಗೊತ್ತಿದೆ. ಬೇರೆ ಕೆಲವರಿಗೂ ಗೊತ್ತಿದೆ. ಆದರೆ ಇಲ್ಲಿ ಹೆಸರು ಹೇಳಿದರೆ ಅವರಿಗೆ ವಿರೋಧವಾದೀತು. ಅಧಿಕಾರಿಗಳು ವಿಚಾರಿಸಿದಲ್ಲಿ ಹೇಳಿದರೆ ಸಾಲದೇ? ಅಯ್ಯೋ ಪಾಪ, ಇದೆಂಥಾ ಪಾಪ? (ಪ್ರೊಂಬಿತಾ ತಿಂಬಿಕ್ ಚೆಂಡೆ, ಪಣ ತಿಂಬಿ ಮಾರಾಯ.) ಕಷ್ಟಪಟ್ಟು ಕೆಲಸಮಾಡಿದ ಗರೀಬರಿಗೆ ಸುಖವಿಲ್ಲ. ನಿಮ್ಮ ಮನೆಯಜಮಾನ್ಯರು ರೇಂಜರಾಗಿಯೂ, ಸುಬೇದಾರರು, ಪಾರುಪತ್ಯಗಾರರು, ಹೈಕೋರ್ಟ್ ವಕೀಲರಾಗಿಯೂ ಇಲ್ಲವೇನು? ಇಲ್ಲ. ಆದೇ ಕೇಸು ಟ್ರೈನ್ಡ್ ಆಗಿ ಸರ್ವಿಸ್ ಜಾಸ್ತಿಯಿರುವವರೆಲ್ಲ ಸೇರಿ ಅರ್ಜಿ ಬರೆಯಲಿಲ್ಲವೇನು? ಇಲ್ಲ. ಅರ್ಜಿ ಬರೆದರೆ ಅವರ ಮೇಲೆ ಕಣ್ಣು ಬಿದ್ದು ಇರುವ ಸರ್ವಿಸ್ ಸಹ ಕಳಕೊಂಡು ಬರೀ ಕೈಯಲ್ಲಿ ಮನೆಗೆ ಹೋಗಬೇಕಾಗುವದು. ಆದ್ದರಿಂದ ತಮ್ಮಲ್ಲಿ ಈ ದೂರು ಹೇಳಲಾಯಿತು. ನಮ್ಮ ಸರಕಾರದವರು ಖಂಡಿತವಾಗಿ ಈ ಸಂಗತಿ ತನಿಖೆಮಾಡಿ ನಮ್ಮನ್ನು (Supersced) ಹಿಂದುಮಾಡಿ ಕೆಲಸ ಕೊಟ್ಟದ್ದನ್ನು ರದ್ದುಮಾಡಿ ಟ್ರೈನಿಂಗ್ ಆಗಿ ಸರ್ವಿಸನ್ನು ಹೆಚ್ಚು ಇರುವವರಿಗೆ ಖಂಡಿತ ಕೊಡುವರು, ಹೋಗಿರಿ.

ಮನನೊಂದವ

ಒಲ್ಲಿರಂತೆ ಯುವಕರ ಸೇವಾಸಂಗದ ಫಂಡು.

ಆಂಗ್ಲೇಯರ ವಿದ್ಯಾಭ್ಯಾಸವು ನಮ್ಮ ಈ ದೇಶದಲ್ಲಿ ಪ್ರಸಾರವಾದಂದಿನಿಂದ ಹಳ್ಳಿನಾಡುಗಳು ಮೂಲೆಗೆಬಿದ್ದು ನಗರ ಪಟ್ಟಣಗಳು ಮುಂದೆ ಬರಲಾರಂಭಿಸಿದುವು. ಆಂಗ್ಲವಿದ್ಯಾಭ್ಯಾಸಮಾಡುವುದು ಧ್ರುವಾ ಜನಗೆ ಸುಲಭೋಪಾಯವೆಂಬುದನ್ನು ಅರಿತು ಜನರು ತಮ್ಮ ವಿದ್ಯೆಯನ್ನು ಪೋಷಿಸಲಾಗಿ ಸಮುದಾಯದ ಸ್ಥಿತಿಯು ನೆಟ್ಟಗಾಗದೆ ಹೋಯಿತು. ವಿದ್ಯೆಗಳಿಸಿದವರು ತಮ್ಮ ಸ್ವಾರ್ಥವನ್ನು ಸಾಧಿಸಿಕೊಂಡರೇ ಹೊರತು ಜನತೆಯನ್ನು ಮುಂದೆತರಲು ಯತ್ನಿಸಲಿಲ್ಲ. ಆದರೆ ಇತ್ತಿತ್ತ ಇಂತಹ ಸ್ವಾರ್ಥಪರರ ಆಸೆಯು ನಿರಾಶೆಯಾದಂತಾಗಿ ರಾಷ್ಟ್ರ ಉನ್ನತಿಯನ್ನು ಹೊಂದುವದು ಬದಗಿದ್ದು ರಾಷ್ಟ್ರದ ಅವನತಿಗೆ ಕಾರಣಭೂತರಾದರೆಂಬ ಕುರುಹನ್ನು ಕಾರ್ಯಕ್ಷೇತ್ರದಲ್ಲಿಯ ವಿಷಯಗಳ ಪರಿಸ್ಥಿತಿಯಂತಹ ಸ್ಥಿತಿಯನ್ನು ಪರಿಶೀಲಿಸಿ ನೋಡಿದಲ್ಲಿ ಅಲ್ಲಲ್ಲಿ ಕಾಣಬಹುದು. ಈಗಿನ ಕಾಲದಲ್ಲಿ ನಿರುದ್ಯೋಗಿಗಳಾದ ಯಸ್. ಎಲ್. ಸಿ. ಗಳೂ, ಬಿ. ಎ. ಗಳೂ ಎಷ್ಟೋ ಸಂಖ್ಯೆ ನಾಡಲ್ಲಿದ್ದಾರೆ. ಇವರು ತಾವು ವಿದ್ಯೆಗೆಂದು ವ್ಯಯಮಾಡಿದ ಸಮಯವು ನಿಷ್ಪ್ರಯೋಜಕವಾಗುವುದಲ್ಲಾ ಎಂದು ಕೊನೆಗೆ ಬಗೆಹರಿಯದೆ ಸಣ್ಣ ಪುಟ್ಟ ಸಾರ್ವಜನಿಕ ಕಾರ್ಯಗಳಲ್ಲಿ ಕೈ ಹಚ್ಚುವವರಾಗಿದ್ದಾರೆ.

ಅಂತಹಯೇ ಶಿರನಾಮೆಯಲ್ಲಿ ತೋರಿಸಿರುವ ಸಂಸ್ಥೆಯು ಇಂತಹ ಯುವಕರ ಒಂದು ಪುಟ್ಟ ಕೆಲಸವು. ಕಳೆದ ವರ್ಷ ಈ ಸಮಯಕ್ಕೆ ಮೊದಲು ತಾವು ಹೇಗೂ ಅಲ್ಲಸಲ್ಲದ ಕಾರಣಗಳಿಗಾಗಿ ಕಾಸುಗಳಂತೆಯೂ, ದುಡ್ಡುಗಳಂತೆಯೂ ಎಷ್ಟೋ ಹಣವ್ಯಯಮಾಡುತ್ತೇವೆ, ಹಾಗೆಯೇ ಎಂದು ತಿಳಿದು ತಿಂಗಳಿಗೆ ನಾಲ್ಕಾಣೆಯಾದರೂ ಉಳಿಸುತ್ತಾ ಬಂದರೆ ಸ್ವಲ್ಪ ಸಮಯದಲ್ಲಿಯೇ ತಮ್ಮದೆಂದು ಹೇಳಿಕೊಳ್ಳಬಹುದಾದ ಒಂದು ಮೊತ್ತವಾಗುವದೆಂದು ಅಭಿಪ್ರಾಯಪಟ್ಟು ನಾಲ್ವರು ಯುವಕರು ಈ ಫಂಡನ್ನು ತೆರೆದರು. ಇವರ ಸಾಧನಕ್ಕೆ ಮೆಚ್ಚಿ ಇನ್ನು ಕೆಲವರು ಸೇರಿಕೊಂಡರು. ಫಂಡಿನ ಮೆಂಬರುಗಳಿಗೆ ಮತ್ತೂ ಜನಬದ್ದಾರೆ. ತಿಂಗಳುವಾರು ವಸೂಲಾದ ಹಣವನ್ನು ತಮ್ಮೊಳಗೆ ಬಡ್ಡಿಗೆ ಕೊಟ್ಟು ಬಂದು ಮೊನ್ನೆ ಮೊನ್ನೆ ಆದ ಅವರ ಜನರಲ್ ಮೀಟಿಂಗಿನಲ್ಲಿ ರೂ. 50 ರ ಮೊಬಲಾತಿ ಇತ್ತು. ಮೀಟಿಂಗಿನಲ್ಲಿ ಒಬ್ಬೊಬ್ಬರ ಭಾಷಣಗಳೂ ಅದಲ್ಲದೆ ಉಪಯುಕ್ತಗೋಷ್ಠಿಗಳೂ ಮಾಡಲ್ಪಟ್ಟವು. ನಮ್ಮ ಸಂಸ್ಥೆಯು ಸುಧಾರಿಸಬೇಕಾಗಿರುವುದೇನೋ 'ನಿಜವಾದರೂ' ಇರುವಷ್ಟು ಮಟ್ಟಿಗೆ ಹತ್ತನ್ನೆರಡು ಮಂದಿ ತಿಳಿಯದ ಹುಡುಗರು ಸೇರಿ ತಮ್ಮದಾದ ರೂ 50 ಮೊಬಲಗನ್ನು ಬಡ್ಡಿಗೆ ಕೊಟ್ಟುಕೊಂಡು ಮೀಟಿಂಗು ಮಾಡುತ್ತಿರುವಾಗ ಅಲ್ಲಿದ್ದ ಪ್ರೇಕ್ಷಕರು ಉಲ್ಲಾಸಭರಿತರಾದರೆಂದರೆ ಆಶ್ಚರ್ಯವೇನು? ಇದು ಶ್ಲಾಘನೀಯವೆಂದು ಯಾರಿಗೆ ತಾನೇ ಅನಿಸಲಿಕ್ಕಿಲ್ಲ? ಹೀಗಲ್ಲವೇ ತಿಳಿದವರು ತಮ್ಮ ಬುದ್ಧಿಪೂರ್ವಕಮಾಡಿ ಹಳ್ಳಿ ಮನೆಯು ಬಾದರೂ ಅಭಿವೃದ್ಧಿಗೆ ನಿಲ್ಲುವ ಸಾಧನಗಳನ್ನು ಹುಡುಕಬೇಕಾದುದು! ಇದು ಬೇರೆಯವರೂ ಸಹ ಹಿಂಬಾಲಿಸತಕ್ಕದೆಂದೇ ನನ್ನ ಭಾವನೆ.

ಹಾಜರಿದ್ದವ.

ಕಲಿಯುಗದ ಯುವಕರು.

ಹೇ ಕಲಿಯುಗದ ಯುವಕರಿರಾ? ನಿಮ್ಮನ್ನು ಯಾವ ವಿಧಾತನು ಸೃಷ್ಟಿಸಿದನು? ನಿಮ್ಮ ಆಚಾರಗಳೇನು? ನಿಮ್ಮ ನಡೆನುಡಿಗಳೇನು? ಪಾಶ್ಚಾತ್ಯರ ಉಡುಪುಗಳನ್ನು ಧರಿಸಲು ನಿಮ್ಮ ಇಚ್ಛೆಯೇನು? ಹೆಚ್ಚು ಹೇಳಿ ಏನು ತಾನೇ ಪ್ರಯೋಜನ? ನಿಮ್ಮ ಆಚಾರ ನಡೆನುಡಿಗಳನ್ನು ಕಾಣುವಾಗ ನಮಗೆ ನಾಚಿಕೆಯಾಗುತ್ತದೆ. ನಿಮ್ಮನ್ನು ಎಷ್ಟೋ ಎಡದಲ್ಲಿ ಆದರಿಸಿ ಪಾಲಿಸುವ ತಂದೆತಾಯಿಗಳಿಗೆ ನಿಮ್ಮ ಈ ಸ್ವರೂಪವನ್ನು ಕಾಣುವಾಗ ಒಂದು ತರದ ಹುಚ್ಚು ನಗೆಯೂ, ವ್ಯಸನವೂ ಉಂಟಾಗಬಹುದಲ್ಲವೇ? ತಂದೆತಾಯಿಗಳ ಬುದ್ಧಿಯುಕ್ತವಾದ ಮಾತುಗಳನ್ನು ಎಂದಾದರೂ ಲಾಲಿಸುವಿರಾ? ವಿದ್ಯಾಶಾಲೆಗೆ ಸೇರುತ್ತಲೇ ತಂದೆತಾಯಿಗಳು ನಿಮಗೆ ಶತ್ರುಗಳಾಗಲು ಕಾರಣವೇನು? ಹೋಟೇಲುಗಳಿಗೂ, ಸಿಗರೇಟುಪೆಟ್ಟಿಗೆಗಳಿಗೂ ಹಣ ಒದಗಿಸಿ ಕೊಡುವುದು ಅವರ ತಪ್ಪಿತವೆಂದು ಭಾವಿಸುವಿರಾ? ಅಯ್ಯೋ! ವಿಜಾತಿಯ ಯುವಕರಿರಾ! ನೀವು ಈಗ ಪ್ರವರ್ತಿಸಿರುವ ಕಾರ್ಯವು ಕೆಟ್ಟದೆಂದು ನಿಮಗೆ ತಿಳಿಯುವುದಿಲ್ಲವೇ? ತಂದೆತಾಯಿಗಳ ಮಾತನ್ನು ಕೇಳಲಾರದೆ ವಿದ್ಯಾಶಾಲೆಯನ್ನು ಸೇರಿ ವಯಸ್ಸು ಮೀರಿದರೂ ಸ್ಕೂಲ್ ಫೈನಲ್ ಪರೀಕ್ಷೆಯನ್ನು ಪಾಸಾಗದೆ ಮನೆಗೆ ಹಿಂದಿರುಗುವ ನಿಮ್ಮ ಜಂಭವು ಎಷ್ಟು? ನಿಮ್ಮ ಜಂಭವನ್ನು ಕಂಡು ಬಳಿಗಾಗಿ, ಹೆಣ್ಣು ಕೊಟ್ಟ ತಂದೆಯ ಜೀವಮಾನವು ಎಷ್ಟು ಸುಖಮಯವಾಗಿರಬಹುದು? ಪಾಪ! ಆಸೆಯದ ಹುಡುಗಿಯರು ನಿಮಗಾಗಿ ಎಷ್ಟು ತೊಂದರೆಗೊಳಗಾಗುವರು. ನೀವು ಇಷ್ಟು ದೊಡ್ಡವರಾಗಿದ್ದರೂ, ನಿಮ್ಮ ಜೀವಮಾನವನ್ನು ಕಳೆಯಲು ನಿಮಗೆ ಶಕ್ತಿ ಇಲ್ಲದೆ ಹೋದರೆ, ಆ ಬಡ ತಂದೆತಾಯಿಗಳು ನಿಮ್ಮ ದುರ್ವಿನಿಯೋಗಕ್ಕೆ ಎಲ್ಲಿಂದ ತಾನೇ ಹಣ ತಂದೊದಗಿಸಿಯಾರು? ಅಯ್ಯೋ, ಆ ಬಡ ತಂದೆತಾಯಿಗಳು ಒಂದು ದಿವಸವಾದರೂ ಸುಖವನ್ನನುಭವಿಸಲಿಲ್ಲವಲ್ಲಾ! ನಿಮ್ಮಂಥ ಪುತ್ರರು ಇದ್ದೇತಾನೇ ಏನು ಪ್ರಯೋಜನ? ಮಕ್ಕಳಿಲ್ಲದವರಿಗೆ ಪರಲೋಕದಲ್ಲಿ ಮೋಕ್ಷವಿಲ್ಲವೆಂದು ಹಿರಿಯರು ಹೇಳುವುದನ್ನು ನಾವು ಕೇಳಿದ್ದೇವೆ. ಆದರೆ, ನಿಮ್ಮಂಥ ಮಕ್ಕಳನ್ನು ಪಡೆದು ಏನು ತಾನೇ ಪ್ರಯೋಜನ? ಯುವಕರೇ! ಇನ್ನಾದರೂ ಸ್ವಲ್ಪ ಕಣ್ಣು ತೆರೆಯಿರಿ! ಪೂರ್ವ ವಿಚಾರಗಳಿಗೆ ಮನಕೊಡಿ! ಗುರು ಹಿರಿಯರಿಗೆ ಮರ್ಯಾದೆ ಕೊಡಿ! ಗುಂಡತೆಗೆ ಸೇರಬೇಡಿ. ಹಾಗೆ ಮಾಡಿದರೆ ದೇವರು ನಿಮ್ಮನ್ನು ಸದಾ ಸಲಹುವನು. ಸುಖ ಜೀವನಕ್ಕೆ ಖಂಡಿತವಾಗಿಯೂ ದಾರಿ ತೋರಿಸಿಕೊಡುವನು.

ಒಬ್ಬ ಮುದುಕ

ವಾಚಕ ಪ್ರಿಯರೇ,

ರೋಗವೆಂಬುದು ಮನುಷ್ಯನಿಗಿರುವ ಅತ್ಯಂತ ಶತ್ರುವಾಗಿದೆ. ಇದು ತನ್ನಲ್ಲೇ ಇದ್ದು ತನ್ನನ್ನು ನಾಶಮಾಡುವ ದೊಡ್ಡ ಶತ್ರುವಾಗಿ ಯಮನಿಗಿಂತಲೂ ಭಯಂಕರವಾದದ್ದಾಗಿದೆ. ಇದನ್ನು ಗುಣಪಡಿಸತಕ್ಕ ವೈದ್ಯ ಶ್ರೇಷ್ಠರನಿಸಿಕೊಳ್ಳುವವರೇ ಪ್ರಪಂಚದ ಪೋಷಕರೆಂದರೂ ತಪ್ಪಾಗಲಾರದು. ಆದರೆ ಇವರ ಹೆಸರೆತ್ತಿಕೊಂಡು ಕಳ್ಳ ಜೀವನ ನಡಿಸುವವರ ದೆಸೆಯಿಂದ ಮಾತ್ರ ಕೆಲವರಿಗೆ ಬಹಳ ಕೆಡಕಾಗುತ್ತದೆ. ಇದಕ್ಕಾಗಿಯೇ ಒಬ್ಬ ಕವಿಯು, ವೈದ್ಯರಾಜನಮಸ್ತುಭ್ಯ ಯಮರಾಜ ಸಹೋದರ, ಯಮೋಹರತಿ ಪ್ರಾಣಾನ್, ವೈದ್ಯೋ ಪ್ರಾಣಧನಾನಿಚ ಎಂದರೆ ಯಮರಾಜನ ಸಹೋದರನಾದ ವೈದ್ಯರಾಜನೇ ನಿನಗೆ ನಮಸ್ಕಾರವು. ಏತಕೆನ್ನುವಿಯೋ? ಯಮನು ಪ್ರಾಣವನ್ನು ಮಾತ್ರ ಅಪಹರಿಸ್ಯಾನು, ನೀನಾದರೋ, ಧನವನ್ನೂ ಪ್ರಾಣವನ್ನೂ ಕೂಡ ಅಪಹರಿಸುವಿ? ಎಂಬ ಕಲ್ಪನೆ ಹೇಳಿದ್ದಾನೆ. ಹೀಗಾಗುವದರಿಂದ ನ್ಯಾಯವಾದ ವೈದ್ಯರು ಸಿಕ್ಕುವದು ದುರ್ಲಭ. ಈಗ ನಮ್ಮ ಕೊಡಗಿನ ವೀರರಾಜಪೇಟೆಯಲ್ಲಿ ಹೊಸದಾಗಿ ಔಷಧಾಲಯ ತೆರೆದಿರುವ ಮೆ. ಪಾಂಡಂಡ ಸೋಮಯ್ಯ ಎಲ್. ಎಂ. ಎಂಡ್. ಎಸ್. ರವರು ವೈದ್ಯದಲ್ಲಿ ಬಹು ಜಾಣರಾಗಿಯೂ, ರೋಗ ಪರೀಕ್ಷೆ ನಡೆಸುವದರಲ್ಲಿ ಹೆಚ್ಚಿನ ಉತ್ಸಾಹ ತೆಗೆದುಕೊಳ್ಳುವವರಾಗಿಯೂ, ರೋಗಿಗಳ ರೋಗವನ್ನು ಸಮಾಧಾನದಿಂದ ಕೇಳಿಕೊಂಡು ತಕ್ಕುದಾದ ಮದ್ದು ಕೊಡತಕ್ಕವರಾಗಿಯೂ ಆಗಿರುತ್ತಾರೆ. ಇಷ್ಟು ಬೇಗನೆ ಇವರ ಹೆಸರನ್ನು ರೋಗಿಗಳು ತಮ್ಮ ಮನಸ್ಸಿಗೆ ತೆಗೆದುಕೊಳ್ಳುವರೇ? ರೋಗಿಗಳ ವಿಷಯದಲ್ಲಿ ಹೆಚ್ಚಿನ ಆದರಣೆಯೂ, ರೋಗಕ್ಕೆ ಸರಿಯಾದ ಮದ್ದು, ರೋಗ ಪರೀಕ್ಷೆ ಮಾಡುವುದೂ ಮುಂತಾದ ಉತ್ಸಾಹ ಕಾರ್ಯಗಳಿಂದಾಗಿದೆ. ಅಲ್ಲದೆ ನನ್ನ ಅನುಭವದಿಂದಲೂ ಹೇಳುವ ಮಾತಾಗಿದೆ. ನನಗಿದ್ದ ಒಂದು ಮಹಾ ವ್ಯಾಧಿಗಾಗಿ ವೈದ್ಯರೆಲ್ಲರಿಂದಲೂ ರೋಗ ಪರೀಕ್ಷೆ ಮಾಡಿ ಮದ್ದು ಮಾಡಿಸಿ ಹಣತೆತ್ತು ಸೋತು ಮಲೆಯಾಳ, ಮೈಸೂರು, ಬೆಂಗಳೂರು ಮುಂತಾದ ಪ್ರಖ್ಯಾತಿ ಪಟ್ಟಣಗಳಿಗೆಲ್ಲಾ ತಿರುಗಿ ಮದ್ದು ಮಾಡಿಸಿಯೂ ಗುಣಹೊಂದದೆ ಕಷ್ಟಭ್ರಷ್ಟನಾಗಿ ಕಡೆಗೆ ಮದ್ರಾಸ್ ಜನರಲ್ ಆಸ್ಪತ್ರೆಗೆ ಹೋದವನಾದೆನು. ಅಲ್ಲಿ ಇವರನ್ನು ಭೇಟಿಮಾಡಿಕೊಂಡು ಇವರು ಪರೀಕ್ಷಿಸಿದಲ್ಲಿ ಇವರು ಹೇಳಿದ ರೋಗವೂ, ಮದ್ರಾಸು ಜನರಲ್ ಆಸ್ಪತ್ರೆಯ ಮುಖ್ಯ ಡಾಕ್ಟರವರು ಪರೀಕ್ಷಿಸಿ ಹೇಳಿದ ರೋಗವು ಒಂದೇಯಾಗಿತ್ತು. ಅಲ್ಲದೆ ಈಗಲೇ ಎಷ್ಟೋ ಜನರು ಇವರ ವಿಷಯ ಕುರಿತು ಹೇಳುವ ಮಾತು ಅಲ್ಲಲ್ಲಿ ಕೇಳುತ್ತದೆ. ಹ್ಯಾಗೂ ಜನರು ಕೇಳುವಂತೆ ಇನ್ನು ಮುಂದಕ್ಕೂ ರೋಗಿಗಳ ವಿಷಯದಲ್ಲಿ ಹೆಚ್ಚಿನ ಆದರಣೆ [illegible] ಳ್ಳುವರೆಂದೂ. ಇವರ ಪ್ರಯತ್ನಕ್ಕೆ ದೇವರು [illegible] ದೀರ್ಘಾಯುಷ್ಯ ಅನುಗ್ರಹ ಮಾಡಲೆಂದೂ, [illegible] ಕೊಡಗಿನ ಇತರ ವೈದ್ಯರೂ ಕೂಡ ರೋಗಿಗಳ ರೋಗ [illegible] ಮಾಡುವದರಲ್ಲಿ ಅತ್ಯಂತ ಉತ್ಸಾಹ ತೆಗೆದುಕೊಳ್ಳುವರೆಂದೂ, ಇಲ್ಲವಾದರೆ ರೋಗಿಗಳು ರೋಗದ ಜೊತೆಗೆ ನಾಲ್ವರಂ[illegible]ತ್ರನನ್ನು ವಹಿಸ ದಟ್ಟ ದರಿದ್ರರಾಗುವದು ಖಂಡಿತವೆಂದೂ ನಂಬಿ ನನ್ನ ಲೇಖನವನ್ನು ಮುಕ್ತಾಯಗೊಳಿಸುವೆನು.

ಎನ್. ಐ. ಕೆ.

ಮಹನೀಯರೇ, —

ಕೊಡಗಿಗೆ ಪಂಚಲ್ಲಟ್ಟಿ ಉದ್ಯೋಗದ ಜಾಬ್ನಾಗಿಲ್ಲಿ ಪೋಸ್ಟಾಫೀಸು ಬಂದಾಗಿದೆ. ಅದರಲ್ಲಿ ಟೆಲಿಗ್ರಾಫ್ ಮುಖ್ಯ. ಈ ಉದ್ಯೋಗಸ್ಥರನ್ನು ನಾವು ಅಲ್ಲಲ್ಲಿ ಕಿಟಿಕಿಯ ಹೆಕಡೆ ಕಂಡಿರುವೆವಾದರೂ ಸಲಾಕೆಗಳನ್ನು ದಾಟಿ ಒಳಗಡೆ ಹೋಗುವ ದಾರಿಯು ಇನ್ನೂ ತೋರಿಬರಲಿಲ್ಲವು. ಅಥವಾ ಅದನ್ನು ಹುಡುಕಲು ಹೆಚ್ಚು ಪ್ರಯತ್ನ ತೆಗೆದುಕೊಳ್ಳದೆ ಇರುವುದೇ ಇದಕ್ಕೆ ಕಾರಣವಾಗಿರಬೇಕು.

ನಮ್ಮ ದೇಶೀಯರನ್ನು ಯಾವುದೋ ಕುರಿಗಳಿಗೆ ಹೋಲಿಸಿರುವರು. ಅದೇತಕ್ಕೆಂದರೆ ಒಬ್ಬ ಯುವಕನು ಪ್ರಯತ್ನಪೂರ್ವಕವಾಗಿ ಪೋಲೀಸಿಗೆ ಸೇರಿದರೆ ಅದರ ಹಿಂದೆ ಎಲ್ಲರೂ ಹೋಗುವರು. ಅಲ್ಲಿ ಎಡೆಯಿಲ್ಲವಾದರೆ ನಡೆದು ಸವೆದ ಕೋರ್ಟ್ ಹೊಕ್ಕುವ ದಾರಿಯನ್ನೇ ಅನುಸರಿಸುವರು. ಯಾರಾದರು ಬುದ್ಧಿವಂತರು ಛಾವಣಿಗೆ ಸೇರಿದರೆ ಎಲ್ಲರೂ ಅಲ್ಲಿಗೆ ಹೋಗುವರು. ಅದು ಮುಗಿದನಂತರ ಶಾಲೆಯ ಒಳನುಗ್ಗುವರು. ಈಗ ಈ ರೀತಿಯ ಯಾವದೊಂದೂ ದಾರಿಕಾಣದೆ ಯುವಕರು ನರಳಾಡುತ್ತಿರುವರು. ಅಂಥವರಿಗೆ ಒಂದು ದಾರಿ ಕೈಲ್ಲೆ ಎನುವ ಇದೇ ಪತ್ರಿಕೆಯಲ್ಲಿ ತಿಳಿಸಿದೆನು. ಇದು ಫಲಕಾರಿಯಾಯಿತೋ ತಿಳಿಯದು.

ಇಂದು ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನ ಅನುಕೂಲಗಳನ್ನು ವಿವರಿಸುವೆನು. ಈ ಉದ್ಯೋಗಕ್ಕೆ (Minu qualification) ಅವಶ್ಯವಾದ ಯೋಗ್ಯತೆಯು ಸ್ಕೂಲ್ ಫೈನಲ್ ಪರೀಕ್ಷೆಗೆ ಹೋಗಿರುವುದು ಮತ್ತು ಕೈ ಬರಹ ತಕ್ಕ ಮಟ್ಟಿಗೆ ಚೆನ್ನಾಗಿರಬೇಕು. ಜನವರಿ ಮತ್ತು ನವೆಂಬರ್ ತಿಂಗಳುಗಳಲ್ಲಿ ಚುನಾವಣೆ ಇದೆ. ೯ ತಿಂಗಳು ಬೆಂಗಳೂರಿನಲ್ಲಿ ತರಬೇತು ಹೊಂದಬೇಕು. ಆ ಸಮಯದಲ್ಲಿ 20 ರೂಪಾಯಿ ವೇತನಕೊಡುತ್ತಾರೆ. ಮನೆಯಿಂದ ಆ 9 ತಿಂಗಳು, ತಿಂಗಳಿಗೆ 5 ರೂಪಾಯಿಯಂತೆ ಕಳುಹಿಸಿಕೊಟ್ಟರೆ ಅಲ್ಲಿನ ಖರ್ಚಿಗೆ ಯಥೇಷ್ಟವಾಯಿತು.

೯ ತಿಂಗಳನಂತರ ತಿಂಗಳಿಗೆ 40 ರೂಪಾಯಿ ಸಂಬಳ ಕೊಟ್ಟು ಬೆಂಗಳೂರಿನಲ್ಲಿಯೇ ಇಟ್ಟುಕೊಳ್ಳುತ್ತಾರೆ. ಅನೇಕ ಮಂದಿಯನ್ನು ಯಾ ಕೊಡಗಿಗೆ 35ರೂಪಾಯಿ ಸಂಬಳದಲ್ಲಿ ಕಳುಹಿಸುತ್ತಾರೆ. ವರ್ಷಕ್ಕೆ 3 ರೂಪಾಯಿಯಂತೆ ಬಡ್ತಿ ಇದೆ. ಇನ್ನೂ ಸಂಬಳವನ್ನು ಹೆಚ್ಚಿಸಬೇಕೆಂದು ಚಳವಳಿ ಇದೆ.

ಈ ಉದ್ಯೋಗಕ್ಕೆ ಸೇರುವುದು ಕಷ್ಟ ಕೆಲಸವಲ್ಲ. ಒಂದು ವರ್ಷಕ್ಕೆ ಕೊಡಗಿಗೆ ಪೋಸ್ಟಲ್ ಸುಪರಿಂಟೆಂಡೆಂಟರು ಒಂದೈದು ಸಾರಿ ಬರುವರು. ಅವರೊಡನೆ ತಾವೇ ಮಾತಾಡುವುದು ಅಥವಾ ತಮ್ಮ ಹಿತಚಿಂತಕರಿಂದ ಮಾತಾಡಿಸಿದರೆ ಕೆಲಸವು ಖಂಡಿತದೊರಕುವುದು. ಖಂಡಿತ ಎಂದು ಹೇಳಲು ಕಾರಣವೇ ಇದು. ನಮ್ಮ ದೇಶವು ಮಲೇರಿಯ ಜ್ವರದಿಂದ ಪೀಡಿತವಾದುದರಿಂದ ಇತರರು ಇಲ್ಲಿ ಬರಲು ಹಿಂಜರಿಯುತ್ತಾರೆ. ಈ ಸಂದರ್ಭಗಳಲ್ಲಿ ಮೇಲಧಿಕಾರಿಗೆ ಸ್ವದೇಶಿಯರೇ ಸಿಕ್ಕಿದರೆ ಬಹಳ ಅನುಕೂಲವಾಗುವುದಲ್ಲವೇ?

ಈ ವಿಷಯವನ್ನು ಉದ್ಯೋಗಶೀಲರಾಗಿ ನಿರುದ್ಯೋಗಿಗಳಾಗಿರುವ ಯುವಕರು ಮಾತ್ರ ಓದಿದರೆ ಸಾಲದು. ಅವರ ಹಿತಚಿಂತಕರು ಓದಿ ಅವರಿಗೆ ಮುತವರ್ಜಿಯುಂಟಾಗುವಂತೆ ಹೇಳಿಕೊಡಬೇಕು. ಈ ಉದ್ಯೋಗದಲ್ಲಿ ನೌಕರಿ ಹೊಂದುತ್ತಾ ಒಬ್ಬರು ಇದ್ದಾರೆಂದು ಈಗ ತಾನೇ ತಿಳಿದೆನು. ಅವರು ಚೆಲಪಂಡ ಮೆ. ಕಾರ್ಯಪ್ಪ, ವೀರರಾಜಪೇಟೆ ಹೈಸ್ಕೂಲು ಉಪಾಧ್ಯಾಯರ ಸಹೋದರರಂತೆ. ಹೆಚ್ಚಿನ ಸಂಗತಿ ತಿಳಿಯಲು ಅಪೇಕ್ಷಿಸುವವರು ಆ ಮಹನೀಯರನ್ನಾಗಲೀ ಅಥವಾ ಕೆಳಗೆ ಕೊಟ್ಟ ವಿಳಾಸಕ್ಕಾಗಲೀ ಬರೆದು ತಿಳಿದುಕೊಳ್ಳಬಹುದು.

ಪ. ಚಿ. ಸು.

C/o Editor, "Kodagu"

786

ಶ್ರಮವಾದ ಮಾಲು. ತೂರಿಸೂಡಿ ತರಿಸಿರಿ.

ಬೆಳ್ಳೂರು ಉಂಡೆನಶ್ಯ.

ಸ್ವಾ,

ನಾವು ಕಳೆದ 30 ವರ್ಷಗಳಿಂದಲೂ ಹಸನಾದ ನಶ್ಯ ತಯಾರುಮಾಡಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿಗೆ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳ ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿಗೆ ಸಂಬಂಧ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ. ಒಂದು ತಿಂಗಳಿಟ್ಟರೂ ಕೆಡುವದಿಲ್ಲ. ಕೆಟ್ಟರೆ ವಾಪಸು ಪಡೆಯುತ್ತೇವೆ ಒಂದು ಸಾರಿ ತರಿಸಿ ಪರೀಕ್ಷಿಸಿರಿ

ನಮ್ಮ ನಶ್ಯವು ಈ ಮೊದಲು ಸೇರು 1ಕ್ಕೆ 1—4—0, 1—8—0 ರೂ. ಸಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂದ ತಕ್ಷ್ಮೀಬರು ಅಂತ್ಯದೊಳಗೆ ಆರ್ಡರ್ ಕಳುಹಿಸಿದವರಿಗೆ,

24 ತೊಲೆ ಸೇರು 1ಕ್ಕೆ 0—15—0,

3 ಸೇರು ತರಿಸಿದವರಿಗೆ ಸೇರು 1ಕ್ಕೆ 0—14—0

ಐದು ಸೇರಿಗಿಂತ ಹೆಚ್ಚು ತರಿಸುವವರಿಗೆ ಶೇಕಡ 12½ ರಂತೆ ಕಮಿಶನ್ ವಜಮಾಡಿ ಕಳುಹಿಸಲಾಗುವುದು.

ಹಸನಾದ ಪುಡಿನಶ್ಯ, ಪೇಡಿ, ನಶ್ಯ ವಗೈರೆ ಆಗುವ ಹೊಗೆಸೊಪ್ಪು, ನಶ್ಯದ ಕಡ್ಡಿ, ರೇಕು ಸಹ ಬಿಕರಿಗೆ ಸಿದ್ಧವಾಗಿದೆ.

ವಾಯಿದೆ ಕಳೆದನಂತರ ಒಡತಕ್ಕ ಆರ್ಡರಿಗೆ ಸೇರು 1ಕ್ಕೆ 1—4—0 ಹೆಚ್ಚು ವಸೂಲಾಗುತ್ತೆ.

ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜೆಂಟರುಗಳು ಬೇಕಾಗಿರುತ್ತೆ.

ಸ್ಯಾಂಪಲ್ ಅಪೇಕ್ಷಿಸುವವರು ೪ಆಣೆ ಸ್ಟಾಂಪು ಕಳುಹಿಸತಕ್ಕದ್ದು.

ನಮ್ಮ ರಿಜಿಸ್ಟರಿಗೆ ಬಾಕ್ಸಾಗಿ ಆರ್ಡರ್ನು ಕಳುಹಿಸಿದರೆ ಸೇರು 1ಕ್ಕೆ ಆರ್ಧಾಣೆ ಬೆಲೆ ಕಡಿಮೆಮಾಡಿ ನಿಮ್ಮ ಕಾರ್ಡು ಇಲ್ಲದೆ ವಾಯಿದೆಗೆ ಸರಿಯಾಗಿ ನಶ್ಯ ಕಳುಹಿಸಲಾಗುತ್ತೆ. ಅಡ್ರೆಸು ದಯವಿಟ್ಟು ಸ್ಪಷ್ಟವಾಗಿ ಬರೆಯಬೇಕು.

ಹೆಚ್ಚಿನ ವಿವರಕ್ಕೆ ಮೇನೇಜರಿಗೆ ಬರೆಯತಕ್ಕದ್ದು.

A Mahomed Haniff·
Manager

ನಮ್ಮ ವಿಳಾಸ —

ಯಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
ಬೆಳ್ಳೂರು ಪೋಸ್ಟು.
ಮೈಸೂರು ಡಿಸ್ಟ್ರಿಕ್ಟು

52—3

ತಯಾರಾಗುತ್ತಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಮಿತಿ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನಗಳೂ, ನಮ್ಮ ದೇಶದ ಸಹಕಾರಿ ಸಂಘಗಳ ಆವಶ್ಯಕತೆಗೆ ಸರಿಯಾಗಿ ತಯಾರಿಸಲ್ಪಟ್ಟ ಪಾಸ್ ಬುಕ್ಕುಗಳೂ ನಮ್ಮಲ್ಲಿ ಪ್ರಿಂಟಾಗುತ್ತಿವೆ. ಬೇಗನೆ ಮಾರಾಟಕ್ಕೆ ತಯಾರಾಗುವವು. ಕೆಲವು ಪುಸ್ತಕಗಳು ಮಾತ್ರ ತಯಾರಾಗುವದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ

ತಯಾರಾಗಿವೆ.

ದಾವೆ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳು ನಮ್ಮಲ್ಲಿ ಮಾರಾಟಕ್ಕಿವೆ.

"ಕೊಡಗು" ಆಫೀಸು, ಮೇನೇಜರ್.
ಮಡಿಕೇರಿ

ಕರ್ಣಾಟಕ
ಎಗ್ಯೂ ಮಿಕ್ಶ್ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆಡಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪=೦
ಟಪ್ಪಾಲು ಖರ್ಚು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು.
೯—೩—೦

ಏಜಂಟರು ಬೇಕು, ಕೊಡಗಿನ ಸ್ಕೂಲ್ಮಾಸ್ಟರುಗಳು ತಮ್ಮ ಬಳಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—1 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! **No License Required**



Webley and Scott Air Pistol, cal ·177 or 22, bore Powerful and Accurate· complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun· Handsome and Accurate, takes B· S· A· Patern No 1 Slugs and Darts expressly recommendable for Target Practice Rs· 15/ Free delivery

Brilliant Search Light Lamp for Night Sports Rs· 30/– Free delivery

No License required to purchase or to possess the above items.

Reliable D B B· L· 12 bore guns	Rs. 60/–	and upwards·	
Do S. B B L· 12	do	do· 40/–	do
D B. M L Guns		„ 45 –	do·
S B· M L.	do.	„ 30/–	do
S B. B L Rifles		„ 25/–	do·
B L Revolvers and Pistols		, 30/–	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition, Cheapest priced firm in India,

24· 7 ***210 Abdul Rehman Street, BOMBAY·***

---

೧೬ ಚಿತ್ರಪಟ ಗಳುಳ್ಳದ್ದು

ಸಚಿತ್ರ ಪಂಚಸಪ್ತತಿ ಕಥೆ.

೭೮ ಕಥೆಗಳು ೧೫೩ ಪುಟಗಳು

ಈ ಕಥೆಯು ಧರ್ಮಶಾಸ್ತ್ರ ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧. ಕಥಾರೂಪದಲ್ಲಿ ಚಿತ್ರಕಥಾ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨ ಲೋಕಜ್ಞಾನಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು· ೩ ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ವಸ್ತ್ರಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨ ೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ. ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೩೪೬ ಪುಟಗಳು ೧-೮-೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—14 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ.

(1897ನೇ ಇಸವಿಯಲ್ಲಿ ಸ್ಥಾಪನೆಯಾದದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳೇ

1927 ನೇ ಫೆಬ್ರುವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಆಖೈರಾಗುವ ಪಂಚಸಾಲು ಬೋನಸ್ ಮೊಬಲಗು ಕೊಡಲಾಗುವುದು·
ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್:—
152, ಕಮ್ಮರ್ಷಲ್ ಸ್ಟ್ರೀಟ್.

ಮದರಾಸ್ ಬ್ರಾಂಚ್:—
9-10, ಸೆಕಂಡ್ ಲೈನ್ ಬೀಚ್.

ಸಿ ಕೆ. ಚಂಗಪ್ಪ,
ಸ್ಪೆಷ್ಯಲ್ ಏಜಂಟ್,
ರಿವರ್ ಸೈಡ್ ಎಸ್ಟೇಟ್,
ಸಿದ್ದಾಪುರ.

24—6.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಚೇರ್ಸ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ.
(೨) ಕೂಡುವದಕ್ಕೆ ಆರಾಮು.
(೩) ತಾಳಿಕೆಯಲ್ಲಿ ಗಟ್ಟಿ.
(೪) ತಗಣಿಗಳು ಸೇರುವದಿಲ್ಲ.
(೫) ಎತ್ತುವದಕ್ಕೆ ಒಯುವದಕ್ಕೆ ಹಗುರ.

ಇತ್ಯಾದಿ.

ಸಧ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ.

ಸವಿಸ್ತರ ಸಂಗತಿಯು ಬಗ್ಗೆ ಬರೆದು ತಿಳಿದುಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—13 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮೂಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೇರ ಕುಟ್ಟಯ್ಯನವರು, ರಾಯ್ ಬಹದ್ದೂರ್.

ಟ್ರೆಜರರ್. ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1926.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎ ಟಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆ ಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಯಲ್ಲಿ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು.

ಕೆ. ಮಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—23.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಿಸಿ ಒಂದಿರುತ್ತೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ಎಂದಿಗೂ ಹೋಗದು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಾಗಿಲ್ಲ. ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ. ಜೊತೆ 1ಕ್ಕೆ ರೂ. 2—8—0.

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಸರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಿದ ಕಟ್ಟಿರುವದು. ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು, ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಸರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3—0—0.
" " ಕೆಂಪು ಕಲ್ಲಿನ " " 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಭಂಗಾರದ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ಭಂಗಾರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ.

3 ಎಳೆ ಸರ 1ಕ್ಕೆ ರೂ. 3—4—0
4 " " " 4—0—0.
5 " " " 5—4—0.

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,
52—37, ಪೋಸ್ಟ್ ಬಾಕ್ಸ್ ನಂ 1223, ಮದರಾಸು.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15 16% ಅಂದರೆ ಮೂನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ನಾಲ್ಕು ಪಾಲಿನಷ್ಟು ಹೆಚ್ಚಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಸಿಗದೆ ಇಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಹಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಅಭಿವೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100 200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಪೋಷಣ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—14 **CHILEAN NITRATE COMMITTEE**
Post Box 469, CALCUTTA.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ ಮೊದಲಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುನದು ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಅವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಪೋಸ್ಟ್ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ. } **ಡಿ. ಮಣ್ಣಾಲಾಲ್, ಡಿಲ್ಲಿ ಕೇಟಿವ್ ಪೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ,** ಬೆಂಗಳೂರು ಸಿಟಿ.

12—10

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to

"KODAGU" OFFICE MERCARA

ಕೊಡಗು.

[illegible]

[illegible] ॥ [illegible] ॥

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೬] ಕೊಡಗು, ಸನ್ ೧೯೨೬ನೇ ಇಸವಿ ಸೆಪ್ಟೆಂಬರ್ ತಾರೀಖು ೧೦ನೇ ಶುಕ್ರವಾರ [ಸಂಚಿಕೆ ೧೪

SPENCER & CO., LTD.

MERCARA & POLLIBETTA.

STATE TOOLS DEPARTMENT.

Yate's hammer headed mamooties 4 lbs- Rs 30/ 4 1/2 lbs- Rs. 33/ 5 lbs- Rs. 36/-Doz

Digging for [illegible] 4 prongs . . Rs 48/ Doz

Mamooty forks 4 prongs . Rs 39/ Doz

Felling axes — Each . Rs. 3/ & 3/4/

Planting bars— Each . „ 3/12/

Weeding forks — Each „ 1/12/

Garden trowels , 1 12

GET IT AT SPENCERS- The House for all requisites

52-31

ಸಾ ಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922–1924 ಈ ಮೂರ [illegible] ನಡೆದ ಕೆಲಸದ [illegible] -

ಲಾಭ— ರೂ 31 00,000 ([illegible] ಲಕ್ಷ ರೂಪಾಯಿ [illegible]) [illegible] ವಿಮೆ ಮಾಡಿರುವವರ ಪಿಪೆ [illegible] ಈ ಕೆಳಗೆ [illegible]

ಜೀವಮಾನಾವಧಿಯ ಪಿಪೆ [illegible] 1000 ವಿಮ [illegible]

ಈ ಮೂರು ವರ್ಷಗಳಿಗೆ ರೂ. 67½

[illegible] ಪಿಪೆ [illegible] 1000 ವಿಮೆ [illegible]

[illegible] ವರ್ಷಗಳಿಗೆ ರೂ 54.

ಈ ಕಂಪೆನಿಯಲ್ಲಿ [illegible] ಈ ಕೆಳಗೆ [illegible] ವ್ಯಕ್ತವಾಗುತ್ತದೆ

1923ರಲ್ಲಿ—ರೂ 1 74 00 000

1924 „ 2 37 00,000

1925 „ 2 96 00,000

[illegible] ದಿನದಿನಕ್ಕೂ [illegible] ಇದೇ ಸುಸಮಯ.

ಬೇಕಾದ [illegible] ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 36 ಬೆಂಗಳೂರು

[illegible] ಕೃಷ್ಣಸ್ವಾಮಿ ಅಯ್ಯರ್ ಬ್ರಾಂಚ್ ಸಕ್ರೆಟರಿ

52—23

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ದಾತುಪುಷ್ಟಿಕರ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

[illegible] ಈ ಗುಳಿಗೆಯ ಸೇವನೆಯಿಂದ [illegible] ಗುಣವಾಗಿ [illegible] ಉಂಟಾಗುತ್ತದೆ [illegible] ಗುಳಿಗೆಗಳ [illegible] ಸೇವಿಸುವಾಗ [illegible] ಉತ್ತಮ [illegible] ರೂ 2—0—0

ಶ್ವೇತಪ್ರದರ ನಿವಾರಿಣಿ— [illegible] ಗುಣವಾಗುವದು [illegible] ರೂ 1—0—0 [illegible]

[illegible]

[illegible]

ವೈದ್ಯ ಜಿ. ಎಲ್. ಜೇಂಗಿ ಮತ್ತು ಕಂಪೆನಿ.

[illegible]

ಮನೋಲ್ಲಾಸಿನಿ ತೈಲ.

[illegible]

[illegible] ರೂ 1, 3 [illegible] ?—10—0, [illegible] ರೂ 2, 3 [illegible] —8—0

ಚಂದನಸಾರ.— [illegible] 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ.— [illegible] 6 [illegible] 7 [illegible]

ರೂ 1 1 [illegible] 3 [illegible]

ಕಟುಕಷಾಯ ಮಲೇರಿಯ ರಕ್ಷೆ.— [illegible] ಜ್ವರ [illegible] ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ 4—0—?, 6ಕ್ಕೆ ರೂ 7—0—0

[illegible]

ವಿಳಾಸ-ಮನೋಲ್ಲಾಸಿನಿ ಕಂಪೆನಿ,

9 ಮಂಗಳೂರು, ಕಂಕನಾಡಿ.

52—38

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3

Telegraphic Address "SHOOTER" Bombay.

[52—2] Please write for Reduced net prices list for 1926

"ಕೊಡಗು"

ಸ್ ೧೯೨೬ನೇ ಇಸವಿ ಸೆಪ್ಟೆಂಬರ್ ತಾ. ೧೦ನೇ ಶುಕ್ರವಾರ

ವೃತ್ತಾಂತ ಪತ್ರಿಕೆಗಳ ಸಂಪಾದಕತ್ವ.

ಕುಂಭಕೋಣಮಿನ ಟೌನ್‌ಹಾಲಿನಲ್ಲಿ, "ಹಿಂದೂ" ಪತ್ರಿಕೆಯ ಸಂಪಾದಕರಾಗಿದ್ದ ಶ್ರೀಯುತ ಕಸ್ತೂರಿರಂಗೈಯ್ಯಂಗಾರರ ಭಾವಚಿತ್ರವನ್ನು ತೆರೆಯುವ ಸಮಾರಂಭದಲ್ಲಿ ಶ್ರೀಯುತ ವಿ. ಯಸ್. ಶ್ರೀನಿವಾಸ ಶಾಸ್ತ್ರಿಯವರು ವೃತ್ತಾಂತ ಪತ್ರಿಕೆಗಳ ಸಂಪಾದಕರ ಜವಾಬ್ದಾರಿಯನ್ನೂ ಮತ್ತು ಈ ಕೆಲಸಕ್ಕೆ ತಕ್ಕ ಜನರನ್ನು ತಯಾರಿಸಿ ಆರಿಸಿಕೊಳ್ಳುವ ವಿಷಯವನ್ನೂ ಕುರಿತು ಬಹು ಸ್ವಾರಸ್ಯವಾದ ಮತ್ತು ಗಂಭೀರವಾದ ಅಭಿಪ್ರಾಯಗಳನ್ನು ಒಳಕೊಂಡ ಭಾಷಣವನ್ನು ಮಾಡಿದರು.

ನಮ್ಮ ದೇಶದಲ್ಲಿ ವೃತ್ತಾಂತ ಪತ್ರಿಕೆಗಳ ಪ್ರಕಟಣೆಯು ಪ್ರಾರಂಭವಾಗಿ ಬಹು ಕಾಲವಾಗಲಿಲ್ಲ. ವೃತ್ತಾಂತ ಪತ್ರಿಕೆಗಳ ಮಹತ್ವವು ಇನ್ನೂ ಜನರಿಗೆ ತಿಳಿದಿರುವದಿಲ್ಲ. ಆದ್ದರಿಂದ ಶಾಮುದಾರ ಶಾಸ್ತ್ರಿಗಳ ಅಭಿಪ್ರಾಯಗಳಲ್ಲಿ ಮುಖ್ಯವಾದ ಕೆಲವು ಭಾಗಗಳನ್ನು ಎತ್ತಿ ವಾಚಕರಿಗೆ ತಿಳಿಸಿಕೊಡುವದು ಆವಶ್ಯವಾಗಿದೆ

"ವೃತ್ತಾಂತ ಪತ್ರಿಕೆಗಳ ಸಂಪಾದಕತ್ವವು ಮಹತ್ವದ ಕೆಲಸವಾಗಿದೆ. ಗೌರವಪಡತಕ್ಕ ಕಸಬಾಗಿದೆ. ಸಮುದಾಯಿಕ ಸಂಸ್ಥೆಗಳು ಅಂದರೆ ಪ್ರಜಾಪ್ರತಿನಿಧಿ ಸಂಸ್ಥೆಗಳ ಪಾಯವೇ ವೃತ್ತಾಂತ ಪತ್ರಿಕೆಗಳಾಗಿವೆ. ಯಾವ ದೊಡ್ಡ ತತ್ವವನ್ನು ಹೊರಪಡಿಸಲಿಕ್ಕೂ, ಸಾಧಿಸಲಿಕ್ಕೂ ವೃತ್ತಾಂತ ಪತ್ರಿಕೆಗಳಿಲ್ಲದೆ ಒಂದು ಕಾಲಕ್ಕೂ ಸಾಧ್ಯವಿಲ್ಲ. ಸಮುದಾಯದ ಯಾವ ಚಿಕ್ಕ ಕೆಲಸಮಾಡಲಿಕ್ಕೂ ಪತ್ರಿಕೆಗಳಿಲ್ಲದೆ ಸಾಧ್ಯವಿಲ್ಲ. ಸಾರ್ವಜನಿಕ ಸಂಸ್ಥೆಗಳ ಬೆಳವಣಿಗೆಗೂ, ಎಲ್ಲಾ ಸರಕಾರಗಳಿಗೆ ಮಾರ್ಗವನ್ನು ತೋರಿಸಿಕೊಡುವ ಸಾಮುದಾಯಿಕ ಅಭಿಪ್ರಾಯವನ್ನು ಉಂಟುಮಾಡಲಿಕ್ಕೂ, ತಿದ್ದಲಿಕ್ಕೂ, ಬೆಳೆಸಲಿಕ್ಕೂ ವೃತ್ತಾಂತ ಪತ್ರಿಕೆಗಳು ಆವಶ್ಯವೆಂತಾದ ಮೇಲೆ ವೃತ್ತಾಂತ ಪತ್ರಿಕಾಕರ್ತರ ಕಸಬು ಎಷ್ಟು ಘನತೆಯುಳ್ಳದ್ದು ಮತ್ತು ಜವಾಬ್ದಾರಿಯುಳ್ಳದ್ದು ಎಂಬದನ್ನು ನೀವು ಯೋಚಿಸಬಹುದು. ಆದ್ದರಿಂದ ಅಂಥಾ ಕಸಬನ್ನು ಒಳ್ಳೇರೀತಿಯಲ್ಲಿ ಕ್ರಮಪಡಿಸಿಕೊಳ್ಳಬೇಕಾದದ್ದು ಸಮುದಾಯದವರ ಕೆಲಸವಾಗಿದೆ. ಪತ್ರಿಕಾಕರ್ತರ ಮನಸ್ಸು ಕುಗ್ಗದಂತೆಯೂ, ಅವರಲ್ಲಿ ಇರುವ ಶ್ರೇಷ್ಠಗುಣಗಳು ಸಮುದಾಯದ ಪ್ರಯೋಜನಕ್ಕೆ ಉಪಯೋಗಿಸಲ್ಪಡುವಂತೆಯೂ ಅವರಿಗೆ ಉತ್ತೇಜನಕೊಡಬೇಕಾದದ್ದು ಸಮುದಾಯದ ಕರ್ತವ್ಯವಾಗಿದೆ." ದೇಶದ ಆಡಳಿತವನ್ನು ತಿದ್ದಲಿಕ್ಕೂ ಜನರನ್ನು ಸಾರ್ವಜನಿಕ ಕೆಲಸಗಳಲ್ಲಿ ಎಚ್ಚರಗೊಳಿಸಲಿಕ್ಕೂ ವೃತ್ತಾಂತ ಪತ್ರಿಕೆಗಳಿಗೆ ಇಷ್ಟೊಂದು ಶಕ್ತಿಯಿದೆಯೆಂಬದನ್ನು ನಮ್ಮ ದೇಶದ ಜನರು ಇನ್ನೂ ತಿಳಿದುಕೊಂಡಿರುವದಿಲ್ಲ. ನಮ್ಮ ದೇಶದಲ್ಲಿ ವೃತ್ತಾಂತ ಪತ್ರಿಕೆಗಳಿಗೆ ಕೊಡಬೇಕಾದ ಉತ್ತೇಜನವನ್ನು ಸಮುದಾಯದವರು ಕೊಡುತ್ತಿರುವದಿಲ್ಲ. ವೃತ್ತಾಂತ ಪತ್ರಿಕೆಗಳನ್ನು ಪ್ರತಿಯೊಬ್ಬನೂ ಓದುವಂತೆ ಜನರಿಗೆ ಬೋಧಿಸುವ ಕೆಲಸವನ್ನು ಸಮುದಾಯದ ಮುಖಂಡರು ಮಾಡಬೇಕಾಗಿದೆ. ನಿಜವಾದ ವರ್ತಮಾನಗಳನ್ನು ಕೊಡುವಂತೆಯೂ ದೇಶದವರ ಮುಂದೆ ಬರುವ ಮುಖ್ಯವಿಷಯಗಳ ಮೇಲೆ ಒಳ್ಳೇ ಅಭಿಪ್ರಾಯಗಳನ್ನು ಒಳಕೊಂಡ ಲೇಖನಗಳನ್ನು ಬರೆಯುವಂತೆಯೂ ಜನರಿಗೆ ಬೋಧಿಸಬೇಕು. ಪತ್ರಿಕೆಯ ಸಂಪಾದಕರು ಎಷ್ಟೇ ಶಕ್ತಿವಂತರಾದರೂ ದೇಶದ ಎಲ್ಲಾ ಭಾಗದ ಜನರ ಬರವಣಿಗೆಯ ಸಹಾಯವಿಲ್ಲದೆ ಸರಿಯಾದ ವರ್ತಮಾನಗಳು ಪತ್ರಿಕೆಗೆ ದೊರಕುವದಿಲ್ಲ ಮತ್ತು ಸಮುದಾಯದ ಅಭಿಪ್ರಾಯವನ್ನು ತಿಳಿದುಕೊಳ್ಳುವದು ಕಷ್ಟವಾಗುತ್ತದೆ.

"ಪತ್ರಿಕಾಕರ್ತರ ಕೆಲಸವು ಬಹಳ ಕಷ್ಟತರವಾಗಿದೆ. ವಿದ್ಯಾ ಇಲಾಖೆಯಲ್ಲಿ ಕೆಲಸಮಾಡುವ ಉಪಾಧ್ಯಾಯರುಗಳು ಏನೇನು ಕೆಲಸಮಾಡಬೇಕೆಂಬದನ್ನು ಮೇಲಧಿಕಾರಿಗಳು ನಿರ್ಣಯಿಸುತ್ತಾರೆ. ಸರಕಾರ ಖಾತೆಗಳು ಮತ್ತು ಕಛೇರಿಗಳಿಂದಲೇ ನಡೆಸಿಕೊಳ್ಳಬಹುದು. ಸರಕಾರಿ ಉದ್ಯೋಗಸ್ಥರ ಕೆಲಸಗಳೂ ಮತ್ತು ಅವರಿಗೆ ದೊರಕುವ ಪ್ರತಿಫಲವೂ ಸಹ ಹಾಗೆಯೇ ನಿರ್ಣಯಿಸಲ್ಪಟ್ಟಿವೆ. ' ಪತ್ರಿಕಾಕರ್ತರು ಯಾವ ಅಭಿಪ್ರಾಯಗಳನ್ನು ಬರೆಯಬೇಕು, ಹೇಗೆ ಕೆಲಸಮಾಡಬೇಕೆಂಬದನ್ನು ಅವರೇ ನಿರ್ಣಯಿಸಿಕೊಳ್ಳಬೇಕು. ಪತ್ರಿಕೆಗಳಿಂದ ಪತ್ರಿಕಾಕರ್ತರಿಗೆ ಬರುವ ಪ್ರಯೋಜನವು ಬಹಳ ಸ್ವಲ್ಪ; ಮತ್ತು ಏನು ಪ್ರಯೋಜನ ದೊರೆಯುತ್ತದೆಂಬದು ಸಹ ಖಂಡಿತವಿಲ್ಲ. ಆದರೆ ಅಕ್ರಮವಾಗಿ ಪ್ರತಿಫಲಹೊಂದುವ ಸ್ವಭಾವದವರಾದರೆ ಅಂಥಾ ಪ್ರಯೋಜನ ತುಂಬಾ ಮಾಡಿಕೊಳ್ಳಬಹುದು. ಈ ರೀತಿ ಕಷ್ಟವಾದ ಕಸಬಿಗೆ ತುಂಬಾ ವಿದ್ಯಾವಂತರು ಬರುವದು ದುರ್ಲಭ. ಒಳ್ಳೇ ವಿದ್ಯಾವಂತರೂ ಬುದ್ಧಿವಂತರೂ ಈ ಕೆಲಸವನ್ನು ಕೈಕೊಳ್ಳಲು ಮುಂದೆ ಬರುವಂತೆ ಮಾಡುವದು ಸಮುದಾಯದ ಕೈಯಲ್ಲಿದೆ. ಈ ಕಸಬನ್ನು ಕೈಕೊಳ್ಳಲು ಯಾವ ಅರ್ಹತೆ ಇರಬೇಕೆಂಬದನ್ನು ತಿಳಿದವರು ನಿರ್ಣಯಿಸಿ ಇಡಬೇಕು." ಈ ಮಾತುಗಳಿಂದ ಪತ್ರಿಕಾಕರ್ತರ ಕಸಬು ಎಷ್ಟು ಕಷ್ಟತರವಿದ್ದೆಂಬದನ್ನು ವಾಚಕರೇ ಊಹಿಸಬಹುದು. ಆದರೆ ಎಷ್ಟೇ ಕಷ್ಟತರದ್ದಾದರೂ ಸಮುದಾಯದ ಸಹಾನುಭೂತಿಯಿದ್ದರೆ ಸಮುದಾಯದ ಪ್ರಯೋಜನಕ್ಕಾಗಿ ಈ ಕೆಲಸವನ್ನು ಕೈಕೊಳ್ಳಲು ಅರ್ಹತೆ ಇರುವವರು ಮುಂದೆ ಬರದೇ ಇರಲಾರರು.

"ಸಾರ್ವಜನಿಕ ಕೆಲಸಮಾಡಲು ಮುಂದೆ ಬರುವ ಜನರನ್ನು ದೂಷಿಸಬಾರದು. ಆದರೆ ಅವರನ್ನು ಶಕ್ತಿವಂತರಾದ ಪತ್ರಿಕಾಕರ್ತರು ನ್ಯಾಯವಾದ ರೀತಿಯಿಂದ ಟೀಕಿಸಿ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಸಾರ್ವಜನಿಕ ಕೆಲಸಗಳಿಗೆ ಒಳ್ಳೆಯವರು ಬರಬೇಕಾದರೆ ಅವರ ಕೆಲಸಗಳನ್ನು ಧರ್ಮಬುದ್ಧಿಯಿಂದ ಹೊಗಳುತ್ತಾರೆಂಬ ಭರವಸ ಇರಬೇಕು. ಅವರಲ್ಲಿರುವ ಒಳ್ಳೇಗುಣಗಳು ಇನ್ನೂ ಒಳ್ಳೆಯದಾಗುವಂತೆಯೂ ಕೆಟ್ಟದ್ದು ಕ್ರಮೇಣ ಹೊರಟು ಹೋಗುವಂತೆಯೂ ಮಾಡಬೇಕು. ಅವರು ಎಷ್ಟು ಒಳ್ಳೇ ಕೆಲಸಮಾಡಿದರೂ ಅವರ ಉದ್ದೇಶಗಳು ಎಷ್ಟೇ ಒಳ್ಳೇವಿದ್ದರೂ, ಅವರನ್ನು ಯಾವಾಗಲೂ ಬೈಯ್ಯುತ್ತಿದ್ದರೆ ಸಮುದಾಯದ ಕೆಲಸಕ್ಕೆ ಒಳ್ಳೆಯವರು ಮುಂದೆ ಬರುತ್ತಾರೋ? ಬಂದರೂ ಅವರನ್ನು ತಿದ್ದಿಕೊಳ್ಳಲು ಸಾಧ್ಯವಿದೆಯೋ? ಈ ಕಾರಣದಿಂದ ನೋಡಿದರೂ ಪತ್ರಿಕಾಕರ್ತರ ಜವಾಬ್ದಾರಿಯು ಬಹಳ ಹೆಚ್ಚಿನದು ಎಂಬದು ಸ್ಪಷ್ಟವಾಗುತ್ತದೆ" ಈ ಉಚ್ಚ ಧ್ಯೇಯವನ್ನು ನಮ್ಮ ದೇಶದಲ್ಲಿ ಎತ್ತಿ ಹೇಳಬೇಕಾದ ಅವಶ್ಯ ಒಂದಿದೆ. ಸಾರ್ವಜನಿಕ ಕೆಲಸಗಳಿಗೆ ಉತ್ತಮ ಜನರು ಮುಂದೆ ಬರುವಂತೆ ಉತ್ತೇಜನಕೊಡುವದರ ಬದಲು ಪ್ರತಿಸಾರವೂ ಸಾರ್ವಜನಿಕ ಕೆಲಸಗಾರರನ್ನೂ ದೂರುವ ಸ್ವಭಾವವು ನಮ್ಮ ಊರಿನಲ್ಲಿ ಕಲೆದೋರಿದೆ ಸಾರ್ವಜನಿಕ ಕೆಲಸಗಾರರನ್ನು ಟೀಕಿಸುವದರಲ್ಲಿ ಅವರನ್ನು ತಿದ್ದುವಂತೆ ಟೀಕಿಸಬೇಕೇ ಹೊರತು ಅವರು ಸಾರ್ವಜನಿಕ ಕೆಲಸ ಬಿಟ್ಟು ಹೋಗುವಂತೆ ಟೀಕಿಸುವದು ಯುಕ್ತವಲ್ಲ.

ವಿಲಾಯತಿಯಲ್ಲಿ ಈಚೆಗೆ ಪತ್ರಿಕಾಕರ್ತರು ತಮ್ಮ ಅಭಿಪ್ರಾಯವನ್ನು ಬರೆಯುವ ಸ್ವತಂತ್ರ ತಪ್ಪಿ ಪತ್ರಿಕೆಯ ಮಾಲೀಕರ ಅಭಿಪ್ರಾಯವನ್ನು ಬರೆಯಬೇಕಾಗಿ ಬಂದುಹೋಗಿದೆಯೆಂತಲೂ ಈ ಕೆಟ್ಟಗುಣವು ಹಿಂದುಸ್ಥಾನಕ್ಕೂ ಬರುತ್ತಲಿರುವ ಕಾರಣ ಇದನ್ನು ತಪ್ಪಿಸಬೇಕೆಂತಲೂ ಉಪನ್ಯಾಸಕರು ಹೇಳಿದರು. ಈ ಮಾತಿಗೆ ನಮ್ಮ ದೇಶದ ಜನರು ಚನ್ನಾಗಿ ಕಿವಿ ಕೊಡಬೇಕಾಗಿದೆ. ಪತ್ರಿಕಾಕರ್ತರ ಅಭಿಪ್ರಾಯಗಳು ಪತ್ರಿಕೆಯ ಮಾಲೀಕರ ಅಭಿಪ್ರಾಯಕ್ಕೆ ಅನುಸರಿಸಿ ಇರಬೇಕೆಂಬ ತಪ್ಪು ಅಭಿಪ್ರಾಯವು ಜನರಲ್ಲಿ ಇದೆ. ಪತ್ರಿಕಾಕರ್ತರ ಅಭಿಪ್ರಾಯಗಳನ್ನು ತಿಳಿದು ಅಂಥವರನ್ನು ಸಂಪಾದಕರಾಗಿ ನೇಮಿಸಿಕೊಂಡನಂತರ ಲೇಖನಗಳಲ್ಲಿ ಬರೆಯುವ ಅಭಿಪ್ರಾಯಗಳಿಗೆ ಅವರಿಗೆ ಪೂರ್ತಿ ಸ್ವತಂತ್ರವಿರಬೇಕು. ಆಗ ಪತ್ರಿಕಾಕರ್ತರಲ್ಲಿ ಇರುವ ಒಳ್ಳೇ ಗುಣಗಳ ಪ್ರಯೋಜನವು ದೇಶಕ್ಕೆ ಸಿಕ್ಕುತ್ತದೆ. ದೇಶದ ಕಲ್ಯಾಣವಾಗುವಂತೆ ಪತ್ರಿಕೆ ನಡಿಸಬೇಕಾದರೆ ಸಾರ್ವಜನಿಕ ಹಿತಕ್ಕಾಗಿ ಕೆಲಸಮಾಡಲು ಶಕ್ತಿ ಮತ್ತು ಅರ್ಹತೆ ಇರುವ ಸಂಪಾದಕರನ್ನು ನೇಮಿಸಿದರೆ ಆಯಿತು. ಪತ್ರಿಕೆಯ ಮಾಲೀಕರು ತಮ್ಮ ಅಭಿಪ್ರಾಯವನ್ನು ಪತ್ರಿಕೆಯಲ್ಲಿ ಬರೆಯಬೇಕೆಂತ ಒತ್ತಾಯಪಡಿಸಿದರೆ ಪತ್ರಿಕಾಕರ್ತರ ಶಕ್ತಿಯು ಮತ್ತು ಗುಣಗಳ ಪ್ರಯೋಜನವು ದೇಶಕ್ಕೆ ಸಿಕ್ಕಲಾರದು. ಪತ್ರಿಕಾಕರ್ತರು ಮಾಲೀಕರ ಅಭಿಪ್ರಾಯಕ್ಕೆ ಅನುಸಾರವಾಗಿ ಬರೆಯುವವರಾದರೆ ಹಾಗೆಯೇ ಬರೆಯುತ್ತಿರುವರೆಂಬದನ್ನು ವಾಚಕರಿಗೆ ತಿಳಿಸಿದರೆ ಪತ್ರಿಕೆಯಿಂದ ಅಷ್ಟೊಂದು ಕೆಡಕಾಗಲಾರದು.

ಪ್ರಜಾಪ್ರತಿನಿಧಿ ಸರಕಾರದ ಬೆಳವಣಿಗೆಗೆ ಬೇಕಾದ ಸಮುದಾಯದ ಅಭಿಪ್ರಾಯವನ್ನು ಪ್ರಕಟಿಸುವ ಪತ್ರಿಕೆಗಳು ಸ್ವಾರ್ಥ ಪ್ರಯೋಜನದಿಂದ ಪ್ರಕಟಿಸಲ್ಪಡಬಾರದು ... ಶಾಮುದಾರಶಾಸ್ತ್ರಿಗಳು ಹೇಳಿ ಉಪನ್ಯಾಸವನ್ನು ಪೂರೈಸಿದ್ದಾರೆ.

ಓಟರುಗಳ ಪಟ್ಟಿ.

ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಓಟು ಕೊಡುವವರ ಪಟ್ಟಿಯು ಅಲ್ಲಲ್ಲಿ ಪ್ರಕಟವಾಗುತ್ತಲಿದೆ. 4ನೇ ತಾರೀಕಿನಿಂದ ಪ್ರಕಟವಾಗಲು ಪ್ರಾರಂಭವಾಯಿತೆಂತ ತಿಳಿಯಬರುತ್ತದೆ. ಪಟ್ಟಿಜೊತೆಯಲ್ಲಿ ಪ್ರಕಟವಾದ ಒಂದು ನೋಟೀಸಿನ ಯಥಾ ನಕಲನ್ನು ಇನ್ನೊಂದು ಕಡೆ ಪ್ರಕಟಿಸಿದ್ದೇವೆ. ಪಟ್ಟಿಯಲ್ಲಿ ಹೆಸರು ಬಿಟ್ಟಿದ್ದರೆ ಅಂಥವರು 9ನೇ ತಾರೀಖಿನೊಳಗೆ ರಿಜಿಸ್ಟ್ರೇಶನ್ ಆಫೀಸರಿಗೆ ಬರಕೊಳ್ಳಬೇಕಂತೆ। 15, 16, 17, 18ನೇ ತಾರೀಕುಗಳಲ್ಲಿ ಬೇರೆ ಬೇರೆ ಕಡೆಗಳಲ್ಲಿ ತಕರಾರುಗಳು ತೀರ್ಮಾನಿಸಲ್ಪಡುವದಾಗಿಯೂ ಬರೆದಿದೆ. ಗ್ರಾಮಾಂತರಗಳಲ್ಲಿ ಈ ಪಟ್ಟಿಯು ತಲಪಿ ಹೆಸರು ಬಿಟ್ಟು ಹೋದ ಓಟರುಗಳಿಗೆ ತಿಳುವಳಿಕೆ ದೊರಕಲು ಖಂಡಿತವಾಗಿಯೂ ಸಮಯ ಸಾಲದು. ಈ ರೀತಿಯಲ್ಲಿ ಪ್ರಯೋಜನವಿಲ್ಲದ ಪ್ರಕಟಣೆ ಮಾಡಿ ಸಾರ್ಥಕವೇನು? ಓಟರುಗಳ ಪಟ್ಟಿಯಲ್ಲಿ ತಿದ್ದುಪಡಿಯಾಗತಕ್ಕದ್ದು ತುಂಬಾ ಇದೆಯೆಂತ ನಂಬಲಿಕ್ಕೆ ಕಾರಣವಿದೆ. ಹೀಗಿರುವಾಗ ಓಟರುಗಳ ಪಟ್ಟಿಯನ್ನು ಪ್ರಕಟಿಸಬೇಕೆಂಬ ರೂಲನ್ನು ಜಾರಿ ಮಾಡಿ ಆ ರೂಲು ಪ್ರಯೋಜನವಾಗಬೇಕಾದರೆ ಬೇಕಾದಷ್ಟು ಸಮಯ ಕೊಡಬೇಕಾದದ್ದು ಬಹಳ ಅವಶ್ಯವಾಗಿದೆ.

ಇಂತಿಂಥಾ ತಾರೀಕಿನಲ್ಲಿ ತಕರಾರುಗಳನ್ನು ಕೇಳಲಾಗುತ್ತದೆಯೆಂಬದನ್ನೂ ಮತ್ತು 9ನೇ ತಾರೀಕಿಗಿಂತ ಮೊದಲೇ ತಕರಾರು ಅರ್ಜಿಗಳು ಆಫೀಸರಿಗೆ ತಲಪಬೇಕೆಂಬದನ್ನೂ ಸರಿಯಾಗಿ ವೃತ್ತಾಂತ ಪತ್ರಿಕೆಗಳಿಗೆ ಕೊಟ್ಟಿದ್ದರೆ ಜನರಿಗೆ ಬೇಗನೆ ತಿಳಿಯುತ್ತಿತ್ತಷ್ಟು. ಈ ರೀತಿ ಮಾಡಲು ಅಧಿಕಾರಿಗಳಿಗೆ ಯಾಕೆ ತೋರಲಿಲ್ಲವೋ ನಮಗೆ ತಿಳಿಯದು.

ಈಗಲಾದರೂ ತಕರಾರು ಅರ್ಜಿ ಬರಕೊಳ್ಳಲಿಕ್ಕೂ ತಕರಾರುಗಳನ್ನು ಕೇಳಲಿಕ್ಕೂ ಹೆಚ್ಚಿಗೆ ವಾಯಿದೆ ಕೊಡಬೇಕೆಂತ ನಾವು ಒತ್ತಿ ಹೇಳುತ್ತೇವೆ.

ಕೌನ್ಸಿಲು ಓಟರುಗಳ ಮೊದಲಿನ ಪಟ್ಟಿಯು ಆಗಸ್ಟ್ ತಿಂಗಳಲ್ಲಿ ಪ್ರಕಟವಾಗುತ್ತದೆಯೆಂತ ಇತ್ತು. ಅಂಥಾ ಪಟ್ಟಿ ಸೆಪ್ಟೆಂಬರ್ 8ನೇ ತಾರೀಖಿನ ವರೆಗೂ ಪ್ರಕಟವಾಗಲಿಲ್ಲ. ಆದ್ದರಿಂದ ತಕರಾರು ಬರೆಯಲು ಸಮಯ ಸಾಲದೆ ಹೋಗುತ್ತದೆ. ತಕರಾರುಗಳನ್ನು ಕೊಡಲು ವಾಯಿದೆ ಮುಂದರಿಸಿ ಕೊಡಲೇ ಬೇಕಾಗಿದೆ

ಡಿಸ್ಟ್ರಿಕ್ಟ್‌ಬೋರ್ಡ್ ಓಟರುಗಳ ಪಟ್ಟಿ ಮೇಲೆ ತಕರಾರು ಹೇಳಲು ಹೆಚ್ಚಿಗೆ ವಾಯಿದೆ ಕೊಟ್ಟರೆ ಗ್ರಾಮಾಂತರಗಳಲ್ಲಿ ಇರುವ ಓಟಿನ ಹಕ್ಕಿರುವವರೆಲ್ಲರೂ ಎಚ್ಚತ್ತು ತಕರಾರು ಅರ್ಜಿಗಳನ್ನು ಬರಕೊಳ್ಳಬೇಕು. ಡಿಸ್ಟ್ರಿಕ್ಟ್‌ಬೋರ್ಡ್ ಪಟ್ಟಿಯನ್ನು ತಿದ್ದಲು ಅರ್ಜಿ ಬರೆಯಲಿಕ್ಕೆ ಸಮಯ ಸಾಲದಿದ್ದರೂ ಕೌನ್ಸಿಲ್ ಓಟರುಗಳ ಪಟ್ಟಿ ಮೇಲೆ ತಕರಾರು ಬರಕೊಳ್ಳಲು ಈಗಲೇ ಜನರೆಲ್ಲರೂ ಎಚ್ಚತ್ತುಕೊಳ್ಳಬೇಕು. ಈಗ ಕೆಲವು ಕಡೆಗಳಲ್ಲಿ ಪ್ರಕಟವಾಗಿರುವ ಡಿಸ್ಟ್ರಿಕ್ಟ್‌ಬೋರ್ಡ್ ಓಟರುಗಳ ಪಟ್ಟಿಯೇ ಕೌನ್ಸಿಲ್ ಓಟರುಗಳ ಪಟ್ಟಿಯೆಂತ ಶೀಘ್ರದಲ್ಲೇ ಪ್ರಕಟವಾಗುವುದು. ಆದ್ದರಿಂದ ಈಗ ಪ್ರಕಟವಾದ ಪಟ್ಟಿಯಲ್ಲಿ ಇಲ್ಲದ ಹೆಸರು ಕೌನ್ಸಿಲ್ ಓಟರುಗಳ ಪಟ್ಟಿಗೆ ಸೇರುವದಿಲ್ಲ. ಈ ಪಟ್ಟಿಗಳಲ್ಲಿ ಹೆಸರಿಲ್ಲದ ಓಟಿನ ಹಕ್ಕಿರುವವರು ರಿವೈಸಿಂಗ್ ಅಧಿಕಾರಿಯಾದ ಡಿಸ್ಟ್ರಿಕ್ಟ್‌ಮೆಜಿಸ್ಟ್ರೇಟರಿಗೆ ಕೂಡಲೇ ಅರ್ಜಿಗಳನ್ನು ಬರೆದುಕೊಳ್ಳಬೇಕು. ತಕರಾರು ಅರ್ಜಿ ಬರೆದುಕೊಳ್ಳಲು ಸೆಪ್ಟೆಂಬರ್ ಆಖೈರ್ ವರೆಗೆ ವಾಯಿದೆ ಇರುವದನ್ನು ಮುಂದರಿಸಿ ಇಡಬಹುದು. ಹಾಗೆ ಮುಂದರಿಸಲಿ ಮುಂದರಿಸದಿರಲಿ ತಕರಾರು ಇರುವವರು ಕೂಡಲೇ ಅರ್ಜಿ ಬರೆದುಕೊಳ್ಳುವದು ಅತಿ ಅವಶ್ಯಕ.

ನಾವು ಮೊದಲೇ ಬರೆದಂತೆ ಪಾಲಾದ ಕುಟುಂಬಗಳಲ್ಲಿ ಜಮಾಬಂದಿ ಒಬ್ಬನ ಹೆಸರಿನಲ್ಲೇ ಇದೆಯಾದರೆ ಪಟ್ಟೆದಾರನ ಹೆಸರು ಮಾತ್ರ ದಾಖಲಾಗಬಹುದು. ಇದು ರೂಲಿಗೆ ವಿರೋಧವಾಗಿದೆ. ಪಾಲಾಗದ ಕುಟುಂಬಗಳಲ್ಲಿ ಮಾತ್ರ ಪಟ್ಟೆದಾರನಿಗೆ ಅಥವಾ ಕುಟುಂಬದವರು ಒಪ್ಪುವ ಒಬ್ಬನಿಗೆ ಮಾತ್ರ ಓಟ್ ಇದೆಯೆಂತ ರೂಲ್ ಇದೆಯೇ ಹೊರತು ಪಾಲಾದ ಕುಟುಂಬಗಳಲ್ಲಿ ಪಟ್ಟೆ ಒಬ್ಬನದೆ ಇದ್ದರೆ ಒಂದೇ ಓಟೆಂತ ಈಗ ಪಟ್ಟಿ ಮಾಡುವ ಮೊದಲು ತೀರ್ಮಾನಿಸಿರುವದು ಸರಿಯಲ್ಲ. ರೂಲನ್ನು ತಪ್ಪು ಅರ್ಥ ಮಾಡಿ ಪಟ್ಟಿ ಮಾಡಿರುವದನ್ನು ಸರಿಪಡಿಸಲು ಈ ತಪ್ಪಿನಿಂದ ಓಟಿನ ಪಟ್ಟಿಗೆ ಸೇರದೆ ಇರುವವರೆಲ್ಲರೂ ಮುಂದೆ ಬಂದು ಅರ್ಜಿ ಕೊಟ್ಟು ಸರಿಪಡಿಸಿಕೊಳ್ಳಬೇಕು. ಅಧಿಕಾರಿಗಳಿಗೆ ರೂಲನ್ನು ಸರಿಯಾಗಿ ವಿವರಿಸಿ ತೋರಿಸಿದರೆ ತಪ್ಪನ್ನು ತಿದ್ದಿಕೊಂಡಾರೆಂತ ನಾವು ನಂಬುತ್ತೇವೆ.

ಹೇಗೂ ಎಲ್ಲಾ ಓಟರುಗಳು ಎಚ್ಚತ್ತು ದೇಶದ ಸಭೆಗಳಿಗೆ ಮೆಂಬರುಗಳನ್ನು ಚುನಾಯಿಸುವ ಅಮೂಲ್ಯ ಹಕ್ಕನ್ನು, ಅವರು ಸ್ಥಾಪಿಸಿಕೊಂಡು ಪಟ್ಟಿಗೆ ತಮ್ಮ ಹೆಸರನ್ನು ದಾಖಲ್ ಮಾಡಿಸಿಕೊಳ್ಳಬೇಕಾದದ್ದು ಅವರ ಕರ್ತವ್ಯವಾಗಿದೆ.

ಮಹಾತ್ಮಾಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದ 7ನೆಯ ಪ್ರಕರಣ.

ಕೆಲವು ವಿಚಾರದ ಅನುಭವವು.

ಡರ್ಬನ್ನಿನಲ್ಲಿ ನೇಟಾಲು ಬಂದರೆ ಪಟ್ಟಣವನ್ನು ನೇಟಾಲು ಪೋರ್ಟು ಎಂದು ಕೂಡ ಕರೆಯುವರು. ನನ್ನನ್ನು ಕರೆದುಕೊಂಡು ಹೋಗಲು ಅಬ್ದುಲ್ಲಾಸೇಟರು ಸಮುದ್ರತೀರಕ್ಕೆ ಬಂದಿದ್ದರು. ಹಡಗಿನಲ್ಲಿ ಅವರ ಮಿತ್ರರನ್ನು ನೋಡಿಕೊಳ್ಳಲು ಅನೇಕ ಜನರು ಹಡಗಿನೊಳಕ್ಕೆ ಹತ್ತಿ ಬಂದರು. ಭಾರತೀಯರನ್ನು ಸರಿಯಾಗಿ ಗೌರವಿಸುವುದಿಲ್ಲವೆಂದು ನಾನು ನಿರೀಕ್ಷಿಸಿದೆನು. ಸೇಟರನ್ನು ಬಲ್ಲ ಅನೇಕರು ಆತನನ್ನು ಕೊಂಚ ತಿರಸ್ಕಾರಭಾವದಿಂದ ನೋಡುತ್ತಿದ್ದರು. ಆ ತಿರಸ್ಕಾರವು ಆತನಿಗೆ ಸಾಮಾನ್ಯವಾಗಿದ್ದಿತು. ನನ್ನನ್ನು ನೋಡಿದವರು ಕೂಡ ಸ್ವಲ್ಪ ಮಟ್ಟಿಗೆ ಅದರಂತೆಯೇ ನೋಡತೊಡಗಿದರು. ನನ್ನ ಉಡುಪು ಇತರ ಭಾರತೀಯರ ಉಡುಪಿನಂತೆಯೇ ವಿಲಕ್ಷಣವಾಗಿದ್ದಿತು. ನಾನು ಫ್ರಾಕು ಕೋಟನ್ನು ತೊಟ್ಟುಕೊಂಡು ಬಂಗ ದೇಶೀಯರ ಮಾದರಿಯಂತೆ ತಲೆಪಾಗನ್ನು ಧರಿಸಿಕೊಂಡಿದ್ದೆನು. ಸೇಟು ನನ್ನನ್ನು ತನ್ನ ಕಾರ್ಯಸ್ಥಾನಕ್ಕೆ ಕರೆದುಕೊಂಡು ಹೋದನು. ಅಲ್ಲಿ ಆತನ ಕೊಠಡಿಯ ಪಕ್ಕದಲ್ಲೇ ನನಗೊಂದು ಕೊಠಡಿಯನ್ನು ಸಿದ್ಧಪಡಿಸಿದ್ದರು. ನಾನು ಅದರಲ್ಲಿಳಿದುಕೊಂಡೆನು. ಆತನ ಸಂಗತಿ ನನಗೆ ತಿಳಿಯದು, ನನ್ನ ಸಂಗತಿ ಆತನಿಗೆ ತಿಳಿಯದು. ಆತನ ಸಹೋದರನು ನನ್ನ ಕೈಯಲ್ಲಿ ಕಳುಹಿಸಿಕೊಟ್ಟ ಕಾಗದವನ್ನು ಓದಿದಲು ಆತನಿಗೆ ಇನ್ನಷ್ಟು ಸಂದೇಹವುಂಟಾಯಿತು. ಇದೊಂದು ಅನಾವಶ್ಯಕವಾದ ಅಮಿತವ್ಯಯವೆಂದು ಆತನು ತಿಳಿದುಕೊಂಡನು. ನನ್ನ ವೇಷವು, ನನ್ನ ನಿತ್ಯಕರ್ಮದ ಪದ್ಧತಿಯೂ ಪಾಶ್ಚಾತ್ಯರ ಪದ್ಧತಿಯಾಗಿ ಅನಾವಶ್ಯಕ ಆಡಂಬರದಿಂದ ಕೂಡಿರುತ್ತದೆಂದು ಆತನು ಭಾವಿಸಿದನು. ನನಗೆ ವಹಿಸಬೇಕಾದ ಕಾರ್ಯವಾವುದೆಂಬುದು ಆತನಿಗೆ ತೋಚಲಿಲ್ಲ. ಅವರ ವಿವಾದವು ಟ್ರಾನ್ಸವಾಲಿನಲ್ಲಿ ನಡೆಯುತ್ತಿದ್ದಿತು. ಹೀಗಿರುವಾಗ್ಗೆ ನನ್ನನ್ನು ಅಲ್ಲಿಗೆ ಕಳುಹಿಸಲಿ. ಕಾರಣವೇನೆಂಬುದು ಸಹ ಆತನಿಗೆ ಗೊತ್ತಾಗಲಿಲ್ಲ. ನಾನು ಸಮರ್ಥನೆಂದೂ ನಂಬಿಗಸ್ತನೆಂದೂ ಆತನು ಎಷ್ಟರಮಟ್ಟಿಗೆ ನಂಬಬಲ್ಲನು? ನನ್ನ ಕೆಲಸವನ್ನು ಪರಿಶೀಲಿಸಲು ಆತನು ಪ್ರಿಟೋರಿಯಾದಲ್ಲಿರಲು ಅವಕಾಶವಿರಲಿಲ್ಲ. ಪ್ರತಿವಾದಿಗಳಲ್ಲಿದ್ದರು. ಅವರು ನನ್ನನ್ನು ವಶಪಡಿಸಿಕೊಳ್ಳುತ್ತಾರೋ ಏನೋ? ಎಂಬ ಅನುಮಾನವು ಆತನಿಗೆ ಹುಟ್ಟುವುದು ಸಹಜವಾಗಿದ್ದಿತು. ಈ ವಿವಾದ ವಿನಹ ಇತರ ಕೆಲಸವಾವುದನ್ನೂ ನನಗೆ ಕೊಡಬಹುದೆಂಬುದು ಆತನಿಗೆ ತೋರಲಿಲ್ಲ. ಅವನ್ನು ಗುಮಾಸ್ತರೇ ನನಗಿಂತ ಚೆನ್ನಾಗಿ ಮಾಡಬಲ್ಲವರಾಗಿದ್ದರು. ಗುಮಾಸ್ತರು ತಪ್ಪನ್ನು ಮಾಡಿದಲ್ಲಿ ಅವರನ್ನು ಶಿಕ್ಷಿಸಬಹುದು. ನಾನು ತಪ್ಪು ಮಾಡಿದಲ್ಲಿ ನನ್ನನ್ನು ಕೂಡ ಹಾಗೆ ಶಿಕ್ಷಿಸಲಾಗುವುದೇ? ಆ ಕೇಸನ್ನು ನನಗೆ ಕೊಡದಿದ್ದಲ್ಲಿ ಆತನು ನನ್ನನ್ನು ಸುಮ್ಮನೆ ಕುಳ್ಳಿರಿಸಿಕೊಂಡಿರಬೇಕಾಗಿದ್ದಿತು.

ಅಬ್ದುಲ್ಲಾಸೇಟಿಗೆ ಓದಲು ಬಾರದಿದ್ದರೂ ಅನುಭವವು ಹೆಚ್ಚಾಗಿದ್ದಿತು. ತನಗೆ ವಿವೇಕವು ಚುರುಕಾಗಿದ್ದಿತೆಂದು ಆತನು ಸಹ ತಿಳಿದುಕೊಂಡಿದ್ದನು. ಬ್ಯಾಂಕು ಮ್ಯಾನೇಜರು, ಪಾಶ್ಚಾತ್ಯವರ್ತಕರು, ನ್ಯಾಯವಾದಿಗಳು ಮೊದಲಾದವರಿಗೆ ತನ್ನ ಭಾವವನ್ನು ತಿಳಿಸುವಷ್ಟಿಗೆ ಆತನು ಆಂಗ್ಲಭಾಷೆಯಲ್ಲಿ ಮಾತನಾಡುತ್ತಿದ್ದನು. ಭಾರತೀಯರು ಆತನನ್ನು ಬಹಳವಾಗಿ ಗೌರವಿಸುತ್ತಿದ್ದರು. ಆಗ ಅಲ್ಲಿದ್ದ ದೊಡ್ಡ ವರ್ತಕ ಸಂಘಗಳಲ್ಲಿ ಇವರದೊಂದಾಗಿತ್ತು. ಇಷ್ಟಿದ್ದಾಗ್ಯೂ ಆತನು ಯಾರನ್ನೂ ನಂಬುತ್ತಿರಲಿಲ್ಲ. ಅದು ಅವನ ಸ್ವಭಾವವು. ಅವನಿಗೆ ಮಹಮ್ಮದೀಯ ಮತದಮೇಲೆ ಅತ್ಯಂತ ವಿಶ್ವಾಸವಿದ್ದಿತು. ಆ ಮತರಹಸ್ಯವನ್ನು ಕುರಿತು ಬೋಧಿಸಬೇಕೆಂಬ ಆಸಕ್ತಿಯು ಆತನಿಗಿದ್ದಿತು. ಆತನಿಗೆ ಅರಬ್ಬಿಭಾಷೆಯು ಬಾರದಿದ್ದರೂ ಖುರಾನು ಮೊದಲಾದ ಗ್ರಂಥಗಳಲ್ಲಿ ತಕ್ಕಮಟ್ಟಿಗೆ ಮಾತ್ರ ಪರಿಚಯವಿದ್ದಿತು. ಆತನ ಸಹವಾಸದಿಂದ ಆ ಮತವನ್ನು ಕುರಿತು ನಾನು ಕೊಂಚ ತಿಳಿದುಕೊಳ್ಳುವವನಾದೆನು. ನನಗೆ ವಿಶೇಷ ಪರಿಚಯವಾದಮೇಲೆ ಮತವಿಷಯವನ್ನು ಕುರಿತು ತೀಕ್ಷ್ಣವಾಗಿ ಚರ್ಚಿಸಲುಪಕ್ರಮಿಸಿದೆವು. ನಾನು ಹೋದ ಎರಡನೆಯದಿನವೋ, ಮೂರನೆಯದಿನವೋ ನನ್ನನ್ನು ಆತನು ಡರ್ಬಾನ್ ಕೋರ್ಟಿಗೆ ಕರೆದುಕೊಂಡು ಹೋದನು. ಅಲ್ಲಿ ಅನೇಕ ಜನರೊಡನೆ ನನಗೆ ಪರಿಚಯ ಮಾಡಿಸಿದನು. ತನ್ನ ನ್ಯಾಯವಾದಿಯ ಪಕ್ಕದಲ್ಲೇ ನನ್ನನ್ನು ಕುಳ್ಳಿರಿಸಿದನು. ಮೇಜಿಸ್ಟ್ರೇಟರು ನನ್ನ ಕಡೆ ದುರುಗುಟ್ಟಿ ನೋಡುತ್ತ ತಲೆಪಾಗನ್ನು ತೆಗೆದು ಹಾಕಬೇಕೆಂದು ಹೇಳಿದನು. ನಾನು ಅದನ್ನಂಗೀಕರಿಸದೆ ಅಲ್ಲಿಂದೆದ್ದು ಹೊರಗೆ ಬಂದೆನು. ಅಲ್ಲೂ ನನಗೆ ಕಲಹ ಸಿದ್ಧವಾಯಿತು. ಮಹಮ್ಮದೀಯರಂತೆ ಉಡುಪನ್ನು ಧರಿಸಿದವರು ತಲೆಪಾಗನ್ನಿಟ್ಟುಕೊಳ್ಳಬಹುದಲ್ಲದೆ ಇತರ ಭಾರತೀಯರು ಕೋರ್ಟಿನೊಳಕ್ಕೆ ಹೋದ ಕೂಡಲೇ ಅದನ್ನು ತೆಗೆದುಹಾಕಬೇಕೆಂದು ಅಬ್ದುಲ್ಲಾಸೇಟು ನನಗೆ ಹೇಳಿದನು.

ಆ ದೇಶದಲ್ಲಿ ಮಹಮ್ಮದೀಯ ವರ್ತಕರೂ ಹಿಂದೂ ಪಾರ್ಸಿ ಗುಮಾಸ್ತರುಗಳೂ ಇರುವರು. ಮಹಮ್ಮದೀಯರು ಅರಬ್ಬಿಯನರೆಂದೂ, ಪಾರ್ಸಿಗಳು ಪಾರಶೀಕರೆಂದೂ ಹೇಳಿಕೊಳ್ಳುವರು. ಹಿಂದುಗಳು ಅನುಕೂಲವಾಗಿದ್ದರು. ಈ ಭಾರತೀಯರಲ್ಲಿ ಮೂರುತರಗತಿಗಳಿದ್ದವು ಗಿರಿಮೆಂಟು ಕೂಲಿಯವರು, ಆಂಧ್ರರು, ದ್ರಾವಿಡರು. ಉತ್ತರಹಿಂದುಸ್ಥಾನದವರು ಮೊದಲಾದ ಕಾರ್ಮಿಕರ ಸಂಖ್ಯೆಯು ಬಹಳ ಹೆಚ್ಚಾಗಿದ್ದಿತು. ಕೂಲಿಯವರು ಐದು ವರ್ಷಕಾಲ ಕೆಲಸಮಾಡಲು ಕರಾರನ್ನು ಬರೆದುಕೊಟ್ಟು ಅಲ್ಲಿಗೆ ಹೋದರು. ಆ ಅಗ್ರಿಮೆಂಟು ಗಿರಿಮೆಂಟಾದ್ದರಿಂದ, ಗಿರಿಮೆಂಟು ಎಂದೂ ಬದಲಾವಣೆಯಾಗಿರುವುದು. ಹಾಗೆ ಬರೆದುಕೊಟ್ಟಿರುವವರು ಗಿರಿಮಿಟಿಯಾಗಿರುವರು. ಉಳಿದ ಮೂರು ವರ್ಗದವರಿಗೂ ವ್ಯಾಪಾರಸಂಬಂಧವನ್ನು ಮಾತ್ರ ಇಟ್ಟುಕೊಂಡಿರುವರು. ಭಾರತೀಯರಲ್ಲಿ ಹೆಚ್ಚು ಮಂದಿ ಕೂಲಿ ಕೆಲಸವನ್ನೇ ಮಾಡುತ್ತಿರುವುದರಿಂದ ಆಂಗ್ಲೇಯರು ಭಾರತೀಯರೆಲ್ಲರನ್ನೂ ಕೂಲಿಯವರೆಂದೂ, ಸಾಮಿಯೆಂದೂ ಕರೆಯುತ್ತಿದ್ದರು. ಸಾಮಿ ಎಂಬುದು ಸ್ವಾಮಿ ಶಬ್ದದ ವಿಕೃತಿ ಅಂದರೆ ತದ್ಭವ. ವೆಂಕಟಸ್ವಾಮಿ, ರಾಮಸ್ವಾಮಿ ಎಂದು ಅನೇಕ ಜನರ ಹೆಸರಿನೊಂದಿಗೆ ಸ್ವಾಮಿ ಎಂಬ ಪದವು ಸೇರಿರುವುದರಿಂದ ಅವರನ್ನು ಹಾಗೆ ಸ್ವಾಮಿ ಎಂದು ಕರೆಯತೊಡಗಿದರು. ಸ್ವಾಮಿ ಅಂದರೆ ಯಜಮಾನನೆಂದು ಅರ್ಥವಾಗುವುದಾದರೂ ಸಾಮಿ ಶಬ್ದವನ್ನು ಆಂಗ್ಲೇಯರು ನೀಚಾರ್ಥದಲ್ಲೇ ವಿನಿಯೋಗಿಸುತ್ತಿದ್ದರು. ಸಾಮಿ ಅಂದರೆ ಕೆಲವು ಭಾರತೀಯರಿಗೆ ಕೋಪಬರುತ್ತಿದ್ದಿತು. ಸ್ವಾಮಿ ಅಂದರೆ ಯಜಮಾನ, ನೀವು ಹಾಗೆ ಕರೆದರೆ ನಿಮಗೆ ನಾನು ಯಜಮಾನನಾಗುತ್ತೇನೆಂದು ಕೆಲವರು ಯುಕ್ತಿಯಾಗಿ ಹೇಳಿದರೆ ಆಂಗ್ಲೇಯರಲ್ಲಿ ಕೆಲವರಿಗೆ ಸಂಕೋಚವೂ ಮತ್ತೆ ಕೆಲವರಿಗೆ ಆಗ್ರಹವೂ ಹುಟ್ಟುತ್ತಿದ್ದಿತು. ಕೋಪಗೊಂಡವರು ಭಾರತೀಯರನ್ನು ಹಾಗೆಂದು ಬಯ್ಯುತ್ತಿದ್ದರಲ್ಲದೆ ಬೆತ್ತದಿಂದಲೂ ಹೊಡೆಯುತ್ತಿದ್ದರು. ವರ್ತಕರನ್ನು ಕೂಲಿ ವರ್ತಕರೆಂದೂ, ನನ್ನನ್ನು ಕೂಲಿ ಬ್ಯಾರಿಸ್ಟರೆಂದೂ ಅವರು ಕರೆಯುತ್ತಿದ್ದರು. ಕೂಲಿ ಶಬ್ದಾರ್ಥವು ವ್ಯತ್ಯಸ್ತವಾಗಿದೆ. ಅಲ್ಲಿ ಕೂಲಿ ಅಂದರೆ ಭಾರತೀಯನೆಂದು ಪರ್ಯಾಯವಿದೆ. ಮಹಮ್ಮದೀಯರಲ್ಲಿ ಕೆಲವರು ತಾವು ಕೂಲಿಯವರಲ್ಲವೆಂದೂ, ಅರಬ್ಬಿಯನರೆಂದೂ ಹೇಳುತ್ತಿದ್ದರು. ವಿನಯವಂತರಾದ ಆಂಗ್ಲೇಯರು ಅವರ ಕ್ಷಮಾಪಣೆಯನ್ನು ಕೋರುತ್ತಿದ್ದರು. ಭಾರತೀಯನು ತಲೆಪಾಗನ್ನು ತೆಗೆಯಬೇಕೆಂಬ ಅವಮಾನವನ್ನು ಸಹಿಸುವುದಾಗದಿದ್ದುದರಿಂದ ಈ ಸಂಬಂಧವೇಕೆಂದು ನಾನು ಪಾಶ್ಚಾತ್ಯರ ಟೋಪಿಯನ್ನು ಧರಿಸಬೇಕೆಂದು ಯೋಚಿಸಿದೆನು. ಆದರೆ ಅಬ್ದುಲ್ಲಾಸೇಟು ಅದನ್ನು ಅಂಗೀಕರಿಸಲಿಲ್ಲವು. "ಭಾರತೀಯರೆಲ್ಲರಿಗೂ ಅವಮಾನವಾಗುವುದು. ದೊರೆ ಟೋಪಿಯನ್ನಿಟ್ಟುಕೊಂಡರೆ ನಿನ್ನನ್ನು ವೇಯಿಟರು ಎಂದೆನ್ನುತ್ತಾರೇ ಹೊರತು ಆಗಲೂ ಗೌರವಿಸುವುದಿಲ್ಲ" ಎಂದು ಆತನು ಹೇಳಿದನು.

ಆತನ ಆಲೋಚನೆಯಲ್ಲಿ ಕೊಂಚ ವಿವೇಕವೂ, ದೇಶಾಭಿಮಾನವೂ ಸಂಕುಚಿತಭಾವವೂ ಕೂಡಿದ್ದವು. ಭಾರತೀಯರು ತಲೆಪಾಗನ್ನು ಇಟ್ಟುಕೊಂಡಿರಬೇಕೆಂಬುದೇ ದೇಶಾಭಿಮಾನವು. ವೇಯಿಟರು ಎಂದು ಎಲ್ಲರನ್ನೂ ಅನ್ನುವುದೇ ಸಂಕುಚಿತಭಾವವು. ವೇಯಿಟರು ಎಂದರೆ ಕುಸ್ತಿಯವನು— ಒಟ್ಲರು. ಗಿರಿಮೆಂಟು ಕೂಲಿಗಳಲ್ಲಿ ಹಿಂದುಗಳೂ, ಮಹಮ್ಮದಿಯರೂ, ಕ್ರೈಸ್ತರೂ ಸೇರಿರುತ್ತಾರೆ. ಗಿರಿಮೆಂಟು ಕೊಟ್ಟು ಅಲ್ಲಿಗೆ ಬಂದವರಲ್ಲಿ ಕೆಲವರು ಕ್ರೈಸ್ತರಾದುದರಿಂದ ಅವರ ಮಕ್ಕಳು ಕ್ರೈಸ್ತರಾಗಿ ಏರ್ಪಟ್ಟರು. 1893ನೇ ವರ್ಷದಲ್ಲೇ ಅಲ್ಲಿ ಭಾರತ ಕ್ರೈಸ್ತರ ಸಂಖ್ಯೆಯು ಹೆಚ್ಚಾಗಿದ್ದಿತು. ಅವರು ಆಂಗ್ಲೇಯರ ಪದ್ಧತಿಯಂತೆ ಉಡುಪನ್ನು ಹಾಕಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರು ಹೊಟೇಲುಗಳಲ್ಲಿ ವೇಯಿಟರುಗಳಾಗಿ ಕೆಲಸಮಾಡುತ್ತಿದ್ದರು. ಅವರು ದೊರೆಯ ಟೋಪಿಯನ್ನು ಧರಿಸುತ್ತಿದ್ದರಾದುದರಿಂದ ಅಬ್ದುಲ್ಲಾಸೇಟು ಆ ಟೋಪಿಯನ್ನು ಕುರಿತು ಆ ರೀತಿ ಹೇಳಿದುದು. ಹೊಟೇಲುಗಳಲ್ಲಿ ವೇಯಿಟರಾಗಿ ಕೆಲಸಮಾಡುವುದು ಬಹಳ ನೀಚವೆಂದು ಭಾವಿಸಲ್ಪಟ್ಟಿದ್ದಿತು. ಈಗಲೂ ಅನೇಕರು ಹಾಗೆಯೇ ಭಾವಿಸುತ್ತಾರೆ. ಒಟ್ಟಿನ ಮೇಲೆ ಆತನ ಸಲಹೆಯು ನನಗೆ ಒಪ್ಪಿತವಾಯಿತು. ನಾನು ತಲೆಪಾಗನ್ನು ಇಟ್ಟುಕೊಂಡಿರಕೂಡದೆಂಬ ವಿಚಾರವಾಗಿ ಪತ್ರಿಕೆಗಳಲ್ಲಿ ಬರೆದು ಆ ಪದ್ಧತಿಯನ್ನು ಸಮರ್ಥಿಸಿದೆನು. ಪತ್ರಿಕೆಗಳು ಅದನ್ನು ಕುರಿತು ಬಹಳ ಚರ್ಚೆಯನ್ನು ನಡಿಸಿ ನಾನು ಆ ದೇಶಕ್ಕೆ ಆಹ್ವಾನಿಸಲ್ಪಟ್ಟವನಲ್ಲವೆಂದು ನನ್ನನ್ನು ನಿರಸನಮಾಡಿದುವು. ಈ ಪ್ರಕಾರವಾಗಿ ನಾನು ಹೋದ ಕೆಲ ದಿನಗಳಲ್ಲೇ ನನ್ನ ಹೆಸರು ಪ್ರಯತ್ನವಿಲ್ಲದೆಯೇ ಪ್ರಖ್ಯಾತವಾಯಿತು. ಕೆಲವರು ನನಗೆ ಸಹಾಯಕರಾದರು, ಮತ್ತೆ ಕೆಲವರು ನನ್ನ ಸಾಹಸವನ್ನು ಕಟುವಾಗಿ ನಿರಸನಮಾಡಿದರು. ನಾನು ಮಾತ್ರ ಕಡೆಯವರೆಗೂ ತಲೆಯ ಪಾಗನ್ನು ತೆಗೆಯಲೇ ಇಲ್ಲ. ಈ ತಲೆಪಾಗಿನ ನಿರ್ಬಂಧವು ಎಂದು ತಪ್ಪುವುದೋ ಮುಂದೆ ನೋಡಬೇಕಾಗಿದೆ.

ಅಖಿಳ ಬಂಗಾಳ ಉಪಾಧ್ಯಾಯರುಗಳ ಪರಿಷತ್ತಿನಲ್ಲಿ ಸರ್. ಪಿ. ಸಿ. ರೇ ರವರು ಮಾಡಿದ ಭಾಷಣ.

ಸಮೂಹವೂ ವಿದ್ಯಾಸಂಸ್ಥೆಗಳೂ ಸಹಕರಿಸುತ್ತಿರುವುದಿಲ್ಲ. ಈ ಜ್ಞಾನ ಪ್ರಸಾರಕ ಸಹಕಾರದಿಂದಲೇ ಜನಾಂಗದ ಅಭಿವೃದ್ಧಿಯಾಗಬೇಕಷ್ಟೆ. ಈ ಶತಮಾನದ ಪ್ರಾರಂಭದವರೆಗೆ ಇದ್ದಂತೆ ಈಗ ವಿದ್ಯೆಯು ಜನರ ಪ್ರೀತಿಗೆ ಪಾತ್ರವಾಗಿಲ್ಲ. ಯಾಕೆಂದರೆ ಕಾಲೇಜುಗಳಲ್ಲಿಯೂ ಸ್ಕೂಲುಗಳಲ್ಲಿಯೂ ಕೊಡುವ ವಿದ್ಯೆಯಿಂದ ಪ್ರಾಪಂಚಿಕ ಅನುಕೂಲಗಳು ಸಹ ಬೇಕಾದಷ್ಟು ದೊರಕುವದಿಲ್ಲ. ಕಾಲೇಜುಗಳ ಒಳ ಹೊಡಿಯೂಡುವ ವಿದ್ಯಾರ್ಥಿಗಳ ದೊಡ್ಡ ಗುಂಪುಗಳಿಂದ ವಿದ್ಯೆಯು ಜನರ ಪ್ರೀತಿಗೆ ಪಾತ್ರವಾಗಿದೆಯೆಂತ ತಿಳಿಯಬಾರದು. ಏನೂ ದಿಕ್ಕು ತೋಚದೆ ವಿದ್ಯಾರ್ಥಿಗಳು ಕಾಲೇಜ್‌ಗಳಿಗೆ ಬರುವರಾಗಿದೆ. ಹೆಚ್ಚಿನ ವಿದ್ಯಾರ್ಥಿಯರು ಬೇರೆ ಏನು ಮಾಡಬೇಕೆಂತ ತೋರದೆ ಯುನಿವರ್ಸಿಟಿ ವಿದ್ಯೆಗೆ ಬರುತ್ತಾರೆ. ಆದರೆ ಅನಂತರ ಕೆಲವು ವರ್ಷಗಳೊಳಗೆ ಈ ದಾರಿ ತಮ್ಮಲ್ಲಿ ಹೆಚ್ಚಿನವರಿಗೆ ಮುಂದೆ ದಾರಿ ಇಲ್ಲದ ಓಣಿಯಂತೆಯೇ ಪರಿಣಮಿಸುತ್ತದೆ. ಈ ಆಪದಲ್ಲಿ ಸಮೂಹವೂ ಉಪಾಧ್ಯಾಯರೂ ಸಮವಾಗಿ ಜವಾಬ್ದಾರರಾಗಿದ್ದಾರೆ.

ಬಂಗಾಳದ ವಿದ್ಯಾಪ್ರಚಾರದ ಕ್ರಮವು ಪ್ರಯೋಜನವಿಲ್ಲದ ಹಣ ಖರ್ಚಿನ ದಾರಿ ಮಾತ್ರವಾಗಿದೆಯೆಂತ ತೋರಿಸುತ್ತೇನೆ. ಈ ಮಾತು ಯೂನಿವರ್ಸಿಟಿ ವಿದ್ಯೆಗೆ ಹೆಚ್ಚಾಗಿ ಸಂಬಂಧಿಸುತ್ತದೆ. ವರ್ಷ ಒಂದರ 15000 ಮೆಟ್ರಿಕ್ಯುಲೇಶನ್ ಪಾಸಾದವರಲ್ಲಿ 9000 ಯುವಕರು ಕಾಲೇಜ್‌ಗಳಿಗೆ ಸೇರುತ್ತಾರೆ. ಈ ಸಂಖ್ಯೆಯಲ್ಲಿ 500 ಜನರು ಮಾತ್ರ ಎಂ. ಎ. ಪಾಸಾಗುತ್ತಾರೆ. ಇವರಲ್ಲಿ ಒರೇ 50 ಜನರಿಗೆ ಮಾತ್ರ ಕಾಲೇಜ್‌ಗಳಲ್ಲಿ ಕೆಲಸ ದೊರಕುತ್ತದೆ. ಮಿಕ್ಕ 450 ಜನರು ಗುಮಾಸ್ತರುಗಳಾಗಿಯೋ 50 ರೂಪಾಯಿ ಸಂಬಳದ ಮಾಸ್ತರುಗಳಾಗಿಯೋ ಹೋಗಬೇಕಾಗುತ್ತದೆ. ಈ 50 ಜನರನ್ನು ಆರಿಸಲಿಕ್ಕೆ ಇಂಟರ್‌ಮೀಡಿಯೇಟ್ ಕ್ಲಾಸಿಗೆ 9000 ಜನರನ್ನು ಸೇರಿಸಿಕೊಳ್ಳಬೇಕಾಗಿತ್ತೋ— ಬೇಡ. ಮಿಕ್ಕ 8950 ವಿದ್ಯಾರ್ಥಿಗಳಿಂದ ಕೆಲವು ಡಾಕ್ಟರುಗಳು, ಕೆಲವರು ಲಾಯರುಗಳು, ಇಂಜನೀಯರುಗಳೂ ಆಗುತ್ತಾರೆ. ಆದರೆ ಈ ಕಸಬುಗಳಲ್ಲಿಯೂ ಜನರು ಹೆಚ್ಚಿಹೋಗಿರುವುದರಿಂದ ಪ್ರಯೋಜನವಾಗುವದಿಲ್ಲ. ಅದ್ದರಿಂದ ಇಷ್ಟೆಲ್ಲಾ ಜನರು ಈ ಕಸಬುಗಳಿಗೆ ಹೋಗುವದರಲ್ಲಿ ನ್ಯಾಯವಿಲ್ಲ. ಶಾಲೆಗಳಲ್ಲಿ ಕೊಡುವ ವಿದ್ಯೆಯು ಜನರನ್ನು ಯಾವುದಾದರೂ ಕಸಬಿಗೆ ಅರ್ಹರನ್ನಾಗಿ ಮಾಡುತ್ತಿದ್ದರೆ 9000 ದಷ್ಟು ದೊಡ್ಡ ಸಂಖ್ಯೆ ಜನರು ಇಂಟರ್‌ಮೀಡಿಯೇಟ್ ಕ್ಲಾಸಿಗೆ ಸೇರಬೇಕಾದ ಆವಶ್ಯವಿರಲಿಲ್ಲ. ಮೆಟ್ರಿಕ್ಯುಲೇಶನ್ ಪಾಸಾದವರ ಪೈಕಿ ಶೇಕಡ 10ರಷ್ಟು ಮಾತ್ರ ಅಂದರೆ 900 ಮಾತ್ರ ಕಾಲೇಜಿಗೆ ಸೇರಿದರೆ ಸರಕಾರಿ ನೌಕರಿಗೂ ಇತರ ಕಸಬುಗಳಿಗೂ ಬೇಕಾದಷ್ಟು ಜನರು ದೊರಕುತ್ತಾರೆ. ಇಂಗ್ಲೆಂಡಿನಲ್ಲಿ ಶೇಕಡ 10ಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಕಾಲೇಜ್ ವಿದ್ಯೆಗೆ ಹೋಗುವದಿಲ್ಲ. ಹೀಗೆ ಮಾಡಿದರೆ ವರ್ಷಕ್ಕೆ ಯಾರಿಗೂ ತೊಂದರೆಯಿಲ್ಲದೆ 8100 X 30 X 12= 2916000 ರೂಪಾಯಿ ಉಳಿಯುತ್ತಿತ್ತು. ಈ ಹಣವನ್ನು ವಿದ್ಯಾರ್ಥಿಯರೊಳಗೆ ಹಂಚಿದ್ದರೆ ತಲೆ ಒಂದರ 360 ರೂ. ವರ್ಷಕ್ಕೆ ಉಳಿಯುತ್ತಿತ್ತು. ಈ ದ್ರವ್ಯವು ವ್ಯಾಪಾರ, ಕೃಷಿ ಯೂ ಇತರ ಕಸಬುಗಳನ್ನು ಕೈಕೊಳ್ಳಲಿಕ್ಕೆ ಸಾಕಷ್ಟು ಭಂಡವಾಳವಾಗುತ್ತಿತ್ತು, ದೇಶದ ಐಶ್ವರ್ಯ ಬೆಳವಣಿಗೆಗೂ ಸಹಾಯವಾಗುತ್ತಿತ್ತು. ಜೈನಾ ಮನುಷ್ಯನು ಮೆಟ್ರಿಕ್ಯುಲೇಶನ್ ಆಗದೇನೇ ತನ್ನ ವ್ಯಾಪಾರವನ್ನು ಚೆನ್ನಾಗಿ ಮಾಡುತ್ತಾನೆ. ಮಾರ್ವಾಡಿ ವ್ಯಾಪಾರಿಯು ವಿದ್ಯೆ ಏನೂ ಇಲ್ಲದೆ ಒರೇ ಹತ್ತು ರೂಪಾಯಿ ಭಂಡವಾಳದಿಂದ ದೊಡ್ಡವನಾಗುತ್ತಾನೆ. ಕಸಬು ಗೊತ್ತಿದ್ದರೆ ಮತ್ತು ಕಷ್ಟ ಕೆಲಸ ಮಾಡಲು ತಯಾರಿದ್ದರೆ ವರ್ಷಕ್ಕೆ 360 ರೂಪಾಯಿ ಚಿಕ್ಕ ಭಂಡವಾಳವಲ್ಲ. ಮುಂದುವರಿದ ಜನಾಂಗಗಳು ಈ ರೀತಿ ಆಗುವ ಅನಾವಶ್ಯಕಗಳನ್ನು ತಪ್ಪಿಸಿ ಮುಂದರಿಸಿ ಹೋಗುತ್ತಿರುವಾಗ ಸಾಧಾರಣವಾದ ಆರ್ಥಿಕ ದುರ್ವ್ಯಯಗಳಿಗೆ ಸಹ ನಾವು ಮನಸು ಕೊಡುವದಿಲ್ಲವೆಂಬುದಕ್ಕೆ ಬಂಗಾಳದ ವಿದ್ಯಾಪ್ರಚಾರದ ಕ್ರಮವೇ ಸಾಕ್ಷಿಯಾಗಿದೆ. ಈ ವಿಷಯದಲ್ಲಿ ಸಮಾಜದ ಜವಾಬ್ದಾರಿಯೂ ಕಡಿಮೆಯಾಗಿಲ್ಲ. ಒರೇ ಅನ್ನ ದೊರಕಿಸಿಕೊಡುತ್ತದೆಯೆಂಬ ಕಾರಣದಿಂದ ಈ ವಿದ್ಯಾಪ್ರಚಾರದ ಕ್ರಮಕ್ಕೆ ನಾವು ವಿರೋಧಿಸಿಯೇ ಇರುವದಿಲ್ಲ. ಸರಕಾರದವರು ವಿದ್ಯಾ ಕ್ರಮವನ್ನು ಬದಲಾಯಿಸದೆ ಇದ್ದರೂ ಅದನ್ನು ಉಪಯೋಗಿಸಿಕೊಳ್ಳುವದನ್ನು ನಾವು ನಿಲ್ಲಿಸಲಿಲ್ಲ.

ವಿದ್ಯಾಪ್ರಚಾರದ ಕ್ರಮದಲ್ಲಿ ಬಹಳ ದೋಷಗಳಿವೆ. ಪರದೇಶೀ ಭಾಷೆಯಲ್ಲಿ ವಿದ್ಯೆ ಕೊಡುತ್ತಿರುವದು ಒಂದನೇ ಮತ್ತು ಮುಖ್ಯ ಕೊರತೆಯಾಗಿದೆ. ವಿದ್ಯೆ ಕಲಿಯುವ [illegible] ಅರ್ಧ ಭಾಗವು ಭಾಷೆ ಕಲಿಯುವದರಲ್ಲೇ ಕಳೆದರೆ ತಿಳುವಳಿಕೆಯನ್ನು ಪಡೆಯಲು ಸಮಯವೆಲ್ಲಿ? ಒಂದೆರಡು ಪರದೇಶಿ ಭಾಷೆ ಗೊತ್ತಿಲ್ಲದೆ ಒಬ್ಬನ ವಿದ್ಯೆಯು ಸಂಪೂರ್ಣವಾಯಿತೆಂತ ಹೇಳಲಾಗುವದಿಲ್ಲವೆಂತ ನಾನು ಒಪ್ಪುತ್ತೇನೆ. ಆದರೆ ಈ ತಿಳುವಳಿಕೆಯು ಕೆಲವರಿಗೆ ಇದ್ದರೆ ಸಾಕು. ಸಾಧಾರಣ ಪ್ರಾಪಂಚಿಕ ಜ್ಞಾನವನ್ನೂ, ಸೈಯನ್ಸನ್ನೂ ದೇಶೀಯ ಭಾಷೆಯಲ್ಲಿ ಸುಲಭವಾಗಿ ಕೊಡಬಹುದು. ನನ್ನ ಒಬ್ಬ ಸ್ನೇಹಿತರು 190 ಘಂಟೆಗಿಂತ ಹೆಚ್ಚು ಸಮಯ ಖರ್ಚು ಮಾಡದೆ ಪರದೇಶಿ ಭಾಷೆಯೊಂದನ್ನು ಕಲಿತಿರುತ್ತಾನೆ. ಜರ್ಮನಿನ ಹೆಚ್ಚಿನ ವಿದ್ವಾಂಸರೆಲ್ಲರೂ ಪರದೇಶಿ ಭಾಷೆಯೊಂದೆರಡನ್ನು ಕಲಿಯುತ್ತಾರೆ. ನಮ್ಮಲ್ಲಿ ಇಂಗ್ಲಿಷ್ ಭಾಷೆಯ ಮೂಲಕವೇ ವಿದ್ಯೆ ಕೊಡಬೇಕೆಂಬ ಒಂದು ಗುಲಾಮಗಿರಿಯ ಬುದ್ಧಿಯು ಬೆಳೆದು ಹೋಗಿದೆ. ಇಂಗ್ಲಿಷಿನಲ್ಲಿ ಚತುರನಂತೆ ತೋರಿಸಿಕೊಳ್ಳಲು ಪ್ರಯತ್ನಿಸುವದೇ ಸ್ವಭಾವವಾಗಿ ಹೋಗಿದೆ. ಈ ಚಾತುರ್ಯವನ್ನು ಸುಲಭದಲ್ಲಿ ಪಡೆಯಬಹುದು. ಆದರೆ ಅದರಿಂದ ಏನೂ ಪ್ರಯೋಜನವಿಲ್ಲ. ಸ್ವಬುದ್ಧಿಯನ್ನು ಉಪಯೋಗಿಸುವ ಸ್ವಭಾವವನ್ನು ವಿದ್ಯೆಯು ಉಂಟು ಮಾಡುವದೇ ಇಲ್ಲ. ಮುಖ್ಯ ವಿಷಯಗಳನ್ನೇ ಕಾಲೇಜ್ ವಿದ್ಯೆಯು ತಿಳಿಸಿಕೊಡುವದಿಲ್ಲ. ಮಾತೃ ಭಾಷೆಯ

ಲ್ಲಿ ವಿದ್ಯೆ ಕೊಟ್ಟರೆ ಹೀಗಾಗುತ್ತಿರಲಿಲ್ಲ. ನಮ್ಮ ವಿದ್ಯಾವಂತ ಯುವಕರಲ್ಲಿ ಜೀರ್ಣವಾಗದ ತಿಳುವಳಿಕೆ ಏನೋ ಸ್ವಲ್ಪವಿದೆ. ಇದರಿಂದ ಪ್ರಯೋಜನವೂ ಇಲ್ಲ, ಆಂದವೂ ಇಲ್ಲ. ಚರ್ಚೆಗೆ ಅನುಕೂಲ ಕೊಡದೆ ಬೇರೆಯವರ ಅಭಿಪ್ರಾಯಗಳನ್ನು ನಮ್ಮ ಬಾಲಕರಿಗೆ ಹಂಚಿಕೊಡುತ್ತೇವೆಯಷ್ಟೆ.

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ವಾಣೀವಿಳಾಸ ಮೊಹಲ್ಲಾ, ಮೈಸೂರು ಕನ್ನಂಬಾಡಿ ರೋಡಿನಲ್ಲಿರುವ 1ನೇ ಬ್ಲಾಕು 3 ಮತ್ತು 4ನೇ ಸೈಟು, ಅಳತೆ 285 X 100 ಅಡಿಗಳುಳ್ಳ, ಇಟ್ಟಿಗೆ ಕಂಪೌಂಡು ಹಾಕಿ, 2 ಗೇಟು ಮತ್ತು ನೀರಿನ ನಲ್ಲಿ ಸಹಾ ಹಾಕಿರುತ್ತೆ.

ಮೈಸೂರುಸಿಟಿ ಇಂಪ್ರೂವ್‌ಮೆಂಟು ಟ್ರಸ್ಟಿನವರ ರೂಲ್ಸು ಅನುಸರಿಸಿ 7417 ರೂಪಾಯಿ 6 ಆಣೆಗೆ ಬಿಕರಿಗೆ ಹಾಕಲ್ಪಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಸೂಪರಿನ್‌ಟೆಂಡೆಂಟರು,
ಲೇಬರ್ ಡಿಪಾರ್ಟ್‌ಮೆಂಟು,
ಮೈಸೂರು.

1—3

ಪುದುಕೋಟೆ ಸಹಕಾರಿ ಪರಿಷತ್ತಿನಲ್ಲಿ ಮದ್ರಾಸ್ ಸಹಕಾರಿ ರಿಜಿಸ್ಟ್ರಾರಾಗಿದ್ದ ರಾವ್‌ಬಹದೂರು ನೇದಾಚಲಯ್ಯರವರ ಭಾಷಣದಿಂದ ತೆಗೆದದ್ದು.

ಸಮುದಾಯದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಬೇಕಾದರೆ ಕೃಷಿ ಕೆಲಸವನ್ನು ಅಭಿವೃದ್ಧಿಗೊಳಿಸಬೇಕು. ಇದಕ್ಕೆ ಸಹಕಾರಿ ಚಳವಳಿಯೊಂದೇ ದಾರಿ.

ಪ್ರತಿಯೊಬ್ಬ ಸಹಕಾರಿ ಕೃಷಿಕನೂ ಹಣಸಾಲಕೊಡುವ ಸಾಹುಕಾರರಲ್ಲಿಗೆ ಸಾಲಕ್ಕೆ ಹೋಗಲು ಬಿಡದಂತೆ ಗ್ರಾಮದ ಸಹಕಾರಿ ಸಂಘಗಳನ್ನು ಬಲಪಡಿಸಬೇಕು. ಪ್ರತಿಯೊಬ್ಬ ಮೆಂಬರಿನ ಯೋಗ್ಯತೆಯನ್ನೂ ನಡತೆಯನ್ನೂ ತಿಳಿದಿರಬೇಕು. ಸಹಕಾರಿ ಸಂಘವು ಬರೇ ಸಾಲಕೊಡುವ ಸಂಸ್ಥೆಯಲ್ಲದಿರಬೇಕಾದರೆ ಸಂಘವನ್ನು ಮಿತವ್ಯಯದ ದಾರಿಯಲ್ಲಿ ನಡಿಸಬೇಕು. ಸಹಕಾರಿ ಸಂಘಗಳು ಸಂಘಗಳಿಗೆ ಸೇರುವ ಪ್ರತಿಯೊಬ್ಬ ಕೃಷಿಕನ ಮತ್ತು ಇತರ ಕಸಬುದಾರನ ಆರ್ಥಿಕ ಸ್ಥಿತಿಯನ್ನು ಬೆಳೆಸಲಿಕ್ಕೆ ಇರುವ ಸಮಾಜಗಳಾಗಬೇಕು. ಗ್ರಾಮಗಳ ಪ್ರತಿಯೊಂದು ಸಹಕಾರಿ ಸಂಘವೂ ಕೃಷಿ ಕಸಬನ್ನು ಅಭಿವೃದ್ಧಿಗೊಳಿಸಲಿಕ್ಕೂ ಜೀವನದ ಅನುಕೂಲಗಳನ್ನು ಒದಗಿಸಿಕೊಳ್ಳಲಿಕ್ಕೂ ಒಗ್ಗಟ್ಟಿನಿಂದ ಸಮುದಾಯಕ್ಕಾಗಿ ಕೆಲಸಮಾಡುವ ಪದ್ಧತಿಯನ್ನು ಕಲಿಸಿಕೊಡಲಿಕ್ಕೂ, ಗ್ರಾಮದ ಸಮಾಜಕ್ಕೂ ಹೊರಗಿನ ಪ್ರಪಂಚಕ್ಕೂ ಗ್ರಾಮದವರಿಗೆ ಇರುವ ಜವಾಬ್ದಾರಿಯನ್ನು ತಿಳಿಸಿಕೊಡಲಿಕ್ಕೂ ಇರುವ ಸಂಸ್ಥೆಗಳಾಗಬೇಕು. ಗ್ರಾಮಸಂಘದ ಉದ್ದೇಶವೇನಿರಬೇಕೆಂದರೆ— ಒಗ್ಗಟ್ಟಿನ ಪ್ರಯತ್ನ ಮತ್ತು ಆಲೋಚನೆಯಿಂದ ಮೆಂಬರುಗಳ ಆರ್ಥಿಕ ಸ್ಥಿತಿಯನ್ನು ಬೆಳೆಸುವದು ಮತ್ತು ಕೃಷಿ ಕಸಬನ್ನು ಅಪಾಯವಿಲ್ಲದ ಮತ್ತು ಹುಂಜಾದ ಕ್ರಮಗಳಲ್ಲಿ ಮುಂದರಿಸುವದು ಸಹ ಆಗಿರಬೇಕು. ಗ್ರಾಮಸಂಘಗಳು ಈ ಕೆಳಗಿನ ಕೆಲಸಗಳನ್ನು ಮಾಡಬೇಕು.

(1) ಉತ್ತಮಬೀಜ, ಗೊಬ್ಬರ ಮತ್ತು ವ್ಯವಸಾಯದ ಮುಟ್ಟುಗಳನ್ನು ಒದಗಿಸಿಕೊಡುವದು ಮತ್ತು ಸಾಧ್ಯವಾದಲ್ಲೆಲ್ಲಾ ನೀರಿನ ಅನುಕೂಲಗಳನ್ನು ಒದಗಿಸಿಕೊಡುವದು, ದನಗಳ ಹುಟ್ಟನ್ನು ಅಭಿವೃದ್ಧಿಗೊಳಿಸುವದು ಮತ್ತು ಕೃಷಿಯ ಉತ್ಪತ್ತಿಯನ್ನು ಹೆಚ್ಚಿಸಲು ಬೇಕಾದ ಇತರ ಕೆಲಸಗಳನ್ನು ನಡಿಸುವದು.

(2) ತಕ್ಕ ಮನೆ ಕೈಗಾರಿಕೆಗಳನ್ನು ಒದಗಿಸಿಕೊಡುವದು ಮತ್ತು ಕೃಷಿಗೆ ಬೇಕಾಗದೆ ಇರುವಾಗ ಕೆಲಸಗಾರರಿಗೆ ಕೆಲಸ ಒದಗಿಸಿಕೊಡುವದು.

(3) ಹಣ ಉಳಿಸುವ ಸ್ವಭಾವವನ್ನು ಹೆಚ್ಚಿಸಿ ಮೆಂಬರುಗಳನ್ನು ತಮ್ಮ ಉಳುವರಿಯನ್ನು ಡಿಪಾಜಿಟ್ಟಾಗಿ ಇಡಿಸುವಂತೆ ಮಾಡುವದು.

(4) ಚಂದಾ, ಉಚಿತ ಮತ್ತು ಸರಕಾರಿ ಸಹಾಯದಿಂದ ಸ್ಕೂಲ್‌ಗಳನ್ನು ಸ್ಥಾಪಿಸುವದು.

(5) ಗ್ರಾಮದ ಆರೋಗ್ಯ ಸಾಧನೆಗಳನ್ನು ಹೆಚ್ಚಿಸಿ ಅಂಟುರೋಗಗಳ ಹಾವಳಿ ಇಲ್ಲದಂತೆ ಮಾಡಿಕೊಳ್ಳುವದು.

(6) ಒಟ್ಟು ಗ್ರಾಮದ ಪ್ರಯೋಜನಕ್ಕೆ ಬೇಕಾದ ರಸ್ತೆ, ಕೆರೆ ಭಾವಿ ಮುಂತಾದ ಕೆಲಸಗಳನ್ನು ಮಾಡುವದು.

(7) ಗ್ರಾಮವಾಸಿಗಳ ಮನೆಗೆ ಬೇಕಾದ ಸಾಮಾನುಗಳನ್ನು ಒದಗಿಸಿಕೊಡಲಿಕ್ಕಾಗಿ ಸಂಘದೊಳಗೇನೇ ಒಂದು ಸ್ಟೋರನ್ನು ಏರ್ಪಡಿಸುವದು.

(8) ಗ್ರಾಮದ ಉತ್ಪತ್ತಿಯನ್ನು ಒಟ್ಟುಗೂಡಿಸಿ ಒಳ್ಳೇ ಕ್ರಯಕ್ಕೆ ತಕ್ಕಸಮಯದಲ್ಲಿ ಮಾರಲು ಏರ್ಪಾಡು ಮಾಡುವದು.

(9) ಮೆಂಬರುಗಳ ಸಮುದಾಯದ ಪತ್ತಿನ ಬಲದಿಂದ ಹೆಚ್ಚಿನ ಉತ್ಪತ್ತಿಯನ್ನು ಕೊಡುವ ಮತ್ತು ಅಪಾಯಗಳನ್ನು ಇಲ್ಲದೆ ಮಾಡುವ ಮತ್ತು ಅವಶ್ಯವಿರುವ ಮತ್ತು ಮೇಲ್ಕಂಡ ಉದ್ದೇಶಗಳಿಗೆ ಹಣವನ್ನು ಒದಗಿಸಿಕೊಡುವದು. ಹಣಗಾರ ಸಾಹುಕಾರರ ಮತ್ತು ವ್ಯಾಪಾರಿಗಳ ಹಾವಳಿಯಿಂದ ಗ್ರಾಮವನ್ನು ತಪ್ಪಿಸುವದೇ ಸಂಘದ ಉದ್ದೇಶವಾಗಿರಬೇಕು.

ಮೇಲ್ಕಂಡ ಉದ್ದೇಶಗಳನ್ನು ಜಯಪ್ರದವಾಗಿ ಸಾಧಿಸಬೇಕಾದರೆ ಈ ಕೆಳಗಿನ ಸಂಗತಿಗಳನ್ನು ನೆನಪಿನಲ್ಲಿಡಬೇಕು.

(1) ಸಂಘಕ್ಕೆ ಗ್ರಾಮದಲ್ಲಿರುವ ಒಳ್ಳೇನಡತೆಯ ಪ್ರತಿಯೊಬ್ಬನೂ ಸೇರಲು ಅವಕಾಶವಿರಬೇಕು. ಹಾಗೆ ಸೇರಿದ ಮೆಂಬರರನ್ನು ಅಭಿವೃದ್ಧಿಗೊಳಿಸಲಿಕ್ಕೆ ಸರ್ವ ಪ್ರಯತ್ನಮಾಡಬೇಕು. ಗ್ರಾಮದವರಲ್ಲಿ ಲೇವಾದೇವಿ ಮತ್ತು ವ್ಯಾಪಾರ ನಡಿಸುವ ವಿಪರೀತ ಲಾಭವಿಡುವಂಥವರನ್ನು ಮಾತ್ರ ವಿನಾಯಿಸಬೇಕಷ್ಟೆ. ಅನುಕೂಲವಿರುವ ಗ್ರಾಮಸ್ಥರನ್ನು ಸೇರಿಸಿಕೊಳ್ಳಬೇಕು, ಯಾಕೆಂದರೆ ಹೆಚ್ಚಿನ ಬುದ್ಧಿವಂತಿಕೆ, ಮತ್ತು ಹಣದಿಂದ ಸಂಘವು ಹೆಚ್ಚಾಗಿ ಅಭಿವೃದ್ಧಿಯಾಗುವದಲ್ಲದೆ ಕೃಷಿ ಕಸಬಿನ ಬೆಳವಣಿಗೆಗೂ ಸಹಾಯವಾಗುತ್ತದೆ. ಸೊತ್ತೇನೂ ಇಲ್ಲವೆಂಬ ಕಾರಣದಿಂದ ಬಡವರನ್ನು ಸೇರಿಸಿಕೊಳ್ಳದಿರಬಾರದು. ಕೃಷಿಕಸಬಿಗೆ ಸಂಬಂಧಪಡುವವರೆಲ್ಲರೂ ಸಂಘಕ್ಕೆ ಸೇರಬೇಕು. ಕೆಟ್ಟ ನಡತೆಯವರೂ ಮತ್ತು ಸಹಕಾರಿ ಚಳವಳಿಕ್ಕೆ ವಿರೋಧಿಗಳೂ ಮಾತ್ರ ದೂರಮಾಡಲ್ಪಟ್ಟರೆ ಸಾಕಾಗಿದೆ.

(2) ಪ್ರತಿಯೊಬ್ಬ ಮೆಂಬರಿಗೆ ಬೇಕಾದಷ್ಟು ಯಾವಾಗಲೂ ತಡವಿಲ್ಲದೆ ಸಾಲವನ್ನು ಒದಗಿಸಿಕೊಡಬೇಕು. ಹಳೇ ಸಾಲ ತೀರಿಸಲಿಕ್ಕೆ ಬೇಕಾದ ಹಣವನ್ನು ಮಾತ್ರ ತಕ್ಕ ಬಂದೋಬಸ್ತಿನೊಡನೆ ಒದಗಿಸಿಕೊಡಬೇಕು. ಗ್ರಾಮದ ಎಲ್ಲಾ ಕೃಷಿಕರಿಗೂ ಎಲ್ಲಾ ಬಾಬಿಗೂ ಸಾಲವನ್ನು ಒದಗಿಸಿಕೊಡುತ್ತದೋ ಎಂಬದರ ಮೇಲೆ ಸಂಘವು ಒಳ್ಳೇ ಕೆಲಸಮಾಡುತ್ತದೋ ಎಂಬುದು ನಿರ್ಣಯವಾಗಬೇಕು.

(3) ಸಹಕಾರಿ ಸಂಘಕ್ಕೆ ಸೇರುವ ಪ್ರತಿಯೊಬ್ಬ ಮೆಂಬರನನ್ನೂ ಸಾಹುಕಾರನ ಮತ್ತು ವ್ಯಾಪಾರಿಯ ಬಲೆಯಿಂದ ತಪ್ಪಿಸಬೇಕು. ಕೃಷಿಕನ ನ್ಯಾಯವಾದ ಅವಶ್ಯಕತೆಗಳಿಗೆಲ್ಲಾ ಬೇಕಾದಷ್ಟು ಹಣವನ್ನು ಸಂಘವು ಒದಗಿಸಿಕೊಡುವವರೆಗೆ ಅವನು ಸಾಹುಕಾರನಲ್ಲಿಗೆ ಹೋಗಲೇ ಬೇಕಾಗುತ್ತದೆ. ಕೃಷಿಕನನ್ನು ಭಂಡವಾಳಗಾರನ ಹಾವಳಿಯಿಂದ ತಪ್ಪಿಸಲಿಕ್ಕೇನೇ ಸಹಕಾರಿ ಚಳವಳಿಯು ಹುಟ್ಟಿರುವದು. ಸಂಘವನ್ನು ಒಳ್ಳೇ ರೀತಿಯಿಂದ ನಡೆಸಿ ಮೆಂಬರುಗಳು ಹಣವನ್ನು ಪ್ರಯೋಜನಕಾರಿಯಾದ ಉದ್ದೇಶಗಳಿಗೇನೇ ಉಪಯೋಗಿಸಿದರೆ ಮತ್ತು ಸಾಲವನ್ನು ಒಳ್ಳೇ ನಡತೆಯವರಿಗೆ ಮಾತ್ರ ಕೊಟ್ಟರೆ ಗ್ರಾಮಕ್ಕೆ ಬೇಕಾದಷ್ಟು ಹಣ ದೊರಕುವದು ಕಷ್ಟವಿಲ್ಲ. ಒಂದು ಗ್ರಾಮದ ಎಲ್ಲಾ ಕೃಷಿಕರ ಒಗ್ಗಟ್ಟನ್ನು ಏರ್ಪಡಿಸಿ ಅನಿಯಮಿತ ಜವಾಬ್ದಾರಿ ತತ್ವದ ಮೇಲೆ ಸಂಘಗಳು ಏರ್ಪಡಿಸಲ್ಪಟ್ಟರೆ ಅವಶ್ಯವಿರುವಷ್ಟು ಯೋಗ್ಯತೆಗೆ ಸರಿಯಾಗಿ ಹಣ ದೊರಕಿಯೇ ದೊರಕುತ್ತದೆ.

(1) ಸುಲಭವಾಗಿ ಸಾಲದೊರಕುತ್ತದೆಂಬ ಭಾವ ಹುಟ್ಟಿಸಬಾರದು. ಆದರೆ ಸಾಲವನ್ನು ಧಾರಾಳವಾಗಿ ಕೊಡಬೇಕು. ಸಾಲ ಕೊಡುವಾಗ ಸಾಲ ಪಡಕೊಳ್ಳುವವನಿಗೆ ತೀರಿಸಲು ಶಕ್ತಿಯಿದೆಯೋ ಎಂಬದನ್ನೂ, ಸಾಲವನ್ನು ವಾಪಸು ಮಾಡುವ ಸ್ವಭಾವವಿರುವ ಒಳ್ಳೇ ನಡತೆಯವನೋ ಎಂಬದನ್ನೂ, ಪಡಕೊಳ್ಳುವ ಸಾಲವನ್ನು ಉತ್ಪತ್ತಿದಾರಿಗೆ ಉಪಯೋಗಿಸಲ್ಪಡುತ್ತದೋ ಎಂಬದನ್ನೂ ನೋಡಿಕೊಳ್ಳಬೇಕು.

(5) ಪಡಕೊಂಡ ಸಾಲವು ಸಂಘಕ್ಕೆ ತಿಳಿಸಿದ ಉದ್ದೇಶಕ್ಕೇನೇ ಉಪಯೋಗಿಸಲ್ಪಡುತ್ತದೋ ಎಂಬದನ್ನು ನೋಡಿಕೊಳ್ಳಬೇಕು.

(6) ಉತ್ಪತ್ತಿಯನ್ನು ಕೊಡುವ ಉದ್ದೇಶಗಳಿಗೆ ಸಾಲ ಪಡಕೊಳ್ಳುವದಾದರ ಅಂಥಾ ಉತ್ಪತ್ತಿಯಿಂದಲೇ ಸಾಲತೀರಿಸಲು ಅನುಕೂಲವಾಗುವಂತೆ ಕಂತು ಕೊಡಬೇಕು. ಉತ್ಪತ್ತಿ ಕೊಡದ ಉದ್ದೇಶಗಳಿಗೆ ಸಾಲಕೊಡುವದಾದರೆ ಮೆಂಬರನು ಮಿತವ್ಯಯಮಾಡಿ ಸಾಲಕ್ಕೆ ತಕ್ಕಷ್ಟು ಮೊಬಲಗನ್ನು ಉಳಿಸಲು ಅವಕಾಶವಿರುವಷ್ಟು ಕಾಲ ವಾಯಿದೆ ಕೊಡಬೇಕು. ಸಾಲಗಾರನು ಮಳೆ ಮುಂತಾದ ಕೇಡುಗಳಿಂದ ನಷ್ಟ ಹೊಂದಿದರೆ ಅಥವಾ ಕುಟುಂಬದ ಕಷ್ಟದಿಂದರೆ ಅಥವಾ ಅವನ ಜವಾಬ್ದಾರಿಯಿಲ್ಲದೆ ಸಾಲ ಮರುಪಾವತಿ ಮಾಡಲು ಅಶಕ್ತಿಯುಂಟಾದದ್ದಾದರೆ ಹೆಚ್ಚು ವಾಯಿದೆ ಕೊಡಲ್ಪಡಬೇಕು.

(7) ಸಂಘವು ತನ್ನ ಮೆಂಬರುಗಳ ನಡವಳಿಕೆಯನ್ನು ಕಾದುನೋಡುತ್ತಿರಬೇಕು. ಅವರಿಗೆ ದೊರೆತ ಪತ್ತಿನ ಬೆಲೆಯನ್ನು ಅವರು ತಿಳಿದುಕೊಳ್ಳುವಂತೆ ಮಾಡಬೇಕು. ತನ್ನ ಅವಕಾಶಗಳನ್ನೆಲ್ಲಾ ಉಪಯೋಗಿಸಲೂ, ಹೆಚ್ಚಿಗೆ ಪ್ರಯೋಜನ ಹೊಂದಲೂ, ಜೀವನಕ್ರಮವನ್ನೇ ಅಭಿವೃದ್ಧಿಗೊಳಿಸಲೂ ಬೇಕಾದ ಸಹಾಯಕೊಡುವ ಸಂಸ್ಥೆಗೆ ಸೇರಿದವನೆಂದು ತಿಳಿದುಕೊಳ್ಳುವಂತೆ ಮಾಡಬೇಕು.

(8) ಸಹಕಾರಿ ಸಂಘವು ಸಾರ್ವಜನಿಕ ಸಂಸ್ಥೆಯಾಗಿದೆ. ಆಡಳಿತ ಅಧಿಕಾರ ಸ್ವತಂತ್ರವು ಮೆಂಬರುಗಳೆಲ್ಲಾ ಸೇರಿ ನಡಿಸುವ ಜನರಲ್ ಮೀಟಿಂಗಿನಲ್ಲಿ ಇದೆ. ಅಂಥಾ ಮೀಟಿಂಗುಗಳಲ್ಲಿ ಪ್ರತಿಯೊಬ್ಬ ಮೆಂಬರಿಗೂ ಒಂದು ಓಟಿದೆ. ಒಂದಕ್ಕಿಂತ ಹೆಚ್ಚು ಯಾರಿಗೂ ಇಲ್ಲ. ವರ್ಷದ ಆಡಳಿತವು ವಾರ್ಷಿಕ ಮೀಟಿಂಗಿನಲ್ಲಿ ವಿಮರ್ಶಿಸಲ್ಪಡುತ್ತದೆ. ಮತ್ತು ಆಡಳಿತ ನಡಿಸುವ ಮೆಂಬರುಗಳನ್ನು ಅಂಥಾ ಜನರಲ್ ಮೀಟಿಂಗಿನಲ್ಲಿ ಚುನಾಯಿಸುವದಾಗಿದೆ.

WANTED

A field writer from 1st October 1926, who can keep his own coolies about 20 to 25 during working season. State salary required.

Apply to:— A. A.
C/o Editor "Kodagu."
Mercara.

1—2

ವಿಮರ್ಶೆ.

ಉಪನಿಷತ್ ಪ್ರಕಾಶವು, ಲೇಖಕ:— ಶ್ರೀ ರಂಗನಾಥ ರಾಮಚಂದ್ರ ದಿವಾಕರರವರು, ಬೆಲೆ: 0—12—0 ಪ್ರತಿ:—ಕರ್ಮವೀರ ಆಫೀಸು, ಧಾರವಾಡ.

ಗ್ರಂಥಕಾರರು ತಮ್ಮ ಎಳೆತನದಲ್ಲಿಯೇ ಅಧ್ಯಾತ್ಮ ಜ್ಞಾನದ ಹಾಗೂ ಆರ್ಯಧರ್ಮದ ತಳಹದಿಯಾದ ಉಪನಿಷದ್ ಗ್ರಂಥಗಳನ್ನು ಓದುವ ಆತುರದಲ್ಲಿದ್ದರೆಂದೂ, 1920ರಲ್ಲಿ ಎಲ್. ಎಲ್. ಬಿ. ಪರೀಕ್ಷೆಯಾದನಂತರ ಅಸಹಕಾರ ಆಂದೋಲನಕ್ಕೆ ಗಂಟುಬೀಳಲಾಗಿ ಇವರಿಗೆ ಎರಡು ಸಾರೆ ಕಾರಾಗೃಹವಾಸ ಪ್ರಾಪ್ತವಾಯಿತೆಂದೂ, ಈ ರೀತಿ ದೊರೆತ ವಿಶ್ರಾಂತಿಯನ್ನು ಉಪನಿಷದ ಗ್ರಂಥಗಳ ಪಠಣದಲ್ಲಿ ಕಳೆಯುವನರಾದರೆಂತಲೂ ಇವರ ಮುನ್ನುಡಿಯಿಂದ ತಿಳಿದುಬರುತ್ತದೆ. ಕನ್ನಡಕ್ಕೆ ಉಪನಿಷತ್ತುಗಳನ್ನು ಪರಿವರ್ತನೆಮಾಡುವ ಪ್ರಥಮ ಪ್ರಯತ್ನ ಶ್ರೀಮಾನ್ ದಿವಾಕರರದೆಂದೇ ಹಂರೋಕ್ತವಾಗಿ ಹೇಳಬಹುದು. ಉಪನಿಷತ್ತುಗಳ ಸಂಖ್ಯೆಯು ನೂರಕ್ಕೆ ಮೇಲಿರುತ್ತದೆ. ಅವುಗಳಲ್ಲಿ ಅತಿಮುಖ್ಯವಾದುವುಗಳು ಹತ್ತೇ. ಸದ್ಯಕ್ಕೆ ಈಶ, ಕೇನ, ಕಠ, ಮಾಂಡೂಕ್ಯ ಮತ್ತು ಪ್ರಶ್ನ ಈ ಐದು ಪ್ರಥಮ ಭಾಗವಾಗಿ ಈ ಗ್ರಂಥವನ್ನಾಶ್ರಯಿಸಿವೆ. ಪ್ರತಿಯೊಂದು ಉಪನಿಷತ್ತಿಗೆ ಅದರ ಪೂರ್ಣ ಸಾರಾಂಶವೂ, ಶ್ಲೋಕಗಳ ಅನುವಾದವೂ, ಮತ್ತು ಗ್ರಂಥಕಾರರ ಅಭಿಪ್ರಾಯವೂ ಕೊಡಲ್ಪಟ್ಟಿದೆ. ಅಲ್ಲದೆ ಕೆಲವು ಕಠಿಣ ಶಬ್ದಗಳ ಅರ್ಥವೂ ಕೊಡಲ್ಪಟ್ಟಿದೆ. ಶಂಕರ, ರಾಮಾನುಜ, ಮಧ್ವ ಈ ಆಚಾರ್ಯರ ಉಪನಿಷತ್ ವ್ಯಾಖ್ಯಾನಗಳನ್ನು ಗ್ರಂಥಕಾರರು ಮನನಮಾಡಿಕೊಂಡು ಇವುಗಳ ಪೈಕಿ ಯಾವುದಾದರೊಂದು ಮತವನ್ನವಲಂಬಿಸದೆ ಈ ಗ್ರಂಥವು ಬರೆಯಲಾಗಿದೆ.

ಡ್ಯೂಸನ್, ಶೋಪೇನಹರ್ ಮ್ಯಾಕ್ಸ್ ಮುಲ್ಲರ್ ಮುಂತಾದ ಪಾಶ್ಚಾತ್ಯ ಪಂಡಿತರು ಉಪನಿಷತ್ತುಗಳನ್ನು ಹೊಗಳಿರುವರು. ಶ್ರೇಷ್ಟವಾದ ತತ್ವಮಾರ್ಗವು ಜನಸಾಮಾನ್ಯರಿಗೂ ಕೂಡ ಬಳಕೆಗೆ ಬರಲೆಂಬ ಆಸೆಯಿಂದ ಈ ಉಪನಿಷತ್ತುಗಳನ್ನು ಕನ್ನಡಕ್ಕೆ ಪರಿವರ್ತಿಸಿರುವರು. ಆದರೆ "ಇದೇನು? ವೇದಾಂತದ ಪುಸ್ತಕವೇ, ಒಗೆಯಿರತ್ತ— ವ್ಯವಹಾರಿಕರಿಗೆ ಅದರಿಂದೇನು?" ಎಂಬದಾಗಿ ಉದ್ಗರಿಸದೆ, ಗ್ರಂಥಕ್ಕೆ ಪುರಸ್ಕಾರವನ್ನೀಯಬೇಕು. ಇದನ್ನೋದುವದರಿಂದ ಲಭಿಸುವ ಫಲವು ಅಷ್ಟಿಷ್ಟಲ್ಲ. ಹಲವು ಮತಗಳು ಈ ಉಪನಿಷತ್ತುಗಳ ತಳಹದಿಯಾಗಿವೆ. ಶ್ರೀ ದಿವಾಕರರು ಅತಿಸುಲಭ ಬೆಲೆಗೆ ಇಂಥ ಉಚ್ಚವಿದ್ಯೆಯನ್ನು ನಮ್ಮ ಜನಾಂಗದಿಗೆ ತಂದು ಕೊಟ್ಟಿರುವರು. ಕನ್ನಡಿಗರು ಈ ಸ್ವಲ್ಪ ಪುಸ್ತಕವನ್ನು ಓದಿ, ಧನ್ಯರಾಗುವರೇ!

SALE OF BITI TIMBER

2957 c ft of biti over 4 ft 6 inch girth and 469 c ft of biti under 4ft 6 in in girth lying at the Malambi Depot will be sold in public auction at the Range office, Somwarpet, on 27th September 1926

For further particulars apply to —
The Range Officer,
Somwarpet

ನೋಟೀಸ್.

ಡಿಸ್ಟ್ರಿಕ್ಟ್ ಬೋರ್ಡಿನ ಕಾನ್‌ಸ್ಟಿಟ್ಯುಯೆನ್ಸಿಯ ಪ್ರಾಥಮಿಕ ಚುನಾವಣೆ ಪಟ್ಟಿಯನ್ನು ಈ ಮೂಲಕ ಸಮಸ್ತರಿಗೂ ತಿಳುವಳಿಕೆ ಒಗ್ಗೆ ಪ್ರಕಟಿಸಲಾಗಿದೆ.

2. ಈ ಪಟ್ಟಿಯಲ್ಲಿ ತನ್ನನ್ನು ಸೇರಿಸಿಕೊಳ್ಳುವದಕ್ಕೆ ಹಕ್ಕು ಇರುವಂತವನ ಹೆಸರು ಬಿಟ್ಟು ಹೋಗಿದ್ದರೆ ಅಥವಾ ಪಟ್ಟಿಯಲ್ಲಿ ಅವನ ಹೆಸರು ಅಥವಾ ವಿಳಾಸ ವಗೈರೆಗಳ ವಿಷಯ ಏನಾದರೂ ತಪ್ಪಿದ್ದರೆ ಅಂಥವನು ತನ್ನ ಹೆಸರನ್ನು ಪಟ್ಟಿಯಲ್ಲಿ ದಾಖಲು ಮಾಡಿಸಿಕೊಳ್ಳುವ ಅಥವಾ ತಪ್ಪನ್ನು ಸರಿಪಡಿಸಿಕೊಳ್ಳುವ ಬಗ್ಗೆ ರಿಜಿಸ್ಟ್ರೇಶನ್ ಆಫೀಸರಿಗೆ ಅರ್ಜಿ ಬರೆದುಕೊಳ್ಳಬಹುದು.

3 ಈ ಪಟ್ಟಿಯಲ್ಲಿ ಸೇರಿದ ಯಾವನಾದರೂ ನ್ಯಾಯವಾದ ದಾಖ್ಲೆ ಬಗ್ಗೆ ಆಕ್ಷೇಪಿಸುವದಾದರೂ ಅಥವಾ ಬೇರೆಯವರ ಹೆಸರನ್ನು ಸೇರಿಸಿದುದಕ್ಕೆ ಆಕ್ಷೇಪಣೆ ತರುವದಾದರೂ ಇದ್ದರೆ ಅಂಥವನು ತನ್ನ ಆಕ್ಷೇಪಣೆಯನ್ನು ರಿವೈಸಿಂಗ್ ಆಫೀಸರಿಗೆ ತಿಳಿಸಬಹುದು.

4. ಮೇಲ್ಕಂಡ ಹಕ್ಕು ಮತ್ತು ತಂಟೆತಕರಾರುಗಳನ್ನು ಕ್ರಿಸ್ತಶಕ ೧೯೨೬ನೇ ಇಸವಿ ಸೆಪ್ಟೆಂಬರ್ ೧೫ನೇ ತಾರೀಕಿನಲ್ಲಿ ಅಥವಾ ಅದಕ್ಕೆ ಮೊದಲೇ ರಿಜಿಸ್ಟ್ರೇಶನ್ ಆಫೀಸರಿಗೆ ಅರ್ಜಿ ಬರೆದುಕೊಳ್ಳಬಹುದು.

5. ಮೇಲೆ ನೇಮಿಸಿದ ತಾರೀಕಿನಂತರ ಸಿಕ್ಕಿದ ಅರ್ಜಿಗಳು ತಿರಸ್ಕರಿಸಲ್ಪಡುವವು.

6. ಮೇಲೆ ನೇಮಿಸಿದ ಸಮಯಕ್ಕೆ ಸರಿಯಾಗಿ ದೊರೆತ ಅರ್ಜಿಗಳನ್ನು ರಿವೈಸಿಂಗ್ ಆಫೀಸರು ಈ ಕೆಳಗೆ ತೋರಿಸಿದ ಸ್ಥಳಗಳಲ್ಲಿ ನೇಮಿಸಿದ ತಾರೀಕುಗಳಲ್ಲಿ ತೀರ್ಮಾನಮಾಡುವರು.

ಪೊನ್ನಂಪೇಟೆ	15—9—26
ವೀರಾಜಪೇಟೆ	16—9—26
ಮಡಿಕೇರಿ	17—9—26
ಸೋಮವಾರಪೇಟೆ	18—9—26

ರಿಜಿಸ್ಟ್ರೇಷನ್ ಆಫೀಸರು

ವರ್ತಮಾನ ಸಂಗ್ರಹ.

ಒಳದೇಶ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಎಲೆಕ್ಷನು ಈ ತಾರೀಕು 20ನೇ ಸೋಮವಾರ ನಡೆಯಲಿಕ್ಕಿದೆ

ಮಡಿಕೇರಿ ಮುನ್ಸಿಪಾಲಿಟಿಯ ಪ್ರೆಸಿಡೆಂಟರ ಮತ್ತು ವೈಸ್‌ಪ್ರೆಸಿಡೆಂಟರ ಚುನಾವಣೆಯನ್ನು ಚೀಫ್ ಕಮಿಷನರವರು ಮಂಜೂರುಮಾಡಿರುವರು.

ಮಡಿಕೇರಿ ಮೈಸೂರು ಟಪ್ಪಾಲು ಸಾಗಿಸುವ ಕಂಟ್ರಾಕ್ಟು ಪುನಃ 5ವರ್ಷದ ವರೆಗೆ ಖಾನ್‌ಬಹದ್ದೂರ್ ಪಿ. ಪಾಲಂಜಿಯವರಿಗೆ ಕೊಡಲಾಗಿದೆ.

ಮದ್ರಾಸು ಕೊಡಗರ ಸಂಘದ ನೂರನೇ ವಾರ್ಷಿಕೋತ್ಸವವು ಮತ್ತು ಕೈಲ್‌ಮುಹೂರ್ತ ಹಬ್ಬವು ಈ ತಾ. 5ರಲ್ಲಿ ಮದ್ರಾಸು ವೈ. ಯಂ. ಸಿ. ಎ ಯಲ್ಲಿ ನಡೆಸಲಾಯಿತು ಇದರ ವಿವರವು ಬರುವವಾರ ಪ್ರಕಟಿಸಲಾಗುವುದು.

ತಾ. 3ರಿಂದ 10ರ ವರೆಗೆ ಮಡಿಕೇರಿಯಲ್ಲಿ 1·47 ಇಂಚು ಮಳೆಯಾಗಿದೆ. ಕೆಲವು ದಿವಸಗಳಿಂದ ಮಳೆ ಇಲ್ಲದೆ ತಾ. 7ರಲ್ಲಿ ದೇಶದ ಹಲವು ಕಡೆಗಳಿಗೆ ಜೋರಾಗಿ ಮಳೆ ಬಿದ್ದಿದೆ.

ಸ್ಕೂಲುಗಳ ಇನ್‌ಸ್ಪೆಕ್ಟರಾದ ಮಿ. ಸಾಂಡರ್ಸನರು ಕೊಡಗಿನ ಶಾಲೆಗಳ ಇನ್‌ಸ್ಪೆಕ್ಷನಿಗಾಗಿ ಬರುವರಾಗಿ ಒಂದು ತಾ. 13ರಲ್ಲಿ ಮಡಿಕೇರಿ ಹೈಸ್ಕೂಲನ್ನು ಇನ್‌ಸ್ಪೆಕ್ಷನ್ ಮಾಡುವರೆಂದು ತಿಳಿಯುತ್ತೇವೆ.

ಪೆನ್ಶನ್ ಸ್ಕೂಲ್ ಸುಪರ್‌ವೈಜರಾಗಿದ್ದ ಮಿ. ಕೇಳಗಂಡ ಮಾದಪ್ಪನವರು ಮತ್ತು ಪೆನ್ಶನ್ ಉಪಾಧ್ಯಾಯರಾಗಿದ್ದ ಹಾಲುಗುಂದ ಗ್ರಾಮದ ಮಿ. ಮೇಕೇರಿರ ಪೊನ್ನಪ್ಪನವರು ಶಿವಾಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ.

ಪಾರುಪತ್ಯಗಾರರಾದ ಮಿ ನಂಜಪ್ಪ ತಂಬ ಪೊನ್ನಪ್ಪನವರು ಮತ್ತು ಪೊಲೀಸು ಸಬ್‌ಇನ್‌ಸ್ಪೆಕ್ಟರಾದ ಮಿ. ಮಂಡೇಪಂಡ ಗಣಪತಿಯವರು ಕೆಲವು ದಿವಸಗಳ ಹಿಂದೆ ನಡೆದ ಕ್ರಿಮಿನಲ್ ಮತ್ತು ಜುಡಿಶ್ಯಲ್ ಟೆಸ್ಟ್ ಪರೀಕ್ಷೆಗಳಲ್ಲಿ ಪಾಸಾಗಿರುವರು

ಬೆಂಗಳೂರು ಕೊಡವರು ಕೈಲ್‌ಮುಹೂರ್ತ ಹಬ್ಬವನ್ನು ಈ ತಾ. 12ನೇ ಆದಿತ್ಯವಾರ ಲಾಲ್‌ಭಾಗಿನಲ್ಲಿ ಆಚರಿಸುವರು. ಕೊಡಗಿನಲ್ಲಿ ಈ ಹಬ್ಬವು ಕಳೆದ ಶುಕ್ರವಾರ ಮುಗಿಯಿತು. ಆದರೆ ಮಳೆಯ ನಾಟಿಕೆಲಸವು ಇನ್ನೂ ತೀರದಿದ್ದುದೆಂಬುದು ವ್ಯಸನಕರ

ವಿರಾಜಪೇಟೆ ಹೈಸ್ಕೂಲು ಹೆಡ್‌ಮಾಸ್ತರಾದ ಮಿ. ಸಿ. ಯಂ. ರಾಮರಾಯರು ಮಡಿಕೇರಿ ಹೈಸ್ಕೂಲು ಹೆಡ್‌ಮಾಸ್ತರ್ ಬದಲಿಗೆ ನೇಮಿಸಲ್ಪಟ್ಟಿರುವುದರಿಂದ ಮಡಿಕೇರಿ ಹೈಸ್ಕೂಲಿನ ಮಿ. ಆರ್. ವೆಂಕಟರಾಮಯ್ಯನವರು ವಿರಾಜಪೇಟೆ ಹೈಸ್ಕೂಲಿನ ಬದಲಿ ಹೆಡ್‌ಮಾಸ್ತರಾಗಿ ನೇಮಿಸಲ್ಪಟ್ಟಿರುತ್ತಾರೆ

ನಂಜರಾಯಪಟ್ಟಣ ಹೋಬಳಿಯ ರಂಗಸಮುದ್ರ ಗ್ರಾಮದಲ್ಲಿ ಗೌಡುಗಳ ಕಾಳಿಂಗ ಸೋಮಯ್ಯನೆಂಬವನ ಶವವು ಈ ತಾ. 7ರ ಬೆಳಿಗ್ಗೆ ಅವನ ಮನೆಯ ಮುಂದುಗಡೆ ಒಂದು ಮರಕ್ಕೆ ತೂಗಹಾಕಿಕೊಂಡಿದ್ದದ್ದು ಕಂಡುಬಂದಿದೆ. ಮರಣದ ಸಂದರ್ಭವೂ, ಕಾರಣವೂ ಇನ್ನೂ ಗೊತ್ತಾಗಿರುವುದಿಲ್ಲ. ಇದು ಪೋಲೀಸು ವಿಚಾರದಲ್ಲಿದೆ

ಕೈಲ್‌ಮುಹೂರ್ತದ ದಿನವಾದ ತಾ 3ರಲ್ಲಿ ಮಧ್ಯಾಹ್ನದ ಮೇಲೆ ಮಡಿಕೇರಿ ಕೊಡವರನೇಕರು ಸೇರಿ ಪ್ರೆಸ್ ಕಂಪೌಂಡಿನಲ್ಲಿ ತೆಂಗಿನಕಾಯಿಗೆ ಗುಂಡುಹೊಡೆಯುವುದು, ಪಂಥದ ಓಟ ಓಟಗಳು, ಮೊದಲಾದವುಗಳನ್ನು ನಡಸಿ ಗೆದ್ದವರಿಗೆ ಇನಾಮುಗಳನ್ನು ಹಂಚಿದ್ದಲ್ಲದೆ ರಾತ್ರಿ ಜವಿಾನ್ದಾರರ ಸಂಘದ ಹಾಲಿನಲ್ಲಿ ಔತಣವನ್ನು ಮಾಡಿದರು.

ಕೊಡಗಿನಲ್ಲಿ ದನಗಳ ಸ್ಥಿತಿಯನ್ನು ಅಜಮಾಯಿಸಿ ಅಭಿವೃದ್ಧಿಗೊಳಿಸಲಿಕ್ಕಾಗಿ ಸಲಹೆಗಳನ್ನು ಕೊಡಲು ನಿಯಮಿತವಾದ ಕಮಿಟಿಯವರು ಜನರ ಅಭಿಪ್ರಾಯತೆಗೆದುಕೊಳ್ಳಲು ತಯಾರಿಸಿದ ಸವಾಲುಗಳ ಪಟ್ಟಿಗಳು ದೇಶದ ಕೆಲವು ಮಹನೀಯರಿಗೆ ಕಳುಹಿಸಲ್ಪಡುತ್ತಿವೆ. ಉತ್ತರಗಳು ಅಕ್ಟೋಬರು 1ರೊಳಗೆ ಛೇರ್ಮನ್ನರವರಿಗೆ ತಲಪಬೇಕಾಗಿದೆ.

ಹಿಂದೂದೇಶ.

ಕರಾಚಿಪಟ್ಟಣದ ಪ್ರಾಂತ್ಯದಲ್ಲಿ 6ನೇ ತಾರೀಕಿನಲ್ಲಿ ಜೋರಾದ ಬಿರುಗಾಳಿ ಮಳೆಯಿಂದ ತುಂಬಾ ನಷ್ಟಸಂಭವಿಸಿದೆ.

ತಾತಾಕಂಪೆನಿಯನ್ನು ಜಯಪ್ರದವಾಗಿ ಪ್ರಖ್ಯಾತಿಗೆ ತಂದ ರತನ್ಜಿ ದಾದಾಭಾಯಿ ತಾತಾರವರು ಕಳೆದ ವಾರ ಫ್ರಾನ್ಸಿನಲ್ಲಿ ಮೃತರಾದರು.

ಮೈಸೂರಲ್ಲಿ ಪ್ರಸಿದ್ಧರಾಗಿದ್ದ ಧರ್ಮಪ್ರಿಯರು ಮತ್ತು ವ್ಯಾಪಾರ ಕೈಗಾರಿಕೆಗಳಲ್ಲಿ ನಿಪುಣರಾದ ಶ್ರಿ. ವರ್ಧಮಾನಯ್ಯನವರು ಕಳೆದ ತಾ. 23ರಲ್ಲಿ ಮೃತರಾದರು.

ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲು ಚುನಾವಣೆಗೆ ಆಂಗ್ಲೊಇಂಡಿಯನರ ಪರವಾಗಿ ನರ್ಸ್ ಕೆನ್ನೆಡ್ ಎಂಬವಳೋ ಎಂಬ ಸ್ತ್ರೀಯು ಉಮೇದ್ವಾರಳಾಗಿ ನಿಲ್ಲುವಳೆಂದು ವರ್ತಮಾನ.

ಬರುವ ಡಿಸೆಂಬರ್ ತಿಂಗಳಲ್ಲಿ ಅಸ್ಸಾಮಿನಲ್ಲಿ ನಡೆಯುವ 41ನೇ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ಮಿ. ಯಸ್. ಶ್ರೀನಿವಾಸ ಅಯ್ಯಂಗಾರ್‌ರವರು ಚುನಾಯಿಸಲ್ಪಟ್ಟಿರುವರು.

ಮದ್ರಾಸು ಕೌನ್ಸಿಲು ಮೆಂಬರಾದ ರಾ|| ಬಾ|| ಡಿ. ಲಕ್ಷ್ಮೀನಾರಾಯಣರವರು ಆಂಧ್ರ ವಿಶ್ವವಿದ್ಯಾಲಯಕ್ಕೆ ಒಂದು ಲಕ್ಷ ರೂಪಾಯಿ ಬೆಲೆಬಾಳುವ ತಮ್ಮ ಪ್ರೆಸ್ಸಿನ ಸಂಪಾದನೆಯನ್ನು ಬಹುಮಾನವಾಗಿ ಕೊಟ್ಟಿರುವರು.

ಮದ್ರಾಸು ಪ್ರಾಂತ್ಯದಲ್ಲಿ ಕೆಲವು ಕಾಲ ಮಂತ್ರಿಯಾಗಿದ್ದ ಲಿಬರಲ್ ಪಾರ್ಟಿಗೆ ಸೇರಿದ ರಾ|| ಬಾ|| ಎಸ್. ಕೆ. ಕೇಶವ ರಾವರು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಕಾಂಗ್ರೆಸ್ ಪರವಾಗಿ ಕೌನ್ಸಿಲಿಗೆ ಉಮೇದವಾರರಾಗಿ ನಿಲ್ಲಲು ಅಪೇಕ್ಷಿಸುತ್ತಾರೆ

ಕಲ್ಕತ್ತಾ ಪಟ್ಟಣದಲ್ಲಿದ್ದ ರಾಜಾ ರಾಜೇಂದ್ರ ಮಲ್ಲಿಕ್ ಎಂಬ ಶ್ರೀಮಂತರು ತಾರೀಕು 5ರಲ್ಲಿ ಮೃತರಾದರು. ಇವರು ಬಡವರ ಪರವಾಗಿ ದಾನದಲ್ಲಿ, ವಿದ್ಯಾ, ಆರೋಗ್ಯ ನಿವಾರಣೆ ಮತ್ತು ಸಮಾಜ ಸೇವೆ ಮುಂತಾದ ಧರ್ಮಕಾರ್ಯಗಳಿಗೆ ಇಪ್ಪತ್ತುಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ.

ಮದ್ರಾಸು ಪಟ್ಟಣದ ಮುನ್ಸಿಪಲ್ ಚುನಾವಣೆಯಲ್ಲಿ ಇದ್ದರು ಸ್ವರಾಜ್ಯಪಾರ್ಟಿಯವರೂ, ಜಸ್ಟಿಸ್ ಪಾರ್ಟಿಯವರೊಬ್ಬರೂ, ಕಾಂಗ್ರೆಸ್ಸಿಗೆ ಸಹಾಯ ಭಕ್ತಿಯುಳ್ಳವರೊಬ್ಬರೂ ಜಯಶೀಲರಾಗಿರುವರು. ಸ್ವರಾಜ್ಯಪಾರ್ಟಿಯ ಜಯಶೀಲ ಮೆಂಬರುಗಳಲ್ಲಿ ಮಿ. ಯಸ್. ಸತ್ಯಮೂರ್ತಿಯವರು ಒಬ್ಬರಾಗಿದ್ದಾರೆ

ಶ್ರೀರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಅಭೇದಾನಂದರವರು ಹಿಂದುಸ್ಥಾನವನ್ನು ಕಳೆದ 1 ಅಕ್ಟೋಬರ ಬಿಟ್ಟು ಸ್ವೀಡನ್, 10 ವರ್ಷ ಪ್ರವಾಸದ ಹಿಂದೆ, ಸನ್ಯಾಸ್ಯರೂ ಹಿಂದೂ ಮತಕ್ಕೆ ಸೇರಿ ಹಿಂದೂದೇಶಕ್ಕೆ ಬಂದಿರುವರು. ಈ ಮಹಾಮಹಿಮರ ತಾಯಿತಂದೆಗಳು ಮೊದಲೇ ಹಿಂದೂಮತವನ್ನು ಸ್ವೀಕರಿಸಿರುವರು.

63,000 ರೂಪಾಯಿ ಕ್ರಯಬಾಳುವ ವಜ್ರದ ಹಾರ ಬಂಗಾರಗಳು ಮಹಾರಾಜ ಮಹಾರಾಜರವರ ಅರಮನೆಯಲ್ಲಿ ಕಳವಾಗಿ ಹೋಗಿವೆ. ಇದರಲ್ಲಿ ಒಂದು ವಜ್ರವು ಬಹು ವಿಶೇಷ ತರದ್ದಾಗಿದೆ. ಅದು ಗುಲಾಬಿ ಬಣ್ಣದ ರತ್ನದ ಹೊತ್ತಿಗೆ ಸೀರೆ ಮತ್ತು ಬಳೆಬಣ್ಣಗಳಿಗೆ ಒದಗಿದುದೆಂದೂ ಇದೊಂದರ ಕ್ರಯವೇ 60,000 ರೂಪಾಯಿಯಾಗುವುದಂತೆ!

ನೇಪಾಳದಲ್ಲಿ ಕಳೆದ ಕಾಲದಿಂದ ಗುಲಾಮಗಿರಿಯು ನಡೆದಿತ್ತು. ಈಗಿನ ಮಹಾರಾಜರು, ಪ್ರಯತ್ನದಿಂದ ತಾನೇ ಅದನ್ನು ನಿಲ್ಲಿಸಿರುತ್ತಾರೆ 57,8?? ಗುಲಾಮರು ಬಿಡುಗಡೆಯಾಗಿದೆ. ಗುಲಾಮರ ಬಿಡುಗಡೆಗೆ ಅವರ ಯಜಮಾನರಿಗೆ ಪರಿಹಾರವನ್ನು ಕೊಡಲಿಕ್ಕಾಗಿ 1? ಲಕ್ಷ ರೂಪಾಯಿ ಖರ್ಚಾಗಿದೆ

[illegible] ಪಾರ್ಟಿಯ ... ಪಂಡಿತ ಮದನಮೋಹನ ಮಾಳವೀಯರವರು ... ಸ್ವರಾಜ್ಯಪಾರ್ಟಿಯವರ ... ಪಂಡಿತ ಮೋತಿಲಾಲ್ ನೆಹರು ಮತ್ತು ಮಿ. ... ಗೆ ಮಾತುಕತೆಗಳು ನಡೆಯುತ್ತಿವೆ. ... ಒಪ್ಪಂದವು ಏಕೀಕರಣಕ್ಕೆ ಅನುಕೂಲಿಸಬಹುದೆಂದು ... ಸೂಚಿಸಿರುವರು.

ರಾಯಚೂರು ಜಿಲ್ಲೆ ಮಸ್ಕಿಯಲ್ಲಿ ಬಂದಿದ್ದ ಧರ್ಮಸಿದ್ಧರು, ಸಾತ್ವಿಕರಾಗಿದ್ದ ಹಿರೇಮಠದ ಸಿದ್ಧಲಿಂಗಪ್ಪನವರು ಮರಣಕಾಲದಲ್ಲಿ ತಾವು ಜಯತೀರ್ಥದಿಂದ ಶಿವನೆಡೆಗೆ ಹೋಗುತ್ತೇನೆಂದು ಅಪ್ಪಣೆಕೊಡಿಸಿ ಶಿವಾಧೀನರಾದರು. ಅವರ ಪತ್ನಿಯವರಾದ ಶ್ರೀಮತಿ ಗಂಗಮ್ಮನವರು ಪತಿಯ ದೇಹದೊಡನೆ ಹೋಗಬೇಕೆಂದು ಹಠಹಿಡಿದು ಮಂಗಳಾರತಿ ಮಾಡಿ ಪಾದಕ್ಕೆರಗಿ ತಲೆಯನ್ನು ಮೇಲಕ್ಕೆತ್ತದೆ ಅಲ್ಲಿಯೇ ಪ್ರಾಣ ಬಿಟ್ಟರು. ಇವರಲ್ಲವೇ ಪತಿವ್ರತಾಶಿರೋಮಣಿಗಳು

ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ದೇಶದಲ್ಲಿ ತುಂಬಾ ಗಲಭೆಗಳು ನಡೆದು ದೇಶದ ಅಭ್ಯುದಯಕ್ಕೆ ತುಂಬಾ ಅಡ್ಡಿಯಾಗಿರುವುದರಿಂದ ಮಹಾತ್ಮ ಗಾಂಧಿಯವರು ಒಂದು ವರ್ಷದ ವರೆಗೆ ರಾಜಕೀಯ ಕೆಲಸಕ್ಕೆ ಕೈ ಹಾಕುವದಿಲ್ಲವೆಂಬ ಅವರ ವ್ರತವನ್ನು ಬಿಟ್ಟು ಮುಂದಾಳುತನವನ್ನು ವಹಿಸಿ ಎಲ್ಲಾ ಪಂಗಡದವರ ಮುಂದಾಳುಗಳ ಒಂದು ಕಾನ್ಫರೆನ್ಸನ್ನು ಮಾಡಬೇಕೆಂದು ಡಾಕ್ಟರ್ ಕಿಚ್ಲೂ ಮುಂತಾದ ಕೆಲವು ಧುರೀಣರು ಮಹಾತ್ಮ ಗಾಂಧಿಯವರಿಗೆ ಪತ್ರ ಬರಕೊಂಡಿದ್ದಾರೆ.

ಕೋಆಪರೇಟಿವ್ ಸಂಘಗಳಲ್ಲಿ ಸರ್ಕಾರಿ ಉದ್ಯೋಗಸ್ಥರು ಅಧ್ಯಕ್ಷ, ಸೆಕ್ರೆಟರಿ ಮೊದಲಾದ ಕಾರ್ಯನಿರ್ವಾಹಕ ಪದವಿಗಳನ್ನು ವಹಿಸಿಕೊಳ್ಳಕೂಡದೆಂದು ಮೈಸೂರು ಸರ್ಕಾರದವರ ಹುಕುಂ ಆಗಿದೆ. ಇದಕ್ಕನುಸಾರವಾಗಿ ಬಿಕ್ಕಳಿಗರ ಸಂಘದ ಪ್ರೆಸಿಡೆಂಟರಾಗಿದ್ದ ಬ್ಯಾಂಕರ್ ಮಿ. ಬಿ. ನಾಗಪ್ಪನವರಿಗೂ ವೈಸ್‌ಪ್ರೆಸಿಡೆಂಟರಾಗಿದ್ದ ಬಾರಿಸ್ಟರ್ ಮಿ. ಕೆ. ವೆಂಕಟರಾಮಯ್ಯನವರಿಗೂ ಸರ್ಕಾರಿ ಅಪ್ಪಣೆಯಾದುದರಿಂದ ಇವರಿಬ್ಬರೂ ಆ ಸಂಘದ ಉದ್ಯೋಗಗಳನ್ನು ಬಿಟ್ಟು ಸಾಧಾರಣ ಮೆಂಬರುಗಳಾಗಿರುವರು.

ವಿದೇಶ.

ಅಮೇರಿಕದವರಿಗೆ ದೇಶಸಂಚಾರದಲ್ಲಿ ಬಹು ಪ್ರೀತಿ. 1925ನೇ ಇಸವಿಯಲ್ಲಿ ಅಲ್ಲಿಂದ 422 ಸಾವಿರ ಧನಿಕರು ಪರದೇಶ ಸಂಚಾರಕ್ಕೆ ಹೊರಟು ಹೋಗಿದ್ದ ಹಿಂದಿನ ಆ ವರ್ಷ ಪರನ್ನಾಡೇತ ಬಂದಲ್ಲಿಯೇ 58 ಕೋಟಿ ರೂಪಾಯಿ ಗಳನ್ನು ವೆಚ್ಚಮಾಡಿದರೆಂದು ತಿಳಿಯಬಂದಿದೆ.

ಮದ್ರಾಸಿನ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಮಹಾರಾಜ ಪತ್ನಿ ಫ್ರಾನ್ಸಿನಿಂದ ಇಂಗ್ಲೆಂಡಿಗೆ ಹೋದರು. ಲಾರ್ಡ್ ಬರ್ಕನ್‌ಹೆಡ್‌ರವರು ಲಂಡನಿನಲ್ಲಿ ಇವರಿಗೆ ಒಂದು ಔತಣ ಕೊಟ್ಟರು. ಇವರು ಇಂಗ್ಲೆಂಡಿನ ಕೆಲವು ಕಡೆ ಭೇಟಿಮಾಡಿಕೊಂಡು ಈ ತಾ. 4ರಲ್ಲಿ ಜಿನೇವಕ್ಕೆ ಹೋದರು.

ಜನಾಂಗಗಳ ಸಂಘದ ಎಳನೇ ಮ 7ನೇ ಕಾನ್ಫರೆನ್ಸು ಜಿನೀವಾದಲ್ಲಿ ಈ ತಾ. 6ರಲ್ಲಿ ಪ್ರಾರಂಭವಾಗಿದೆ. ಸ್ಪೈನ್ ಮತ್ತು ಬ್ರೆಜಿಲ್ ದೇಶಗಳು ತಮ್ಮ ಪ್ರತಿನಿಧಿಗಳನ್ನು ಈ ಕಾನ್ಫರೆನ್ಸಿಗೆ ಕಳುಹಿಸಿರುವುದಿಲ್ಲ. ಜರ್ಮನಿಯ ಪ್ರತಿನಿಧಿಯನ್ನೂ ಜನಾಂಗಗಳ ಸಂಘಕ್ಕೆ ಸೇರಿಸಿಕೊಳ್ಳುವಂತೆ ತೀರ್ಮಾನಗಿದೆ.

ಆಕಾಶದಲ್ಲಿ ಸಂಚರಿಸುವ ಏರೋಪ್ಲೇನುಗಳನ್ನು ತಯಾರಿಸುವ ಪ್ರಯತ್ನಗಳು ನಡೆಯುತ್ತಿವೆ. ಈಗಾಗಲೇ ಫ್ಲೋರ್ ಕಂಪೆನಿಯವರಿಗಾಗಿ ಒಬ್ಬ ಜರ್ಮನಿಯ ಶಿಲ್ಪಿಯು ನಿರ್ಮಿಸಿರುವ ಎಂಥಾ ವಿಮಾನಗಳಿಗೆ 15 ಅಡಿ ಉದ್ದ 22 ಅಡಿ ಅಗಲವಿರುವ ರೆಕ್ಕೆಗಳಿದ್ದು, ಅದು 350 ಪೌಂಡು ತೂಕವಿದ್ದರೂ ಗಂಟೆಗೆ 85 ಮೈಲಿ ವೇಗದಲ್ಲಿ ಚಲಿಸುವುದಂತೆ!

ಜೆ. ಸಿ. ಆಕ್ರಿಯಾಪ್ಪರವರು ‘ಸೈನ್ಸ್’ ಪತ್ರಿಕೆಯಲ್ಲಿ ಪ್ರಕಟಿಸಿರುವದೇನೆಂದರೆ— ಹುಲ್ಲಿನಲ್ಲಿ ಬೆರೆತಿರುವ ಗಂಧಕಾಮ್ಲವನ್ನು ಮರಕುಯ್ಯುವುದರೊಂದಿಗೆ ಬೆರಸಿ, ಅದರಿಂದ ಸಿದ್ಧವಾಗಿರುವ ಸಿಹಿಯಾದ ರಸಕ್ಕೆ ಸುಣ್ಣವನ್ನು ಸೇರಿಸಿ, ಕ್ಷಾರವನ್ನು ರಸವನ್ನು ಶುದ್ಧಮಾಡಿ ಕಾಲ್ನಡೆಗಳಿಗೆ ಆಹಾರವಾಗಿ ಕೊಟ್ಟರೆ ಅದು ಅವುಗಳಿಗೆ ಬಲವನ್ನುಂಟುಮಾಡುವವು

ಸ್ಪೈನ್ ದೇಶದ ಮುಖ್ಯ ಸೇನಾಧಿಪತಿಯಾದ ಡಿ ರಿವೇರಾರವರು ಸೈನ್ಯದ ಉದ್ಯೋಗಸ್ಥರಿಗೆ ಅರ್ಹತೆಯ ಮೇಲಲ್ಲದೆ ಸರ್ವಿಸಿನ ಮೇಲೆ ಪ್ರಮೋಶನ್ ಕೊಡಲಾಗುವುದಿಲ್ಲವೆಂದು ಹುಕುಂ ಮಾಡಿದ್ದಕ್ಕಾಗಿ ಸೈನ್ಯದ ದೊಡ್ಡ ಉದ್ಯೋಗಸ್ಥರು ಅತೃಪ್ತರಾಗಿ ಡಿ ರಿವೇರಾರವರ ರಾಜೀನಾಮೆ ಕೊಡಬೇಕೆಂದು ಸೂಚಿಸಿದರು. ಡಿ ರಿವೇರಾರವರು ರಾಜನ ಮೇಲೆ ಅಲ್ಲಿಯ ಅರಸರು ಇವರೆಲ್ಲರನ್ನು ಕಳುಹಿಸಿದ ಶಿಗಿನು ಹಾಕಿದಲ್ಲದೆ, ಗಲಭೆಯುಂಟಾಗುವದೆಂಬ ಸಂದೇಹದಿಂದ ಇಡೀ ಸ್ಪೈನ್‌ದೇಶದಲ್ಲಿ ದಂಡಿನ ಶಾಸನವನ್ನು (ಮಾರ್ಶಲ್ ಲಾ) ಜಾರಿಗೆ ತಂದರು.

NOTICE.

[illegible] are invited for the supply to the Industrial School Virajpet, of the following sizes and quantities of sawn timber, to reach the undersigned before the 30th of September 1926. The tenderers should on the acceptance of their tender, deposit Rs 50 as a surety for the fulfilment of their contract and this sum will be forfeited in case of failure on their part. The undersigned reserves the right to accept or reject any tender without assigning any reason for so doing.

The timber should be supplied within a month of the date of acceptance of the tender.—

5? X 2 X 1'	Nandi planks.
. 0? .	Beeti planks.
50' X 12' X 1½	Nandi planks.
100' X 1½" X 1½'	Nandi reapers.
50' X 2" X 2'	Beeti reapers.
50' X 2½" X 2½"	Beeti reapers.
100' X 12" X ?"	Red ceder planks.

P. C. Uthaya,
Sub Asst. Inspector
of shools, Coorg.

ಗಣಪತಿ ವಾಚನಾಲಯ.

ಸೆಪ್ಟೆಂಬರ್ ತಾರೀಕು 1ರಲ್ಲು ನಡೆದ ಗಣಪತಿ ವಾಚನಾಲಯದ ಕಮಿಟಿ ನಿರ್ಣಯಗಳ ವಿವರ:—

1. ಕಳೆದ ಕಮಿಟಿ ಮೀಟಿಂಗಿನ ವಿವರವನ್ನು ಓದಿ ಒಪ್ಪಲಾಯಿತು.

2 ವೀರರಾಜೇಂದ್ರಪೇಟೆ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿರುವ ಮಿ. ಮುದ್ದಪ್ಪನವರು ವಾಚನಾಲಯಕ್ಕೆ ಕೊಟ್ಟ 45 ಪುಸ್ತಕಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಲಾಯಿತು.

3 ಪ್ರತಿತಿಂಗಳ ಖರ್ಚುವೆಚ್ಚಗಳನ್ನು ಓದಿಸೋಪಿ ಒಪ್ಪಲಾಯಿತು. (ಬುಕ್ಕಿನಲ್ಲಿ ಕಳೆದು ಕೈಯಲ್ಲಿ ನಗದು 65—11—0 ಇದೆ.)

4. ವಾಚನಾಲಯವನ್ನು ಶೀಘ್ರದಲ್ಲಿ ರಿಜಿಸ್ಟರ್ ಮಾಡಿಸಬೇಕೆಂದು ಗವರ್ನಮೆಂಟನ್ನು ಕೇಳುವಂತೆ ತೀರ್ಮಾನವಾಯಿತು.

5. ವಾಚನಾಲಯದ ಪ್ರತಿಗಳ 250 ಕನ್ನಡ ಪತ್ರ

250 ಇಂಗ್ಲಿಷ್ ಪ್ರತಿಗಳನ್ನೂ ಛಾಪಿಸುವಂತೆ ತೀರ್ಮಾನವಾಯಿತು.

6. ವೀರರಾಜೇಂದ್ರಪೇಟೆ ಟೌನ್ ಕೋಆಪರೇಟಿವ್ ಸೊಸೈಟಿಯವರು ಕೊಡುತ್ತೇವೆಯೆನ್ನುವ 40 ರೂಪಾಯಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಬೇಕೆಂದೂ ಇದರ ಮೂರನೇ ಎರಡಂಶವನ್ನು ಉರ್ದು ಪುಸ್ತಕಗಳಿಗೆ ಖರ್ಚುಮಾಡಬೇಕಾದ ದರಿಂದ ಅಂಥ ಪುಸ್ತಕಗಳನ್ನು ಚುನಾಯಿಸುವಂತೆ ಮೆ. ಮಹಮ್ಮದ್ ಗೌಸ್‌ರವರನ್ನೂ ಮೆ. ಮಹಮ್ಮದ್‌ರವರನ್ನೂ ಕೇಳಿಕೊಳ್ಳುವಂತೆ ತೀರ್ಮಾನವಾಯಿತು.

ಪಿ. ಯಂ ಉತ್ತಪ್ಪ.
ಸೆಕ್ರಟರಿ

ಪತ್ರವ್ಯವಹಾರ

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ಬೆಂಗಳೂರಿನಲ್ಲಿ ಕೈಲುಮುಹೂರ್ತ ಹಬ್ಬ.

ಅಯ್ಯಾ,

ಕಳೆದ ತಿಂಗಳು 29ನೇ ಆದಿತ್ಯವಾರ ಬೆಳಿಗ್ಗೆ ಒಂಭತ್ತು ಗಂಟೆಗೆ ಬೆಂಗಳೂರಿನ ಕೊಡಗರೆಲ್ಲರೂ, ತಮ್ಮ ಕೈಲುಮುಹೂರ್ತ ಹಬ್ಬವನ್ನು ಆಚರಿಸಲು ಎಲ್ಲರಿಗೂ ಅನುಕೂಲವಾದ ದಿವಸವನ್ನು ನಿಯಮಿಸಲು ಮೆ. ಕೋದಂಡ ಪೂಣ್ಣಯ್ಯನವರ ಅಧ್ಯಕ್ಷತೆಯಲ್ಲಿ "ಕಬ್ಬನ್ ಪಾರ್ಕಿನ" (Cubbon Park) ಪೆವಿಲಿಯನ್‌ನಲ್ಲಿ ಸಭೆ ಸೇರಿದರು. ಸೆಕ್ರೆಟರಿಯವರಾದ ಮೆ. ಸಿ. ಸಿ. ಮೊದಪ್ಪನವರು, ವರ್ಷ ವರ್ಷವೂ ಆಚರಿಸುವ ಹಾಗೆ ಈ ವರ್ಷವೂ ಕೈಲ್‌ಮುಹೂರ್ತವನ್ನು ಸೆಪ್ಟಂಬರ್ ಎರಡನೇ ವಾರದಲ್ಲಿ ಅಂದರೆ ತಾ. 12ನೇ ಆದಿತ್ಯವಾರ ದಿನ ಆಚರಿಸಬೇಕೆಂದು ಸೂಚಿಸಿದರು. ಇದಕ್ಕೆ ಎಲ್ಲರೂ ಸಮ್ಮತಿಸಿದುದರಿಂದ ಹಬ್ಬವನ್ನು ಆ ದಿನವೇ ಆಚರಿಸುವಹಾಗೆ ನಿಶ್ಚಯವಾಯಿತು ಆ ಮೇಲೆ ಹಬ್ಬವನ್ನು ಸಂಭ್ರಮದಿಂದ ನಡೆಸಲಿಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿದರು ಇದೆಲ್ಲವೂ ಮುಗಿದೊಡನೆ ಮೆ. ಎಂ ಬಿ. ಬೆಳ್ಯಪ್ಪನವರು, ಹಾಕಿ ಮೊದಲಾದ ಆಟಗಳಲ್ಲಿ ಉತ್ಸಾಹಕರಾದ ಯುವಕರಿಗೆ ಎಲ್ಲರೂ ದ್ರವ್ಯ ಸಹಾಯ ಮಾಡಬೇಕೆಂದು ಸಭೆಯವರನ್ನು ಕೇಳಿಕೊಂಡದ್ದರಿಂದ ತಕ್ಷಣವೇ ಅಲ್ಲಿ ನೆರೆದಿದ್ದ ಮಹನೀಯರು ಉದಾರ ಭಾವದಿಂದಲೂ ಮತ್ತು ತಮ್ಮ ಶಕ್ತ್ಯಾನುಸಾರವಾಗಿಯೂ ಚಂದಾಹಣ ಹಾಕಿ ಒಂದು 'ಸ್ಪೋರ್ಟ್ಸ್ ಫಂಡನ್ನು' ಸ್ಥಾಪಿಸಿ, ಅದರಿಂದ 20 ರೂಪಾಯಿಯನ್ನು ಹಾಕಿಯಾಡುವ ಯುವಕರಿಗೆ ಹಾಕಿಸ್ಟಿಕ್ಕು, ಚೆಂಡು ಮೊದಲಾದುವುಗಳನ್ನು ತೆಗೆದುಕೊಳ್ಳಲು ಕೊಟ್ಟರು. ಒಮ್ಮತದಿಂದ ಈ ಸಂಘವನ್ನು ಏರ್ಪಡಿಸಿದ್ದು ಸ್ತೋತ್ರಾರ್ಹವೇ ಸರಿ. ಮುಂದಕ್ಕೆ ಈ ಸಂಘವನ್ನು ವೃದ್ಧಿಪಡಿಸಿ ಇಂಥಾ ಆಟಗಳಿಗೆ ಇನ್ನೂ ಉತ್ತೇಜನವನ್ನು ಕೊಡುವರೆಂದು ನಂಬುತ್ತೇನೆ. ಇದೆಲ್ಲವೂ ಮುಗಿದೊಡನೆ ಅಧ್ಯಕ್ಷರು ಅಲ್ಲಿ ನೆರೆದಿದ್ದ ಯುವಕರಿಗೆ ಸಂದರ್ಭೋಚಿತವಾದ ಒಂದು ಸಣ್ಣ ಭಾಷಣವನ್ನು ಮಾಡಿದುದರನಂತರ ಸಭೆಯು ವಿಸರ್ಜನೆಯಾಯಿತು

ಹಾಜರಿದ್ದವ

ದನಗಳ ಕಾಯಿಲೆ.

ಅಯ್ಯಾ,

ಸರಕಾರವು ಮಾಡಿದುದೇನು? ಹಾಗಿಯೇ ನಮ್ಮ ಕಮೀಷನರು ಸಾಹೇಬರು ಏನು ಮಾಡಿದರು? ಮಹನೀಯರೇ, ಈಗ ಸಾಧಾರಣ ಕಳೆದ ಐದಾರು ತಿಂಗಳಿಂದ ದನಗಳಿಗೆ ಉಬ್ಬುವ ಕಾಯಿಲೆ ಸುರುವಾಗಿ ಹಚ್ಚು ಕಮ್ಮಿ ದೇಶದ ಎಲ್ಲಾ ಭಾಗದಲ್ಲಿಯೂ ತುಂಬಿ ಸಾವಿರಗಟ್ಟಲೆಯಾಗಿ ಎತ್ತುಗಳು ನಾಶವಾದವು. ಈಗಲೂ ಇನ್ನೂ ನಾಶವಾಗುತ್ತಲಿವೆ ಬಿ ಮತ್ತಿಗೆ ನಾಡು ಬಿಳುಗುಂದ ಗ್ರಾಮ ಒಂದರಲ್ಲಿ ಕಳೆದ ಏಪ್ರೀಲ್ ತಿಂಗಳಿಂದ ಈ ವರೆಗೆ 98ರಾಸು ದನಗಳು ಸತ್ತವು ಇವುಗಳಲ್ಲಿ 76 ಉಳುವ ಎತ್ತುಗಳು. ಈ ದಿನ 15 ರಾಸುಗಳು ಕಾಯಿಲೆಯಲ್ಲಿ ನರಳುತ್ತಿವೆ ಅಲ್ಲದೆ ಅಮ್ಮತ್ತಿ ಸುತ್ತಮುತ್ತಲಿನ ಕಾವಾಡಿ, ಕಾರ್ಮಾಡು, ಅಮ್ಮತ್ತಿ, ಹೊಸೂರು, ಬೆಟ್ಟಗೇರಿ, ಹೊಸಕೋಟೆ, ಬಿಳುಗುಂದ, ನಲ್ವತ್ತೊಕ್ಲು, ಹಾಲುಗುಂದ(?) ಹಾಬೆಟೆಯೂರು, ಕೊಳತೋಡು ಬೈಗೋಡು, ಕಣ್ಣಂಗಾಲ ಮೊದಲಾದ ಈ ಪ್ರತಿಯೊಂದು ಗ್ರಾಮದಲ್ಲೂ ದನಗಳಿಗೆ ಕಾಯಿಲೆಯಿದೆ. ಅನೇಕ ಕಡೆ ಜನರು ಊಡೆ ಸುಮ್ಮನಿದ್ದಾರೆ ಎಂದ ಮೇಲೆ ರೈತನ ಪಾಡು ಹೇಗಿರಬಹುದು! ಕಂದಾಯದ ಪಟ್ಟಿ ತಯಾರು ಮಾಡುವಕಾಲ ಬಂತು. ರೈತನ ಈ ದುರವಸ್ಥೆಯನ್ನು ಕಣ್ಣೆತ್ತಿ ನೋಡುವ ಯೋಚನೆ ಇನ್ನೂ ಅಧಿಕಾರಿಗಳಿಗೆ ಹುಟ್ಟಿದಂತಿಲ್ಲ. ಪಟೇಲರೇನೋ ದನಗಳ ಮರಣವನ್ನು ಪಾರುಪತ್ಯಗಾರರ ಮುಖಾಂತರ ಸರಕಾರಕ್ಕೆ ತಿಳಿಸುವರು. ಅದರ ಪ್ರಯೋಜನ ಮತ್ತು ಪರಿಶೋಧನೆ ಎಂದಿಗೆಂದು ತೋರದು. ಸರಕಾರದ ವಾರ್ಷಿಕ ವರದಿಯ ಪುಟವನ್ನು ಹೆಚ್ಚಿಸುವದಕ್ಕೆ ಮಾತ್ರವೆನ್ನುವಂತೆ ವೆಟರಿನರಿ ಇಲಾಖೆಯೊಂದಿದೆ. 'ಸೀರಂ ಇಲ್ಲ' ವೆಂಬ ಒಂದೊಂದು ಹಳೇ ಮಾತಾದರೂ ಇನ್ನೂ ಮರೆತಂತಿಲ್ಲ. ಇಷ್ಟರಿಂದ ಕಾಯಿಲೆಯ ಹಾವಳಿಯು ಜೋರಾಗಿದ್ದರೂ ಬೇಕಾದ ಸೀರಂ ಗಡಿಗಡಿ ತರಿಸುವ ಏರ್ಪಾಡು ಮಾಡದೆ ಈ ಇಲಾಖೆಯು ದಾಖಲೆಗಳಿಗಾಗಿ ವರದಿಯನ್ನು ಮಾಯಿಸಿದರೂ ಎಂಬಂತೆ ಲ್ಯಾಂಡ್ ರೆಕಾರ್ಡ್ಸ್, ಎಗ್ರಿಕಲ್ಚರ್ ಇಲಾಖೆಯ ಅಧಿಕಾರಿಯೊಬ್ಬರು ಈ ಇಲಾಖೆಯ ಮೇಲು ಅಧಿಕಾರಿಯಾಗಿದ್ದಾರೆ. ಇವರಿಗೆ ವೆಟರಿನರಿ ವಿಷಯ ತಿಳುವಳಿಕೆ ಇಲ್ಲ. ಅಂದಮೇಲೆ ಅವರಿಗೆ ಇದೊಂದು ಹೆಚ್ಚಿನ ಕೆಲಸ ಮಾತ್ರವಲ್ಲವೇ. ಇಷ್ಟಾಗಿ ಈ ರೀತಿಯಾಗಿ ದನಗಳು ಸಾಯುತ್ತಿದ್ದರೂ ಯಾವ ಅಧಿಕಾರಿಯಾಗಲೀ ವೆಟರಿನರಿ ಡಾಕ್ಟರೇ ಆಗಲಿ ಊರೂರು ಸುತ್ತಿ ರೈತರ ಕೊಟ್ಟಿಗೆಗಳನ್ನು ಶುಚಿಯಾಗಿಡುವಂತೆಯೂ, ಕಾಯಿಲೆಯ ದನಗಳ ಉಪಚಾರದ ವಿಷಯವೂ, ಕಾಯಿಲೆ ತಗಲಿದ ಎತ್ತುಗಳನ್ನು ಅಲಾಯಿದ ಇಡುವಂತೆಯೂ, ಕಾಯಿಲೆಯಲ್ಲಿ ಸತ್ತವುಗಳನ್ನು ಹೂಣುವಂತೆಯೂ, ಬೋಧಿಸಿದುದಿಲ್ಲ. ರೈತರು ಮಾಮೂಲಿನಂತೆ ಸತ್ತಕೂಡಲೆ ಹೊಲೆಯರಿಗೆ ತಿಳಿಸಿಬಿಡುವರು. ಅವರು ಚರ್ಮಸುಲಿದು ಉಳಿಕೆಯನ್ನು ಅಲ್ಲೇ ಬಿಸಾಡುವದರಿಂದ ಕಾಯಿಲೆಯು ಹರಡಲು ಅನುಕೂಲವಾಗುವದು ಹಂದಿಗಳು ಈ ಕಾಯಿಲೆಯಲ್ಲಿ ಸತ್ತದಕ್ಕೆ ಮಿತಿಯೇ ಇಲ್ಲ

ಶ್ರೀರಾಮ ಚಂದ್ರನು ಅರಣ್ಯವಾಸಕ್ಕೆ ಹೋದವನನ್ನು ವಾಪಸು ಕರತರಲು ಭರತನು ಹೋಗಿದ್ದಾಗ ಶ್ರೀರಾಮನು ಭರತನಿಗೆ ಮೊದಲಾಗಿ ಹೇಳಿದ್ದೇನಂದರೆ—(Go back to Ayodya, & aid the herds—men & tillers with thy bounty) 'ಅಯೋಧ್ಯಕ್ಕೆ ಹಿಂತಿರುಗಿ ಹೋಗಿ ದನಗಾರರಿಗೂ ರೈತರಿಗೂ ಸಹಾಯಮಾಡು' ಧರ್ಮರಾಯನು ಅಜ್ಞಾತವಾಸದಲ್ಲಿ ವಿರಾಟ ನಗರದಲ್ಲಿರುವಾಗ ಕೌರವರು ವಿರಾಟನ ದನಗಳನ್ನು ಕದಡುತ್ತಾರೆ(?) ದನಗಳನ್ನು ಬಿಡುವವರೆಗೆ ತಾನು ಊಟೋಪಚಾರಮಾಡುವದಿಲ್ಲವೆಂಬ ತನ್ನ ನಿಯಮವನ್ನು ತನಗ ಅಪಾಯವಿದೆಯೆಂದು ತಿಳಿದಿದ್ದರೂ, ಬಿಡಲಿಲ್ಲ. ಅಂದರೆ ಆ ಕಾಲದಲ್ಲೇ ದನಕರಗಳು ಕೃಷಿಕನ ಬೆನ್ನೆಲುಬೆಂದೂ, ಕೃಷಿಕನೇ ಸರಕಾರದ ಬೆನ್ನೆಲುಬೆಂದೂ ತಿಳಿದಿತ್ತು ಈಗ ಇಲ್ಲಿ ಯಾದರೋ ಕೃಷಿಕನೂ ಅವನ ದನಕರಗಳೂ ಪಬ್ಲಿಕ್ ನ್ಯೂಸೆನ್ಸ್‌ನಲ್ಲಿ ಹೊರಳಾಡುತ್ತಿವೆ. ಕೃಷಿಕನ ಕೂಗು ಅರಣ್ಯರೋದನವಾಗಿದೆ ಕೃಷಿಕನ ಬಾಳು ಜನ್ಮ ಜನ್ಮಾಂತರಕ್ಕೂ ಬೇಡವಾಗಿದೆ ನಿಜ ಸಂಗತಿ ತಿಳಿಯಬೇಕಾದರೆ ದೇಶವಾತ್ಸಲ್ಯವುಳ್ಳ ಮಹನೀಯರ್ಯಾರಾದರೂ ಬಿಳುಗುಂದ ಗ್ರಾಮವನ್ನೂ ನಲ್ವತ್ತೊಕ್ಲು ಗ್ರಾಮಕ್ಕೆ ಒಂದು ಸಲ ನೋಡಿದರೆ ದನಕರಗಳು ಸತ್ತದ್ದೂ ಕೃಷಿಕನ ಕಷ್ಟವೂ ಗೊತ್ತಾಗ ಬಹುದಲ್ಲದೆ ಅನ್ಯಥಾ ತಿಳಿಯದು.

ಇನ್ನಾದರೂ ತಡಮಾಡದೆ ಸರಕಾರವು ಒಳ್ಳೆ ತರದ ಸೀರಂ ಅಂದರೆ ಮೈಸೂರು ಸರಕಾರದವರು ಉಪಯೋಗಿಸುವ ಸೀರಮನ್ನು ಗಡಿಗಡೀ ತರಿಸುವ ಏರ್ಪಾಡು ಮಾಡಿ ತತ್ಕಾಲಕ್ಕಾದರೂ ಬೇರೆ ಕಡೆಯಿಂದ ಪಶುವೈದ್ಯದಲ್ಲಿ ಪಾಂಡಿತ್ಯವುಳ್ಳ ಒಬ್ಬ ಮೇಲು ಅಧಿಕಾರಿಯನ್ನು ಕರೆಸಿ ರೈತರಿಗ ಇಲಾಖೆಯಿಂದ ನ್ಯಾಯವಾದ ಸಹಾಯ ದೊರೆಯುವಂತೆ ಮಾಡದೆ ಹೋದರೆ ಮುಂದಿನ ವರ್ಷ ರೈತರು ಬಹಳ ಕಷ್ಟವನ್ನು ಪಡಬೇಕಾಗುವದು ಇಷ್ಟಕ್ಕೂ ಮಾಮೂಲಿನ 'ಹಣವಿಲ್ಲ' ವೆಂಬ ಮಾತು ಅಡ್ಡ ಬರಬಹುದು. ಆದರೆ ಉತ್ತಮತರದ ಸೀರಂ ತರಿಸಿ ಹಾಕು ಹಾಕಿದ ಎತ್ತುಗಳ ಮಾಲಿಕರಿಂದ ಸ್ವಲ್ಪ ಚಾರ್ಜನ್ನು ಹೊಂದಿಕೊಳ್ಳುವ ಏರ್ಪಾಡು ಮಾಡಿದರೆ ನಿವೃತ್ತಿಯಾಗಬಹುದಾದ್ದರಿಂದ ಒಡನೆ ಈ ವಿಷಯ ನಿಗಕೊಡಬೇಕಾಗಿ ಕೋರುವ

ತಾ 5—9—1926. ಐ ಪಿ. ಮೊದಪ್ಪ.

ಗಜಛಾಯ.

ಅಯ್ಯಾ,

ಕೆಲವು ವಾರಗಳ ಹಿಂದೆ ಪ. ಸಿ. ಯಂ ವೆಂಕಪ್ಪಯ್ಯನವರು ಅಕ್ಟೋಬರ್ ತಿಂಗಳಲ್ಲಿ ಗಜಛಾಯ ಬಂದಿದೆಯೆಂದು ಮುಹೂರ್ತ ಕಾಲವು ಕೂಡಿಬರುತ್ತದೆಂದು ಬರೆದುದರ ಮೇಲೆ ಒಬ್ಬ ಶಾಸ್ತ್ರಗಳು ಅದರ ತಪಶೀಲನ್ನು ತಿಳಿಸಬೇಕಾಗಿ ಕೇಳಿದ್ದಕ್ಕೆ ಒಪ್ಪಿ ಈವರೆಗೂ ಬಾರದೆ ಇರುವದು ನೋಡಿ ತುಂಬ ವ್ಯಸನ. ಸಮಯ ಸಮೀಪಿಸುತ್ತಾ ಬಂತು ಆ ಸಂಗತಿ ತಪಶೀಲಾಗಿ ತಿಳಿಸಬೇಕಾಗಿ ಭಕ್ತ ಜನಾದಿಗಳ ಪ್ರಾರ್ಥನೆ

"ಒಬ್ಬ ಭಕ್ತ"

ಸಂಪಾಜೆ ಆಸ್ಪತ್ರೆ.

ದಕ್ಷಿಣಕನ್ನಡ ಡಿಸ್ಟ್ರಿಕ್ಟ್‌ಬೋರ್ಡಿನವರು ಉಪ್ಪಿನಂಗಡಿ ತಾಲೋಕಿಗೆ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿರುವದಾಗಿಯೂ ಅದನ್ನು ಸಂಪಾಜೆಯಲ್ಲಿ ಇಡದೆ ಬೇರೆ ಯಾವುದೋ ಗ್ರಾಮದಲ್ಲಿ ಇಡುವದಾಗಿಯೂ ತಿಳಿಯುತ್ತೇನೆ ಹೀಗೆ ಬೇರೆ ಗ್ರಾಮದಲ್ಲಿ ಇಡಲು ಕಾರಣವೇನೆಂದರೆ—ಬೋರ್ಡಿನವರು ಕೊಡುವ ಹಣವು ಆಸ್ಪತ್ರೆಯನ್ನು ತೆರೆಯಲು ಸಾಕಾಗದ್ದರಿಂದ ಆ ಗ್ರಾಮದವರು ತುಂಬಾ ಹಣ ಹದಲಿಕೆ(?) ಕೊಡುವದಾಗಿ ಹೇಳಿದ್ದೇ ಆದರೆ ಆ ಗ್ರಾಮವು ಖಾಯಿಲೆಯ ಹಾವಳಿಯ ಮಧ್ಯಸ್ಥಳವಲ್ಲ. ಸಂಪಾಜೆಯಲ್ಲಿ ಇಡುವದು ಅತಿ ಅವಶ್ಯವಾಗಿದೆ ಸಂಪಾಜೆಗ ಆಸ್ಪತ್ರೆ ಅವಶ್ಯವೆಂತ ಜಿಲ್ಲಾ ಸರ್ಜನರು ಒಪ್ಪಿದ್ದಾರೆಂತ ತಿಳಿಯುತ್ತೇನೆ

"ಈಗ ಕೊಡಗು ಸರಕಾರವಾಗಲೀ ಡಿಸ್ಟ್ರಿಕ್ಟ್‌ಬೋರ್ಡಾಗಲೀ ಕನ್ನಡಜಿಲ್ಲೆ ಡಿಸ್ಟ್ರಿಕ್ಟ್‌ಬೋರ್ಡಿನ ಸಂಗಡ ಸಹಕರಿಸಿದರೆ ಸಂಪಾಜೆಯಲ್ಲಿ ಆಸ್ಪತ್ರೆಯಲ್ಲಿ ಆಸ್ಪತ್ರೆ ಇಡುವದು ಖಂಡಿತವಾದೀತು. ಈ ಸಂಗತಿ ಮೊದಲೇ ಅಂದರೆ ಮೆ ಸ್ಟ್ಯಾರವರು ಕಮೀಶನರಾಗಿದ್ದಾಗ್ಯೆ ಪತ್ರವ್ಯವಹಾರ ನಡೆದ ಸ್ಥಿತಿಯಾಗಿದೆ ಆಗ ತೀರ್ಮಾನವೇನಾಯಿತೋ ನನಗೆ ತಿಳಿಯದು. ಹೇಗಾದರೂ ಪ್ರಯತ್ನಿಸಿ ಕೊಡಗು ಡಿಸ್ಟ್ರಿಕ್ಟ್‌ಬೋರ್ಡಿನಿಂದಲೋ ಕೊಡಗು ಸರಕಾರದಿಂದಲೋ ತಕ್ಕ ಧನಸಹಾಯಕೊಟ್ಟರೆ ಸಂಪಾಜೆಗೆ ಆಸ್ಪತ್ರೆಯಾದೀತು. ಕೊಡಗ ಸಂಪಾಜೆನಾಡಿನವರು ಬದುಕಿಕೊಂಡಾರು. ಕೊಡಗಿನ ಕೌನ್ಸಿಲರುಗಳೂ ಡಿಸ್ಟ್ರಿಕ್ಟ್‌ಬೋರ್ಡ್‌ಮೆಂಬರುಗಳೂ ಈ ಸ್ಥಿತಿಯನ್ನು ಉಪಯೋಗಿಸಿಕೊಂಡು ಸಹಾಯಮಾಡಬೇಕೆಂದು ಕೋರುತ್ತೇನೆ.

"ಬ್ಯಾರಗೆಡ್ಡೆ"

ಪತಿವ್ರತಾ ಧರ್ಮ.

ಹಿಂದೂಧರ್ಮದ ಪ್ರಕಾರ ಸ್ತ್ರೀಯರಿಗೆ ಪತಿವ್ರತಾ ಧರ್ಮವೇ ಅತಿ ಶ್ರೇಷ್ಠವಾದ ಧರ್ಮವು. ಪತಿವ್ರತಾಧರ್ಮವೆಂದರೆ ಪರಪುರುಷನನ್ನು ನೋಡದೆ ಇರುವದೆಂದು ಕೆಲವರು ತಿಳಿದುಕೊಂಡಿರುವರು. ಇಷ್ಟು ಮಾತ್ರವೇ ಅಲ್ಲ ಈ ವಿಷಯವಾಗಿ ಭಾಗವತದಲ್ಲಿ ಹೇಳಿರುವದೇನಂದರೆ :—

"ತನ್ನ ಪತಿಯನ್ನೇ ದೈವವೆಂದು ನಂಬಿ ಅವನನ್ನು ಆಚರಿಸುವುದು, ಪತಿಯ ಮನಸ್ಸಿಗ ಅನುಕೂಲವಾಗಿ ನಡೆಯುವುದು ಪತಿಯ ಬಂಧುಗಳನ್ನು ಪ್ರೀತಿಸುವುದು, ಪತಿಯ ಶ್ರೇಯಸ್ಸಿಗಾಗಿ ವ್ರತಗಳನ್ನು ನಡೆಸುವುದು ಇವೆಲ್ಲವೂ ಸ್ತ್ರೀಯರಿಗೆ ಉತ್ತಮ ಲಕ್ಷಣಗಳು. ತಮ್ಮ ಮನೆಗಳನ್ನು ಆಗಾಗ ಸಾರಿಸಿ, ಗುಡಿಸಿ ರಂಗೋಲೆಗಳಿಂದಲಂಕರಿಸುವುದು ಶೇಷವಾಗಿ ಮನೆಯನ್ನು ಬಿಟ್ಟು ಹೊರಗೆ ಸಂಚಾರಮಾಡದಿರುವುದು, ಮನೆಯಲ್ಲಿರುವ ಪಾತ್ರ ಪದಾರ್ಥಗಳನ್ನು ಶುದ್ಧಮಾಡುವುದು, ತಾವೂ ವಸ್ತ್ರಾಭರಣಗಳಿಂದಲಂಕರಿಸಿಕೊಳ್ಳುವುದು, ತಮ್ಮ ಪತಿಗೆ ಬೇಕಾದ ಇಷ್ಟ ವಸ್ತುಗಳನ್ನು ಆಗಾಗ ಸಿದ್ಧಪಡಿಸುವುದು. ವಿನಯದಿಂದಲೂ, ಇಂದ್ರಿಯ ನಿಗ್ರಹದಿಂದಲೂ, ಸತ್ಯವಾಗಿಯೂ, ಪ್ರಿಯವಾಗಿಯೂ ಇರುವ ಮಾತುಗಳಿಂದಲೂ ಪತಿಯನ್ನು ಸಂತೋಷಪಡಿಸುವುದು. ಕಾಲೋಚಿತವಾಗಿ ಆತನನ್ನು ಪ್ರೀತಿಯಿಂದ ಸೇವಿಸುವುದು. ಇದ್ದುದರಲ್ಲಿ ತೃಪ್ತಿ, ಅತ್ಯಾಶೆಯಿಲ್ಲದಿರುವುದು. ಯಾವಾಗಲೂ ಬೇಸರದೆ ಮನೆಕೆಲಸಗಳನ್ನು ಆಸ್ಥೆಯಿಂದ ನಡೆಸುವುದು ಪತಿಶುಶ್ರೂಷೆಯೇ ದೊಡ್ಡ ಧರ್ಮವೆಂದು ತಿಳಿದು ಯಾವಾಗಲೂ ಪತಿಯ ಮನಸ್ಸಿಗೆ ಪ್ರಿಯವಾಗಿಯೂ, ಸತ್ಯವಾಗಿಯೂ ನಡೆಯುವುದು. ಯಾವ ಸಂದರ್ಭದಲ್ಲಿಯೂ ಎಚ್ಚರ ತಪ್ಪದೆ ನಡೆದುಕೊಳ್ಳುತ್ತ ಯಾವಾಗಲೂ ಶುಚಿಯಾಗಿರುವುದು. ಈ ನಿಯಮಗಳಿಂದ ಸ್ತ್ರೀಯರು ಸ್ನೇಹಪೂರ್ವಕವಾಗಿ ಪತಿಸೇವೆಯನ್ನು ಮಾಡಬೇಕು. ಪುರುಷನು ಮಹಾಪಾತಕಿಯಾಗಿದ್ದರೂ ಕೂಡ ಸ್ತ್ರೀಯರು ಅತ್ಯಂತ ಪ್ರೀತಿಯಿಂದಲೂ, ವಿನಯದಿಂದಲೂ ವರ್ತಿಸುತ್ತಾ ಬಂದರೆ ಅವನು ಕ್ರಮೇಣ ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗಕ್ಕೆ ಬರುವನು, ಮತ್ತು ತನ್ನ ಕೈಹಿಡಿದ ಪುರುಷನು ರೋಗಿಷ್ಟನೇ ಆಗಲೀ, ಕುರೂಪಿಯೇ ಆಗಲೀ ಸ್ತ್ರೀಯರು ಅವನೇ ದೇವರೆಂದು ನಂಬಿ ಅವನ ಸೇವೆಯನ್ನು ಆಸ್ಥೆಯಿಂದ ಮಾಡುತ್ತಾ ಬಂದರೆ ಅವರ ಪತಿವ್ರತಾ ಧರ್ಮದ ಮಹಿಮೆಯಿಂದ ಅವನಿಗೆ ಎಷ್ಟೋ ಸುಖವುಂಟಾಗುವುದು ಲಕ್ಷ್ಮೀ ದೇವಿಯು ಪರಮ ಪುರುಷನನ್ನು ಹೇಗೋ, ಹಾಗೆ ಸ್ತ್ರೀಯರು ತಮ್ಮ ಪತಿಯನ್ನೇ ಪರದೈವವೆಂದು ಭಾವಿಸಿದ್ದ ಪಕ್ಷದಲ್ಲಿ ಅಂತಹ ಸ್ತ್ರೀಯರು ತಮ್ಮ ಪತಿಗಳೊಡನೆ ವಿಷ್ಣು ಲೋಕದಲ್ಲಿ ಲಕ್ಷ್ಮೀ ನಾರಾಯಣರಂತೆಯೇ ನಿತ್ಯ ಸಂತೋಷಿಗಳಾಗಿರುವರು"

ಆದುದರಿಂದ ಇಂಥಾ ಗುಣಗಳಲ್ಲಿ ಮಾದರಿ (Model) ಯೆನಿಸಿಕೊಂಡ ಅಹಲ್ಯಾ, ದ್ರೌಪತಿ, ಸೀತಾ, ತಾರೆ ಮಂಡೋದರಿಗಳೆಂಬ 'ಪಂಚ ಸ್ತ್ರೀಯರ ಚರಿತ್ರೆಗಳನ್ನೂ ಸದ್ಗುಣಗಳನ್ನೂ ಪುಸ್ತಕಗಳಲ್ಲಿ ಓದಿ ತಿಳಿದುಕೊಳ್ಳಬೇಕು. ಇದಲ್ಲದೆ ಸ್ತ್ರೀಯರಿಗ ಯೋಗ್ಯವಾದ ಬುದ್ಧಿವಾದಗಳನ್ನು ಹೇಳಿರುವ ರಾಮಾಯಣ, ಭಾರತ ಮತ್ತು ಭಾಗವತ ವಗೈರೆಗಳನ್ನು ಓದಿ ತಾವೂ ನಮ ಆದರ್ಶಾನುಸಾರವಾಗಿ ನಡೆದುಕೊಂಡು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸುವದನ್ನು ಪ್ರತಿ ಹಿಂದೂ ಸ್ತ್ರೀಯರೂ ಕರ್ತವ್ಯವಾಗಿಯಿಟ್ಟುಕೊಳ್ಳಬೇಕೆಂದು ಭಾವಿಸುತ್ತೇನೆ ಪತಿವ್ರತಾ ಧರ್ಮದ ಮಹಿಮೆಯಿಂದಲ್ಲವೇ ಸಾವಿತ್ರಿಯು ಸತ್ತುಹೋದ ತನ್ನ ಪತಿಯ ಜೀವವನ್ನು ಹಿಂದಕ್ಕೆ ಪಡೆದುದು. ಇಂಥಾ ದೃಷ್ಟಾಂತರಗಳು ನೂರಾರು ಇವೆ ಪತಿವ್ರತಾ ಮಹಿಮೆಯು ಸಾಮಾನ್ಯವಲ್ಲ ಯೋಗಿಗಳು ಅಷ್ಟಾಂಗ ಯೋಗಗಳನ್ನೂ ಸಾಧನ ಮಾಡಿ ಸಿದ್ಧಿಪಡಿಸಿದ ಫಲಗಳು ಸುಲಭವಾಗಿ ಈ ಪತಿವ್ರತಾ ಧರ್ಮದಿಂದಲೇ ಲಭಿಸುವದಲ್ಲವೇ. ಗಂಧರ್ವರು ಕೌರವನನ್ನು ಕಟ್ಟಿ ಹಾಕಿದ್ದಾಗ ವೀರಾದಿ ವೀರರಾದ ಪಾಂಡವ ಕೌರವರ ಪೈಕಿ ಯಾವ ಪುರುಷರಿಗೂ ಶಕ್ಯವಲ್ಲದ ಗಂಟು ಪತಿವ್ರತೆಯಾದ ದ್ರೌಪತಿ ಮಾತೆಯ ಚರಣ ಸ್ಪರ್ಶದ ಮಾತ್ರಕ್ಕೆ ಬಿಚ್ಚಿಹೋಯಿತಲ್ಲವೇ. ಹೆಚ್ಚಿಗೆ ಹೇಳತಕ್ಕದ್ದೇನು? ಆದ್ದರಿಂದ ನಮ್ಮ ಅಕ್ಕತಂಗಿಯರೂ, ಮಾತೆಗಳೂ ನಮ ಈ ವಿಷಯಗಳನ್ನು ತಿಳಿದುಕೊಂಡು' ಅದೇ ಪರ ವಿದ್ಯೆಯೆಂದು ಅನುಸರಿಸಿ ತಮಗೂ ತಮ್ಮ ಕುಲಗಳಿಗೂ, ಸಮಾಜಕ್ಕೂ ಮತ್ತು ದೇಶಕ್ಕೂ ಶ್ರೇಯಸ್ಸನ್ನು ತರಬೇಕಾಗಿ ನನ್ನ ಬಿನ್ನಹ.

ದರ್ಶಕ.

786

ಮನಾದ ಮಾಲು. ನೋರಿಮಾಡಿ ಕರಿಸಿರಿ.

ಬೆಳ್ಳೂರು ಉಂಡೆನಸ್ಯ.

ನಾವು ಕಳೆದ 30 ವರ್ಷಗಳಿಂದಲೂ ಹಸನಾದ ನಸ್ಯ ತಯಾರುಮಾಡಿಸಿ ಮೈಸೂರು ಸೀಮೆ ಮತ್ತು ಇತರ ದೇಶಗಳಿಗೆ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳನ್ನು ಪಡೆದಿರುತ್ತೇವೆ. ನಮ್ಮ ನಸ್ಯವು ಮೂಗಿಗೆ ಸಂಬಂಧಪಟ್ಟ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ. ಒಂದು ತಿಂಗಳಿಟ್ಟರೂ ಕೆಡುವುದಿಲ್ಲ. ಕೆಟ್ಟರೆ ವಾಪಸು ಪಡೆಯುತ್ತೇವೆ. ಒಂದು ಸಾರಿ ತರಿಸಿ ಪರೀಕ್ಷಿಸಿರಿ.

ನಮ್ಮ ನಸ್ಯವು ಈ ಮೊದಲು ಸೇರು 1ಕ್ಕೆ 1—4—0, 1—8—0 ರೂ. ಸಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂದ ಡಿಸೆಂಬರು ಅಂತ್ಯದೊಳಗೆ ಬರತಕ್ಕ ಆರ್ಡರುಗಳಿಗೆ 1 ವರ್ಷದ ವರೆಗೂ ಈ ಕೆಳಗೆ ಕಂಡ ದರದಂತೆ ಕಳುಹಿಸುತ್ತೇವೆ. ವಾಯಿದೆ ಕಳೆದನಂತರ ಬರತಕ್ಕ ಆರ್ಡರಿಗೆ ಸೇರು 1ಕ್ಕೆ 0—4—0 ಹೆಚ್ಚಿಸಲ್ಪಡುವುದು.

ದರ:	24 ತೊಲೆ	ಸೇರು	1ಕ್ಕೆ	0—12—0,
	,,	,,	3ಕ್ಕೆ	2— 1—0,
	,,	,,	6ಕ್ಕೆ	4— 0—0,
	,,	,,	9ಕ್ಕೆ	6— 0—0,
	,,	,,	12ಕ್ಕೆ	7— 8—0,
ಹಸನಾದ ಪುಡಿ	,,	,,	1ಕ್ಕೆ	1—10—0,
,,	,,	,,	5ಕ್ಕೆ	2— 0—0.

ಚೀಟಿ, ನಸ್ಯ ವಗೈರೆಗೆ ಆಗುವ ಹೊಗೆಸೊಪ್ಪು, ನಸ್ಯದ ಡಬ್ಬಿ, ಡೀಕು ಸಹ ನಮ್ಮಲ್ಲಿ ಸಿಕ್ಕುತ್ತೆ.

ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜೆಂಟರುಗಳು ಬೇಕಾಗಿದೆ.

ಸ್ಯಾಂಪಲ್ ಅಪೇಕ್ಷಿಸುವವರು ೪ಅಣೆ ಸ್ಟಾಂಪು ಕಳುಹಿಸತಕ್ಕದ್ದು.

ಬಾಯಂ ಆರ್ಡರ್ ಕೊಟ್ಟು ನಮ್ಮ ಬಿಜಿನೆಸಿಗೆ ದಾಖಲಾದವರಿಗೆ ಕಾಲಕ್ಕೆ ಸರಿಯಾಗಿ ಆರ್ಡರ್ ನಿರೀಕ್ಷಣೆ ಇಲ್ಲದೆ ಹಸನಾದ ಮಾಲು ಕಳುಹಿಸುತ್ತೇವೆ.

ಹೆಚ್ಚಿನ ವಿವರಕ್ಕೆ ಮ್ಯಾನೇಜರವರಿಗೆ ಬರೆಯತಕ್ಕದ್ದು.

ಮ್ಯಾನೇಜರ್ ಎ. ಮಹಮ್ಮದ್ ಹನೀಫ್.

ನಮ್ಮ ವಿಳಾಸ:—

ಯಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,

ನಸ್ಯದ ವ್ಯಾಪಾರಿಗಳು,

ಬೆಳ್ಳೂರು ಪೋಸ್ಟ್.

52—4 ಮೈಸೂರು ಡಿಸ್ಟ್ರಿಕ್ಟ್

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಉಚಿತ ಒಪ್ಪಂದದ ಸಾಲ ಪತ್ರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವೆ ಬರೆದು ರಿಜಿಸ್ಟ್ರಾರವರಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡದಿದ್ದರೆ ಅದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಂಗಳೂ ನಮ್ಮಲ್ಲಿ ಮಾರಾಟಕ್ಕಿವೆ.

ತಯಾರಾಗುತ್ತಿವೆ.

ನಮ್ಮ ದೇಶದ ಸಹಕಾರಿ ಸಂಘಗಳ ಅವಶ್ಯಕತೆಗೆ ಸರಿಯಾಗಿ ತಯಾರಿಸಲ್ಪಟ್ಟ ಪಾಸ್ ಬುಕ್ಕುಗಳು ನಮ್ಮಲ್ಲಿ ಪ್ರಿಂಟಾಗುತ್ತಿವೆ. ಬೇಗನೆ ಮಾರಾಟಕ್ಕೆ ತಯಾರಾಗುವವು. ಕೆಲವು ಪುಸ್ತಕಗಳು ಮಾತ್ರ ತಯಾರಾಗುವುದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ.

" ಕೊಡಗು " ಆಫೀಸು, ಮ್ಯಾನೇಜರ್.

ಮಡಿಕೇರಿ

ಚಳಿಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಝ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧ.

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೩—೦

ಏಜಂಟರು ಬೇಕು, ಕೊಡಗಿನ ಪೋಸ್ಟ್ ಮಾಸ್ಟರುಗಳು ತಮ್ಮೂರಿನ ಮೂರು ಜನ ಔಷಧದ ವ್ಯಾಪಾರಿಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಬ್ಲಾಟಿಂಗ್ ಪೇಪರು ಪುಕ್ಕಟೆ.

12—2 ಕರ್ಣಿಕ ಬ್ರದರ್ಸ್,

ಗಿರಗಾಂವ, ಮುಂಬಾಯಿ.

Apply for our shooting Season's Clearance Sale Catalogue ,of Brand New Goods.

10 to 25 percent Reductions in Prices.

No License Required:! **No License Required**



Webley and Scott Air Pistol, cal ·177 or ·22, bore Powerful and Accurate· complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun· Handsome and Accurate, takes B· S· A· Patern No· 1 Slugs and Darts· expressly recommendable for Target Practice Rs 15/ Free delivery·

Brilliant Search Light Lamp for Night Sports Rs 30/— Free delivery·

No License required to purchase or to possess the above items.

Relie D· B· B L	12 bore guns	Rs. 60/—	and upwards	
Do· S. B B L	12	do	do 40/—	do
D B. M L Guns			,, 45 -	do·
S B M L. do.			,, 30/—	do·
S B. B L Rifles			,, 25/—	do·
B L Revolvers and Pistols			, 30/—	do.

Arms, Ammunition and shooting requisitesof almost every kind andquality offered at exceptionally favourable rates. ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS,
Largest Importers of Firearms and Ammunition, Cheapest priced firm in India,

24. 8 210 Abdul Rehman Street, BOMBAY·

೧೬ ಚಿತ್ರಪಟಗಳುಳ್ಳದ್ದು

ಸಚಿತ್ರ ಬೃಹಸ್ಪತಿ ಕಥೆ.

೭೦ ಕಥೆಗಳು ೧೫೨ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ, ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೧ ಕಥಾಂತರದಲ್ಲಿ ಚಿತ್ರಕಥೆ ಚಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯಬರುವುವು. ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವುದು. ೪ ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨—೦—೦. ಟಪ್ಪಾಲು ಹಾಸಲು ೦—೮—೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗವೊಂದ್ದು ೭೧೩ ಪುಟಗಳು ಕ್ರಯ ೨—೪—೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೩೪೭ ಪುಟಗಳು ೧—೮—೦. ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

52—15 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ನೋಟೀಸ್.

ಜಮೀನ್‌ದಾರರ ಸಂಘದ ಆರ್ಗನೈಜರ್ ಕೆಲಸ ಮಾಡಲು ಜನರು ಬೇಕಾಗಿದ್ದಾರೆ ಅಪೇಕ್ಷೆ ಇರುವವರು ಜನರಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಈ ಕೆಲಸವನ್ನು ವಹಿಸಿಕೊಳ್ಳಬೇಕಾದರೆ ಯಾವ ಶರತ್ತುಗಳಿಗೆ ಒಳಪಡಬೇಕೆಂಬುದನ್ನು ಸಂಘದ ಮಡಿಕೇರಿ ಆಫೀಸಿನಿಂದ ತಿಳಿದುಕೊಳ್ಳಬಹುದು.

ಮಡಿಕೇರಿ, ಸಿ. ಯನ್. ವೆಂಕಪ್ಪಯ್ಯ,

ತಾ. 1—9—1926. ಜನರಲ್ ಸೆಕ್ರೆಟರಿ.

EMPIRE OF INDIA LIFE ASSURANCE CO., LTD·

(Established 1897)

ALL WITH PROFT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch· Madras Branch

152 Commercial Street· 9 & 10 Second Line Beach

C· K· Chengappa·
Special Agent· Riverside Estate·
24—7· Siddapur·

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—'26 ಮ್ಯಾನೇಜರ್,

ಮಡಿಕೇರಿ. " ಕೊಡಗು " ಆಫೀಸು.

ಕನ್ನಡ **ಸ್ವಧರ್ಮ** ಮಾಸಪತ್ರಿಕೆ

ಸಂಪಾದಕರು:—ದ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡುವುದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಚೇರ್ಸ)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ

(೨) ಕೂಡುವದಕ್ಕೆ ಆರಾಮು.

(೩) ತಾಳಿಕೆಯಲ್ಲಿ ಗಟ್ಟಿ.

(೪) ತಗಣಿಗಳು ಸೇರುವದಿಲ್ಲ

(೫) ಎತ್ತಾಡಲಿಕ್ಕೆ ಬರುವಷ್ಟು ಹಗುರ.

ಇತ್ಯಾದಿ

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ಸಮರ್ಪಣೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—14 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12 870
ಒಪ್ಪೊಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ವಿಶೇಷವಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ಮಾಡಿದ ಅದರ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6-4 0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡಂಟರು	ಟ್ರೆಜರರ್
ಕೂಪಂಡಿರ ಕುಟ್ಟಪ್ಪನವರು, ರಾಯ್ ಬಹದ್ದೂರ್	ಯಂ. ಬುಜಂಗರಾಯರು ಬಿ ಎ , ಬಿ.ಎಲ್

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ , ಬಿ.ಎಲ್

ತಾರೀಖು 1—7—1936

ಒಂದು ಪ್ರಬಲವಾದ ಪ್ರಶ್ನೆ.

ನಿಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆ ಇಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪೆನಿಯ ರೂಲ್ಸುಗಳು, ಶರತ್ತುಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರ್‌ನಲ್ಲಿ ಪರದೇಶಿಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೌಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ನಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ, ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ,	ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು.	ಪ್ರೊಪ್ರೈಟರ್,
	ಖಾದಿಭಂಡಾರ,

52—24.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕ್ಯಾಲಿಫೋರ್ನಿಯನ್ ಗೋಲ್ಡ್ ಎಂಬ ಥಳಥಳಿಸುವ ಬಂಗಾರದಿಂದ ತಯಾರಿಸಿದೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು ಇದರ ಬಣ್ಣ ಮಾಸಿ ಹೋಗದು ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಿಲ್ಲ. ಒಂದು ಜೊತೆಯಿದ್ದರೆ ಒಂದು ಜನ್ಮವೆಲ್ಲಾ ಉಪಯೋಗಿಸಬಹುದು ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಬಂಗಾರಕ್ಕೆ ಸರಿಸಮನಾದ ಸೀಮೆಯ ಬಂಗಾರದಿಂದ ಕಟ್ಟಿಸಿ ಕಟ್ಟಿರವದು. ಇದರ ಪ್ರಕಾಶವು ಸಾಕ್ಷಾತ್ ವಜ್ರದ ಕಲ್ಲುಗಳಿಗೆ ಸರಿಯಾಗಿರುವದು ಇದರ ಬಣ್ಣವು ಕೆಡದಂತೆ ವಿಲಾಯಿತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಬಂಗಾರದ ಗಿಲೀಟು ಕೊಟ್ಟಿರುವದು ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3—0—0

„ „ ಕೆಂಪು ಕಲ್ಲಿನ „ „ 3—8—0

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚ ಬೆಳ್ಳಿಯಿಂದ ತಯಾರಿಸಿ ಬಂಗಾರದ ಗಿಲೀಟು ಮಾಡಿದೆ ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು ನೋಡಲು ಬಂಗಾರದ ಹಾಗೇ ಇರುವದು ಬಣ್ಣಕ್ಕೆ 3 ವರ್ಷ ಗ್ಯಾರಂಟಿ

3 ಎಳೇ ಸರ 1ಕ್ಕೆ ರೂ. 3—4—0

4 „ „ „ 4—0—0

4 „ „ „ 5—4—0

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 1223, ಮದರಾಸು

52—38

ನೈಟ್ರೇಟ್ - ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15 16% ಅಂದರೆ ಮೀನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಭತ್ತ ಕಬ್ಬು ತೆಂಗು ಅಡಿಕೆ ಹೂವು, ಹೊಗೆಸೊಪ್ಪು ತರಕಾರಿ ಮೊದಲಾದವುಗಳಿಗೂ ಕಾಫಿ, ಚಹ ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡಿಯಂ ಮಗ್ನೇಸಿಯಂ ವ ಪೊಟಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100-200 ರಾತ್ತಲ್ಲು ಸಾಕಾಗುವದು ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52-15

CHILEAN NITRATE COMMITTEE
Post Box 469, CALCUTTA

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೆ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯವನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು ಅಜೀರ್ಣ ಮಲಬದ್ಧತೆ ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.



ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೆ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಿಸಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕಚೇರಿ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ,

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

ಟೆಲಿಗ್ರಾಫ್ ಆಡ್ರೆಸ್ ಮಿಸ್ರಿ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—11

Printed & published by P. I Belliappa, at "Kodagu" Press, Mercara "Kodagu" Ltd.

If not delivered please return to
"KODAGU" OFFICE MERCARA

ಕೊಡಗು.

[ಶಕ್ತ್ಯೈನ ಧೀಶತದಯಾಜ ವಿದ್ಯಾ ... ಪ್ರಯತ್ನಶಾಃ || ... ರಾಜ್ಯ ಸಂಪದಾ ||]

ಸಂಪಾದಕ—ಗುಂಡ್ಯಂಡ ಬಿ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೬] ಕೊಡಗು, ಸ ೧೯೨೬ನೇ ಇಸವಿ ಸೆಪ್ಟೆಂಬರ್ ತಾರೀಖು ೧೭ನೇ ಶುಕ್ರವಾರ [ಸಂಚಿಕೆ [illegible]

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties	4 lbs- Rs 30/ 4½ lbs- Rs. 33/ 5 lbs- Rs 36/-Doz	
Digging forks 4 prongs	.. . ..	Rs 48/ Doz
Mamooty forks 4 prongs	.. .. ..	Rs 39/ Doz
Felling axes — Each	. .. ..	Rs. 3/ & 3/4/
Planting bars— Each	. .. ..	,, 3/12/
Weeding forks — Each	.. .. .	,, 1/12/
Garden trowels	.. . .	,, 1 12

GET IT AT SPENCERS- The House for all requisites

52—35

ಸಾ ಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1923—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳು. —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 15,94,8) ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹಕ್ಕು ಬೋನಸ್ ಬವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವನ ಪರ್ಯಂತದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ

1923ರಲ್ಲಿ—ರೂ 1,74,00,000
1924 ,, 2,37,00,000
1925 ,, 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸಮಯವು

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಸ್. ಆರ್. ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸೆಕ್ರೆಟರಿ.

52—24

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವದು, ತಲೆಯ ಕಣ್ಣಿನ ತಿರಿಯಿಂದ ಸೀಳು ಸೋರುವದು ಕಿವಿ ಮಂದ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವದು, ನರದ ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಉಚಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ನೆರೆತಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಬೆಳ್ಳಗಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ. — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುತ್ತಿರು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ನೋವು, ಹೊಟ್ಟೆಯಲ್ಲಿ ಉರಿಯುವದು ವೀರ್ಯನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು ಹೋಗುವದು, ... ಬರುವಿಕೆ ಮೂತ್ರ ಕಡಿಮೆಯಾಕೆ ... ಮೂತ್ರನಾಳದಲ್ಲಿ ... ಇವುಗಳಿಗೆ ಮದ್ದು ... ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬಾಟ್ಲಿ 1, 3, 6ಕ್ಕೆ ರೂ 1—1—0, 3—3—0, 6—12—0.

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವೆಲ್ಲ ಉದುರಿ ಬೀಳುವದು. ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂ 1, 1 ಡಜನಿಗೆ 3-8-0

ಕಟುಕಷಾಯ ಮಲೇರಿಯ ರಕ್ಷೆ.—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸುವದರಿಂದ ಗುಣವಾಗದಿರುವ ಮಲೇರಿಯ, ದಿನಬಿಟ್ಟು ಬರುವ ಜ್ವರ 3—4 ದಿವಸಕ್ಕೊಂದಾವರ್ತಿ ಬರುವ ಜ್ವರ, ನಡುಗಿ ಬರುವ ಜ್ವರ, ... ದೋಷದಿಂದ ಬರುವ ಜ್ವರಗಳಿಗೆ ... ಗುಣಕೊಡುತ್ತದೆ ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—0—0,

ಪಟ್ಟಿ ಬೇಕಾದರೆ ಬರೆದು ಕೇಳಿರಿ,

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆಂಟನಾಡಿ.

52—39

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ದಾತುಪುಷ್ಟಿಕರ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರಸ್ಖಲನ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವವು. ಧಾತು ಪುಷ್ಟಿಕರ, ವೀರ್ಯವರ್ಧಕ, ರಕ್ತಶೋಧಕ ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯ ಸ್ತಂಭಕ, ಗರ್ಮಿ, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು ರಕ್ತದ ಬಾಧೆಗಳು, ಕಟಿಶೂಲೆ ... ಗುಣವಾಗಿ ... ರಕ್ತ ... ಸಂಪೂರ್ಣ ... ಉಂಟಾಗುತ್ತದೆ ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುವವು. ಡಿಪ್ಪಿಯಲ್ಲಿ ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕಹಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ ತೈಲದ ಬಾಟ್ಲಿ ೧ಕ್ಕೆ ರೂ ೨—೧೨—೦.

ಪ್ರಮೇಹನಿವಾರಣೆ— ಇದರ ಸೇವನೆಯಿಂದ ಮೂತ್ರನಾಳದಿಂದ ಕೀವು ಹರಿವಂಥ ಹೋಗತಕ್ಕ ಕೀವು, ಉರಿ ... ಗುಣವಾಗುವದು ತೈಲ ... ಬಾಟ್ಲಿ ೧ಕ್ಕೆ ರೂ ೨—೮—೦ ... ಸಹಿತ ಬಿವರದ ...

ಅಂಚೆಯ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು

ವಿಳಾಸ,—

ವೈದ್ಯ ಶ್ರೀ ಎಲ್ ... ಮತ್ತು ಕಂಪೆನಿ.

... ನಂ 6. ಪೋಸ್ಟ್ ಬಸರೂರು, ಉತ್ತರ ಕಾನಡಾ

ARMS & AMMUNITION MART
Mahomedally-Noorbhoy

321 Abdul Rehman Street, near
Crawford Market, BOMBAY 3
Telegraphic Address—"SHOOTER"
Bombay.

[52—3] Please write for Reduced net
prices list for 1926

"ಕೊಡಗು"

ಸ್ ೧೯೨೬ನೇ ಇಸವಿ ಸೆಪ್ಟೆಂಬರ್ ತಾ. ೧೭ನೇ ಶುಕ್ರವಾರ

ರಾಷ್ಟ್ರೀಯ ಕಾಂಗ್ರೆಸ್ಸಿನ ಒಗ್ಗಟ್ಟು.

ಇಂಡಿಯನ್ ನೇಶನಲ್ ಕಾಂಗ್ರೆಸ್ ಸಭೆಯೊಂದೇ ಒಟ್ಟು ಹಿಂದುಸ್ಥಾನದ ಜನರ ಒಗ್ಗಟ್ಟನ್ನು ಒಳಕೊಂಡಿರುವ ರಾಷ್ಟ್ರೀಯ ಸಂಸ್ಥೆಯೆಂಬುದರಲ್ಲಿ ಸಂಶಯವಿಲ್ಲ. ಮಹಾತ್ಮ ಗಾಂಧಿಯವರ ಅಸಹಕಾರ ತತ್ವವು ಈ ರಾಷ್ಟ್ರೀಯ ಸಭೆಯು ಸ್ವೀಯವಾಗಿ ಅನುಸರಿಸಲ್ಪಟ್ಟನಂತರ ಕಾಂಗ್ರೆಸ್ಸಿನಲ್ಲಿ ನ್ಯಾಯವಿಧಾಯಕ ಸಭೆಗಳೊಳಗೆ ಪ್ರವೇಶಿಸಿ ದೇಶೋನ್ನತಿಯ ಕೆಲಸ ಮಾಡುವದರ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದವು. ಕೌನ್ಸಿಲುಗಳಿಗೆ ಮೆಂಬರುಗಳಾಗಿ ಹೋಗಲೇ ಕೂಡದೆಂದು ರಾಷ್ಟ್ರೀಯ ಮಹಾಸಭೆಯಲ್ಲಿ ತೀರ್ಮಾನವಾದಂತೆ 1920ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸಭೆಗೆ ಸೇರಿದವರ್ಯಾರೂ ಉಮೇದುವಾರರಾಗಿ ನಿಲ್ಲಲಿಲ್ಲ. ಮೂರು ವರ್ಷಗಳನಂತರ ಇನ್ನೊಂದು ಚುನಾವಣೆಯು ನಡೆಯುವದರೊಳಗೆ ದೇಶಬಂಧು ದಾಸ್‌ರವರ ನಾಯಕತ್ವದಲ್ಲಿ ಸ್ವರಾಜ್ಯಪಕ್ಷವೆಂಬ ಹೆಸರಿನ ಒಂದು ಹೊಸ ಪಾರ್ಟಿಯು ಕಾಂಗ್ರೆಸ್ಸಿನಲ್ಲಿ ಹೊರಟಿತು. ಕಾಂಗ್ರೆಸ್ಸಿನವರು ಕೌನ್ಸಿಲುಗಳಿಗೆ ಮೆಂಬರುಗಳಾಗಿ ಸೇರಿ ಕಂದಾಯ ಹಾಕುವಿಕೆಗು ಮತ್ತು ಸರ್ಕಾರದ ಎಲ್ಲಾ ಕೆಲಸಗಳಿಗೂ ಅಡ್ಡಿಯಾಗಿ ನಿಲ್ಲಬೇಕು, ಸರ್ಕಾರಿ ಉದ್ಯೋಗಗಳ್ಯಾವುದನ್ನೂ ಅಂಗೀಕರಿಸಕೂಡದು, ಎಂಬುದೇ ಈ ಹೊಸ ಪಾರ್ಟಿಯ ಧ್ಯೇಯವಾಗಿತ್ತು. ಗಾಂಧಿಯವರು ಈ ತತ್ವಕ್ಕೆ ವಿರೋಧವಾಗಿದ್ದರೂ ವಿದ್ಯಾವಂತರಲ್ಲಿ ಹಲವರು ಸ್ವರಾಜ್ಯಪಾರ್ಟಿಗೆ ಸೇರಿ 1923ರಲ್ಲಿ ನಡೆದ ಚುನಾವಣೆಗೆ ನಿಂತು ಕೌನ್ಸಿಲಿಗೆ ಪ್ರವೇಶಿಸಿದರು. ಈ ಪಾರ್ಟಿಯವರು ಕೌನ್ಸಿಲುಗಳಲ್ಲಿ ಹೆಚ್ಚಾಗಿ ಎಸೆಂಬ್ಲಿಯಲ್ಲಿ ಕೆಲವು ಕಾಲ ಪಾರ್ಟಿಯ ಒಗ್ಗಟ್ಟನ್ನು ಚೆನ್ನಾಗಿ ಕಾಪಾಡಿದರು. ಆದರೆ ಪಾರ್ಟಿಯ ತತ್ವವನ್ನು ಪೂರ್ತಿಯಾಗಿ ಜಾರಿಗೆ ತರಲು ಅವರಿಗೆ ಅನುಕೂಲವಾಗಲಿಲ್ಲ. ಕೌನ್ಸಿಲುಗಳಲ್ಲಿ ಸ್ವರಾಜ್ಯ ಪಾರ್ಟಿಯ ಮೆಂಬರುಗಳ ಬಹುಮತ ಇಲ್ಲದ್ದರಿಂದ ಸ್ವತಂತ್ರ ಪಾರ್ಟಿಯೇ ಮೊದಲಾದ ಪಂಗಡದ ಮೆಂಬರುಗಳ ಸಹಾಯವು ಬೇಕಾದ ಕಾರಣ ಸರ್ಕಾರಕ್ಕೆ ಸಂಪೂರ್ಣ ಅಡಚಣೆಯಾಗಿ ಕೆಲಸಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ಕಡೇಗೆ ಅವರು ತಮ್ಮ ಅಸಮಾಧಾನವನ್ನು ಸೂಚಿಸಲಿಕ್ಕಾಗಿ ಕೌನ್ಸಿಲುಗಳಿಂದ ಹೊರಗ ಹೊರಟು ಬಿಟ್ಟರು. ಹೇಗೂ ಭರತಖಂಡದ ಅತೃಪ್ತಿಯನ್ನು ಸರಕಾರಕ್ಕೂ, ಪ್ರಪಂಚಕ್ಕೂ ಪ್ರಕಟಿಸಲಿಕ್ಕಾಗಿ ಈ ಪಾರ್ಟಿಯು ತಕ್ಕಷ್ಟು ಚೆನ್ನಾಗಿಯೇ ಕೆಲಸ ಮಾಡಿತು ಎಂಬದನ್ನು ಯಾರೂ ಅಲ್ಲಗಳೆಯಲಾರರು.

ಕಳೆದ ವರ್ಷ ಕಾನ್‌ಪುರದಲ್ಲಿ ನಡೆದ ರಾಷ್ಟ್ರೀಯ ಸಭೆಯ ಕೂಟದಲ್ಲಿ ಸ್ವರಾಜ್ಯಪಕ್ಷದವರ ತತ್ವವನ್ನೇ ಕಾಂಗ್ರೆಸು ಅಂಗೀಕರಿಸಿ ಮುಂದಿನ ಅಂದರೆ ಈ ವರ್ಷ ನಡೆಯುವ ಚುನಾವಣೆಗೆ ಕಾಂಗ್ರೆಸ್ಸೇ ಉಮೇದುವಾರರನ್ನು ನೇಮಿಸಿ ಕೌನ್ಸಿಲುಗಳಿಗೆ ಮೆಂಬರುಗಳನ್ನು ಕಳುಹಿಸಬೇಕೆಂದು ತೀರ್ಮಾನವಾಯಿತು. ಅನಂತರ ಸ್ವರಾಜ್ಯಪಾರ್ಟಿಯಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿ ಅದರ ಕೆಲವು ಮೆಂಬರುಗಳು ಸರ್ಕಾರದ ಎಲ್ಲಾ ಕಾರ್ಯಗಳಿಗೆ ಸಂಪೂರ್ಣ ಎದುರು ನಿಲ್ಲುವ ತತ್ವಕ್ಕೆ ವಿರೋಧಿಸಿ, ಸಾಧ್ಯವಾದಾಗಲೆಲ್ಲ ಸರ್ಕಾರದೊಂದಿಗೆ ಸಹಕರಿಸಿ, ದೇಶಹಿತಕ್ಕೆ ವಿರೋಧವಾದ ಕಾರ್ಯಗಳಲ್ಲಿ ಮಾತ್ರ ಸರ್ಕಾರದೊಂದಿಗೆ ಅಸಹಕಾರವನ್ನು ಕೈಕೊಂಡರೆ ಸಾಕೆಂಬ ಪ್ರತಿಯೋಗಿ ಸಹಕಾರ ಪಾರ್ಟಿಯೆಂಬ ಹೆಸರಿನ ಪಂಗಡ ಒಂದು ಉದ್ಭವವಾಯಿತು. ಮಹಾರಾಷ್ಟ್ರದವರೇ ಇದಕ್ಕೆ ಹೆಚ್ಚಿನ ಒತ್ತಾಸೆಯುಳ್ಳವರಾಗಿರುವರು. ಜಯಕರ್ ಮತ್ತು ಕೇಳ್ಕಾರ್‌ರವರೇ ಈ ಪಾರ್ಟಿಯ ಮುಖ್ಯ ಮುಂದಾಳುಗಳು. ಮಂತ್ರಿಗಳಿಗೆ ಪೂರ್ತಿ ಜವಾಬ್ದಾರಿ ಮತ್ತು ಅಧಿಕಾರ ಕೊಟ್ಟರೆ ಸರ್ಕಾರಿ ಉದ್ಯೋಗಗಳನ್ನು ಕೈಕೊಳ್ಳಬಹುದೆಂದು ಇವರ ಮತವಾಗಿದೆ. ಈಚೆಗೆ ಪಂಡಿತ ಮದನಮೋಹನ ಮಾಳವೀಯರು ಕಾಂಗ್ರೆಸಿನೊಳಗೇನೇ ಇದ್ದು ಬೇರೊಂದು ಪಾರ್ಟಿಯನ್ನು ನಿರ್ಮಿಸಲು ಪ್ರಯತ್ನಿಸಿದರು. ಕೆಲವು ದಿವಸಗಳ ಹಿಂದೆ ಲಾಲಾ ಲಜಪತರಾಯರು ಸ್ವರಾಜ್ಯಪಾರ್ಟಿಯನ್ನು ಬಿಟ್ಟರು. ಈ ಸಂಬಂಧ ಇವರಿಗೂ ಸ್ವರಾಜ್ಯಪಾರ್ಟಿಯ ಮುಖಂಡರಾದ ಪಂಡಿತ ಮೋತಿಲಾಲ್ ನೆಹರುರವರಿಗೂ ನಡೆದ ವಾಗ್ವಾದಗಳು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇಡೀ ಹಿಂದುಸ್ಥಾನದ ಜನರ ಪ್ರೀತಿಗೆ ಪಾತ್ರರಾಗಿರುವ ಈ ಮುಖಂಡರು ತಮ್ಮ ಹೋರಾಟಗಳನ್ನು ಬಹಿರಂಗವಾಗಿ ನಡಿಸಿದ್ದು ದೇಶದ ಒಗ್ಗಟ್ಟಿಗೆ ಭಂಗ ತರುವಂತಾದ್ದಾಗಿತ್ತು.

ಈ ಮಧ್ಯ ಮಾಲವೀಯರಿಗೂ ನೆಹರುರವರಿಗೂ ರಾಜಿ ಸಂಭಾಷಣೆಗಳು ನಡೆದುವು. ಈ ರಾಜಿ ಸಂಭಾಷಣೆಗಳು ಫಲದಾಯಕವಾಗಲಿಲ್ಲವೆಂದು ಈ ವಾರದಲ್ಲಿ ತಿಳಿದು ತುಂಬಾ ವಿಷಾದಿಸಬೇಕಾಗಿದೆ. ಬಹಳ ಶಕ್ತಿ ಇರುವ ಈ ಬ್ರಿಟಿಷ್ ಸರ್ಕಾರದೊಡನೆ ಹೋರಾಡಿ ಹಿಂದೂದೇಶಕ್ಕೆ ಸ್ವರಾಜ್ಯ ಪಡೆಯಬೇಕಾದರೆ ದೇಶದ ಒಗ್ಗಟ್ಟು ಬಹಳ ಚೆನ್ನಾಗಿರಬೇಕು. ಚಿಕ್ಕ ಚಿಕ್ಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಮುಖ್ಯ ಅಂಶಗಳಲ್ಲಿ ಒಗ್ಗಟ್ಟಿದ್ದು ಕೌನ್ಸಿಲುಗಳಲ್ಲಿ ರಾಷ್ಟ್ರೀಯ ಪಕ್ಷದವರಿಗೆ ಬಹುಮತದ ಬಲವಿದ್ದರೇನೇ ಸರ್ಕಾರವನ್ನು ದೇಶದ ಜನರ ಅಭಿಪ್ರಾಯಕ್ಕೆ ಒಳಪಡುವಂತೆ ಮಾಡಲು ಸಾಧ್ಯವಾಗುವುದು. ಜನರಲ್ಲಿ ಹಲವು ಪಂಗಡಗಳುಂಟಾಗಿ ಐಕ್ಯಮತ್ಯವಿಲ್ಲದೆ ಇರುವಾಗ ಸರ್ಕಾರದವರಿಗೆ ತಮ್ಮ ಇಚ್ಛಾನುಸಾರ ನಡೆಯಲು ಅನುಕೂಲವಾಗುವುದು.

ಈ ತಾರೀಕು 11ರಲ್ಲಿ ಡೆಲ್ಲಿಯಲ್ಲಿ ಮಾಳವೀಯರ ಪಾರ್ಟಿಯ ಅಂದರೆ ಕಾಂಗ್ರೆಸ್ಸಿನ ಸ್ವಾತಂತ್ರಿಕ ಮೆಂಬರುಗಳ ಮತ್ತು ಪ್ರತಿಯೋಗಿ ಸಹಕಾರ ಪಾರ್ಟಿಯವರ ಒಂದು ಮೀಟಿಂಗು ನಡೆದು ಸ್ವತಂತ್ರ ಕಾಂಗ್ರೆಸ್ ಪಾರ್ಟಿಯೊಂದನ್ನು ಹೊರಡಿಸಿರುವರು. ಹೆಚ್ಚು ಕಮ್ಮಿ ಪ್ರತಿಯೋಗಿ ಸಹಕಾರ ಪಾರ್ಟಿಯ ತತ್ವವೇ ಈ ಹೊಸಪಾರ್ಟಿಯ ಧ್ಯೇಯವಾಗಿರುವುದರಿಂದ ಪ್ರತಿಯೋಗಿಸಹಕಾರ ಪಾರ್ಟಿಯವರು ಇದರೊಂದಿಗೆ ಸಂಪೂರ್ಣ ಸಹಕರಿಸಲು ಒಪ್ಪಿರುವರು. ಈ ಪಂಗಡಕ್ಕೆ ಲಾಲಾ ಲಜಪತರಾಯರು ಅಧ್ಯಕ್ಷರಾಗಿಯೂ, ಪಂಡಿತ ಮದನಮೋಹನ ಮಾಳವೀಯರು ಜನರಲ್ ಸೆಕ್ರಿಟರಿಯಾಗಿಯೂ ಆರಿಸಲ್ಪಡುವರೆಂದು ತಿಳಿಯಬರುತ್ತದೆ. ಈಗಿನ ಚುನಾವಣೆಗೆ ಕಾಂಗ್ರೆಸ್ಸಿನ ಹೆಸರಿನಲ್ಲಿ ಈ ಹೊಸಪಾರ್ಟಿಯು ಮತ್ತು ಸ್ವರಾಜ್ಯ ಪಾರ್ಟಿಯವರು ತಮ್ಮ ತಮ್ಮ ಪಕ್ಷದ ಉಮೇದುವಾರರನ್ನು ನಿಲ್ಲಿಸಿ ಕೌನ್ಸಿಲು ಮೆಂಬರುತನಕ್ಕಾಗಿ ಹೋರಾಡುವರು. ಇದರಿಂದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಒಗ್ಗಟ್ಟು ತಪ್ಪಿ ಕಾಂಗ್ರೆಸ್ಸಿಗೆ ಸೇರಿದವರ ಓಟುಗಳು ವಿಭಾಗಿಸಲ್ಪಟ್ಟು ಕಾಂಗ್ರೆಸ್ಸಿಗೆ ಸೇರದ ಪಂಗಡಗಳ ಉಮೇದುವಾರರಿಗೆ ಜಯವಾಗುವ ಸಂಭವವುಂಟಾಗುವುದು. ಹೀಗೆ ಕೌನ್ಸಿಲುಗಳಲ್ಲಿ ರಾಷ್ಟ್ರೀಯ ಸಭೆಯವರ ಬಲ ಕಡಿಮೆಯಾಗಲು ಮುಖಂಡರು ಎಡೆಕೊಡುವುದು ಬಹು ವ್ಯಸನಕರ.

ಪಂಡಿತ ಮಾಲವೀಯರ ಪಾರ್ಟಿಯು ಹಿಂದೂ ಮತದವರ ಹಕ್ಕು ಬಾಧ್ಯತೆಗಳಿಗೆ ಪ್ರಾಮುಖ್ಯತೆ ಕೊಡಲಿಕ್ಕಾಗಿಯೇ ಹೊರಟದೆಂತ ತೋರುತ್ತದೆ. ಸಮಸ್ತ ಜಾತಿಗಳನ್ನೂ ಒಳಕೊಂಡಿರುವ ಕಾಂಗ್ರೆಸ್ ಸಭೆಯ ಹೆಸರಿನಲ್ಲಿ ಈ ರೀತಿ ಜಾತಿವಾರು ಹಕ್ಕುಗಳನ್ನು ಮುಂದಕ್ಕೆ ತರುವುದು ಯುಕ್ತವಾಗಿ ತೋರುವುದಿಲ್ಲ. ಪಂಡಿತ ಮೋತಿಲಾಲ್ ನೆಹರುರವರು ಹೇಳಿರುವಂತೆ ರಾಷ್ಟ್ರೀಯ ಸಭೆಯು ಬರೀ ಹಿಂದೂಮತದವರ ಹಕ್ಕನ್ನು ಮಾತ್ರವಲ್ಲ, ಮುಸಲ್ಮಾನರ ಕ್ರೈಸ್ತರ, ಪಾರ್ಸಿಯರ ಮತ್ತು ಇತರ ಎಲ್ಲಾ ಪಂಗಡಗಳ ಹಕ್ಕುಗಳನ್ನು ಕಾಪಾಡಲು ಇರುವ ಸಂಸ್ಥೆಯಾಗಿದೆ. ಮುಸಲ್ಮಾನರು ಕೋಮುವಾರು ಹಕ್ಕುಗಳಿಗಾಗಿ ಹೋರಾಡುವದನ್ನು ನಿಲ್ಲಿಸಬೇಕೆಂದು ರಾಷ್ಟ್ರೀಯ ಪಕ್ಷದಲ್ಲಿ ನಂಬಿಕೆ ಇರುವವರೆಲ್ಲರೂ ಹೇಳುತ್ತಿರುವಾಗ್ಯೆ ಹಿಂದೂಗಳೂ ಕೋಮುವಾರು ಹಕ್ಕುಗಳಿಗೆ ಹೋರಾಡ ಹತ್ತಿದರೆ, ದೇಶದಲ್ಲಿ ಐಕ್ಯಮತ್ಯವು ನಾಮಶೇಷವಾಗಿ ರಾಷ್ಟ್ರೀಯದ ಏಳಿಗೆಗೆ ಭಂಗ ಬರುವದೆಂಬುದರಲ್ಲಿ ಸಂಶಯವಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಕೋಮುವಾರು ಜಗಳಗಳನ್ನು ತಮ್ಮ ತಮ್ಮೊಳಗೆ ತೀರಿಸಿಕೊಂಡು ಸರ್ಕಾರದ ಸಭೆಗಳಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡದೆ ಹೋದರೆ ರಾಷ್ಟ್ರೀಯತ್ವಕ್ಕೆ ಜಯವಾಗುವುದು ಕಷ್ಟವಾಗಿದೆ. ಹೀಗಿರುವಾಗ ರಾಷ್ಟ್ರೀಯ ಸಭೆಯೊಳಗೇನೇ ಇದ್ದುಕೊಂಡು ಕೋಮುವಾರು ಹೋರಾಟಕ್ಕೆ ಪ್ರಾಮುಖ್ಯತೆ ಕೊಡುವುದು ಯುಕ್ತವಾದುದಲ್ಲ.

ವೀರಾಜಪೇಟೆ ಹೈಸ್ಕೂಲು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಆಕ್ಟಿಂಗ್ ಹೆಡ್ಮಾಸ್ಟರಾಗಿದ್ದ ಮೆ ಪಿ ಮಂಗೇಶರಾಯರು ಕಳೆದ ತಿಂಗಳು ನಾಲ್ಕು ತಿಂಗಳು ರಜೆಯಲ್ಲಿ ಹೋದ ಕಾರಣ ವೀರಾಜಪೇಟೆ ಹೈಸ್ಕೂಲಿನ ಹೆಡ್‌ಮಾಸ್ಟರಾದ ಮೆ ಸಿ. ಯಂ ರಾವರವರು ಮಡಿಕೇರಿಗೆ ಬದಲಿ ಹೆಡ್‌ಮಾಸ್ಟರಾಗಿ ನೇಮಿಸಲ್ಪಟ್ಟ ತೀರ್ಮಾನವು ಪ್ರಕಟವಾಗಿ ಸುಮಾರು ಒಂದು ತಿಂಗಳ ನಂತರ ಅಧಿಕಾರಿಗಳು ಸಾವಕಾಶ ಮಾಡಿ ನಂತರ ವೀರಾಜಪೇಟೆ ಹೈಸ್ಕೂಲಿನ ಹೆಡ್‌ಮಾಸ್ಟರ್ ಕೆಲಸವನ್ನು ನೋಡಲು ಮಡಿಕೇರಿ ಹೈಸ್ಕೂಲಿನ ಸೆಕೆಂಡ್ ಅಸಿಸ್ಟೆಂಟ್ ಟೀಚರಾದ ಮೆ ಹೆ... ರಾಯರವರನ್ನು ನೇಮಿಸಿದ ಸುದ್ದಿಯನ್ನು ಕೇಳಿದವರಾಶ್ಚರ್ಯಪಟ್ಟಿದ್ದಷ್ಟೆ. ನ್ಯಾಯವಾದ ಹುಕುಮನ್ನು ಕೊಡಲಿಕ್ಕಾಗಿಯೇ ಅಧಿಕಾರಿಗಳು ದೀರ್ಘಾಲೋಚನೆ ಮಾಡುತ್ತಿರಬೇಕೆಂದು ಯೋಚಿಸುತ್ತಿದ್ದ ಹಲವರಿಗೆ ಈಗಿನ ಹುಕುಮು ಆಶ್ಚರ್ಯವನ್ನುಂಟುಮಾಡಿದೆ.

ಸರ್ಕಾರದವರು ಸರ್ವಿಸಿನ ಮೇಲೆ ಈ ಹುದ್ದೆಗೆ ನೇಮಕ ಮಾಡಿರುವದಾದರೆ ಮೆ ಶೇಷಾಯಿಯವರಿಗಿಂತ ಹೆಚ್ಚು ವರ್ಷ ಸರ್ವಿಸ್ ಆಗಿರುವ ಮತ್ತು ಹೆಚ್ಚು ಸಂಬಳ ಹೊಂದುತ್ತಿರುವ ಸೆಂಟ್ರಲ್ ಹೈಸ್ಕೂಲಿನ ಫಸ್ಟ್ ಅಸಿಸ್ಟೆಂಟ್ ಟೀಚರಾಗಿರುವ ಮೆ ಆರ್. ರಾಘವೇಂದ್ರರಾಯರವರ ಮತ್ತು ಸ್ಕೂಲುಗಳ ಸಬ್ ಅಸಿಸ್ಟಂಟ್ ಇನ್‌ಸ್ಪೆಕ್ಟರಾಗಿರುವ ಮೆ ಪಿ ಸಿ ಉತ್ತಯ್ಯನವರ ಹಕ್ಕುಗಳನ್ನು ಅಧಿಕಾರಿಗಳು ಮೂಲೆಗೊತ್ತಿದ ಕಾರಣವೇನೆಂದು ತಿಳಿಯುವುದಿಲ್ಲ. ಅರ್ಹತೆಯ ಮೇಲೆ ನೇಮಕ ಮಾಡಿರುವದಾದರೆ ಮೇಲೆ ಸೂಚಿಸಿದ ಉತ್ತಯ್ಯನವರು ಮತ್ತು ರಾಘವೇಂದ್ರರಾಯರು ಶೇಷಾಯಿಯವರಂತೆಯೇ ಎಲ್ ಟಿ ತರಬೇತು ಹೊಂದಿದವರಾಗಿರುವರು. ಇದಲ್ಲದೆ ಲಂಡನ್ ಯುನಿವರ್ಸಿಟಿಯಲ್ಲಿ ಡಿ ಇ. ತರಬೇತು ಹೊಂದಿ ಬಂದಿರುವ ಮೆ ಬಿ ಎಸ್ ಅಪ್ಪಾಲಪ್ಪನವರಿರುವರು. ಲಂಡನ್ ಯುನಿವರ್ಸಿಟಿಯ ಡಿ. ಇ. ಡಿಪ್ಲೋಮವನ್ನು ಮದ್ರಾಸ ಯುನಿವರ್ಸಿಟಿಯು ಎಲ್. ಟಿ. ತರಬೇತಿಗಿಂತ ಹೆಚ್ಚಿನ ಅರ್ಹತೆಯೆಂದು ಸರ್ಕಾರದವರು ಅಂಗೀಕರಿಸುವದಾದರೆ ಮೆ ಕಾಲಪ್ಪನವರ ಹಕ್ಕನ್ನು ಅಧಿಕಾರಿಗಳು ಮರೆತದ್ದಾದರೂ ಯಾಕೆ? ಪರದೇಶಗಳಿಗೆ ಹೋಗಿ ಹೆಚ್ಚು ಹಣ ವ್ಯಯ ಮಾಡಿ ವಿದ್ಯಾರ್ಜನೆಮಾಡಿ ಬಂದ ನಮ್ಮ ದೇಶದ ಯುವಕರಿಗೆ ಇಲ್ಲಿ ಪ್ರೋತ್ಸಾಹನ ದೊರೆಯದೆ ಇರುವದು ಸರಿಯಲ್ಲ. ಇಂಗ್ಲೆಂಡಿಗೆ ಹೋಗಿ ವೈದ್ಯ ಶಾಸ್ತ್ರದಲ್ಲಿ ಡಿಗ್ರಿಗಳನ್ನು ಪಡೆದು ಕಳೆದ ವರ್ಷ ವಾಪಸು ಬಂದ ಡಾಕ್ಟರ್ ಎನ್ ಸಿ. ಅಪ್ಪಯ್ಯನವರಿಗೂ ಹೀಗೆಯೇ ಈ ದೇಶದಲ್ಲಿ ಉತ್ತೇಜನ ದೊರೆಯದೆ ಅವರು ಮದ್ರಾಸಿಗೆ ಹೋದದ್ದಾಯಿತು. ಸರ್ಕಾರದವರ ಇಂಥಾ ವರ್ತನೆಯಿಂದ ವಿದ್ಯಾರ್ಜನೆಗಾಗಿ ಪರದೇಶಗಳಿಗೆ ಹೋಗಬೇಕೆಂದಿರುವ ಯುವಕರ ಉತ್ಸಾಹವು ಕುಗ್ಗುವುದರಲ್ಲಿ ಸಂಶಯವಿಲ್ಲ.

ದಿವಂಗತ ಕೊಂಗಟ್ಟಿರ ಪೊನ್ನಪ್ಪನವರು.

ರಿಟೈರ್ಡ್ ಎಗ್ಸಿಕ್ಯೂಟಿವ್ ಇಂಜಿನೀಯರಾಗಿದ್ದ ಮೆ ಕೊಂಗಟ್ಟಿರ ಪೊನ್ನಪ್ಪನವರು ಈ ತಾರೀಕು 12ನೇ ಆದಿತ್ಯವಾರ ಬೆಳಿಗ್ಗೆ 3½ ಗಂಟೆಗೆ ಅವರ ಮಡಿಕೇರಿ 'ನೆಸ್ಟ್' ಮನೆಯಲ್ಲಿ ಪರಲೋಕವನ್ನೈದಿದರು. ಇವರು ಶನಿವಾರ ದಿನ ತಮ್ಮ ತೋಟಕ್ಕೆ ಹೋಗಿ ಬಂದವರು ರಾತ್ರಿ ಚೆನ್ನಾಗಿ ಊಟ ಉಪಚಾರ ಮಾಡಿ ಕ್ಷೇಮದಲ್ಲಿ ಮಲಗಿದ್ದವರು ಮಧ್ಯರಾತ್ರಿಯಲ್ಲಿ ಸ್ವಲ್ಪ ಅಸ್ವಸ್ಥರಾಗಿ ಎರಡು ಮೂರು ಗಂಟೆಗಳೊಳಗೆ ಮೃತರಾದದ್ದಾಗಿದೆ. ಇವರು ತನ್ನ 69ನೇ ವಯಸ್ಸಿನಲ್ಲಿ ಸುಲಭ ಮರಣವನ್ನು ಹೊಂದಿದರು. ಇವರ ಶವವನ್ನು ಇವರ ಐನ್ ಮನೆ ಇರುವ ಚೇರಳ ಶ್ರೀಮಂಗಲ ಗ್ರಾಮಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದೇ ದಿನ ದಫನ್ ಮಾಡಿದರು.

ಮೆ ಪೊನ್ನಪ್ಪನವರು ಪೂನಾದ ಇಂಜಿನೀಯರಿಂಗ್ ಕಾಲೇಜಿನಲ್ಲಿ ಎಲ್. ಸಿ ಇ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೈಸೂರು ಪ್ರಾಂತದಲ್ಲಿ 27 ವರ್ಷ ಸರ್ಕಾರಿ ಕೆಲಸ ಮಾಡಿ ಎಗ್ಸಿಕ್ಯೂಟಿವ್ ಇಂಜಿನೀಯರಾಗಿ ರಿಟೈರ್ ಆದರು. ಆದರೆ ಇವರಿಗೆ ಹೆಚ್ಚಿನ ಕಾಲ ವಿಶ್ರಾಂತಿ ಅನುಭವಿಸಲು ಅವಕಾಶವಾಗಲಿಲ್ಲ. ಇವರು ಪಬ್ಲಿಕ್ ಕೆಲಸಗಳಲ್ಲಿ ಹೆಚ್ಚು ತಲೆಯಿಟ್ಟು ತೆಗೆದುಕೊಳ್ಳದಿದ್ದರೂ ಈ ವರ್ಷ ಓಂಕಾರೇಶ್ವರ ದೇವಸ್ಥಾನದ ಕಟ್ಟಡದ ರಿಪೇರಿಗೋಸ್ಕರ ಸುಮಾರು 700 ರೂಪಾಯಿ ಬೆಲೆ ಬಾಳುವ ಮರವನ್ನು ಉಚಿತವಾಗಿ ಸಂಘಕ್ಕೆ ಕೊಟ್ಟು ಆ ಶರದವರ ಕೃತಜ್ಞತೆಗೆ ಪಾತ್ರರಾಗಿದ್ದರು. ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ.

ಮಹಾತ್ಮಗಾಂಧಿಯವರ ಸ್ವಚರಿತ್ರೆ

ಎರಡನೆಯ ಭಾಗದಲ್ಲಿ 8ನೆಯ ಪ್ರಕರಣ

ಪ್ರಿಟೋರಿಯಾ ಪಟ್ಟಣದಲ್ಲಿ

ಡರ್ಬನ್ನಿನಲ್ಲಿ ವಾಸಿಸುತ್ತಿದ್ದ ಭಾರತೀಯ ಕ್ರೈಸ್ತರೊಡನೆ ನನಗೆ ಅಲ್ಪಕಾಲದಲ್ಲಿಯೇ ಸಂಬಂಧವೇರ್ಪಟ್ಟಿತು. ಕೋರ್ಟಿನ ದ್ವಿಭಾಷಿಯಾಗಿದ್ದ ರೋಮನ್ ಕ್ಯಾಥೋಲಿಕ್ ಮತದ ಪಾಲುರವರ ಪರಿಚಯವಾಯಿತು. ಕೀ॥ ಶೇ॥ ಸುಭಾನ್ ಗಾಡ್ಫ್ರೆಯವರೊಡನೆಯೂ ನನಗೆ ಆಗ ಪರಿಚಯವಾಯಿತು. ಸುಭಾನ್‌ರವರು ಆಗ ಪ್ರಾಟೆಸ್ಟಂಟ್ ಮಿಷನ್ ಸಂಘದ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅವರ ಮಗರಾದ ಜೇಮ್ಸ್ ಗಾಡ್ಫ್ರೆಯವರು ಈಚೆಗೆ ಬಂದಿದ್ದ ದಕ್ಷಿಣಾಫ್ರಿಕಾ ಪ್ರತಿನಿಧಿವರ್ಗದವರಲ್ಲೊಬ್ಬರು. ಕೀ॥ ಶೇ॥ ಪಾರ್ಸಿ ರುಸ್ತುಂಜಿ ಮತ್ತು ಕೀ॥ ಶೇ॥ ಆದಮಜಿ ಮಿಯಾಖಾನರವರುಗಳ ಕೂಡ ನನಗೆ ಆಗಲೇ ಪರಿಚಯವಾಯಿತು. ಅದುವರೆಗೂ ಅವರ ವ್ಯಾಪಾರಸಂಬಂಧ ಮಾತ್ರ ಆಗಾಗ್ಗೆ ಒಟ್ಟಿಗೆ ಸೇರುತ್ತಿದ್ದರಾದರೂ ಗಾಢವಾದ ಪರಿಚಯ ಮಾತ್ರ ಉಂಟಾಗಿರಲಿಲ್ಲ. ತರುವಾಯ ಅವರ ಒಟ್ಟಿಗೆ ಸೇರಿ ಕೆಲಸಮಾಡುವುದು ಪ್ರಸಕ್ತವಾಯಿತು. ಆ ಸಂಗತಿಯು ಮುಂದೆ ಸ್ಪಷ್ಟಪಡಿಸಲ್ಪಡುವುದು. ಈ ರೀತಿಯಾಗಿ ನಾನು ಬಹಳ ಜನರೊಡನೆ ಪರಿಚಯಮಾಡಿಕೊಂಡಿದ್ದೆ. ಪ್ರಿಟೋರಿಯಾದಲ್ಲಿದ್ದ ನ್ಯಾಯವಾದಿಯಿಂದ ಅಬ್ದುಲ್ಲಾರವರಿಗೆ ಕೇಸಿನ ಸಂಬಂಧವಾಗಿ ಕಾಗದ ಬಂದಿತು. ಕೇಸನ್ನು ಸಿದ್ಧಪಡಿಸುವುದಕ್ಕಾಗಿ ನೀವಾಗಲಿ, ನಿಮ್ಮ ಪ್ರತಿನಿಧಿಯಾಗಲಿ ಪ್ರಿಟೋರಿಯಾಕ್ಕೆ ಬರಬೇಕೆಂದು ಅದರಲ್ಲಿ ಬರೆಯಲ್ಪಟ್ಟಿತ್ತು. ಸೇಟರು ನನಗೆ ಆ ಕಾಗದವನ್ನು ತೋರಿಸಿ "ನೀವು ಪ್ರಿಟೋರಿಯಾಕ್ಕೆ ಹೋಗುವಿರಾ?" ಎಂದು ಕೇಳಿದರು. ಕೇಸಿನ ಸಂಗತಿಯೇನೂ ನನಗೆ ತಿಳಿದಿರಲಿಲ್ಲವು. ಅದನ್ನು ನನಗೆ ಬೋಧಿಸಿದರೆ ಅದು ನನಗೆ ಗೊತ್ತಾಗುತ್ತದೆಂದು ಹೇಳಿದೆನು. ಆ ಕೇಸಿನ ವಿಚಾರವನ್ನು ನನಗೆ ಅನುಭವಮಾಡಿಕೊಡುವುದಕ್ಕೆ ಸೇಟರು ಗುಮಾಸ್ತರಿಗೆ ಹೇಳಿದರು. ನಾನು ಅದನ್ನು ಪ್ರಾರಂಭಿಸಿದ ರೀತಿ ಮೊದಲಿನಿಂದ ತಿಳಿದುಕೊಳ್ಳಬೇಕಾಗಿ ಬಂದಿತು. ನಾನು ಜಾಂಜಿಬಾರಿನಲ್ಲಿದ್ದ ಕೊಂಚ ಕಾಲದಲ್ಲಿ ಪ್ರತಿ ದಿನವೂ ಕೋರ್ಟಿಗೆ ಹೋಗಿ ಕೇಳುತ್ತಿದ್ದೆ. ಒಬ್ಬ ಪಾರ್ಸಿ ನ್ಯಾಯವಾದಿಯು ಒಬ್ಬ ಸಾಕ್ಷಿಯನ್ನು ಜಮಾಖರ್ಚು ಲೆಕ್ಕದಲ್ಲಿ ಜಮಾಖರ್ಚು ಮೊದಲಾದವುಗಳ ಕುರಿತು ಪ್ರಶ್ನೆ ಕೇಳಿದನು. ನನಗೆ ಲೆಕ್ಕದ ಸಂಗತಿಯೇ ತಿಳಿದಿರಲಿಲ್ಲವು. ನಾನು ಅದನ್ನು ಅಭ್ಯಾಸಮಾಡಿರಲಿಲ್ಲವು.

ಅಬ್ದುಲ್ಲಾ ಕಂಪೆನಿಯವರ ಕೇಸೂ ಲೆಕ್ಕದ ಮೇಲೆಯೇ ಆಧಾರಪಟ್ಟಿದ್ದಿತು. ಅದನ್ನು ತಿಳಿದುಕೊಳ್ಳುವುದಕ್ಕಾಗಿ ಲೆಕ್ಕದ ಪದ್ಧತಿಯನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾಗಿ ಬಂದಿತು. ಗುಮಾಸ್ತನು ನನಗೆ ಲೆಕ್ಕಗಳ ಸಂಗತಿಯನ್ನೂ ಪ್ರಾಂಸರಿನೋಟು ಸಂಗತಿಯನ್ನೂ ತಿಳಿಸಿದನಾದರೂ ನನಗೆ ಗೊತ್ತಾಗಲಿಲ್ಲ. ಒಂದು ಬುಕ್‌ಕೀಪಿಂಗ್ ಅಂದರೆ ಲೆಕ್ಕವಿಡುವ ಕ್ರಮವನ್ನು ಬೋಧಿಸುವ ಪುಸ್ತಕವನ್ನು ಕೊಂಡು ಓದಿದೆನು. ಆಗ ನನಗೆ ಧೈರ್ಯವುಂಟಾಯಿತು. ಕೇಸಿನ ಸಂಗತಿ ತಿಳಿಯಿತು. ಅಬ್ದುಲ್ಲಾ ಸೇಟರಿಗೆ ಲೆಕ್ಕದ ಸಂಗತಿ ತಿಳಿಯದಿದ್ದರೂ ಅನುಭವವು ಚೆನ್ನಾಗಿದ್ದುದರಿಂದ ಚಿಕ್ಕ ಪ್ರಶ್ನೆಗಳಿಗೂ ಸುಲಭವಾಗಿ ಉತ್ತರವನ್ನು ಕೊಡಬಲ್ಲವರಾಗಿದ್ದರು. ನಾನು ಪ್ರಿಟೋರಿಯಾಕ್ಕೆ ಹೋಗುವೆನೆಂದು ಸೇಟರಿಗೆ ತಿಳಿಸಿದೆನು. "ಎಲ್ಲಿ ವಸತಿಮಾಡುತ್ತೀರಿ?" ಎಂದು ಅವರು ಕೇಳಿದರು. "ನೀವೇ ವಿಚಾರಮಾಡಬೇಕು" ಎಂದು ಹೇಳಿದೆನು.

"ನಾನು ನ್ಯಾಯವಾದಿಯ ಬಳಿಗಲ್ಲ ನಮ್ಮ ಹೆಸರಿನಲ್ಲೂ ಬರೆಯುತ್ತೇನೆ. ನ್ಯಾಯವಾದಿಯು ಕೊಟ್ಟರೂ ವಿಚಾರಮಾಡುವರು, ನಮ್ಮವರಲ್ಲಿ ನೀವು ಇಳಿದುಕೊಳ್ಳುವುದು ನನಗಿಷ್ಟವಿಲ್ಲ. ಅಲ್ಲಿ ಪ್ರತಿವಾದಿಗಳಿಗೆ ಅವಕಾಶವಿರುತ್ತದೆ. ನಮ್ಮ ರಹಸ್ಯವಾದ ಕಾಗದವನ್ನು ಅವರು ಹೇಗಾದರೂ ನೋಡಿದರೆ ನಮಗೆ ಬಹಳ ನಷ್ಟವಾಗುತ್ತದೆ. ಅವರ ಪರಿಚಯವನ್ನು ನೀವು ಮಾಡಿಕೊಳ್ಳದಿರುವುದೇ ಉತ್ತಮವು" ಎಂದು ಸೇಟರು ಹೇಳಿದರು. "ನ್ಯಾಯವಾದಿಯು ಎಲ್ಲಿ ನನಗೆ ಬಿಡಾರ ಮಾಡುತ್ತಾರೋ ಅಲ್ಲಿಳಿಯುತ್ತೇನೆ. ಇಲ್ಲವಾದಲ್ಲಿ ಬೇರೆ ಬಿಡಾರವನ್ನು ಏರ್ಪಡಿಸಿಕೊಳ್ಳುತ್ತೇನೆ. ರಹಸ್ಯ ವಿಚಾರದಲ್ಲಿ ನೀವು ಭಯಪಡಬೇಕಾದುದಿಲ್ಲ. ನಿಮ್ಮ ರಹಸ್ಯವು ಯಾರಿಗೂ ತಿಳಿಯುವುದಿಲ್ಲ. ಪ್ರತಿವಾದಿಯವರ ಕೂಡ ನಾನು ಪರಿಚಯವನ್ನು ಮಾಡಿಕೊಳ್ಳುವೆನು. ಒಳ್ಳೇ ಮಾತಿನಿಂದ ರಾಜಿ ಮಾಡಲು ಪ್ರಯತ್ನಿಸುವೆನು. ಇಷ್ಟಾಗಿ ತ್ಯಾಬುಸೇಟರು ಕೂಡ ನಿಮಗೆ ಬಂಧುಗಳಲ್ಲವೆ?" ಎಂದು ನಾನು ಕೇಳಿದೆನು. ಪ್ರತಿವಾದಿ ಸೇಟ್ ತ್ಯಾಬುಹಾಜೀಖಾನ್ ಮಹಮ್ಮದರವರು ಅಬ್ದುಲ್ಲಾ ಸೇಟರಿಗೆ ಸಮೀಪಬಂಧುವೇ? ನಾನು ಹೀಗೆ ಹೇಳಲು ಸೇಟರಿಗೆ ಕೊಂಚ ಚುರುಕು ಮುಟ್ಟಿತು. ನಾನು 67 ದಿನ ಡರ್ಬನ್ನಿನಲ್ಲಿ ಇದ್ದುದರಿಂದ ನನ್ನ ಮೇಲೆ ಕೊಂಚ ವಿಶ್ವಾಸ ಕೂಡ ಹುಟ್ಟಿದ್ದಿತು. ನನ್ನ ರೀತಿ ತಿಳಿದುಬಂದಿದೆ. ನಾವು ಸಮೀಪ ಬಂಧುಗಳಾದ ದರಿಂದಲೇ ಆ ಭಾವವು ನನಗೆ ಚೆನ್ನಾಗಿ ಗೊತ್ತು. ತ್ಯಾಬುಸೇಟರಿಗೆ ಸುಲಭದಿಂದ ಅಂಗೀಕರಿಸುವವರಲ್ಲ. ನಾವೇ ಅವಕಾಶಕೊಟ್ಟಲ್ಲಿ ನಮ್ಮನ್ನು ತುಳಿಯಲು ನೋಡುವರು. ಆದುದರಿಂದ ನೀವು ಬಹಳ ಜಾಗ್ರತರಾಗಿರಬೇಕು' ಎಂದು ಸೇಟರು ಹೇಳಿದರು. "ನೀವು ಸಂಶಯಪಡಬೇಕಾದ ಅಗತ್ಯವಿಲ್ಲವು. ನಾನು ತ್ಯಾಬುಸೇಟರನ್ನಾಗಲಿ ಮತ್ತಾರನ್ನಾಗಲಿ ಮಾತನಾಡಬೇಕಾದ ಅವಶ್ಯವಿಲ್ಲವು. ಏತಕ್ಕಾಗಿ ಈ ದುಷ್ಪ್ರ ಯತ್ನವು ನಡೆದರೆ ಮೇಲೆ ರಾಜಿವಿಷಯವನ್ನು ತಿಳಿಸುವುದಾಗಿ" ಎಂದು ಹೇಳಿದೆನು. ನಾನು ಡರ್ಬನ್ನಿನ ಬಂದ 7ನೇ ದಿನದಲ್ಲೋ 8ನೇ ದಿನದಲ್ಲೋ ಪ್ರಿಟೋರಿಯಾಕ್ಕೆಂದು ಹೊರಟೆನು. ರೈಲುಬಂಡಿಯ 1ನೇ ತರಗತಿಯಲ್ಲಿ ಸ್ಥಳವನ್ನು ಗೊತ್ತುಮಾಡಿಸಿದರು. ಪ್ರಯಾಣಮಾಡಿಸಬೇಕಾದಲ್ಲಿ ಹಾಸಿಗೆಯನ್ನು ಮುಂಚಾಗಿ ಕೊಡಬೇಕು. ಅದರಂತೆ ಅಬ್ದುಲ್ಲಾ ಸೇಟರು ನನಗೆ ಒದಗಿಸುವುದೆಂದು ಸೇಟರು ಒತ್ತಿ ಹೇಳಿದರಾದರೂ ಗರ್ವದಿಂದ ನಾನು ನಿರಾಕರಿಸಿದೆನು. "ಇದು ಪರದೇಶವು. ಇದುವರೆಗ ಆದ ಅನುಭವವೇ ಸಾಕು. ಹಣವನ್ನು ಉಳಿಸಬೇಕೆಂದು ಆರೋಗ್ಯವಾದ ಸೌಖ್ಯವನ್ನು ಬಿಡಬಾರದು" ಎಂದು ಹೇಳಿದರು. "ನನ್ನ ವಿಷಯದಲ್ಲಿ ನೀವು ಚಿಂತಿಸಬಾರದೆಂದು" ನಾನು ಹೇಳಿದೆನು. ರಾತ್ರಿ 9 ಗಂಟೆಗೆ ರೈಲುಬಂಡಿಯು ನಟಾಲು ಮುಖ್ಯಪಟ್ಟಣವಾದ ಮೆರಿಟ್ಸ್‌ಬರ್ಗನ್ನು ತಲುಪಿತು. ಒಬ್ಬ ನೌಕರನು ಬಂದು "ಹಾಸಿಗೆ ಬೇಕೆ?" ಎಂದು ಕೇಳಿದನು. "ಬೇಕಿಲ್ಲ. ನನ್ನ ಹತ್ತಿರ ಹಾಸಿಗೆಯಿದೆ" ಎಂದೆನು. ಅವನು ಹೊರಟುಹೋದನು. ತರುವಾಯ ಒಬ್ಬ ಪ್ರಯಾಣಿಕನು ಬಂದು ನನ್ನನ್ನು ದುರುಗುಟ್ಟಿಕೊಂಡು ನೋಡಿದನು. ನಾನು ಭಾರತೀಯನಾದುದರಿಂದ ಅವನಿಗೆ ಚಿತ್ತವಿಕಾರವಾಯಿತು. ಎಲ್ಲಿಗೋ ಹೋಗಿ ಇಬ್ಬರು ಉದ್ಯೋಗಿಗಳನ್ನು ಜೊತೆಯಲ್ಲಿ ಕರೆದುಕೊಂಡು ಹಿಂತಿರುಗಿ ಬಂದನು. ಅವರೆಲ್ಲರೂ ಸುಮ್ಮನಿದ್ದರು. ಅಷ್ಟರಲ್ಲಿ ಬೇರೊಬ್ಬ ಉದ್ಯೋಗಿಯು ಬಂದು "ನೀನು ಇಳಿ. ನೀನು ಮೂರನೇ ಬಂಡಿಯಲ್ಲಿ ಕುಳ್ಳಿರಬೇಕೆಂದು" ಹೇಳಿದನು. "ನನ್ನ ಹತ್ತಿರ ಒಂದನೇ ತರಗತಿಯ ಟಿಕಿಟ್ಟಿದೆ" ಎಂದೆನು. "ಇದ್ದರೂ ಇರಲಿ. ನೀನು ಇಲ್ಲಿರಕೂಡದು, ಬೇರೆ ಬಂಡಿಗೆ ಹೋಗಬೇಕು" ಎಂದು ಅವನು ಹೇಳಿದನು. "ಡರ್ಬನ್ನಿನಲ್ಲಿ ನಾನು ಈ ಬಂಡಿಯಲ್ಲಿ ಕುಳಿತುಕೊಳ್ಳಲು ಅಲ್ಲಿಯ ಅಧಿಕಾರಿಗಳು ಅಂಗೀಕರಿಸಿದರು. ನಾನು ಇಳಿಯುವುದಿಲ್ಲವೆಂದು" ತಿಳಿಸಿದೆನು. "ಹಾಗಾದರೆ ಪೋಲೀಸಿನವನನ್ನು ಕರೆಯುತ್ತೇನೆ. ಅವನು ನಿನ್ನನ್ನು ದಬ್ಬುತ್ತಾನೆ" ಎಂದು ಹೇಳಿದನು. "ಹಾಗೆಯೇ ಆಗಲಿ. ನಾನು ಬೇರೆ ಬರುವುದಿಲ್ಲವೆಂದೆನು." ಪೋಲೀಸಿನವನು ಬಂದು ನನ್ನ ಕೈಯನ್ನು ಹಿಡಿದು ಹೊರಕ್ಕೆಳೆದನು. ನನ್ನ ಸಾಮಾನುಗಳನ್ನು ಕೂಡ ಹೊರಕ್ಕೆ ಹಾಕಿದನು. ನಾನು ಬೇರೆ ಬಂಡಿಗೆ ಹೋಗುವುದಿಲ್ಲವೆಂದು ಅಂದನು. ರೈಲು ಹೊರಟಿತು. ನನ್ನ ಕೈಚೀಲವನ್ನು ಹಿಡಿದುಕೊಂಡು ವೈಟಿಂಗ್ ರೂಮಿನೊಳಕ್ಕೆ ಹೋಗಿ ಕುಳಿತುಕೊಂಡೆನು. ಉಳಿದ ಸಾಮಾನುಗಳನ್ನು ರೈಲ್ವೇಯವರು ಭದ್ರಪಡಿಸಿದರು.

ಆಗ ಶೀತಕಾಲವಾಗಿದ್ದಿತು. ಆ ದೇಶದ ಎತ್ತರಪ್ರಾಂತ್ಯದಲ್ಲಿ ಚಳಿಯು ದುರ್ಧರವಾಗಿರುವುದು. ಮೆರಿಟ್ಸ್‌ಬರ್ಗಿನಲ್ಲಿ ಚಳಿಯು ಮತ್ತಷ್ಟು ಜಾಸ್ತಿ. ನನ್ನ ಓವರ್‌ಕೋಟು ನನ್ನ ಸಾಮಾನಿನ ಪೆಟ್ಟಿಗೆಯಲ್ಲಿ ಸಿಕ್ಕಿಹೋಗಿದ್ದಿತು. ಅದನ್ನು ಕೊಡೆಂದು ಕೇಳಿದರೆ ಮತ್ತೆಲ್ಲಿ ಅವಮಾನವಾಗುವುದೋ ಎಂದು ಕೇಳಲಿಲ್ಲ. ಗಡಗಡನೆ ನಡುಗುವ ಚಳಿ ಹಿಡಿಯಿತು. ಆ ಕೊಠಡಿಯಲ್ಲಿ ದೀಪವಿರಲಿಲ್ಲ. ಒಬ್ಬ ಪ್ರಯಾಣಿಕನು ರಾತ್ರಿ 12 ಘಂಟೆಗೆ ಅಲ್ಲಿಗೆ ಬಂದು ನನ್ನ ಕೂಡ ಮಾತಾಡಲು ಪ್ರಯತ್ನಿಸಿದನು. ಆದರೆ ನನಗೆ ಆಗ ಮಾತನಾಡಲು ಇಷ್ಟವಾಗಿರಲಿಲ್ಲವು. ನಾನು ನನ್ನ ಕಾರ್ಯವನ್ನು ಕುರಿತು ಆಲೋಚಿಸತೊಡಗಿದೆನು. ನನ್ನ ಹಕ್ಕಿಗಾಗಿ ಹೋರಾಡಲೇ? ಇಲ್ಲ, ಭರತಖಂಡಕ್ಕೆ ಹಿಂತಿರುಗಲೇ? ಇಲ್ಲಿ ಅವಮಾನವನ್ನು ಲಕ್ಷಿಸದೆ ಪ್ರಿಟೋರಿಯಾಕ್ಕೆ ಹೋಗಿ ಕೇಸು ಮುಗಿದ ಮೇಲೆ ಸ್ವದೇಶಕ್ಕೆ ಹೋಗಲೇ? ನನ್ನ ಕೆಲಸವನ್ನು ನೆರವೇರಿಸದೆ, ಸ್ವದೇಶಕ್ಕೆ ಓಡಿಹೋಗುವುದು ಹೇಡಿತನವೇ ಆಗುವುದು. ನಾನು ಅನುಭವಿಸಬೇಕಾದ ಕಷ್ಟಗಳು ವರ್ಣದ್ವೇಷವನ್ನು ಪ್ರಾಣವ್ಯಾಧಿಯಂತೆ ಹುಟ್ಟಿಸುವ ಲಕ್ಷಣವೇ. ಈ ವ್ಯಾಧಿಯನ್ನು ನಿರ್ಮೂಲಮಾಡಲು ಪ್ರಯತ್ನಿಸಬೇಕು. ಅದುಕಾರಣ ಪ್ರಾಪ್ತವಾಗುವ ಕಷ್ಟಗಳನ್ನು ಅನುಭವಿಸಲೇ ಬೇಕು. ವರ್ಣದ್ವೇಷವನ್ನು ತೊಲಗಿಸಲು ಅವಶ್ಯಕವಾಗಿರುವಂತೆಯೇ ಅಕ್ರಮವನ್ನೂ ತೊಲಗಿಸಬೇಕಾಗಿದೆ ಎಂದು ನಾನು ನಿಶ್ಚಯಿಸಿ ರೈಲು ಬಂಡಿಯಲ್ಲಿ ಕುಳಿತು ಪ್ರಿಟೋರಿಯಾಕ್ಕೆ ಹೋಗಲು ಯೋಚಿಸಿದೆನು. ಮಾರನೆಯ ದಿನ ಬೆಳಿಗ್ಗೆ ರೈಲ್ವೆಯ ಜನರಲ್ ಮ್ಯಾನೇಜರಿಗೆ ಒಂದು ದೊಡ್ಡ ತಂತಿವಾರ್ತೆಯನ್ನು ಕಳುಹಿಸಿದೆನು. ಅಬ್ದುಲ್ಲಾ ಸೇಟರಿಗೂ ಕೂಡ ತಿಳಿಸಿದೆನು. ಸೇಟರು ಕೂಡಲೆ ಜನರಲ್ ಮ್ಯಾನೇಜರನ್ನು ಕಂಡು ಮಾತನಾಡಿದರು. ರೈಲ್ವೆ ಕೆಲಸಗಾರರ ಚರ್ಯವು ಸಕ್ರಮವಾಗಿದ್ದಿತೆಂದು ಮ್ಯಾನೇಜರನು ಸಮರ್ಥಿಸಿದನು. ಆದರೆ ಮುಂದೆ ನನಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾಗಿ ಕೆಲಸಗಾರರಿಗೆ ತಂತಿಯಮೂಲಕ ತಿಳಿಸುವುದಾಗಿ ಸೇಟರಿಗೆ ಹೇಳಿದನು. ಮೆರಿಟ್ಸ್‌ಬರ್ಗಿನಲ್ಲೂ, ಇತರ ಸ್ಥಳದಲ್ಲೂ ಇರುವ ಭಾರತೀಯ ವರ್ತಕರುಗಳಿಗೆ ಸೇಟರು ತಂತೀವಾರ್ತೆಯನ್ನು ಕಳುಹಿಸಿ ನನ್ನ ಕ್ಷೇಮವನ್ನು ವಿಚಾರಿಸಿಕೊಳ್ಳುವಂತೆ ಕೋರಿದ್ದರು. ಮೆರಿಟ್ಸ್‌ಬರ್ಗಿನ ವರ್ತಕರುಗಳು ಸ್ಟೇಷನ್ನಿಗೆ ಬಂದು ತಮಗಾದ ಅವಮಾನವನ್ನು ನನಗೆ ತಿಳಿಸಿ ಸಮಾಧಾನವನ್ನು ತೋರಿಸಿದರು. ಪ್ರತಿದಿನದಲ್ಲೂ ಭಾರತೀಯರಿಗೆ ಇಂತಹ ಅವಮಾನವು ಜರುಗುತ್ತಲೇ ಇರುವುದೆಂಬ ಬಗೆಗೆ ಅವರು ಅನೇಕ ವಿಷಯಗಳನ್ನು ತಿಳಿಸಿದರು. ಸಾಯಂಕಾಲದವರೆಗೂ ಅವರೊಂದಿಗೆ ಮಾತನಾಡುತ್ತಿದ್ದೆನು. ಅಷ್ಟರಲ್ಲಿ ರೈಲುಬಂಡಿಯು ಬಂತು. ನನಗೊಂದು ಸ್ಥಳವು ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟಿತು. ಅಲ್ಲಿ ಬಂದು ಟಿಕೆಟ್ಟನ್ನು ಕೊಂಡುಕೊಂಡು ಆ ರಾತ್ರಿ ಬಂಡಿಯಲ್ಲಿ ಚಾರ್ಲ್ಸ್ ಟೌನ್ ಕಡೆಗೆ ಹೊರಟೆನು.

ಮೆಟ್ರಿಕ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯರು ಸೋಲುವರು; ಅದೇಕೆ?

(ಟಿ. ಬಿ. ಮಟ್ಟಯ್ಯ)

ಉದಾಹರಣೆಗಾಗಿ ನಮ್ಮೂರಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ವರ್ಷವರ್ಷವೂ ಫೇಲ್ ಆಗುವ ವಿದ್ಯಾರ್ಥಿಯರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡರೆ, ವಿದ್ಯಾರ್ಥಿಯರಿಗೂ, ಉಪಾಧ್ಯಾಯರುಗಳಿಗೂ, ಮಕ್ಕಳ ತಂದೆತಾಯಿಯರಿಗೂ ಅದೇಕೆ ಹೀಗಾಗುವುದು? ಎಂದಾಗುವುದು. ವಾಸ್ತವ. ಅನೇಕವೇಳೆ ವಿದ್ಯಾರ್ಥಿಯರಿಗೆ ಪರೀಕ್ಷೆಗಳಲ್ಲಿ ಪರೀಕ್ಷಕರಿಗೆ ಬೇಕಾದುದೇನೆಂದು ಗೊತ್ತಿರುವುದಿಲ್ಲ. ಅನೇಕರು ಪರೀಕ್ಷೆಗಳೇನೆಂದೂ, ಪರೀಕ್ಷಕರು ತಮ್ಮಿಂದ ತಿಳಿಯಬಯಸುವುದೇನೆಂದೂ, ತಾವು ಮಾಡಬೇಕಾದುದೇನೆಂದೂ ಚೆನ್ನಾಗಿ ತಿಳಿದುಕೊಳ್ಳದೆ ಪರೀಕ್ಷೆಗಳಲ್ಲಿ ತಪ್ಪಿಬೀಳುವುದರಿಂದ ಸೋಲುವರು. ಹಲವರು ಪರೀಕ್ಷೆಯಲ್ಲಿ ಬೇಕಾದವಲ್ಲದ ಬೇರೆ ವಿಧದಿಂದ ಪ್ರಶ್ನೆಗಳಿಗೆ ಉತ್ತರವೀಯಲು ಪ್ರಯತ್ನಿಸಿ ತಪ್ಪುವರು. ಅನೇಕಸಲ ಪರೀಕ್ಷೆಯಲ್ಲಿ ಪಾಸಾದ ಹುಡುಗರನ್ನು ನೀವೇಕೆ ಸೋತುಹೋದಿರೆಂದು ವಿಚಾರಿಸಿದರೆ 'ಅದೇ ನನಗೆ ಗೊತ್ತಿಲ್ಲ. ನಾನು ಖಂಡಿತವಾಗಿ ಪಾಸಾಗುವೆನೆಂದು ತಿಳಿದಿದ್ದೆ' ಎಂದನ್ನುವರು. ಪರೀಕ್ಷಾಕರ್ತರು ಹುಡುಗರಿಗೆ ಎಷ್ಟರಮಟ್ಟಿಗೆ ತಿಳಿದಿದೆ ಎಂಬುದನ್ನೂ, ಅಲ್ಲದೆ ಅವರಿಗೆ ನ್ಯಾಯವಾದ ದಕ್ಷತೆಯಿಂದ ಕೆಲಸ ಸಾಗಿಸಲು ಯೋಗ್ಯತೆ ಇದೆಯೋ ಎಂಬುದನ್ನೂ ಪರೀಕ್ಷಿಸುವರು. ಅದರಿಂದ ವಿದ್ಯಾರ್ಥಿಗಳು ಅಂತಹ ತಿಳುವಳಿಕೆಯನ್ನೂ, ಯೋಗ್ಯತೆಯನ್ನೂ ತೋರಿಸುವುದು ಅವರ ಕರ್ತವ್ಯವು.

ಪರೀಕ್ಷೆಗಳಲ್ಲಿ ಕೈಗೆ ಪ್ರಶ್ನಾಪತ್ರವು ಸಿಕ್ಕಿದೊಡನೆಯೇ ವಿದ್ಯಾರ್ಥಿಗಳು ಗಾಬರಿಯಾಗದಂತೆ ಶಾಂತರಾಗಿದ್ದು, ಒಮ್ಮೆ ಅದನ್ನು ಮೊದಲು ಓದಬೇಕು. ಆದರೆ ಹೀಗೆ ಮಾಡದೆ ಅವರ ಪೇಪರುಗಳು ಕೈಗೆ ಸಿಕ್ಕಿದಕೂಡಲೆ ಒಂದು ಸಲ ಹೇಗೋ ಹಾಗೆ ಓದಿಬಿಟ್ಟು ಬರೆಯಲು ಪ್ರಾರಂಭಿಸುವರು. ಇದು ತಪ್ಪು. ಪೇಪರನ್ನು ಇಂತಿಷ್ಟೇ ಸಮಯದಲ್ಲಿ ಮುಗಿಸಬೇಕೆಂದು ನಿಯಮವಿರುವುದರಿಂದ ನೀವು ಪೇಪರನ್ನು ಜಾಗ್ರತೆಯಾಗಿ ಓದಿನೋಡಿ ಇಂತಿಂಥ ಪ್ರಶ್ನೆಗೆ ಇಂತಿಷ್ಟೇ ಸಮಯಬೇಕೆಂಬುದನ್ನು ಇಂತಿಂತಹ ಪ್ರಶ್ನೆಗಳನ್ನೇ ಮೊದಲು ತೀರಿಸುವೆನೆಂದೂ ತೀರ್ಮಾನಮಾಡಬೇಕು. ಹಾಗೆ ನೀವು ತೀರ್ಮಾನಮಾಡದಿದ್ದರೆ ಕೆಲವು ಪ್ರಶ್ನೆಗಳಿಗೆ ಬೇಕಾದ್ದಕ್ಕಿಂತ ಹೆಚ್ಚು ಸಮಯ ಕೊಟ್ಟೆವೆಂದೂ ಅಷ್ಟರೊಳಗೆ ಗೊತ್ತಾಗಿ ಸಮಯ ವ್ಯರ್ಥವಾಯಿತೆಂದು ನೀವು ಪಶ್ಚಾತ್ತಾಪ ಪಡಬೇಕಾಗುವುದು. ಆದುದರಿಂದ ಪ್ರಶ್ನೆಗಳಿಗೆ ಜವಾಬುಕೊಡಲು ಪ್ರಯತ್ನಿಸುವಾಗ ಕೆಳಗಿನ ಸಂಗತಿಗಳನ್ನು ಸ್ವಲ್ಪ ಮನಸ್ಸಿಗೆ ಹಚ್ಚಿಕೊಳ್ಳಿರಿ.

ಪೇಪರಿನಲ್ಲಿ ಇರುವ ಕ್ರಮದ ಪ್ರಕಾರವೇ ಉತ್ತರ ಬರೆಯಬೇಕೆಂತಿಲ್ಲ. ನಿಮಗೆ ಚೆನ್ನಾಗಿ ಗೊತ್ತಿಲ್ಲದ ಪ್ರಶ್ನೆಗಳನ್ನು ಬಿಡುವುದು ಒಳ್ಳೇದು. ಯಾವುದಾದರೂ ಪ್ರಶ್ನೆಯು ಸ್ವಲ್ಪ ಕಷ್ಟತರದ್ದಿದ್ದು, ನಿಮ್ಮ ಪೂರ್ಣ ಆಲೋಚನಾಶಕ್ತಿಯನ್ನು ಉಪಯೋಗಿಸಬೇಕೆಂತಿದ್ದರೆ ಅದನ್ನು ಅಷ್ಟರಿಗೆ ಬಿಡಬೇಕು. ಆದರೆ ಅಷ್ಟರಿಗೆ ಬೇಕಾದ ಸಮಯವನ್ನು ಮಡಗಿಯೇ ತೀರಬೇಕು. ಉತ್ತರ ಕೊಡಲು ಪ್ರಶ್ನೆಗಳನ್ನಾರಿಸುವಾಗ, ಸುಲಭದಿಂದ ನೀವು ಉತ್ತರ ಕೊಡಲು ಶಕ್ಯವಿರುವವನ್ನು ಮೊದಲು ತಕ್ಕೊಳ್ಳಬೇಕು. ಪೇಪರಿನಲ್ಲಿರುವ ಎಲ್ಲಾ ಪ್ರಶ್ನೆಗಳೂ ನಿಮಗೆ ಚೆನ್ನಾಗಿ ಗೊತ್ತಿದ್ದರೆ ಕಷ್ಟತರವಾದ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳಿ. ಬಹಳ ಹೆಚ್ಚು ಸಮಯ ತೆಗೆದುಕೊಳ್ಳುವ ಪ್ರಶ್ನೆಗಳನ್ನು ಹಿಂದಕ್ಕಿಡಿ. ನೀವು ಪರೀಕ್ಷೆಯಲ್ಲಿ ಒಂದು ಪ್ರಶ್ನೆಗೆ ಜವಾಬುಕೊಡಲು ಪ್ರಾರಂಭಿಸುವಾಗ ಆ ಪ್ರಶ್ನೆಯು ಅದೇನೆಂಬುದನ್ನು ಗ್ರಹಿಸಬೇಕು. ಏಕೆಂದರೆ, ಅನೇಕವೇಳೆ ಪರೀಕ್ಷಕರು ಕೇಳಿದೊಂದಾದರೆ ನೀವು ಬರೆಯುವುದೊಂದಾಗುತ್ತದೆ. ಪ್ರಶ್ನೆಯೇನು, ಪರೀಕ್ಷಕರು ಕೇಳುವುದೇನು ಎಂಬುದನ್ನು ಚೆನ್ನಾಗಿ ಗ್ರಹಿಸಿ ಅವರು ಕೇಳಿದ್ದಕ್ಕೆ ಸರಿಯಾದ ಉತ್ತರವನ್ನು ಮಾತ್ರ ಕೊಡಬೇಕು. ಏಂದರೆ ಬೇಕಾದ್ದಕ್ಕಿಂತ ಹೆಚ್ಚು ಬೇಡ, ಕಮ್ಮಿಯೂ ಬೇಡ. ಅವೆರಡೂ ತಪ್ಪು.

ಬರೆಯುವುದಕ್ಕೆ ಮೊದಲು ಬರೆಯುವುದೇನೆಂಬುದನ್ನು ಚೆನ್ನಾಗಿ ಗ್ರಹಿಸಿ ಹಾಗೆ ಉತ್ತರವನ್ನು ಮನಸ್ಸಿನಲ್ಲಿಯೇ ಯೋಚಿಸಿ ಅದನ್ನು ಯಾವ ಕ್ರಮದಲ್ಲಿ ಬರೆಯುವುದೆಂಬುದನ್ನು ನಿಶ್ಚಯಿಸಬೇಕು. ಹಾಗೆ ಮಾಡದೆ ಹೋದರೆ, ನಿಶ್ಚಿತ ಒಟ್ಟಿ ಬರೆಯುತ್ತಾ ಹೋಗಬೇಕಾಗುವುದಲ್ಲದೆ ಬರೆದದ್ದನ್ನೇ ಎರಡು ಸಾರೆ ಬರೆಯುವ ಸಂದರ್ಭಗಳು ಬರುತ್ತವೆ. ಕೆಲವು ವೇಳೆ ಬರೆದದ್ದು ನ್ಯಾಯವಾದ ರೀತಿಯಲ್ಲಿಯೇ ಇರುವುದಿಲ್ಲ. ಭಾಷೆಯು ಇಂಗ್ಲೀಷಾದರೆ, ಬರೆಯುವಂತಹ ಪ್ರತಿ ಒಂದು ವಾಕ್ಯವನ್ನು ಮೊದಲು ಮನಸ್ಸಿನಲ್ಲಿಯೇ ಯೋಚಿಸಿ ಆ ಮೇಲೆ ಕಾಗದದಲ್ಲಿ ಬರೆಯಬೇಕು. ಈ ನಿಯಮವಿಲ್ಲದಿದ್ದರೆ, ಅವಸರದಿಂದ ಕೈಗೆ ಬಂದದ್ದು ಬರೆಯುತ್ತಾ ಹೋಗುವಾಗ ಕೆಲವು ವೇಳೆ ದುರ್ವಾಕ್ಯಗಳಲ್ಲಿ ಕರ್ತೃ ಕರ್ಮಗಳೇ ಇರುವುದಿಲ್ಲ.

ಬರೆಯುವ ಶೈಲಿಯು ಯಾವಾಗಲೂ ಸುಲಭವಾಗಿಯೂ ಹಾಗೂ ಸ್ಪಷ್ಟವಾಗಿಯೂ ಇರಬೇಕು. ಅಲ್ಲದೆ ಅಕ್ಷರ ಜ್ಞಾನವಿರುವ ಪ್ರತಿ ಒಬ್ಬನಿಗೂ ತಿಳಿಯುವಂತೆ ಇರಬೇಕು. ನೀವು ಬರೆದಂತಹದ್ದು ಇಂತಹದ್ದೆಂದು ಪರೀಕ್ಷಕರ ಮನಸ್ಸಿಗೆ ಬರಬೇಕು. ನೀವು ಬರೆದದ್ದು ನಿಮ್ಮ ಪರೀಕ್ಷಕರಿಗೆ ತಿಳಿದೀತೋ ಇಲ್ಲವೋ ಎಂಬ ಸಂಶಯವು ನಿಮ್ಮಲ್ಲಿ ಉತ್ಪನ್ನವಾಯಿತೆಂದರೆ ನೀವು ಬುದ್ಧಿ ಕೌಶಲ್ಯ ಕಳೆದುಕೊಳ್ಳುವಿರೆಂದು ಮನಸ್ಸಿನಲ್ಲಿಡಿರಿ.

ನೀವು ಬರೆಯಲಿಕ್ಕಿರುವುದನ್ನೆಲ್ಲಾ ಆಗುವಷ್ಟು ಸ್ವಲ್ಪದರಲ್ಲಿ ತೀರಿಸಬೇಕು. ಕೆಲವರಿಗೆ ತಾವು ಬರೆದಷ್ಟೂ ಒಳ್ಳೆಯದೇ ಎಂಬ ತಪ್ಪಭಿಪ್ರಾಯವಿರುವುದು. ಪುರಗಳನ್ನು ತುಂಬಿಸಲಿಕ್ಕಾಗಿ ಬೇಕಾದಷ್ಟು ಬರೆಯುವುದರಲ್ಲಿ ಯಾವ ಪ್ರಯೋಜನವೂ ಇಲ್ಲ. ಯಾವಾಗಲೂ ಮಿತವಾಗಿ ಬರೆಯಬೇಕು. ಇದರಿಂದ ಸಮಯ ಉಳಿಯುತ್ತದೆ. ಹಾಗೆಯೇ ಪರೀಕ್ಷಕರಿಗೆ ಬೇಸರಿಕೆ ಹಿಡಿಯುವುದು ತಪ್ಪುತ್ತದೆ. ನಿಮ್ಮ ಕಾಗದಗಳನ್ನು ಓದುತ್ತಾ ಹೋಗುವಾಗ ಪರೀಕ್ಷಕರಿಗೆ ಬೇಸರವಿಡಿಯದಂತೆ ಮಾಡುವುದು ನಿಮ್ಮ ಮುಖ್ಯ ಕೆಲಸ. ಹತ್ತು ಶಬ್ದಗಳಲ್ಲಿ ಹೇಳಬಹುದಾದದ್ದನ್ನು ಇಪ್ಪತ್ತು ಶಬ್ದಗಳಲ್ಲಿ ಹೇಳುವುದು ನಿಮ್ಮ ಯೋಗ್ಯತೆಯನ್ನು ಹೆಚ್ಚಿಸಿದಂತಾಗಲಿಲ್ಲವಲ್ಲದೆ ದಕ್ಷತನವನ್ನು ತೋರ್ಪಡಿಸಿದಂತಾಗುತ್ತದೆ. ಆದರೆ ಪ್ರಶ್ನೆಗೆ ಉತ್ತರ ಹತ್ತು ಶಬ್ದಗಳಲ್ಲಿ ಕೊಡಬೇಕಿದ್ದರೆ ಅದನ್ನು ಐದು ಶಬ್ದಗಳಲ್ಲಿ ಅಪೂರ್ಣ ಉತ್ತರ ಕೊಡಕೂಡದು.

ನಿಮ್ಮ ಕೈಬರಹವು ಚೆನ್ನಾಗಿರಲಿ. ಕೈಬರಹ ಚೆನ್ನಾಗಿಲ್ಲದವರು ಅದನ್ನು ಚೆನ್ನಾಗಿ ಮಾಡಿಕೊಳ್ಳುವುದು ಬಹಳ ಒಳ್ಳೇದು. ಏಕೆಂದರೆ—ಕೈಬರಹದಲ್ಲಿನ ಒಗಟುಗಳನ್ನು ಬಿಡಿಸುವುದು ಪರೀಕ್ಷಕರ ಕರ್ತವ್ಯವಲ್ಲ. ಆದರ ಪರೀಕ್ಷಕರಿಗೆ ಸುಲಭವಾಗಿ ಗೊತ್ತಾಗುವಂತೆ ಚೆನ್ನಾಗಿ ಬರೆಯುವುದು ವಿದ್ಯಾರ್ಥಿಯರ ಕರ್ತವ್ಯ. ವಿದ್ಯಾರ್ಥಿಯರು ತಾವು ಬರೆಯಬೇಕೆಂಬ ಆತುರದಿಂದ ಕೈಬರಹ ಚೆನ್ನಾಗಿರಬೇಕೆಂಬ ಅಂಶಕ್ಕೆ ನಿಗವೇ ಕೊಡುವುದಿಲ್ಲ. ಗೊತ್ತಾಗದ ಕೈಬರಹದಲ್ಲಿ ತುಂಬಾ ಬರೆಯುವುದಕ್ಕಿಂತ ಗೊತ್ತಾಗುವ ಹಾಗೆ ಸ್ವಲ್ಪ ಬರೆಯುವುದೇ ಹಿತ. ಪರೀಕ್ಷಕರಿಗೆ ನಿಯಮಿತ ಸಮಯವಿರುವದರಿಂದ ಓದಲಾಗದಂತಿರುವ ಕಾಗದಗಳಲ್ಲಿ ತಮ್ಮ ಸಮಯವನ್ನು ಕಳೆಯುತ್ತಾ ಕೂರಲು ಇಷ್ಟಪಡುವುದಿಲ್ಲ. ಅವರಿಗೆ ಹಾಗೆ ತೊಂದರೆಯಾದರೆ ನಿಮ್ಮ ಮಾರ್ಕ ಕಳೆಯುವರು. ಆದ್ದರಿಂದ ಎಚ್ಚರ! ನೀವು ಬರೆದುದನ್ನು ಪುನಃ ಸರಿ ಓದಿನೋಡಲು ಮರೆಯಬೇಡಿ. ಕಾಗದಗಳೆಲ್ಲಾ ಬರೆದು ಆಗುವವರೆಗೆ ಓದಿನೋಡುವ ಕೆಲಸವನ್ನು ಮಾಡಗೊಡದೆ ಒಂದು ಪ್ರಶ್ನೆಗೆ ಉತ್ತರಕೊಟ್ಟು ಆದ ಬಳಿಕ ಅದನ್ನು ಓದಿನೋಡಿ. ನೀವು ಮಾಡಿದ ಕೆಲಸವೆಷ್ಟಿದೆ ಎಂಬುದಕ್ಕಿಂತಲೂ, ನೀವು ಪೂರೈಸಿದ ಕೆಲಸವೆಂತಹುದು ಎಂಬುದು ಮುಖ್ಯ. ನೀವು ಚೆನ್ನಾಗಿ ಪ್ರಶ್ನೆಗಳಿಗೆ ಉತ್ತರ ವಿತ್ತಿದ್ದಲ್ಲಿ, ಪರೀಕ್ಷಕರು ಆತನಿಗೆ ಸಮಯವಿದ್ದಿದ್ದರೆ ಈತನು ಬಾಕಿ ಪ್ರಶ್ನೆಗಳನ್ನು ಚೆನ್ನಾಗಿಯೇ ಮಾಡುತ್ತಿದ್ದನು ಎಂದು ಯೋಚಿಸಿ ಮಾರ್ಕುಗಳನ್ನು ಕೊಡುವುದರಲ್ಲಿ ಉದಾರರಾಗುವರು. ಆದುದರಿಂದ ಬರೆದುದನ್ನು ಪುನಃ ನೋಡಬೇಕೆಂಬ ನಿಯಮವಿಡಿ!

ನಿಮಗೆ ಖಂಡಿತವಾಗಿ ಸರಿಯೆಂದು ಗೊತ್ತಿರುವುದನ್ನೇ ಬಹಳ ಊಹನೆಯಿಂದ ಬರೆಯಬೇಡಿ. ಕೆಲವು ಸಮಯಗಳಲ್ಲಿ ಊಹನೆಯು ಸರಿಯಾಗುವುದೂ ಉಂಟು, ಆದರೆ ಇದು ಸರಿಯಾದ ಹಾದಿಯಲ್ಲ. ಅದೃಷ್ಟವಶಾತ್ ಒಂದೊಂದು ಸಮಯದಲ್ಲಿ ನಿಮ್ಮ ಊಹೆಯು ಸರಿಯಾಗಿ ನಿಮಗೆ ಹತ್ತಿದ ಒಂದೋ ಎರಡೋ ಮಾರ್ಕುಗಳು ಸಿಕ್ಕಬಹುದು. ಆದರೆ ಅನೇಕ ವೇಳೆ ಅದರಿಂದ ದುಷ್ಪರಿಣಾಮವುಂಟಾಗಬಹುದು. ಅಲ್ಲದೆ ನೀವು ತಿಳಿಯದಿದ್ದುದನ್ನು ನಿಮಗೆ ತಿಳಿದಂತೆ ನಟಿಸಬೇಡಿ. ಹಲವು ಸಮಯಗಳಲ್ಲಿ ವಿದ್ಯಾರ್ಥಿಗಳು ಯಾವುದಾದರೂ ಇಸವಿಯನ್ನು ಬರೆಯುವಾಗ ಒಂದರ ಮೇಲೆ ಇನ್ನೊಂದನ್ನು ಬರೆಯುವರು. ಕೆಲವು ಸಮಯಗಳಲ್ಲಿ ಒಂದು ಮಾತನ್ನು ಅನೇಕ ವಿಧವಾಗಿ ಅರ್ಥಮಾಡಬಹುದಾದ ರೀತಿಯಲ್ಲಿ ಬರೆಯುವುದುಂಟು. ಇದು ಶುದ್ಧ ತಪ್ಪು. ಪರೀಕ್ಷಕರು ಕಟ್ಟೀ ಗುಚ್ಛವೆಂದು ಗ್ರಹಿಸಿ ವಿಶೇಷವನ್ನು ಮಾಡಲು ಪ್ರಯತ್ನಿಸ ಕೂಡದಲ್ಲಿ ಬೀಳಬೇಡಿ.

ಎಲೈ ವಿದ್ಯಾರ್ಥಿಯರಿರಾ! ಪರೀಕ್ಷೆಗಳಿಗೆ ಕೂರುವಾಗ ನಿಮ್ಮ ಧ್ಯೇಯವೇನೆಂದು ಯೋಚಿಸಿಕೊಂಡು ಆ ಧ್ಯೇಯವನ್ನು ಸಾಧಿಸಲು ಎಚ್ಚರಿಕೆಯಿಂದಲೂ, ಬುದ್ಧಿವಂತಿಕೆಯನ್ನು ಪ್ರಯೋಗಿಸಿಯೂ ಪ್ರಾಮಾಣಿಕತನದಿಂದಲೂ ಪ್ರಯತ್ನಿಸಿರಿ! ಪ್ರಶ್ನೆಗಳಿಗೆ ಉತ್ತರ ಬರೆಯುವಾಗ ಬಹು ಎಚ್ಚರಿಕೆಯಿಂದ ಪ್ರತಿ ಶಬ್ದವನ್ನೂ, ವಾಕ್ಯವನ್ನೂ ತೂಗಿ ಪ್ರತಿ ಒಂದರಲ್ಲಿಯೂ ನಿಮ್ಮ ಪ್ರಾಣವಿದೆಯೆಂಬಂತೆ ಎಚ್ಚರಿಕೆಯಿಂದ ಬರೆಯಿರಿ. ಇಲ್ಲದೆ ಇರುವುದಕ್ಕಿಂತ ಹೆಚ್ಚು ಬುದ್ಧಿವಂತರೆಂದು ತೋರ್ಪಡಿಸಲು ಪ್ರಯತ್ನಿಸಿ ನೀವು ಇರುವುದಕ್ಕಿಂತಲೂ ಹೆಚ್ಚು ಮೂರ್ಖರಾಗಿ ಕಾಣಿಸಿಕೊಳ್ಳುವಾಗಿ ನೋತುಹೋಗಬೇಡಿರಿ!

ಎಡೆನಾಡು ಮೀಟಿಂಗು.

(ಬಾತಮೀದಾರರಿಂದ)

ತಾರೀಕು 12—9—26ರಲ್ಲಿ ಎಡೆನಾಡಿನವರ ಮೀಟಿಂಗು ಮಧ್ಯಾಹ್ನ 1 ಗಂಟೆಗೆ ನಾಂಗಾಲ ಮಹಾದೇವಸ್ಥಾನದಲ್ಲಿ ಮಿ ಚೇರಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ಸಂಗತಿಗಳು ಚರ್ಚಿಸಲ್ಪಟ್ಟು ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಪಾಸಾದುವು.

(1) ಮಲೆಮಹಾದೇವರ ಭಕ್ತಜನ ಸಂಘದ ಕರಣೀಕರಾಗಿದ್ದ ದಿವಂಗತ ಮಿ ಚೆಂಬಾಂಡ ಮುತ್ತಣ್ಣನವರ ಕುಟುಂಬಕ್ಕೆ ಒಂದು ವ್ಯಸನಸೂಚಕದ ಪತ್ರ ಕಳುಹಿಸುವುದು.

(2) ಈ ಕರಣೀಕತನಕ್ಕೆ ಮಿ ಕೊಳುವಂಡ ಎ ನಂಜಪ್ಪನವರನ್ನು ನೇಮಿಸುವುದು.

(3) ದೇವಸ್ಥಾನದ ಅಭಿವೃದ್ಧಿಯ ವಿಷಯ.

ಈ ಮೇಲ್ಕಂಡ ಸಂಗತಿಗಳು ಮುಗಿದ ಕೂಡಲೆ ಈ ಮೀಟಿಂಗನ್ನು ಬರಕಾಸ್ತುಮಾಡಿ ಪುನಃ ಸದರಿಯವರ ಅಧ್ಯಕ್ಷತೆಯಲ್ಲಿ ಇನ್ನೊಂದು ಸಭೆಸೇರಿ ಈ ಕೆಳಗಿನ ಠರಾವುಗಳನ್ನು ಮಂಜೂರುಮಾಡಿದರು.

(1) ಡಿಸ್ಟ್ರಿಕ್ಟ್ ಬೋರ್ಡಿನ ಮೆಂಬರನ್ನು ಇಲ್ಲಿ ಚುನಾಯಿಸುವುದರ ಬದಲು ವೀರರಾಜಪೇಟೆಯಲ್ಲಿ ನಡೆಯಬಹುದಾದ ಪಬ್ಲಿಕ್ ಮೀಟಿಂಗ್‌ನಲ್ಲಿ ವೀರಾಜಪೇಟೆ ಕಚೇರಿಗೆ ಸೇರಿದ ಎಲ್ಲಾ ನಾಡಿನವರು ಸೇರಿ ನಮಗೆಲ್ಲರ ಪ್ರೀತಿಗೆ ಪಾತ್ರನಾಗಿಯೂ, ಯೋಗ್ಯನಾಗಿಯೂ ಕಂಡ ಒರುವ ಒಬ್ಬನನ್ನು ಚುನಾಯಿಸುವುದು ಉತ್ತಮವೆಂದೂ ಮತ್ತು ಒಗ್ಗಟ್ಟನ್ನು ಕಾಪಾಡಿದ ಹಾಗಾಗುವುದೆಂದೂ ತೀರ್ಮಾನವಾಯಿತು.

(2) ಜಮ್ಮ ಹಿಡುವಳಿಯ ಸೆಟ್ಲ್‌ಮೆಂಟನ್ನು ರದ್ದುಮಾಡಬೇಕೆಂದು ಜಮೀನ್ದಾರರ ಸಂಘದಲ್ಲಿ ಹಲವು ಸಾರಿ ಸರ್ವಸಮ್ಮತದಿಂದಲೂ ಮತ್ತು ಕೌನ್ಸಿಲ್‌ನಲ್ಲಿ ಬಹುಮತದಿಂದಲೂ ಪಾಸಾದ ಠರಾವನ್ನು ನಮ್ಮ ಸರಕಾರದವರು ಇಷ್ಟರ ವರೆಗೆ ಗಮನಿಸದೆ ಹೋದುದು ವ್ಯಸನಕರವಾಗಿದೆ.

(3) ಈಗಿನ ಕೌನ್ಸಿಲಿನ ನಮ್ಮ ಚುನಾಯಿತ ಮೆಂಬರರು ಈ ವರೆಗೆ ಕೌನ್ಸಿಲ್‌ನಲ್ಲಿ ನಡೆದ ಸಂಗತಿಯನ್ನು ಓಟರುಗಳ ಮೀಟಿಂಗ್ ಮಾಡಿ ತಿಳಿಸದೆ ಹೋದುದಕ್ಕೆ ಈ ನಾಡಿನವರು ವಿಷಾಧಿಸುತ್ತಾರೆ.

NOTICE.

Tenders are invited for the supply to the Industrial school Virajpet of the following sizes and quantities of sawn timber to reach the undersigned before the 30th of September 192 The tenderers should on the acceptance of their tender deposit Rs 50 as security for the fulfilment of their contract and this sum will be forfeited in case of failure on their part The undersigned reserves the right to accept or reject any tender without assigning any reason for so doing

The timber should be supplied within a month of the date of acceptance of the tender —

50 X 12 X 1'	Nandi planks
Do	Beeti planks
50 X 12' X 1½	Nandi planks
100' X 1½ X 1½	Nandi reapers
50 X 2 X 2'	Beeti reapers
50 X 2½ X 2½	Beeti reapers
100 X 12 X 1	Red ceder planks

P C Uthaya
Sub Asst Inspector
2—2 of schools, Coorg

ಧೈರ್ಯದ ತ್ಯಾಗ.

ತಿರುವಾಂಕೂರು ಸಂಸ್ಥಾನದ ತಾರೂರು ಎಂಬಲ್ಲಿ ಒಂದು ಸಾಕಿದ ಆನೆಯು ಕೋಪವೆದ್ದು ಓಡ ತೊಡಗಿತು. ಮಾವುತನು ತಡೆಯಲಿಕ್ಕೆ ನೋಡಿದರೂ ಸಾಧ್ಯವಾಗಲಿಲ್ಲ. ಮಾವುತನನ್ನು ಎತ್ತಿ ಹಾಕಿ ಓಡಿಹೋಯಿತು. ಮಾವುತನಿಗೆ ಕಠಿಣ ಗಾಯವಾದರೂ ಸಾಯಲಿಲ್ಲ. ಕೊನೆಗೆ ಆಸ್ಪತ್ರೆಗೆ ಒಯ್ಯಲ್ಪಟ್ಟನು. ನಾರಾಯಣ ನಾಯರೆಂಬ ಹೆಸರಿನ ಆ ಮಾವುತನ ಗಾಯದಿಂದ ತುಂಬಾ ರಕ್ತ ಸೋರುತ್ತಿದ್ದಿತು. ನಾರಾಯಣ ನಾಯರ್ ಬದುಕಬೇಕಾದರೆ ಸಜೀವ ಮನುಷ್ಯನ ಮಾಂಸದ ತುಂಡನ್ನು ನಾರಾಯಣ ನಾಯರ ಗಾಯಕ್ಕೆ ಇಟ್ಟು ಹೊಲಿಯಬೇಕೆಂದು ಸರ್ಜನರು ಹೇಳಿದರು. ಈ ಸುದ್ದಿಯು ಊರೆಲ್ಲಾ ಮಿಂಚಿನಂತೆ ಹರಡಿತು. ಆದರೆ ಮಾಂಸ ಕೊಡುವವರು ಯಾರು? ಪನವಳ್ಳಿಯಲ್ಲಿ ಒಬ್ಬರು ದೊರೆತರು. ಇವರೇ ಕನ್ನಾಡ್ ಕೃಷ್ಣ ಐಯ್ಯರ್. ಆನೆ ಹುಕಾರದ ಕಾಲದಲ್ಲಿ ಈ ಮಹನೀಯರ ಜೀವನವೇ ಒದಗಾಯಿತು. ಅವರು ಆಸ್ಪತ್ರೆಗೆ ತ್ವರೆಯಿಂದ ಹೋಗಿ ತನ್ನ ಮಾಂಸವನ್ನು ಕೊಡ ಮಾಡಿಗೆ ಹೇಳಿದರು. ಈ ಉದಾರ ದಾನವನ್ನು ಸರ್ಜನರು ಸ್ವೀಕರಿಸಿ ಅವರ ಸೊಂಟದಿಂದ ಒಂದು ಗಟ್ಟಿ ಮಾಂಸವನ್ನು ಕೊಯಿದುಕೊಂಡರು. ಇವರ ಗಾಯಕ್ಕಾಗಿ ಆಸ್ಪತ್ರೆಯಲ್ಲಿ ಒಂದು ತಿಂಗಳು ಇದ್ದು ಚಿಕಿತ್ಸೆ ಹೊಂದಬೇಕಾಯಿತು. ಕನ್ನಡ್ ಕೃಷ್ಣಯ್ಯರ ಧೈರ್ಯದ ದಾನದಿಂದ ನಾರಾಯಣನಾಯರ ಜೀವ ಉಳಿಯಿತು. ಈ ಬಾತ್ಮಿಯು ಮಹಾತ್ಮ ಗಾಂಧಿಯವರಿಗೆ ಕಳುಹಿಸಲ್ಪಟ್ಟು ಇವರು ಈ ಉದಾರತ್ಯಾಗವನ್ನು ಪ್ರಶಂಸಿಸಿದ್ದಾರೆ.

ನೋಟೀಸು.

ತಾ 31—8—26ರಲ್ಲಿ ನನ್ನ ಈ ಕೆಳಗೆ ಬರೆದಿರುವ ಲಕ್ಕ ಹಸುವಿನ ರಾಸುಗಳು ನನ್ನ ಬಾಬ್ತು ಕುಂಬೂರು ತೋಟದಿಂದ ದನಕಾಯುವವನು ಹೊಡೆದುಕೊಂಡು ಹೋಗುತ್ತಿರುವಾಗ್ಯೆ ಮಡಿಕೇರಿ ಸೋಮವಾರಪೇಟೆ ರಸ್ತೆ 7ನೇ ಮೈಲು ಕಲ್ಲಿನಲ್ಲಿ ತಪ್ಪಿಸಿಹೋದವು ತಾಪುತ್ ಪತೆಯಿಲ್ಲ. ಯಾರಾದರು ಪುಣ್ಯಾತ್ಮರು ಪತೆಮಾಡಿಕೊಟ್ಟಲ್ಲಿ ದೊಡ್ಡ ಉಪಕಾರವಾಗುವದಲ್ಲದೆ ಪತೆಮಾಡಿದವರಿಗೆ 3 ರೂಪಾಯಿ ಇನಾಂ ಕೊಡಲು ಸಿದ್ಧವಾಗಿದ್ದೇನೆ.

1 ಎಳೇ ಪ್ರಾಯದ ಕರಿವರ್ಣದ ದೂರದೂರ ಬಿಳಿ ಚುಕ್ಕೆಯೂ ನೆತ್ತಿಯಲ್ಲಿ ಬಿಳೀರೋಮ ಇರುವ ಹಸು 1

2 ಸಾಧಾರಣ ಕಪ್ಪು ಮತ್ತು ಕೆಂಪು ಮಿಶ್ರವಾದ ಮೈಯಲ್ಲಿ ಚುಂಚು ಇರುವ ಹಸುವಿನ ಮೊಕ್ಕಡಸು 1

3 ಎಳೇ ಮತ್ತು ಬೂದಿ ಮಿಶ್ರವಾದ ಹೋರಿ ಕರಡಸು 1

4 ಕರಿ ಮತ್ತು ಸಾಧಾರಣ ಕೆಂಪು ಮಿಶ್ರವಾಗಿ ಹಣೆಯ ಮೇಲೆ ಬಿಳೀ ಪಟ್ಟಿ ಇರುವ ಹೋರಿ ಮೊಕ್ಕಡಸು 1

ಕಲ್ಲುಮಾಡ್ಮ ಎಂ ಬೆಳ್ಯಪ್ಪ
ಬಿಳಿಗೇರಿ ತೋಟ
ಸೋಮವಾರಪೇಟೆ

ಮದ್ರಾಸು ಕೊಡಗರ ಸಂಘ

ಮದ್ರಾಸು ಕೊಡಗರ ಸಂಘವು ಅದರ 3ನೇ ವಾರ್ಷಿಕೋತ್ಸವವನ್ನೂ ಮತ್ತು ಕೈಲಾಮುಹೂರ್ತ ಹಬ್ಬವನ್ನೂ ಆಚರಿಸಲಿಕ್ಕಾಗಿ ಈ ತಾರೀಕು ೫ರಲ್ಲಿ ಎಸ್‌ಪ್ಲನೇಡ್‌ನಲ್ಲಿರುವ ಯಂ ಸಿ ಎ ಯ ಹಾಲಿನಲ್ಲಿ ಸೇರಿತು. ಸಂಘದ ಮಾಜಿ ಅಧ್ಯಕ್ಷರಾದ ಮಿ ಬಿ ಪಿ ಕುಟ್ಟಪ್ಪ, ಯಂ ಎ ಯವರು ಮೀಟಿಂಗಿನ ಅಧ್ಯಕ್ಷರಾಗಿದ್ದರು. ಕಿಂಡಿತೀರ್ಥಗಳ ತರ ಕಳೆದ ಆಗೋಸ್ಟು ತಾರೀಕು 21ರಲ್ಲಿ ಈ ವರ್ಷದ ಗ್ರಾಡ್ಯುವೇಟುಗಳಿಗೆ ಸ್ವಾಗತವನ್ನೀಯಲು ನಡೆದ ಮೀಟಿಂಗಿನ ವಿವರವನ್ನು ಸೆಕ್ರೆಟರಿಯವರು ಓದಿದರು. ವಾರ್ಷಿಕ ವರದಿಯನ್ನು ಓದಿದಂತಾಯಿತೆಂದು ಒಪ್ಪಿಕೊಂಡ ಮೇಲೆ ಮಿ. ಕೆ ಯನ್ ಗಣಪತಿ, ಬಾರ್ ಎಟ್ ಲಾ ರವರು ಸಂಘದ ಉದ್ದೇಶಗಳನ್ನು ಚೆನ್ನಾಗಿ ಮನಮುಟ್ಟುವಂತೆ ಮಾಡಿಕೊಳ್ಳಲು ಮತ್ತು ಸಂಘದ ಆಫೀಸರುಗಳಿಗೆ ಸಹಾಯಕೊಟ್ಟು ಅವರ ಭಂಡವಾಳವನ್ನು ತೃಪ್ತಿಕರವಾಗಿ ತೆರಲು ಮೆಂಬರುಗಳು ತುಂಬಾ ತೊಂದರೆ ತೆಗೆದುಕೊಳ್ಳಬೇಕೆಂದು ಹೇಳಿ ಮಿ ಐ ಸಿ ಸುಬ್ಬಯ್ಯ ಬಿ ಎ (ಆನರ್ಸ್) ರವರು ಸದರಿ ವರದಿಯನ್ನು ಮಂಜೂರುಮಾಡುವಂತೆ ಸೂಚಿಸಿದರು. ಈ ಸೂಚನೆಯನ್ನು ಡಾಕ್ಟರ್ ಯನ್ ಅಯ್ಯಣ್ಣನವರು ಅನುಮೋದಿಸಲಾಗಿ ವರದಿಯು ಮಂಜೂರು ಮಾಡಲ್ಪಟ್ಟಿತು.

ಕಾರ್ಯಕ್ರಮಪಟ್ಟಿಯಲ್ಲಿ ನಂತರದ ವಿಷಯವು ಮುಂದಿನ ವರ್ಷದ ಉದ್ಯೋಗಸ್ಥರನ್ನು ಚುನಾಯಿಸುವುದು. ವಾಡಿಕೆಯಂತೆ ಮಿ. ಬಿ ಪಿ ಕುಟ್ಟಪ್ಪನವರು ಮೀಟಿಂಗಿನ ಅಧ್ಯಕ್ಷಸ್ಥಾನವನ್ನು ಬಿಟ್ಟು, ಚುನಾವಣೆ ನಡೆಯುವಾಗ ಅಧ್ಯಕ್ಷರಾಗಿರ ಬೇಕೆಂದು ಮಿಸೆಸ್ ಯನ್ ಯಸ. ಅಪ್ಪಯ್ಯ ಯವರನ್ನು ಕೇಳಿಕೊಂಡರು. ಬಂದು ವರ್ಷಕ್ಕೆ ಬಿ ಪಿ ಕುಟ್ಟಪ್ಪನವರೇ ಪುನಃ ಅಧ್ಯಕ್ಷರಾಗಿಯೂ ಕೆ ಯಂ ನಂಜಪ್ಪನವರು ಮತ್ತು ಮಿ ಐ ಸಿ. ಸುಬ್ಬಯ್ಯನವರು ಸಕ್ರೆಟರಿಗಳಾಗಿಯೂ ಚುನಾಯಿಸಲ್ಪಟ್ಟರು. ಅಧ್ಯಕ್ಷರಾಗಿದ್ದ ಮಿಸೆಸ್ ಅಪ್ಪಯ್ಯನವರು ಸಂಘದ ಕೆಲಸವನ್ನು ಚೆನ್ನಾಗಿ ನಡೆಸಿದಕ್ಕಾಗಿ ರಿಟಯರಾಗುವ ಉದ್ಯೋಗಸ್ಥರಿಗೆ ವಂದಿಸಿದರು. ಅನಂತರ ಮಿಸೆಸ್ ಕೆ ಜಿ ಗಣಪತ್ಯವರು ಪಿಯಾನೋದಲ್ಲಿ ಕೆಲವು ಪದಗಳನ್ನು ನುಡಿಸಿ ನೆರೆದಿದ್ದವರನ್ನು ಉಲ್ಲಾಸಗೊಳಿಸಿದರು. ಮೀಟಿಂಗು ಸಾಯಂಕಾಲ 7 ಗಂಟೆಗೆ ಬರಕಾಸ್ತಾಯಿತು.

ಕೆ. ಯಂ ನಂಜಪ್ಪ
ಗೌರವ ಕಾರ್ಯದರ್ಶಿ

ಮಾರಾಟಕ್ಕೆ ಸಿದ್ಧವಾಗಿದೆ.

ಮೈಸೂರು ವಾಣೀವಿಲಾಸ ಮೊಹಲ್ಲಾ, ಮೈಸೂರು ನಂಜನಗೂಡು ರೋಡಿನಲ್ಲಿರುವ 1ನೇ ಬ್ಲಾಕ್ 3 ನಂಬ್ರ ಸೈಟು, ಅಳತೆ 285 X 160 ಅಡಿಗಳುಳ್ಳ ಇಟ್ಟಿಗೆ ಕಾಂಪೌಂಡ್ ಸಹಿತ, 2 ಗೇಟು ಮತ್ತು ನೀರಿನ ಸೌಕರ್ಯ ಸಹಿತ ಹರಾಜಿಗೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟಿನವರ ಅನುಸರಿಸಿ 7117 ರೂಪಾಯಿ 6 ಆಣೆಗೆ ವಿಕರೀ ಮಾಡುತ್ತೆ. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರದುಕೊಳ್ಳಬಹುದು.

ಸ ಪರಿನ್‌ಟೆಂಡೆಂಟರು
ಲೇಬರ್ ಡಿಪಾರ್ಟ್‌ಮೆಂಟು
4—4 ಮೈಸೂರು

ವರ್ತಮಾನ ಸಂಗ್ರಹ.

ಒಳದೇಶ

ಕುಕ್ಲೂರು ಗ್ರಾಮದ ಮಾಳೇಟ್ಟಿರ ಬಿದ್ದಪ್ಪನವರು ತಾ ರಾತ್ರಿ ಶಿವಾಧೀನರಾದರೆಂದು ತಿಳಿಯಲು ವ್ಯಸನ ಪಡು

ತಾ 11 ರಿಂದ ಇಂದಿನವರೆಗೆ ಮಡಿಕೇರಿಯಲ್ಲಿ 3 65 ಮಳೆಯಾಗಿದೆ. ದೇಶದ ಬೇರೆ ಕಡೆಗಳಲ್ಲಿಯೂ ಸ್ವ ಮಳೆ ಬಿದ್ದಿದೆ.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ತಾ. 21ರಲ್ಲಿ ಸಾಯಂಕಾಲ 4 ಗಂಟೆಗೆ ಕಂಪೆನಿಯ ಆಫೀ ಸಿನಲ್ಲಿ ನಡಿಯುತ್ತದೆ.

ಮೆ|| ಕೊಂಗಟ್ಟಿರ ಪೊನ್ನಪ್ಪನವರು ಸೆಪ್ಟೆಂಬರ್ 12ರ ವರೆಗೆ ಅವರ ಮಡಿಕೇರಿ ಮನೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ವರೆಗೆ ಶಿರಂಗಾಲದಲ್ಲಿ 16 ಜನರಿಗೆ ಪ್ಲೇಗು ತಗಲಿ ದವರು ಮೃತರಟ್ಟರೆಂದೂ, ಹೆಬ್ಬಾಲೆಯಲ್ಲಿ ಒಬ್ಬನಿಗೆ ಅಂ ಟಿದುದೆಂದೂ ವರ್ತಮಾನ

ಈ ತಾ. 16ರಲ್ಲಿ ಸಾಯಂಕಾಲ ವೀರಾಜಪೇಟೆಯಲ್ಲಿರು ವ ಕೊಡವರೆಲ್ಲರೂ ಸೇರಿ ಪೋಲೀಸ ಸ್ಕ್ವಾರ್ ಹಾಲಿನಲ್ಲಿ ಒಂ ದು ಟೀಪಾರ್ಟಿಯನ್ನು ಮಾಡಿದರೆಂದು ತಿಳಿಯುತ್ತದೆ.

ಕಳೆದ ವಾರ ಪ್ರಕಟಿಸಿದಂತೆ ಈ ತಾ. 20ರಲ್ಲಿ ಕೊಡಗು ಕೌನ್ಸಿಲು ಮೀಟಿಂಗು ನಡೆಯುವುದಿಲ್ಲವಂತಲೂ ನವರ ಮೀಟಿಂ ಗು ಅಕ್ಟೋಬರು ತಿಂಗಳ ಅಂತ್ಯಕ್ಕೆ ಮುಂದೂಡಲಾಗಿದೆಯೆಂ ದೂ ತಿಳಿಯುತ್ತೇವೆ.

ಮಡಿಕೇರಿ ಮೈಸೂರಿನಿಂದ ಮೆ. [illegible] ವೀರಾಜಪೇಟೆಗೆ ವರ್ಗಾಯಿಸಲ್ಪಟ್ಟ ರಿಂದ ಇಂಜಿನಿಯರ್ ಅಮ್ಮತ್ತಿ ಬೆಟ್ಟಂಗಾಲದ ಮೆ. ಬಿ ವೆಂಕಟರಮಣ ಐ. ಎ ಯ ವರನ್ನು ಉಪಾಧ್ಯಾಯರಾಗಿ ನೇಮಿಸಿರುವರು.

ತಾರೀಕು 5—9—26ರಲ್ಲಿ ಕೊಡಗಿನ ಕೆಲವು ಸ್ಥಳಗಳಲ್ಲಿ ಜೋರಾದ ಬಿಸಿಲಿನ ತಾಪದಿಂದ ಗದ್ದೆಗಳ ನೀರು ಬಿಸಿಯಾಗಿ ಮೀನುಗಳು ಸತ್ತು ನಷ್ಟವಾಗಿವೆಯೆಂತ ೧ ೧ ದಿನದಲು ಇ ಷ್ಟಂತ ಜೋರಾಗಿ ಬಿಸಿಲು ಕಾದಿದ್ದರೂ ಇಂಥಾ ಅನರ್ಥ ವಂಟಾಗಿರುವುದಿಲ್ಲವೆಂತಲೂ ಒಂದು ವಾರ್ತೆ.

ರಜೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ ಮಿ | ಟಿ ಜೆ ಟಾ ರ್ ರವರು ಈ ತಾ. 20ರಲ್ಲಿ ಮಡಿಕೇರಿಗೆ ಒಂದು ಮರು ದಿನ ಕಮಿಷನರ ಹುದ್ದೆಯ ಚಾರ್ಜು ತೆಗೆದುಕೊಳ್ಳುವರೆಂ ದೂ, ಈಗಿನ ಕಮಿಷನರಾದ ಮೆ|| ಇ ಉಡಾವರು ಮದ್ರಾ ಸಿಗೆ ಫೈನೇನ್ಸಿನ ಅಂಡರ್ ಸೆಕ್ರೆಟರಿಯಾಗಿ ವರ್ಗಾಯಿಸಲ್ಪಡು ವರೆಂದೂ ಸುದ್ದಿ.

ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯ ಓಟರುಗಳ ಪಟ್ಟಿ ಯಲ್ಲಿ, ಓಟಿಗೆ ಹಕ್ಕಿದ್ದೂ, ಹೆಸರು ಬಿಟ್ಟು ಹೋಗಿರುವವರು ತಮ್ಮ ತಕರಾರನ್ನು ಈ ತಾ 9ರೊಳಗೆ ರೆವಿನ್ಯೂ ಆಫೀಸ ರಿಗೆ ಕಳುಹಿಸಬೇಕೆಂದು ಪ್ರಕಟವಾಗಿತ್ತಷ್ಟೆ. ಆದರೆ ಓಟರು ಪಟ್ಟಿಯು ಇನ್ನೂ ಸಂಪೂರ್ಣವಾಗಿ ಪ್ರಕಟವಾಗದೆ ಇರು ವದರಿಂದ ತಕರಾರು ಕಳುಹಿಸುವ ತಾರೀಕನ್ನು ಮುಂದಕ್ಕೆ ಇ ಡಲಾಗಿ ವರ್ತಮಾನ

ಸಂಪಾಜಾಜಪಟ್ಟಿ ಹೋಬಳಿ ರಂಗಸಮುದ್ರ ಗ್ರಾಮದಲ್ಲಿ ಒಬ್ಬ ಹೊಲತಿಯನ್ನು ಯಾರೋ ಕತ್ತಿಯಿಂದ ಕಡಿದು ಮೈ ಯಲ್ಲಿ ಹಲವು ಗಾಯಗಳನ್ನು ಮಾಡಿ ಕೊಂದು ಗದ್ದೆಯ ಬರೆಯಲ್ಲಿ ಹಾಕಿದ್ದು ಈ ತಾ. 10ರಲ್ಲಿ ಕಂಡುಬಂದಿದೆ. ಅಲ್ಲಿಯ ಕಡಕು ಭಂಗಿ ಎಂಬ ಕುರುಬನು ಈ ಕೃತ್ಯವನ್ನು ಮಾಡಿರ ಬಹುದೆಂದು ಗುಮಾನಿಯಾಗಿ ಪಡಿಯಿಸಿಲಾಗಿದ್ದ ಅವ ನನ್ನು ಪೋಲೀಸಿನವರು ಹುಡುಕಿ ಹಿಡಿದು ದಸ್ತಗಿರಿ ಮಾಡಿರು

ತಾ. 11ರಲ್ಲಿ ಮಡಿಕೇರಿಯಲ್ಲಿ ಕಮಿಷನರವರ ಅಧ್ಯ ಕ್ಷತೆಯಲ್ಲಿ ನಡೆದ ಪ್ಲಾಂಟೇಶನ್ ಶಾಲೆಯ ಕಮಿಟಿ ಮೀಟಿಂಗಿ ನಲ್ಲಿ ಮೆ. ಐಚೆಟ್ಟಿರ ಸುಬ್ಬಯ್ಯನವರು, ಮೆ. ಕೋಡಿರ ಮು ದ್ದಪ್ಪನವರು, ಶ್ರೀಮತಿಗಳಾದ ಪಾಂಡಂಡ ಅಕ್ಕಮ್ಮನವರು, ಮತ್ತು ಐಚೆಟ್ಟಿರ ಮುದ್ದಮ್ಮನವರು, ಇವರುಗಳಿಗೆ ಈಗಿನ ವ ರ್ಷ ಕೊಡುತ್ತಿದ್ದ ವೇತನಗಳನ್ನು ಈ ವರ್ಷವೂ ಮುಂದರಿಸು ವಂತೆ ತೀರ್ಮಾನಿಸಿದ್ದಲ್ಲದೆ, ಇಂಜೀನಿಯರಿಂಗ್ ಕಾಲೇಜಿನಲ್ಲಿ ರುವ ಮೆ. ಗುಮ್ಮಟ್ಟಿರ ಗಣಪತಿಯವರಿಗೆ ಡಾಕ್ಟರ್ ಕೋ ರ್ಸಿನ ಸಂಬಳ್ಳನವರ 25 ರೂಪಾಯಿಯ ವೇತನವೂ, ಮೆ. ನೆ ರ್ಸ ಪೂವಯ್ಯನವರಿಗೂ ಮತ್ತು ಶ್ರೀ ಕೊತಂಡ ಬೋಜಮ್ಮ ನವರಿಗೂ 15 ರೂಪಾಯಿಗಳ ವೇತನಗಳೂ, ಮೆ. ಕೇಳಪಂಡ ಚಕ್ಕಣ್ಣನವರಿಗೆ 10 ರೂಪಾಯಿ ವೇತನವೂ ಮಂಜೂರು ಮಾಡಲಾಗಿದೆ.

ಹಿಂದೂದೇಶ.

ಭರತಖಂಡದಲ್ಲಿ ಪ್ರತಿವರ್ಷವೂ ಐದೂವರೆ ಲಕ್ಷ ಜ ನ ಪ್ಲೇಗು ರೋಗಕ್ಕೆ ತುತ್ತಾಗಿರುವರೆಂದು ತಿಳಿಯಬರು ದೆ.

ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಬೆಂಕಿ ನಷ್ಟ ಪರಿಹಾರಕ ಫಂಡಿಗೆ ಈ ವರೆಗೆ ರೂ. 95778—15—9 ಜಮೆ ಯಾಗಿದೆ.

ಬಿಹಾರಿನಲ್ಲಿ ಖಾದಿ ಪ್ರಚಾರಕ್ಕೆ ಉತ್ತೇಜನ ಕೊಡುವ ದಕ್ಕಾಗಿ ಯೂರೋಪಿಯನರೇ ಎರಡು ಪ್ರದರ್ಶನಗಳನ್ನು ತೆರೆ ದರೆಂದು ಸುದ್ದಿ.

ತಾ 11—9—26ರಲ್ಲಿ ನೂಲಿನೀಯರ ಪಾರ್ಟಿಯವರೂ, ರೆಸ್ಪಾನ್ಸಿವ್ ಪಾರ್ಟಿಯವರೂ ಡೆಲ್ಲಿಯಲ್ಲಿ ಸಭೆ ಸೇರಿ ಇಂ ಡಿಪೆಂಡೆಂಟ್ ಕಾಂಗ್ರೆಸ್ ಪಾರ್ಟಿ ಒಂದನ್ನು ಏರ್ಪಡಿಸಿರುವರು.

ಮಿಸುಸೈರಾಕೆಯೋ ಪನಸ್ಪತಿಗಳಿಗೂ ಪ್ರೀತಿ ವಿಶ್ವಾಸದ ಗುಣಗಳಿರುವವೆಂದೂ, ಇವುಗಳಿಗೆ ಅತ್ಯಿಯುಂಟಾದರೆ ಅವು ದುಃಖಿಸುವವೆಂದೂ ಸರ್ ಜೆ. ಸಿ ಬೋಸರವರ ಪರಿಶೋಧ ನೆಯಲ್ಲಿ ಕಂಡು ಬಂದಿದೆ.

ಬರ್ಮಾ ದೇಶದ ರಂಗೂನ್ ಎಂಬಲ್ಲಿ ಒಂದು ಆಸ್ಪತ್ರೆಗಾ ಗಿ ಹಿಂದೂನಾಡಿನ ಒಬ್ಬ ದೊಡ್ಡ ಉದಾರಿಗಳಾದ ಮೆ|| [illegible] ಯು ಎಸ್ಕ್ವೈರ್ ಎಂಬವರು ಒಂದು ಲಕ್ಷ ರೂಪಾಯಿಯನ್ನು ಉಚಿತವಾಗಿ ಕೊಟ್ಟಿರುವರು.

ಪೂನಾಪಟ್ಟಣದ ಮುನ್ಸಿಪಾಲಿಟಿಗೆ ಬ್ರಾಹ್ಮಣೇತರರಾದ ಡಾಕ್ಟರು ನಾಯುಡುರವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ರು. ಬ್ರಾಹ್ಮಣರ ಸಂಪೂರ್ಣ ಸಹಾಯದಿಂದಲೇ ಇವರಿಗೆ ಜಯಸಾಧ್ಯವಾಗಿದೆ.

ಸಂಯುಕ್ತ ಪ್ರಾಂತ್ಯದ ಸರ್ಕಾರದವರು ನೇಮಿಸಿದ್ದ ಕ ಮಿಟಿಯ ಶಿಫಾರಸ್ಸಿನ ಮೇರೆ ಸರ್ಕಾರದ ಸಹಾಯದಿಂದ ಅ ಲ್ಲಿ ಕೆಲವು ಆಯುರ್ವೇದಿಕ್ ಮತ್ತು ಯುನಾನಿ ಸ್ಕೂಲುಗಳ ನ್ನು, ಕಾಲೇಜುಗಳನ್ನು ಸ್ಥಾಪಿಸುವಂತೆ ತೀರ್ಮಾನಿಸಿರುವರು.

ಸರ್ಕಾರಿ ಉದ್ಯೋಗ ಕೊಡುವದರಲ್ಲಿ ಯಾವದಾದರೂ ಒಂದು ಜಾತಿಗೆ ಇಂತಿಷ್ಟೇ ಸ್ಥಾನಗಳನ್ನು ಪ್ರತ್ಯೇಕಿಸಿ ಡಲು ಸಾಧ್ಯವಿಲ್ಲವೆಂದು ಪ್ರಸಂಶಾಯರು ಕ್ರೈಸ್ತರ ಪರವಾಗಿ ಅವರಲ್ಲಿಗೆ ಹೋದ ಡೆಪ್ಯುಟೇಶನಿಗೆ ಉತ್ತರ ಕೊಟ್ಟಿರುವರು.

ಗೂಳಿ ಎತ್ತನ್ನು ಬೆಳಿಸಬೇಕೆಂದಿರುವವರು ಅದು ಹುಟ್ಟಿ ಆರುತಿಂಗಳವರೆಗೆ ಅದನ್ನು ಹಾಲಿನಿಂದಲೆ ಸಾಕಬೇಕು. ನಂ ತರ ಹಾಲು ಕಡಿಮೆಮಾಡುತ್ತಾ ಬಂದು ಪುಷ್ಟಿಕರವಾದ (ಹಿಂ ಡಿ, ಹತ್ತಿಕಾಳು) ಆಹಾರ ಕೊಡುತ್ತಾ ಬರಬೇಕೆಂದು 'ಗೋ ಸೇವಕ' ದಲ್ಲಿ ಹೇಳಲ್ಪಟ್ಟಿದೆ.

ವಿದೇಶ.

ಜನಾಂಗಗಳ ಕೂಟವನ್ನು ಬಿಟ್ಟಿರುವವೆಂದು ಸ್ಪೈನ್ ದೇಶದ ಸರ್ಕಾರವು ಪ್ರಕಟಿಸಿರುತ್ತದೆ.

ಸ್ಪೈನ್ ದೇಶದವರು ಮೊರಾಕೋವಿಂದ ತಮ್ಮ ಸೈನ್ಯ ವನ್ನು ಹಿಂತೆಗೆಯುವರೆಂಬ ವರ್ತಮಾನವು ಸುಳ್ಳೆಂದು ಪ್ರಕಟ ವಾಗಿದೆ.

ಈಜಿಪ್ಟ್ ಸರ್ಕಾರದವರು ಆ ದೇಶದಲ್ಲಿರುವ ಈಗಿನ ಅ ಪೀಮು ಬೆಳೆಯನ್ನು 200,000 ಪೌಂಡುಗಳಿಗೆ ಕೊಂಡುಕೊಂ ಡಿರುವದಲ್ಲದೆ ಇನ್ನು ಮುಂದೆ ಅಲ್ಲಿ ಈ ಗಿಡವನ್ನು ಬೆಳೆಸಬಾ ರದೆಂದು ಹುಕುಂ ಮಾಡಿರುವರು.

ತಾ 12ರಲ್ಲಿ ಜಪಾನಿನ ಹಿರೋಶಿಮಾ ಎಂಬ ಪಟ್ಟಣದಲ್ಲಿ ಜೋರಾದ ಮಳೆ ಮತ್ತು ಬಿರುಗಾಳಿಯ ದೆಸೆಯಿಂದ 30 ಜ ನರು ಮೃತರಾದರು. 30 ಜನರು ಕಾಣದೆ ಇದ್ದರು; ನೂ ರು ಮನೆಗಳು ನೆಲಸಮವಾದವು.

ಈಜಿಪ್ಟಿಗೆ ಹೋಗಿದ್ದ ತುರ್ಕಿಯ ಮಾಜಿ ಸುಲ್ತಾನರ ಹೆಂ ಡತಿಗೆ ಕೊಡುತ್ತಿದ್ದ ಜೀವನ ವರ್ತನವನ್ನು ತುರ್ಕಿಯ ಸರ್ಕಾರ ವು ನಿಲ್ಲಿಸಿಬಿಟ್ಟಿದ್ದರಿಂದ ಅವಳು ಬಡತನದ ಕಷ್ಟವನ್ನು ಸಹಿಸ ಲಾರದೆ ನೈಲ ನದಿಗೆ ಧುಮಿಕಿ ಪ್ರಾಣತ್ಯಾಗಮಾಡಲೆತ್ನಿಸಿದಾ ಗ ಯಾರೋ ಕಂಡು ಆಕೆಯ ಜೀವವನ್ನು ಉಳಿಸಿದರು.

ತಾ. 11ರಲ್ಲಿ ಇಟಲಿಯ ಪ್ರಧಾನ ಮಂತ್ರಿಯಾದ ಎಸ್. ಮುಸ್ಸಲೋನಿಯವರು ಬಗಿ ಅರಮನೆಗೆ ಮೋಟಾರಿನಲ್ಲಿ ಹೋಗುತ್ತಿರುವಾಗ್ಯೆ ರಸ್ತೆಯಲ್ಲಿ 18 ವರ್ಷ ಪ್ರಾಯದ ಒಬ್ಬ ಗಾರೆ ಕೆಲಸದ ಯುವಕನು ಅವರ ಕಡೆಗೆ ಒಂದು ಬಾಂಬನ್ನು ಎಸೆದನು. ಆದರೆ ಅದು ಅವರ ಕಾರಿಗೆ ತಾಗಿ ಸಿಡಿದು ಹೊರಟು ಅವರಿಗೇನೂ ಅಪಾಯ ಉಂಟಾಗಲಿಲ್ಲ. ಯುವಕನೆ ಒಡ ನೇ ದಸ್ತಗಿರಿ ಮಾಡಲ್ಪಟ್ಟನು.

ಜರ್ಮನಿಯಲ್ಲಿ ಚಿಕ್ಕಲೆ ಇರುವವರ ಸಂಘ ಒಂದು ಹೊ ರಟಿದೆ. ಇದರಲ್ಲಿ ಹುಡುಗರು, ಹುಡುಗಿಯರೂ, ಗಂಡ ಸರೂ, ಹೆಂಗಸರೂ ಮೆಂಬರುಗಳಾಗಿರುವರು. ಇವರೆಲ್ಲ ರೂ ಜೊತೆಯಲ್ಲಿಯೇ ನದೀತೀರಗಳಲ್ಲಿ ಸ್ನಾನ ಮಾಡುವರು. ಇದನ್ನು ನೋಡಲು ಎಷ್ಟೋ ಜನರು ಹೋಗುವರು. ಬ ಟ್ಟೆ ಧರಿಸುವದು ಸ್ವಭಾವಿಕವಲ್ಲವೆಂದೂ, ಚಿಕ್ಕಲೆ ಇರುವದು ನಾಚಿಕೆಗೇಡಿತನವಲ್ಲವೆಂದೂ, ಚಿಕ್ಕಲೆ ಇರುವದರಿಂದ ಮನು ಷ್ಯನ ಸೌಂದರ್ಯ ಮತ್ತು ಆರೋಗ್ಯ ಹೆಚ್ಚುವವೆಂದೂ ಇವ ರ ಮತ. ಇದಕ್ಕೆ ಒಪ್ಪುವವರನ್ನೇ ತಮ್ಮ ಸಂಘಕ್ಕೆ ಸೇರಿ ಸಿಕೊಳ್ಳುವರು. ಈ ಒಗ್ಗಿ ಒಂದು ನೂತನ ಪತ್ರಿಕೆಯನ್ನು ಪ್ರಕಟಿಸುತ್ತಿದ್ದಾರೆ. ಇವರ ಕ್ಷೇತ್ರದೊಳಗಿರುವವರಿಗೆ ಪೋಲೀಸಿನವರು ಇವರ ಗೋಜಿಗೆ ಹೋಗುವುದಿಲ್ಲ.

WANTED.

A field writer from 1st October 1926, who can keep his own coolies about 20 to 25 during working season State salary required.

Apply to:— A. A

3—3 C/o Editor "Kodagu."

Mercara.

ಪತ್ರವ್ಯವಹಾರ

[ವಾಚಕರು ಬರೆದ ಅಭಿಪ್ರಾಯಗಳಿಗೆ ಪತ್ರಿಕಾಕ ರ್ತರು ಜವಾಬ್ದಾರರಲ್ಲ. — ಸಂ.]

ಕರ್ನಾಟಕಾಧಿವಾಸಿಗಳೇ,

ಆಗೋಪನ್ನು ತಿಂಗಳು ಕಳೆದುಹೋಯಿತು. ಸೆಪ್ಟೆಂಬರ್ ತಿಂಗಳು ಪ್ರಾರಂಭವಾಯಿತು. ೯ ತಿಂಗಳ ಕೊನೆಯೊಳಗಾಗಿ ೨೦,೦೦೦ ರಾಷ್ಟ್ರೀಯ ಸಭೆಯ ಸದಸ್ಯರನ್ನು ಮಾಡಬೇ ಕೆಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯವರು ನಿರ್ಣಯ ಮಾಡಿದ್ದು ತಮಗೆ ಗೊತ್ತೇ ಇದೆ. ಸಭಾಸದರ ನ್ನು ಮಾಡುವದು ಸಾಕಷ್ಟು ಜೋರಿನಿಂದ ಸಾಗಿರುವದಿಲ್ಲ ವೆಂಬುದು ವಿಷಾದದ ಸಂಗತಿಯು. ನಾವು ಮಾಡಿದ ನಿರ್ಣ ಯಗಳನ್ನು ಆಚರಣೆಗೆ ತರುವದು ಎಷ್ಟು ಮಹತ್ವವಾದದ್ದು ಎಂಬುದನ್ನು ತಮಗೆ ಹೇಳಬೇಕಿಂತಿಲ್ಲ. ನಾವು ಈಗ ಕೆಲಸ ಮಾಡಲು ತಪ್ಪಿದರೆ ನಮ್ಮ ಪ್ರಾಂತಕ್ಕೆ ಅಪಕೀರ್ತಿಯು ತಟ್ಟದೆ ಇರಲಾರದು. ಕರ್ನಾಟಕವು ಕಾರ್ಯ ಪ್ರವೃತ್ತವಾಗಲಿಕ್ಕೆ ನಿಧಾನ ವಾಗುವದೆಂಬುದು ನನಗೆ ಗೊತ್ತುಂಟು. ಆದರೆ ಒಮ್ಮೆ ಕಾ ರ್ಯವನ್ನು ಕೈಕೊಂಡ ಬಳಿಕ ವಾಯುವೇಗದಿಂದ ಪೂರ್ತಿ ಗೊಳಿಸುವದಾದರೂ ಕರ್ನಾಟಕದ ಸ್ವಭಾವವಾಗಿದೆ. ಕರ್ನಾ ಟಕಾಧಿವಾಸಿಗಳೇ, ನೀವು ನಿಮ್ಮ ಆಲಸ್ಯವನ್ನು ಬಿಡಿಗಿಟ್ಟು ಬೇ ಗನೇ ಕಾರ್ಯ ಪ್ರವೃತ್ತರಾಗಬೇಕೆಂದು ನಿಮ್ಮನ್ನು ಬೇಡಿಕೊಳ್ಳು ತ್ತೇನೆ. ಪ್ರತಿಯೊಬ್ಬ ಕನ್ನಡಿಗನು ತನ್ನ ಕರ್ತವ್ಯವನ್ನು ಮಾ ಡಿಯೇ ತೀರಬೇಕೆಂದು ಕರ್ನಾಟಕ ಮಾತೆಯ ಕಾಂಕ್ಷೆಯು ದೆ. ಪ್ರತಿಯೊಬ್ಬನು ತನ್ನ ಶಕ್ತ್ಯಾನುಸಾರವಾಗಿ ಕೆಲಸ ಮಾಡಿದರೆ ೨೦,೦೦೦ ಸಭಾಸದರನ್ನು ಮಾಡುವದು ಕಠಿಣ ವಲ್ಲ. ಒಂದುಗಳೇ, ಟೊಂಕ ಕಟ್ಟಿರಿ. ಮತ್ತು ನೀವು ನಿ ಮ್ಮ ಯಶಸ್ವಿಯಾದ ಕಾರ್ಯದಿಂದ ಕರ್ನಾಟಕವು ಉದಾರರಾ ಲಿಯೆಂಬುದನ್ನು ಸಿದ್ಧಮಾಡಿ ತೋರಿಸಿರಿ.

ಹಿಂದೂಸ್ಥಾನಿ ಸೇವಾದಲದವರು ಕೂಡಿಸ ಬೇಕಾದ ೫೦೦೦ ರೂ. ಗಳಲ್ಲಿ ಸುಮಾರು ಅರ್ಧ ಹಣವು ಕೂಡಿದೆ. ಆ ಕಾರ್ಯವನ್ನು ವಿಶ್ರಾಂತಿಯಿಲ್ಲದೆ ಜಗಳಿಂ ನ ಕಾರ್ಯ ಮಾಡುವ ನನ್ನ ಸಹಕಾರಿಗಳಾದ ಡಾ ಹರ್ಡೀಕರರು ನಾ ಡ ಮಾಡು. ಎಲ್ಲರೂ ಅವರಿಗ ನನ್ನ ಉಳಿದ ಹಣವನ್ನು ನಿಯಮಿತ ವೇಳೆಯಲ್ಲಿಯೇ ಕೂಡಿಸ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ವಿಜಾಪುರ, ಕೌಜಲಗಿ ಶ್ರೀನಿವಾಸರಾವ್,

1—9—26. ಅಧ್ಯಕ್ಷ,

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿ.

ಅಯ್ಯಾ,

ಹೆಬ್ಬಾಲೆ ಗ್ರಾಮದಲ್ಲಿ ಈಗಲೂ ಪ್ಲೇಗುರೋಗವು ತ ಲೆದೋರಿದ ಹಾಗೆ ಕಾಣುತ್ತೆ. ಆ ಗ್ರಾಮದಲ್ಲಿ ಕಳೆದ ವ ರ್ಷ ಒಬ್ಬ ಹೆಂಗಸು ತೊಳೆಗೆ ಬಿದ್ದು ಮೃತಪಟ್ಟಳು. ಅವ ಳ ಹೆಣವನ್ನು ಪೋಲೀಸಿನವರು ಆಸ್ಪತ್ರೆಗೆ ಕುಯ್ಯಲಿಕ್ಕೆ ಕಳು ಹಿಸಬೇಕಾಯಿತು. ಆದರೆ ಆ ಹೆಂಗಸಿನ ಸಂಬಂಧಿಕರು ಅದ ನ್ನು ಆಸ್ಪತ್ರೆಗೆ ಸಾಗಿಸದೆ ಅಲ್ಲಿಯೇ ಅಬಕಾರಿ ಸಬ್‌ಇನ್ಸ್‌ಪೆಕ್ಟರ ಫ್ರೇಜರ್ ಪೇಟೆ ಡಾಕ್ಟರನ್ನು ಅಲ್ಲಿಗೆ ಬರುವ ಹಾಗೆ ಮಾಡಿ ಅ ವರಿಗೆ ಅನೇಕ ತರದಲ್ಲಿ ಆ ಹೆಣವನ್ನು ಆಸ್ಪತ್ರೆಗೆ ತೆಗೆದುಕೊಂ ಡು ಹೋಗದ ಹಾಗೆ ಮಾಡಬೇಕಾಗಿ ಹೇಳಿಕೊಂಡರು. ಆದರೆ ಡಾಕ್ಟರು ಅದಕ್ಕೆ ಸಮ್ಮತಿಸಲಿಲ್ಲ ಮತ್ತು ಹಾಗೆ ಮಾ ಡಿದ್ದರೆ ಅದು ಕಾನೂನಿಗೆ ಪೂರಾ ವಿರೋಧವಾಗುತ್ತಿತ್ತು. ಅದ್ದರಿಂದ ಸ್ವಭಾವಿಕವಾಗಿ ಡಾಕ್ಟರ ಮೇಲೆ ಆ ಹೆಂಗಸಿನ ಬಂಧು ಬಳಗದವರು ದ್ವೇಷವಿಡಬೇಕಾಗಿತ್ತು. ಇದಕ್ಕೆ ಸಮ ಯ ಈಗ ಪ್ಲೇಗು ಸುರುವಾದದಕ್ಕೆ ದೊರಕಿರುತು. ಆ ಗ್ರಾಮದ ಒಂದೆರಡು ಜನರು ಮತ್ತು ಅವರಿಗೆ ಬೇಕಾದ ಸ್ನೇ ಹಿತರುಗಳು ಸೇರಿಕೊಂಡು ಈಗಿನ ಡಾಕ್ಟರು ನಮಗೆ ಹುಚ್ಚು ಚುಚ್ಚುವದು ನಮಗೆ ಧಾನವಿಲ್ಲ ಮತ್ತು ಅವರಿಂದ ಚುಚ್ಚಿಸಿಕೊ ಳ್ಳುವದಿಲ್ಲವೆ ಯೆಂಬೂ ಮತ್ತು ಅಲ್ಲದವೊಂದ ಪುಕಾರುಗಳ ನ ಡಿಸುವಾಗಿಯೂ ತಿಳಿಯಬರುತ್ತದೆ. ಇತರ ಗ್ರಾಮದ ಜನರಿಗೆ ಈ ಗಿನ ಡಾಕ್ಟರ ಮೇಲೆ ವಿಶ್ವಾಸವಿದೆ ಮತ್ತು ಇವರು ಜನರ ಪ್ರೀತಿ ಗೆ ಪಾತ್ರರಾಗಿರುತ್ತಾರೆ. ಹೆಬ್ಬಾಲೆ ಗ್ರಾಮದ ಒಂದೆರಡು ಜನರ ಇಚ್ಛೆಗೆ ಅಧಿಕಾರಿಗಳು ಅವರ ವಿರುದ್ಧದಲ್ಲಿ ಕೆಲ್ಲ ಅಭಿಪ್ರಾ ಯಪಡುವದು ಯುಕ್ತವಲ್ಲ ಮತ್ತು ಪ್ರೀಜಾಗ್ರತೆಯ ಮ ತ್ತು ಸತ್ಯಯುಕ್ತಳಿಸುವ ಹಳ್ಳಿಜನರಿಗೆ ಇವರಲ್ಲಿ ತುಂಬಾ ವಿ ಶ್ವಾಸವಿದೆ. ಅದ್ದರಿಂದ ಹೆಬ್ಬಾಲೆಯ ಒಂದೆರಡು ಜನರ ಅಭಿ ಪ್ರಾಯವನ್ನು ಯಾರು ಗಮನಕ್ಕೆ ತೆಗೆದುಕೊಳ್ಳಬಾರದೆಂದು ಕೋರಿಕೆ.

ಒಬ್ಬ ರೈತ.

ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯ ಠರಾವುಗಳು.

ಅಯ್ಯಾ, ಬಿನ್ನ ಹಾರಾಧಕರೇ, ಇತ್ತ ಚೆನ್ನಾಗಿ ಆಲಿಸಿರಿ.

ಸರಕಾರದವರು ಕೌನ್ಸಿಲ್ ಮೆಂಬರುಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳಾಗಿ ನೇಮಿಸಿಕೊಂಡು ನಮ್ಮ ಮೆಂ ಬರುಗಳ ಬೋರ್ಡಿನಲ್ಲೂ ಹೊಸ ಚುನಾವಣೆ ಪ್ರಯುಕ್ತ

ಜೆಗೆ ಆಸ್ಪದ ಕೊಡದೆ ಮೊದಲಿನ ಬೋರ್ಡಿನ ಇನ್ನೊಂದು ಮೀಟಿಂಗ್‌ನಲ್ಲಿ ಚರ್ಚಿಸಿ ತೀರ್ಮಾನ ಮಾಡುವಂತೆ ಅಪ್ಪಣೆ ಮಾಡಿ ಇನ್ನೊಂದು ಮೀಟಿಂಗ್ ಬರುವುದರ ಮುಂಚೆಯೇ ಹಜರತ್ ಚೀಫ್ ಕಮಿಷನರ ಸಾಹೇಬರವರಿಂದ ರೂಲ್ಸ್ ಪ್ರಿಂಟ್ ಆಗಿ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುವದಾಗಿಯೂ, ಬೋರ್ಡಿನವರಿಗೆ ಚರ್ಚೆ ನಡೆಸಲು ಅವಕಾಶ ದೊರೆಯಲಿಲ್ಲವಾಗಿಯೂ ಪತ್ರಿಕೆಗಳಿಂದ ತಿಳಿದುಬಂದಿರುತ್ತದೆ. ಇತ್ತೀಚೆಗೆ ಸದರಿ ರೂಲ್ಸ್ ನೋಡಿದರೆ (2) (e) ಯಲ್ಲಿ ಜಮ್ಮ (Jama tenure land) ಎನ್ನುವ ಪದವು ಸಂಗತಿಯಾಗಿ ಜಮ್ಮದ ಅರ್ಥವನ್ನು (ಜಮ್ಮ ಭೂಮಿಯೆಂದು ಜಮ್ಮ ಗಾರರು ಹೇಳುತ್ತಿರುವಂತೆ) (Jama tenure land means land assessed at one half the normal (sagu) rate of assessment) ಜಮ್ಮ ಅಂದರೆ ವಾಡಿಕೆಯ (ಸಾಗಿನ) ಅರ್ಧ ಕಂದಾಯ ವಿಧಿಸಿದ ಭೂಮಿಯೆಂದು ನಮೂದಿದೆ. ಇದನ್ನು ಬೋರ್ಡಿನಲ್ಲಿ ಚರ್ಚಿಸಿ ಬಹುಮತದಿಂದ ಸಲಹೆ ಕೊಟ್ಟಿದ್ದರೂ ಕೂಡ ಚೀಫ್ ಕಮಿಷನರವರು ಬೋರ್ಡಿನವರ ಒಪ್ಪಿಗೆಯನ್ನು ಮಂಜೂರುಮಾಡದೆ ಇರುವದು ತುಂಬಾ ಅತ್ಯಾಶ್ಚರ್ಯಕರ. ಕೌನ್ಸಿಲ್ ಮೆಂಬರುಗಳು ಈ ಸಂಗತಿ ಕೌನ್ಸಿಲ್‌ನಲ್ಲು ಹೋರಾಡಿ ತಿದ್ದುಪಡಿಗೆ ತಾರದಿದ್ದರೆ ನಮ್ಮ ಈ ಜಿಲ್ಲೆ ಪಕ್ಕೆಗೆ ತುಂಬಾ ಕುಂದಕ ಇದೆ.

"ದೇಶಹಿತೈಷಿ"

ಒಂದು ಮೋರಿ

ಅಯ್ಯಾ,

ನಮ್ಮೂರಲ್ಲಿ ಒಂದು ಮೋರಿ. ಅದು ಸರಕಾರಿ ರಸ್ತೆಗೆ ಅಡ್ಡ. ಅಲ್ಲೊಬ್ಬ ಪೋಲೀಸಿನವನ ಗಸ್ತು. ಬಂದ ಮೋಟಾರು, ಒಸ್ಸುಗಳ ಓಟವನ್ನು ಕಳಗೀಸುವ, ಮೋಟಾರಿನ ಅನಂತರ ಪತ್ತಿಸುವ 3 ವರ್ಷಕ್ಕೆ 3 ಸಲ ಮುರಿದು, ಮೂರು ಸಲ ಕಟ್ಟಿದರು. ಮಕ್ಕಳು ಹೇಳುವಹಾಗೆ ಮೂರು ಮೆಟ್ಟಿ ಮುರಿದೋಯಿತು! ಇನ್ನು ಕಂಡಿತ ಮುರಿಯಲಾರದು. ಮನೋವೇಗ, ವಾಯುವೇಗವನ್ನು ಮೀರುವ ವಾಹನಗಳು ಜಾರಿ ನಂಬಳ, ಛತ್ರದ ಮೇಲ್ವಿಚಾರಕಂಗಿದ್ದರೂ ಆ ಮೋರಿಗೆ ಈ ಅವಸ್ಥೆ ಏಕೆ ಬಂತೆಂಬ ವ್ಯಸನ!!

148 ನೇ ಮೈಲು ಕಲ್ಲು,
ಅಮ್ಮತ್ತಿ ವೀರಾಜಪೇಟೆ ರಸ್ತೆ.

ಕಲಿಯುಗದ ಯುವಕರ ಮೇಲೆ ಒಬ್ಬ ಮುದುಕನ ಅಭಿಪ್ರಾಯಕ್ಕೆ ಜವಾಬು

ಅಯ್ಯಾ,

"ಕಲಿಯುಗದ ಯುವಕರು" ಎಂದು ಒಬ್ಬ ಮುದುಕರು ಬರೆದ ಜಾತ್ರೆಯನ್ನು 'ಕೊಡಗು' ಪತ್ರಿಕೆಯ ಈ ತಾ. 3ನೆಯ ಸಂಚಿಕೆಯಲ್ಲಿ ನಾನು ನೋಡಿದೆನು. ಆ ಮುದುಕರು ದ್ವಾಪರಯುಗದಲ್ಲಿ ಹುಟ್ಟಿ ಕಲಿಯುಗದಲ್ಲಿ ಜೀವಿಸುವ ಹಾಗೆ ಕಂಡುಬರುತ್ತೆ. ವರ್ಷ ಹೋದಹಾಗೆಲ್ಲಾ ಈ ಪ್ರಪಂಚದಲ್ಲಿ ನಾನಾತರದ ಬದಲಾವಣೆಗಳೂ, ನಾಗರಿಕವಿದ್ಯೆಯೂ ಹೆಚ್ಚುತ್ತಾ ಇರುವಾಗ "ಕಾಲಹೋದಹಾಗೆ ಕೋಲ ಕಟ್ಟಬೇಕು" ಎಂಬದನ್ನು ತಿಳಿಯದೆ, ಕಲಿಯುಗದ ಯುವಕರ ಆಚಾರ, ಉಡುಪು, ನಡವಳಿಗಳನ್ನು ತುಚ್ಛೀಕರಿಸಿ ಬರೆದುದನ್ನು ನೋಡಿ ನಾನು ತುಂಬಾ ವಿಷಾಧಿಸುತ್ತೇನೆ. ಕಲಿಯುಗದ ಯುವಕರ ಆಚಾರ, ಉಡುಪುಗಳಲ್ಲಿ ಕುಂದುಕೊರತೆಗಳೇನು? ಕಾಲರ್, ಟೈ ಎನ್ನುವಿರಾ? ಪಾಶ್ಚಾತ್ಯರ ವಿದ್ಯೆಯನ್ನು ಕಲಿಯುತ್ತಾ ಇರುವಾಗ ಅವರ ಉಡುಪನ್ನು ಕಾಲಕ್ಕನುಸಾರವಾಗಿ ಧರಿಸುವುದು ತಪ್ಪೇನು? ಯುವಕರು ಅವರವರ ಆಚಾರ, ಉಡುಪು ವಗೈರೆಯಲ್ಲಿ ಪದ್ಧತಿಗನುಸಾರವಾಗಿ ನಡೆಯುತ್ತಾ ಇದ್ದು ಮತ್ತು ಪಾಶ್ಚಾತ್ಯರ ಉಡುಪು ಎಂದರೆ, ಕಾಲರ್, ಟೈ ವಗೈರೆಯನ್ನು ಸಮಾಜಕ್ಕೆ ಸರಿಯಾಗಿ (According to the Society) ಧರಿಸುತ್ತಾರೆಯೇ ಹೊರತು ಅವರವರ ಪದ್ಧತಿಗೆ ವಿರೋಧವಾಗಿ ಯಾರೂ ಎಂದೂ ನಡೆಯುವುದಿಲ್ಲವೆಂದು ನಿಮಗೆ ಚೆನ್ನಾಗಿ ತಿಳಿದಿರಲಿ.

ತಾಯಿತಂದೆಗಳು ಅವರವರ ಮಕ್ಕಳಿಗೆ ವಿದ್ಯೆಯನ್ನು ಕೊಡುವುದು ಅವರ ಮುಖ್ಯ ಕರ್ತವ್ಯವಾಗಿದೆ. ವಿದ್ಯೆಯನ್ನು ಯಾತಕ್ಕೆ ಕೊಡಬೇಕೆನ್ನುವಿರಾ? ವಿದ್ಯೆ ಕಲಿಯುವುದರಿಂದ ಹೆಚ್ಚು ಬುದ್ಧಿವಂತಿಕೆಯೂ, ಚಟುವಟಿಕೆಯೂ ಬರುವುದಲ್ಲದೆ, ಯುವಕರು ಅವರವರ ಮುಂದಿನ ಜೀವನವನ್ನು ಯಾವರೀತಿಯಾಗಿ ನಡಿಸಬೇಕೆಂದಕ್ಕೆ ಆ ವಿದ್ಯೆಯು ಅವರಿಗೆ ನಾನಾ ವಿಧದ ದಾರಿ ತೋರಿಸುವುದೇ ಹೊರತು ವಿದ್ಯೆಯು ಸರ್ಕಾರಿ ಉದ್ಯೋಗವಹಿಸಲಿಕ್ಕೆ ಮಾತ್ರವಲ್ಲ. ತಂದೆತಾಯಿಗಳು ಮಕ್ಕಳಿಗೆ ಸ್ಕೂಲ್ ಫೈನಲ್‌ವರೆಗೆ ವಿದ್ಯೆಯನ್ನು ನಮ್ಮ ದೇಶದಲ್ಲಿ ಕೊಡುವುದು ಬಹಳ ಕಡಿಮೆಯಾಗಿದೆ. ಒಂದುವೇಳೆ ಹಾಗೆ ಕೊಟ್ಟರೂ, ತುಂಬಾ ವಿದ್ಯೆಯನ್ನು ತನ್ನ ಮಗನಿಗೆ ಕೊಟ್ಟೆನು, ಆದರೆ ಏನು ತಾನೇ ಪ್ರಯೋಜನವೆಂದು ಕೆಲವರು ಬಾಯಿಬಡಿವರು. ಪ್ರತಿಯೊಬ್ಬನಿಗೂ ಸ್ಕೂಲ್ ಫೈನಲ್‌ವರೆಗೆ ವಿದ್ಯೆ ಕೊಡುವುದು ಅವರವರ ತಾಯಿತಂದೆಗಳ ಮುಖ್ಯ ಕರ್ತವ್ಯವಾಗಿದೆ.

"ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಸೋತುಹೋಗಿ ಮನೆಯಲ್ಲಿ ಕೂತುಕೊಂಡಿರುವ ಯುವಕರ ಧಂಬವೇನು" ಎನ್ನುವಿರಾ? ಪ್ರತಿ ವರ್ಷವೂ ಕೆಲವರು ಕಾಲೇಜಿನಲ್ಲಿ ಮತ್ತು ಕೆಲವರು ಹೈಸ್ಕೂಲನ್ನೂ ಬಿಟ್ಟು ಮನೆಗೆ ಬಂದು ಸೇರುವರು. ನಮ್ಮ ನೂರಾರು ಮತ್ತು ಮೈಲ ಅಗಲವಿರುವ ಕೊಡಗಿನಲ್ಲಿ ಎಷ್ಟು ಜನರು ತಾನೇ ಉದ್ಯೋಗಕ್ಕೆ ಬೇಕಾಗುವುದೆಂದು ತಮಗೆ ತಿಳಿಯದ ಸಂಗತಿಯಲ್ಲ. ಒಂದು ಪಕ್ಷ ಉದ್ಯೋಗವನ್ನು ಕೈಕೊಂಡದ್ದೇ ಆದರೆ ಅವರ ವರ್ಷದ ಆದಾಯವು ಎಷ್ಟರಮಟ್ಟಿಗೆ ಇರುವುದೆಂದು ತಾವೇ ಆಲೋಚಿಸಿ. ಈ ಕಾಲದಲ್ಲಿ ನಿಮ್ಮಂತ ಮುದುಕರು ಯುವಕರಾಗಿದ್ದ ಪಕ್ಷದಲ್ಲು ಸ್ವಲ್ಪ ಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನು (Unemployment Question) ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತಿತ್ತು. ಆದರೆ ಇತರರಿಂದ ಕೇಳಿ ತಿಳಿದುಕೊಳ್ಳುವುದು ಅಸಾಧ್ಯವೇನು? ಅನೇಕರು ಅವರವರು ಪಡೆದ ವಿದ್ಯೆಯ ಬಲದಿಂದ ನಾನಾ ತರದ ವ್ಯಾಪಾರನಡಸಬಹುದು. ಹೀಗಿರುವಲ್ಲಿ ನಿಮ್ಮಂತ ವಯಸ್ಸು ಪಟ್ಟವರು ನಿಮ್ಮ ಜಾತ್ರೆಪ್ರಕಾರ ಯುವಕರ ಮೇಲಿರುವ ಅಭಿಪ್ರಾಯವನ್ನು ಆ ರೀತಿಯಾಗಿ ತುಚ್ಛೀಕರಿಸಿ ಇನ್ನೂ ಬರೆಯುವುದಾದರೆ ನಿಮ್ಮ ಮಕ್ಕಳಿಗೆ ಬುದ್ಧಿವಂತಿಗೆಯ ಮತ್ತು ಒಳ್ಳೇದಾರಿಗೆ ನಡಿಸುವ ಮಾತು ಎಲ್ಲಿ ಹೋಯಿತು? ಆದ್ದರಿಂದ ನೀವು ದಯವಿಟ್ಟು ನಿಮಗೆ ಕಲಿಯುಗದ ಯುವಕರ ಮೇಲಿರುವ ಆ ತರಹದ ಅಭಿಪ್ರಾಯವನ್ನು ಬಿಟ್ಟು ವ್ಯಾಪಾರ, ಕೈಗಾರಿಕ, ಕೃಷಿ ಮುಂತಾದ ವಿಷಯದಲ್ಲು ಎತ್ತಿ ಬರೆದು ಯುವಕರಿಗೆ ಮುಂದಿನ ದಾರಿಯನ್ನು ತೋರಿಸಿಕೊಡುವಿರಾಗಿ ಅಪೇಕ್ಷಿಸುತ್ತೇನೆ.

ಕೆ. ಎಸ್. ಸಿ.
ಬೊಂಬಾಯಿ

ಹುದಿಕೇರಿ ದಾರಿ.

ಅಯ್ಯಾ,

ಹುದಿಕೇರಿಯ ವಿಷಯ ಜಾಸ್ತಿ ಬರೆಯದೆ ಕೆಲವು ದಿನವಾಯಿತು. ಆದರೆ ಬರೆದ ಮಾತ್ರಕ್ಕೆ ಬರುವ ಗುಣವೂ ಇಷ್ಟೇ! ಏನಾದರೂ ಆಗಲಿ, ನಮ್ಮ ಕೆಲಸ ನಾವು ಮಾಡಬೇಕಲ್ಲವೇ? ಈ ಮೊದಲು ನಮ್ಮ ಹಯರ್ ಎಲಿಮೆಂಟರಿ ಶಾಲೆಯಲ್ಲಿ ನೆಲಕ್ಕೆ ಗಾರೆ ಹಾಕಿಸಿದ್ದು, ಗಾರೆ ಎದ್ದು ಬೇಸಿಗೆಯಲ್ಲು ಧೂಳು ತುಂಬುತ್ತಿತ್ತು. ಈಗಲೋ ಮಳೆಗಾಲದಲ್ಲು ಅದರ ಗುಣ ಬದಲಾಗಿರುತ್ತೆ. ನೀರಿನಿಂದ ಒಂದಾಗ್ಯೆ ಕಾಲಿನಲ್ಲಿ ನೀರು ಪಸೆಯಿದ್ದರೆ ಈ ಧೂಳು ಹಿಡಿದುಕೊಂಡು ಕಾಲಿಗೆ ಬೂಟ್ಸು ಹಾಕಿದ ಹಾಗೆ ಆಗುತ್ತೆ. ಇದರ ವಿಷಯ ಇನ್ನಾದರೂ ಅಧಿಕಾರಿಗಳು ತಕ್ಕ ಸಿಗ ಇಟ್ಟು ಇದನ್ನು ಒಳ್ಳೆ ಗಾರೆಯಿಂದಾದರೂ ಮತ್ತೊಮ್ಮೆ ದುರಸ್ತು ಪಡಿಸಿಕೊಡಲು ತೊಂದರೆ ತೆಗೆಯಬೇಕೆಂದು ಕೋರಲಾಗಿದೆ

"ಮಕ್ಕಳ ಸಹೋದರ."

ಹುದಿಕೇರಿ ಪೋಸ್ಟಾಫೀಸು.

ಅಯ್ಯಾ,

ಹುದಿಕೇರಿಯಲ್ಲಿ ಪೋಸ್ಟಾಫೀಸಿಗೆ ಒಬ್ಬ ಹೊಸ ಪೋಸ್ಟುಮಾಸ್ಟರನ್ನು ನೇಮಿಸಿರುತ್ತಾರೆ. ಇಲ್ಲಿ ರಿಜಿಸ್ಟ್ರೇಶನ್ ಮಾಡಲು ಡಿಪಾರ್ಟ್‌ಮೆಂಟಿನವರು ಏರ್ಪಡಿಸಿರುತ್ತಾರೆ. ಇನ್ಸೂರ್ ಇಲ್ಲಿ ಅಂಗೀಕರಿಸ ಪಡಿಲ್ಲ. ನಮ್ಮಲ್ಲಿ ಸೇವಿಂಗ್ಸ್ ಬ್ಯಾಂಕ್ ಅತ್ಯಗತ್ಯ ಬೇಕಾಗಿತ್ತು. ಸಹಕಾರಿ ಸಂಘಗಳು ಹೆಚ್ಚುತ್ತಾ ಬಂದಂತೆ ಇನ್ಸೂರ್, ಸೇವಿಂಗ್ಸ್ ಬ್ಯಾಂಕ್ ವಗೈರೆಯ ಕೆಲಸವು ಹೆಚ್ಚಾಗಿರುತ್ತೆ. ಇದಕ್ಕೋಸ್ಕರ ಶ್ರೀಮಂಗಲ ನಾಡಿನವರು ಪೊನ್ನಂಪೇಟೆಗೆ ಹೋಗಬೇಕಾಗುತ್ತೆ. ನನಗೊಂದು ನಾಡು ಕಚೇರಿ ಮಧ್ಯಸ್ಥಳವಾದ ಹುದಿಕೇರಿಯಲ್ಲು ಇತ್ತು. ಇದನ್ನು ಶ್ರೀಮಂಗಲಕ್ಕೆ ಒಯ್ದದ್ದಾಯಿತು. ನಾಡು ಕಚೇರಿ ಕೆಲಸಕ್ಕೆ ತಿಂಗಳಿಕ್ಕಿನ ಪಯಣವೂ, ಪೋಸ್ಟಾಫೀಸ್ ಕೆಲಸಕ್ಕೆ ಒಡಗಡಿಕ್ಕಿಗೆ ಪಯಣವೂ ಬೆಳೆಸಬೇಕಾಗಿ ಬಂತು!

ಇನ್ನಾದರೂ ಇನ್ಸೂರ್ ಮಾಡಲೂ, ಸೇವಿಂಗ್ಸ್ ಬ್ಯಾಂಕ್ ಇಡಲೂ, ನಮ್ಮ ಹುದಿಕೇರಿ ಪೋಸ್ಟಾಫೀಸಿನಲ್ಲಿ ಏರ್ಪಡಿಸಿಕೊಡಬೇಕೆಂದು ಪೋಸ್ಟಾಫೀಸಿನ ಅಧಿಕಾರಿಗಳನ್ನು ಬೇಡುತ್ತೇವೆ. ಎಲ್ಲರೂ ಟೆಲಿಗ್ರಾಮ್‌ಗೆ ಒದ್ದಾಡುವಾಗ ನಮ್ಮ ಕಷ್ಟ ಇನ್ನೂ ಎಲ್ಲಿದೆ?

ಜಿ.-ಮೊದಪ್ಪಯ್ಯ.

ಆ ಬಡ ಉಪಾಧ್ಯಾಯರು.

ತಾ. 29-8-26ರಲ್ಲಿ ನಡೆದ ಅಖಿಲ ಬಂಗಾಳ ಉಪಾಧ್ಯಾಯರ ಕಾನ್ಫರೆನ್ಸಿನ ಅಧಿವೇಶನದಲ್ಲಿ ಅಧ್ಯಕ್ಷರಾಗಿ ಡಾಕ್ಟರ್. ಪಿ. ಸಿ. ರೇಯವರು ತಮ್ಮ ಭಾಷಣದಲ್ಲಿ ಹೀಗೆಂದಿರುವರು " .. .. ಅತಿ ಕೀಳು ತರಗತಿಯಲ್ಲಿ ಜೀವನ ಮಾಡಬೇಕಾಗಿರುವ ಈ ವ್ಯಕ್ತಿಗಳು (ಉಪಾಧ್ಯಾಯರು) ತಮ್ಮ ವೃತ್ತಿಯಲ್ಲಿ ಅಭಿಮಾನವನ್ನಿಡಲಿಕ್ಕೆ ಅಸ್ಪದವಿಲ್ಲ. ಅತಿ ಕಠಿಣತರದ ಮತ್ತು ಮಹತ್ವವಿರುವ ಈ ವೃತ್ತಿಗೆ ಕೇವಲ ಅಯೋಗ್ಯರಿರುವವರು ತುಂಬುತ್ತಿರುವರೆಂದರೆ ಆಶ್ಚರ್ಯವೇನು? ಅಧ್ಯಾಪಕರು ತಮ್ಮ ಸಮಯವನ್ನು ಮುಂದಿನ ಜನಾಂಗದ ಅಭಿವೃದ್ಧಿಗಿರುವ ಸಿದ್ಧತೆಯ ಕೆಲಸಕ್ಕೆ ಕೈ ಹಚ್ಚಲು ಆಸ್ಪದವಾಗುವಂತೆ ಯೋಗ್ಯರೀತಿಯಲ್ಲಿ ಅವರ ಜೀವನವನ್ನು ನಡಿಸಬಹುದಾಗುವಂತೆ ನೋಡುವುದು ಒಂದು ಜನಾಂಗದ ಕರ್ತವ್ಯವು" ಇದನ್ನು ಕೊಡಗಿನ ಸರಕಾರವು ಸಹ ಮನಸ್ಸಿಗೆ ತೆಗೆದುಕೊಳ್ಳಬೇಕಾಗಿದೆ. ಮಹತ್ವಾದ ಚಳವಳವಾದದ್ದರ ಮೇಲೆ, ಉಪಾಧ್ಯಾಯರ ಸಂಬಳದ ವಿಷಯ ಸುಧಾರಿಸಿದ್ದೇನೋ ನಿಜ. ಈಗ ಪ್ರಥ [illegible] ವಿದ್ಯಾಭ್ಯಾಸವನ್ನು ಗಳಿಸಿದವರೂ ಸಹ ಬರೇ ಮೂವತ್ತು ರೂಪಾಯಿಗಳಲ್ಲಿ ಕೊಳೆಯುವಂತಹ ಪ್ರಸಂಗವು ಸಹ ಬಂದಿದೆ. ಹೀಗಿರುವಲ್ಲಿ ಶಾಲೆಗಳಲ್ಲಿ ಎಸ್. ಎಸ್. ಎಲ್. ಸಿ. [illegible] ದಿನವರಿಗೆ ರೂ 40ರಿಂದ ರೂ. 70ರ ವರೆಗೆ ಬಡ್ತಿ ಇದೆ! [illegible] ಆದರೆ ಎಷ್ಟುಮಂದಿಗೆ? ಹತ್ತನ್ನೆರಡು! ಕೊಡಗಿನಲ್ಲಿ [illegible] ಮಿಕ ಶಾಲೆಗಳು ನೂರಕ್ಕೆ ಜಾಸ್ತಿ ಇರುವಲ್ಲಿ ಹತ್ತನ್ನೆರಡು ಮಂದಿಗೆ ಮಾತ್ರ ಸದರಿ ಗ್ರೇಡು ಕೊಡಬಹುದು. ಇದೇ [illegible] ಹಣದ ಅಭಾವ! ನಾವು ತಿನ್ನಲಿಕ್ಕೆ ಅನ್ನವಿಲ್ಲದೆಯೂ, ಉಡಲಿಕ್ಕೆ ಬಟ್ಟೆಯಿಲ್ಲದೆಯೂ, ವಾಸಿಸಲಿಕ್ಕೆ ಯೋಗ್ಯ ಮನೆಗಳಿಲ್ಲದೆಯೂ ಇದ್ದರೂ, ಕಂದಾಯ ತೆರುವುದೇನೋ ತೆರುತ್ತೇವೆ. ಇದೆಲ್ಲಾ ಎಲ್ಲಿಗೆ ಹೋಗುತ್ತವೆ? ಆ ಉಕ್ಕಿನ ಚೌಕಟ್ಟಿನ [illegible] ನೆಗಳಿಗಲ್ಲವೇ? ಬಡಪಾಯಿಗಳ ವಿದ್ಯಾಭ್ಯಾಸಕ್ಕೆ ಹಣವಿಲ್ಲ. ಎಷ್ಟೊಂದು ಹಾಸ್ಯಕರ! ಅದೇಹಣಕ್ಕೆ ಖರ್ಚಿಲ್ಲವೆಂದು ರೂ 14,000 ವನ್ನು ವಿದ್ಯಾಖಾತೆಯ ಖರ್ಚಿನಿಂದ ಕಡಿಮೆ ಮಾಡಿದರಲ್ಲವೇ? ಆ ಹಣದಿಂದ ಎಸ್. ಎಸ್. ಎಲ್. ಸಿ ಗ್ರೇಡಿನ ಸಂಖ್ಯೆಯನ್ನು ಹೆಚ್ಚಿಸುವುದಾಗಲೀ ಇಲ್ಲವೇ ಇಂಟರ್ [illegible] ಡಿಯೇಟ್‌ನವರಿಗೊಂದು ಸ್ಕೇಲು ಮಾಡುವುದಾಗಲೀ ವಿದ್ಯಾಖಾತೆಯವರು ಮಾಡಿದ್ದರೆ ಏಕೆ ಆಗುತ್ತಿದ್ದಿಲ್ಲ? ಹೀಗೆ ಮಾಡಿದ್ದರೆ ಬೇರೆ ವೃತ್ತಿಗಳನ್ನು ಹುಡುಕಿ ಹೋಗುವ ಯೋಗ್ಯರು ಈ ಖಾತೆಗೆ ಬರುತ್ತಿದ್ದಿಲ್ಲವೇ? ಮುಂದಿನ ಜನಾಂಗವು ಈಗಿನ ಬಾಲಕರ ಅಭಿವೃದ್ಧಿಯು ಯಾರ ಕೈಯಲ್ಲಿರಬೇಕು. "ಇವನಿಗೆ ಪರೀಕ್ಷೆಯಲ್ಲಿ ಮಾರ್ಕು ಬಹಳ ಕಮ್ಮಿ, ಇವ [illegible] ಇಲ್ಲಿನ ಯಾವಖಾತೆಗಳಲ್ಲಿಯೂ ಕೆಲಸಮಾಡಲು ಯೋಗ್ಯನಲ್ಲ," ಎಂದು ಕಮಿಷನರು ಕೆಲವು ಉಮೇದುವಾರರ ಹಿಂದಕ್ಕೆ ಕಳುಹಿಸುವರು. ಅಂತಹವರಲ್ಲಿ ಅಲ್ಲವೇನು? [illegible] ತಹವರಿಗೆ ಏನೂ ವೃತ್ತಿ ಬೇಡವೆಂದಲ್ಲ ನನ್ನ ಹೇಳಿಕೆ. [illegible] ಧ್ಯಾಪಕ ವೃತ್ತಿ ಮಾನ್ಯವೃತ್ತಿ, ಇದರಲ್ಲಿ ಯಾವಾಗಲೂ [illegible] ಷ್ಠರೇ ಇರಬೇಕೆಂದು ನನ್ನ ಮತ

ಮತ್ತೊಂದು ವಿಷಯ! ಈ ವರ್ಷ ಒಬ್ಬ ಉಪಾಧ್ಯಾಯ ವೃತ್ತಿ ಕೈಗೊಂಡನೆಂದು ಹೇಳುವ. ಆತನಿಗೆ ತರಬೇತು ಹೊಂದುವ ವರೆಗೂ ಸಂಬಳ ಬಡ್ತಿಯಿಲ್ಲ. ಎರಡು ವರ್ಷಕ್ಕೊಂದು ಸಲ ಉಪಾಧ್ಯಾಯರನ್ನು ಬೆಂಗಳೂರಿಗೆ ತರಬೇತಿಗೆ ಕಳುಹಿಸುವರು. ಈಗ ಕೆಲಸಕ್ಕೆ ಸೇರಿದವನಿಗೆ ಇನ್ನೆರಡು ವರ್ಷದಲ್ಲಾದರೂ ಟ್ರೈನಿಂಗು ಸಿಕ್ಕಬೇಡವೇ? ಎರಡು ವರ್ಷಗಳಲ್ಲಿ ಟ್ರೈನಿಂಗಿಗೆ ಕಳುಹಿಸಬೇಕಾದವರು [illegible] ಮಂದಿಯಿರುವರು. ಇವರಲ್ಲಿ ಹನ್ನೆರಡು ಮಂದಿಯನ್ನ ಕಳುಹಿಸಲಾಗುವದು. ಆದರಲ್ಲಿ ಈತನು ಕಳುಹಿಸಲ್ಪಡುವುದಿಲ್ಲ. ಅವನು ಇನ್ನೂ ಎರಡು ವರ್ಷ ಕಳೆಯಬೇಕಾಗಿರುವುದು. ನಾಲ್ಕು ವರ್ಷಗಳು ಕಳೆದ ಮೇಲೆ ಈತನು ತರಬೇತಿಗೆ ಕಳುಹಿಸಲ್ಪಡುವನೆಂದು ತಿಳಿದುಕೊಳ್ಳುವ. (ಕೆಲವು ಸಮಯಗಳಲ್ಲಿ ನಾಲ್ಕು ವರ್ಷಗಳಿಗಿಂತ ಜಾಸ್ತಿ ಹೋಗುವುದೂ ಉಂಟು) ತರಬೇತು ಎರಡು ವರ್ಷ. ಅಲ್ಲಿಂದ ಮೇಲೆ ಪ್ರೊಬೇಶನ್ 1½ ವರ್ಷ ಖಾಯಂ ಆಗಲಿಕ್ಕೆ! ಅಂದರೆ ಇವನಿಗೆ ಕೆಲಸ ಖಾಯಂ ಆಗಲಿಕ್ಕೆ ಹಾಗೂ ಸಂಬಳ ಬಡ್ತಿ ಸುರು ಆಗಲಿಕ್ಕೆ 7½ ವರ್ಷಗಳು ಕಳೆಯಬೇಕು. ಈ 7½ ವರ್ಷಗಳ ಪೈಕಿ 6 ವರ್ಷಗಳೂ ಸರ್ವೀಸಿಗೆ ಗಣನೆಗೆ ತೆಗೆದುಕೊಳ್ಳಲ್ಪಡುವುದಿಲ್ಲ. ಈ ವಿಶೇಷ ಈ ಖಾತೆಯಲ್ಲಿ ಮಾತ್ರ! ಪಾಪ! ಬಡ ಉಪಾಧ್ಯಾಯರ ಗೋಳು ಕೇಳುವವರ್ಯಾರು? 'ಕೊಡಗೇ' ನೀನಾದರೂ ಈ ದುರ್ದೈವಿಗಳ ವಿಷಯ ಎರಡು ಮಾತುಗಳನ್ನು ಸರಕಾರದ ಕಿವಿಗೆ ಅರುಹುವಿಯಾ?

ಇದರಿಂದ ಅನೇಕ ಯೋಗ್ಯ ಯುವಕರು ಈ ಖಾತೆಗೆ ಬರುವುದಿಲ್ಲ. ಇದು ಪ್ರಜೆಗಳ ಹಿತಕ್ಕಲ್ಲ. ಇದನ್ನು ವಿದ್ಯಾಖಾತೆಯವರು ಗಣನೆಗೆ ತೆಗೆದುಕೊಂಡು ಉಪಾಧ್ಯಾಯರ ಸ್ಥಿತಿಯನ್ನು ಸುಧಾರಿಸಿದ್ದರೆ ನೆಟ್ಟಗಿರುತ್ತಿತ್ತು. ಇದಕ್ಕೆ ರೂಲ್ಸುಗಳ ಬಾಧಕವಿದ್ದರೆ ಅಂತಿರುವ ರೂಲ್ಸುಗಳನ್ನೇ ವ್ಯತ್ಯಾಸ ಮಾಡುವುದಾದರೂ ಏಕಾಗದು?

ಹರಿಪ್ರಸಾದ.

ಹಾಲುಗುಂದ ಗ್ರಾಮದ ಭಗವತಿ ಕ್ಲಬ್.

ಅಯ್ಯಾ,

ನಮ್ಮ ಗ್ರಾಮದ ಭಗವತಿ ಕ್ಲಬ್ಬಿನ ಪ್ರೆಸಿಡೆಂಟರಾದ ಮೇಕೇರಿರ ಪೆನ್ಶನ್‌ದಾರರಾದ ಮೊಣ್ಣಯ್ಯನವರು ಕಳೆದ ತಿಂಗಳಲ್ಲಿ ದಿವಂಗತರಾದ ಹೊಂದಿದರಿಂದ ಸದರಿ ಗ್ರಾಮಸ್ಥರು ತಾಯಿಯಿಲ್ಲದ ಮಕ್ಕಳೋಪಾದಿ ಹಾಡಿದುಃಖಪಡುವವರಾಗಿದ್ದಾರೆ. ಮೊಣ್ಣಯ್ಯನವರು ಇರುವಾಗ್ಯೆ ಗ್ರಾಮದ ಮತ್ತು ಯಾವ ಕೆಲಸಕ್ಕಾದರೂ ಮುಂದುವರಿದು ಸರ್ವ ಕೆಲಸವನ್ನು ತಾವಾಗಿಯೇ ನಡಿಸಿಕೊಂಡು ಗ್ರಾಮವನ್ನು ತಮ್ಮ ಮನೆಯ ಕೆಲಸದಂತೆ ನಡಿಸಿಕೊಂಡು ಬರುತ್ತಿದ್ದರು. ಅಂಥವರು ಕಾಲವಾದ್ದರಿಂದ ಗ್ರಾಮಸ್ಥರು ಬಹಳ ವ್ಯಸನಪಡುತ್ತೇವೆ. ಸದರಿಯವರು ತಮ್ಮ ಸ್ವಂತ ಕುಟುಂಬದ ವಿಶಿಷ್ಟ ಕುಂದುಕೊರತೆಗಳನ್ನು ಪೂರೈಸಿ ಮಕ್ಕಳಿಗೆ ಯಾವ ತಾಪತ್ರೆಯನ್ನು ಇಟ್ಟಿರುವುದಿಲ್ಲ. ತಮ್ಮ ಅವಸಾನ ಕಾಲದಲ್ಲಿ ಗ್ರಾಮದ ಮಧ್ಯಕ್ಕಾಗಿ ರಸ್ತೆಯನ್ನು ಮಾಡಿಸಿ ಕ್ಲಬ್ಬನ್ನು ಸಹ ಸ್ಥಾಪಿಸಿ ಹೆಸರುವಾಸಿಯನ್ನು ಪಡೆದರು. ಇನ್ನು 10 ವರುಷ ಬದುಕಿದ್ದರೆ ಏನೇನು ಮಾಡುತ್ತಿದ್ದರೋ ಗೊತ್ತಾಗಲಾರದು.

ಸೆಕ್ರೆಟರಿ.

786

ಮವಾದ ಮೂಲಾ. ಪೊರೆಮೂಡಿ ತರಿಸಿರಿ.

ಬೆಳ್ಳೂರು ಉಂಡೆನಶ್ಯ.

ನಾವು ಕಳೆದ 30 ವರ್ಷಗಳಿಂದಲೂ ಹಸನಾದ ನಶ್ಯ ತಯಾರುಮಾಡಿಸಿ ಮೈಸೂರು ಸೀಮೆ ಹೊರತಾದ ಇತರ ದೇಶಗಳಿಗೆ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳ ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿಗೆ ಸಂಬಂಧ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವ ಟುಮಾಡುತ್ತೆ. ಒಂದು ತಿಂಗಳಿದ್ದರೂ ಕೆಡುವುದಿಲ್ಲ. ಕೆ ವಾಪಸು ಪಡೆಯುತ್ತೇವೆ. ಒಂದು ಸಾರಿ ತರಿಸಿ ಪರೀ ಕ್ಷಿಸಿ.

ನಮ್ಮ ನಶ್ಯವು ಈ ಪೊದಲು ಸೇರು 1ಕ್ಕೆ 1—4—0, —0 ರೂ. ನಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂ ಕ್ಟೋಬರು ಅಂತ್ಯದೊಳಗೆ ಬರತಕ್ಕ ಆರ್ಡರುಗಳಿಗೆ 1 ವರ್ಷದ ವರೆಗೂ ಈ ಕೆಳಗೆ ಕಂಡ ದರದಂತೆ ಕಳುಹಿಸು ವೆ. ವಾಯಿದೆ ಕಳೆದನಂತರ ಬರತಕ್ಕ ಆರ್ಡರಿಗೆ ಸೇರು 0—4 0 ಹೆಚ್ಚಿಸಲ್ಪಡುವುದು.

ದರ:	24 ತೊಲೆ	ಸೇರು.	1ಕ್ಕೆ	0—12—0,
	"	"	3ಕ್ಕೆ	2— 1—0,
	"	"	6ಕ್ಕೆ	4— 0—0,
	"	"	9ಕ್ಕೆ	6— 0—0,
	"	"	12ಕ್ಕೆ	7— 8—0,
ಹಸನಾದ ಪುಡಿ	"	"	1ಕ್ಕೆ	1—10—0,
	"	"	5ಕ್ಕೆ	2— 0—0.

ಬೀಡಿ, ನಶ್ಯ ವಗೈರೆಗೆ ಆಗುವ ಹೊಗೆಸೊಪ್ಪು, ನಶ್ಯದ ಡಬ್ಬಿ, ಲೇಬಲು ಸಹ ನಮ್ಮಲ್ಲಿ ಸಿಕ್ಕುತ್ತೆ.

ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜೆಂಟರುಗಳು ಬೇಕಾಗಿದೆ

ಸ್ಯಾಂಪಲ್ ಅಪೇಕ್ಷಿಸುವವರು 4ಆಣೆ ಸ್ಟಾಂಪು ಕಳುಹಿ ತಕ್ಕದ್ದು.

ಖಾಯಂ ಆರ್ಡರ್ ಕೊಟ್ಟು ನಮ್ಮ ರಿಜಿಸ್ಟರಿಗೆ ದಾಖ ಲಾದವರಿಗೆ ಕಾಲಕ್ಕೆ ಸರಿಯಾಗಿ ಆರ್ಡರ್ ನಿರೀಕ್ಷಣೆ ಇಲ್ಲದೆ ಹಸನಾದ ಮಾಲು ಕಳುಹಿಸುತ್ತೇವೆ.

ಹೆಚ್ಚಿನ ವಿವರಕ್ಕೆ ಮೇನೇಜರವರಿಗೆ ಬರೆಯತಕ್ಕದ್ದು.

ಮೇನೇಜರು ಎ. ಮಹಮ್ಮದ್ ಹನೀಫ್.

ನಮ್ಮ ವಿಳಾಸ:—

ಯಸ್ ಅಬ್ದುಲ್ ವಹಾಬ್ ಅಂಡ್ ಸನ್ಸ್,

ನಶ್ಯದ ವ್ಯಾಪಾರಿಗಳು,

52—5 ಬೆಳ್ಳೂರು ಪೋಸ್ಟು,

ಮೈಸೂರ್ ಡಿಸ್ಟ್ರಿಕ್ಟು

ತಯಾರಾಗಿದೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಗುತ ಒವಾಜ್ಯಾಠಿ ಪರಸ್ಪರ ಸಹಾಯಕ ಸಂ ಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯ್ಪಡದಿಲ್ಲ ವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆ ಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರ ವಾಗಿ ತಯಾರಿಸಲ್ಪಟ್ಟ ದಾವಾ ಫಾರಂಮುಗಳೂ ನಮ್ಮಲ್ಲಿ ಯೂ ಮತ್ತು ವಿರಾಜಪೇಟೆ ಬದ್ರುರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ತಯಾರಾಗುತ್ತಿವೆ.

ನಮ್ಮ ದೇಶದ ಸಹಕಾರಿ ಸಂಘಗಳ ಆವಶ್ಯಕತೆಗೆ ಸರಿ ಯಾಗಿ ತಯಾರಿಸಲ್ಪಟ್ಟ ಪಾಸ್ ಬುಕ್ಕುಗಳು ನಮ್ಮಲ್ಲಿ ಸ್ಟಿಂ ಟಾಗುತ್ತಿವೆ. ಬೇಗನೆ ಮಾರಾಟಕ್ಕೆ ತಯಾರಾಗುವವು. ಕೆಲವು ಪುಸ್ತಕಗಳು ಮಾತ್ರ ತಯಾರಾಗುವುದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ.

"ಕೊಡಗು" ಆಫೀಸು, ಮೇನೇಜರ್.

ಮಡಿಕೇರಿ

ಕರ್ಣಾಟಕ

ಎಗ್ಗ್ಯು ವಿನ್ ಕಶ್ಯಾಯ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆದಿ ಜ್ವರ, ಮೊದಲಾದವುಗಳ ಮೇಲೆ ಅತ್ಯುತ್ತಮವಾದ ಔಷಧವು

ಚಿಲ್ಲರೆ ಬಾಟ್ಲಿಯೊಂದಕ್ಕೆ ರು. ೦-೧೪-೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ ಸಹ ರು. ೯-೮-೦

ಏಜಂಟರು ಬೇಕು, ಕೊಡಗಿನ ಸ್ಟೋರ್ಸ್ಸಗಳು ಕೆ ಮತ್ತು ಇತರ ಮೂರು. ಜನ ಔಷಧದ ವ್ಯಾಪಾರಿಗಳ ಹೆಸರನ್ನು ಕೆಸಿದ್ದ ಅಂದವಾದ ಬ್ಲಾಟಿಂಗ್ ಪೇಪರ, ಪುಕ್ಕಟೆ.

12—3 ಕರ್ಣಾಟಕ ಬ್ರದರ್ಸ್,

ಗಿರಗಾಂವ, ಮುಂಬಾಯಿ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! **No License Required**



Webley and Scott Air Pistol, cal ·177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun· Handsome and Accurate, takes B· S· A· Patern No 1 Slugs and Darts· expressly recommendable for Target Practice Rs· 15/ Free delivery

Brilliant Search Light Lamp for Night Sports Rs 30/–· Free delivery

No License required to purchase or to possess the above items.

Relial D· B· B L 12 bore guns	Rs. 60/– and upwards		
Do S. B B L· 12	do	do· 40/–	do·
D B. M L Guns		,, 45 -	do
S B· M L. do.		,, 30/–	do·
S B. B L Rifles		,, 25/–	do
B L Revolvers and Pistols		, 30/–	do.

Arms, Ammunition and shooting requisitesof almost every kind andquality offered at exceptionally favourable rates A Number of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition, Cheapest priced firm in India,

24· 9 **210 Abdul Rehman Strzet, BOMBAY·**

೧೬ ಚಿತ್ರಪಟಗಳಿವೆ

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೧೬೨ ಪುಟಗಳು

೧. ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಕೂದ್ರರೆಂಬ ನಾಲ್ಕು ವರ್ಣದವರು ನ ಡಿಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವುದು. ೨. ಕಥಾರಹಸ್ಯದಲ್ಲಿ ಚಿತ್ರಕಥಾ ಚ ಮತ್ಕಾರ ಶೋಭಿತವಾಗಿಯೂ ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದ ವಿಲ್ಲದೆ ಎಲ್ಲರೂ ಓದಬಹುದು. ೩. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿಯಬರುವುವು. ೪. ಈ ಕಥೆಯನ್ನು ಓದುವದರಿಂದ ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವ ದು ೫. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ ಪಿ. ಪೋಸ್ಟು ಮೂಲ ಕ ತರಿಸಿಕೊಳ್ಳಬಹುದು

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೭೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಶೇಖರನ ಕಥೆ ೪೮೦ ಪುಟಗಳು, ಕ್ರಯ ರೂ ೨.

ಸಚಿತ್ರ ಶ್ರೀರಾಮತತ್ತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟ ಪಾಲು ಚಾರ್ಜು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ)ಗೆ ಬರೆದರೆ ಕಳುಹಿಸುವೆವು.

52—16 ನಮ್ಮ ವಿಳಾಸ— ಎಂ. ಆರ್. ಕೃಷ್ಣಸ್ವಾಮಿ ಶೆಟ್ಟಿ,

ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ

ನೋಟೀಸ್.

ಜನರಲ್‌ದಾರರ ಸಂಘದ ಆರ್ಗನೈಜರ್ ಕೆಲಸ ಮಾಡ ಲು ಜನರು ಬೇಕಾಗಿದ್ದಾರೆ. ಅಪೇಕ್ಷ ಇರುವವರು ಜನರ ಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಈ ಕೆಲಸವ ನ್ನು ವಹಿಸಿಕೊಳ್ಳಬೇಕಾದರೆ ಯಾವ ತರತ್ತಗಳಿಗೆ ಒಳಪಡ ಬೇಕೆಂಬುದನ್ನು ಸಂಘದ ಮಡಿಕೇರಿ ಆಫೀಸಿನಿಂದ ತಿಳಿದುಕೊ ಳ್ಳಬಹುದು.

ಮಡಿಕೇರಿ, ಸಿ. ಯಸ್. ವೆಂಕಪ್ಪಯ್ಯ,

ತಾ 1—9—1926. ಜನರಲ್ ಸೆಕ್ರೆಟರಿ.

EMPIRE OF INDIA LIFE ASSURANCE CO., LTD·

(Established 1897)

ALL WITH PROFT POLICIES

Issued before 28th February· 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch· 152 Commercial Street· Madras Branch 9 & 16 Second Line Beach

C K· Chengappa· Special Agent· Riverside Estate Siddapur·

24—8

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌ ಕರಿ ಖರಾರು ಫಾರಮುಗಳು ಇಂಗ್ಲೀಷಿನಲ್ಲಿಯೂ ಕನ್ನ ಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇ ಕಾದವರು ಸೆಂಟ್ರಲ್ ಹೈಸ್ಕೂಲಿನ ಒಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡು ಕೊಳ್ಳಬಹುದು.

ತಾ. 24—6—'26 ಮೇನೇಜರ್,

ಮಡಿಕೇರಿ. "ಕೊಡಗು" ಆಫೀಸು.

ಕನ್ನಡ **ಸ್ವಧರ್ಮ** ವಾರ ಪತ್ರಿಕೆ

ಸಂಪಾದಕರು:—ದ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿವೃತ್ತಿಕುಟ್ಟಿಗಳು ನೆಲೆಗೊಳ್ಳಬೇಕಾ ದರೆ ಸದಾಚಾರವೇ ಸರಳವಾದ ದಾರಿ. ಸದಾಚಾರದ ಬೆಳ ಗೆಗೆ ಸಹಕರಿಸುವ ಸೀಯಾದ ಸಾಧನ. ಇಂತಹ ಸುವಿಚಾ ರಗಳನ್ನು ಜನರ ಮುಂದಿಡಲು ಹೊರಟವುದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾ ಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಪೇಟೆಂಟ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ

(೨) ಕುಳಿತುಕೊಳ್ಳುವದಕ್ಕೆ ಆರಾಮು

(೩) ಬಾಳಿಕೆಯಲ್ಲಿ ಗಟ್ಟಿ

(೪) ರಿಪೇರಿಗಳು ಬೇಕಾಗುವದಿಲ್ಲ,

(೫) ಎತ್ತಿಕೊಂಡೊಯ್ಯಲು ಬರುವಷ್ಟು ಹಗುರ

ಇತ್ಯಾದಿ

ನಿಮ್ಮ ಪೇಟೆಯಲ್ಲಿ ಯಾವುದೇ ಕುರ್ಚಿಯ ಗಮನಕ್ಕಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

10—15 ಜಿ. ಸಾತಾರಾ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಅಪರೇಟಿವ್ ಸೊಸೈಟೀಸ್ ಆಕ್ಟಿನ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12 870
ಒಪ್ಪಂದದ ಠೇವಣಾತಿ	—	1 08 927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು

ಒಂದು ವರ್ಷ ಮಾಯಿದೆ ಆದವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ 6 1 0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5೦ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು, ಟ್ರೆಜರರ್

ಕೊಡಂದೆರ ಕುಟ್ಟಯ್ಯನವರು, ಯಂ ಭುಜಂಗರಾಯರು

ರಾಯ್ ಬಹದ್ದೂರ್ ಬಿ ಎ, ಬಿ ಎಲ್.

ಸೆಕ್ರೆಟರಿ

ಸಿ ಯಸ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಕು 1—7—1926

ಒಂದು ಪ್ರಬಲವಾದ ಪ್ರಶ್ನೆ.

ನಿಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ. ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕಾಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ

ವೀರಾಜಪೇಟೆ, ಕೆ. ಪಿ ಚಿನ್ನಪ್ಪ,

ದಕ್ಷಿಣ ಕೊಡಗು ಪ್ರೊಪ್ರೈಟರ್,

ಖಾದಿ ಭಂಡಾರ

52—25

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.



ಇದನ್ನು ಪರದೇಶದ ಕ್ಯಾಲಿಫೋರ್ನಿಯಾ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಿಸಿರುತ್ತೆ ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು ಇದರ ಬಣ್ಣ ಎಂದಿಗೂ ಹೋಗದು ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಿಲ್ಲ ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು ಇದು ಹೆಂಗಸರಿಗೆ ಬಹು ಮುದ್ದಾದ ಆಭರಣ ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮವಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಬಂಗಾರದ ಗಿಲೀಟು ಕೊಟ್ಟಿರುವದು ಇದನ್ನು ನೋಡಿದವರು ನಿಜವಾದ ಬೆಲೆ ಎಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್ದಾರರೂ ಮುಂತಾದವರು ಬಹುವಾಗಿ ಇವನ್ನೇ ಉಪಯೋಗಿಸುತ್ತಿರುವರು

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಬಿಲೆ ಜೊತೆ ರೂ 3—0—0

" " ಕೆಂಪು ಕಲ್ಲಿನ " " 3—8—0

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚ ವಿಶೇಷದಿಂದ ತಯಾರಿಸಿ ಬಂಗಾರ ಗಿಲೀಟು ಮಾಡಿದೆ ಇದನ್ನು ಪ್ರತಿಯೊಬ್ಬ ಸ್ತ್ರೀಯರು ಧರಿಸಿಕೊಳ್ಳಬಹುದು. ನೋಡಲು ಬಂಗಾರದ ಹಾಗೇ ಇರುವದು ಬಣ್ಣಕ್ಕೆ 3 ವರ್ಷ ಗ್ಯಾರಂಟಿ

3 ಎಳೆ ಸರ 1ಕ್ಕೆ ರೂ 3—4—0

4 " " " 4—0—0

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ 4 " " " 5—4—0

52—39 ಪೋಸ್ಟ್ ಬಾಕ್ಸ್ ನಂ 123, ಮದರಾಸು

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15 16% ಅಂದರೆ ಎಲುಬಿನ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು ಇದರಲ್ಲಿ ನಿಷ್ಕೃಷ್ಟ ಸಾರಜನಕ (nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಬತ್ತ ಕಬ್ಬು ರಾಗಿ, ಅಡಿಕೆ ಮರ, ಹೊಗೆಸೊಪ್ಪು ತರಕಾರಿ ಮೊದಲಾದವುಗಳಿಗೂ ಕಾಫಿ ಟೀ, ರಬ್ಬರು ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಣ್ಣೆ ಹಿಂಡಿ ಅಥವಾ ಎಲುಬು ಗೊಬ್ಬರ ವಗೈರೆ ಬೇರೆ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬರೀ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು ಹೆಚ್ಚಿನ ಮಾಹಿತಿ ಮತ್ತು ಕೃಷಿಸುಧಾರ ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು

52—16 CHILEAN NITRATE COMMITTEE

Post Box 469, CALCUTTA

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಭೋಗಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು ಬಲ, ತೇಜಸ್ಸು ಉಂಟು ಮಾಡುವದು ಅಜೀರ್ಣ ಮಲಬದ್ಧತೆ ಮದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ

ಈ ಔಷಧದಿಂದ ಗುಣಹೊಂದಿದ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ ಕಲ್ಕತ್ತ ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು ಇವುಗಳು ಸುಳ್ಳು ಎಂದು ಸಿದ್ಧಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ನಿಶ್ಚಯವಾಗಿ ತೋರಬಹುದು ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು ಒಂದಾವರ್ತಿ ಅನುಭವಿಸಿ ನೋಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಭಾಂಗಿ ಚಾರ್ಜು ೧ರಿಂದ ೩ ಡಬ್ಬಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ ಬೆಂಗಳೂರು ಸಿಟಿ, } ಡಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,

ಸಾಲಂಮಿಸ್ರಿ ಮುರಬ್ಬ ಡಿಪೋ,

12—12 ಬೆಂಗಳೂರು ಸಿಟಿ,

Printed & published by P. I. Belliappa, at "Kodagu" Press, Mercara for "Kodagu" Ltd

Reg. No. M. 1550.

If not delivered please return to

.. KODAGU" OFFICE MERCARA

ಕೊಡಗು.

ಚಂದಾ ...

ಸತ್ಯೇನ ಧೂತಹದಯಾ ವಿದ್ಯಾ ... || ಐಕ್ಯಮತ್ಯೇನ ದೇಶಾನಾಂ ಪುಷ್ಟಿರ್ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ್ವ ೧೯೨೬ನೇ ಇಸವಿ ಸೆಪ್ಟೆಂಬರ್ ತಾರೀಕು ೨೪ನೇ ಶುಕ್ರವಾರ [ಸಂಚಿಕೆ ೧೬

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed m mooties	4 lbs- Rs 30/ 4 1/2 lbs- Rs 33/ 5 lbs- Rs 36/-Doz	
Digging forks 4 prongs		Rs 48/ Doz
Mamooty forks 4 prongs		Rs 39/ Doz
Felling axes — Each		Rs. 3/ & 3/4/
Planting bars— Each		,, 3/12/
Weeding forks — Each		,, 1/12/
Garden trowels		,, 1 12/

GET IT AT SPENCERS- The House for all requisites

52—36

ಸ್ಥಾಪಿತವಾದದ್ದು 1874 ನೂರಿಂದಸ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922-1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,8.. ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಪ್ಪಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ಕ್ಲಿಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ		1,74,00,000
1924	,,	2,37,00,000
1925	,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 56, ಬೆಂಗಳೂರು

ಎಸ್. ಆರ್. ಕೃಷ್ಣಸ್ವಾಮಿಯ್ಯರ್, ಬ್ರಾಂಚ್ ಸೆಕ್ರೆಟರಿ

52—25

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವಿಕೆ, ತಲೆಯಲ್ಲಿ ಹೊಟ್ಟು, ... ಕಣ್ಣು ನೋವು, ಅಪಸ್ಮಾರ ನಿದ್ರೆ ಬಾರದಿರುವಿಕೆ, ನೆನಪು ಶಕ್ತಿ ಕುಂದಿಹೋಗುವಿಕೆ ಇವುಗಳಿಗೆಲ್ಲ ಖಂಡಿತ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ... ವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ... ಕೋಗುವಿಕೆ, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವಿಕೆ, ಮೂತ್ರನಾಳದಿಂದ ಕೀವು ಬರುವಿಕೆ, ಮೂತ್ರದಲ್ಲಿ ಧಾತು ಹೋಗುವಿಕೆ, ಆಗಾಗ್ಗೆ ಮೂತ್ರ ಬರುವಿಕೆ ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವಿಕೆ, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ.— ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ 1, 1 ಡಜನಿಗೆ 3 8-0

ಕಟುಕಷಾಯ ಮಲೇರಿಯ ರಕ್ಷೆ.— ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೇರಿಯ, ದಿನಬಿಟ್ಟು ಬರುವ ಜ್ವರ, 3—4 ದಿನಕ್ಕೊಂದುಸಾರಿ ಬರುವ ಜ್ವರ, ಸದಾ ಬರುವ ಜ್ವರ ಕುಳ್ಳು ಜ್ವರ ... ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣಪಡಿಸುತ್ತದೆ ಸೀಸೆ 1ಕ್ಕೆ ರೂ 1—8—0 3ಕ್ಕೆ ರೂ 4—0—0, 6ಕ್ಕೆ ರೂ 7—0—0,

ನಮ್ಮ ಏಜಂಟರುಗಳ ಹತ್ತಿರ ದೊರೆಯುವವು

ವಿಳಾಸ—ಮನೋಲ್ಲಾಸಿನಿ ಕಂಪೆನಿ, 9 ಮಂಗಳೂರು, ಕಂಕನಾಡಿ.

52—40

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸು)

ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರಸ್ಖಲತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಮೇಹ) ಗುಹ್ಯಪ್ರದೇಶದ ಮೇಲೆ ಹುಟ್ಟಿರುವ ಎಲ್ಲ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿಶೀಘ್ರವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲವನ್ನು** ಉಪಯೋಗಿಸಿದರೆ ಉತ್ತಮ, ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೨—೧೨—೦

ಪ್ರಮೇಹನಿವಾರಣಿ— ಇದರ ಸೇವನೆಯಿಂದ ಮೂತ್ರಸ್ರಾವದಿಂದ ಕೀವು ಹರಿಯುವಂತ ರೋಗಕ್ಕೆ ಶೀಘ್ರ ಉರಿ ವಗೈರೆ ಆದಿ ... ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦ ಟಿ ಮ ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ

ಒಂದಾಣೆ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗು

ವಿಳಾಸ —

ವೈದ್ಯ ಜಿ ಎಲ್ ಜೋಶಿ ಮತ್ತು ಕಂಪೆನಿ.

35 ನಂ 6 ಪೋಸ್ಟ ಒಸವಾಡಿ, ಉತ್ತರ ಕಾನಡಾ

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY, 3

Telegraphic Address "SHOOTER" Bombay.

[52—4] Please write for Reduced net, prices list for 1926

"ಕೊಡಗು"

ಸನ್ ೧೯೨೬ನೇ ಇಸವಿ ಸೆಪ್ಟೆಂಬರ್ ತಾ. ೨೪ನೇ ಶುಕ್ರವಾರ

ದನಗಳ ವಿಷಯದ ವಿಚಾರಣೆಯ ಕಮಿಟಿ.

ದೇಶದಲ್ಲಿ ಒಡತನಕ್ಕೆ ಮುಖ್ಯಕಾರಣವಾದ ದನಗಳ ಹೀನಸ್ಥಿತಿಗೆ ಕಾರಣವೇನು, ಅಂಥಾ ಕಾರಣಗಳನ್ನು ಹೇಗೆ ಹೋಗಲಾಡಿಸಿಕೊಳ್ಳಬಹುದು ಎಂಬದನ್ನು ದೇಶದಲ್ಲೆಲ್ಲಾ ಸುತ್ತಿ ದೇಶದ ಅಭಿಪ್ರಾಯ ತಿಳಿದುಕೊಂಡು ಸರಕಾರಕ್ಕೆ ಶಿಫಾರಸು ಮಾಡುವ ಒಗ್ಗೆ ಕೌನ್ಸಿಲಿನಲ್ಲಿ ಮಂಜೂರಾದ ಠರಾವಿನ ಮೇರೆ ಚೀಫ್ ಕಮಿಶನರು ಒಂದು ಕಮಿಟಿಯನ್ನು ನೇಮಿಸಿದ್ದರೆಂಬುದು ವಾಚಕರಿಗೆ ತಿಳಿದ ಸಂಗತಿಯಾಗಿದೆ. ಈ ಕಮಿಟಿಯವರು ದೇಶದ ಅಭಿಪ್ರಾಯಗಳನ್ನು ತಿಳಿಯುವ ಒಗ್ಗೆ ಅಲ್ಲಲ್ಲಿ ಕೆಲವು ಮಹನೀಯರನ್ನು ವಿಚಾರಿಸಲಿಕ್ಕಾಗಿ ಒಂದು ಸವಾಲ್ ಪಟ್ಟಿ ತಯಾರಿಸಿದ್ದನ್ನು ನಾವು ನೋಡಿದೆವು. ಈ ಸವಾಲ್‌ಗಳಿಗೆ ಜವಾಬನ್ನು ಅಕ್ಟೋಬರ್ ೧೫ನೇ ತಾರೀಕಿನೊಳಗೆ ಕಳುಹಿಸಬೇಕೆಂತ ಕಮಿಟಿಯ ಪ್ರೆಸಿಡೆಂಟರಾದ ಡೆಪ್ಯುಟಿ ಡೈರೆಕ್ಟರು ತಿಳಿಸಿರುತ್ತಾರೆ.

ನಮ್ಮ ಈ ದೇಶವು ಬಹಳ ಹಿಂದುಸ್ಥಾನದಂತೆಯೇ ಮುಖ್ಯವಾಗಿ ಕೃಷಿ ಕಸುಬಿನ ದೇಶವಾಗಿದೆ. ಅದಲ್ಲದೆ ನಮ್ಮ ದೇಶವು ಬೆಟ್ಟ ಶ್ರೇಣಿಯಾಗಿ ತುಂಬಾ ಮಳೆಬೀಳುವ ಪ್ರಾಂತವಾದ್ದರಿಂದ ಕೃಷಿಕನ ಬಾಳ್ವಿಕೆಯು ಬಹಳ ಕಷ್ಟತರವಾಗಿದೆ. ಕೃಷಿಕನ ಬಾಳ್ವಿಕೆಗೆ ಮುಖ್ಯ ಆಧಾರವೇ ದನಗಳು. ಅಂಥಾ ದನಗಳು ಹೀನಸ್ಥಿತಿಯಲ್ಲಿ ಇರುವಷ್ಟು ಕಾಲ ನಮ್ಮ ದೇಶದ ಒಡತನ ನಿವಾರಣೆಯಾಗಲಾರದು. ಆದ್ದರಿಂದ ದನಗಳ ಸ್ಥಿತಿಯ ಅಭಿವೃದ್ಧಿಗಾಗಿ ಕಮಿಟಿಯನ್ನು ಏರ್ಪಡಿಸಿದ್ದಕ್ಕೆ ಕೌನ್ಸಿಲಿಗೂ ಸರಕಾರಕ್ಕೂ ದೇಶವು ಅಭಿವಂದಿಸಬೇಕಾಗಿದೆ. ಆದರೆ ಬರೇ ಕಮಿಟಿಯ ನೇಮಕದಿಂದ ಪ್ರಯೋಜನವಾಗುವದಿಲ್ಲ. ಕಮಿಟಿಯ ಮುಂದೆ ದೇಶದವರು ಚೆನ್ನಾಗಿ ಯೋಚಿಸಿ ತಮ್ಮ ಅನುಭವವನ್ನೂ, ಅಭಿಪ್ರಾಯಗಳನ್ನೂ ಕೊಟ್ಟರೆ ಕಮಿಟಿಯವರು ಸರಕಾರಕ್ಕೆ ಒಳ್ಳೇ ಸೂಚನೆಗಳನ್ನು ಕೊಡಲು ಸಾಧ್ಯವಾಗುತ್ತದೆ. ದೇಶದವರು ಈ ವಿಷಯಕ್ಕೆ ಚೆನ್ನಾಗಿ ಗಮನಕೊಟ್ಟು ಪ್ರಯೋಜನ ಮಾಡಿಕೊಳ್ಳಬಹುದಾದ ಈ ಅವಕಾಶವನ್ನು ಕಳಕೊಳ್ಳಬಾರದು.

ಯಾರ್ಯಾರಿಗೆ ಈ ಸವಾಲ್ ಪಟ್ಟಿ ಕಳುಹಿಸಿರುತ್ತಾರೆಂತ ನಮಗೆ ಗೊತ್ತಿಲ್ಲ. ಹೇಗೂ ಪ್ರತಿಯೊಬ್ಬ ರೈತನನ್ನು ವಿಚಾರಮಾಡಲು ಸಾಧ್ಯವಿಲ್ಲ. ಆಗ ಸವಾಲ್ ಪಟ್ಟಿ ಯಾರಿಗೆಲ್ಲಾ ಬಂದಿದೆಯೋ ಅಂಥವರು ಕಮಿಟಿಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸುವ ಮೊದಲು ತಮ್ಮ ನಂಬೂರಿಯವರಲ್ಲೂ, ಗ್ರಾಮದಲ್ಲೂ ನವಾಲುಗಳಲ್ಲಿ ಅಡಕವಾಗಿರುವ ಅಥವಾ ಇನ್ನೂ ಹೆಚ್ಚಿನ ಸಂಗತಿಗಳಿದ್ದರೆ ಅವುಗಳನ್ನು ನಮ ಚರ್ಚಿಸಿ ಜನರ ಅಭಿಪ್ರಾಯ ತಿಳಿದುಕೊಳ್ಳುವದು ಒಳ್ಳೇದು. ಸವಾಲು ಪಟ್ಟಿ ತಮಗೇನೇ ಬಂದಿದ್ದರೆ ನಾನು ಸೂಚಿಸಲು ಅಭಿಪ್ರಾಯಗಳು ತುಂಬಾ ಇದ್ದವೆಂತ ಕಾಲಪರಿಗಾದರೂ ತೋರಬಹುದು ಅಂಥವರು ಈ ಕಮಿಟಿಗೆ ಕೂಡಲೇ ಬರೆದುಕೊಂಡರೆ ಸವಾಲ್ ಪಟ್ಟಿಯನ್ನು ಕಳುಹಿಸಿಕೊಡದೆ ಇರಲಾರರೆಂತ ನಂಬುತ್ತೇವೆ.

ಈ ಸವಾಲುಗಳಿಗೆ ಬರಹಮೂಲಕ ಜವಾಬು ಕಳುಹಿಸಿದನಂತರ ಕಮಿಟಿಯವರು ದೇಶವೆಲ್ಲಾ ತಿರುಗಿ ಸವಾಲಿಗೆ ಜವಾಬು ಕಳುಹಿಸಿದವರನ್ನೂ ಮತ್ತು ಇತರರನ್ನೂ ಸಹ ಕಮಿಟಿಯವರು ರೂಬರೂಬ್ ವಿಚಾರ ಮಾಡುತ್ತಾರೆಂತ ತಿಳಿಯಬರುತ್ತದೆ. ಬರಹಮೂಲಕ ಕೊಡುವ ಅಭಿಪ್ರಾಯಗಳಿಗೆ ಆಗ ಆಧಾರಗಳನ್ನು ಕೊಟ್ಟು ಸ್ಥಿರಪಡಿಸಲು ತಯಾರಿರಬೇಕು. ಆದ್ದರಿಂದ ಈಗ ಪ್ರಿಂಟಾದ ಸವಾಲುಗಳಿಗೆ ಕೊಡುವ ಜವಾಬುಗಳನ್ನು ಚೆನ್ನಾಗಿ ಯೋಚಿಸಿಯೇ ಕೊಡಬೇಕಾಗಿದೆ.

ದನಗಳ ವಿಷಯದ ಸವಾಲುಗಳು 17 ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ. ಮೊದಲನೇ ಭಾಗದಲ್ಲಿ ಕೊಡಗಿನಲ್ಲಿ ಯಾವ ಕಾಲದಲ್ಲಾದರೂ ದನಗಳು ಒಳ್ಳೇಸ್ಥಿತಿಯಲ್ಲಿದ್ದವೋ, ಇದ್ದಿದ್ದರೆ ಈಗ ಹೀನಸ್ಥಿತಿಗೆ ಬಂದದ್ದು ಮಳೆ ಹೆಚ್ಚು ಕಡಿಮೆಯಾಗುವದರಿಂದಲೋ ಅಥವಾ ಕುಟುಂಬ ಭಾಗವಾಗುವದರಿಂದಲೋ ಎಂತ ಸವಾಲುಗಳಿವೆ. ಬಹ್ಳಯ ವೃದ್ಧರಾದ ಜನರನ್ನು ವಿಚಾರಿಸಿದರೆ ದನಗಳು 40 ವರ್ಷದ ಹಿಂದೆ ಇದ್ದದ್ದಕ್ಕಿಂತ ಈಗ ತುಂಬಾ ಕ್ಷೀಣವಾಗಿವೆ ಎಂತ ಹೇಳುತ್ತಾರೆ. ಇದರಲ್ಲಿ ಸಹಾಯವೆಂತ ನಾವು ನಂಬುತ್ತೇವೆ. ಕುಟುಂಬಗಳು ಬಂಗಡವಾಗುತ್ತಾ ಹೋಗುವದು ದನಗಳ ಕ್ಷೀಣವಾಗಲು ಮತ್ತು ಕಡಿಮೆಯಾಗಲು ಕಾರಣಗಳಲ್ಲಿ ಒಂದೆಂತ ಹೇಳಬಹುದು. ಈ ಅಭಿಪ್ರಾಯಕ್ಕೆ ಒಪ್ಪುವವರು ಇದಕ್ಕೆ ಉದಾಹರಣೆಕೊಟ್ಟು ಪುಷ್ಟೀಕರಿಸಬೇಕು.

2ನೇ ಭಾಗದಲ್ಲಿ ಕೊಡಗಿನಲ್ಲಿ ಈಗ ಇರುವ ಜಾನುವಾರುಗಳು ಸಾಕೋ, ನೂರು ಒಟ್ಟಿ ಭೂಮಿ ಇರುವವನಿಗೆ ಎಷ್ಟು ದನಬೇಕು, ಬೇಕಾದಷ್ಟು ದನ ಇಡಲು ಖರ್ಚು ಎಷ್ಟಾಗಬಹುದು, ಹೆಚ್ಚಿನ ದನ ಸಾಕಿದರೆ ರೈತನಿಗೆ ಹೆಚ್ಚಿನ ಪ್ರತಿಫಲವೇನಾದೀತು ಎಂಬ ಪ್ರಶ್ನೆಗಳಿವೆ. ಈಗಿರುವ ಜಾನುವಾರುಗಳು ಸಾಲದೆಂದು ಎಲ್ಲರೂ ಒಪ್ಪಬಹುದಾದ ಉತ್ತರವಾಗಿದೆ. ಎಷ್ಟು ಖರ್ಚುಬೇಕು ಎಷ್ಟು ಪ್ರಯೋಜನವಾದೀತೆಂಬದನ್ನು ಲೆಕ್ಕ ಹಾಕಿ ತಿಳಿಸಿಕೊಡಬೇಕು.

ಮೂರನೇ ಭಾಗದಲ್ಲಿ ಮಾರಾಟಕ್ಕೆ ಬರುವ ದನಗಳು ಸಾಧಾರಣವಾಗಿ ಅನಾರೋಗ್ಯವಾಗಿರುವವೋ, ಅದನ್ನು ಹೇಗೆ ತಪ್ಪಿಸಬಹುದು ಎಂಬ ಸವಾಲುಗಳಿವೆ. 4ನೇ ಭಾಗದಲ್ಲಿ ಯಾವ ಜಾತಿ ದನಗಳು ಈ ದೇಶಕ್ಕೆ ಅಗುವಂಥವು, ದನಗಳ ತಳಿಯನ್ನು ಅಭಿವೃದ್ಧಿಗೊಳಿಸಲು ಸರಕಾರದಿಂದ ಯಾವ ಸಹಾಯ ಬೇಕು, ಗ್ರಾಮಗಳಲ್ಲಿ ಜನರು ಪರದೇಶಗಳ ಹೋರಿ ಮೋರಿಗಳನ್ನು ಉಪಯೋಗಿಸಲು ಪ್ರಯತ್ನಿಸಿದ್ದಾರೋ ಎಂದು ಮುಂತಾದ ಪ್ರಶ್ನೆಗಳಿವೆ. 5ನೇ ಭಾಗದಲ್ಲಿ, ಕೆಲವರಿಗೆ ಹೋರಿ ಹೋರಿಗಳನ್ನು ಕೊಟ್ಟದ್ದರಿಂದ ಏನಾದರೂ ಪ್ರಯೋಜನವಾಗಿದೆಯೋ, ಗ್ರಾಮಗಳಲ್ಲಿ ಗೂಳಿಗಳನ್ನು ಸುತ್ತಾಡಲು ಬಿಟ್ಟರೆ ಉಪಯೋಗವಾದೀತೋ, ಗೂಳಿಗಳನ್ನು ಸಾಕುವ ಖರ್ಚುಕೊಡಲು ಗ್ರಾಮಸ್ಥರು ಒಪ್ಪಿಯಾರೋ, ಜಾನುವಾರುಗಳ ತಳಿಯನ್ನು ಉತ್ತಮಗೊಳಿಸಲು ಸಹಕಾರಸಂಘಗಳಿಂದಲೂ, "ಬ್ರೀಡಿಂಗ್ ಫಾರ್ಮ್"ನಿಂದಲೂ ಸಹಾಯವಾಗಬಹುದೋ ಎಂಬ ಸವಾಲುಗಳಿವೆ. 6ನೇ ಭಾಗವು ಕರುಗಳನ್ನು ಸಾಕುವುದರ ವಿಷಯವಾಗಿದೆ.

7ನೇ ಭಾಗದಲ್ಲಿ, ಹುಲ್ಲುಗಾವಲನ್ನು ಕುರಿತು, ಗ್ರಾಮಗಳಲ್ಲಿ ಸಾಕಷ್ಟು ಹುಲ್ಲುಗಾವಲಿದೆಯೋ, ಲಂಟಾನ, ಮತ್ತು ಬೆಳೆದಿರುವ ಸಸಿಗಳನ್ನು ದನಗಳು ತಿನ್ನುವದರ ಫಲವೇನು, ಅದರಿಂದ ಹುಲ್ಲುಗಾವಲು ಬಹಳ ಕಡಿಮೆಯಾಗಿದೆಯೋ, ಈ ದೇಶದಲ್ಲಿ ಪಕ್ಕಷ್ಟು ಒಳ್ಳೇ ಹುಲ್ಲು ಇದೆಯೋ, ರೈತರು ಆ ಹುಲ್ಲು ತುಂಡರ ತಗೆದುಕೊಳ್ಳುತ್ತಾರೋ, ಊರವರಿಗೆಲ್ಲ ಒಂದೇ ಹುಲ್ಲುಗಾವಲು ಇರುವದು ಒಳ್ಳೇದೋ ಎಂದು ಮುಂತಾಗಿ ಕೇಳಲಾಗಿದೆ. ಹಲವು ರೈತರುಗಳು ದನಗಳನ್ನು ಮೇಯಿಸಲು ಅವಲಂಬಿಸಿರುವ ರಿಸರ್ವ್ ಫಾರೆಸ್ಟಿನ ಬಗ್ಗೆ ಹಲವು ಪ್ರಶ್ನೆಗಳನ್ನು 8ನೇ ಭಾಗದಲ್ಲಿ ಕೇಳಿರುವರು. ರಿಸರ್ವ್ ಫಾರೆಸ್ಟಿನಿಂದ ಹುಲ್ಲುಗಾವಲು ಕಡಿಮೆಯಾಗಿ ದನಗಳ ಅಭಿವೃದ್ಧಿಗೆ ಕುಂದಕವಾಗಿದೆಯೋ, ರಿಸರ್ವ್ ಫಾರೆಸ್ಟಿನಲ್ಲಿ ಈಗ ದನಗಳನ್ನು ಮೇಯಿಸಲು ಇರುವ ಹಕ್ಕಿಗಿಂತ ಹೆಚ್ಚಿನ ಅನುಕೂಲಗಳು ಬೇಕಾದದ್ದು ಯಾವವು ಎಂಬ ಸವಾಲುಗಳಿಗೆ ರಿಸರ್ವ್ ಫಾರೆಸ್ಟಿನಿಂದ ಕಷ್ಟಕ್ಕೊಳಗಾಗಿರುವವರು ತಮ್ಮ ಸಂಪೂರ್ಣ ಅನುಭವವನ್ನೂ, ಅಪೇಕ್ಷೆಯನ್ನೂ ಒತ್ತಿ ತಿಳಿಸುವರೆಂತ ನಂಬುತ್ತೇವೆ.

ದೇಶದಲ್ಲಿ ದನಗಳಿಗೆ ಸಾಕಷ್ಟು ಆಹಾರವಿದೆಯೋ, ಜಾನುವಾರುಗಳ ಆಹಾರಕ್ಕಾಗಿಯೇ ರೈತರು ಬೇರೆ ಹುಲ್ಲು ಯಾ ಬೆಳೆಯನ್ನು ಬೆಳೆಸುತ್ತಾರೋ, ಹೀಗೆ ಬೆಳೆಸುವದು ಲಾಭಕರವೋ, ಗದ್ದೆಗಳಲ್ಲಿ ಹಸಿ ಹುಲ್ಲನ್ನು ಕೂಡಿಡುವ ಪದ್ಧತಿಯು ಎಲ್ಲಿ ಪ್ರಯೋಜನಕರವಾದೀತೋ, ದನಗಳಿಗೆ ಕೈತಿಂಡಿ ಕೊಡುವದು ಜಾರಿಯಲ್ಲಿದೆಯೋ ಎಂದು ಮೊದಲಾದ ಪ್ರಶ್ನೆಗಳು 9ನೇ ಭಾಗದಲ್ಲಿ ಕೇಳಲ್ಪಟ್ಟಿವೆ. ದೇಶದಲ್ಲಿ ಜಾನುವಾರುಗಳಿಗೆ ಕುಡಿಯಲು ನೀರಿನ ಅಭಾವ ಇದೆಯೋ, ಇದ್ದರೆ ಅದನ್ನು ಹೇಗೆ ನಿವಾರಿಸುವದೆಂದು 10ನೇ ಭಾಗದಲ್ಲಿ ಕೇಳಲಾಗಿದೆ.

ದನಗಳ ಕೊಟ್ಟಿಗೆಯ ಅವಶ್ಯಕತೆ, ಅವುಗಳ ಈಗಿನ ಸ್ಥಿತಿ, ಅವುಗಳನ್ನು ಇಡುವ ರೀತಿ ಮತ್ತು ಅವುಗಳಲ್ಲಿ ಯಾ ಎದುರುಗಡೆಯಲ್ಲಿ ಗೊಬ್ಬರಕೂಡಿಸುವ ಪದ್ಧತಿ ಮುಂತಾದವುಗಳನ್ನು ಕುರಿತ ಸವಾಲುಗಳು 11 ಮತ್ತು 12ನೇ ಭಾಗಗಳಲ್ಲಿವೆ. ಕೊಡಗಿನವರು ದನಗಳ ಪೋಷಣೆಗೆ ಸಾಕಷ್ಟು ಗಮನಕೊಡುತ್ತಾರೋ, ಈ ವಿಷಯದಲ್ಲಿ ಪ್ರಚಾರದಿಂದ ಪ್ರಯೋಜನವಾದೀತೋ, ದನಗಳನ್ನು ಕೊಟ್ಟಿಗೆಯಲ್ಲಿ ಗುಂಪಾಗಿ ಕೊಡಬಹುದು, ಉತ್ತಮವೋ, ಯಾ ಬೇರೆ ಬೇರೆ ಕಟ್ಟುವದು ಉತ್ತಮವೋ, ಜನರು ವಾಡಿಕೆಯಾಗಿ ದನಗಳನ್ನು ಅನಾಯಿಸುತ್ತಾರೋ ಎಂದು 13ನೇ ಭಾಗದಲ್ಲಿ ಕೇಳುತ್ತಾರೆ.

ದೇಶದ ಜನರ ಆರೋಗ್ಯಕ್ಕೆ ಮುಖ್ಯ ಸಾಧನವಾದ ಹಾಲನ್ನು ಕುರಿತು, ಕೊಡಗಿನಲ್ಲಿ ಜನರಿಗೆ ಬೇಕಾದಷ್ಟು ಹಾಲು, ಬೆಣ್ಣೆ, ತುಪ್ಪ ಇಲ್ಲಿಯೇ ದೊರೆಯುತ್ತದೋ; ಬೆಣ್ಣೆ, ತುಪ್ಪ ಬೇರೆ ಕಡೆಗಳಿಂದ ಇಲ್ಲಿಗೆ ತರಿಸಿಕೊಳ್ಳುತ್ತಾರೋ, ಚಿಕ್ಕ ಮಕ್ಕಳಿಗಾದರೂ ಸಾಕಷ್ಟು ಹಾಲು ಸಿಕ್ಕುತ್ತದೋ, ಗ್ರಾಮಗಳಲ್ಲಿ ಬಿಸ್ಕತ್ತು ಹಾಲು ಏನಾದರು ಉಪಯೋಗಿಸುತ್ತಾರೋ; ಪಟ್ಟಣಗಳಲ್ಲಿ ಗೌಳಿಗಳು ಒಳ್ಳೇಹಾಲುಕೊಡುತ್ತಾರೋ, ಮಡಿಕೇರಿ ಮತ್ತು ವೀರರಾಜಪೇಟೆಯಲ್ಲಿ 'ಡೈರಿ ಫಾರ್ಮ್' ಒಂದು ಪ್ರಯೋಜನವಾದೀತೋ ಎಂಬ ಮುಖ್ಯ ಪ್ರಶ್ನೆಗಳು 14ನೇ ಭಾಗದಲ್ಲಿ ಕಂಡುಬರುತ್ತವೆ. ದನಗಳ ಪ್ರದರ್ಶನದ ಅವಶ್ಯಕತೆ ಮತ್ತು ಪ್ರಯೋಜನವೂ, ಅದನ್ನು ಯಾವಾಗ ಎಲ್ಲಿ ನಡೆಸಬೇಕೆಂಬುದೂ 15ನೇ ಭಾಗದಲ್ಲಿ ಕೇಳಲಾಗಿದೆ.

ಜಾನುವಾರುಗಳ ಈಗಿನ ಹೀನಸ್ಥಿತಿಗೆ ಮುಖ್ಯ ಕಾರಣವಾದ ಅಂಟುರೋಗಗಳ ವಿಷಯ—ಕೊಡಗಿನಲ್ಲಿ ವಾಡಿಕೆಯಾಗಿರುವ ರೋಗಗಳು ಯಾವವು, ಈ ರೋಗಗಳು ಪರಪ್ರಾಂತ್ಯಗಳಿಂದ ಬರುವವೋ, ಅವುಗಳಿಗೆ ಇಲ್ಲಿ ಒಳ್ಳೇ ಔಷಧಿಗಳಿವೆಯೋ, ದನಗಳಿಗೆ ದಾಕುಹಾಕುವದರಿಂದ ಪ್ರಯೋಜನವಾಗಿದೆಯೋ, ರೋಗದಿಂದ ಸತ್ತ ದನಕರುಗಳನ್ನು ಏನುಮಾಡುತ್ತಾರೆ, ಅವುಗಳನ್ನು ವೆಟರಿನರಿ ಅಸಿಸ್ಟೆಂಟ್ ಸರ್ಜನರಿಗೆ ತಿಳಿಸಿ ಅವರ ಸೂಚನೆಗಳ ಪ್ರಕಾರ ಹೂಣಬೇಕೆಂಬ ಕಾನೂನನ್ನು ಜನರು ಅನುಸರಿಸಿ ನಡೆಯುತ್ತಾರೋ, ವೆಟರಿನರಿ ಚಿಕಿತ್ಸೆಯು ಜನಪ್ರಿಯವಾಗಿದೆಯೋ ಎಂದು ಮೊದಲಾಗಿ 16ನೇ ಭಾಗದಲ್ಲಿ ಕೇಳಿರುವರು. ದನಗಳ ಸ್ಥಿತಿಯನ್ನು ಉತ್ತಮಗೊಳಿಸಲಿಕ್ಕಾಗಿ ಜನರು ಮಾಡಬೇಕಾದ ಕೆಲಸಗಳ್ಯಾವವು, ಸರ್ಕಾರದವರು ಯಾವ ಪ್ರಯತ್ನಗಳನ್ನು ಮಾಡಬೇಕು ಎಂಬದನ್ನೂ, ಜಾನುವಾರುಗಳ ಹೀನಸ್ಥಿತಿಯ ಮತ್ತು ಅಭಿವೃದ್ಧಿಯ ವಿಷಯ ಹೆಚ್ಚಿನ ಅಭಿಪ್ರಾಯಗಳಿದ್ದರೆ ಅವುಗಳನ್ನೂ ಸೂಚಿಸಲಿಕ್ಕೆ ಕಡೇ ಭಾಗದಲ್ಲಿ ಎಡೆಕೊಡಲಾಗಿದೆ.

ನಂತರ, ಆಡುಕುರಿಗಳು ಕೊಡಗಿನಲ್ಲಿ ಅಭಿವೃದ್ಧಿಯಾಗುತ್ತವೋ, ಅವುಗಳನ್ನು ಸಾಕಲು ಉತ್ತೇಜನಕೊಡಬೇಕೋ, ಮತ್ತು ಉತ್ತೇಜನಕೊಡುವದು ಹೇಗೆ ಎಂದೂ, ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ಕಾಣುವ ಹಂದಿಗಳು ಪರಿಯೋಗಿಸಲ್ಪಡುತ್ತಿವೆಯೋ, ಇಲ್ಲವಾದರೆ ಅದನ್ನು ಪರಿಸರಿಸುವದು ಹೇಗೆ ಎಲ್ಲರೂ ಹಂದಿಸಾಕುವದು ಉತ್ತಮವೋ, ಅದಕ್ಕೆ ಗ್ರಾಮದಲ್ಲಿ ಕೆಲವರು ಮಾತ್ರ ಶಾಸ್ತ್ರೀಯರೀತಿಯಲ್ಲಿ ಸಾಕುವದು ಉತ್ತಮವೋ ಎಂದೂ ಕೇಳಲು ಕೇಳಿರುವರು. ಕೋಳಿ ಸಾಕುವವರ ವಿಷಯವೂ ವಿಚಾರಿಸಿದ್ದರೆ ಒಳ್ಳೇದಾಗಿತ್ತು.

ಮೇಲೆ ಸೂಚಿಸಿದ ಸವಾಲುಗಳ ಪಟ್ಟಿಯನ್ನು ದೇಶದ ಎಲ್ಲರಿಗೂ ಕಳುಹಿಸಲು ಸಾಧ್ಯವಿಲ್ಲದ್ದರಿಂದ ಕೆಲವು ಮಹನೀಯರಿಗೆ ಮಾತ್ರ ಕಳುಹಿಸಿರಬಹುದು. ಆದರೆ ಈ ವಿಷಯವು ಎಲ್ಲರೂ ತಿಳಿಯಬೇಕಾದುದರಿಂದ ಅವುಗಳ ಸಾರಾಂಶವನ್ನು ಇಲ್ಲಿ ಕೊಡಲ್ಪಟ್ಟಾಗಿದೆ. ದೇಶದ ಅರ್ಥಿಕಾಭಿವೃದ್ಧಿಯಲ್ಲಿ ಮಹತ್ವವಾದ ಈ ವಿಷಯಕ್ಕೆ ದೇಶಹಿತೈಷಿಗಳೆಲ್ಲರೂ ತುಂಬಾ ಮನಸ್ಸುಕೊಡಬೇಕು. ಎಲ್ಲರಿಗೂ ಸಾಧ್ಯವಿಲ್ಲದಿದ್ದರೆ ಇದರಲ್ಲಿ ಆಸಕ್ತಿ ಇರುವವರಾದರೂ ತಮಗೆ ಪ್ರಶ್ನೆಮಾಲಿಕೆಯು ತಲುಪದಿದ್ದರೂ ಕೂಡ ತಮ್ಮ ಅಭಿಪ್ರಾಯಗಳನ್ನು ಡೆಪ್ಯುಟಿ ಡೈರೆಕ್ಟರಿಗೆ ಬರೆದು ತಿಳಿಸ ಬೇಕಾಗಿ ಅಪೇಕ್ಷಿಸುತ್ತೇವೆ.

ಡಿಸ್ಟ್ರಿಕ್ಟ್‌ಬೋರ್ಡ್ ಆಸ್ಪತ್ರೆಗಳು.

ಡಿಸ್ಟ್ರಿಕ್ಟ್‌ಬೋರ್ಡ್ ಆಸ್ಪತ್ರೆಗಳನ್ನು ಕುರಿತು ನಂ ೩ನೆಯದಿನ್ನು ತಾರೀಕಿನ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರರು ಎಸ್. ಆರ್. ಸುಬ್ರಹ್ಮಣ್ಯಯ್ಯನವರು ನಮ್ಮ ಬೋರ್ಡು ಪ್ರೆಸಿಡೆಂಟರಿಗೆ ಬರೆದ ಪತ್ರಗಳನ್ನು ಅವುಗಳಿಗೆ ಡಿ. ಬೋರ್ಡ್ ಪ್ರೆಸಿಡೆಂಟರು ಕೊಟ್ಟ ಉತ್ತರವನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಮ. ಸುಬ್ರಹ್ಮಣ್ಯಯ್ಯನವರು ಅವರ ಪತ್ರಗಳಲ್ಲಿ ಕೇಳಿರುವ ವಿಷಯಗಳು ಮುಖ್ಯವಾಗಿ "ಇಂಜೆಕ್ಷನ್" ಕುರಿತು ಕೇಳಿದ್ದು ಜನಸಮುದಾಯದ ಪ್ರಯೋಜನದ ಬದನ್ನು ಯಾರೂ ಅಲ್ಲಗಳೆಯಲಾರರು. ಇಂಥಾ ಉಪಯುಕ್ತ ಸಂಗತಿಗಳನ್ನು ಕೇಳಿ ತಿಳಕೊಳ್ಳಲು ಡಿ. ಬೋರ್ಡಿನ ಮೆಂಬರುಗಳಿಗೆ ಅವಕಾಶವಿಲ್ಲವೆಂದರೆ ಅಂಥಾ ಮೆಂಬರರುಗಳು ಬೋರ್ಡಿನಲ್ಲಿರುವುದರಿಂದ ಪ್ರಯೋಜನವೇನೆಂದು ಗೊತ್ತಾಗುವುದಿಲ್ಲ. ಡಿ. ಬೋರ್ಡಿನ ಕಳೆದ ಒಪ್ಪೆಟ್ ಮೀಟಿಂಗಿನ ಪರಿವಾರಸಂತೆ ಒಟ್ಟಿ ನೇಯ್ದ ಸ್ಕೂಲಿನ ಸಂಬಂಧ ಮೆಂಬರರು ಕೇಳಿದ ಪ್ರಶ್ನೆಗಳಿಗೆ ಪ್ರೆಸಿಡೆಂಟರು ಸರಿಯಾದ ಉತ್ತರವನ್ನು ಕೊಟ್ಟರು. ಹಾಗೆಯೇ ಮ. ಸುಬ್ರಹ್ಮಣ್ಯಯ್ಯನವರ ಪ್ರಶ್ನೆಗಳಿಗೂ ಉತ್ತರ ಕೊಡಬಹುದಿತ್ತು.

ಬೇರೆ ಎಲ್ಲಾ ಕಡೆಗಳಲ್ಲಿ ಸ್ಥಳೀಕ ಸಂಸ್ಥೆಗಳಲ್ಲಿ ಕೌನ್ಸಿಲಿನಲ್ಲಿನಂತೆಯೇ ಪ್ರಶ್ನೆಗಳನ್ನು ಕೇಳುತ್ತಿರುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿರುವಾಗ್ಯೂ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿಗೆ ಅಂಥಾ ಹಕ್ಕು ಇನ್ನೂ ಕೊಡದೆ ಇರುವುದು ಬಹಳ ಆಶ್ಚರ್ಯಕರ. 'ಇಂಥಾ ಪ್ರಶ್ನೆಗಳಿಗೆ ಡಿ. ಬೋರ್ಡಿನ ರೂಲ್ಸಿನಲ್ಲಿ ಅವಕಾಶವಿಲ್ಲ" ವೆಂದು ಪ್ರೆಸಿಡೆಂಟರು ಬಹು ಸುಲಭದಲ್ಲಿ ಉತ್ತರ ಕೊಟ್ಟುಬಿಟ್ಟಿರುವರು. ಒಂದು ವೇಳೆ ರೂಲ್ಸಿನಲ್ಲಿ ಪ್ರಶ್ನೆಗಳಿಗೆ ಅವಕಾಶವಿಲ್ಲದಿದ್ದರೂ, ಅಂಥಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಕೂಡದೆಂಬ ರೂಲು ಇಲ್ಲವೆಂತ ನಂಬುತ್ತೇವೆ. ಇಂಥಾ ಅಡಚಣೆಯ ರೂಲು ಇಲ್ಲದೆ ಇರುವಾಗ್ಯೂ ಬೋರ್ಡಿನ ಮೆಂಬರರುಗಳೂ, ಪ್ರೆಸಿಡೆಂಟರೂ ಅನ್ಯೋನ್ಯ ಸಹಕಾರಭಾವದಿಂದ ಬೋರ್ಡಿನ ಕೆಲಸವನ್ನು ನಡೆಸಲಿಕ್ಕಾದರೂ ಆ ಮೆಂಬರರು ತಿಳಿಯಲಿಚ್ಛಿಸಿದ ವಿಷಯಗಳನ್ನು ಪ್ರೆಸಿಡೆಂಟರವರಿಗೆ ತಿಳಿಸಬಹುದಾಗಿತ್ತು. ಬೋರ್ಡಿನ ಆಡಳಿತೆಯಲ್ಲಿರುವ ಸಂಸ್ಥೆಗಳ ಸಂಬಂಧ ಮೆಂಬರುಗಳಿಗೆ ಸಾಕಷ್ಟು ತಿಳುವಳಿಕೆಯು ಇಲ್ಲದೆ ಹೋದರೆ ಅವರಿಗೆ ಬೋರ್ಡಿನಲ್ಲಿ ನಡೆಯುವ ಯಾವ ಚರ್ಚೆಯಲ್ಲಿಯೂ ನ್ಯಾಯವಾದ ಭಾಗ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇಂಥಾ ತಿಳುವಳಿಕೆಯನ್ನು ಕೊಡಲು ಪ್ರೆಸಿಡೆಂಟರು ನಿರಾಕರಿಸಿದರೆ ಮೆಂಬರುಗಳು ಬೋರ್ಡಿನ ಚರ್ಚೆಗಳಲ್ಲಿ ನ್ಯಾಯವಾದ ಭಾಗಿಗಳಾಗುವುದು ಹೇಗೆ?

ಆದುದರಿಂದ ಡಿ. ಬೋರ್ಡಿನಲ್ಲಿ ಪ್ರಶ್ನೆಗಳಿಗೆ ಎಡೆಕೊಡುವಂಥ ರೂಲನ್ನು ಸರ್ಕಾರದವರು ಮಾಡಿಕೊಡಬೇಕಾದ್ದು ಅಗತ್ಯವಾಗಿದೆ. ಆ ರೂಲನ್ನು ಮಾಡುವವರೆಗೆ ಪ್ರೆಸಿಡೆಂಟರು ಮೆಂಬರರುಗಳ ಕೋರಿಕೆಗಳಿಗೆ ನ್ಯಾಯವಾದ ಉತ್ತರವನ್ನು ಕೊಟ್ಟು ಸಹಕಾರ ಭಾವದಿಂದ ವರ್ತಿಸುವರಾಗಿ ನಂಬುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ ೯ನೆಯ ಪ್ರಕರಣ.

ಮತ್ತೆ ಕೆಲವು ಕಷ್ಟಗಳು

ಪ್ರಾತಃಕಾಲಕ್ಕೆ ಸರಿಯಾಗಿ ರೈಲುಬಂಡಿಯು ಚಾರ್ಲ್ಸ್ ಟೌನನ್ನು ತಲುಪಿತು. ಅಲ್ಲಿಂದ ಜೋಹಾನ್ಸ್ ಬರ್ಗಿಗೆ ರೈಲು ಇರಲಿಲ್ಲ; ಕುದುರೆಯಬಂಡಿಯಲ್ಲಿ ಹೋಗಬೇಕಿತ್ತು. ಆ ಬಂಡಿಯು ಆ ರಾತ್ರಿ ಸ್ಟಾಂಡರ್ಟನ್ನಿನಲ್ಲಿ ನಿಲ್ಲುತ್ತು. ರಹದಾರಿ ಬಂಡಿಯ ಟಿಕೆಟ್ಟು ಸಹ ನನ್ನ ವಶದಲ್ಲಿತ್ತು. ಮೆರಿಟ್ಸ್ ಬರ್ಗಿನಲ್ಲಿ ಒಂದು ದಿವಸ ನಿಲ್ಲಬೇಕಾಗಿ ಬಂದರೂ ಟಿಕೆಟ್ಟು ನಿರುಪಯೋಗವಾಗಲಿಲ್ಲ. ಚಾರ್ಲ್ಸ್ ಟೌನದಲ್ಲಿದ್ದ ರಹದಾರಿಬಂಡಿಯ ಏಜಂಟಿಗೆ ಅಬ್ದುಲ್ಲಾ ಸೇಟರು ತಂತಿವಾರ್ತೆಯನ್ನು ಕಳುಹಿಸಿದ್ದರೂ ಆ ಏಜಂಟನಿಗೆ ನಾನು ಹೋಗುತ್ತಲೇ ನಾನು ಹೊಸಬನೆಂದು ಗ್ರಹಿಸಿ ಟಿಕೇಟು ನಡಿಯುವುದಿಲ್ಲವೆಂದನು. ಅದೊಂದು ವಿಚಿತ್ರವಾಗಿ ಬಂಡಿಯೊಳಗೆ ಸ್ಥಳ ಸಾಲುವುದಿಲ್ಲವೆಂಬುದರ ಆತನು ಹಾಗೆ ಹೇಳಿದುದಲ್ಲ. ಮತ್ತೊಂದು ಉದ್ದೇಶದಿಂದಲೇ ಆತನು ಹಾಗೆಂದನು. 'ನಾನು ಅದಕ್ಕೆ ತಕ್ಕ ಉತ್ತರವನ್ನು ಕೊಟ್ಟೆನು. ಪ್ರಯಾಣಿಕರನ್ನು ಬಂಡಿಯೊಳಗಡೆ ಕುಳ್ಳಿರಿಸಬೇಕೆಂಬ ನಿಬಂಧನೆಯಿದ್ದಿತಾದರೂ ನಾನು ಕೂಲಿಯನೆಂದು ಅವರಭಿಪ್ರಾಯವಾಗಿದ್ದಂತೆ ಬಂಡಿಯ ಸಾರಥಿಯು ನನ್ನನ್ನು ಬಿಳೀಜನರ ಪಕ್ಕದಲ್ಲಿ ಕುಳ್ಳಿರಿಸಕೂಡದೆಂದು ಹೇಳಿದನು. ಅವನನ್ನು ಲೀಡರೆಂದು ಅನ್ನುವರು. ಬಂಡಿಯ ಎರಡು ಪಕ್ಕದಲ್ಲೂ ಮೇಲುಗಡೆ ಕೂಡ ಕುಳಿತುಕೊಳ್ಳುವ ಸ್ಥಳವಿದ್ದಿತು. ಆ ಸ್ಥಳಗಳೊಂದರಮೇಲೆ ಲೀಡರು ಕುಳಿತುಕೊಂಡು ಹೊರಗಡೆ ಇದ್ದವನನ್ನು ಒಳಗಡೆ ಕುಳ್ಳಿರಿಸಿದನು. ಅವನ ಸ್ಥಳದಲ್ಲಿ ಅಂದರೆ ಮೇಲುಗಡೆ ನಾನು ಕುಳಿತುಕೊಳ್ಳುವಂತೆ ನಿಯಮಿಸಿದನು. ಅದು ಅನ್ಯಾಯವೆಂದೂ ಅಪಮಾನಕರವೆಂದೂ ನಾನು ಗ್ರಹಿಸಿದೆನಾದರೂ ಮೌನವಾಗಿರುವುದು ಮೇಲೆಂದು ಭಾವಿಸಿದೆನು. ನಾನ ಬಲವಂತದಿಂದ ಒಳಗೆ ಕುಳಿತುಕೊಳ್ಳಲೆತ್ನ ವಿರಲಿಲ್ಲವು. ಇದು ಅನ್ಯಾಯವೆಂದು ವಾದಿಸಿದರೆ ಅವರು ಬಂಡಿಯನ್ನು ಬಿಟ್ಟು ಹೋಗುವರು. ಅದರಿಂದ ಇನ್ನೊಂದು ದಿವಸ ಬಿಟ್ಟಿರಬೇಕಾಗುತ್ತದೆ. ಮರುದಿವಸವೇನಾಗುವುದೋ ದೇವರೇ ಬಲ್ಲ. ಈ ಪ್ರಕಾರವಾಗಿ ಆಲೋಚಿಸಿ ಕೋಚುಮಾನನ ಪಕ್ಕದಲ್ಲಿ ಕುಳಿತುಕೊಂಡೆನು. ಮೂರುಗಂಟೆಯಸಮಯಕ್ಕೆ ಬಂಡಿಯು ಪಾರ್ಡೆಕೋಫವನ್ನು ತಲುಪಿತು. ಆಗ ಲೀಡರು ಗಾಳಿಗಾಗಿ ... ಚುಟ್ಟವನ್ನು ಸೇದಬೂ ನಾನು ಕುಳಿತಿದ್ದ ಸ್ಥಳದಲ್ಲಿ ಕುಳಿತುಕೊಳ್ಳಬೇಕೆಂದು ಕೋಚುಮಾನನ ಪಕ್ಕದಲ್ಲಿ ಕುಳಿತುಕೊಳ್ಳುವುದಕ್ಕಾಗಿ ಕೋಚುಮಾನನ ಹತ್ತಿರದಿಂದ ಒಂದು ಹರಕು ಒಟ್ಟೆಯನ್ನು ತೆಗೆದುಕೊಂಡು ಫುಟ್ ಬೋರ್ಡಿನಮೇಲೆ ಹಾಕಿ "ಸಾಮಿ, ನೀವು ಅಲ್ಲಿ ಕುಳಿತುಕೊಳ್ಳಿ, ನಾನು ಕೋಚುಮಾನನ ಪಕ್ಕದಲ್ಲಿ ಕುಳಿತುಕೊಳ್ಳುತ್ತೇನೆ' ಎಂದು ಲೀಡರು ನನ್ನೊಡನೆ ಹೇಳಿದನು. ನನಗೆ ಆ ಅವಮಾನವು ದುಃಖಕರವಾಗಿ ತೋರಿ "ಹೊರಗಡೆ ಕುಳಿತಿದ್ದ ನನ್ನನ್ನು ನೀವು ಇಲ್ಲಿ ಕುಳ್ಳಿರಿಸಿದಿರಿ, ಆಗಲಿ ಎಂದು ಸುಮ್ಮನಿದ್ದೆನು, ಈಗ ನೀವು ಇಲ್ಲಿ ಕುಳಿತು ಚುಟ್ಟ ಸೇದಲು ನಾನು ನಿಮ್ಮ ಕಾಲಿನ ಹತ್ತಿರ ಕುಳಿತುಕೊಳ್ಳಬೇಕೆಂದು ಹೇಳುತ್ತೀರಿ. ನಾನು ಹಾಗೆ ಕುಳಿತುಕೊಳ್ಳುವುದಿಲ್ಲ; ಒಳಗೇ ಕುಳಿತುಕೊಳ್ಳುತ್ತೇನೆ ಎಂದು ನಾನು ಹೇಳಲು ಆ ಲೀಡರು ನನ್ನ ಚುಟ್ಟನ್ನು ಹಿಡಿದು ತಿರುಗಿಸಲಾರಂಭಿಸಿದನಲ್ಲದೆ ರಟ್ಟೆಯನ್ನು ಹಿಡಿದೆಳೆಯತೊಡಗಿದನು. ನಾನು ಹಿತ್ತಾಳೆಯಂಚಿಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆನು. ಬಂಡಿಯಲ್ಲಿ ಇದ್ದವರೆಲ್ಲರೂ ಬಂಡಿಯಿಂದ ಕೆಳಕ್ಕಿಳಿದು ಆ ವಿಚಿತ್ರವನ್ನು ನೋಡುತ್ತಿದ್ದರು. ಆ ಲೀಡರು ನನ್ನನ್ನು ಬೈದು ಹೊಡೆಯುತ್ತಿದ್ದನು. ನಾನು ಮಾತ್ರ ಸ್ಥಳಬಿಡದೆ ಕುಳಿತಿದ್ದೆನು. ಅವನು ಬಲಿಷ್ಠನು; ನಾನು ದುರ್ಬಲನು. ಅವರಲ್ಲಿ ಕೊಂಚ ಕನಿಕರ ಹುಟ್ಟಿತು. "ಅಯ್ಯೋ ಆತನನ್ನು ಹೊಡಿಯಲು ಆತನ ತಪ್ಪೂ ಇಲ್ಲವು. ಅವನು ನ್ಯಾಯವಾಗಿಯೇ ಹೇಳಿದನು. ಆತನು ಕುಳಿತುಕೊಳ್ಳಲು ಸ್ಥಳವಿಲ್ಲದಿದ್ದಲ್ಲಿ ಒಳಗಡೆ ಒಂದಿಗೆ ನಮ್ಮೊಡನೆ ಕುಳಿತುಕೊಳ್ಳುವಂತೆ ಹೇಳು" ಎಂದು ಅವರು ಲೀಡರನ್ನು ಮೂದಲಿಸಿದರು. "ನನಗೇನೂ ಭಯವಿಲ್ಲ" ಎಂದು ಲೀಡರು ಹೇಳಿದನಾದರೂ ಕೊಂಚ ಗರ್ವಭಂಗವಾಗಿ ನನ್ನನ್ನು ಹೊಡಿಯುವುದನ್ನು ಬಿಟ್ಟನು. ಕೋಚುಮಾನನ ಪಕ್ಕದಲ್ಲಿ ಕುಳಿತುಕೊಂಡಿದ್ದ ಹಾಟೆಂಟಾಟನನ್ನು ಹಲಗೆಯಮೇಲೆ ಕುಳ್ಳಿರಿಸಿ ತಾನು ಅಲ್ಲಿ ಕುಳಿತುಕೊಂಡನು.

ಕೆಳಗಿಳಿದು ಬಂದಿದ್ದ ಪ್ರಯಾಣಿಕರೆಲ್ಲರೂ ಪುನಃ ಗಾಡಿಯೊಳಕ್ಕೆ ಹೋಗಿ ಕುಳಿತುಕೊಂಡರು. ಬಂಡಿಯು ಹೊರಟಿತು. ನನ್ನ ಎದೆಯು ಢಡಢಡನೆ ಬಡಿದುಕೊಳ್ಳುತ್ತಿದ್ದಿತು. ಪ್ರಾಣಸಹಿತ ಗಮ್ಯಸ್ಥಾನವನ್ನು ತಲುಪುತ್ತೇನೆಯೋ? ಎಂಬ ಸಂಶಯವು ಸಹ ಹುಟ್ಟಿತು. ಆಗಾಗ್ಗೆ ಲೀಡರು ನನ್ನನ್ನು ದುರುಗುಟ್ಟಿಕೊಂಡು ನೋಡುತ್ತಿದ್ದನು. 'ಸ್ಟಾಂಡರ್ಟನ್ ತಲುಪಿದಮೇಲೆ 'ನಿನ್ನ ಕೆಲಸ ನೆಟ್ಟಗಾಗುವುದು; ಹುಷಾರ್!'' ಎಂದು ಹೇಳಿದನು. ಕತ್ತಲೆಯಾದಮೇಲೆ ಬಂಡಿಯು ಸ್ಟಾಂಡರ್ಟನ್ನು ತಲುಪಿತು. ಅಲ್ಲಿ ಕೆಲವು ಭಾರತೀಯರನ್ನು ನೋಡಿದೊಡನೆಯೇ ನನಗೆ ಹೋಗಿದ್ದ ಪ್ರಾಣ ಬಂದಿತು. "ಅಬ್ದುಲ್ಲಾಸೇಟರು ನಮಗೆ ತಂತಿವರ್ತಮಾನಕೊಟ್ಟಿದ್ದಾರೆ. ನಿಮ್ಮನ್ನು ಈಸಾಸೇಟರ ಅಂಗಡಿಗೆ ಕರೆದುಕೊಂಡು ಹೋಗಲು ನಾವು ಬಂದಿರುತ್ತೇವೆ" ಎಂದು ಅವರು ಹೇಳುತ್ತಲೇ ನನಗೆ ಬಹಳ ಸಂತೋಷವಾಯಿತು. ಈಸಾಹಾಜೀ ಸುಮಾರ್ ಸೇಟರ ಅಂಗಡಿಗೆ ನಾವೆಲ್ಲರೂ ಹೋದೆವು. ಸೇಟರೂ ಅವರ ಗುಮಾಸ್ತರೂ ನನ್ನನ್ನು ಸುತ್ತುಕಟ್ಟಿಕೊಂಡರು. ನಡೆದ ಸಂಗತಿಯೆಲ್ಲವನ್ನೂ ಅವರಿಗೆ ತಿಳಿಸಿದೆನು. ಅವರು ಬಹಳ ವ್ಯಸನಪಟ್ಟರು. ತಮಗೂ ಕೂಡ ಇಂತಹ ಅನುಭವಗಳು ಉಂಟಾಗಿರುತ್ತವೆಂದು ಹೇಳಿ ನನ್ನನ್ನು ಸಂತೈಸಿದರು. ರಹದಾರಿಬಂಡಿಯ ಕಂಪೆನಿ ಏಜಂಟಿಗೆ ನಾನು ಒಂದು ದೊಡ್ಡ ಕಾಗದವನ್ನು ಬರೆದು ನಡೆದ ಸಂಗತಿಯೆಲ್ಲವನ್ನೂ ವಿವರಿಸಿದ್ದೆನು. ಲೀಡರನು ಬೆದರಿಸಿದ್ದ ಸಂಗತಿಯನ್ನೂ ಬರೆದಿದ್ದೆನು. ಮರುದಿನ ಬೆಳಿಗ್ಗೆ ನನಗೆ ಬಂಡಿಯಲ್ಲಿ ಸ್ಥಳವನ್ನೇರ್ಪಡಿಸಬೇಕೆಂದು ತಿಳಿಸಿದ್ದೆನು. "ಸ್ಟಾಂಡರ್ಟನ್ನಿಂದ ದೊಡ್ಡ ಬಂಡಿಯು ಹೊರಡುವುದು. ಬಂಡಿಯಲ್ಲಿ ಲೀಡರು ಬರುವುದಿಲ್ಲ; ಹೊಸಬರು ಬರುತ್ತಾರೆ. ನಿಮಗೆ ಒಳಗಡೆಯೇ ಸ್ಥಳವು ಕೊಡಲ್ಪಡುವುದು" ಎಂದು ಏಜಂಟರು ಉತ್ತರವನ್ನು ಕೊಟ್ಟನು. ನನಗೆ ಮನಸ್ಸಮಾಧಾನವಾಯಿತು. ಆ ಲೀಡರನಮೇಲೆ ನಾನು ಫಿರ್ಯಾದುಮಾಡಲಿಲ್ಲವಾದರೂ ಅದು ಅಷ್ಟರಲ್ಲೇ ಸಮಾಪ್ತಿಯಾಯಿತು. ಬೆಳಿಗ್ಗೆ ಈಸಾಸೇಟರ ಗುಮಾಸ್ತರು ನನ್ನನ್ನು ಬಂಡಿಯ ಹತ್ತಿರಕ್ಕೆ ಕರೆದುಕೊಂಡು ಬಂದರು. ಒಳಗಡೆ ಸ್ಥಳ ಸಿಕ್ಕಿತು. ಆ ರಾತ್ರಿ ಸುರಕ್ಷಿತನಾಗಿ ಬಂಡಿಯು ಜೋಹಾನ್ಸ್ ಬರ್ಗನ್ನು ಸೇರಿತು. ಸ್ಟಾಂಡರ್ಟನ್ ಸಣ್ಣ ಗ್ರಾಮವು. ಜೋಹಾನ್ಸ್ ಬರ್ಗ್ ದೊಡ್ಡದು. ಅಬ್ದುಲ್ಲಾಸೇಟರು ಜೋಹಾನ್ಸ್ ಬರ್ಗಿಗೂ ಕೂಡ ತಂತಿವರ್ತಮಾನ ಕೊಟ್ಟಿದ್ದರು. ಮಹಮ್ಮದು ಕಾಸಿಂ ಕಮರುದ್ದೀನರವರ ಅಂಗಡಿಗೆ ಹೋಗಬೇಕೆಂದು ನನ್ನ ಕೂಡ ಸಹ ಹೇಳಿದರು. ಕಾಸಿಂರವರ ಗುಮಾಸ್ತನು ಬಂಡಿಯ ಬಳಿಗೆ ಬಂದಿದ್ದನಾದರೂ ಆತನು ನನ್ನನ್ನು ಗುರ್ತಿಸಲಿಲ್ಲ, ನಾನೂ ಆತನನ್ನು ನೋಡಲಿಲ್ಲ. ಅಲ್ಲಿ ಬಹಳ ಹೊಟೇಲುಗಳಿವೆ. ಅವುಗಳ ಹೆಸರು ಸಹ ನನಗೆ ಗೊತ್ತು. ಒಂದು ಹೊಟೇಲಿಗೆ ಹೋಗಬೇಕೆಂದೆಣಿಸಿ ಗ್ರಾಂಡ್ ನೇಷನಲ್ ಹೋಟೇಲಿಗೆ ಹೋಗುವುದಕ್ಕಾಗಿ ಬಂಡಿಯನ್ನು ಬಾಡಿಗೆಗೆ ಗೊತ್ತುಮಾಡಿ ಅಲ್ಲಿಗೆ ಹೋಗಿ ನನಗೊಂದು ಕೊಠಡಿ ಬೇಕೆಂದು ಮ್ಯಾನೇಜರಿಗೆ ಹೇಳಲು ಆತನು ಕೊಠಡಿಗಳನ್ನು ನೋಡಿ ಒಂದೂ ಖಾಲಿಯಿಲ್ಲವೆಂದು ನಯವಾಗಿ ಹೇಳಿದನು. ಅನಂತರ ಅಲ್ಲಿಂದ ಕಾಸಿಂರವರ ಅಂಗಡಿಗೆ ಬಂಡಿಯನ್ನು ಬಿಡುವಂತೆ ಹೇಳಿ ಅಲ್ಲಿಗೆ ಹೊರಟೆನು. ಅಲ್ಲಿ ಅಬ್ದುಲ್ ಗನೀಸೇಟರವರು ಒಬ್ಬನನ್ನು ನಿರೀಕ್ಷಿಸಿಕೊಂಡಿದ್ದರು. ಹೊಟೇಲಿನಲ್ಲಿ ನಡೆದ ಸಂಗತಿಯನ್ನು ಅವರಿಗೆ ಹೇಳಲು ಅವರು ಪಕಪಕನೆ ನಕ್ಕು ಭಾರತೀಯರಿಗೆ ಹೊಟೇಲಿನಲ್ಲಿ ಸ್ಥಳಕೊಡುವರೆಂದು ನೀವು ಹೇಗೆ ತಿಳಿದಿರಿ? ಎಂದು ಅವರು ಕೇಳಿದರು.

ಯಾತಕ್ಕೆ ಕೊಡುವುದಿಲ್ಲ? 'ಕೆಲವು ದಿವಸ ನೀವು ಇಲ್ಲಿದ್ದ ಹೊರತು ನಿಮಗೆ ಅದು ಗೊತ್ತಾಗುವುದಿಲ್ಲ. ದುಡ್ಡಿಗಾಗಿ ನಾವು ಇಲ್ಲಿಗೆ ಬಂದೆವಾದುದರಿಂದ ನಾವು ಈ ಅವಮಾನವನ್ನು ಲೆಕ್ಕಿಸದೆ ಕಾಲವನ್ನು ಕಳೆಯುತ್ತಿದ್ದೇವೆ" ಎಂದು ಅವರು ಭಾರತೀಯರಿಗೆ ಅಲ್ಲಿ ಆಗುತ್ತಿರುವ ಹಿಂಸೆಯನ್ನೆಲ್ಲವನ್ನೂ ವಿವರಿಸಿ ಹೇಳಿದರು. ಗನೀಸೇಟರನ್ನು ಕುರಿತು ಮುಂದು ಮುಂದೆ ಅಧಿಕವಾಗಿ ತಿಳಿಸಲ್ಪಡುವುದು. "ನಿಮ್ಮಂತಹವರಿಗೆ ಈ ದೇಶವು ಕೆಲಸಕ್ಕೆ ಬರುವುದಿಲ್ಲ. ನಾಳೆಯದಿನ ನೀವು ಪ್ರಿಟೋರಿಯಾಕ್ಕೆ ಹೊರಡಬೇಕಾಗಿದೆಯಲ್ಲವೆ? ನೀವು ಮೂರನೇ ತರಗತಿಯ ಬಂಡಿಯಲ್ಲೇ ಹೊರಡಬೇಕಾಗಿದೆ. ಟ್ರಾನ್ಸ್ ವಾಲಿನ ಸ್ಥಿತಿಯು ನೇಟಾಲಿನಲ್ಲಿರುವುದಕ್ಕಿಂತ ಅಧ್ವಾನವಾಗಿರುವುದು. ಭಾರತೀಯರಿಗೆ 1 ಮತ್ತು 2 ನೇ ತರಗತಿಗಳ ಟಿಕೆಟ್ಟುಗಳನ್ನು ಯಾವಾಗಲೂ ಕೊಡುವುದಿಲ್ಲ" ಎಂದು ಸೇಟರು ಹೇಳಿದರು. "ನೀವು ಯಾವಾಗಲೂ ಆ ನಿರ್ಬಂಧವನ್ನು ತಪ್ಪಿಸಲು ಪ್ರಯತ್ನಿಸಲಿಲ್ಲವೆ?" ಎಂದು ನಾನು ಕೇಳಿದೆನು. "ನಾವು ಅನೇಕಸಾರಿ ಬರೆದೆನಾದರೂ ಪ್ರಯೋಜನವಾಗಲಿಲ್ಲ. 1 ಮತ್ತು 2 ನೇ ತರಗತಿಗಳಲ್ಲಿ ಪ್ರಯಾಣಮಾಡಲು ನಮ್ಮವರಿಗೂ ಇಷ್ಟವಿಲ್ಲ" ಎಂದುತ್ತರವನ್ನು ಕೊಟ್ಟರು. ನಾನು ರೈಲ್ವೆರೂಲ್ಸನ್ನು ತರಿಸಿ ಓದಿದೆನು. ಅದರಲ್ಲಿ ನನಗವಕಾಶವು ದೊರಕಿತು. ಹಳೇಟ್ರಾನ್ಸ್ ವಾಲ್ ಚಟ್ಟ ಅಂದರೆ ವಿಧಿಯು ಅಷ್ಟು ಕಠಿಣವಾಗಿರಲಿಲ್ಲವು. ರೈಲ್ವೆರೂಲ್ಸು ಮತ್ತಷ್ಟು ಸುಲಭವಾಗಿದ್ದುವು. "ನಾನು 1ನೇ ತರಗತಿಯಲ್ಲೇ ಪ್ರಯಾಣಮಾಡುವೆನು. ಅದು ಸಾಧ್ಯವಿಲ್ಲದಿದ್ದಲ್ಲಿ ಇಲ್ಲಿಗೆ 37 ಮೈಲಿ ದೂರದಲ್ಲಿರುವ ಪ್ರಿಟೋರಿಯಾಕ್ಕೆ ಪ್ರತ್ಯೇಕ ಬಂಡಿಯನ್ನು ಮಾಡಿಕೊಂಡು ಹೊರಡುವೆನು" ಎಂದು ನಾನು ಸೇಟರಿಗೆ ಹೇಳಿದೆನು. "ಅದರಿಂದ ದುಡ್ಡು ಹೆಚ್ಚಾಗಿ ವೆಚ್ಚವಾಗುವುದು; ಅಲಕ್ಷ್ಯವು ಕೂಡ ಆಗುವುದು. ಆದುದರಿಂದ 1 ನೇ ತರಗತಿಯಲ್ಲೇ ಹೊರಡುವುದುತ್ತಮ" ಎಂದು ಅವರು ಕೂಡ ಸಮ್ಮತಿಸಿದರು. ಅವರ ಮೇಲೆ "ನಾನೊಬ್ಬ ಬ್ಯಾರಿಸ್ಟರು, ಯಾವಾಗಲೂ 1 ನೇ ತರಗತಿಯಲ್ಲೇ ಪ್ರಯಾಣಮಾಡತಕ್ಕವನು. ಕೂಡಲೇ ಪ್ರಿಟೋರಿಯಾಕ್ಕೆ ಪ್ರಯಾಣಮಾಡಬೇಕಾಗಿದೆ. ಆದ್ದರಿಂದ ಸ್ಟೇಷನ್ನಿಗೆ ಬರುತ್ತೇನೆ. 1 ನೇ ತರಗತಿಯಲ್ಲಿ ತಪ್ಪದೆ ಒಂದು ಸ್ಥಳವನ್ನು ಕೊಡಬೇಕಾಗಿ ಕೋರುತ್ತೇನೆ' ಎಂದು ಸ್ಟೇಷನ್ ಮಾಸ್ಟರಿಗೆ ಒಂದು ಕಾಗದವನ್ನು ಬರೆದೆನು. ನಾನು ಕೂಲೀ ಬ್ಯಾರಿಸ್ಟರೆಂದು ತಿಳಿದು ಆತನು ಸ್ಥಳವಿಲ್ಲವೆಂದು ಹೇಳಿಬಿಡಬಹುದಾದುದರಿಂದ ಇಂಗ್ಲೀಷರ ಪದ್ಧತಿಯಂತೆ ಫ್ಯಾಷನನ್ನಾಗಿ ಉಡುಪನ್ನು ಹಾಕಿಕೊಂಡು ಸ್ವಯಮಾಗಿ ಆತನ ಕೂಡ ಮಾತನಾಡುವುದುತ್ತಮವೆಂದು ತಿಳಿದು ನಾನು ಫ್ರಾಕ್ ಕೋಟನ್ನೂ ನೆಕ್ ಟೈಯನ್ನೂ ಧರಿಸಿಕೊಂಡು ಸ್ಟೇಷನ್ನಿಗೆ ಹೋಗಿ ಒಂದು ಸವರನ್ನನ್ನು ಕೊಟ್ಟು 1ನೇ ತರಗತಿಯ ಟಿಕೆಟ್ಟು ಬೇಕೆಂದು ಕೇಳಿದೆನು. ಆ ಕಾಗದವನ್ನು ಬರೆದಿದ್ದವನು ನೀವೆಯೋ? ಎಂದು ಸ್ಟೇಷನ್ ಮಾಸ್ಟರು ಕೇಳಿದನು. "ಹೌದು. ಈ ದಿವಸವೇ ಪ್ರಿಟೋರಿಯಾಕ್ಕೆ ಹೊರಡಬೇಕಾಗಿದೆ. ದಯೆಯಿಟ್ಟು ನನಗೊಂದು ಸ್ಥಳವನ್ನು ಕೊಡಿಸಬೇಕಾಗಿ ಕೋರುತ್ತೇನೆ" ಎಂದು ಹೇಳಿದೆನು. ಆತನು ಆಶ್ಚರ್ಯದಿಂದ ಮುಗುಳುನಗೆ ನಕ್ಕನು. "ನಾನು ಟ್ರಾನ್ಸ್ ವಾಲು ದೇಶೀಯನಾಗಿರದೆ ಹಾಲೆಂಡು ದೇಶದವನಾದುದರಿಂದ ನಿಮಗೆ ಸಹಾಯಮಾಡುವೆನು. ಆದರೆ ಒಂದು ನಿಬಂಧನೆಯುಂಟು. ನಿಮಗೆ ನಾನೇನೋ ಈಗ 1 ನೇ ತರಗತಿಯ ಟಿಕೆಟ್ಟನ್ನು ಕೊಡುತ್ತೇನೆ. ಮುಂದೆ ಗಾರ್ಡು ನಿಮ್ಮನ್ನು 3 ನೇ ತರಗತಿಗೆ ಹೋಗಬೇಕೆಂದರೆ ನೀವು ರೈಲ್ವೆಯವರ ಮೇಲೆ ಫಿರ್ಯಾದು ಮಾಡಕೂಡದು. ನೀವು ಹಾಗೆ ಫಿರ್ಯಾದು ಮಾಡಿದರೆ ನನಗೆ ತೊಂದರೆ ಬರುತ್ತದೆ. ನೀವು ದೊಡ್ಡ ಮನುಷ್ಯರೆಂದು ನಾನು ಗುರ್ತಿಸುತ್ತೇನೆ. ತೊಂದರೆ ಇಲ್ಲದೆ ನೀವು ಗಮ್ಯಸ್ಥಾನವನ್ನು ಸೇರುವವರಾಗಿ" ಎಂದು ಆತನು ಹೇಳಿ ಟಿಕೆಟ್ಟನ್ನು ಕೊಟ್ಟನು. ನಾನೂ ಆತನ ಇಷ್ಟ ಪ್ರಕಾರ ವಂದನಾಪೂರ್ವಕವಾಗಿ ವಾಗ್ದಾನಮಾಡಿದೆನು. ಗನೀಸೇಟರು ನನ್ನನ್ನು ಸಾಗಕಳುಹಲು ಸ್ಟೇಷನ್ನಿಗೆ ಬಂದಿದ್ದರು. ಅವರು ನಡೆದುದನ್ನೆಲ್ಲಾ ನೋಡಿ ಬಹಳ ಆಶ್ಚರ್ಯಪಟ್ಟರು. "ದಾರಿಯಲ್ಲಿ ಗಾರ್ಡ್ ನಿಮಗೆ ತೊಂದರೆಕೊಡದೆ ಇರುವುದಿಲ್ಲ. ಅವನು ಸುಮ್ಮನಿದ್ದರೂ ಪ್ರಯಾಣಿಕರು ಸುಮ್ಮನಿರರು" ಎಂದು ಅವರು ಹೇಳಿ ಎಚ್ಚರಿಸಿದರು. ನಾನು 1ನೇ ತರಗತಿಯ ಬಂಡಿಯಲ್ಲಿ ಕುಳಿತುಕೊಂಡೆನು. ಬಂಡಿಯು ಹೊರಟಿತು. ಜರ್ಮಿಸ್ಟನ್ ಹತ್ತಿರ ಗಾರ್ಡು ಬಂದು ಟಿಕೆಟ್ಟನ್ನು ವಿಚಾರಿಸಿದನು. ನನ್ನನ್ನು ನೋಡುತ್ತಲೇ ಅವನಿಗೆ ಕೋಪಬಂದಿತು. 3 ನೆಯ ತರಗತಿಗೆ ಹೋಗಬೇಕೆಂದು ಬೆರಳಿನಿಂದ ಸೂಚಿಸಿದನು. ನಾನು 1 ನೇ ತರಗತಿಯ ಟಿಕೆಟ್ಟನ್ನು ತೋರಿಸಿದೆನು. "ನಿಮ್ಮ ಹತ್ತಿರ 1 ನೇ ತರಗತಿಯ ಟಿಕೆಟ್ಟಿದ್ದರೂ ಚಿಂತೆಯಿಲ್ಲ; ನೀವು 3 ನೇ ತರಗತಿಯ ಬಂಡಿಗೆ ಹೋಗಿಯೇತೀರಬೇಕು" ಎಂದು ಗಾರ್ಡು ಹೇಳಿದನು. ಆ ಬಂಡಿಯಲ್ಲಿ ಒಬ್ಬ ಆಂಗ್ಲೇಯನು ಮಾತ್ರ ಇದ್ದನು. ಆತನು ಗಾರ್ಡನನ್ನು ಕಠಿಣವಾಗಿ ಮೂದಲಿಸಿ "ಅವರ ಹತ್ತಿರ ಫಸ್ಟ್ ಕ್ಲಾಸ್ ಟಿಕೆಟು ಇದ್ದಾಗ್ಯೂ 3 ನೇ ತರಗತಿಗೆ ಹೋಗಬೇಕೆನ್ನುವುದೇತಕ್ಕೆ? ಅವರು ಈ ಬಂಡಿಯಲ್ಲಿ ಕುಳಿತಿರುವುದರಿಂದ ನನಗೇನೂ ಅಡ್ಡಿಯಿಲ್ಲ" ಎಂದು ಆ ಆಂಗ್ಲೇಯನು ಗಾರ್ಡಿನೊಡನೆ ಹೇಳಿದನು. "ಅಯ್ಯಾ ನೀವು ಇಲ್ಲೇ ಕುಳಿತುಕೊಂಡಿರಿ" ಎಂದು ಆತನು ಹೇಳಿದನು. "ಕೂಲಿಯವನ ಸಂಗಡ ಪ್ರಯಾಣಮಾಡಲು ನಿಮಗೆ ಆಕ್ಷೇಪಣೆಯೇನೂ ಇಲ್ಲದಿರುವಾಗ್ಗೆ ನನಗೇನು?" ಎಂದು ಗುರುಗುಟ್ಟುತ್ತ ಗಾರ್ಡು ಹೊರಟುಹೋದನು.

ಹಾವುಕಚ್ಚಿದ್ದಕ್ಕೆ ಚಿಕಿತ್ಸೆ.

("ಪ್ರಬುದ್ಧ ಭಾರತ" ದಿಂದ)

ಹಾವು ಕಚ್ಚಿದರ ಮೂಲಕ ಇಂಡಿಯಾದೇಶದಲ್ಲಿ ಸಾಯುವಷ್ಟು ಜನರು ಪ್ರಪಂಚದ ಬೇರೆ ಯಾವ ಕಡೆಯಲ್ಲಿಯೂ ಸಾಯುವುದಿಲ್ಲ. ವರ್ತಮಾನಪತ್ರಿಕೆಗಳೂ, ವಾರ ಮತ್ತು ಮಾಸಪತ್ರಿಕೆಗಳೂ ಹಾವು ಮತ್ತು ಚೇಳು ಮೊದಲಾದವು ಕಚ್ಚಿದ್ದಕ್ಕೆ ಖಂಡಿತ ಗುಣಪಡಿಸುವ ಚಿಕಿತ್ಸೆಗಳ ಹಲವು ಪ್ರಕಾರಗಳನ್ನು ಬಹಿರಂಗಪಡಿಸುತ್ತವೆ. ಆದರೆ ಇವುಗಳಲ್ಲಿ ಹಲವು ಅವುಗಳ ಸರಿಯಾದ ಪರಾನುಭವದ ಮೇಲೆ ನಿರ್ಧರಿಸಲ್ಪಟ್ಟವಲ್ಲವೆಂದು ಎಲ್ಲರಿಗೂ ಗೊತ್ತಿದೆ. ಅದಲ್ಲದೆ ಗ್ರಾಮಗಳಲ್ಲಿ ವಾಸಿಸುವ ಇಂಥಾ ಆಕಸ್ಮಿಕದಿಂದ ತೊಂದರೆಗೆ ಒಳಗಾಗುವ ಹೆಚ್ಚಿನವರಿಗೆ ತಿಳುವಳಿಕೆ ಇಲ್ಲದ ಗ್ರಾಮಸ್ಥರಿಗೆ ಇವು ತಲುಪುವುದೇ ಇಲ್ಲ. ನಾವು ಇಲ್ಲಿ ಬರೆಯುವುದು ನಮ ಗ್ರಾಮಸ್ಥರಿಗೆ ತಲುಪಲಿಕ್ಕಿಲ್ಲ; ಆದರೆ ನಮ್ಮ ಚಿಕಿತ್ಸೆಯು ಬಲು ಸುಲಭವಾಗಿಯೂ, ಪ್ರಪಂಚದ ಎಲ್ಲಾ ಕಡೆಯಲ್ಲಿಯೂ ಸಿಕ್ಕುವವುಗಳಾಗಿಯೂ ಮತ್ತೆ ಸ್ವಲ್ಪವೂ ಖರ್ಚಿಲ್ಲದಾಗಿಯೂ ಇರುವ ಕಾರಣದಿಂದ ಜನ ಸಮುದಾಯಕ್ಕೆ ಸಹಾಯ ಮಾಡತಕ್ಕ ಉದ್ದೇಶದಿಂದಲೂ ನಮ್ಮ ವಾಚಕರು ಅವರ ತಿಳುವಳಿಕೆಗೆ ಬರುವ ಹಾವು ಕಚ್ಚಿದ ಎಲ್ಲಾ ಸಂದರ್ಭಗಳಲ್ಲಿಯೂ ಈ ಚಿಕಿತ್ಸೆಯನ್ನು ಪರೀಕ್ಷಿಸಿ ನೋಡಿ ಫಲಿತಾಂಶವನ್ನು ನಮಗೆ ತಿಳಿಸಬೇಕೆಂದು ನಾವು ಈ ಮೂಲಕ ಕೇಳಿಕೊಳ್ಳುವೆವು.

ಕೆಲವು ದಿನಗಳ ಹಿಂದೆ ನಿಸ ಊರಿನಲ್ಲಿ ಒಬ್ಬಳಿಗೆ ಹಾವು ಕಚ್ಚಿದ ವರ್ತಮಾನವು ಕಲ್ಕತ್ತಾದ ರಾಮಕೃಷ್ಣ ಆಶ್ರಮಕ್ಕೆ ತಲುಪಿತು. ಆ ವರ್ತಮಾನವು ಸಿಕ್ಕಿದ ಕೂಡಲೇ ಇಬ್ಬರು ಸ್ವಾಮಿಗಳು ಆ ಸ್ಥಳಕ್ಕೆ ಹೋಗಿ ಈ ಕೆಳಗಿನ ಚಿಕಿತ್ಸೆಯನ್ನು ಮಾಡಿದರು. ಹಾವು ಕಚ್ಚಿದ ಗಾಯದ ಮೇಲ್ಭಾಗವನ್ನು ಬಿಗಿಯಾಗಿ ಕಟ್ಟಿದರೆ ವಿಷವು ಮೇಲಕ್ಕೆ ಏರುವುದಿಲ್ಲವೆಂದು ಹಿಂದಿನ ಸಂದರ್ಭಗಳಲ್ಲಿ ಹೇಳಿದ್ದುದನ್ನು ಅದೃಷ್ಟವಶಾತ್ ಅಲ್ಲಿಯವರು ತಿಳಿದುಕೊಂಡು ಆ ಎಚ್ಚರಿಕೆಯನ್ನು ತೆಗೆದುಕೊಂಡಿದ್ದರು. ಆದರೆ ಆ ಎಚ್ಚರಿಕೆಯನ್ನು ಕೂಡಲೇ ತೆಗೆದುಹಾಕದ ಕಾರಣ ಸ್ವಾಮಿಗಳು ಹೋಗಿ ತಲುಪುವದರೊಳಗಾಗಿ ಆಕೆ ಪ್ರಜ್ಞೆ ತಪ್ಪುವಳಿಗೆ ಸ್ಥಿತಿಗೆ ಹೋಗಿತ್ತು. ಸ್ವಾಮಿಗಳು ತುಳಸಿಯ ಎಲೆಯ ರಸವನ್ನೂ ಮತ್ತು ಬಾಳೆಯ ದಿಂಡಿನ ನೀರನ್ನೂ ತೆಗೆದುಕೊಂಡು, ಹುಳಿಯನ್ನು ಕಲೆಸಿ, ನಸ್ಯಕ್ಕೂ ಬತ್ತಿಗೆ, ಎರಡಕ್ಕೂ ಹೊಕ್ಕಳಿಗೂ ಹಚ್ಚಿ ನಮೂನ ಅರ್ಧ ಚಮಚ (Tea spoon) ಬಾಳೆಯ ರಸವನ್ನು ಪ್ರತಿ ಐದು ನಿಮಿ

ಮತ್ತು ನಿಮಿಷಕ್ಕೊಂದು ಸಾರಿ ಕುಡಿಸುತ್ತಾ ಬಂದರು. ಇದ ರಿಂದ ಸುಮಾರು 6—7 ಗಂಟೆಯ ಮೇಲೆ ಸ್ವಲ್ಪ ಗಾಸಿಯಾದಂತೆ ತೋರಿತು. ಹಾವು ಬೆಳಿಗ್ಗೆ 9 ಗಂಟೆಗೆ ಕಚ್ಚಿ ಅಲ್ಲಿಂದ ಸುಮಾರು ಎಂಟು ಗಂಟೆಯ ಮೇಲೆ ಈ ಚಿಕಿತ್ಸೆಯನ್ನು ಮಾಡಿದ್ದರಿಂದ ಅಷ್ಟು ಗಾಸಕಾಶವಾಯಿತು. ಕ್ರಮೇಣ ಅವಳಿಗೆ ಪ್ರಜ್ಞೆಯು ಬರುವದೆಂದು ತೋರಿದಾಗ ಅವರು ಇನ್ನೊಂದು ಪ್ರಯೋಗವನ್ನು ಮಾಡಿದರು. ಅವರು ಹಾವು ಕಚ್ಚಿದ ಗಾಯದ ಮೇಲೆ ಬಂದಕ್ಕೊಂದು ಅಡ್ಡವಾಗಿ (X) ಗಾಯಗಳನ್ನು ಮಾಡಿ ಅದೇ ಪ್ರಕಾರ ಕೋಳಿಯ ಮರಿಯ ಆಸನದ್ವಾರ (Anus) ವನ್ನು ಅಡ್ಡಡ್ಡವಾಗಿ ಗಾಯಗಳನ್ನು ಮಾಡಿ, ಕೋಳಿಮರಿಯ ಆಸನದ ಗಾಯವನ್ನು ಹಾವು ಕಚ್ಚಿದ ಭಾಗದಲ್ಲಿ ಮಾಡಿದ ಗಾಯಕ್ಕೆ ಸರಿಯಾಗಿಟ್ಟರು. ಹೀಗೆ ಮಾಡಿದ್ದರಿಂದ 5 ಕೋಳಿಮರಿಗಳು ಸತ್ತುಹೋದವು. ಆರನೆಯದು ಸಾಯಲಿಲ್ಲ. ಅಷ್ಟರೊಳಗೆ ಹಾವಿನಿಂದ ಕಚ್ಚಲ್ಪಟ್ಟವಳು ಪೂರಾ ಪ್ರಜ್ಞೆಗೆ ಬಂದಳು. ನಂತರ ಅವಳಿಗೆ "ಎನಿಮ" ಕೊಡಲಾಯಿತು. ಹೀಗೆಯೇ ಸ್ವಲ್ಪ ಸ್ವಲ್ಪವಾಗಿ ಸುಮಾರು 24 ಗಂಟೆಯೊಳಗೆ ಅವಳು ಪೂರ್ತಿ ವಾಸಿಯಾದಳು.

ಈ ಮೇಲೆ ಹೇಳಿದ ವಿಧಾನವು ಕೆಲವರಿಗೆ ತುಂಬಾ ಗಲಾಟೆ (Complications) ಯುಳ್ಳದಾಗಿ ತೋರಬಹುದು. ಕೋಳಿಮರಿಯನ್ನು ಉಪಯೋಗಿಸಲಿಕ್ಕೆ ಇಷ್ಟ ಪಡದಿರಬಹುದು; ಆದರೆ ಆದಿಲ್ಲದೆ ಒಬ್ಬ ತುಳಸಿಯ ರಸ ಮಾತ್ರದಿಂದಲೇ ಪೂರ್ತಿ ವಾಸಿಮಾಡುವದನ್ನು ನಾವು ನೋಡಿರುತ್ತೇವೆ. ಒಮ್ಮೆ ಕೋಳಿಮರಿಯ ವಿಧಾನವು ಎಲ್ಲ ಕಡೆಯಲ್ಲಿ ಲಭಿಸಲಾರದು. ಈ ವಿಷಯದಲ್ಲಿ ನಮ್ಮ ಮಿತ್ರರಾದ ಸ್ವಾಮಿಯವರು ಇನ್ನೊಂದು ಸ್ಥಳದಲ್ಲಿ ಮಾಡಿ ವಾಸಿಮಾಡಿದ ಚಿಕಿತ್ಸೆಯನ್ನು ಇಲ್ಲಿ ಬರೆಯುವೆವು.

ತುಳಸಿಯ ರಸದ ಒಡಲು ಹಾವಿನ ವಿಷದ ರಸವನ್ನಾಗಲೀ ಅಥವಾ ಅಫೀಮಿನ ರಸವನ್ನಾಗಲೀ, ಮತ್ತು ಬಾಳೆಯ ದಿಂಡಿನ ರಸ (ಇಟ್ಟು ಮಾಡುವ) ಹತ್ತಿಯಗಿಡದ ಎಲೆಯ ರಸವನ್ನಾಗಲೀ ಉಪಯೋಗಿಸಬಹುದು. ಆದರೆ ತಾವೆಯ ಬೇರಿನ ರಸವನ್ನು ತಲೆಯ ಮೇಲೆ ಮಾತ್ರ ಲೇಪನಮಾಡಬೇಕು. ಒಳ ಕೊಡಲಿಕ್ಕೆ ಬಾರದು. ಇವುಗಳು ಯಾವವೂ ಸಿಕ್ಕದಿದ್ದರೆ ತುಳಸಿಯ ರಸವನ್ನೇ ಹೆಚ್ಚಾಗಿ ಉಪಯೋಗಿಸಿ ಕುಡಿಸಿದ್ದರಿಂದ ಒಳ್ಳೇ ಗುಣವಾದದ್ದು ಕಂಡು ಬಂದಿದೆ. ಬೇರೆ ಚಿಕಿತ್ಸೆಯೇ ಇಲ್ಲದೆ ಅನೇಕ ಸಂದರ್ಭಗಳಲ್ಲಿ ಅಂಥಾ ಸಂದರ್ಭಗಳಲ್ಲಿ ಸಹ ತುಳಸಿಯ ರಸವನ್ನು ಮೈಗೆ ಲೇಪನಮಾಡಿದ್ದರಿಂದ ರೋಗಿಯು ಗುಣವಾದದ್ದು ಸಹ ಕಂಡು ಬಂದಿದೆ.

ಹಾವಿನ ಮತ್ತು ಚೇಳಿನ ವಿಷಕ್ಕೆ ವಿಷವನ್ನು ನಾಶಮಾಡುತ್ತವೆಂದು ಡಾಕ್ಟರುಗಳು ತಿಳಿಸಿದ್ದರೂ ಅವುಗಳ ಗುಣಕಾರಿಯ ವಿಷಯ ಹೇಳಲಾರೆವು. ಇವೆಲ್ಲಕ್ಕಿಂತಲೂ ತುಳಸಿಯ ರಸವೇ ವಿಶೇಷವಾಗಿ ವಿಷನಾಶಕವಾಗಿದೆ. ಪ್ಲೇಗು ಸಹ ಇದರಿಂದ ವಿಷನಾಶಕವೆಂದು ಹೇಳಿದೆ. ನಮ್ಮ ಸ್ವಾಮಿಗಳಲ್ಲಿ ಒಬ್ಬರು ತುಳಸಿಯ ರಸದಿಂದ ಒಂದು ಕಠಿಣವಾದ ಚೇಳಿನ ವಿಷವನ್ನು ಪರಿಹಾರಮಾಡಿದ್ದರ ಅದ್ಭುತ ಸತ್ಯವನ್ನು ತಿಳಿಸುತ್ತಾರೆ. ತುಳಸಿಯ ಗಿಡವು ಇಂಡಿಯಾದೇಶದ ಎಲ್ಲಾ ಭಾಗಗಳಲ್ಲಿಯೂ ಇದೆ. ಅಲ್ಲದೆ ಅದನ್ನು ಬಹು ಪವಿತ್ರವೆಂದು ಅನೇಕ ಹಿಂದೂ ಮನೆಗಳಲ್ಲಿ ಪೂಜಿಸುತ್ತಾರೆ. ಆದುದರಿಂದ ಅದರ ರಸವನ್ನು ತೆಗೆದು ಇಂಥಾ ವಿಷಗಳಿಗೆ ಪ್ರಯೋಗಿಸಲಿಕ್ಕೆ ಸುಲಭ ಸಾಧ್ಯವಿದೆ. ಓದುಗರು ಇದನ್ನು ಓದಿ ಔಷಧಿಯನ್ನು ಪ್ರಯೋಗಿಸಿದವರು ಇದರ ಗುಣದೋಷಗಳನ್ನು ನಮಗೆ ತಿಳಿಸಿದಲ್ಲಿ ನಾವು ಅವರಿಗೆ ತುಂಬಾ ಕೃತಜ್ಞರಾಗುವೆವು.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.

ತಾ. 12—9—26ರಲ್ಲಿ ವೀರಾಜಪೇಟೆ ಬಿದ್ದರ್ ಸ್ಟೋರಿನ ಮಹಡಿಯಲ್ಲಿ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ನಡೆಯಿತು. ಒಂಭತ್ತು ಡೈರೆಕ್ಟರುಗಳು ಹಾಜರಿದ್ದರು. ಕಾರ್ಯಾಧ್ಯಕ್ಷರು ಗೈರುಹಾಜರಾಗಿದ್ದುದರಿಂದ ಮೆ. ಯನ್. ಆರ್. ಸುಬ್ಬಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

1. ಆಗೋಸ್ಟು ತಿಂಗಳ ಲೆಕ್ಕಪತ್ರ ಸಬ್‌ಕಮಿಟಿಯವರಿಂದ ಚೆಕ್ಕು ಮಾಡಲ್ಪಡದ್ದರಿಂದ ಆ ಲೆಕ್ಕದ ಮಂಜೂರಾತಿಯನ್ನು ಇನ್ನೊಂದು ತಿಂಗಳಿಗೆ ಇಡಲಾಯಿತು.

2. ಕಂಪೆನಿಯ ಶೇರುದಾರರ ಜನರಲ್ ಮೀಟಿಂಗನ್ನು ಅಕ್ಟೋಬರು ತಾ. 31ರಲ್ಲಿ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ವಿಕ್ಟೋರಿಯ ರೀಡಿಂಗ್ ರೂಮಿನ ಬಳಿ ನಡೆಸುವಂತೆ ತೀರ್ಮಾನವಾಯಿತು.

3. ಡೈರೆಕ್ಟರುಗಳ ರಿಪೋರ್ಟನ್ನು ಮಂಜೂರು ಮಾಡಲು ಈ ತಾ. 21ರಲ್ಲಿ ಮಡಿಕೇರಿಯಲ್ಲಿ ಡೈರೆಕ್ಟರುಗಳ ಒಂದು ಮೀಟಿಂಗು ಮಾಡುವಂತೆ ತೀರ್ಮಾನವಾಯಿತು. ಈ ಮೀಟಿಂಗಿನಲ್ಲಿ ಹಾಜರಿರುವ ಡೈರೆಕ್ಟರುಗಳು ಆ ಮೀಟಿಂಗಿನ ನೋಟೀಸು ಇಲ್ಲೇ ತೆಗೆದುಕೊಳ್ಳತಕ್ಕದ್ದೆಂದಾಯಿತು.

4. ಕಂಪೆನಿಯ ಕಳೆದ ವರ್ಷದ ಲೆಕ್ಕಗಳನ್ನು ಆಡಿಟ್ ಮಾಡಲಿಕ್ಕಾಗಿ ಆಡಿಟರವರಿಗೆ ಕೊಡುವಂತೆ ತೀರ್ಮಾನವಾಯಿತು.

5. ಕಂಪೆನಿಯ ಹಣವನ್ನು ಸೇವಿಂಗ್ಸ್‌ಬ್ಯಾಂಕಿನಲ್ಲಿ ಹಾಕಲು ಕಾರ್ಯಾಧ್ಯಕ್ಷರ ಹೆಸರಿನಲ್ಲಿ ಸೇವಿಂಗ್ಸ್‌ಬ್ಯಾಂಕ್ ಪಾಸ್ ಬುಕ್ ತೆರೆಯುವಂತೆ ತೀರ್ಮಾನವಾಯಿತು.

6. ಮೆ. ಚೇಂದಂಡ ಪೊನ್ನಯ್ಯನವರು ತನ್ನ ಗತಿಸಿದ ಅಣ್ಣನವರ ಶೇರನ್ನು ತನ್ನ ಹೆಸರಿಗೆ ವರ್ಗಾಯಿಸಬೇಕೆಂದು ಬರೆದ ಪತ್ರವು ಓದಲಾಯಿತು. ಗತಿಸಿದ ಈ ಶೇರುದಾರರಿಗೆ ಬೇರೆ ಯಾರಾದರೂ ವಾರೀಸುದಾರರು ಇದ್ದಾರೋ ಎಂಬುದನ್ನು ಮೆ. ಬಿ. ಪಿ. ಮೊದಪ್ಪನವರು ವಿಚಾರಿಸಿ, ಹಾಗೆ ಬೇರೆ ವಾರೀಸುದಾರರು ಇಲ್ಲದಿದ್ದರೆ ಆ ಶೇರನ್ನು ಮೆ. ಪೊನ್ನಯ್ಯನವರ ಹೆಸರಿಗೆ ವರ್ಗಾಯಿಸುವಂತೆ ತೀರ್ಮಾನಿಸಿದರು.

7. ಮೆ. ತೆಕ್ಕಡ ಪೂವಯ್ಯನವರ ಪತ್ರದ ಮೇರೆ ಅವರು ಕಳಕೊಂಡಿರುವ ಶೇರ್ ಸರ್ಟಿಫಿಕೇಟಿಗೆ ಬದಲಾಗಿ ರೂಲ್ ಪ್ರಕಾರ ಫೀಸ್ ಕೊಟ್ಟರೆ ಇನ್ನೊಂದು ಸರ್ಟಿಫಿಕೇಟನ್ನು ಕೊಡಬಹುದೆಂದು ಮಂಜೂರು ಮಾಡಲಾಯಿತು.

8. ಮುಕ್ಕಾಟಿರ ಕಾಳಪ್ಪನವರ ಪತ್ರದ ಮೇರೆ ಅವರ ಗತಿಸಿಹೋದ ಪತಿಯವರ ಹೆಸರಿನಲ್ಲಿರುವ ಶೇರು ಹಣವನ್ನು ಅವರಿಗೆ ವಾಪಸು ಕೊಡಲಿಕ್ಕಾಗುವುದಿಲ್ಲವೆಂದು ಅವರಿಗೆ ತಿಳಿಸುವಂತೆ ತೀರ್ಮಾನವಾಯಿತು.

9. ಮೆ. ಹೆಚ್. ವೀರೇಗೌಡರು ತನ್ನ ಲೇಟ್ ಸಹೋದರ ಸಾಂತಪ್ಪಗೌಡರ ಹೆಸರಿನಲ್ಲಿರುವ ಶೇರನ್ನು ತನ್ನ ಹೆಸರಿಗೆ ವರ್ಗಾಯಿಸಬೇಕೆಂದು ಬರೆದ ಪತ್ರವು ಓದಲಾಗಿ, ಲೇಟ್ ಸಾಂತಪ್ಪನವರಿಗೆ ಬೇರೆ ವಾರೀಸುದಾರರು ಇದ್ದಾರೋ ಎಂಬುದನ್ನು ಮೆ. ಯನ್. ಆರ್. ಸುಬ್ಬಯ್ಯನವರು ವಿಚಾರಿಸುವಂತೆ ತೀರ್ಮಾನವಾಯಿತು.

10. ಅಡ್ವಾನ್ಸಾಗಿ ಚಂದಾ ಕೊಡದೆ ಇರುವ 1926—27ರ ಚಂದಾದಾರರಿಗೆ ಇನ್ನು ಒಂದು ತಿಂಗಳ ವರೆಗೆ ಪತ್ರಿಕೆಯನ್ನು ಕಳುಹಿಸುವಂತೆಯೂ ಅಷ್ಟರಲ್ಲಿ ಏಜಂಟರವರು ಈ ಬಾಕಿದಾರರಾಗಿರುವ ಚಂದಾದಾರರನ್ನು ಕಂಡು ಚಂದಾ ವಸೂಲ ಮಾಡುವಂತೆಯೂ ನಿಶ್ಚೈಸಲಾಯಿತು. ಮೆ. ಚಂಗಂಡ ಕುಟ್ಟಪ್ಪನವರು ಮಾಡಲಿರುವ ಶರತ್ತುಗಳ ಮೇರೆಯೇ ಅಕ್ಟೋಬರು ಆಖೈರುವರೆಗೆ ಏಜಂಟರಾಗಿ ಕೆಲಸಮಾಡುವಂತೆಯೂ ತೀರ್ಮಾನವಾಯಿತು.

ಬೊಂಬಾಯಿ ಕೊಡಗರ ಸಂಘ.

ಬೊಂಬಾಯಿ ಕೊಡಗರ ಸಂಘದ ಪ್ರಥಮ ವಾರ್ಷಿಕೋತ್ಸವವು ಮತ್ತು ಕೈಲ್ ಮುಹೂರ್ತವು ಕಳೆದ ತಾರೀಕು 12 ರಲ್ಲಿ ವರ್ಲಿ (Worli) ಎಂಬ ಸ್ಥಳದಲ್ಲಿ ಬಹಳ ವಿಜೃಂಭಣೆಯಿಂದ ನಡೆಸಲಾಯಿತು. ಮೆಂಬರುಗಳಲ್ಲದೆ ಕೆಲವು ಅತಿಥಿಗಳು ಸಹ ಹಾಜರಿದ್ದರು.

12 ಗಂಟೆಯ ಸಮಯಕ್ಕೆ ಸರಿಯಾಗಿ ನಮ್ಮಲ್ಲಿದ್ದಂತ ಆಯುಧಗಳನ್ನು ಕೊಡವ ಪದ್ಧತಿ ಪ್ರಕಾರ ಪೂಜಿಸಿದವು. ಆ ಮೇಲೆ ಮೇಲಿನ ಸಂಘದ ವಾರ್ಷಿಕ ರಿಪೋರ್ಟನ್ನು ಸೆಕ್ರೆಟರಿಯಾದ ಮೆ. ಯನ್. ಡಿ. ಅಪ್ಪಯ್ಯನವರು ಸಂಪೂರ್ಣವಾಗಿ ಓದಿದರು. ಓದಿ ಮುಗಿದನಂತರ ಸಂಘದ ವಿಷಯವಾಗಿ ಭಾಷಣ ಮಾಡಿದರು. ನಂತರ ಪ್ರೆಸಿಡೆಂಟರಾದ ಮೆ. ಯಂ. ಸಿ ಮುತ್ತಣ್ಣನವರು ಸಂಘದ ಮುಂದಿನ ಅಭಿವೃದ್ಧಿ ಸ್ಥಿತಿಯ ವಿಷಯವಾಗಿ ಭಾಷಣವನ್ನು ಮಾಡಿದರು. ಈ ಭಾಷಣವಾದ ಮೇಲೆ ಒಂದು ಘಂಟೆಯ ಸಮಯಕ್ಕೆ ಔತಣವು ಮುಗಿಯಿತು. ಊಟವಾದನಂತರ ಸಂಗೀತ ಮುಂತಾದ ತಮಾಷೆಗಳನ್ನು ಮಾಡಿ ಮೀಟಿಂಗು ಬರಕಾಸ್ತಾಯಿತು.

ಮೆಂಬರು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಸೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಚಂಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಪಾಟಿ ಭಂಡಾರದಲ್ಲಿ ಮೆ. ಐಚೆಟ್ಟಿರ ಅಪ್ಪಯ್ಯನವರು

ಪೊನ್ನಂಪೇಟೆ—ಕಮರ್ಶಿಯಲ್ ಸ್ಟೋರಿನಲ್ಲಿ ಮೆ. ಮಚ್ಚಿಯಂಡ ಪೊವಯ್ಯನವರು.

ನಾಪೋಕ್ಲು—ಮೆ. ಅರಯಡ ಸುಬ್ಬಯ್ಯನವರು.

ಮೆ. ಪೊನ್ನಚಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮೆ. ಜಮ್ಮಡ ಮೊದಪ್ಪನವರು.

ಕುದಿಕೇರಿ—ಮೆ. ಬಿ ಮೊದಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮೆ. ದನಂಡ ಮೊದಪ್ಪನವರು.

" ಮತ್ತು ವೀರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರು.

ಮಡಿಕೇರಿ- ಸುಂಟಿಕೊಪ್ಪನಾಡು—ಮೆ. ಒಲ್ಲರಂಡ ಅಪ್ಪಯ್ಯನವರು.

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಪಾವತಿ ಮಾಡಬಹುದು; ಕೊಡಬೇಕಾಗಿ ಕೋರಿಕೆ.

ಮೇನೇಜರ್,
"ಕೊಡಗು" ಲಿಮಿಟೆಡ್.

ಬೆಂಗಳೂರಿನ ಕೊಡವರ ಕೈಲ್ ಮುಹೂರ್ತ

ಬೆಂಗಳೂರಿನ ಕೊಡಗರು ತಮ್ಮ ಸಂಘದ 1… ವರ್ಷಿಕೋತ್ಸವವನ್ನೂ ಮತ್ತು ಕೈಲು ಮುಹೂರ್ತ… ಇದೇ ತಾರೀಕು 12ನೇ ಭಾನುವಾರ "ಲಾಲ್‌ಬಾಗ್"… ಬಹಳ ವಿಜೃಂಭಣೆಯಿಂದ ನಡೆಸಿದರು. ಬೆಂಗಳೂರಿನ… ಸುಮಾರು… ಕೊಡಗರೆಲ್ಲರೂ, ಎಂದರೆ ಸುಮಾರು ಒಂದು… ಜನರು ಸೇರಿದ್ದರು. ಕೊಡವ ಪದ್ಧತಿ ಪ್ರಕಾರ… ಪೂಜೆಯನ್ನು ಮಾಡಿದನಂತರ ಫಲಾಹಾರ ಮಾಡಿ… ಹನ್ನೊಂದು ಗಂಟೆಗೆ "ಸ್ಪೋರ್ಟ್ಸ್" ಪ್ರಾರಂಭಿಸಿ… ದರಲ್ಲಿ ಯುವಕರೆಲ್ಲರೂ ಭಾಗಿಗಳಾಗಿ ಅಲ್ಲಿ ಸೇರಿದ್ದ… ವರನ್ನು ತಮ್ಮ ಆಟ ಓಟಗಳಿಂದ ಸಂತೋಷಪಡಿ… ಇಷ್ಟರಲ್ಲಿಯೇ ಮಧ್ಯಾಹ್ನ ಕಾಲವು ಬಹು ಬೇಗ… ಹೋದದ್ದರಿಂದ ಎಲ್ಲರೂ ಕೂಡಿ ತಮ್ಮ ಊಟ… ವನ್ನು ಮುಗಿಸಿದರು. ಈ ಔತಣಕ್ಕೆ ಯಾವ ಆ… ರ್ಥವನ್ನೂ ಸೇರಿಸದೆ, ಕೊಡಗರಿಗೆ ಒಂದು ಉದ್ಯಾ… ವನ್ನು ತೋರಿಸಿದ್ದಕ್ಕೆ ನಾವು ಬಹಳ ಸಂತೋಷಪಡು… ಈ ಭೋಜನವು ಮುಗಿದು ಸ್ವಲ್ಪ ಹೊತ್ತಾದ ಮೇಲೆ… ಬಿಟ್ಟಿಯಂಡ ಮುತ್ತಣ್ಣನವರು "ಸಂಘೇ ಶಕ್ತಿ ಕಲೌ… ಗೆ" ಎಂಬ ನಾಣ್ಣುಡಿಯನ್ನು ಪ್ರಸಿದ್ಧಪಡಿಸಲು ಒಂದು… ಹರಿಕಥೆಯನ್ನು ಮಾಡಿ ಅಲ್ಲಿ ನೆರೆದಿದ್ದ ಯುವಕರ… ಉಲ್ಲಾಸಗೊಳಿಸಿದರು. ತದನಂತರ ಸಂಘದ … ದ ಮೆ. ಕೋದಂಡ ಪೊನ್ನಯ್ಯನವರು … ಮುಂದು ಬಂದ ಯುವಕ ಯುವತಿಯರಿಗೆ ಇನಾಮು… ಹಂಚಿದರು. ಈ ವರ್ಷದ ಚೇಂಪಿಯನ್ ಶಿಪ್ … (Championship medal) ಮೆ. ಮಾಚಿಮಂಡ… ನವರಿಗೆ ಸಿಕ್ಕಿತು. ಇನಾಮು ಪಡೆದ ಸ್ತ್ರೀಯರಲ್ಲಿ … ಯಾಗಿ ಬಂದದ್ದು ಮೆ. ನೆಲ್ಲಮಕ್ಕಡ ಚಂಗಪ್ಪನವರ … ವರು ಒಬ್ಬರೆಂದು ತಿಳಿಸಲು ಸಂತೋಷಪಡುತ್ತೇವೆ. … ವು ಮುಗಿದೊಡನೆ ಮೆ. ಪೊನ್ನಯ್ಯನವರು … ವಾದವನ್ನೊಳಕೊಂಡ ಸ್ವಾರಸ್ಯವಾದ ಭಾಷಣವ… ದರು. ಅಷ್ಟರಲ್ಲಿಯೇ ಸಾಯಂಕಾಲವು ಸಮೀಪಿಸಿ… ದ ಎಲ್ಲರೂ ಹಿಂದಿರುಗಿ ತಮ್ಮ ತಮ್ಮ ಆಶ್ರಯ ಸ್ಥಾ… ತೆರಳಿದರು.

ಕ. ಟಿ …

ವರ್ತಮಾನ ಸಂಗ್ರಹ.

ಒಳದೇಶ

ತಾ. 21—9—26ರಲ್ಲಿ "ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂಗೊಂದು ಕಂಪೆನಿಯ ಆಫೀಸಿನಲ್ಲಿ … ದು ಕಂಪೆನಿಯ 1925—26ನೇ ವರ್ಷದ ವರದಿಯು … ಯಿತು.

ವೀರಾಜಪೇಟೆಯಲ್ಲಿ ಗೌರಿ ಗಣೇಶ ಮೂ… ನ್ನು ವಾಡಿಕೆಯಂತೆ ತಾ. 20ರ ಸಾಯಂಕಾಲ ಪೇ… ಗಡ ಹಿರಿಯವರು ಬಹು ವಿಜೃಂಭಣೆಯಿಂದ ನಡೆ… ತಿಳಿಯುತ್ತೇವೆ.

ಮೆ. ಟಿ ಜಿ. ಟಾಸ್ಕರ್‌ರವರು ಇಂಗ್ಲೆಂಡಿನಿಂದ … ಕೇರಿಗೆ ತಾ. 20ರಲ್ಲಿ ವಾಪಸು ಬಂದು ಮೆ. … ಕಮಿಷನರ್ ಹುದ್ದೆಯ ಚಾರ್ಜನ್ನು ಪುನಃ ವ… ಡರು.

ಶನಿವಾರಸಂತೆ ಜಂಗಡಲ್ಲಿ ರಸ್ತೆಯ 10/4ನೇ … ನಲ್ಲಿರುವ ಸೇತುವೆಯು ಅಪಾಯಕರವಾಗಿರುವುದರಿಂದ … ಸ್ತೆಯು ವ್ಯಾಪಾರ ಗಾಡಿಗಳಿಗೆ ಮುಚ್ಚಲ್ಪಟ್ಟಿದೆ … ಡಿಸ್ಟ್ರಿಕ್ಟ್‌ಬೋರ್ಡ್ ಪ್ರೆಸಿಡೆಂಟರು ತಿಳಿಸಿರುತ್ತಾರೆ.

ಸೆಂಟ್ರಲ್ ಪ್ರಾಂತ್ಯದಲ್ಲಿ ರೇಂಜರಾಗಿರುವ ಮೆ. … ಪಂಗಡ ಚೆಣ್ಣಪ್ಪನವರ ಪತ್ನಿಯವರು ತನ್ನ ತವರಿನ… ಲ್ಲಿ ಹೆತ್ತು ಕೆಲವು ದಿವಸಗಳನಂತರ ಕಳೆದ ಆದಿತ್ಯವಾರ … ಲೋಕವನ್ನೈದಿದರೆಂದು ಕೇಳಿ ವಿಷಾದಿಸುತ್ತೇವೆ.

1926ನೇ ಇಸವಿ ಅಕ್ಟೋಬರ್ ತಾರೀಖು 1… (ಕನ್ಯಾಮಾಸ ತೇದಿ 31ನೇ) ಆದಿತ್ಯವಾರ ಬೆಳಿಗ್ಗೆ 9 ಗಂ… ಮಿನಿಟಿಗೆ ಶ್ರೀಮೂಲ ಕಾವೇರಮ್ಮನವರ ತುಲಾ… ಣ ತೀರ್ಥೋದ್ಭವವಾಗುವುದೆಂದು ತಿಳಿಯುತ್ತೇವೆ.

ಈ ತಾ. 17ರಲ್ಲಿ ಸುಂಟಿಕೊಪ್ಪದಲ್ಲಿ ಶ್ಯಾನುಭೋಗರಾಗಿದ್ದ ಮೆ. ಕಂಡ್ರತಂಡ ಅಪ್ಪಣ್ಣನವರು ಮಡಿಕೇರಿ … ಲ್ಲಿಯೂ, ಈ ತಾ. 12ರಲ್ಲಿ ಬಿಟ್ಟಂಗಾಲ ಗ್ರಾಮದ ಪಟ್ಟೆಯಂಡ ಐಯ್ಯಣ್ಣನವರೂ, ತಾ 19ರಲ್ಲಿ ಕಡಂಗ… ದ ಗ್ರಾಮದ ಮೆ. ಕೋದಂಡ ಕುಟ್ಟಪ್ಪನವರೂ … ರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಮಯ್ಸೂರಿನ ಕೊಡಗು ಸಂಘದವರು ತಾ … ಲ್ ಮುಹೂರ್ತ ಹಬ್ಬವನ್ನು ಅರಪಟ್ಟಿದಲ್ಲಿ ಸಂಘದ … ರಾದ ಮೆ. ಬಿ. ಸಿ. ಕುಟ್ಟಯ್ಯನವರ ಭವನದಲ್ಲಿ … ಮಧ್ಯಾಹ್ನ ಊಟವಾದನಂತರ ಗುಂಪು ಫೋಟೋ ತೆಗೆ… ಸಂಘದ ಅಭಿವೃದ್ಧಿಯನ್ನು ಕುರಿತು ಚರ್ಚಿಸಲಾಯಿತು … ಯಂಕಾಲ ಆಟಗಳು ನಡೆದು … ಬಹುಮಾನಗಳು ಹಂಚಲಾದವು ಎಂದು ಬಂದು …

ಬೆಪ್ಪುನಾಡು ಮತ್ತು ಎಡೆನಾಡಿನವರು ಸಹ ವೀರರಾಜೇಂದ್ರಪೇಟೆ ತಾಲೋಕಿನ ೮ ಹಿಂದುಗಡೆ ಪೈದರನಡಲ್ಲಿ ಡಿ. ಬೋರ್ಡು ಮೆಂಬರುತನದ ಚುನಾವಣೆಗೋಸ್ಕರ ಯಾರನ್ನು ಅನುಮೋದಿಸಬೇಕೆಂಬದನ್ನು ಕುರಿತು ತಾರೀಕು 22—9—26 ರಲ್ಲಿ ಚಿಟ್ಟಿಯಂಡ ಉತ್ತಯ್ಯನವರ ಅಧ್ಯಕ್ಷತೆಯಲ್ಲಿ ಎನಂಗು ಮಾಡಿದಲ್ಲಿ ಧೀರ್ಘ ಚರ್ಚೆ ನಡೆದು, ಡಿ. ಬೋರ್ಡು ಮೆಂಬರುತನಕ್ಕೆ ಉಮೇದ್ವಾರರನ್ನು ಚುನಾವಣೆ ಮಾಡುವದು ಅವಶ್ಯವಿಲ್ಲವಾಗಿಯೂ, ಓಟರುಗಳು ತಮ್ಮ ಸ್ವತಂತ್ರದ ಓಟನ್ನು ಉಮೇದ್ವಾರರ ಪೈಕಿ ಯಾರ ಯೋಗ್ಯರಾಗಿ ಕಂಡುಬರುತ್ತಾರೋ ಅಂಥವರಿಗೆ ಕೊಡುವುದು ಉತ್ತಮವೆಂದೂ ಬಹುಮತದವರು ತೀರ್ಮಾನಮಾಡಿದರೆಂದು ತಿಳಿಯಬರುತ್ತದೆ.

ಹಿಂದೂದೇಶ.

ದಕ್ಷಿಣಕನ್ನಡ ಜಿಲ್ಲೆಯನ್ನು ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸುವರೆಂದು ಸುದ್ದಿ ಇದೆ.

ಈ ಸಾರಿ ಸರ್. ಜೆ ಸಿ. ಬೋಸ್‌ರವರು ಮೈಸೂರು ವಿಶ್ವವಿದ್ಯಾಲಯದ ಕಾನ್ವೊಕೇಶನ್ ಅಡ್ರೆಸ್ ಕೊಡುವರೆಂದು ವರ್ತಮಾನ.

ಮಹಾತ್ಮ ಗಾಂಧಿಯವರ ನಾಯಕತ್ವದಲ್ಲಿ ನಡೆಸಲ್ಪಡುತ್ತಿರುವ ಅಖಿಲ ಭಾರತ ನೂಲುವ ಸಂಘಕ್ಕೆ ಇಷ್ಟರ ವರೆಗೆ ಇಪ್ಪತ್ತೆರಡುಲಕ್ಷ ರೂಪಾಯಿ ಒಟ್ಟುಗೂಡಿದೆ.

ರಬಕವಿಯ ಸಮೀಪ ರಾಮಪುರ ಗ್ರಾಮದಲ್ಲಿ ಒಬ್ಬ ಹೆಂಗಸು ಎರಡು ಮುಖದ ಒಂದು ಕೂಸನ್ನು ಹೆತ್ತಳು. ಆ ಕೂಸು ಹುಟ್ಟಿದ ಕೂಡಲೆ ಸತ್ತುಹೋಯಿತು.

ಹಿಂದೂದೇಶದ ಮುಖ್ಯ ಪ್ರಾಂತೀಕ ಲೆಜಿಸ್ಲೇಟಿವ್ ಕೌನ್ಸಿಲುಗಳ ಮತ್ತು ಲೆಜಿಸ್ಲೇಟಿವ್ ಅಸೆಂಬ್ಲಿಯ ಮೆಂಬರುಗಳ ಚುನಾವಣೆಯು ನವಂಬರು ತಾರೀಕ ೮ ರಲ್ಲಿ ನಡೆಯುವದು.

ಹರಿದ್ವಾರದ ಋಷಿಕುಲ [illegible] ಬಾಬು [illegible] ರವರು ಭಗವದ್ಗೀತೆಯನ್ನು [illegible] ಸ್ಥಾನದಲ್ಲಿ ಮುಖ್ಯವಾಗಿ [illegible] ಬಹುಮಾನಗಳನ್ನು ದಾನಮಾಡಿರುವರು.

ಬೆಂಗಳೂರು ಗಿರಣಿಯ ಮುಷ್ಕರದಲ್ಲಿ ಕಾರ್ಖಾನೆ [illegible] ಸಲ್ಲಿ ಕುತ್ತಿಗೆಯ ಮೇಲೆ ಗುಂಡು ಹಾಕಿದ [illegible] ದ ಪೋಲೀಸು ಅಸಿಸ್ಟೆಂಟ್ ಸುಪರಿಂಟೆಂಡೆಂಟ್ [illegible] ತಪ್ಪಿತಸ್ಥರೆಂದು ಅವರನ್ನು ಇನ್‌ಸ್ಪೆಕ್ಟರ್ ಗ್ರೇಡಿಗೆ ಇಳಿಸಿದರು.

ದಕ್ಷಿಣ ಆಫ್ರಿಕಾದ ಸರ್ಕಾರದಿಂದ ಇಂಡಿಯದ ಸ್ಥಿತಿಯನ್ನು ಅವಲೋಕಿಸಲು ಕಳುಹಿಸಲ್ಪಟ್ಟ ಡೆಪ್ಯುಟೇಷನು ತಾ. 18ರಲ್ಲಿ ಬೊಂಬಾಯಿ ಪಟ್ಟಣವನ್ನು ತಲುಪಿತು. ಅದರ ಮೆಂಬರುಗಳಿಗೆ ಮಹಾತ್ಮ ಗಾಂಧಿಯವರ ಪ್ರತಿನಿಧಿಯೂ ಸ್ವಾಗತ ವಾರ್ತೆಗಳನ್ನು ಕಳುಹಿಸಿದರು.

ಬೆಳಗಾಂವಿ ಜಿಲ್ಲೆಯ ಚಿಕೋಡಿ ತಾಲೂಕಿನಿಂದ 15 ಮೈಲು ದೂರದಲ್ಲಿ ಕಳೆದ ಸೋಮವಾರ ಸಾಯಂಕಾಲ ಜೋರಾಗಿ ಸಿಡಿಲು ಬಿದ್ದು ಮೂರು ಗಂಡಸರು ಮತ್ತು ಇಬ್ಬರು ಹೆಂಗಸರು ಮೃತರಾದರಲ್ಲದೆ, [illegible] ಅಪಾಯ [illegible] ಎತ್ತು ಕುರಿಗಳೂ ಸತ್ತುವಂತೆ.

ಪಟ್ಟನಾಳಿಯ [illegible] ನಡೆದುದರಿಂದ ಮೈಸೂರು ರಾಜ್ಯದಲ್ಲಿ ಬಣಗುತ್ತಿದ್ದ ಬೆಳೆಗಳಿಗಾಗಿ [illegible] ಭೀತಿಯು ತೊಲಗಲಾರಂಭಿಸಿದಂತಾಗಿದೆ. ಬೆಂಗಳೂರು [illegible] ಭಯವೂ ನಿವಾರಿಸಲ್ಪಟ್ಟಿದೆ.

ಸೈದಾಪುರ ರಾಜ್ಯಕ್ಕೆ ಸೇರಿದ ಅದಪುರಕ್ಕೆ ಸೈದಾಪುರ [illegible] ದಾಗ ಅಲ್ಲಿ ಡಾ. ದೇವ [illegible] ರವರು ಅವರಿಗೆ ಕಾಣಿಕೆಯನ್ನು ಕೊಡಲು ಒಪ್ಪದ್ದರಿಂದ ಅಧಿಕಾರಿಗಳು ಅವರನ್ನು ಊರ ಹೊರಗೆ ಒಂದು ಮರಕ್ಕೆ ಕಟ್ಟಿ ಹಾಕಿ ಬಾದಶಹರಿಗೆ ಕಾಣಿಕೆಗಳು ಸಿಕ್ಕಿದೊಡನೆ ಅವರನ್ನು ಬಿಟ್ಟರು.

ಧಾರವಾಡದ ಕರ್ನಾಟಕ ಕಾಲೇಜಿನ ಪ್ರೊಫೆಸರಾದ ವೆಂಕಟರಾಮಪ್ಪನವರು ಬರೆದಿರುವ ವಿಜಾಪುರದ ಚರಿತ್ರೆಯ ನಾಲ್ಕು ಸಾವಿರ ಪ್ರತಿಗಳನ್ನು ಕೊಂಡು ಪ್ರಪಂಚದ ಇಂತಹ ವಾಚನಾಲಯಗಳಿಗೆಲ್ಲಾ ಕಳುಹಿಸುವುದಕ್ಕಾಗಿ ಇಂದೂರ್ ತುಕೋಜಿ ಮಹಾರಾಜರವರು 24 ಸಾವಿರ ರೂಪಾಯಿ ಉಚಿತವಾಗಿ ಕೊಟ್ಟಿರುವರೆಂದು ಸುದ್ದಿ.

ಕಥಿಯಾವಾಡದ ಪೋರಬಂದರಿನಲ್ಲಿ ಒಬ್ಬ ಬಡಹುಡುಗನು ತನ್ನ ಮಾವನಿಂದ ಹೊಂದಿಕೊಂಡಿದ್ದ 4000 ರೂಪಾಯಿಯನ್ನು [illegible] ಹೋಯಿತು, ಹೆಚ್ಚು ಹಣವನ್ನು ನಿನ್ನ ತಂದೆಯಿಂದ ಕೊಡಿಸದೆ ಹೋದರೆ ನಿನ್ನನ್ನು, ನಿನ್ನ ತಂದೆ ಮ[illegible] ಸಹೋದರನನ್ನೂ ಕೊಂದುಬಿಡುತ್ತೇನೆಂದು ಆವನ ಹೆಂಡತಿಗೆ ಹೇಳಿದನು. ಆವನಿಗೆ ಚಿತ್ತಭ್ರಮೆಯೆಂದು ಅವಳು [illegible] ಮನ್ನಿಸಿದಳು. ಅವನು ಅವಳನ್ನು ಒಂದು [illegible] ಯಿಂದ ತಿವಿದುಕೊಂದು, ತನ್ನ ಪ್ರಾಣಹತ್ಯ ಮಾಡಿಕೊಂಡು ದುಸ್ಥಿತಿಯಲ್ಲಿರುವನಂತೆ. ಹಣದ ಮಹಿಮೆಯೇ!

ಒಂದು ವಿಶೇಷ ಗುಣದ ಕಲ್ಲು 2½ ಪೌಂಡು ತೂಕವಿದ್ದು ನೀರಿನಲ್ಲಿ ಮುಳುಗದೆ ಮೇಲೆ ತೇಲುತ್ತದಂತೆ. ನೀರಿಗೆ ಹಾಕಿದರೆ ಅದು ಮೊದಲು ಮುಳುಗಿ ನಂತರ ಮೇಲಕ್ಕೆ ಬರುತ್ತದೆ. ಗಾಳಿಯಾಡದೆ ತಣ್ಣಗಾದ ಸ್ಥಳದಲ್ಲಿ ನೀರಿರುವ ಬಟ್ಟಲಿನಲ್ಲಿ ಹಾಕಿದರೆ ಅದು ಮನಸಿನಂತೆ ಅತ್ತಿತ್ತ ಓಡುತ್ತದೆ. ದೇವೀಪುರಾಣದಲ್ಲಿ ಹೇಳಿರುವ ಗೋಮತಿ ಶಿಲೆಯು ಇಂತದೆಂದು ಊಹಿಸಲಾಗಿದೆ. ಇದನ್ನು ಗೋವರ್ಧನ ಮಠದ ಶ್ರೀ ಶಂಕರಾಚಾರ್ಯ ಸ್ವಾಮಿಯವರು ಬಹು ಪ್ರಯಾಸಪಟ್ಟು ಹಿಮಾಲಯ ಪರ್ವತದಿಂದ ತಂದಿರುವರಾಗಿದೆ.

ಕಲ್ಕತ್ತಾ ಪಟ್ಟಣದಲ್ಲಿ ಮುಸಲ್ಮಾನರಿಗೂ ಹಿಂದೂಗಳಿಗೂ ಏರ್ಪಟ್ಟಿರುವ ದೊಂಬಿ ಕಲಹಗಳು ನಡೆಯುತ್ತಾ ಇರುತ್ತವೆ. ಪೊಲೀಸ್ ಫೋರ್ಸಿನವರು ಆ ಪಟ್ಟಣದಲ್ಲಿ ಇಟ್ಟಿದ್ದಾಗ್ಯೂ [illegible] ಕೂಡ ಅನೇಕ ಜನಗಳ ಮೇಲೆ ಬಿದ್ದು ಹೊಡೆಯುತ್ತಿದ್ದಾರೆ. ಈ ದಂಗೆಕೋರರು ಚಾಕು, ಪಿಸ್ತೂಲು ಮುಂತಾದವುಗಳನ್ನು ಪ್ರಯೋಗಿಸಿ ಹಲವು ಮಂದಿಗೆ ಗಾಯಮಾಡಿರುತ್ತಾರೆ. ಈ ದಂಗೆಯು ನಡೆಯುತ್ತಿರುವ ಬಜಾರುಗಳಲ್ಲಿದ್ದ ಅಂಗಡಿಗಳನ್ನು ಮುಚ್ಚಿಬಿಟ್ಟಿರುತ್ತಾರೆ. ಎಲ್ಲಾ ಸ್ಕೂಲುಗಳೂ ಕಾಲೇಜುಗಳೂ ಮುಚ್ಚಲ್ಪಟ್ಟಿರುತ್ತವೆ.

ವಿದೇಶ.

ಮದುವೆಯಾಗಬೇಕಾದವರೆಲ್ಲರೂ ದಾಕ್ತರುಗಳಿಂದ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಹೊಂದಬೇಕೆಂದು ತುರ್ಕಿ ದೇಶದಲ್ಲಿ ಒಂದು ಹೊಸ ಕಾನೂನು ಮಾಡಲಾಗಿದೆ.

ಅಮೇರಿಕದ ಕನಾಡ ದೇಶಕ್ಕೆ ಹೋಗಿದ್ದ ಸರ್. ವಿಜಯರಾಘವಾಚಾರ್ಯರು ಹಿಂದೂ ದೇಶಕ್ಕೆ ಹತ್ತು ವರ್ಷಗಳಲ್ಲಿಯೇ ವಸಾಹತುಗಳಂತ ಸ್ವರಾಜ್ಯ ದೊರೆಯುವುದೆಂದು ಅಲ್ಲಿ ಹೇಳಿರುವರು.

ಬರ್ಮಿಂಗಾಮ್ ವಿಶ್ವವಿದ್ಯಾಲಯದಲ್ಲಿ ಡಾ. ನಾಂಜೆಂಟರು [illegible] ದಿಂದ ನೂಲು ತಯಾರಿಸುವ ವಿಧಾನವನ್ನು ಕಂಡುಹಿಡಿದಿರುವರು. ಈ ನೂಲಿನಿಂದ ಹಲವು ತರದ ಬಟ್ಟೆಗಳನ್ನು ನೇಯಬಹುದಂತೆ.

ಜರ್ಮನಿಯಲ್ಲಿ ವಿಜ್ಞಾನಶಾಸ್ತ್ರಜ್ಞರೊಬ್ಬರು ಮಂತ್ರಶಕ್ತಿಯಿಂದಲೋ ಏನೋ ತಲೆಗೆ ಮಂತ್ರ ಗೊತ್ತಾದ ಗುಪ್ತಿನ ರಸಗಳನ್ನು ಮಿದುಳಿಗೆ ಇಂಜೆಕ್ಟ್ ಮಾಡಿ ಬಿಳೀ ಕೂದಲನ್ನು ನೀಲಿ, ಹಸಿರು, ಕೆಂಪು ಬಣ್ಣಗಳಾಗಿ ಮಾಡಬಲ್ಲರೆಂದು ತಿಳಿಯಲಾಗಿದೆ.

ಇಟಲಿಯ ಪ್ರಧಾನರ ಜೀವಕ್ಕೆ ಅಪಾಯಗಳಲ್ಲಿ ವಿಪರೀತ ಸಂಭವಿಸುತ್ತಿರುವುದರಿಂದ ಅಲ್ಲಿಯ ಮುಖ್ಯ ಮಂತ್ರಿಯವರು ಅಲ್ಲಿಯ ರಾಜಾಯವರ ಅಧ್ಯಕ್ಷತೆಯಲ್ಲಿ ಪ್ರೀಯರ ಒಂದು ಸಭೆ ಸೇರಿಸಿ ಅವರೆಲ್ಲರೂ [illegible] ವಿಷಯದಲ್ಲಿ [illegible] ಬೇಕೆಂದೂ, ಇಟಲಿಯಲ್ಲಿ [illegible] ಬಟ್ಟೆಯನ್ನೇ ಉಪಯೋಗಿಸಬೇಕೆಂದೂ ತೀರ್ಮಾನಿಸಿಕೊಂಡಿರುವರು.

ರಷ್ಯಾದೇಶದಲ್ಲಿ ಇತ್ತೀಚಿಗೆ ಆದ ಮಹಾ[illegible]ಗಳಲ್ಲಿ ಶಿಕಾರಿಯು ಅಲಕ್ಷ್ಯ ಮಾಡಲ್ಪಟ್ಟ ಕಾರಣ ಆ ದೇಶದಲ್ಲಿ ತೋಳಗಳ ಹಾವಳಿಯು ಹೆಚ್ಚಾಗಿದೆ. ಅಲ್ಲಿ ಸುಮಾರು 1,00,000 ತೋಳಗಳು ಇರುವವೆಂದು ಅಂದಾಜು ಮಾಡಲ್ಪಟ್ಟಿದೆ. ಇವುಗಳಿಂದ ಪ್ರತಿವರ್ಷವೂ 10,00,000 ದನಕರುಗಳು ನಾಶವಾಗುತ್ತಿವೆ. ಇವುಗಳು ಕೆಲವು ಸಮಯ ಮನುಷ್ಯರ ಮೇಲೆ ಬೀಳಲೂ ಹಿಂಜರಿಯುವುದಿಲ್ಲ. ಆದುದರಿಂದ ಇವುಗಳನ್ನು ಕೊಂದವರಿಗೆ ದೊಡ್ಡ ಬಹುಮಾನಗಳನ್ನು ಕೊಡುವದಾಗಿ ಅಲ್ಲಿಯ ಸರ್ಕಾರದವರು ಪ್ರಕಟಿಸಿರುವರು.

ಪತ್ರವ್ಯವಹಾರ

[ಬಾತ್ಮೀದಾರರ ಮತದ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಮಡಿಕೇರಿ ಸಂತೆ.

ಮಹಾಸ್ವಾಮಿಯವರೇ,

ಮಡಿಕೇರಿಯಲ್ಲಿ ಉಳಿದಿರುವುದು ಸಂತೆ ಒಂದೇ. ಇದಕ್ಕೆ ಸರಿಯಾದ ಸುಧಾರಣೆ ಇದೆಯೋ? ಸುಂಕವು ವರ್ಷ ವರ್ಷ ಏರ್ಪಡುತ್ತಾ ಬರುತ್ತಿದೆ. ಆದರೇನು, ಮಾರಕಟ್ಟೆಯು ಸೊಪ್ಪು ಹಾಕಿ ಅಂಗಡಿ ಹಾಕುವುದು ತಪ್ಪಿಲ್ಲ. ಮಾರ್ಕೆಟ್ಟು ಮಾಡಿಸಿದರೆ ಸುಂಕ ಇನ್ನೂ ಏರ್ಪಡುವುದು. ಅದರ ವ್ಯಾಪಾರಿಗಳ ಅಂಗಡಿ ಕಟ್ಟುವ ಕಷ್ಟ ತಪ್ಪೀತು. ಕಳೆದ ಮಳೆಯಲ್ಲಿ ಒಂದು ಡ್ರೈನ್ ಬೀಸಿ [illegible] ಸಮವಾಯಿತು. ಅದು ಇನ್ನೂ ಕಟ್ಟಿ ಪೂರೈಸಲಿಲ್ಲ. ಈ ರೀತಿ ಪರ್ವ ವರ್ಷವೂ ಬೀಳುವುದು, ಕಟ್ಟುವುದು ಆಗುತ್ತಾ ಇದೆ. ಮರ ಕಾಡು ಹತ್ತಿರ ಇದ್ದ ಹಾಗೆ ಆಗುತ್ತೆ. ಅಧಿಕಾರಿಗಳು ಇಲ್ಲಿ ನೀರಿನ ಗೋಳನ್ನು ಆಲಿಸುವುದಿಲ್ಲ. ಇಷ್ಟು ದೊಡ್ಡ ಸಂತೆಯ ಸಮೀಪ ಒಂದು ನೀರು ಇರುವುದು ಇಲ್ಲವಲ್ಲಾ? ದೂರು ಯಾರಿಗೆ ಹೇಳುವುದು. ಕೇಳುವವರ್ಯಾರು? ಏನಾದರೂ ಆಗಲಿ ಕಂಡದ್ದನ್ನು ಬರೆಯುತ್ತೇನೆ. ಅಧಿಕಾರಿಗಳು ಗಮನ ಕೊಡುವರೇ?

ಮಡಿಕೇರಿಪೇಟೆ ನಿವಾಸಿ

ಪಟೇಲರ ಗೋಳಾಟವೇ.

ಅಯ್ಯಾ,

ನಮ್ಮ ಚಿಕ್ಕ ದೇಶದಲ್ಲಿ ಪಟೇಲರ ಗೋಳಾಟವನ್ನು ತೊಂದರೆಯನ್ನೂ ಕೇಳುವವರು ಯಾರೂ ಇಲ್ಲವೇ?

ಎಲ್ಲಾ ಉದ್ಯೋಗಸ್ಥರಿಗೆ ನಿಯಮಿತ ಕೆಲಸವಿದ್ದರೂ ಪಟೇಲರುಗಳಿಗೆ ಅಂಥ ನಿಯಮಿತ ಕೆಲಸವಿಲ್ಲ. ರಾತ್ರಿ, ಹಗಲು ಆವಾಗ್ಗೆ ಯಾರು ಕರೆದರೂ ಅವರು ತಯಾರಾಗಿಯೇ ಇರಬೇಕು. ಸಂಬಳವಾದರೋ ಬಹು ಕಡಿಮೆ. ಮುಯ್ಯಾದಿಗೆ ಕೆಲಸ ನೋಡುವ ಎಂದರೆ ಉದ್ಯೋಗಸ್ಥರು ಸರಿಯಾದ ಗೌರವ ಕೊಡುವದಿಲ್ಲ. ಈ ಸ್ಥಿತಿಯಲ್ಲಿ ಇರುವ ಅವರ ವರ್ಷಾಶನ ಪದ್ಧತಿ ಸಂಬಳವನ್ನು ಎಪ್ರಿಲ್, ಮೇ ತಿಂಗಳಲ್ಲಿ ಕೊಡುವ ಪದ್ಧತಿ ಇತ್ತು. ಈಗ ಯಾವದೋ [illegible] ಸರಕಾರ ಮತ್ತು [illegible] ಉದ್ಯೋಗಸ್ಥರ ಆಡಳಿತದಲ್ಲಿ ಸನ್ 1925—26ನೇ ಇಸವಿಯ [illegible] ಸಿಕ್ಕಲಿಲ್ಲ. ಈ ಸಂಗತಿ ಕುರಿತು ಪೊನ್ನಂಪೇಟೆ ನಾಡು ಪಟೇಲರುಗಳು ಕೊಡಗು ಕಮಿಷನರ್ ಸಾಹೇಬರವರಿಗೆ ಕಳೆದ ಆಗಸ್ಟ್ ತಿಂಗಳಲ್ಲಿ ನಾಡು ಕಚೇರಿ ಪಾರುಪತ್ಯಗಾರರ ಮೂಲಕ ಒಂದು ಅರ್ಜಿ ಬರಕೊಂಡರಂತೆ. ಆದರೂ ಇವರ ದುಃಖವನ್ನು ಕೇಳುವವರೇ ಇಲ್ಲ. ಈ ಸಂಗತಿ ಬಗ್ಗೆ ಸಂಬಂಧಪಟ್ಟ ಆಫೀಸರರು ನಿಗಾ ಕೊಡುವರಾಗಿಯೂ ಇಷ್ಟು ಡಿಲೇ ಮಾಡಿದಕ್ಕೆ ಈ ಪತ್ರಿಕೆಯ ಮೂಲಕ ಕಾರಣ ತಿಳಿಸುವರಾಗಿಯೂ ಅಪೇಕ್ಷಿಸುವ.

ಮನನೊಂದವ.

ಲೋಕವನ್ನು ಹಿಂಗಡಿಸಿ ಆಳುತ್ತಿರುವದಾವದು?

ಅಯ್ಯಾ,

ಪ್ರಪಂಚವು ಭಿನ್ನಭಿನ್ನ ರೂಪಗಳಿಂದಲೂ ವರ್ತನೆಗಳಿಂದಲೂ ಕಾಣಬರುವದಾದರೂ ಅದನ್ನು ಐಕ್ಯಗೊಳಿಸುವುದು. ಆದರೆ ಆ ಐಕ್ಯತೆಯ ನಿರ್ಮಾಣಕ್ಕೆ ಬಹಳ ಕಷ್ಟವಿರುತ್ತದೆ. ನದಿಯು ಸ್ವಾಭಾವಿಕ ಸ್ಥಿತಿಯಲ್ಲಿ ಹರಿಯುವದಾದರೆ ಅಂಕುಡೊಂಕಾಗಿಯೂ ಛಿನ್ನಭಿನ್ನವಾಗಿಯೂ ಹರಿಯುತ್ತದೆ. ಇದನ್ನು ಒಂದು ಪಥೋಟಿಯಲ್ಲಿ ಹರಿಸಬೇಕಾದರೆ ಬಹಳ ಕಷ್ಟವಿರುತ್ತದೆ. ಹಾಗೆಯೇ ಪ್ರತಿಯೊಬ್ಬ ಮನುಷ್ಯನ ಮನಸ್ಸು ಕೂಡ ಪಥೋಟಿ ತಪ್ಪಿದರೆ ಅನೇಕ ಪ್ರಕಾರವಾಗಿ ಚಲಿಸುತ್ತದೆ. ಅದೇ ಮನಸ್ಸನ್ನು ಸಾಂಕುಶದಲ್ಲಿಡಬೇಕಾದರೆ ಬಹಳ ಸಮರ್ಥತೆಯು ಬೇಕಾಗುತ್ತದೆ. ಯಾವ ಮನುಷ್ಯನ ಮನಸ್ಸು [illegible] ಚಲಿಸುವದಾ[illegible] ನಿಯಂತ್ರಣ ಮನುಷ್ಯನೂ ಕೂಡ ಪ್ರ[illegible] ಮನುಷ್ಯನಾಗುವದಿಲ್ಲ. ಹಾಗೆಯೇ ಲೋಕವು ಕೂಡ ಒಂದು ತರದ ಪಥೋಟಿಯನ್ನನುಸರಿಸದಿದ್ದರೆ ಅದೂ ನಾನಾ ಸಮುದ್ರದ ತೆರೆಯಲ್ಲಿದ್ದ ದೋಣಿಯ ರೂಪವನ್ನು ಹೊಂದುತ್ತದೆ. ಆದ್ದರಿಂದ ಸರ್ವದಾ ತಮ್ಮ ತಮ್ಮನ್ನು ಚಲನೆ ಮಾಡತಕ್ಕ ಮನಸ್ಸನ್ನು ಸಾಂಕುಶ ಸ್ಥಿತಿಗೆ ತಂದರೆ ಲೋಕವೇ ಪ್ರವರ್ತನೆಗೆ ಯಾಗುವದರಲ್ಲಿ ಸಂದೇಹವಿಲ್ಲ. ಸಾಮಾನ್ಯವಾಗಿ ನಾವು ಕಾಣುವಂತೆ ಲೋಕದಲ್ಲಿ "ಸ್ವಾರ್ಥ, ಮತ್ಸರ್ಯ ' ಎಂಬಿವೆರಡು ತಾಂಡವಕೊಂಡು ಜನರನ್ನು ಛಿನ್ನ ಭಿನ್ನವಾಗಿ ಕತ್ತರಿಸುತ್ತವೆ. ಈ ಎರಡರ ಉಪಟಳಿಯಿಂದ ಪ್ರಪಂಚವು ಅಲ್ಲೋಲ ಕಲ್ಲೋಲ ರೂಪವನ್ನು ಹೊಂದಿಕೊಂಡು ಜನರನ್ನು ನಿರ್ನಾಮಾವಸ್ಥೆಗೆ ಎಳೆಯುತ್ತದೆ. ಈ ಎರಡು ಸಾಧನವಿಲ್ಲದ ಜನಗಳೇ ಇಲ್ಲವೆಂದರೂ ಅತಿಶಯವಾಗಲಾರದು. ಇದರಿಂದಲೇ ದೇಶ, ನಗರ, ಗ್ರಾಮಗಳಲ್ಲಿ ಕಲಹ, ದುರ್ಭಿಕ್ಷ, ಅಕಾಲಮರಣ, ಅಶಾಂತತೆ ಮುಂತಾದವುಗಳುಂಟಾಗಿವೆ. ಈ ಎರಡು ಸಾಧನವು ಪ್ರತಿ ಒಬ್ಬರ ಮನಸನ್ನಾಕ್ರಮಿಸಿಕೊಂಡು ಮನಸ್ಸನ್ನು ಸ್ವಾಧೀನಪಡಿಸಿ ಕಟ್ಟ ಕಡೆಗೆ ಮನುಷ್ಯನ ಸ್ವಾತಂತ್ರತೆಯನ್ನೇ ನಾಶಗೊಳಿಸುತ್ತದೆ. ಈ ಸಾಧನವು ಮನುಷ್ಯನ ಬೆನ್ನು ಹತ್ತಿತೆಂದರೆ ಅದು ಆತನ ಭವಿಷ್ಯ ಸುಖಕ್ಕೂ ಯಶಸ್ಸಿಗೂ, ಮೋಕ್ಷಕ್ಕೂ [illegible] ಕಾರಣವಾಗಿ ಪರಿಣಮಿಸುತ್ತದೆ. ಈ ಸಾಧನವು ಪ್ರತಿ ವ್ಯಕ್ತಿಗೂ ಬಹು ಮಿತ್ರರಾಗಿ ಪರಿಣಮಿಸಿದಂತೆ ಆ ಮಿತ್ರತ್ವದಲ್ಲೇ ತಮ್ಮನ್ನು ಅಗಾಧ ಕೂಪದಲ್ಲಿ ಹಾಕುವದರಿಂದ ಜನರಿಗೆ ಬೇಗನೆ ಇದರ ದೋಷದ ಪರಿಣಾಮ ಗೊತ್ತಾಗುವದಿಲ್ಲ. ಇದು ಬುಟ್ಟಿಗೆಯಲ್ಲಿ ಸುತ್ತಿಕೊಂಡಿರುವ ಕೃಷ್ಣಸರ್ಪದಂತೆ ಮನುಷ್ಯರ ಮನಸ್ಸಿನಲ್ಲೇ ಇದ್ದು ಮನುಷ್ಯರನ್ನು ನಾಶಮಾಡುವದಾಗಿದೆ. ಈ ಸ್ವಾರ್ಥಮತ್ಸರ್ಯಗಳೆಂಬ ಸಾಧನಗಳೆರಡರ ಪೈಕಿ ಸ್ವಾರ್ಥಕ್ಕೆ "ಆಶೆ" ಯೆಂಬ ಉಪನಾಮಧೇಯವೂ ಮತ್ಸರ್ಯಕ್ಕೆ ಕ್ರೋಧವೆಂಬ ಉಪನಾಮಧೇಯವೂ ಸೇರಿಕೊಂಡು ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಭೂತವಾಗಿಕೊಂಡಿರುತ್ತದೆ. "ಆಶಯೂ ಉತ್ಪತ್ತಿ ಲೋಕಕ್ಕೆ ಆಶಾ ವೈನಾಶ ಕಾರಣಾ" ಎಂಬ ಒಬ್ಬ ಕವಿಯ ಅಭಿಪ್ರಾಯದಂತೆ ಈ ಲೋಕವು ಆಶೆಯ ಮೇಲೆಯೇ ಅವಲಂಬಿಸುತ್ತದೆಂದೂ, ಆ ಆಶೆಯಿಂದ ಲೋಕವು ಕಟ್ಟಿಬಿದ್ದಿರುತ್ತದೆಂದೂ ಹೇಳಿ ಕೊನೆಗೆ ನಾಶಕ್ಕೂ ಕೂಡ ಆಶೆಯೇ ಮುಖ್ಯ ಕಾರಣವೆಂದು ಹೇಳಿರುತ್ತಾನೆ. ಆದ್ದರಿಂದ ಈ ನಾಲ್ಕು ಸಾಧನಗಳು ಇಲ್ಲದ ಜನರು ಬಹಳ ವಿರಳರಾದರೂ ಇವುಗಳ ಉಪಯೋಗದಲ್ಲಿ ಬಹಳ ಜಾಗರೂಕರಾಗಿರಬೇಕು. ವಿಷದಲ್ಲಿರುವ ಹುಳವು ಆ ವಿಷದಿಂದ ಹೇಗೆ ಸಾಯುವದಿಲ್ಲವೋ ಹಾಗೆಯೇ ನಮ್ಮ ಅಂತಃಕರಣದ ಶತ್ರುಗಳ ದೆಸೆಯಿಂದ ಘಾಸಿಯಾಗದ ಎಚ್ಚರ ತೆಗೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಈ ಒಳಗಿನ ಶತ್ರುಗಳನ್ನು ಗೆದ್ದ ನಂತರ ಇಡೀ ಲೋಕವನ್ನೇ ಗೆದ್ದಂತಾಯಿತು. ಈ ಶತ್ರುಗಳ ಗೆಲುವಿಕೆಗೆ ಸದಸದ್ವಿಚಾರವೇ ಮನುಷ್ಯರಿಗಿರುವ ಒಂದನೇ ಸಾಧನವಾಗಿರುತ್ತದೆ.

ಬಿ. ವಿ.

"ಡಿಸ್ಟ್ರಿಕ್ಟುಬೋರ್ಡಿನ ಪ್ರಾಥಮಿಕ ಚುನಾವಣೆಯ ಪಟ್ಟಿಯ ಪ್ರಕಟಣೆ"

ಆಯ್ಯಾ,

ಹೊಸದಾಗಿ ಏರ್ಪಟ್ಟಿರುವ ಕೊಡಗು ಡಿಸ್ಟ್ರಿಕ್ಟುಬೋರ್ಡಿನ ಪ್ರಾಥಮಿಕ ಚುನಾವಣೆ ಪಟ್ಟಿಯನ್ನು ಆಯಾಯ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ತಾರೀಖು 1—9—26ರಲ್ಲಿ ಪ್ರಕಟ ಮಾಡುವದಾಗಿಯೂ, ಓಟರುಗಳು ತಮ್ಮ ತಂಟೆ ತಕರಾರು ನಮ್ಮ ಹಕ್ಕುಗಳನ್ನು ಕುರಿತು ತಾರೀಖು 9—9—26ರೊಳಗೆ ರಿಜಿಸ್ಟ್ರೇಷನ್ ಆಫೀಸರವರಿಗೆ ಅರ್ಜಿ ಬರೆದುಕೊಳ್ಳಬಹುದೆಂತಲೂ, ತಾರೀಖು 9—9—26ರ ನಂತರ ಸಿಕ್ಕಿದ ಅರ್ಜಿಗಳನ್ನು ತಿರಸ್ಕರಿಸಲ್ಪಡುತ್ತದೆಂತಲೂ ಗಜೆಟ್ಟಿನಲ್ಲಿ ಪ್ರಕಟವಾಗಿದೆ

ಆದರೆ ಮೇಲೆ ಹೇಳುವಂತೆ ತಾರೀಖು 1—9—26ರಲ್ಲಿ ಈ ನಂಜರಾಜ ಪಟ್ಟಣದ ತಾಲೋಕಿನಲ್ಲಿ ಎಲ್ಲಿಯೂ ಓಟರುಗಳ ಜಮ್ಮ ಮತ್ತು ಸಾಗಿನ ಪಟ್ಟಿಗಳು ಪ್ರಕಟವಾಗಲಿಲ್ಲ. ಫ್ರೇಜರ್‌ಪೇಟೆ ಹೋಬಳಿಯಲ್ಲಿ ಮೂರು ಪೋಲಿಂಗ್ ಸ್ಟೇಷನುಗಳ ಪೈಕಿ ಹೆಬ್ಬಾಲೆ ಪೋಲಿಂಗ್ ಸ್ಟೇಷನ್ನಿನ ಜಮ್ಮದ ಪಟ್ಟಿಯೂ ಫ್ರೇಜರ್‌ಪೇಟೆ ಪೋಲಿಂಗ್ ಸ್ಟೇಷನ್ನಿನ ಸಾಗು ಮತ್ತು ಜಮ್ಮದ ಪಟ್ಟಿಯೂ, ಚಾಳುಗೋಡು ಸ್ಟೇಷನ್ನಿನ ಸಾಗು ಪಟ್ಟಿಯೂ ತಕರಾರು ತಿಳಿಸಲು ಗೊತ್ತುಮಾಡಿದ ತಾರೀಖಿನ ಅವಧಿ ದಾಟಿದನಂತರ ಪ್ರಕಟವಾಗಿದೆ. ಮತ್ತು ಹೆಬ್ಬಾಲೆ ಸ್ಟೇಷನ್ನಿನ ಸಾಗು ಪಟ್ಟಿಯೂ, ಚಾಳುಗೋಡಿನ ಜಮ್ಮದ ಪಟ್ಟಿಯೂ ಇನ್ನೂ ಪ್ರಕಟವಾಗಿಲ್ಲ.

ಸೋಮವಾರಪೇಟೆ ಕಾನ್‌ಸ್ಟಿಟ್ಯುಯನ್ಸಿಯಲ್ಲಿಯೂ ಸಹ ಇನ್ನೂ ಸೋಮವಾರಪೇಟೆ ಪೋಲಿಂಗ್ ಸ್ಟೇಷನ್ನಿನ ಸಾಗು ಮತ್ತು ಜಮ್ಮದ ಪಟ್ಟಿ ಸಿಕ್ಕಿಲ್ಲ. ಸಾಂತಳ್ಳಿ ಪೋಲಿಂಗ್ ಸ್ಟೇಷನ್ನಿನದು ಮಾತ್ರ ಸಿಕ್ಕಿದೆ.

ಶನಿವಾರಸಂತೆ ಕಾನ್‌ಸ್ಟಿಟ್ಯುಯನ್ಸಿಯ ಎರಡು ಪೋಲಿಂಗ್ ಸ್ಟೇಷನುಗಳ ಜಾಪ್ತು ಸಾಗು ಮತ್ತು ಜಮ್ಮದ ಪಟ್ಟಿಗಳ್ಯಾವದೂ ತಾರೀಖು 11—9—26ರ ವರೆಗೂ ಪ್ರಕಟವಾಗಲಿಲ್ಲ.

ಹೀಗೆ ಕ್ಲಿಪ್ತವಾದ ಕಾಲಗಳಲ್ಲಿ ಓಟರುಗಳ ಪಟ್ಟಿ ಪ್ರಕಟವಾಗದೆ ಇರುವದರಿಂದ ತಾರೀಖು 9—9—26ರೊಳಗೆ ಓಟರುಗಳು ತಮ್ಮ ಹಾರ್ತುವಾಲನ್ನು ಹ್ಯಾಗೆ ಅರ್ಜಿ ಬರಕೊಳ್ಳತಕ್ಕದ್ದೆಂಬುದನ್ನು ವಾಚಕರೇ ಊಹಿಸಲಿ!

ಶಿವಾಯಿ ತಕರಾರು ಅರ್ಜಿಗಳನ್ನು ರಿವೈಜಿಂಗ್ ಆಫೀಸರು ಪೊನ್ನಂಪೇಟೆಯಲ್ಲಿ ತಾರೀಖು 15—9—26ರಲ್ಲಿಯೂ, ವಿರಾಜಪೇಟೆಯಲ್ಲಿ ತಾರೀಖು 16—9—26ರಲ್ಲಿಯೂ, ಮಡಿಕೇರಿಯಲ್ಲಿ ತಾರೀಖು 17—9—26ರಲ್ಲಿಯೂ, ಸೋಮವಾರಪೇಟೆಯಲ್ಲಿ ತಾರೀಖು 18—9—26ರಲ್ಲಿಯೂ ತೀರ್ಮಾನ ಮಾಡುತ್ತಾರೆಂತಲೂ ನೋಟೀಸು ಸಹ ಪ್ರಕಟವಾಗಿದೆ ತಕರಾರು ಅರ್ಜಿ ತಾರೀಖು 9—9—26ರೊಳಗೆ ಬರಕೊಳ್ಳದೆ ಅದರ ಆಚೆಗೆ ಅರ್ಜಿ ಬರೆದರೆ ಅರ್ಜಿ ತಿರಸ್ಕರಿಸಲ್ಪಡುತ್ತದೆಂತ ಪ್ರಕಟಿಸಿ ತಾರೀಖು 9—9—26ನಂತರ ಓಟರರ ಪಟ್ಟಿ ಅರ್ಧಮರ್ಧ ಪ್ರಕಟಿಸಿರುವದರಿಂದ ಓಟರುಗಳು ತಮ್ಮ ತಕರಾರನ್ನು ನೇಮಕವಾದ ಅವಧಿಯಲ್ಲಿ ಬರಕೊಳ್ಳಲು ಅವಕಾಶವೇ ಇಲ್ಲವಾಗಿದೆ ಹೀಗೆ ಮಾಡಿರುವದು ಓಟರುಗಳಿಗೆ ಕಲ್ಪಿಸಿಕೊಟ್ಟ ಸಮಯವನ್ನು ಕಿತ್ತುಕೊಂಡಂತಾಗಿ ತುಂಬಾ ಅನ್ಯಾಯವಾಗಿದೆ. ಆದ್ದರಿಂದ ಈಗಲೂ ಸಾಗು ಮತ್ತು ಜಮ್ಮದ ಓಟರುಗಳ ಪಟ್ಟಿಗಳನ್ನು ಎಲ್ಲಾ ಕಡೆಗಳಲ್ಲೂ ಒಟ್ಟಾಗಿ ಒಂದೇ ಸರ್ತಿ ಜಾಗ್ರತೆ ಪ್ರಕಟ ಮಾಡಿ, ತಕರಾರು ಅರ್ಜಿ ಬರಕೊಳ್ಳಲು ಓಟರರ ಪಟ್ಟಿ ಪ್ರಕಟವಾದನಂತರ 15 ದಿನ ಅವಧಿ ಕೊಟ್ಟು ಆ ಬಗ್ಗೆ ಬೇರೆ ನೋಟೀಸು ಪಬ್ಲಿಷ್ ಮಾಡಬೇಕಲ್ಲದೆ ತಕರಾರು ವಿಲೆ ಮಾಡಲು ಹಾಲಿ ಗೊತ್ತು ಪಡಿಸಿರುವ ತಾರೀಖನ್ನು ಸಹ ಮುಂದರಿಸಿ ಆ ಬಗ್ಗೆ ನೋಟೀಸಿನಿಂದ ಪ್ರಸಿದ್ಧಪಡಿಸಿ ಓಟರುಗಳ ಹಕ್ಕು ಸ್ಥಾಪನೆ ಮಾಡಿಕೊಡುತ್ತಾರಾಗಿ ನಿರೀಕ್ಷಿಸಿದೆ. ಹಾಗೆ ಮಾಡದೆ ಇದ್ದರೆ ಓಟರುಗಳ ಪಟ್ಟಿ ತಯಾರು ಮಾಡಿದ್ದು ನಿಷ್ಪ್ರಯೋಜನವಲ್ಲದೆ ಚುನಾವಣೆಯ ರೂಲ್ಸು ಮಾಡಿದ್ದು ಸಹ ಅನಾವಶ್ಯಕವೆಂತಲೇ ಹೇಳಬೇಕಾಗಿದೆ.

ಜಾಯಿಂಟ್ ಫ್ಯಾಮಿಲಿ ಮತ್ತು ಜಾಯಿಂಟ್ ಪಟ್ಟೆದಾರರುಗಳ ಓಟಿನ ಅರ್ಹತೆ ವಿಚಾರದಲ್ಲಿ ಜಮ್ಮ ಹಿಡುವಳಿಗೂ, ಸಾಗು ಹಿಡುವಳಿಗೂ ವ್ಯತ್ಯಾಸ ಮಾಡಿರುವ ಅಂಶವನ್ನು "ಕೊಡಗು" ಪತ್ರಿಕೆಯು 30—7—1926ರ ಅಗ್ರಲೇಖನದಲ್ಲಿ ತೋರಿಸಿಕೊಟ್ಟು ಆ ತಾರತಮ್ಯವನ್ನು ಹೋಗಲಾಡಿಸಬೇಕೆಂತ ಸೂಚಿಸಿದ್ದು ಸರ್ಕಾರದವರ ಗಮನಕ್ಕೆ ಇದುವರೆವಿಗೂ ಬಾರದೇ ಇರುವದು ಕೇವಲ ಶೋಚನೀಯವಾಗಿದೆ.

"ಓವ್ ಓಟರ್"

("ಓಟಿನ ಸಮಸ್ಯೆ"

ಮಹಸೀಯರೆ,

ಇದೊಂದು ಸಮಸ್ಯೆಯು ನಮ್ಮಲ್ಲಿ ಬಹು ವಿಜೃಂಭಣೆಯಿಂದ ನಡೆಯಲಿಕ್ಕಿದೆ. ಈ ವಿಷಯದಲ್ಲಿ ನಮ್ಮ ದೇಶವು ಬಹು ಜಾಗರೂಕತೆಯಿಂದ ವರ್ತಿಸಬೇಕಾದದ್ದು ಅತ್ಯಾವಶ್ಯಕವಾಗಿದೆ. ಪ್ರತಿಯೊಬ್ಬ ಓಟರನೂ ತನ್ನ ಓಟಿನ ಮಹತ್ವವನ್ನು ತಿಳಿದುಕೊಂಡು ಸಮುಪಯೋಗಪಡಿಸಬೇಕಾಗಿದೆ. ಕೆಲವು ದೇಶಗಳಲ್ಲಿ ಯೂ ಕೆಲವೆಡೆಗಳಲ್ಲಿ ಕೆಲವರು ತಮ್ಮ ಓಟನ್ನು ದಾಕ್ಷಿಣ್ಯದ ಒಳಗೆ, ಬಿದ್ದೋ ಇಲ್ಲವೆ ಸಂಬಂಧದ ಬಂಧನಕ್ಕೆ ಸಿಲುಕಿಯೋ ಸದ್ವಿನಿಯೋಗಪಡಿಸದೆ ಅನಾತ್ಮಕ್ಕೆ ಉಪಯೋಗಿಸುವುದುಂಟು. ಅಲ್ಲದೆ ಇನ್ನು ಕೆಲವರು ವಿಕ್ರಯಿಸುವದುಂಟು. ಇದೆಲ್ಲವು ತಮ್ಮ ತಮ್ಮ ಯೋಗ್ಯತೆಗೆ ಬೆಲೆ ಕಟ್ಟಿಕೊಳ್ಳತಕ್ಕ ಪ್ರಸಂಗವಲ್ಲದೆ ನಿಜವಾಗಿಯೂ ಮನುಷ್ಯತ್ವದ ಅರ್ಹತೆಯಲ್ಲ. ಯಾರು ದೇಶದಲ್ಲಿ ಹೆಚ್ಚಿನ ಶ್ರದ್ಧೆಯಿಂದ ಕೆಲಸಮಾಡುವರೋ, ಯಾರು ಬಡಜನರಲ್ಲಿ ಸಲಿಗೆಯನ್ನಿಟ್ಟುಕೊಂಡಿರುವರೋ, ಯಾರು ತಾವೇ ಸಮಸ್ತರೆಂಬ ಅಹಂಕಾರವನ್ನು ದೂರಮಾಡಿಕೊಂಡಿರುವರೋ ಅಂಥಾ ಉಮೇದ್ವಾರರೇ ದೇಶದ ಪ್ರತಿನಿಧಿತ್ವಕ್ಕೆ ಅರ್ಹರಾಗಿರುತ್ತಾರೆ. ಅಂಥಾವರಿಗೆ ದೇಶಕ್ಕೆ ಒಂದು ವೇಳೆ ಗುಣಮಾಡಲು ಅಶಕ್ಯತೆ ಉಂಟಾದರೂ ದೋಷ ಎಂದಿಗೂ ಉಂಟಾಗಲಾರದು. ದೇಶದ ಪ್ರತಿನಿಧಿತ್ವಕ್ಕೆ ಐಶ್ವರ್ಯವಂತರೇ ಆಗಬೇಕೆಂತಿಲ್ಲ ರಥಕ್ಕೆ ಸಾರಥಿಯು ಹೇಗೆ ಮುಖ್ಯಕಾರಣನೋ ಹಾಗೆಯೇ ದೇಶದ ಆಡಳಿತೆಯ ಕ್ರಮಕ್ಕೆ ಪ್ರತಿನಿಧಿಗಳೇ ಮುಖ್ಯ ಕಾರಣರು. ಇವರು ಸಮ ಸ್ವಭಾವದವರಾಗಿಯೂ, ವಿಚಾರಶೀಲರಾಗಿಯೂ ದೇಶದ ಎಲ್ಲಾ ಭಾಗಗಳ ಅವಸ್ಥೆ ಬಲ್ಲವರಾಗಿಯೂ ಇದ್ದರಾಯಿತು. ಕೆಲವರು ಐಶ್ವರ್ಯವಂತರು, ಇಲ್ಲವೆ ದೊಡ್ಡ ಘನಸ್ತಿಕೆ ತೋರ್ಪಡಿಸುವವರೇ ಮೆಂಬರುಗಳಾಗಬೇಕೆಂದೂ, ಇವರ ಮಾತಿಗೆ ಸರಕಾರವು ಬಹಳ ಬೆಲೆಕೊಡಬಹುದೆಂದೂ, ಮತ್ತು ದೇಶದ ಹೆಚ್ಚಿನ ಅಭಿಪ್ರಾಯಕ್ಕಾಗಲಿ ಖರ್ಚುಗಳ ವಿಷಯಕ್ಕಾಗಲಿ ಇಂಥಾವರು ಎದೆಕೊಡಬಹುದೆಂದೂ ವಾದಿಸುತ್ತಾರೆ ಈ ಅಭಿಪ್ರಾಯವು ಪೂರಾ ತಪ್ಪಾಗಿದೆ. ಯಾರೂ ತಮ್ಮ ಸ್ವಂತ ಹಣವನ್ನು ದೇಶಕ್ಕಾಗಿ ವೆಚ್ಚಮಾಡುವದಿಲ್ಲ. ಹಾಗೆ ಮಾಡುವವರಿದ್ದರೂ ಇಂಥಾ ಮೆಂಬರುಗಳಾಗಿ ಮಾಡಬೇಕೆಂತಿಲ್ಲ. ಹಾಗೆ ಮೆಂಬರುಗಳಾದವರು ಮಾಡಿದ್ದೂ ಕೂಡ ಬಹು ವಿರಳವೆಂದು ಗತಾನುಭವದಿಂದ ಗೊತ್ತೇ ಇದೆ. ಮತ್ತೆ ಅವರ ಮಾತಿಗೆ ಸರಕಾರವು ಬೆಲೆಕೊಡುತ್ತದೆಂದು ಹೇಳುತ್ತಾರೆ. ಇದೂ ಕೂಡ ತಪ್ಪು. ಇಂಥಾ ಮಹನೀಯರು ಹೆಚ್ಚಾಗಿ ಸರಕಾರದ ಮಾತನ್ನೇ ಮೇಲ್ಪಂಕಿಯಾಗಿ ತೆಗೆದುಕೊಳ್ಳುವರಲ್ಲದೆ ಜನಕ್ಷೇಮದ ಕಡೆಗೆ ತಿರುಗುವದು ಕಡಿಮೆ. ಆದ್ದರಿಂದಲೇ ಅವರ ಮಾತಿಗೆ ಸರಕಾರವು ಬೆಲೆ ಕೊಡುತ್ತದೆಂದು ಹೇಳುವದಾಗಿದೆ. ಇಂಥಾ ಮಹನೀಯರು ಸಾಮಾನ್ಯವಾಗಿ ಸರಕಾರದ "ಹೌದೊ ಬಸವಣ್ಣನೆಂದರೆ ಹೌದು ' ಎಂಬ ಹಾದು ಬಸವಣ್ಣನೆಂದರೂ ತಪ್ಪಾಗಲಾರದು ದೇಶದ ಸರ್ವಜನರ ಬೆಂಬಲದಿಂದ ಮಧ್ಯಮ ತರಗತಿಯವರಿಗೂ ಕೂಡ ಸರಕಾರದೊಡನೆ ಎದುರಾಡುವ ಸಾಮರ್ಥ್ಯತೆಯು ಸ್ವತಃ ಹುಟ್ಟಿಯೇ ಹುಟ್ಟುತ್ತದೆ

ಇನ್ನು ಕೆಲವರು ಮುಂದೆ ಮೆಂಬರುಗಳಾದವರು ದೇಶಕ್ಕೆ ತಾವು ಏನೇನು ಪ್ರಯೋಜನದ ಕೆಲಸಗಳನ್ನು ಮಾಡಿರುತ್ತೇವೆಂಬ ಪಟ್ಟಿ ಕೊಡಬೇಕೆಂದು ಕೇಳುತ್ತಾರೆ. ಇಂಥಾ ಮಾತು ಮಾತಿಗೆ ಏನಂದರೂ ಸ್ವಲ್ಪವೇ. ಈಗ ಉಮೇದ್ವಾರರಾಗುವ ಇಲ್ಲವೇ ಆ ಅವಿವೇಕದ ಮಾತನ್ನಾಡುವ ಜನರ ಇಷ್ಟಗಾರರು ಮೆಂಬರಾದರೆ ತಾವು ಇಂತಿಂಥಾ ಪ್ರಯೋಜನ ಮಾಡ್ತೇವೆಂಬ ಪಟ್ಟಿ ಮುಂದಾಗಿ ಕೊಡುವರೋ? ಕೌನ್ಸಿಲಿನ ಬಹುಮತದ ಅಭಿಪ್ರಾಯದಂತೆ ಸರಕಾರವು ನಡೆಯಬೇಕೆಂಬ ನಿರ್ಬಂಧ ಇಲ್ಲದೆ ಇರುವದರಿಂದ ದೇಶಕ್ಕೆ ಹಾಗೆ ಮಾಡಿಯೇವು, ಹೀಗೆ ಮಾಡಿಯೇವು ಎಂಬ ಕಂಠೋಕ್ತದ ಮಾತು ಎಷ್ಟರ ಮಟ್ಟಿಗೆ ನಿಜ? ಆದರೆ ಆದಷ್ಟು ಮಟ್ಟಿಗೆ ದೇಶದ ಅಭಿವೃದ್ಧಿ ವಿಷಯದಲ್ಲಿ ಹೋಹೆದಾಡಬಹುದೆಂದು ಮಾತ್ರ ಹೇಳಬಹುದಾಗಿದೆ.

ವಾಗಾಡಂಬರಕ್ಕಿಂತ ಕಾರ್ಯಾಡಂಬರವೇ ಸದ್ಯ ನಮ್ಮ ದೇಶಕ್ಕೆ ಬೇಕಾದದ್ದಾಗಿದೆ ಹೇಗೂ ವಾಗಾಡಂಬರಕಾರರಿಗಿಂತ ಕಾರ್ಯಗಾರರು ಹಿಂದೆ ಬೀಳಲಾರರು. ಅದ್ದರಿಂದ ದೇಶದ ಸರ್ವತಾ ಯಾರು ಯಾರು ಯಾವ ಕಾರ್ಯ ಮಾಡಲು ಸಮರ್ಥರೆಂದೂ, ಈ ಮುಂದೆ ಯಾರು ಯಾರು ದೇಶದವರ ಸಲುಗೆಗೆ ತಕ್ಕವರಾಗಿದ್ದರೆಂದೂ ಮುಂತಾಗಿ ಪರ್ಯಾಲೋಚನೆ ಮಾಡಿ ಸಪಾತ್ರರಿಗೆ ತಮ್ಮ ಅಮೂಲ್ಯ ಸಮ್ಮತವನ್ನು ಕೊಡಬೇಕೇ ವಿನಹ ಅಟ್ಟಂಡಿರ ಕಾಲದ ದುರ್ಬಲದ ಮಹತ್ವವನ್ನಾಗಲಿ, ಐಶ್ವರ್ಯದ ಇಲ್ಲವೆ ಘನಸ್ತಿಕೆಯ ಮಹತ್ವವನ್ನಾಗಲಿ ಯೋಚಿಸಿ ತಮ್ಮ ಮತವನ್ನು ಕಳಕೊಳ್ಳಬಾರದಾಗಿದೆ ದೇಶದ ಪ್ರತಿನಿಧಿತನಕ್ಕೆ ಐಶ್ವರ್ಯವಂತರೂ, ಬಡವರೂ, ಯಾರೂ ಆಗಬಹುದು ಪರಂತು ದೀನ ಜನರ ಸಲುಗೆಗೆ ಪಾತ್ರರಾದವರು ಮಾತ್ರ ಆಗಬೇಕು. ನಮ್ಮ ದೇಶದಲ್ಲಿ ವ್ಯಕ್ತಿದ್ವೇಷದಿಂದ ಸದ್ವರ್ತನೆಯವರನ್ನು ದೂಷಿಸುತ್ತಾ ಏನೂ ಮಾಡದೆ ತಮ್ಮ ಬೆಂಬಲಿಗರನ್ನು ಮಾತ್ರ ತುಂಬಿಸಿಕೊಂಡು ತಮ್ಮ ಪಟ್ಟಿಗೆ ಇರುವವರನ್ನು ಭೂಷಿಸಿಕೊಂಡು ಜನರ ಮನಸ್ಸನ್ನು ಚಲನೆಗೆ ತರುತ್ತಾರೆ ಈ ಕೆಲಸವು ಬಹಳ ನಿಂದ್ಯಾಸ್ಪದದ ಕಾರ್ಯವಾಗಿದೆ , ಇಡೀ ಪ್ರಪಂಚವೇ ಆಲ್ಲೋಲಕಲ್ಲೋಲವಾಗಿಕೊಂಡಿರುವ ಈ ಕಾಲದಲ್ಲಿ ನಮ್ಮ ನಮ್ಮ ಪುಟ್ಟ ಜಗಳಗಳನ್ನು ದೊಡ್ಡದಾಗಿ ಎಣಿಸಿಕೊಂಡು ನಮ್ಮ ನಮ್ಮೊಳಗೆ ಹೋರಾಡಿಕೊಂಡು ಕಾಲ ಕಳೆಯುವಷ್ಟು ಅವಿವೇಕತನವು ಮತ್ತೊಂದಿಲ್ಲ ಬಡವನಾಗಲಿ, ಬಲ್ಲಿದನಾಗಲಿ, ವಿದ್ಯಾವಂತನಾಗಲಿ, ವಿಚಾರಶೀಲನಾಗಲಿ ಯಾರೇ , ಆವರೂ ಚಿಂತೆ ಇಲ್ಲ ಯಾರು ದೇಶದ ಮಹೋಭಿವೃದ್ಧಿಯನ್ನು ಕುರಿತು ಪ್ರಯತ್ನಿಸುತ್ತಾರೋ ಅವರೇ ದೇಶದ ನಿಜವಾದ ಪ್ರತಿನಿಧಿಗಳು. ಅಂಥವರು ಯಾವ ಪಾಳೆಯದಲ್ಲಿದ್ದರೂ ಸುದ್ಧ. ಅಂಥವರಿಗೆ ತಮ್ಮ ತಮ್ಮ ಓಟುಗಳನ್ನು ಕೊಡುವದು ಓಟರರ ಮುಖ್ಯ ಕರ್ತವ್ಯವಾಗಿದೆ.

ಒಬ್ಬ ಓಟರು.

ಡಿಸ್ಟ್ರಿಕ್ಟ್‌ಬೋರ್ಡ ಆಸ್ಪತ್ರೆಗಳು.

ಆಯ್ಯಾ,

ಡಿಸ್ಟ್ರಿಕ್ಟುಬೋರ್ಡ ಆಸ್ಪತ್ರೆಗಳ ವಿಷಯವಾಗಿ ನಾ... ಡಿಸ್ಟ್ರಿಕ್ಟುಬೋರ್ಡ ಪ್ರೆಸಿಡೆಂಟರಿಗೆ ಬರೆದ ಎರಡು ಕಾಗದ... ತ್ತು ಅದಕ್ಕೆ ಸಿಕ್ಕಿದ ಜವಾಬು ಇವುಗಳ ನಕಲುಗಳನ್ನು ... ರೊಡನೆ ಕಳುಹಿಸಿರುತ್ತೇನೆ. ಈ ವಾರದ ತಮ್ಮ ಪತ್ರಿಕೆ... ಲ್ಲಿ ಈ ಪತ್ರವ್ಯವಹಾರವನ್ನು ದಯವಿಟ್ಟು ಪ್ರಕಟಿಸಬೇಕಾ... ಅಪೇಕ್ಷಿಸಿದ್ದೇನೆ.

ಸುಬ್ಬಣ್ಣಯ್ಯ

N. R. Subbanayya, Samvarsante ...
Coffee Planter, N. Coorg,
Nidtha. Date 31—7—1...

ಕೊಡಗು ಡಿಸ್ಟ್ರಿಕ್ಟುಬೋರ್ಡ ಪ್ರೆಸಿಡೆಂಟರವರ ಸ... ನಿಡತದ ಸುಬ್ಬಣ್ಣಯ್ಯನು ಬರಕೊಂಡ ರಿಕ್ವೆಸ್ಟೇಶನ್.

ದಯವಿಟ್ಟು ಈ ಕೆಳಗೆ ವಿವರಿಸುವ ಅಂಶಗಳಿಗೆ ಒ... ಸ್ಟೇಟ್‌ಮೆಂಟು ಕಳುಹಿಸಿಕೊಡಬೇಕಾಗಿ ಅಪೇಕ್ಷಿಸಿ... ಆದಷ್ಟು ಜಾಗ್ರತೆ ಕಳುಹಿಸಿದರೆ ಸಂತೋಷ.

ಫ್ರೇಜರ್‌ಪೇಟೆ ಆಸ್ಪತ್ರೆ ವಿಷಯ.

1. ಇಲ್ಲಿ ಆಸ್ಪತ್ರೆ ಇಟ್ಟದ್ದು ಯಾವಾಗ?

2. ಆಗಲೇ ಖಾಯಂ ಆಗಿ ಇಟ್ಟದ್ದೋ? ಯಾ... ಕ್ಷಾರ್ಥವಾಗಿ ಇಟ್ಟದ್ದೋ? ಪರೀಕ್ಷಾರ್ಥವಾಗಿ ಇ... ದ್ದಾದರೆ ಎಷ್ಟು ದಿನಗಳವರೆಗೆ ಹಾಗೆ ಇಡಲ್ಪಟ್ಟಿತ್ತು?

3 ಖಾಯಂ ಆಗಿ ಮಾಡಿದ್ದಕ್ಕೋ, ಪರೀಕ್ಷಾರ್ಥ... ಇಟ್ಟದ್ದಕ್ಕೋ ಮಧ್ಯೆ ಈ ಆಸ್ಪತ್ರೆ ನಡೆಯುತ್ತಿತ್ತೋ? ಯಾ... ಲ್ಲಿಸಲ್ಪಟ್ಟಿತ್ತೋ? ಖಾಯಂ ಮಾಡಿದ್ದು ಯಾವಾಗ?

4. ಈ ಆಸ್ಪತ್ರೆ ಸುರುವಾದ ಲಾಗಾಯಿತು ಇದುವ... ನ ಕಾಯಿಲಸ್ತರ ಹಾಜರಾತಿಯ ತಿಂಗಳುವಾರು ಲೆಖ್ಖ... ತಿ ವರ್ಷದ್ದು.

ಸದಾ ಬಹಿಕೆ ಇರಲಿ. ವಿಧೇಯ,

(Sd) ಸುಬ್ಬಣ್ಣಯ್ಯ.

.... 5—8—1926.

ಕೊಡಗು ಡಿಸ್ಟ್ರಿಕ್ಟುಬೋರ್ಡ ಪ್ರೆಸಿಡೆಂಟರವರ ಸ... ನಿಡತದ ಸುಬ್ಬಣ್ಣಯ್ಯನ ಅರಿಕೆ.

ಈ ಕೆಳಗೆ ವಿವರಿಸಿರುವ ಅಂಶಗಳಿಗೆ ದಯವಿಟ್ಟು ಉ... ರಕೊಡಬೇಕಾಗಿ ಅಪೇಕ್ಷಿಸಿದ್ದೇನೆ.

(1) ಲೋಕಲ್ ಫಂಡು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಇಂ... ಕ್ಷನ್ ಕೊಡುವ ಪದ್ಧತಿ ಇದೆಯೇ?

(2) ಹಾಗೆ ಇಂಜಕ್ಷನ್ ಕೊಡುವ ಪದ್ಧತಿ ಇದ್ದ... ದು ಸರ್ಕಾರದ ಅಂದರೆ ಲೋಕಲ್ ಫಂಡಿನ ಖರ್ಚಿನಿಂದ... ಡತಕ್ಕದ್ದೋ? ಅಥವಾ ಅದರ ಖರ್ಚನ್ನು ರೋಗಿಗಳ... ವಸೂಲು ಮಾಡತಕ್ಕದ್ದೋ?

(3) ಇಂಜಕ್ಷನ್ ಮುಫತ್ತಾಗಿ ಮಾಡುವದಾಗಲಿ ... ಖರ್ಚು ತೆಗೆದುಕೊಂಡು ಮಾಡುವದಾಗಲಿ ಕೊಡಗಿನ ... ಲೋಕಲ್ ಫಂಡು ಆಸ್ಪತ್ರೆಗಳಲ್ಲೂ ಜಾರಿಯಲ್ಲಿರುತ್ತದೆಯೆ... ಅಥವಾ ಕೆಲವು ಆಸ್ಪತ್ರೆಗಳಲ್ಲಿ ಇರುತ್ತದೆಯೇ? ಕೆಲವು... ಲ್ಲಿ ಇದ್ದರೆ ಆ ಆಸ್ಪತ್ರೆಗಳು ಯಾವವು?

(4) ರೋಗಿಗಳು ಐಶ್ವರ್ಯವಂತರೆಂದಾಗಲೀ ... ವರೆಂದಾಗಲೀ ಗೊತ್ತು ಮಾಡುವವರು ಯಾರು?

(5) ರೋಗಿಗಳಿಂದ ದುಡ್ಡು ವಸೂಲು ಮಾಡಿಕೊ... ಇಂಜಕ್ಷನ್ ಕೊಡಬೇಕೆಂತ ನಿಯಮವಿದ್ದರೆ, ಆ ದು... ಔಷಧದ ನಿಗದಿ ಏನಾದರೂ ಮಾಡಲ್ಪಟ್ಟಿದೆಯೇ ... ದು ಎಷ್ಟು?

ವಿಧೇಯ,

(Sd) ಸುಬ್ಬಣ್ಣಯ್ಯ.

ಡಿಸ್ಟ್ರಿಕ್ಟುಬೋರ್ಡ ಪ್ರೆಸಿಡೆಂಟರ ಜವಾಬು.

Dis. No. 654/ L. F. Coorg District Board ...
Mercara, the 14th, September, 1...

From,
E. C Wood Esquire, I. C. S,
President District Board.

To,
M. R. Ry. N. R. Subbanayya,
District Board Member.
Nidtha.

Sir,

Subject:—Local Fund Hospitals inject... etc particulars of.

Reference:—Your letter dated 31st July... 5th August 1926.

The rules do not provide for such int... lations.

(Sd) H M. Kamat,
14—9—26.
For President District Boar...

ಡಿ. ಬೋರ್ಡ ಪ್ರೆಸಿಡೆಂಟರ ಮೇಲಿನ ಜವಾಬಿನ ತಾ... ಇಂಥ ಪ್ರಶ್ನೆಗಳಿಗೆ ರೂಲ್ಸಿನಲ್ಲಿ ಅವಕಾಶವಿಲ್ಲ.

ನೆಲ್ಲಿ ಹುದಿಕೇರಿಯ ದೇವಸ್ಥಾನ
ಬಿಗೇರಿನಾಡು ನಲ್ಲು ಮರಿದೇವರುಗಳ ಶ್ರೀ ಮಹಾ ದೇವಸ್ಥಾನವಿದೆ. ಈ ದೇವರ ಭಂಡಾರವನ್ನು ಟ ಗೋವಿಂದ್ಯಯ್ಯನವರ ಮನೆಯಲ್ಲಿ ಆ ದೇವ ಟ್ಟ ಗ್ರಾಮಸ್ಥರು ಇಡುತ್ತಿದ್ದರು. ಈ ವರ್ಷ ಕೆಲವು ನಿಂದ ಇವರು ಭಂಡಾರವನ್ನು ಇಡಲು ನಿರಾಕರಿಸಿದ ದಿಕೇರಿ ಗ್ರಾಮದ ಗುಂಡೀರ ಮಾದಯ್ಯನವರ ಂಡಾರವನ್ನು ಸಾಗಿಸಿದರು ಜಟ್ಟಿರ ವಗೈರೆ ವಿಷಯ ಪ್ರವಾದ ನಡೆದಿದ್ದು, ಕೋಡಾವು ನ್ಯಾಯ ದಾನವಾಗಿಯೂ ನ್ಯಾಯ ತೀರ್ಮಾನವಾಗಿ ಮುಂ ರೂ ಗೋವಿಂದ್ಯಯ್ಯನವರಲ್ಲೇ ಮಾಡುವಂತೆ ಇ ಂದು ನೆರೆಯೂರಿನ ನ್ಯಾಯಾಪೇಕ್ಷಿಯ ಕೋರಿಕೆ

ನೆರೆ ಊರವ

786

ಪ್ರಮಾಣದ ಮಾಲು. ತೋರನೋಡಿ ತರಿಸಿರಿ

ಬೆಳ್ಳೂರು ಉಂಡೆನಶ್ಯ.

ನಾವು ಕಳೆದ 30 ವರ್ಷಗಳಿಂದಲೂ ಮನನಾಗ ನಶ್ಯ ತ ಯಾರುಮಾಡಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳ ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿಗೆ ಸಮ್ಮಂಧ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮನಸ್ಸಿಗೆ ಹರ್ಷವ ಟುಮಾಡುತ್ತೆ. ಒಂದು ತಿಂಗಳಿಟ್ಟರೂ ಕೆಡ ಪುದಿಲ್ಲ. ಕೆಟ್ಟ ವಾಪಸು ಪಡೆಯುತ್ತೇವೆ. ಒಂದು ಸಾರಿ ತರಿಸಿ ಪರೀಕ್ಷಿಸಿ ನಮ್ಮ ನಶ್ಯವು ಈ ಮೊದಲು ಸೇರು 1ಕ್ಕೆ 1—4—0, —0 ರೂ ನಂತೆ ಮಾರುತ್ತಿದ್ದೆವು. ಈಗ ಕಾರಣಾಂತರದಿಂ ತಪ್ಪೀಚರ. ಆತ್ಯದೊಳಗೆ ಬರತಕ್ಕ ಆರ್ಡರುಗಳಿಗ ಷದ ವರೆಗೂ ಈ ಕೆಳಗೆ ಕಂಡ ದರದಂತೆ ಕಳುಹಿಸು ವೆ. ಹಾಗೂ ಕಳೆದಸಾರಿ ಒಂದಕ್ಕೆ ಒದಗಿಗೆ ಸೇರು 6—4 0 ಹೆಚ್ಚಿಸಲ್ಪಡುವುದು.

ದರ	24 ತೋಲೆ	ಸೇರು	1ಕ್ಕೆ	0—12—0,
	„	„	3ಕ್ಕೆ	2— 1—0,
	„	„	6ಕ್ಕೆ	4— 0—0,
	„	„	9ಕ್ಕೆ	6— 0—0,
	„	„	12ಕ್ಕೆ	7— 8—0,
	„	„	1ಕ್ಕೆ	1—10—0,
ಮನನಾದ ಪುಡಿ	„	„	5ಕ್ಕೆ	2— 0—0,

„ ಪೇಡಿ, ನಶ್ಯ ವಗೈರೆಗೆ ಆಗುವ ಹೊಗೆಸೊಪ್ಪು ನಶ್ಯದ ಡ್ಡಿ, ಡೇಕು ಸಹ ನಮ್ಮಲ್ಲಿ ಸಿಕ್ಕುತ್ತೆ
ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.
ಸಮರ್ಥರಾದ ಏಜೆಂಟರುಗಳು ಬೇಕಾಗಿದೆ.
ಸ್ಯಾಂಪಲ್ ಅಪೇಕ್ಷಿಸುವವರು ೪ಆಣೆ ಸ್ಟಾಂಪು ಕಳುಹಿ ತಕ್ಕದ್ದು.
ಯಾವ ಕಡ ರ್ ಕೊಟ್ಟು ನಮ್ಮ ಏಜೆಂಟಿಗೆ ದಾಮ ದವರಿಗೆ ಕಾಲಕ್ಕೆ ಸರಿಯಾಗಿ ಆರ್ಡರ್ ನಿರೀಕ್ಷಣೆ ಇಲ್ಲದೆ ಮನನಾದ ಮಾಲು ಕಳುಹಿಸುತ್ತೇವೆ.
ಬಿಟ್ಟನ ವಿವರಕ್ಕೆ ಮ್ಯಾನೇಜರವರಿಗೆ ಬರೆಯತಕ್ಕದ್ದು.
ಮ್ಯಾನೇಜರ್ ಎ. ವ ಮಹಮ್ಮದ್ ಹನೀಫ್.

ನಮ್ಮ ವಿಳಾಸ.—
ಯುಸ್ ಅಬ್ದುಲ್ ವಹಾಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
ಬೆಳ್ಳೂರು ಪೋಸ್ಟ್,
52—6 ಮೈಸೂರು ಡಿಸ್ಟ್ರಿಕ್ಟ್

Good Chance! Good Chance!!

Ammunition At cheaper rate.

Gun Powder per lb.	1—14—0
Percussion caps per box o. 250.	1—1—0
Eley Cartridges per 100	12—0—0
Lead shots per lb.	0—8—0

Terms —Rs 5/- should be sent in advance for each order. Orders from coorgs should accompany the exemption certificate from the District Magistrate of Coorg.

Free:—6 Rubber air ballows will be given to any customer who transacts business with me for more than Rs. 20/- before 31st December, 1926.

Moffussil orders Promptly attended to:
S. VENKATARANGAM CHETTY,
Ammunition & Sulphur Merchant,
No. 9, China Bazaar, Road, Madras.

12—1

Apply for our shooting Season's Clearance Sale Catalogue of Brand New Goods.
10 to 25 percent Reductions in Prices.
No License Required!! **No License Required**



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/- Free delivery.

Pwerful German Diana Air gun, Handsome and Accurate, takes B. S. A. Patern No. 1 Slugs and Darts, expressly recommendable for Target Practice Rs. 15/ Free delivery

Brilliant Search Light Lamp for Night Sports Rs. 30/— Free delivery.

No License required to purchase or to possess the above items.

Reliable D. B. B. L. 12 bore guns	Rs.	60/—	and upwards
Do. S. B. B. L. 12 do	do	40/—	do
D. B. M. L. Guns	„	15/—	do
S. B. M. L. do.	„	30/—	do
S. B. B. L. Rifles	„	25/—	do
B. L. Revolvers and Pistols	„	30/—	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition, Cheapest priced firm in India,

24. 10 210 Abdul RehmanStreet, BOMBAY.

೧೬ ಚಿತ್ರಪಟ ಗಳುಳ್ಳದ್ದು

ಸಚಿತ್ರ ಶುಕಸಪ್ತತಿ ಕಥೆ.

೭೦ ಕಥೆಗಳು ೧೫೨ ಪುಟಗಳು

ಈ ಕಥೆಯು ದರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ವ್ಯಾಖ್ಯಾನ, ನೈತ್ಯ, ರೂಪ್ಯರಂಬ ಸಾಂಖ್ಯ ವರ್ಣದವರ. ನ ಟಿಯುತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸನ್ಮಿಚಾರಗಳನ್ನು ಬೋಧಿಸಿ ಪುದು. ೧. ಕಥಾರೂಪದಲ್ಲಿ ಚಿತ್ರಕಥಾ ಚ ಮತ್ಕಾರ ಬೋಧಕವಾಗಿಯೂ ಸೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದ ವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುವು. ೩ ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವು ದು. ೪. ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲ ಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೨-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ, ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಸೇರಿದ್ದು ೬೧೨ ಪುಟಗಳು ಕ್ರಯ ೨-೪-೦. ಸಚಿತ್ರರಾಜ ಕಂಠೀರವ ಕಥೆ ೪೮೦ ಪುಟಗಳು, ಕ್ರಯ ರೂ ೨

ಸಚಿತ್ರ ಶ್ರೀರಾಮತತ್ವಾಮೃತ ಎಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೮-೦. ಇವುಗಳಿಗೆ ಟ ಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಕಳುಹಿಸುವೆವು.

ನಮ್ಮ ವಿಳಾಸ— ಎಂ ಆರ್. ಕೃಷ್ಣಸ್ವಾಮಿ ಶೆಟ್ಟಿ,
52—17 ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ನಮಸ್ತರೂ ಲಾಭ ಸಹಿತವಾದ ಪಾಲಿಸಿಗಳಿಗೆ
1927 ನೇ ಫೆಬ್ರವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಆಗುವ
ಒಂದಸಾಲು ಬೋನಸ್ ಮೊಬಲಗು ಕೊಡಲಾಗುವುದು.
ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್:— 152, ಕಮ್ಮರ್ಷಿಯಲ್ ಸ್ಟ್ರೀಟ್.

ಸಿ. ಕೆ. ಚಂಗಪ್ಪ, ಸ್ಪೆಷ್ಯಲ್ ಏಜೆಂಟ್, ರವಲ್ ಸೈಡ್ ಎಸ್ಟೇಟ್, ಸಿದ್ದಾಪುರ.

ಮದರಾಸ್ ಬ್ರಾಂಚ್:— 9-10, ನಾರ್ತ್ ಬೀಚ್ ರೋಡ್.

24—9.

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಬಾಕಿದಾರರ ಪರಸ್ಪರ ಸಹಾಯಕ ಸಂ ಘದ ಉಪನಿಬಂಧನೆಗಳೂ, ದಾಸ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲ ವೆಂದು ವಾಪಸು ಕಳುಹಿ ಅದನ್ನು ಪುನಹ ಸರಿಯಾಗಿ ಬರೆ ಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರ ವಾಗಿ ತಯಾರಿಸಲ್ಪಟ್ಟ ದಾಸಾ ಫಾರಮುಗಳೂ ನಮ್ಮಲ್ಲಿ ಯೂ ಮತ್ತು ವಿರಾಜಪೇಟೆ ಬದ್ರುದ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ತಯಾರಾಗುತ್ತಿವೆ.

ನಮ್ಮ ದೇಶದ ಸಹಕಾರಿ ಸಂಘಗಳ ಅವಶ್ಯಕತೆಗೆ ಸರಿ ಬರುವ ತರುವಾಯವುಳ್ಳ ಪಾಸ್ ಬುಕ್ಕುಗಳು ನಮ್ಮಲ್ಲಿ ಸಿದ್ಧ ವಾಗುತ್ತಿವೆ. ಜಾಗ್ರತೆ ಮಾರಾಟಕ್ಕೆ ತಯಾರಾಗುವವು. ಕೆಲವು ಪುಸ್ತಕಗಳು ಮಾತ್ರ ತಯಾರಾಗುವುದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ.

„ಕೊಡಗು" ಆಫೀಸು, ಮಡಿಕೇರಿ

ಮ್ಯಾನೇಜರ್,

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಚೇಅರ್ಸ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ.
(೨) ಕೂಡುವದಕ್ಕೆ ಆರಾಮು.
(೩) ತಾಳಿಕೆಯಲ್ಲಿ ಗಟ್ಟಿ.
(೪) ತಗಣಿಗಳು ಸೇರುವದಿಲ್ಲ.
(೫) ಎತ್ತುವದಕ್ಕೆ ಬರುವಷ್ಟು ಹಗುರ.

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ.

ಸವಿಸ್ತರ ಸಂಗತಿಯ ಬಗ್ಗೆ ಓದಿದು ತಿಳಿದು ಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—16 ಮ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮಾಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರರವರು ಲೆಕ್ಕ ಆಜಮಾಯಿಷಿ ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಂಡೀರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.

ಸೆಕ್ರೆಟರಿ,
ಸಿ. ಯನ್. ವೆಂಕಟಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1926.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವನವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎ ... ಬಂಡವಾಳವಿರುವ ದೇಶೀಯ ವಿಮೆ ಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ... ವರ್ಷಕ್ಕೆ 13ರೂ. ಕಡಿಮೆ ... ' ಓರಿಯಂಟಲ್ ' ಗವರ್ನಮೆಂಟ್ ... ಕಂಪೆನಿಯ ದರಿದ್ದಿಗೂ, ಶರತಿಗೂ ಈ ಕಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಚಾಡಿಬಿಷ್ಟಿ ಎಂದರೇನು?

ದೇಶೀಯ ಪತ್ರಿಕೆಗಳಲ್ಲಿ ಕೈಲಾಸಪುರದಿಂದ ಸೋಲು ತೆಗೆದು ... ' ಚಾಡಿ ' ಈಗಾಗಲೇ ನಮ್ಮ ... ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಶೀರೆಗಳು ಚಕ್ಕಗಳು, ಶಾಲು ... ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ... ಚಾಡಿಯಿಂದಲೇ ಸ್ವರಾಜ್ಯ, ಚಾಡಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು ಪ್ರೊಪ್ರೈಟರ್,
ಚಾಡಿಭಂಡಾರ

52—26.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಿಸಿ ಒಂದಿರುತ್ತೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ... ಹೋಗದು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಿಲ್ಲ. ಒಂದು ಜೋತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ... ರಿಗೆ ಬಹು ಮುದ್ದಾದ ಆಭರಣ. ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸರಿಸಮನಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಕ್ಷಾತ್‌ವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಬಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3—0—0.
" " ಕೆಂಪು ಕಲ್ಲಿನ " " 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಬಂಗಾರದ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ... ರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ.

3 ಎಳೇ ಸರ 1ಕ್ಕೆ ರೂ. 3—4—0
4 " " " 4—0—0
ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ, 5 " " " 5—4—0
52—40 ಪೋಸ್ಟ್ ಬಾಕ್ಸ್ ನಂ. 1223, ಮದರಾಸು.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಮೂರು ವರ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ವ ... ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಸಿಗಲಿಕ್ಕೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ಶುಂಠಿ, ಅಡಿಕೆ, ಮೆಣಸು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ... ಬೆಳೆಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—17 **CHILEAN NITRATE COMMITTEE**
Post Box 469, CALCUTTA.

ನೋಟೀಸ್.

ಜಮೀನ್‌ದಾರರ ಸಂಘದ ಆರ್ಗನೈಜರ್ ಕೆಲಸ ಮಾಡಲು ಜನರು ಬೇಕಾಗಿದ್ದಾರೆ. ಅಪೇಕ್ಷೆ ಇರುವವರು ಜನರಲ್ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಈ ಕೆಲಸವನ್ನು ವಹಿಸಿಕೊಳ್ಳಬೇಕಾದರೆ ಯಾವ ಶರತ್ತುಗಳಿಗೆ ಒಳಪಡಬೇಕೆಂಬದನ್ನು ಸಂಘದ ಮಡಿಕೇರಿ ಆಫೀಸಿನಿಂದ ತಿಳಿದುಕೊಳ್ಳಬಹುದು.

ಮಡಿಕೇರಿ, ಸಿ. ಯನ್. ವೆಂಕಟಯ್ಯ,
ತಾ. 1—9—1926. ಜನರಲ್ ಸೆಕ್ರೆಟರಿ.

ಕರ್ಣಾಟಕ

ಎಗ್ಯು ಮಿಕ್ಸ್‌ಚರ್

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಜಾ ಇವೇ ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಚಿಕ್ಕ ಬಾಟ್ಲಿಯೊಂದಕ್ಕೆ ರೂ. 0-12-0
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲು ಸಹಿತ ರೂ. 7—8—0

ಏಜಂಟರು ಬೇಕು. ಕೊಡಗಿನ ಸ್ಥಳಿಕ್ಕ ವರ್ತಕರುಗಳು ತಮ್ಮ ಹೆಸರುಗಳನ್ನು ಔಷಧದ ವ್ಯಾಪಾರಿಗಳ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆಯಬೇಕು. ... ಬ್ಲಾಟಿಂಗ್ ಪೇಪರ, ಪುಕ್ಕಟೆ.

12—4 ಕರ್ಣಾಟಕ ಬ್ರದರ್ಸ್,
ಗಿರಗಾಂವ್, ಮುಂಬಾಯಿ.

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತು ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ವ ... ಇಂಡಿಯನ್ ಪ್ಲಾಂಟರುಗಳೂ ಕೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಾಗಣಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—'26 ಮೇನೇಜರ್,
ಮಡಿಕೇರಿ. " ಕೊಡಗು " ಆಫೀಸು.

ಕನ್ನಡ **ಸ್ವಧರ್ಮ** ಮಾಸ ಪತ್ರಿಕೆ

ಸಂಪಾದಕರು.—ದ ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸಹಜವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ
" ಸ್ವಧರ್ಮ " ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to
"KODAGU" OFFICE, MERCARA.

ಕೊಡಗು.

ವಾರ್ಷಿಕ ಚಂದಾ ರೂ—೩—೦—೦

ಸತ್ಯೇನ ಧರ್ಮೋದಯಃ ವಿದ್ಯಾ ನೀತಿ ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಗುಪ್ತಿರಾ ರಾಷ್ಟ್ರ ಸಂಪದಾ ||

ಸಂಪಾದಕ—ಸಂಧ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

[ಸಂಪುಟ ೬] ಕೊಡಗು, ಸಗ ೧೯೨೬ನೇ ಇಸವಿ ಅಕ್ಟೋಬರ್ ತಾರೀಖು ೧ನೇ ಶುಕ್ರವಾರ [ಸಂಚಿಕೆ ೧೭

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties	4 lbs- Rs 30/ 4 1/2 lbs- Rs. 33/ 5 lbs- Rs 36/-	Doz.
Digging forks 4 prongs	Rs 48/	Doz.
Mamooty forks 4 prongs	Rs. 39/	Doz.
Felling axes — Each	Rs. 3/ & 3/4/	
Planting bars— Each	,, 3/12/	
Weeding forks — Each	,, 1/12/	
Garden trowels	,, 1/12/	

GET IT AT SPENCERS- The House for all requisites.

52—37

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರ ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಸೈಕಿ 45,94,30 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿದವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಜಮೆಯಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½.

ಕ್ಲಿಪ್ತಕಾಲದ ವಿಮೆ ದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ

1923ರಲ್ಲಿ—ರೂ 1,74,00,000
1924 ,, 2,37,00,000
1925 ,, 2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಲ್. ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸೆಕ್ರೆಟರಿ

52—26

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವದು, ತಲೆತ್ರಿ ಕಣ್ಣುರಿ, ಕಿವಿಯಿಂದ ಕೀವು ಸೋರುವದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳೆಲ್ಲ ಬೇಗನೆ ಗುಣವಾಗುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಬಿಳಿದಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಮೇಹಾಂತನಾಶಕ.— ಇದು ಸ್ವಪ್ನದ ಮೂತ್ರಕೃಚ್ಛ್ರ, ಮೂತ್ರ ಹಾಕುವಾಗ ಉರಿಯುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ಮೇಹದಲ್ಲಿ ಉರಿ, ಬಾವು ..., ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲು 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿ ೧ಕ್ಕೆ 6 ಆಣೆ, 3 ಡಬ್ಬಿಗಳಿಗೆ 1, 1 ಡಜನಿಗೆ 3-8 0

ಕಟುಕಷಾಯ ಮಲೇರಿಯ ರಕ್ಷೆ.— ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ ಬಿಡದೆ ಬರುವ ಜ್ವರ 2—4 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಇವುಗಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣಪಡಿಸುತ್ತದೆ. ಸೀಸೆ 1ಕ್ಕೆ ರೂ. 1—8—0; 3ಕ್ಕೆ ರೂ 4—0—0, 6ಕ್ಕೆ ರೂ 7—0—0;

ನಮ್ಮ ಕೆಟಲಾಗು ಕಳುಹಿಸುತ್ತೇವೆ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಬೆಂಗಳೂರು, ಕಂಟೋನ್ಮೆಂಟ್.

52—41

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ಪರತ)
ಧಾತುಪೌಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬ್ಬಲತೆ ನಪುಂಸಕತ್ವ ಶೀಘ್ರಸ್ಖಲನ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವದು. ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯ ಸ್ತಂಭಕ, ಗರ್ಮಿ (ಬಾಹಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಚಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಆತ್ಯಂತ್ಯ ಗುಣವಾಗಿ ಶರೀರಕ್ಕೆ ನವೀನಸತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಡಬ್ಬಿಗೆ ೩೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೩೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩—೧೨—೦

ಪ್ರಮೇಹನಿವಾರಣೆ— ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೀವು, ಹಳದಿಯಂತೆ ಹೋಗಕ್ಕೆ ಕೀವು, ಉರಿ, ವಗೈರೆ ಅಗದಿಶೀಘ್ರದಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ ೩—೮—೦ ಟಿ ಪಿ ಚೇರಿ ಅನುಪಾನ ಪತ್ರಿಕೆ ಔಷಧದ ಸಂಗಡ

ವಿಂಟಾ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು.

ವಿಳಾಸ,—
ವೈದ್ಯ ಜಿ ಎಲ್. ಜೋಶಿ ಮತ್ತು ಕಂಪೆನಿ.
36 ನಂ 6 ಪೋಸ್ಟ ಓಸವಾಳ, ಉತ್ತರ ಕಾನಡಾ.

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY. 3
Telegraphic Address—"SHOOTER" Bombay.

[52—5] Please write for Reduced net prices list for 1926

"ಕೊಡಗು"

ಸ್ವ ೧೯೨೬ನೇ ಇಸವಿ ಅಕ್ಟೋಬರ್ ತಾ. ೧ನೇ ಶುಕ್ರವಾರ

ಆಫ್ರಿಕದಲ್ಲಿ ಹಿಂದೀಯರ ಸ್ಥಿತಿ.

ದಕ್ಷಿಣ ಆಫ್ರಿಕದಲ್ಲಿರುವ ಹಿಂದೀಯರ ಸ್ಥಿತಿಯ ಸಮಸ್ಯೆಯು ಈಗ ಪುನಃ ಹಿಂದೂದೇಶದಲ್ಲಿ ಪ್ರಾಮುಖ್ಯತೆಯನ್ನು ಹೊಂದಿದೆ. ರಾಜಕೀಯ ಮುಂದಾಳುಗಳೂ, ಪತ್ರಿಕಾಕರ್ತರೂ ಈ ವಿಷಯಕ್ಕೆ ಹೆಚ್ಚು ಗಮನ ಕೊಡುತ್ತಿರುವರು. ಇದೆಲ್ಲ ದಕ್ಕೂ ದಕ್ಷಿಣ ಆಫ್ರಿಕದಿಂದ ಇಂಡಿಯಾಕ್ಕೆ ಬಂದಿರುವ ಡೆಪ್ಯುಟೇಶನೇ ಕಾರಣವಾಗಿದೆ. ಆಫ್ರಿಕದಲ್ಲಿ ಇಂಡಿಯನರು ಗುರಿಪಡಿಸಲ್ಪಟ್ಟಿರುವ ಕಷ್ಟಗಳನ್ನು ಸಹಿಸಲಾರದೆ ಅವರು ಇಂಡಿಯಾ ಸರ್ಕಾರಕ್ಕೆ ತಮ್ಮ ಸ್ಥಿತಿಯನ್ನು ತಿಳಿಸಲು ವೈಸರಾಯರಲ್ಲಿಗೆ ಒಂದು ಡೆಪ್ಯುಟೇಶನನ್ನು ಕಳುಹಿಸಿದರು, ಮತ್ತು ಹಿಂದೂದೇಶದ ಜನರೂ ಈ ವಿಷಯ ಚಳವಳವನ್ನೆಬ್ಬಿಸಿದರು. ಆದುದರಿಂದ ನಿಜಸಂಗತಿಯನ್ನು ಅರಿಯಲಿಕ್ಕಾಗಿ ಇಂಡಿಯಾ ಸರ್ಕಾರವು 'ಪ್ಯಾಡಿಸನ್' ಡೆಪ್ಯುಟೇಶನನ್ನು ಆಫ್ರಿಕಕ್ಕೆ ಕಳುಹಿಸಿದರು. ಈ ಡೆಪ್ಯುಟೇಶನಿನವರೂ ಅಲ್ಲಿ ಹಿಂದೀಯರ ಸ್ಥಿತಿಯು ಕಷ್ಟತರವೆಂದೇ ಅಭಿಪ್ರಾಯಕೊಟ್ಟರು. ಇದರ ಮೇಲೆ ಇಂಡಿಯಾ ಸರ್ಕಾರಕ್ಕೂ ದಕ್ಷಿಣ ಆಫ್ರಿಕಾದ ಸರ್ಕಾರಕ್ಕೂ ವ್ಯವಹಾರಗಳು ನಡೆದು ಒಂದು 'ರೌಂಡ್‌ಟೇಬಲ್ ಕಾನ್ಫರೆನ್ಸ್' ಮಾಡುವಂತೆ ಒಪ್ಪಲಾಯಿತು. ಇದರ ಮಧ್ಯೆ ಆಫ್ರಿಕದ ಯೂನಿಯನ್ ಸರ್ಕಾರವು ಭರತಖಂಡದ ಸ್ಥಿತಿಯನ್ನೂ, ಇಲ್ಲಿಯ ಜನರ ಅಭಿಪ್ರಾಯಗಳನ್ನೂ ಖುದ್ದಾಗಿ ನೋಡಿ, ಕೇಳಿ ತಿಳಿಯಲಿಕ್ಕಾಗಿ ಒಂದು ಡೆಪ್ಯುಟೇಶನನ್ನು ಇಲ್ಲಿಗೆ ಕಳುಹಿಸಿರುವುದಾಗಿದೆ. ಈ ಡೆಪ್ಯುಟೇಶನಿನವರು ಕೆಲವು ದಿವಸಗಳ ಹಿಂದೆ ಬೊಂಬಾಯಿಯಲ್ಲಿ ಬಂದು ಇಳಿದಾಗ ಅವರಿಗೆ ವೈಸರಾಯರೂ, ಮಹಾತ್ಮ ಗಾಂಧಿಯವರೂ ಸಹ ಸುಸ್ವಾಗತವನ್ನೀಡಿದರು. ಇವರು ಈಗಾಗಲೇ ಬೊಂಬಾಯಿ, ಪೂನಾ, ಮದ್ರಾಸು, ಕಲ್ಕತ್ತಾ ಪಟ್ಟಣಗಳನ್ನು ಸಂದರ್ಶಿಸಿರುವರು. ಇವರಿಗೆ ಹೋದಲ್ಲೆಲ್ಲಾ ದೊಡ್ಡ ಉದ್ಯೋಗಸ್ಥರೂ, ರಾಜಕೀಯ ಮುಂದಾಳುಗಳೂ ಪಂಗಡಭೇದವನ್ನೆಣಿಸದೆ ಸ್ವಾಗತವನ್ನೀಯುತ್ತಿರುವರು. ಈ ಡೆಪ್ಯುಟೇಶನಿಗೆ ಇಷ್ಟು ಸ್ವಾಗತ ದೊರೆಯಲು ಕಾರಣವೇನೆಂಬುದನ್ನು ಅರಿತುಕೊಳ್ಳಬೇಕಾದರೆ ಆಫ್ರಿಕದಲ್ಲಿ ಹಿಂದೀಯರ ಸಮಸ್ಯೆಯ ಚರಿತ್ರೆಯನ್ನು ಸ್ವಲ್ಪ ಮಟ್ಟಿಗಾದರೂ ತಿಳಕೊಳ್ಳಬೇಕಾದದ್ದು ಅವಶ್ಯವಾಗಿದೆ.

ಭಾರತೀಯರು ಪ್ರಥಮತಃ ಆಫ್ರಿಕಕ್ಕೆ ಹೋಗಿ ನೆಲಸಿದುದು 1860 ರಲ್ಲಾಗಿದೆ. ನೆಟಾಲ್ ಪ್ರಾಂತ್ಯದಲ್ಲಿ ಕಬ್ಬಿನ ವ್ಯವಸಾಯ ನಡಿಸಲಿಕ್ಕಾಗಿ ಕೆಲಸಗಾರರು ಬೇಕಾದುದರಿಂದ ಅಲ್ಲಿಯ ಸರ್ಕಾರವು ಇಂಡಿಯಾದಿಂದ ಜನರನ್ನು ದಾರಿಖರ್ಚು ಕೊಟ್ಟು ಕರಿಸಿಕೊಂಡದ್ದಲ್ಲದೆ ಅವರು ಅಲ್ಲಿಯೇ ನೆಲೆಸುವಂತೆ ಅವರಿಗೆ ಉಚಿತವಾಗಿ ಜಾಗವನ್ನೂ ಸಹ ಕೊಟ್ಟು ಉತ್ತೇಜನ ಪಡಿಸಿದರು. ಅಲ್ಲದೆ ಬೇರೆ ಬ್ರಿಟಿಷ್ ಪ್ರಜೆಗಳಂತೆಯೇ ಇವರಿಗೂ ವರ್ಣಭೇದಗಳನ್ನೆಣಿಸದೆ ಎಲ್ಲಾ ಹಕ್ಕುಗಳು ದೊರೆಯಾಗುವವೆಂದೂ, ಇವರನ್ನು ಯಾವ ವಿಧದ ತೊಂದರೆಗೂ ಈಡುಮಾಡಲಿಕ್ಕಿಲ್ಲವೆಂದೂ ಬ್ರಿಟಿಷ್ ಮತ್ತು ಯೂನಿಯನ್ ಸರ್ಕಾರವು ಆಗಾಗ್ಯೆ ಭರವಸೆಯನ್ನು ಕೊಡುತ್ತಿದ್ದವು. ಆದುದರಿಂದ ಕೆಲವು ವರ್ಷಗಳಲ್ಲೇ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಹಿಂದೂದೇಶದಿಂದ ಹೋಗಿ ನಟಾಲಿನಲ್ಲಿ ವಸತಿ ಮಾಡಿಕೊಂಡು ಖಾಯಂವಾಸಿಗಳಾದರು. ವ್ಯಾಪಾರ ಅಭಿವೃದ್ಧಿಗಾಗಿ ಸೂರತ್ ಮತ್ತು ಪಶ್ಚಿಮ ಕರಾವಳಿಯಿಂದ ಹೆಚ್ಚಾಗಿ ಹಿಂದೀ ಮುಸಲ್ಮಾನರನ್ನು ಅಲ್ಲಿಗೆ ಕರೆಸಿಕೊಂಡರು. 1900ರ ನಂತರ ಅಲ್ಲಿಯ ಯೂರೋಪಿಯನ್ ವ್ಯಾಪಾರಸ್ಥರಿಗೆ ಹಿಂದೂಸ್ಥಾನದವರೊಡನೆ ಸ್ಪರ್ಧಿಸಲು ಸಾಧ್ಯವಾಗದ್ದರಿಂದ ಇಂಡಿಯನರನ್ನು ತೊಂದರೆಪಡಿಸಲು ಪ್ರಾರಂಭಿಸಿದರು. ಇಂಡಿಯಾ ಸರ್ಕಾರದವರು ಇದನ್ನು ಪ್ರತಿಭಟಿಸಿದ್ದಲ್ಲದೆ ಇಂಡಿಯಾದಿಂದ ಆಫ್ರಿಕಕ್ಕೆ ಜನರು ಹೋಗಲು ಬಿಡಲಿಲ್ಲ.

ಸುಮಾರು ಮೂವತ್ತು ವರ್ಷಗಳನಂತರ ಅಲ್ಲಿಯ ಸರ್ಕಾರವು ಹಿಂದೀಯರ ಜನಸಂಖ್ಯೆಯು ಹೆಚ್ಚುತ್ತಿರುವುದನ್ನು ನೋಡಿ ಭಯಪಟ್ಟು ಅವರು ಅಲ್ಲಿಗೆ ಹೋಗುವದನ್ನು ನಿಲ್ಲಿಸಲು ಯತ್ನಿಸಿದಲ್ಲದೆ ಅವರಿಗೆ ಕೊಟ್ಟಿದ್ದ ಜಾಗವನ್ನು ಸಹ ವಾಪಸು ತೆಗೆದುಕೊಂಡು ವಾಪಸು ಹಿಂದೂದೇಶಕ್ಕೆ ಬರುವವರಿಗೆ ದಾರಿ ಖರ್ಚುಕೊಡಲು ಸಿದ್ಧರಾದರು.

ಆಫ್ರಿಕದ 'ಬೋಯರ್, ರಿಪಬ್ಲಿಕ್' ಸರ್ಕಾರದ ಕೈಕೆಳಗೆ ಹಿಂದೀಯರು ಬಹಳ ಕಷ್ಟಕ್ಕೊಳಗಾದರು. ಬೋಯರ್ ಯುದ್ಧದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಜಯವಾಗಿ ಸರ್ಕಾರವು ಬದಲಾದರೂ ಕೂಡ ಇಂಡಿಯನರ ಸ್ಥಿತಿಯು ಉತ್ತಮವಾಗಲಿಲ್ಲ. ಭಾರತೀಯರ ಕಷ್ಟಗಳನ್ನು ನೋಡಿ ಸಹಿಸಲಾರದೆ ಮ. ಗಾಂಧಿಯವರು ಕೆಲಸಗಾರರ ಮುಷ್ಕರದ 'ಪ್ಯಾಸಿವ್ ರೆಸಿಸ್ಟೆನ್ಸ್' ಚಳವಳವನ್ನು ನಡಿಸಿದರು. ಇದರ ಪ್ರತಿಫಲವಾಗಿ ಸರಕಾರದವರು ಒಂದು ಕಮಿಶನನ್ನು ನೇಮಿಸಿ ಮುಷ್ಕರ ಚಳವಳದ ಕಾರಣಗಳನ್ನು ಕಂಡುಹಿಡಿದದರ ಮೇಲೆ 1914 ರಲ್ಲಿ ಸ್ಮಟ್ಸ್-ಗಾಂಧಿ ಒಪ್ಪಂದವಾಯಿತು. ಇದಾದನಂತರವೂ ಆಫ್ರಿಕದಲ್ಲಿ ಇಂಡಿಯನರ ಸ್ಥಿತಿಯು ಮತ್ತಷ್ಟು ಹೀನವಾಗುತ್ತಾ ಬಂತು.

ಹಿಂದೀಯರಿಗೆ ವಿರೋಧವಾದ ಕಾನೂನುಗಳು ಹಲವು ರಗ ಆಫ್ರಿಕದಲ್ಲಿ ಜಾರಿಯಲ್ಲಿವೆ. ರಿಜಿಸ್ಟ್ರೇಶನ್ ಸರ್ಟಿಫಿಕೇಟಿಲ್ಲದೆ ಇಂಡಿಯನರು ಟ್ರಾನ್ಸ್‌ವಾಲ್ ಪ್ರಾಂತ್ಯಕ್ಕೆ ಹೋಗಕೂಡದು. ಇಂಥಾ ಸರ್ಟಿಫಿಕೇಟನ್ನು ಯಾವ ಆಫೀಸರು ಕೇಳಿದರೂ ತೋರಿಸತಕ್ಕದ್ದು. ಸಂಶಯಕ್ಕೊಳಗಾದವರನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು. ಅಂಥವರಿಗೆ ಜಾಮೀನಿನ ಅವಕಾಶ ಕೊಡದೆ 3 ತಿಂಗಳು ಕಠಿಣ ಸಜೆ ಮತ್ತು ಅಲ್ಲಿಂದ ಗಡೀಪಾರು ಮಾಡುವ ಶಿಕ್ಷೆ. ಕೆಲವು ತರದ ಶಿಕ್ಷೆಗೊಳಗಾದವರು ಯೂನಿಯನಿಂದ ಹೊರಗೆ ಹೋಗತಕ್ಕದ್ದು. ತಕ್ಷೀರು ಮಾಡಲಿಲ್ಲವೆಂದು ರುಜುವಾತು ಮಾಡುವ ಭಾರವು ಅಪರಾಧಿಯದಾಗಿದೆ. ಮನೆಯ ಆಳುಗಳಲ್ಲದೆ ಬೇರೆ ಯಾವ ಹಿಂದೀಯನೂ ಆರೇಂಜ್ ಫ್ರೀಸ್ಟೇಟಿನಲ್ಲಿರಕೂಡದು. ಟ್ರಾನ್ಸ್‌ವಾಲಿನಲ್ಲಿ ಮುನ್ಸಿಪಾಲಿಟಿಯವರು ನಿಶ್ಚೈಸಿದ ಸ್ಥಳಗಳಲ್ಲಿ ಮಾತ್ರ ಹಿಂದೂಸ್ಥಾನದವರು ಜೀವಿಸತಕ್ಕದ್ದು. ಇದಕ್ಕೆ ತಿಂಗಳವಾರು ಬಾಡಿಗೆ ಕೊಡಬೇಕು. ಇದರಿಂದ ಹೊರಗೆ ಸ್ವಂತ ಮನೆ ಮಾಡಿಕೊಳ್ಳಕೂಡದು. ಜೋಹಾನ್ಸ್‌ಬರ್ಗ್‌ದಲ್ಲಿ ಇವರು ಇರುವ ಕೇರಿಯನ್ನು ಮುನ್ಸಿಪಾಲಿಟಿಯವರು ಶುಚಿಮಾಡುವುದೇ ಕಡಿಮೆ. ನೆಟಾಲಿನಲ್ಲಿಯೂ ಇತ್ತೀಚೆಗೆ ವಾಸಸ್ಥಳವನ್ನು ಪ್ರತ್ಯೇಕಿಸಿಡುವ ಟ್ರಾನ್ಸ್‌ವಾಲಿನ ಪದ್ಧತಿಯನ್ನು ಅನುಸರಿಸಲು ಯತ್ನಿಸುತ್ತಿರುವರು.

ವ್ಯಾಪಾರ ಸಂಬಂಧವಾಗಿಯೂ ಹಿಂದೂಸ್ಥಾನದವರಿಗೆ ತುಂಬಾ ಅಡಚಣೆಗಳಿವೆ. ವಾಸಮಾಡಲು ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಪಡೆದರೂ ಕೂಡ ಅಂಥವರು ವ್ಯಾಪಾರಕ್ಕೆ ಬೇರೊಂದು ಲೈಸೆನ್ಸು ಹೊಂದಬೇಕು. ಟ್ರಾನ್ಸ್‌ವಾಲ್, ನೆಟಾಲ್ ಮುಂತಾದ ಸ್ಥಳಗಳಲ್ಲಿ ಮುನ್ಸಿಪಾಲಿಟಿಯವರು ವಾಡಿಕೆಯಾಗಿ ಹಿಂದೀಯರಿಗೆ ವ್ಯಾಪಾರದ ಲೈಸೆನ್ಸುಗಳನ್ನು ಕೊಡಲು ತಿರಸ್ಕರಿಸುತ್ತಾರೆ. ಇನ್ನು ಕೆಲವು ಪ್ರಾಂತ್ಯಗಳಲ್ಲಿ 'ಗೋಲ್ಡ್ ಲಾ' ದ ಪ್ರಕಾರ ವಾಸಕ್ಕೆ ಮಾತ್ರವಲ್ಲ, ಚಿನ್ನದ ಕೆಲಸ ಮತ್ತು ವ್ಯಾಪಾರಗಳನ್ನು ಸಹ ಮಾಡಲು ಬಿಡುವುದಿಲ್ಲ. ಟ್ರಾನ್ಸ್‌ವಾಲಿನಲ್ಲಿ ಹಿಂದೂಸ್ಥಾನದವರನ್ನೊಳಕೊಂಡ ಕಪ್ಪು ಜನರ ಮಕ್ಕಳಿಗೆ ಪ್ರೈಮರಿ ವಿದ್ಯಾಭ್ಯಾಸ ಮಾತ್ರ ಪಡೆಯಲು ಹಕ್ಕಿದೆ. ಸೆಕಂಡರಿ ಮತ್ತು ಪ್ರೌಢ ವಿದ್ಯಾಭ್ಯಾಸವು ಯೂರೋಪಿಯನರಿಗೆ ಮಾತ್ರವಾಗಿದೆ. ನೆಟಾಲಿನಲ್ಲಿ ಹಿಂದೀಯರು 4 ನೇ ಸ್ಟಾಂಡರ್ಡ್ ವರೆಗೆ ಮಾತ್ರ ಓದಬಹುದು.

ಯೂನಿಯನಿನಲ್ಲಿ ರೈಲ್ವೆಗಳೆಲ್ಲಾ ಸರ್ಕಾರದವರದಾಗಿವೆ. ವಾಡಿಕೆಯಾಗಿ ರೈಲಿನಲ್ಲಿ ಹಿಂದೀಯರು ಅಲ್ಲಿಯ ಕಪ್ಪು ನಿವಾಸಿಗಳೊಂದಿಗೇ ಪ್ರಯಾಣ ಮಾಡತಕ್ಕದ್ದು. ಮೇಲ್ದರಗತಿಯ ಹಿಂದೀಯರಾದರೆ ಯೂರೋಪಿಯನ್ನರವರಿಗೆ ರಿಸರ್ವಮಾಡಿಟ್ಟಿರುವ ಗಾಡಿಗಳಲ್ಲಿ ಹೋಗಬಹುದು. ಕೆಲವು ವರ್ಷಗಳ ಹಿಂದೆ ರೈಲ್ವೆಸ್ಟೇಶನಿನಲ್ಲಿಯೂ ಕೂಡ ಭಾರತೀಯರನ್ನು ಬೇಲಿ ಹಾಕಲ್ಪಟ್ಟ ಪ್ರತ್ಯೇಕ ಸ್ಥಳದಲ್ಲಿ ನಿಲ್ಲಿಸಲು ಮಾಡಿದ ಯತ್ನದಿಂದ ತುಂಬಾ ಗಲಾಟೆಯುಂಟಾಯಿತು. ಜೋಹನ್ಸ್‌ಬರ್ಗ್ ಮತ್ತು ಪ್ರಿಟೋರಿಯಾದಲ್ಲಿರುವ ಟ್ರಾಮ್‌ಗಳೆಲ್ಲವೂ ಮುನ್ಸಿಪಾಲಿಟಿಯವು. ಅದರಲ್ಲಿ ಕಪ್ಪು ಜನರನ್ನು ಹಿಂದೆ ಮಾತ್ರ ಕೂರಲಿಕ್ಕೆ ಬಿಡುವರು. ನೆಟಾಲಿನಲ್ಲಿಯೂ ಹೀಗೆ ಮಾಡಲು ಪ್ರಯತ್ನಿಸಿದಾಗ ಹಿಂದೀಯರಿಗೂ ಕಂಡಕ್ಟರುಗಳಿಗೂ ಹಲವು ಸಾರಿ ಜಗಳಗಳುಂಟಾಗಿವೆ.

ಟ್ರಾನ್ಸ್‌ವಾಲಿನಲ್ಲಿ ಇಂಡಿಯನರಿಗೆ ರಾಜಕೀಯ ಮತ್ತು ಓಟಿನ ಹಕ್ಕುಗಳ್ಯಾವವೂ ಇಲ್ಲ. ನೆಟಾಲಿನಲ್ಲಿಯೂ ಇತ್ತೀಚಿನ ಕಾನೂನುಗಳಿಂದ ಇದ್ದ ಹಕ್ಕುಗಳನ್ನು ಹೋಗಲಾಡಿಸಲು ಪ್ರಯತ್ನ ನಡೆಯುತ್ತದೆ. ಪ್ರತಿನಿಧಿತ್ವ ಇಲ್ಲದೆ ಹೋದರೂ ಕೂಡ ಇವರು ಯೂರೋಪಿಯನರಂತೆಯೇ ಕಂದಾಯ ತೆರಿಗೆಗಳನ್ನು ಕೊಡತಕ್ಕದ್ದು.

ಟ್ರಾನ್ಸ್‌ವಾಲ್ ಮತ್ತು ನೆಟಾಲ್ ಪ್ರಾಂತ್ಯಗಳು ಯೂನಿಯನ್ ಸರ್ಕಾರಕ್ಕೆ ಸೇರಿಸಲ್ಪಟ್ಟಂದಿನಿಂದೀಚೆಗೆ ಹಿಂದೀಯರ ತೊಂದರೆಗಳು ಹೆಚ್ಚುತ್ತಾ ಬರುತ್ತಿವೆ. ಅಲ್ಲಿಯ ಸರ್ಕಾರದ ಈ ತತ್ವದ ಉದ್ದೇಶವು ಹಿಂದೂಸ್ಥಾನದವರನ್ನು ಸಂಪೂರ್ಣ ಪ್ರತ್ಯೇಕಿಸಿಡುವದು ಅಥವಾ ಅವರಿಗೆ ಅಲ್ಲಿರಲು ಸಾಧ್ಯವಿಲ್ಲದಂತೆ ಮಾಡಿ ಆಫ್ರಿಕವನ್ನು ಬಿಟ್ಟು ಅವರವರ ದೇಶಗಳಿಗೆ ಹೋಗುವಂತೆ ಮಾಡುವುದೇ ಆಗಿದೆಯೆಂದು ತೋರುತ್ತದೆ.

ಈಗ ದಕ್ಷಿಣ ಆಫ್ರಿಕದಲ್ಲಿ ಒಟ್ಟು 161,20) ಭಾರತೀಯರಿರುವರು. ಮರಳುಭೂಮಿಯಂತಿದ್ದ ಅಲ್ಲಿಯ ಹಲವು ಪ್ರಾಂತ್ಯಗಳನ್ನು ತಮ್ಮ ಬೆವರು ಸುರಿಸಿ ಫಲವತ್ತಾಗಿ ಮಾಡಿದ ಹಿಂದೀಯರ ಈಗಿನ ಪಾಡು ಅವರ ಸಹೋದರರಾದ ಬೇರೆ ಹಿಂದೀಯರಲ್ಲಿ ಯಾರಿಗೆ ತಾನೇ ಕೋಪೋದ್ರೇಕವಾಗುವ ದುಃಖವನ್ನುಂಟುಮಾಡದಿರುವದು. ಅಲ್ಲಿಯ ಸರ್ಕಾರದವರು ಅವರನ್ನು ನೋಯಿಸಲು ಉತ್ತೇಜನ ಕೊಟ್ಟು ತಾವಾಗಿಯೇ ಕರೆಸಿಕೊಂಡು ಈಗ ಮೇಲೆ ಸೂಚಿಸಿದಂಥ ಕಾನೂನುಗಳ ಮೂಲಕ ತೊಂದರೆ ಕೊಡುತ್ತಿರುವದಕ್ಕೆ ನ್ಯಾಯಶೀಲರಾದ ಯಾವ ಜನಾಂಗದವರಾದರೂ ಒಪ್ಪುವರೇ? ಆತ್ಮ ಗೌರವವಿರುವ ಜನಾಂಗವ್ಯಾವದೂ ಈ ಹೀನಾವಸ್ಥೆಯನ್ನು ಸಹಿಸಲಾರದಷ್ಟೆ. ಆದರೆ ಏನು ತಾನೇ ಮಾಡಲಾಗುವುದು. ನಮ್ಮ ಹಿಂದೂದೇಶದಲ್ಲೇ ನಮಗೆ ಸ್ವತಂತ್ರ ದೊರೆತಿಲ್ಲವು. ನಮ್ಮ ದೇಶದ ಸರ್ಕಾರವು ನಮ್ಮ ಪ್ರತಿನಿಧಿಗಳ ಹೇಳಿಕೆಯಂತಿದ್ದರೆ ದಕ್ಷಿಣ ಆಫ್ರಿಕದ ಯೂನಿಯನ್ ಸರ್ಕಾರದ ವರ್ತನೆಗೆ ಸರಿಯಾಗಿ ಪ್ರತಿಭಟಿಸುವ ಶಕ್ತಿಯು ನಮ್ಮ ದೇಶದವರಿಗೆ ಇರುತ್ತಿತ್ತು. ಆದುದರಿಂದಲೇ ಇಂಥಾ ಕಷ್ಟಗಳಿಗೆ ಸ್ವರಾಜ್ಯವೇ ಔಷಧಿಯೆಂದು ಹೇಳಬೇಕಾಗಿದೆ. ಮತ್ತಿನ್ನು ಇದ್ದರೂ ಕೆಲವು ವರ್ಷಗಳಲ್ಲಾದರೂ ಹಿಂದೂದೇಶಕ್ಕೆ ಯೂನಿಯನ್ ಸರ್ಕಾರದಂಥ ಸ್ವತಂತ್ರ ಸರ್ಕಾರವು [illegible] ಯುವದೆಂಬುದನ್ನು ದಕ್ಷಿಣ ಆಫ್ರಿಕದವರು ಮರೆಯದೇ ಇರಲಿ. ಆಗಲಾದರೂ ಹಿಂದೀಯರಿಗೆ ಪರದೇಶಗಳಲ್ಲಿ ಸಮಾನ [illegible] ನ್ಯಾಯವೂ ದೊರೆಯುವಂತೆ ಮಾಡಲಾಗುವದಲ್ಲವೆ. [illegible] ಯೂನಿಯನ್ ಸರ್ಕಾರದವರು ಅಸ್ಟರವರೆಗೆ ಕಾಯದೆ [illegible] ಸಹಾನುಭೂತಿಯನ್ನು ತೋರಿಸಲಿಕ್ಕಾಗಿ ಹಿಂದೂದೇಶಕ್ಕೆ [illegible] ದಿರುವ ಡೆಪ್ಯುಟೇಶನಿನವರು ಇಲ್ಲಿಯ ಸ್ಥಿತಿಯನ್ನೂ, ಜನರ [illegible] ತೃಪ್ತಿಯನ್ನೂ ಚೆನ್ನಾಗಿ ವಿಚಾರಿಸಿ ಅರಿತುಕೊಂಡು ಹೋ[illegible] ಇನ್ನಾದರೂ ಅಲ್ಲಿ ಹಿಂದೀಯರ ಮೇಲೆ ಜಾರಿಯಲ್ಲಿ[illegible] ನ್ಯಾಯವಲ್ಲದ ಕಾನೂನುಗಳನ್ನು ರದ್ದುಮಾಡಿ ಹಿಂದೂ[illegible] ದೊಂದಿಗೆ ಸ್ನೇಹಭಾವವನ್ನು ಬೆಳೆಸುವರಾಗಿ ನಂಬುತ್ತೇವೆ.

ದಿವಂಗತ ಪುತ್ತಮನೆ ಗಣಪಯ್ಯ ಯಂ. ಎಲ್. ಸಿ. ಯವರು.

ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಕಿಗ್ಗಟ್ಟುನಾಡಿನವರ ಪ್ರತಿನಿಧಿಗಳಲ್ಲಿ ಒಬ್ಬರಾದ ಮ. ರಾ. ಶ್ರೀ. ಪುತ್ತಮನೆ ಗಣಪಯ್ಯನವರು ಹಠಾತ್ತನೆ ಈ ತಾ. 25ರಲ್ಲಿ ಶಿವಾಧೀನರಾದದ್ದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದೆ. ಕಳೆದ ಶನಿವಾರ ಇವರು ಬೆಕ್ಕೆಸೊಡ್ಲೂರು ಶಾಲೆಯ ಹೊಸಕಟ್ಟಡವನ್ನು ತೆರೆಯುವ ಸಮಾರಂಭದ ಅಧ್ಯಕ್ಷರಾಗಲು ಒಪ್ಪಿಕೊಂಡು ಅಲ್ಲಿಗೆ ಹೊರಡಲಿಕ್ಕಾಗಿ ತಯಾರಾಗಿರಲು ಸ್ವಲ್ಪ ವಾಂತಿಮಾಡಿ ಮೃತಿಯನ್ನು ಹೊಂದಿದರೆಂದು ತಿಳಿಯಬರುತ್ತದೆ.

ಇವರಿಗೆ ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದ್ದರಿಂದ ಅಂಥ ವಿದ್ಯಾವಂತರೆನ್ನಿಸಿಕೊಳ್ಳದಿದ್ದರೂ ಕನ್ನಡವು ಚೆನ್ನಾಗಿ ಬರುತ್ತಿತ್ತು. ದೇಶೋದ್ಧಾರದ ಕಾರ್ಯಗಳನ್ನು ಮಾಡಬೇಕಾದರೆ ಇಂಗ್ಲಿಷ್ ಬರಹ ಗೊತ್ತಿರಲೇ ಬೇಕೆಂಬುದು ತಪ್ಪು ಅಭಿಪ್ರಾಯವೆಂದು ಇವರ ಜೀವಚರಿತ್ರೆಯಿಂದ ಗೊತ್ತಾಗುವುದು. ಇವರು ಜನಸಮುದಾಯದ ಕೆಲಸಗಳನ್ನು ಮಾಡುವುದರಲ್ಲಿ ತುಂಬಾ ಶ್ರದ್ಧೆ ವಹಿಸುತ್ತಿದ್ದರು. ಹಲವು ವರ್ಷಗಳಿಂದ ಪೊನ್ನಂಪೇಟೆ ನಾಡು ಸಂಘದ, ಇತ್ತೀಚೆಗೆ ಮತ್ತಾರು ಗ್ರಾಮ ಸಂಘದ ಅಧ್ಯಕ್ಷರಾಗಿದ್ದುಕೊಂಡು ಮಾಡಿದ ಕೆಲಸಗಳು ಸಹಕಾರ ಚಳವಳದಲ್ಲಿ ಇವರಿಗಿದ್ದ ಅಭಿರುಚಿಯನ್ನು ವ್ಯಕ್ತಗೊಳಿಸಿದರು. ಲಂಟಾನ ನಾಶದಲ್ಲಿಯೂ, ಜಾನುವಾರು ಪೋಷಣೆಯಲ್ಲಿಯೂ ಇವರು ಮುತುವರ್ಜಿವಹಿಸಿ ಕೆಲಸ ಮಾಡುತ್ತಿದ್ದರಲ್ಲದೆ ಈ ವಿಷಯಗಳಲ್ಲಿ ನೆರೆಕರೆಯ ಹಲವರಿಗೆ ಉತ್ತೇಜನಕೊಡುತ್ತಿದ್ದರು. ಅನೇಕ ವರ್ಷಗಳಿಂದ ಕೊಡಗಿನ ವ್ಯಾಪಾರ ಸಂಘದ ಕಮಿಟಿ ಮೆಂಬರಾಗಿಯೂ, ಕೆಲವು ವರ್ಷಗಳಿಂದ "ಕೊಡಗು" ಕಂಪೆನಿಯ ಡೈರೆಕ್ಟರಾಗಿಯೂ ಸಮುದಾಯದ ಕೆಲಸನಡಿಸಿದರು. ಇವರು ಸಮುದಾಯದ ಹಿತಕ್ಕಾಗಿ ಮಾಡಿದ ಕೆಲಸಗಳಿಂದ ಗಳಿಸಿದ್ದ ಜನರ ಅನುರಾಗ ಮತ್ತು ವಿಶ್ವಾಸಗಳಿಂದಲೇ ಇವರು ಕೊಡಗಿನ ಪ್ರಥಮ ಕೌನ್ಸಿಲು ಚುನಾವಣೆಯಲ್ಲಿ ಜಯಶೀಲರಾದದ್ದಾಗಿದೆ. ಕೌನ್ಸಿಲಿನಲ್ಲಿ ನಡೆಯುತ್ತಿದ್ದ ಚರ್ಚೆಗಳನ್ನು ಇಂಗ್ಲಿಷ್ ಬಲ್ಲಂಥ ತಮ್ಮ ಜೊತೆಗಾರ ಮೆಂಬರುಗಳನ್ನು ಕೇಳಿ ಅರಿತುಕೊಂಡು ಓಟರುಗಳ ಹಿತವನ್ನನುಸರಿಸಿಯೇ ಓಟುಕೊಡುತ್ತಿದ್ದರು. ಆದುದರಿಂದ ಕೌನ್ಸಿಲಿನಲ್ಲಿಯೂ ಇವರು ವಹಿಸಿಕೊಂಡ ಪ್ರತಿನಿಧಿತ್ವದ ಜವಾಬ್ದಾರಿಯನ್ನು ತೃಪ್ತಿಕರವಾಗಿಯೇ ನಡಿಸಿದರೆಂಬುದನ್ನು ಯಾರೂ ಅಲ್ಲಗಳೆಯಲಾರರು. ಗ್ರಾಮಪಂಚಾಯತಿ, ಪಾನನಿಷೇಧ ಕಾನೂನುಗಳನ್ನು ಸಾಧಿಸಬೇಕೆಂಬುದರಲ್ಲಿ ಬಹು ಉತ್ಸಾಹವುಳ್ಳವರಾಗಿದ್ದರು. ಕೌನ್ಸಿಲಿನಲ್ಲಿ ಎಷ್ಟೇ ನಾಗಲಿ ರೈತರ ಮುಖ್ಯವಾಗಿ ಕಿಗ್ಗಟ್ಟುನಾಡಿನವರ ಪರಿಸ್ಥಿತಿಗಳನ್ನು ಎತ್ತಿ ಹೇಳಲು ಮರೆಯುತ್ತಿರಲಿಲ್ಲ.

ಒಳ್ಳೇ ಅನುಕೂಲಸ್ಥರಾಗಿದ್ದ ಇಂಥಾ ಪಬ್ಲಿಕ್ ಕೆಲಸಗಾರರೊಬ್ಬರು ತನ್ನ 52ನೇ ವರ್ಷ ಪ್ರಾಯದಲ್ಲಿ ಮರಣವನ್ನು ಹೊಂದಿದ್ದು ದೇಶಕ್ಕೆ ಒಂದು ದೊಡ್ಡ ನಷ್ಟವಾಗಿದೆ. ಇವರ ಅಕಾಲ ಮರಣದ ವಾರ್ತೆಯು ಇಡೀ ದೇಶದವರಿಗೆ ಮುಖ್ಯವಾಗಿ ಇವರನ್ನು ಚೆನ್ನಾಗಿ ಬಲ್ಲಂಥ ಕಿಗ್ಗಟ್ಟುನಾಡಿನ ಜನರಿಗೆ ಶೋಕಿಸುವವರಿಗೆ ವ್ಯಸನವನ್ನುಂಟುಮಾಡದೆ ಇರಲಾರದು. ಭಗವಂತನು ಪರಲೋಕದಲ್ಲಿ ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ, ಇಹಲೋಕದಲ್ಲಿ ಇವರ ಪತ್ನಿಗೂ, ಬಂಧುವರ್ಗದವರಿಗೂ ಈ ದುಃಖವನ್ನು ತಾಳಲು ಧೈರ್ಯವನ್ನು ಕೊಡಲೆಂದೂ ಪ್ರಾರ್ಥಿಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ 10ನೆಯ ಪ್ರಕರಣ.

ಪ್ರಿಟೋರಿಯಾದಲ್ಲಿ ಮೊದಲನೆಯ ದಿನವು

ದಾದಾ ಅಬ್ದುಲ್ಲಾರವರ ಪ್ಲೀಡರು ಯಾರನ್ನಾದರೂ ಸ್ಟೇಷನ್ನಿಗೆ ಕಳುಹಿಸುತ್ತಾರೆಂದು ನಾನು ತಿಳಿದಿದ್ದೆನು. ಪ್ರಿಟೋರಿಯಾದಲ್ಲಿರುವ ಭಾರತೀಯರಾರಿಗಾದರೂ ತಿಳಿಸಿದ್ದಲ್ಲಿ ಅವರೂ ಬರಬಹುದೆಂದು ನಾನು ಭಾವಿಸಿದ್ದೆನು. ಆ ಪ್ಲೀಡರು ಯಾರನ್ನೂ ಕಳುಹಿಸಿರಲಿಲ್ಲ. ಆ ದಿವಸ ಭಾನುವಾರವಾದ್ದುದರಿಂದ ಕಳುಹಿಸಲು ಅವಕಾಶವಾಗಲಿಲ್ಲವೆಂದು ನನಗೆ ...ವಾಯು ತಿಳಿದಿತು. ಎಲ್ಲಿಗೆ ಹೋಗಬೇಕೋ ಏನು ಮಾಡಬೇಕೋ ಎಂಬುದಾವುದೂ ನನಗೆ ತಿಳಿಯಲಿಲ್ಲವು. ಹೊಟೇಲಿನವರಾದರೂ ಭಾರತೀಯರಾಗಿದ್ದಲ್ಲಿ ನನಗೆ ಇಳಿದುಕೊಳ್ಳಲು ಸ್ಥಳಕೊಡುವರೆಂಬ ಸಂಶಯವು ನನ್ನನ್ನು ಬಾಧಿಸುತ್ತಿತ್ತು. ...ದಲ್ಲಿ ಪ್ರಿಟೋರಿಯಾ ಸ್ಟೇಷನ್ನಿನಲ್ಲಿ ಏರ್ಪಾಡು ಸರಿಯಾಗಿ[ರಲಿಲ್ಲ]ವು ಪ್ರಯಾಣಿಕರ ಸಂಖ್ಯೆಯು ಕೂಡ ಕೊಂಚವಾಗಿ ಇದ್ದಿತು. ಅವರೆಲ್ಲರೂ ಹೊರಟು ಹೋಗುವವರೆಗೂ ನಾನು ಅಲ್ಲೇ ನಿಂತಿದ್ದೆನು. ಅನಂತರ ಟಿಕೆಟ್ಟುಕಲೆಕ್ಟರಿಗೆ ಟಿಕೆಟ್ಟನ್ನು ಕೊಟ್ಟು ಯಾವುದಾದರೂ ಹೊಟೇಲಿನಲ್ಲಾಗಲಿ, ಮತ್ತೆಲ್ಲಾಗಲಿ ಇಳಿಯಲು ಸ್ಥಳವನ್ನು ತೋರಿಸಿಕೊಡುವಿರಾ ಎಂದು ಆತನಿಗೆ ವಿಚಾರಮಾಡಬೇಕೆಂದೂ, ಸ್ಥಳವು ದೊರಕದಿದ್ದಲ್ಲಿ ಸ್ಟೇಷನ್ನಿನಲ್ಲೇ ಮಲಗಿರಬೇಕೆಂದೂ ಯೋಚಿಸಿದ್ದೆನು. ಇಂಥ ವಿಷಯ ಟಿಕೆಟ್ಟುಕಲೆಕ್ಟರನ್ನು ಕೇಳಿದಲ್ಲಿ ಅತಿಷ್ಟ ಅವಮಾನಿಸಬಹುದೆಂಬ ಸಂಶಯವು ಬಾಧಿಸುತ್ತಿದ್ದಿತು. ಎಲ್ಲರೂ ಹೊರಟುಹೋದ ಮೇಲೆ ನಾನು ಟಿಕೆಟ್ಟುಕಲೆಕ್ಟರಿಗೆ ಟಿಕೆಟ್ಟನ್ನು ಕೊಟ್ಟು ಸ್ಥಳದ ವಿಷಯವನ್ನು ಕುರಿತು ಕೇಳಿದೆನು. ಆತನು ಮರ್ಯಾದೆಯಿಂದಲೇ ಮಾತನಾಡಿದನಲ್ಲದೆ ಸ್ಥಳವಿಚಾರದಲ್ಲಿ ತಾನು ಸಹಾಯವನ್ನು ಮಾಡಲಾರೆನೆಂದನು. ಆಗ ಅಲ್ಲಿ ಅಮೇರಿಕಾ ದೇಶಸ್ಥನಾದ ನೀಗ್ರೋ ನಿಂತಿದ್ದನು. 'ನೀವು ಹೊಸಬರಾಗಿ ಒಂದಂತಿದೆ. ನನ್ನ ಕೂಡ ಬಂದಲ್ಲಿ ಒಂದು ಚಿಕ್ಕ ಹೋಟೇಲನ್ನು ತೋರಿಸುವೆನು. ಅದನ್ನು ಒಬ್ಬ ಅಮೇರಿಕಾ ದೇಶಸ್ಥನಿಟ್ಟಿರುವನು. ಆತನನ್ನು ನಾನು ಚನ್ನಾಗಿ ಬಲ್ಲೆನು. ಆತನು ನಿಮಗೆ ಸ್ಥಳಕೊಡುವನು,' ಎಂದು ಆ ನೀಗ್ರೋ ಹೇಳಿದನು. ನನಗೆ ನಂಬಿಗೆಯು ಹುಟ್ಟಲಿಲ್ಲವಾದರೂ ಆತನ ಅಪ್ರಾರ್ಥಿತ ಸಹಾಯಕ್ಕಾಗಿ ಕೃತಜ್ಞತೆಯನ್ನು ತಿಳಿಸಿ ಆತನ ಕೂಡ ಹೊರಟೆನು. ಜಾನ್ಸನ್ ಫ್ಯಾಮಿಲಿ ಹೋಟೇಲು ಎಂಬ ಸ್ಥಳಕ್ಕೆ ಆತನು ನನ್ನನ್ನು ಕರೆದುಕೊಂಡು ಹೋದನು. ಜಾನ್ಸನ್ ಎಂಬಾತನು ಸ್ವೀಕರಿಸಲೊಪ್ಪಿದನಾದರೂ ಆ ರಾತ್ರಿ ಒಪ್ಪಿಟ್ಟಿಗೆ ಒಪ್ಪುತ್ತೇನೆಂದು ಹೇಳಿದನು. 'ಊಟವು ನೀವಿದ್ದೆಡೆಗೆ ಕಳುಹಿಸಲ್ಪಡುವುದು. ಅಲ್ಲೇ ನೀವು ಊಟಮಾಡಬೇಕು. ನನ್ನ, ನಿಮ್ಮ ಜಾತಿಭೇದವು ನನಗಿಲ್ಲವಾದರೂ ಈ ಹೋಟೇಲಿಗೆ ಬರುವವರೆಲ್ಲರೂ ಬಿಳಿಯ ಜನರೇ ಆದುದರಿಂದ ಅವರ ಕೂಡ ಸೇರಿ ನೀವು ಊಟಮಾಡಲು ಅವರು ಅಂಗೀಕರಿಸುವುದಿಲ್ಲ" ಎಂದು ಜಾನ್ಸನನು ತಿಳಿಸಿದನು. "ಇದೇ ನನಗೆ ಹತ್ತುಸಾವಿರ. ಒಂದು ರಾತ್ರಿ ನೀವು ನನಗಿಲ್ಲಿರಲಿಕ್ಕೆ ಬಿಟ್ಟುದಕ್ಕಾಗಿ ನಾನು ಕೃತಜ್ಞನಾಗಿರುವೆನು. ಈ ದೇಶಸ್ಥಿತಿಯು ನನಗೆ ಕೊಂಚವಟ್ಟಿಗೆ ತಿಳಿದಿದೆ. ನಿಮಗೆ ತೊಂದರೆಯಾಗುವಂತೆ ನಾನು ಮಾಡುವುದಿಲ್ಲ. ನೀವು ಅನ್ನವನ್ನು ನಾನಿದ್ದೆಡೆಗೆ ಕಳುಹಿಸಿ, ನಾಳೆಯದಿನ ನಾನು ಬೇರೆ ಏರ್ಪಾಡನ್ನು ಮಾಡಿಕೊಳ್ಳುತ್ತೇನೆ,' ಎಂದು ನಾನು ಹೇಳಿದೆನು. ಆತನು ನನಗೊಂದು ಕೋಣೆಯನ್ನು ಕೊಟ್ಟನು. ನಾನು ಅದರೊಳಗೆ ಹೋದೆನು. ಒಬ್ಬನೇ ಇದ್ದೆನಾದುದರಿಂದ ಏನೂ ತೋರದಲೆ ಇದ್ದೆನು ಹಸಿವಾಗುತ್ತಿದ್ದಿತು. ಸ್ವಲ್ಪ ಹೊತ್ತಿಗೆ ಜಾನ್ಸನನು ಪಕ್ವವಾದ ಅನ್ನವನ್ನು ಕಳುಹಿಸದೆ ತಾನೇ ನನ್ನ ಕೋಣೆಗೆ ಬಂದು "ಆ ರಾತ್ರಿ ಹೊಟೆಲಿಗೆ ಸ್ವಲ್ಪ ಜನರೇ ಬಂದಿರುವರು. ನಾನು ನಿಮಗೆ ಊಟಕ್ಕೆ ಇಲ್ಲಿಗೇ ಕಳುಹಿಸುತ್ತೇನೆಂದು ಹೇಳಿದ್ದೆನು. ಆದರೆ ಅದು ನನಗಿಷ್ಟವಿಲ್ಲದೆ ಹೋಟೇಲಿಗೆ ಬಂದವರ ಕೂಡ ಕೇಳಲು ನೀವು ಅಲ್ಲಿಗೇ ಬಂದು ಊಟಮಾಡಲು ಅವರು ಸಮ್ಮತಿಸಿದರು. ನೀವು ಇಲ್ಲಿ ಎಷ್ಟು ದಿವಸಗಳು ಬೇಕಾದರೂ ಇರಬಹುದು." ಎಂದು ಜಾನ್ಸನನು ಹೇಳಿದನು. ನಾನು ಪುನಃ ವಂದಿಸಿ ಹೋಟೇಲಿನೊಳಕ್ಕೆ ಹೋಗಿ ಆ ರಾತ್ರಿ ಅಲ್ಲೇ ಸರಾಗವಾಗಿ ಊಟಮಾಡಿದೆನು.

ಅಪರಿಮಿತವಾದ ವರ್ಣಭೇದವು.

ಮಾರನೆಯದಿನ ಪ್ಲೀಡರ ಮನೆಗೆ ಹೋದೆನು. ಎ. ಡಬ್ಲ್ಯು. ಬೇಕರ್ ಎಂದು ಆತನ ಹೆಸರು. ಆತನ ಆಕೃತಿಯನ್ನು ಅಬ್ದುಲ್ಲಾಸೇಟರು ನನಗೆ ಮೊದಲೇ ವಿವರಿಸಿ ಹೇಳಿದ್ದರು. ಆತನು ನನ್ನನ್ನು ಪ್ರೀತ್ಯಾದರದಿಂದ ಗೌರವಿಸಿದನು ... ವಿಚಾರವು ಬಹಳ ತೊಡಕಾಗಿರುವುದರಿಂದ ದೊಡ್ಡದಾಗಿ ... ಅವರಿಗೇ ಬಹಳ ಜನ ಬ್ಯಾರಿಸ್ಟರುಗಳನ್ನು ನಿಯಮಿಸಿ...ಗಿದೆ. ನನಗೆ ಬೇಕಾದ ಸಮಾಧಾನವನ್ನು ಮಾತ್ರ ನೀವು ಕೊಟ್ಟರೆ ಸಾಕು. ನೀವು ಇಲ್ಲಿಗೆ ಬಂದುದರಿಂದ ನನಗೆ ಸಹಾಯವುಂಟಾಗುವುದು. ನೀವು ಇಳಿದುಕೊಳ್ಳಲು ಇ...ಸ್ಥಳವನ್ನೇರ್ಪಡಿಸಿಲ್ಲ. ನಿಮ್ಮನ್ನು ನೋಡಿದನಂತರ ಮಾಡಬೇಕೆಂದು ಸುಮ್ಮನಿದ್ದೆನು. ಇಲ್ಲಿ ವರ್ಣಭೇದವು ಅಪರಿಮಿತವಾಗಿದೆ. ಆದುದರಿಂದ ವಾಸಸ್ಥಳ ದೊರಕುವುದು ಕ...ಒಬ್ಬ ಮನುಷ್ಯನ ಹೆಂಡತಿಯು ಬಹಳ ಗರೀಬಳು. ಆ...ನಮಗೆ ವಸತಿಸ್ಥಳವನ್ನು ಕೊಡುವಳು. ಆಕೆಗೆ ಕೊಂಚ ...ಸಹಾಯವನ್ನು ತೋರಿಸಬೇಕು' ಎಂದು ಹೇಳಿ ಪ್ಲೀಡರು ...ನ್ನು ಆ ಸ್ತ್ರೀಯಳ ಮನೆಗೆ ಕರೆದುಕೊಂಡು ಹೋದನು. ಮೊದಲು ಆತನೊಬ್ಬನೇ ಒಳಕ್ಕೆ ಹೋಗಿ ಆಕೆಯೊಡನೆ ರಹಸ್ಯವಾಗಿ ಮಾತನಾಡಿದನು. ಆಕೆಯೊಪ್ಪಿಕೊಂಡಳು. ಒಂದು ವಾರಕ್ಕೆ 28 ರೂಪಾಯಿ ಕೊಡಬೇಕೆಂದು ಕೇಳಿದಳು. ಬೇಕರವರು ನ್ಯಾಯವಾದಿ ಆದಾಗ್ಯೂ ಪ್ರಾಚ್ಯಾಚಾರಪರಾಯಣನಾಗಿದ್ದನಲ್ಲದೆ ಮತಗುರುವಾ (ಪ್ರೀಸ್ಟ್)ಗಿ ಕೂಡ ಇದ್ದನು. ಈಗ ಆತನು ಪ್ಲೀಡರುದ್ಯೋಗವನ್ನು ಬಿಟ್ಟಿರುತ್ತಾನೆ. ಆತನು ಈಗಲೂ ಜೀವಿಸಿದ್ದು ಮತಗುರುವಾಗಿ ಮಾತ್ರ ಇರುವನು. ಆತನು ಕೊಂಚ ಧನವನ್ನು ಕೂಡಿಕೊಂಡನಾದರೂ ಅದರಿಂದ ಆತನಿಗೆ ಯಾವ ತೊಂದರೆಯೂ ಇಲ್ಲವು. ಈಗಲೂ ಆತನಿಂದ ನನಗೆ ಕಾಗದವು ಬರುತ್ತಲೇ ಇವೆ. "ಕ್ರೈಸ್ತಮತವೇ ದೊಡ್ಡ ಮತವು. ಕ್ರೈಸ್ತನೊಬ್ಬನೇ ದೇವರ ಮಗ. ಜೀವನ್ಮುಕ್ತಿಯು ಆತನ ಮೂಲಕವೇ ದೊರಕಬೇಕು. ಬೇರೆ ಯಾವ ರೀತಿಯಿಂದಲೂ ದೊರಕುವುದಿಲ್ಲ" ಎಂಬ ವಿಷಯವನ್ನೇ ಕುರಿತು ಯಾವಾಗಲೂ ನನಗೆ ಆತನು ಬರೆಯುತ್ತಿದ್ದಾನೆ.

ಮತ ಚರ್ಚೆ.

ಮೊದಲನೇಸಾರಿ ನಾನು ಬೇಕರ ಹತ್ತಿರಕ್ಕೆ ಹೋದಾಗಲೇ ಮತವಿಷಯವಾಗಿ ಸಂಭಾಷಣೆಯು ಬರುಗಿತು. "ನಾನು ಹಿಂದು ಜಾತಿಯಲ್ಲಿ ಹುಟ್ಟಿದವನಾದರೂ ನನಗೆ ಮತವಿಷಯವು ಸರಿಯಾಗಿ ತಿಳಿದಿರಲಿಲ್ಲ. ಇನ್ನು ಇತರ ಮತಗಳ ವಿಷಯವಾಗಿ ತಿಳಿದಿದ್ದುದು ಅತ್ಯಲ್ಪವೇ. ನನ್ನ ಸಂಗತಿಯೇ ನನಗೆ ತಿಳಿಯದು. ಎಲ್ಲಿದ್ದೇನೆ? ಯಾರನ್ನು ಪೂಜಿಸುತ್ತೇನೆ? ಯಾರನ್ನು ನಂಬಿರುತ್ತೇನೆ? ಎಂಬ ವಿಷಯವು ಕೂಡ ನನಗೆ ತಿಳಿದಿರಲಿಲ್ಲ. ನನ್ನ ಮತವನ್ನು ಸಾಕಲ್ಯವಾಗಿ ಮತ್ತು ಇತರ ಮತಗಳನ್ನು ಕೂಡ ತಿಳಿದುಕೊಳ್ಳಬೇಕೆಂದಿರುತ್ತೇನೆಂದು" ನಾನು ಹೇಳಿದೆನು. "ನಾನೂ ದಕ್ಷಿಣಾಫ್ರಿಕಾಯ ಜನರಲ್ ಮಿಷನ್ ಡೈರೆಕ್ಟರುಗಳಲ್ಲೊಬ್ಬನೂ ಸ್ವಂತ ಧನದಿಂದ ಒಂದು ಚರ್ಚನ್ನು ಕಟ್ಟಿಸಿರುವ. ಅಲ್ಲಿ ನಾನು ಆಗಾಗ್ಯ ಮತಬೋಧೆಯನ್ನು ಮಾಡುತ್ತಿದ್ದೇನೆ. ನಾನು ವರ್ಣಭೇದವನ್ನು ಮಾಡುವುದಿಲ್ಲ. ನನಗೆ ಬೇರೆ ಕೆಲವು ಮಿತ್ರರು ಕೂಡ ಇರುವರು. ನಾವೆಲ್ಲರೂ ಒಂದು ಗಂಟೆಗೆ ಸೇರಿ ಜೀವನ್ಮುಕ್ತಿ, ಜ್ಞಾನಶಕ್ತಿ ಮೊದಲಾದುವನ್ನು ಪ್ರಸ್ತಾಪಿಸುತ್ತ ದೇವದೇವನನ್ನು ಕೊಂಚಕಾಲ ಪ್ರಾರ್ಥಿಸುವೆವು. ನೀವು ಬರಬೇಕು. ನನ್ನ ಸ್ನೇಹಿತರಿಗೂ ನಿಮಗೂ ಪರಿಚಯಮಾಡಿಸುತ್ತೇನೆ. ಅವರೂ ಸಂತೋಷಪಡುವರು. ನಿಮಗೆ ಕೆಲವು ಮತಗ್ರಂಥಗಳನ್ನು ಕೊಡುತ್ತೇನೆ. ಅವುಗಳಲ್ಲಿ ಮುಖ್ಯವಾಗಿ ಬೈಬಲನ್ನು ನೀವು ಓದಬೇಕೆಂದು ನಾನು ಮುಖ್ಯವಾಗಿ ಕೋರುತ್ತೇನೆ' ಎಂದು ಬೇಕರು ಹೇಳಿದರು. "ನಾನು ಕೃತಜ್ಞನು, ಒಂದು ಗಂಟೆಗೆ ತಪ್ಪದೆ ಪ್ರಾರ್ಥನೆಗಾಗಿ ಅಲ್ಲಿಗೆ ಬರಲು ಪ್ರಯತ್ನಪಡುತ್ತೇನೆ" ಎಂದು ನಾನು ತಿಳಿಸಿದೆನು. 'ನೀವು ಒಂದು ಗಂಟೆಗೆ ಇಲ್ಲಿಗೆ ಬನ್ನಿ. ನಾವೆಲ್ಲರೂ ಕೂಡಿ ಚರ್ಚಿಗೆ ಹೋಗುವ' ಎಂದು ಆತನು ಹೇಳಿದನು. ನಾನು ಪುನಃ ಜಾನ್ಸನ್ ಹೊಟೇಲಿಗೆ ಹೋಗಿ ಆತನಿಗೆ ಕೊಡಬೇಕಾದ ಹಣವನ್ನು ಕೊಟ್ಟು ಹೊಸಮನೆಯ ವಾಸಕ್ಕೆ ಹೋದೆನು. ಅಲ್ಲಿ ಸುಭೋಜನ ಮಾಡಿದೆನು. ಅಲ್ಲಿ ಯಜಮಾನಿಯು ಬಹು ಮರ್ಯಾದೆಯಿಂದ ಆದರಿಸುತ್ತಿದ್ದಳು. ಆಕೆಯ ಅಡಿಗೆಯು ಕೂಡ ಬಹಳ ಶುಚಿಯಾಗಿಯೂ ರುಚಿಯಾಗಿಯೂ ಇದ್ದಿತು. ಸ್ವಲ್ಪದಲ್ಲೇ ಮನೆಯವರ ಕೂಡ ಸಲಿಗೆಯು ಚೆನ್ನಾಗಾಯಿತು. ಊಟವಾದನಂತರ ದಾದಾ ಅಬ್ದುಲ್ಲಾಸೇಟರು ಬರೆದುಕೊಟ್ಟಿದ್ದ ಕಾಗದವನ್ನು ತೆಗೆದುಕೊಂಡು ಅವರ ಸ್ನೇಹಿತನ ಮನೆಗೆ ಹೋದೆನು. ಆತನಿಗೂ ನನಗೂ ಕೂಡಲೆ ಸ್ನೇಹವಾಯಿತು. ಭಾರತೀಯರಿಗೆ ಅಲ್ಲಿ ಉಂಟಾಗಿರುವ ತೊಂದರೆಯೆಲ್ಲವನ್ನೂ ಆತನು ವಿವರಿಸಿ ಹೇಳಿದನು. ತನ್ನ ಮನೆಯಲ್ಲೇ ನಾನು ಇರಬೇಕೆಂದು ಆತನು ನನ್ನನ್ನು ಮನಃಪೂರ್ವಕವಾಗಿ ಕೋರಿದನು. ಆದರೆ ನಾನು ಸವಿನಯದಿಂದ ನಿರಾಕರಿಸಿದೆನು. 'ಆಗಲೇ ವಾಸಸ್ಥಳಕ್ಕೇರ್ಪಾಡಾಗಿದೆ' ಎಂದು ಹೇಳಿದೆನು. ನಿಮಗೇನು ಬೇಕಾದರೂ ಸಂಶಯವಿಲ್ಲದೆ ನನ್ನನ್ನು ಕೇಳಬಹುದು ಎಂದು ಆತನು ತಿಳಿಸಿದನು. ಸಾಯಂಕಾಲವಾಯಿತು. ನಾನು ಊಟಮಾಡಿಕೊಂಡು ಕೊಠಡಿಗೆ ಹೊರಟೆನು. ಆಗ ನನಗೆ ಮಾಡಲು ಯಾವ ಕೆಲಸವೂ ಇರಲಿಲ್ಲ. ಬೇಕರವರು ಹೇಳಿದ ವಿಷಯದ ಅರ್ಥವು ಹಿಂದೂಮತಗ್ರಂಥದಲ್ಲೆಲ್ಲ ದೊರಕುವುದು. ಹಿಂದು ಮತವನ್ನು ಸರಿಯಾಗಿ ತಿಳಿದುಕೊಳ್ಳದೆ ಕ್ರೈಸ್ತಮತ ತತ್ವವನ್ನು ಗ್ರಹಿಸುವುದು ಹೇಗೆ ಎಂಬ ಆಲೋಚನೆಯು ಹುಟ್ಟಿತು. "ಯಾವ ಮತವನ್ನು ಕುರಿತು ಓದಿದರೂ ನಿಷ್ಪಕ್ಷಪಾತವಾಗಿ ಓದಬೇಕು. ಭಗವಂತನು ಸ್ಫುರಿಸಿದ ವಿಷಯವನ್ನೇ ಬೇಕರವರ ಸ್ನೇಹಿತರುಗಳ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ತಿಳಿಸುತ್ತಿರಬೇಕು. ಹಿಂದೂ ಮತ ತತ್ವವನ್ನು ಗ್ರಹಿಸುವವರೆಗೂ ಯಾವ ಮತವನ್ನು ಅಂಗೀಕರಿಸಬಾರದು" ಎಂದು ನಿಶ್ಚಯಿಸಿಕೊಂಡು ಆ ರಾತ್ರಿ ನಿದ್ರೆಮಾಡಿದೆನು.

ವರ್ತಮಾನಪತ್ರ ಹೊರಡಿಸುವದೂ ಲಗ್ನಸಮಾರಂಭಮಾಡುವದೂ ಒಂದೇ!

("ಕನ್ನಡಿಗ" ದಿಂದ)

"ಮನೆಕಟ್ಟಿ ನೋಡು ಮತ್ತು ಮದುವೆಮಾಡಿನೋಡು" ಎಂಬದೊಂದು ನಾಣ್ಣುಡಿಯು ಕನ್ನಡದಲ್ಲಿ ಇರುತ್ತಿದೆಯಷ್ಟೆ. ಇದರ ತಾತ್ಪರ್ಯವು ಮನೆಕಟ್ಟುವದು ಮತ್ತು ಲಗ್ನಮಾಡುವದು ಬಹಳ ತಾಪತ್ರಯದ ಕೆಲಸಗಳು ಎಂಬುವದನ್ನು ಎಲ್ಲರೂ ಸ್ವಂತ ಅನುಭವದಿಂದ ಮನಗಂಡ ಸಂಗತಿಯಾಗಿದೆ. ಈಚೆಗೆ ಮೇಲಿನ ಎರಡು ಕೆಲಸಗಳಿಗೆ "ವರ್ತಮಾನಪತ್ರ ಹೊರಡಿಸಿ ನೋಡು" ಎಂಬದೊಂದು ಮೂರನೇ ಕೆಲಸವನ್ನು ಮೇಲಿನ ನಾಣ್ಣುಡಿಯಲ್ಲಿ ಜೋಡಿಸುವದು ಯೋಗ್ಯವೆಂದು ಎಲ್ಲ ವರ್ತಮಾನಪತ್ರಕಾರರು ಒಪ್ಪಿಕೊಳ್ಳದಿರಲಾರರು. ವರ್ತಮಾನ ಪತ್ರ ಹೊರಡಿಸುವವರಿಗೆ ಛಾಪಿಸುವ ಕಾಗದ, ಛಾಪಿಸುವ ಮಸಿ, ಛಾಪಖಾನೆಯ ಖರ್ಚು, ಟಪ್ಪಾಲು ಟಿಕೀಟು ಮುಂತಾದ ಅನೇಕ ಖರ್ಚಿನ ಬಾಬುಗಳಿರುತ್ತವೆ. ಖರ್ಚು ಬೇಕಾದಷ್ಟು ಮಾಡಿದರೂ ಹೊತ್ತಿಗೆ ಸರಿಯಾಗಿ ಜೋಡಿಸುವವರು ಬಾರದಿದ್ದರೆ, ಛಾಪಿಸುವವರು ಬಾರದಿದ್ದರೆ, ಯಾ ಛಾಪಿಸುವ ಮೊಳೆಗಳು ಕೆಟ್ಟರೆ ಅಥವಾ ಛಾಪಿಸುವ ಯಂತ್ರವು ಕೆಟ್ಟರೆ ವರ್ತಮಾನಪತ್ರ ಛಾಪಿಸುವದು ಹೊತ್ತಿಗೆ ಸರಿಯಾಗಿ ಆಗುವದಿಲ್ಲ. ಇದರಿಂದ ವರ್ತಮಾನಪತ್ರ ಸಂಪಾದಕರಿಗೆ ಆಗುವ ನಿರುತ್ಸಾಹವನ್ನೆಷ್ಟು ವರ್ಣಿಸಬೇಕು? ತಾವು ಬರೆದದ್ದನ್ನು ಜನರು ತೀವ್ರವಾಗಿ ಓದಲೆಂಬ ಉತ್ಸಾಹವು ಛಾಪಖಾನೆಯ ಆಳುಗಳ ಆಲಸ್ಯದಿಂದ ಕಡಿಮೆಯಾಗುತ್ತದೆ. ವರ್ತಮಾನ ಪತ್ರದೊಳಗಿನ ಬರಹಗಳನ್ನು ಓದಿ ಆನಂದಪಡುವವರು ಹತ್ತು ಮಂದಿ ಹೊರಬಿದ್ದರೆ ಕಾಕ ದೃಷ್ಟಿಯಿಂದ ದೋಷಗಳನ್ನು ತೆಗೆಯುವ ಪಂಡಿತರು ನೂರು ಮಂದಿ ಹೊರಡುವರು. ಇಷ್ಟಾದರೂ ವರ್ತಮಾನಪತ್ರದಿಂದ ಲಾಭವೇನದೆ? ತಮ್ಮ ಕೈಯಿಂದ ಒಂದು ಕಾಸು ಸಹ ಖರ್ಚುಮಾಡದೆ ವರ್ತಮಾನ ಪತ್ರಗಳನ್ನು ಓದಬೇಕೆನ್ನುವವರೇ ಅನೇಕ ಮಂದಿ ಇರುತ್ತಾರೆ. ಕೆಲವರು ತಾವು ದೊಡ್ಡವರಿದ್ದು ತಮ್ಮ ಕಡೆಯಿಂದ ವರ್ತಮಾನ ಪತ್ರಕಾರರು ಎಂದೂ ಚಂದಾವನ್ನು ಬೇಡತಬಾರದೆಂದು ಅನ್ನುವರು. ಕೆಲವರು ತಾವು ಬಡವರು ಮತ್ತು ಧರ್ಮಾರ್ಥ ಕೆಲಸ ಮಾಡುವವರು ಇರುವದರಿಂದ ತಮಗೆ ವರ್ತಮಾನ ಪತ್ರಕಾರರು ವರ್ಗಣಿಯನ್ನು ಕೇಳುವದು ಬಹಳ ತಪ್ಪೆಂದು ಅನ್ನುವರು. ಕೆಲವರು ಲೈಬ್ರರಿ ಮೊದಲಾದ ತಮ್ಮ ಸಂಸ್ಥೆಗಳಿಗೆ ಟಪ್ಪಾಲ ಖರ್ಚು ಮಾತ್ರ ತೆಗೆದುಕೊಂಡು ವರ್ತಮಾನ ಪತ್ರಕಾರರು ವರ್ತಮಾನಪತ್ರಗಳನ್ನು ಕಳುಹಿಸಬೇಕೆಂದು ಅನ್ನುವರು. ಅಂತೂ ಮುಕ್ಕಾಲು ಮೂರು ಪಾಲು ಜನರು ವರ್ತಮಾನಪತ್ರಗಳಿಗೆ ವರ್ಗಣಿಯನ್ನು ಕೊಡಬಾರದೆಂದೇ ಪ್ರತಿಪಾದಿಸುವರು. ಕೆಲವರು ತಪ್ಪಿನಿಂದ ಅಥವಾ ಉದಾರತನದಿಂದ ತಮ್ಮ ವರ್ಗಣಿಯನ್ನು ಮನಿಆರ್ಡರು ಮಾಡಿ ಕಳುಹಿಸುವರು. ಇಲ್ಲವೆ ವಿ. ಪಿ. ಸ್ವೀಕಾರ ಮಾಡುವರು. ... ಹರಿಜನರವರ ಛಾಪಖಾನೆಯಲ್ಲಿ ಲಗ್ನ ಸಮಾರಂಭದಂತೆಯೇ ತ್ರಾಸವೂ ಉತ್ಸುಕತೆಯೂ ಒಂದೇ ಸಮನೇ ನಡೆಯುವವು. ವರ್ತಮಾನಪತ್ರವು ಒಮ್ಮೆ ಛಾಪಿಸಿ ಪ್ರಸಿದ್ಧವಾಗಿ ಸ್ಥಳದವರ್ಗಣಿದಾರರಿಗೆ ಟಪಾಲ ಪೆಟ್ಟಿಗೆಯಲ್ಲಿ ಬಿದ್ದರೆ ಲಗ್ನ ಸಮಾರಂಭವು ಮುಗಿದಬಳಿಕ ಲಗ್ನ ಸಮಾರಂಭಕ್ಕೆ ಬಂದಿದ್ದ ಬೀಗರು ಬಿಜ್ಜರನ್ನು ಅವರವರ ಊರಿಗೆ ಕಳುಹಿಸಿಕೊಟ್ಟಷ್ಟು ಆನಂದವೆನಿಸುವದು. ಲಗ್ನ ಸಮಾರಂಭದಲ್ಲಿ ವಧೂವರರಿಗೆ ಎಷ್ಟು ಇನಾಮುಗಳು ಬಂದರೂ ಲಗ್ನ ಸಮಾರಂಭದ ಖರ್ಚು ಹೇಗೆ ತುಂಬಿ ಬರುವದಿಲ್ಲವೋ, ಹಾಗೆ ವರ್ಗಣಿದಾರರ ಕಡೆಯಿಂದ ವಿ. ಪಿ ಮನಿಆರ್ಡರ್ ದ್ವಾರಾ ಬರುವ ಹಣದಿಂದ ವರ್ತಮಾನಪತ್ರ ಹೊರಡಿಸುವ ಖರ್ಚು ತುಂಬಿ ಬರುವದಿಲ್ಲ. ಬೆಂಗಳೂರಿನ 'ರಂಗಭೂಮಿ.' ಮಾಸಿಕ ಪುಸ್ತಕಕರ್ತರು ಒಮ್ಮೆ ಸಂಪಾದಕರ ಕಷ್ಟಗಳನ್ನು ವರ್ಣಿಸುವಾಗ್ಗೆ "ಬಾಪರ(ಬಡವ) ನಾಗಬೇಕಾದರೆ ವರ್ತಮಾನ ಪತ್ರ ಹೊರಡಿಸಬೇಕು" ಎಂದು ಬರೆದಿದ್ದರು. ಇದು ಬಹುಶಃ ನಿಜವಿರುತ್ತದೆಂದು ಎಲ್ಲಾ ವರ್ತಮಾನ ಪತ್ರ ಸಂಪಾದಕರು ಒಡಂಬಡದೆ ಇರಲಾರರು. ವರ್ತಮಾನ ಪತ್ರಕಾರರು ದೇಶಸೇವೆ, ಸಮಾಜಸೇವೆ ಮತ್ತು ಭಾಷಾಸೇವೆ ಎಂಬ ತಮ್ಮ ಹುರುಪಿನ ದೆಸೆಯಿಂದ ಅಥವಾ ಹುಚ್ಚುತನದ ದೆಸೆಯಿಂದ ವರ್ತಮಾನಪತ್ರ ತೆಗೆಯಬೇಕಾಗುವದು. ಇದರಿಂದ ನಾಲ್ಕು ದುಡ್ಡು ಗಳಿಸಬಹುದೆಂಬುದನ್ನು ಯಾರೂ ಕನಸು ಮನಸಿನಲ್ಲಿ ಸಹ ತರಬಾರದು. ತಾವು ಕೈಯಿಂದ ಹಾಕಿದ ದುಡ್ಡು ತಿರುಗಿ ಬಂದರೆ ಅವರಷ್ಟು ದೈವಶಾಲಿಗಳು ಯಾರೂ ಇಲ್ಲವೆಂತಲೇ ತಿಳಿಯಬೇಕು. ಯಾವಾಗ ಹೆಚ್ಚು ಸಾಲ, ಕಡಿಮೆ ಸಾಲ ಈ ಪ್ರಕಾರ ಬೆನ್ನು ಹತ್ತಿದ್ದೇ ಇರುವದು. ಅದನ್ನು ಯಾವಾಗಲೂ ಬಿಡಿಸಲಿಕ್ಕೆ ಆಗಲಾರದು. ಇಂಥ ಸ್ಥಿತಿಯಲ್ಲಿ ಯಾವ ವರ್ತಮಾನ ಪತ್ರಗಳಿಗೇ ಆಗಲಿ, ಯಾವ ಮಾಸಿಕ ಪುಸ್ತಕಗಳಿಗೇ ಆಗಲಿ, ದೀರ್ಘಾಯುಷ್ಯವನ್ನು ಬಯಸುವದೆಂದರೆ ಅವರ ಮನೆ ಮಾರು ಹಾಳಾಗಲೆಂದು ಬಯಸುವದೇ ಸರಿ ಎಂದು ಯಾವನೊಬ್ಬ ವಿನೋದಿ ಮಿತ್ರನು ಚೇಷ್ಟೆಯನ್ನು ಮಾಡಿದರೆ ಅದು ತಪ್ಪಾಗಲಾರದು. ಆದ್ದರಿಂದ ವರ್ತಮಾನ ಪತ್ರಗಳನ್ನು ತರಿಸಿಕೊಳ್ಳುವರು "ನಿಮ್ಮ ವರ್ತಮಾನ ಪತ್ರವು ಎಷ್ಟು ವರ್ಷ ನಡೆಯುವುದು?' ಎಂದು ಪ್ರಶ್ನೆ ಕೇಳಿ ತರಿಸಿಕೊಳ್ಳಬಾರದು. ಲಗ್ನ ಸಮಾರಂಭವು ನಡೆದಷ್ಟು ದಿವಸ ಹೋಳಿಗೆ ತುಪ್ಪವನ್ನು ಜೈತೊಳೆಕೊಂಡಂತೆ ವರ್ತಮಾನಪತ್ರ ಹೊರಡುವಷ್ಟು ದಿವಸ ವರ್ತಮಾನಪತ್ರವನ್ನು ತರಿಸಿಕೊಂಡು ಅದರಲ್ಲಿ ಓದತಕ್ಕಂಥ ವಿಷಯಗಳಿದ್ದರೆ ಅವುಗಳನ್ನು ಓದಿ ಆನಂದಪಡಬೇಕು. ಯಾವಾಗ್ಗೆ ವರ್ತಮಾನಪತ್ರವು ನಿಂತುಹೋಗುವುದೋ ಆಗ್ಗೆ ಆ ವರ್ತಮಾನಪತ್ರವು ಚೆನ್ನಾಗಿ ನಡೆಯುತ್ತಿದ್ದ ಸಮಯದಲ್ಲಿ ಕಂಬನಿಗಳನ್ನು ಸುರಿಸಬೇಕು. ಅದು ಕೆಟ್ಟ ವರ್ತಮಾನಪತ್ರವಿದ್ದರೆ ಮತ್ತು ತಮಗೆ ಅದು ಬೇಡವಾಗಿದ್ದರೆ ಸತ್ಯ ಖ್ಯಾತಿ ಹೊಡಿಯಬೇಕು. ಜಗತ್ತೇ ಈ ರೀತಿಯಿಂದ ನಿರ್ಮಾಣವಾಗಿರುವ ಜಗತ್ತನ್ನು ಯಾರು ತಿದ್ದಲು ಸಮರ್ಥರು?

ಚಂದ್ರೋದಯ.

ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ.

ಮಡಿಕೇರಿ ಮತ್ತು ಶಾಂತುಮೂನಾಡು ಓಟರುಗಳಲ್ಲಿ ವಿನಂತಿ —

ಈ ನಾಡಿನವರ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರನಾಗಿ ಚುನಾಯಿತನಾಗಲು ನಾನು ಉಮೇದ್ವಾರನಾಗಿ ನಿಂತಿರುತ್ತೇನೆ ನನ್ನ ತಂದೆಯವರು ನಮ್ಮ ದೇಶದ ಹಿತಕ್ಕಾಗಿ ಎಷ್ಟು ಕೆಲಸ ಮಾಡಿದರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಅವರ ಮೇಲ್ಪಂಕ್ತಿಯನ್ನು ಸ್ವಲ್ಪ ಮಟ್ಟಿಗಾದರೂ ಹಿಂಬಾಲಿಸಬೇಕೆಂಬ ಆಶೆ ನನಗೆ ತುಂಬಾ ಇದೆ ಅವರ ಜ್ಞಾಪಕವನ್ನು ದೇಶದ ಮುಂದೆ ಸ್ಥಿರಗೊಳಿಸಬೇಕೆಂಬ ಕುತೂಹಲದಿಂದ ಜಮೀನ್ದಾರರ ಸಂಘದ ಕಟ್ಟಡಕ್ಕೆ ನನ್ನ ಸಮೋದರರೂ ನಾನೂ ಸೇರಿ ಮಾಡಿದ ಸಹಾಯವು ಯಾರಿಗೂ ತಿಳಿಯದ ಸಂಗತಿಯಲ್ಲ. ಜಮೀನ್ದಾರರ ಸಂಘದಲ್ಲಿ ಈ ತಾಲೋಕಿನ ಜಾಯಿಂಟ್ ಸೆಕ್ರಟರಿಯಾಗಿ ಸಮುದಾಯದ ಕೆಲಸವನ್ನು ಕೆಲವು ಕಾಲದಿಂದಲೇ ಮಾಡುತ್ತಿದ್ದೇನೆ ಡಿಸ್ಟ್ರಿಕ್ಟ್‌ಬೋರ್ಡ್ ಮುಂತಾದ ಜವಾಬ್ದಾರಿ ಸಂಸ್ಥೆಗಳ ಕೆಲಸ ಮಾಡಬೇಕೆಂಬ ಅಭಿಲಾಶೆಯಿಂದ ದೇಶದ ಆಡಳಿತ ವಿಚಾರಗಳನ್ನು ತಿಳಿದುಕೊಳ್ಳುತ್ತಲೇ ಇದ್ದೇನೆ

ಈ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲಿ ಈ ನಾಡಿನ ಓಟರುಗಳು ನನಗೆ ಓಟು ಕೊಟ್ಟು ಆರಿಸಿಕೊಂಡರೆ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತದಿಂದ ಪ್ರಜೆಗಳಿಗೆ ಮುಖ್ಯವಾಗಿ ಗ್ರಾಮವಾಸಿಗಳಿಗೆ ದೊರೆಯಬಹುದಾದಷ್ಟು ಪ್ರಯೋಜನಗಳು ದೊರಕುವಂತೆ ಮಾಡಲು ಸಂಪೂರ್ಣ ಪ್ರಯತ್ನಪಡುತ್ತೇನೆ. ನಾನು ಯಾರಿಗೂ ತಾಬೇದಾರನಾಗಿರದೆ ಪೂರ್ಣ ಸ್ವತಂತ್ರಿಯಾಗಿರುವುದರಿಂದ ಯಾರ ದಯ ದಾಕ್ಷಿಣ್ಯಕ್ಕೂ ಸಿಲುಕದೆ ಪ್ರಜಾ ಜನರ ನ್ಯಾಯಕ್ಕೆ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಹೋರಾಡಲು ನನಗೆ ಸಾಧ್ಯವಿದೆ. ದೇವರ ದಯದಿಂದ ಗೃಹಕೃತ್ಯದ ತಾಪತ್ರಯಗಳೂ ಸಹ ಇನ್ನೂ ನನ್ನ ಮೇಲೆ ಬಿದ್ದಿಲ್ಲವಾದ್ದರಿಂದ ನನ್ನ ಪೂರ್ಣ ಸಮಯವನ್ನು ದೇಶದ ಕೆಲಸಕ್ಕೆ ಉಪಯೋಗಿಸಲು ಅವಕಾಶವಿದೆ

ನನಗೆ ನಿಮ್ಮ ಓಟ್ ಕೊಟ್ಟು ಡಿಸ್ಟ್ರಿಕ್ಟ್ ಬೋರ್ಡಿನ ಮೂಲಕ ದೇಶಸೇವೆಗೆ ಅವಕಾಶ ಮಾಡಿಕೊಡಬೇಕೆಂದು ಕೋರುತ್ತೇನೆ

ಇಂತಿ ವಿಜ್ಞಾಪನೆಗಳು,

ಮಡಿಕೇರಿ, ಮುನೆಯಂಡ ಯಂ. ಬೆಳ್ಳಪ್ಪ.

ತಾ 3—9—1926

ನೋಟೀಸ್.

ಮಹನೀಯರೇ

ನನ್ನ ಬಾಬ್ತು ಈ ಕೆಳಗೆ ನಮೂದುಮಾಡಿದ ಬಹುರೆ ಇರುವ ದನಗಳು ಮೇಯಲಿಕ್ಕೆ ಬಿಟ್ಟವು ತಪ್ಪಿಸಿಕೊಂಡು ತಾರೀಕು 11—9—26ರಲ್ಲಿ ಪರಾರಿ ಆಗಿವೆ ಈ ದನಗಳನ್ನು ಪತ್ತೆಮಾಡಿ ಯಾರಾದರೂ ಕಂಡು ನನಗೆ ತಿಳಿಸಿದರೆ 3/ರೂಪಾಯಿ ಇನಾಮುಕೊಡುತ್ತೇನೆ

ದನಗಳ ಗುರುತು —1 ಹಸಿವರ್ಣದ ಮುಕ್ಕಾಲು ಅಡಿ ಉದ್ದ ಕೋಡಿನ ಮತ್ತು 1 ಚಿಕ್ಕ ಮೊಲೆಸೇರಿ 5 ವರುಷಗಳಿರುವ ಎಳೆ ಪ್ರಾಯದ ಗಿಡ್ಡತರದ ಹಸು ಕರ ಒಂದು 2 ಕರಿವರ್ಣದ ಅರ್ಧಅಡಿ ಬಾಚಿಕೋಡಿನ ಕುತ್ತಿಗೆಯಲ್ಲಿ ಸ್ವಲ್ಪ ಬೆಳ್ಳಗೆ ಇರುವ ಎಳೆ ಪ್ರಾಯದ ಹಸು ಒಂದು. 3 ಈ ಹಸುವಿನ ಕಪ್ಪು ವರ್ಣದ ಹಣೆಯಲ್ಲಿ ಬಿಳಿಚುಕ್ಕೆ ಇರುವ ಹೆಣ್ಣುಕರ ಒಂದು.

ಜಾಲಿಯಂಡ ರಾಜಪ್ಪ.

ಕುಸುಬೂರುತೋಟ,

ಸೋಮವಾರಪೇಟೆ.

ಔದ್ಯೋಗಿಕ ಮನೋವೃತ್ತಿ.

(ಕರ್ನಾಟಕ ವಾರ್ತೆಯ ಪ್ರೇಮದ ಸಂದೇಶ)

ಕರ್ನಾಟಕ ಬಂಧು ಭಗಿನಿಯರೇ,

ತಮ್ಮಲ್ಲಿ ಉದ್ಯೋಗ, ಉತ್ಸಾಹ, ಉನ್ನತಿಯಾಗಬೇಕೆಂದು ಕಿರ್ಲೋಸ್ಕರ ವಾರ್ತೆಯು ಜನ್ಮವೆತ್ತಿ ಎರಡು ವರ್ಷಗಳ ವರೆಗೆ ಅವಿಶ್ರಾಂತವಾಗಿ ಪ್ರಯತ್ನಪಟ್ಟು ತನ್ನ ಉಪದೇಶದ ಮೇರೆಗೆ ಕರ್ನಾಟಕದಲ್ಲಿ ಜಾಗ್ರತಿಯುತ್ಪನ್ನವಾಗಿರುವುದೋ? ಇಲ್ಲವೋ? ಎಂಬುದನ್ನು ತಿಳಿಯಬೇಕು ಸದ್ಯಕ್ಕೆ ವಿಚಾರಣೆಯನ್ನು ನಡಿಸುತ್ತಲಿರುವೆವು.

[illegible] ಕರ್ನಾಟಕದಲ್ಲಿ ಹಲವು ಶ್ರೀಮಂತರಿರುವರು, ಕಲಿತವರಿರುವರು, ಪತ್ರಿಕರಿರುವರು, ಭೂಮಿಯುಳ್ಳ ಒಕ್ಕಲಿಗರಿರುವರು ಹೀಗೆ ವರ್ತಕರಿದ್ದು ವ್ಯಾಪಾರದಲ್ಲಿ ಹಿಂದುಳಿಯುವುದೂ, ಒಕ್ಕಲಿಗರಿದ್ದು ಒಕ್ಕಲಿಗತನವನ್ನು ಸುಧಾರಿಸದಿರುವುದೂ, ಕಲಿತವರಿದ್ದು ಸುಧಾರಣೆಯನ್ನು ಮಾಡದಿರುವುದೂ, ಶ್ರೀಮಂತರಿದ್ದು ಒಂದಾದರೂ ಔದ್ಯೋಗಿಕ ಕಾರ್ಖಾನೆಯನ್ನು ತೆರೆಯದಿರುವುದೂ ಶೋಚನೀಯಸ್ಥಿತಿಯು ಇವೆಲ್ಲಕ್ಕೂ ಸರಕಾರದ ಬೆಂಬಲವಿದ್ದರೇನೇ ಸುಸಾಧ್ಯವೆಂಬ ಮಾತೇನೋ ನಿಜವು ಆದರೆ ಯಾವುದು ಸರಕಾರದಿಂದ ಪೂರೈಸಲ್ಪಡುವುದಿಲ್ಲವೋ, ಅದನ್ನು ಪರಸ್ಪರ ಸಂಘಟನೆಯಿಂದ ಪೂರೈಸಿಕೊಳ್ಳುವುದು ಸದ್ಯಕ್ಕೆ ಅವಶ್ಯವಿದೆ

ಈ ರೀತಿಯಿಂದ ಹಿಂದೂಸ್ಥಾನದಲ್ಲಿ ಅಲ್ಲಲ್ಲಿ ಹೊಸ ಹೊಸ ಕಾರ್ಖಾನೆಗಳು ಕೇವಲ ಸ್ವಜನರಿಂದಲೇ ಹೊರಡುತ್ತಿರುವುದು ಹಿಂದೂಸ್ಥಾನದ ಭಾವೀ ಉನ್ನತಿಯ ಚಿನ್ಹೆಯಾಗಿರುತ್ತದೆ ಸತ್ಯವಿದ್ದವರು ಇಂಥಾ ಹಲವು ಕಾರ್ಖಾನೆಗಳನ್ನು ಅಲ್ಲಲ್ಲಿ ತೆರೆದಲ್ಲಿ ಇಷ್ಟವೂ, ಅವಶ್ಯವೂ ಇರುತ್ತದೆ ಆದರೆ ಎಲ್ಲಿ ಸತ್ಯವಿಲ್ಲವೋ ಅಲ್ಲಿ ಕೈಜೋಡಿಸಿಕೊಂಡು ಕುಳ್ಳಿರದೆ ಇದ್ದ ಕಾರ್ಖಾನೆಗಳಿಗೆ ತಮ್ಮ ಬೆಂಬಲವನ್ನು ಕೊಟ್ಟಲ್ಲಿ ಕಾರ್ಖಾನೆಯು ವಿಸ್ತೃತ ಸ್ವರೂಪವನ್ನು ಹೊಂದಿ ತನ್ನ ಕೈಕೊಂಡ ಮಾರ್ಗದಲ್ಲಿ ಒದಗುವ ಸಂಕಟವನ್ನು ಧೈರ್ಯದಿಂದ ಒದಿಗೆ ದೂಡಿ ಮುಂದಿನ ಮಾರ್ಗ ಪ್ರಯಾಣ ಮಾಡಲು ಸಮರ್ಥಗೊಳ್ಳುವದು ಸ್ವದೇಶ ಕಾರ್ಖಾನೆಗಳು ಸಂಯೋಗಿ ನಡಿಯುವುದಕ್ಕೆ ಸ್ವಜನರ ಸಕ್ರಿಯ ಸಹಾನುಭೂತಿಯೇ ಕಾರಣವು

ಇನ್ನು ಕರ್ನಾಟಕಕ್ಕೆ ಉದ್ದೇಶಿಸಿ ನಮ್ಮ ವಿಜ್ಞಾಪನೆಗಳೇನಂದರೆ—ಕರ್ನಾಟಕವು ಬಹು ನೆಲವು ಸಂಪನ್ನವಾದ ದೇಶವು ಇಲ್ಲಿ ಒಕ್ಕಲತನವು ನಡೆದಷ್ಟು ಬೇರೆ ಪ್ರಾಂತಗಳಲ್ಲಿ ನಡೆಯದು ಗುಜರಾತ, ಬಂಗದೇಶ, ಬಿಹಾರ ಇವೆಲ್ಲಾ ಒಂದೇ ಮಾಲಿಯಲ್ಲಿಯವು ಇಂಥಾ ಪ್ರಾಂತದ ಒಕ್ಕಲತನವು ಹಿಂದುಳಿಯಲಿಕ್ಕೆ ಯಾವ ಕಾರಣವೂ ಇಲ್ಲ. ಒಂದೇ ಒಂದು ಮಾತ್ರ ಕಾರಣವದೆ ಅದೇನಂದರೆ, ಒಕ್ಕಲಿಗರು ಸುಸಂಘಿತರಾಗಿ ಕಾಲಕಾಲಕ್ಕೆ ಹೊರಬೀಳುವ ಸುಧಾರಣೆಯನ್ನು ಉಪಯೋಗಿಸಲ್ಲಿ ತಂದು ಅದರಂತೆ ಭೂಮಿಯನ್ನು ಹಸನಮಾಡಿ ಒಕ್ಕಲತನವನ್ನು ಬೆಳೆಸಿರುವದೂ ಅದರಂತೆ ಉತ್ಸಾಹಿ ಹಿತರುಣರು ತಮ್ಮ ಮುಖ್ಯ ವೇಳೆಯನ್ನು ಆಂಗ್ಲಭಾಷೆಯನ್ನು ಕಲಿಯುವುದರಲ್ಲಿ ಕಳೆದು ಕೇವಲ ಗೇಣುಹೊಟ್ಟೆಗಾಗಿ ಪರರ ನೌಕರಿಯನ್ನು ಮಾಡುವುದು ಸರಿಯಲ್ಲ. ಸದ್ಯಕ್ಕೆ ಹೊಟ್ಟೆ ತುಂಬಿಕೊಳ್ಳುವದೇ ಕಠಿಣವಾದದ್ದು ನಿಜವಾದದ್ದು. “ಉಚ್ಚಧ್ಯೇಯವನ್ನು ಇಟ್ಟುಕೊಂಡು ಸಂಘಶಕ್ತಿಯಿಂದ ಕಾರ್ಯಾರಂಭ ಮಾಡಿದಲ್ಲಿ ಹೊಟ್ಟೆ ಹೊರೆಕೊಳ್ಳುವಂಥ ಕ್ಷುದ್ರವಾದ ಹೇತುವು ಅಗಲೇ ಸಾಧಿಸಿ ದೇಶದ ಸಂಪತ್ತಿಯು ಉತ್ಪಾದನದಂಥ ಮಹಾಕಾರ್ಯವು ಸಾಧಿಸುವುದು, ಹೆಚ್ಚು ಉಪದೇಶ ಮಾಡುವುದು, ಪಾಶ್ಚಾತ್ಯ ಲೇಖಕರ ಉದ್ದೇಶವಿರದೆ ತರುಣರಲ್ಲಿಯ ಸದ್ಯದ ಸೇವಾವೃತ್ತಿಯು ಮನೋವೃತ್ತಿಯು ಕಡಿಮೆಯಾಗಿ ಸ್ವತಂತ್ರ ವೃತ್ತಿಯಿಂದ ಶಕ್ತ್ಯವಿದ್ದ ಯಾವದಾದರೊಂದು ಉದ್ಯೋಗವನ್ನಾಗಲೀ, ವ್ಯಾಪಾರವನ್ನಾಗಲೀ, ಕಲೆಯನ್ನಾಗಲೀ ಕಲಿತು ತನ್ನ ಹಾಗೂ ತನ್ನ ಪ್ರಾಂತದ ಅಲ್ಲದೆ ದೇಶದ ಏಳಿಗೆಗೆ ಕಾರಣರಾಗಬೇಕೆಂಬುದೇ ನಮ್ಮ ಉದ್ದೇಶವು ಈ ದೃಷ್ಟಿಯಿಂದ ಕಿರ್ಲೋಸ್ಕರ ಕಾರ್ಖಾನೆಯ ಕಡೆಗೆ ತರುಣರ ದೃಷ್ಟಿ ಎಳೆಯಲ್ಪಡಬೇಕು

ಸಂಪಾದಕ, ಕ ವಾರ್ತೆ.

ಡಿಸ್ಟ್ರಿಕ್ಟ್‌ಬೋರ್ಡಿಗೆ

ಅರ್ಹನಾದಲ್ಲಿ ನನಗೆ ಓಟು ಕೊಡಿರಿ

ಮಡಿಕೇರಿ ಮೂನಾಡು ಓಟರಲ್ಲಿ

ಪಾಂಡಂಡ ಚಂಗಪ್ಪನ ವಿಜ್ಞಾಪನೆಗಳು.

ಮಹಾನುಭಾವರೇ,

ಕೊಡಗಿನ ಇತಿಹಾಸದಲ್ಲಿ ದೇಶದ ಆಡಳಿತೆಯು ಸ್ಥಳಿಕ ಸರಕಾರವು ಡಿಸ್ಟ್ರಿಕ್ಟ್‌ಬೋರ್ಡ್ ಮೂಲಕ ನಡೆಯುತ್ತಿರುವದು ಇದೇ ಪ್ರಥಮವಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ ದೇಶದ ಆಡಳಿತೆಯ ಹಲವು ಭಾಗಗಳಲ್ಲಿ ಒಂದಾದ ಡಿಸ್ಟ್ರಿಕ್ಟ್ ಬೋರ್ಡ್ ಆಡಳಿತವು ಹಳ್ಳಿಯ ರೈತ ಜನರ ಮುಖ್ಯಾಂಶವಾಗಿರುತ್ತದೆ ಡಿಸ್ಟ್ರಿಕ್ಟ್‌ಬೋರ್ಡ್ ಮೂಲಕ ದೇಶಸೇವೆ ಮಾಡುವದೆಂದರೆ ಹಳ್ಳಿಯ ರೈತ ಜನರ ಕ್ಷೇಮ ಚಿಂತೆಯನ್ನು ನೋಡಿ ಕಷ್ಟ ಪರಿಹರಿಸಲು ಪ್ರಯತ್ನಿಸಿ ಸುಖ ಒದಗಿಸುವದೇ ಎಂದು ನನ್ನ ಭಾವನೆಯಾಗಿಗೆ

ನಾನು ಈಗ ಕೆಲವು ವರ್ಷಗಳಿಂದ ನಮ್ಮ ನಾಡು ಮತ್ತು ತಾಲೋಕಿನ ಸರ್ವ ಜನರ ಸ್ಥಿತಿಗತಿಗಳನ್ನು ನೋಡುತ್ತಿದ್ದು ಅವರ ಸುಧಾರಣೆಗೆಂದು ಸೊಂಟಗಟ್ಟುವ ಅಭಿಲಾಷೆಯು ನನ್ನಲ್ಲಿ ನೆಲೆಗೊಂಡಿರುತ್ತದೆ ನಮ್ಮ ಬಾಂಧವರ ಕ್ಷೇಮ ಚಿಂತೆಯಲ್ಲಿ ಭಾಗಿಯಾಗಿಕೊಂಡು “ಆರೋಗ್ಯಭಾಗ್ಯವೇ ಸಕಲ ಭಾಗ್ಯ” “ವಿದ್ಯೆಯೇ ಅಷ್ಟೈಶ್ವರ್ಯ”ವೆಂಬ ತತ್ವವನ್ನು ಕೈಕೊಂಡು ಆಸ್ಪತ್ರೆ, ಶಾಲೆ, ಒಳರಸ್ತೆ ಮೊದಲಾದವುಗಳ ಅಭಿವೃದ್ಧಿಯನ್ನು ವಿಶ್ವಸಾಹಸದಿಂದ ನಮ್ಮ ಬಾಂಧವರಲ್ಲಿ ನೆಲಸಬೇಕೆಂಬದಾಗಿ ನಿರ್ಧರಿಸಿರುತ್ತೇನೆ

ಅಲ್ಲದೆ ದೇಶಾಭಿವೃದ್ಧಿಗೆ ಮುಖ್ಯ ಸಾಧನವಾದ ಆಸ್ಪತ್ರೆ, ಶಾಲೆ ಮೊದಲಾದವುಗಳಿಗೆ ನನ್ನ ತಂದೆಯವರೇ ಎಷ್ಟು ಉತ್ತೇಜನವನ್ನು ಕೊಟ್ಟಿರುತ್ತಾರೆಂಬದನ್ನು ನಾನು ಇಲ್ಲಿ ಬೇರೆ ವರ್ಣಿಸತಕ್ಕದ್ದಿಲ್ಲ. ನನ್ನ ನಾಡಿನವರೆಲ್ಲರೂ ನನ್ನ ತಂದೆಯವರ ಉದ್ದಿಷ್ಟವನ್ನೇ ಪಾಲಿಸಬೇಕೆಂಬ ಅಭಿಲಾಷೆಯಿಂದ ನನ್ನನ್ನು “ಡಿಸ್ಟ್ರಿಕ್ಟ್‌ಬೋರ್ಡಿಗೆ ಒಬ್ಬ ಚುನಾಯಿತ ಮೆಂಬರಾಗಿ ನಿಲ್ಲಲು ಕೇಳಿಕೊಂಡದ್ದರಿಂದ ನಾನು ಅವರ ಅಭಿವೃದ್ಧಿಯನ್ನು ಬಯಸಿ ನನ್ನ ನಾಡಿನ ಮತ್ತು ತಾಲೋಕಿನ ಮೇಲಿರುವ ನನ್ನ ಮಮತೆಯನ್ನು ತೋರಿಸಲು ಇದೇ ಸಮಯವೆಂದರಿತು ತಮ್ಮ ದಾಸತ್ವವನ್ನು ಕೈಕೊಳ್ಳಲು ಉದ್ಯುಕ್ತನಾಗಿ ಮುಂದೆ ಬಂದಿರುತ್ತೇನೆ

ಆದುದರಿಂದ ತಾವುಗಳು ನನ್ನಲ್ಲಿ ಅಭಿಮಾನವಿಟ್ಟು ತಮ್ಮ ಹಕ್ಕಿನ ಓಟು ಒಂದನ್ನು ತಾವೂ, ತಮ್ಮ ಇಷ್ಟ ಮಿತ್ರರೂ, ನೆರೆಹೊರೆಯವರೂ ನನಗೆ ಕೊಟ್ಟು ತಮ್ಮ ಪ್ರತಿನಿಧಿಯಾಗಿ ಚುನಾಯಿಸಿದಲ್ಲಿ ತಮ್ಮ ಸೇವಕನಾಗಿ ಮನಃಪೂರ್ವಕವಾದ ಕೆಲಸ ಮಾಡಲು ನಿರ್ಧರಿಸಿರುತ್ತೇನೆ

ಇತಿ ತಮ್ಮ ನಿರಂತರ ಕ್ಷೇಮಾಭಿಲಾಷಿ,

ಪಾಂಡಂಡ ಚಂಗಪ್ಪ.

ರೆಡ್ಕ್ರಾಸ್ ಸಂಘದ ಪ್ರಕಟಣೆ.

ಇಂಡಿಯನ್ ರೆಡ್‌ಕ್ರಾಸ್ ಸಂಘದ ಮಹಿಳೆಯರ ಕಮಿಟಿಯವರು ಪ್ರತಿ ವರುಷ ಸೇಯಿಗೆ ಪಗ್ಗರಿ ಕೆಲಸಗಳನ್ನು ಮಾಡಿಸಿ ಅದರಿಂದ ಬರುವ ಹುಟ್ಟುವಳಿಯನ್ನು ರೆಡ್‌ಕ್ರಾಸ್ ಸಂಘದ ಸಹಾಯಕ್ಕೆ ಕೊಡುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ ಅದರಂತೆ ಸೇಯಿಗೆ ಹೊಲಿಗೆ ಪಗ್ಗರಿ ಕೆಲಸಗಳನ್ನು ಈಗ ಪುನಹ ಏರ್ಪಡಿಸಿರುವುದರಿಂದ ಎಂದಿನಂತೆ ಪ್ರತಿ [illegible]ವಾರ ದಿನ ಸಾಯಂಕಾಲ 3 ಗಂಟೆಯಿಂದ 5 ಗಂಟೆವರೆಗೆ [illegible]ನ್ನಿಸೈಡ್ ಬಂಗ್ಲೆಗೆ ಸದರಿ ಸಂಘದ ಹಿತಚಿಂತಕರಾದ ಮಹಿಳೆಯರು ದಯವಿಟ್ಟು ಒಂದು ಸದರಿ ಕೆಲಸಗಳನ್ನು [illegible] ಸಿ ಸಂಘಕ್ಕೆ ಪ್ರೋತ್ಸಾಹ ಕೊಡಬೇಕಾಗಿ ಕೇಳಿಕೊಳ್ಳಲಾಗಿದೆ

ಅಲ್ಲದೆ, ಈ ಕಮಿಟಿಯವರು ಮಕ್ಕಳಿಗೆ ಬೇಕಾಗುವ ಎಲ್ಲಾ ತರದ ಬಟ್ಟೆಗಳನ್ನು ತಯಾರಿಸುತ್ತಾರೆ [illegible]ಗೆ ಪಟ್ಟಿ, ಮೇಜು ಗೌನ, ತಲೆದಿಂಬು ಗಾಸ, ಟೇಬಲ್ ನ್ಯಾಪ್‌ಕಿನ್, ಮುಂಟಟುಗಳಿಗೆ ಬೇಕಾಗುವ ಎಲ್ಲಾ ಸೇಯಿಗೆ ಸಾಮಾನುಗಳು ಸಹ ತಯಾರಿಸಲಾಗುತ್ತೆ ಇವುಗಳಲ್ಲದೆ ವಿಶೇಷವಾಗಿ ಯಾವತರದ ಸೆಯಿಗೆ ಮತ್ತು ಹೊಲಿಗೆ ಸಾಮಾನುಗಳು ಬೇಕಾದರೂ ಸಂಘದ ವೈಸ್ ಪ್ರೆಸಿಡೆಂಟರವರಿಗೆ [illegible] ಕೊಂಡಲ್ಲಿ ತಯಾರಿಸಿ ಆದಷ್ಟು ಕಮ್ಮಿ ಬೆಲೆಗೆ ಕೊಡ[illegible] ತ್ರೈ ಹಚ್ಚಿನ ಸಂಗತಿಗೆ ಸಂಘದ ವೈಸ್ ಪ್ರೆಸಿಡೆಂಟರಿಂದ ತಿಳಿದುಕೊಳ್ಳಬಹುದು.

ಸನ್ನಿಸೈಡ್, ಕೊಡಂದೇರ ತಿಮ್ಮಯ್ಯ ಸೀತ[illegible]

ಮಡಿಕೇರಿ ತಾ 21—9—26 ರೆಡ್‌ಕ್ರಾಸ್ ಸಂ[illegible]

ವೈಸ್ ಪ್ರೆಸಿಡೆಂ[illegible]

ಶ್ರೀಮೂಲ ಕಾವೇರಿಯಮ್ಮನವರ ತುಲಾ ಸಂಕ್ರಮಣದ ಮುಹೂರ್ತ ಪ[illegible]

(1) ಸ್ 1926ನೇ ಇಸವಿ ಅಕ್ಟೋಬರ್ ತಾ[illegible] 14ನೇ ಗುರುವಾರ ಬೆಳಿಗ್ಗೆ 11 ಘಂಟೆ 30 ಮಿನಿಟಿಗೆ [illegible] ಪೂರ್ವಾಷಾಢ ನಕ್ಷತ್ರದಲ್ಲಿ ಅಕ್ಷಯ ಪಾತ್ರೆ ಇಡುವ [illegible]ನ ಮುಹೂರ್ತ

(2) ಇದೇ ದಿನ ಸಾಯಂಕಾಲ 5 ಘಂಟೆಗೆ [illegible] ಉತ್ತರಾಷಾಢ ನಕ್ಷತ್ರದಲ್ಲಿ ಕಾಣಿಕೆ ಡಬ್ಬಿ ಇಡುವ [illegible] ಮುಹೂರ್ತ —

(3) ಇದೇ ಅಕ್ಟೋಬರ್ ತಾರೀಕು 17ನೇ (ಕನ್ಯಾಸ ತೇದಿ 31ನೇ) ಆದಿತ್ಯವಾರ ದಿನ ಬೆಳಿಗ್ಗೆ 9 ಗಂಟೆ 2[illegible] ಟಿಗೆ ಸರಿಯಾಗಿ ಶ್ರೀಕಾವೇರಿಯಮ್ಮನವರ ತೀರ್ಥೋದ್ಭವ [illegible]ಪುಣ್ಯಕಾಲದ ಶುಭಮುಹೂರ್ತ

ಕೆ ಚಂಗಪ್ಪ

ಪ್ರೆಸಿಡೆಂಟ್

ವರ್ತಮಾನ ಸಂಗ್ರಹ.

ಒಳ ದೇಶ

ಹಂಗಾಮಿ ಕಮಿಷನರಾಗಿದ್ದ ಮಿ ಇ. ಸಿ. ಉ[illegible]ರು ತಾ 27—9—26ರಲ್ಲಿ ಮದ್ರಾಸಿಗೆ ಹೊರಟು ಹೋ[illegible]

ಕಿಗ್ಗಟ್ಟುನಾಡು ಒಳ್ಳುಮುಂಡೂರು ಗ್ರಾಮದಲ್ಲಿ [illegible] ಕಾಯಿಲೆಯು ಈಗಲೂ ಸಹ ಜೋರಾಗಿದ್ದು ಅಲ್ಲಿ ಪ[illegible] ನಾಟಿಕೆಲಸವು ಬಾಕಿಯುಳ್ಳದೆಯಂತೆ

ಕುಂದಂಗಾಲ ಗ್ರಾಮದ ಮಿ ಬಲ್ಲಡಿಚಂಡ ಪೊ[illegible]ನವರ ಮಗ ಗಣಪತಿಯವರು ಕಳೆದ ತಾ 14ರಲ್ಲಿ [illegible] ಧೀನರಾದರೆಂದು ತಿಳಿಯಲು ವ್ಯಸನಪಡುತ್ತೇವೆ

ಕಳೆದ ತಾರೀಕ 25ರಲ್ಲಿ ಕಮಿಷನರು, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮತ್ತು ಪೊಲೀಸ್ ಡಿಪ್ಯುಟಿ ಸುಪರಿಂಟೆಂಡಂಟರು ಸೇರಿ ಹಲವು ಉಮೇದುವಾರರುಗಳ ಪೈಕಿ [illegible] ಸಿದ್ದಂಡ ರಾಮಪ್ಪನವರನ್ನು ಪೊಲೀಸು ಸಬ್ ಇನ್ಸ್[illegible] ಹುದ್ದೆಗೆ ಆರಿಸಿರುವರು

ಕಿಗ್ಗಟ್ಟುನಾಡಿನ ಕೊಲ್ಲಿಬೈಲು ಎಂಬ ಗದ್ದೆ[illegible] ಇಷ್ಟರವರೆಗೆ ನೀರುತುಂಬಿಕೊಂಡು ಆರಂಭಕ್ಕೆ ಅ[illegible]ವಾಗದೆ ಈಗಿನ ಬಿಸಿಲಿನಿಂದ ನೀರು ಒತ್ತುತ್ತಿರುವದರಿಂದಲ್ಲಿ ಈಗ ನಾಟಿಕೆಲಸವು ಜೋರಾಗಿದೆ ಎಂದು ಸುದ್ದಿ

ಮ ರಾ ಶ್ರೀ ಪುತ್ತಮನೆ ಗಣಪಯ್ಯಯ್ಯ ಯಂ[illegible] ಸಿ ಯವರು ತಾ 25—9—26ರಲ್ಲಿ ಪೊನ್ನಂಪೇಟೆನಾ[illegible] ತ್ತೂರಿನಲ್ಲಿರುವ ತಮ್ಮ ಭವನದಲ್ಲಿ ಕಾಯಿಲೆಯೇ [illegible]ದೆ ಥಕ್ಕನೆ ಶಿವಾಧೀನರಾದರೆಂದು ತಿಳಿಸಲು ವಿಷಾದಿಸು[illegible]

ಸಬ್‌ಅಸಿಸ್ಟೆಂಟ್ ಸರ್ಜನರುಗಳಾದ ಮಿ ಪಿ ಸಿ [illegible] ಮುದ್ದಪ್ಪ[illegible]ರವರನ್ನು ಶ್ರೀಮಂಗಲ ಪೇಟೆಯಿಂದ ನಾಪೋಕ್ಲು[illegible] ಮಿ ಕೋದಂಡ ಕಾರ್ಯಪ್ಪನವರನ್ನು ನಾಪೋಕ್ಲಿನಿಂದ ಶನಿವಾರ[illegible]ಸಂತೆ ಪೇಟೆಗೂ ಕಳೆದ ತಾ. 29ರಿಂದ ವರ್ಗಾಯಿಸಿದ[illegible]

ಕಳೆದ ತಾ 9ರಲ್ಲಿ ಕೊಡಗು ಸಂಪಾಜೆನಾಡಿನ ಪ[illegible]ನಕ್ಕ ಎಂಬ ಸ್ಥಳದಲ್ಲಿ ಒಂದು ತುಂಟ ಆನೆಯು ಪ[illegible] ಕ್ರೈಯ ಒಬ್ಬ ವೈದ್ಯರನ್ನು ಬೆದರಿಸಿಂತಲೂ, ಆ ಆನೆಯು ಅಲ್ಲಿಯೇ ಸಂಚರಿಸುತ್ತಿರುವುದರಿಂದ ಅಲ್ಲಿಗಾಗಿ ತಿರುಗಾಡಲು ಹೆದರುತ್ತಿರುವರೆಂದೂ ಒಂದು ವಾರ್ತೆ.

ಮಿ. ಪುತ್ತಮನೆ ಗಣಪಯ್ಯಯ್ಯನವರ ಮರಣದ ವ್ಯಸನಸೂಚನೆಗಾಗಿ ಕಂಗಳತ್ನನಾಡು ಸಹಕಾ[illegible]ರದವರು ತಾ. 26—9—26 ರಲ್ಲಿ ನಾಯಮೂಡಿ ಕಾ[illegible] ಲ್ಲಿಯೂ, ಮಡಿಕೇರಿ ಪ್ರಾಂತ್ಯದವರ ತಾ. 27 9—2[illegible] ಮಡಿಕೇರಿಯಲ್ಲಿಯೂ ಮೀಟಿಂಗು ನಡಿಸಿದರು ಇವು[illegible] ವರದಿ ಬರುವ ವಾರ ಪ್ರಕಟಿಸಲ್ಪಡುವುವು.

ನಾವು ಕಲವು ದಿವಸಗಳ ಹಿಂದೆ ಪ್ರಕಟಿಸಿದಂತೆ ಮಡಿಕೇರಿ ಮುನಿಸಿಪಾಲಿಟಿಯ ಸ್ಯಾನಿಟರಿ ಇನ್ಸ್‌ಪೆಕ್ಟರ್ ಆದ ಮಿ. ಪಿ. ಪಾಲುವೆಯವರಿಗೆ ಕೊಟ್ಟಿದ್ದ ನ್ಯಾಯ ವಹಿಸಿ ಈಗ ಶಿವಮೊಗ್ಗದ ಪ. ಯಂ. ವ. ಅವರಿಗೆ ಕೊಡಲಾಗಿದೆಯೆಂದೂ ಇವರಿಗೆ ಕ್ವಾರೆಂಟೈನ್ ಲ್ ಸರ್ವೀಸ್ ಪ್ರಾರಂಭ ಒಂದು ತಿಂಗಳ ಸಮಯವೂ ಕೊಡಲಾಗಿದೆಯೆಂದೂ ತಿಳಿದು ಬರುತ್ತದೆ.

ತಾ 26—9—26ರಲ್ಲಿ ಪೊನ್ನಂಪೇಟೆನಾಡು ಮತ್ತೂರು ಗ್ರಾಮದಲ್ಲಿ ಒಬ್ಬ ಜಿಲ್ಲವರನು ಜೈನಪುರದಿಂದ ಬಂದು ಆ ತೋಟದಲ್ಲಿದ್ದ ಕತ್ತಿಯು ಕುತ್ತಿಗೆಗೆ ತಗಲಿ ಮೃತನಾದನು. ಇನ್ನೊಬ್ಬನು ಹದಿನೈದು ದಿವಸಗಳ ಮುಂಚೆ ಅಲ್ಲಿಯೇ ಬಿದ್ದು ಬಹಳ ಏಟು ಆಗಿ ವೀರಾಜಪೇಟೆ ಆಸ್ಪತ್ರೆಯಲ್ಲಿರುವ

ಮೃತ್ಯನಾದನು ಮರ್ಕೇರ ಕ್ಲಬ್ ನಿಂದ ಒಸರುವಿನ ... ಈ ತಾ 5ರಲ್ಲಿ ಅಸ್ಸೆಂಬ್ಲಿ ಹಾಲ್ ಬಳಿ ಮೈದಾನದಲ್ಲಿ ... ನಡೆಂದೂ, ಅಲ್ಲಿ ದೇವಸ್ಥಾನದ ಹಣದ ಲೆಕ್ಕವನ್ನು ... ಪಟ್ಟದದವಿಷಯ ಚರ್ಚಿಸಲ್ಪಡುವದೆಂದೂ ತಿಳಿಯುತ್ತೇವೆ. ಬೆಂಗಳೂರಿನ ಆಕ್ಟಿಂಗ್ ಇಂಪೀರಿಯಲ್ ಡಯರಿ ಎಕ್ಸ್‌ಪರ್ಟ್ ರಾದ ಮಿ. ಟಿ ಆರ್ ಕೂತವಾಲಾ ಬಿ ಯಸ್ ಸಿ. ಬಿ. ಡಿ. ಯವರು ಜೇಪಾಕ ಮೆಜಿಸ್ಟ್ರೇಟರ ಕೋರಿಕೆ ಮೇರೆ ಕೊಡಗಿನ ದನಗಳ ಅಭಿವೃದ್ಧಿಯನ್ನು ಕುರಿತು ವಿಚಾರಿಸಲು ಮಡಿಕೇರಿಗೆ ತಾ 27—9—26ರಲ್ಲು ಬಂದು ಇವರ ಡಿ. ಟ್ರೈಕ್ಟರವರ ಸಂಗಡ ತಾ 29ರಲ್ಲಿ ಸೋಮವಾರಪೇಟೆ ಕಡೆಗೂ, ತಾ 29ರಲ್ಲಿ ವೀರಾಜಪೇಟೆಗಾಗಿ ಹುದಿಕೇರಿ ಕಡೆಗೂ, ತಾ 30ರಲ್ಲಿ ಭಾಗಮಂಡಲದ ಕಡೆಗೂ ಹೋಗಿ ಅಲ್ಲಿಯ ಸ್ಥಿತಿಯನ್ನೂ ದನಕರಗಳನ್ನೂ ನೋಡಿಕೊಂಡು ಬಂದದ್ದಲ್ಲದೆ ತಾ 30ರಲ್ಲಿ ವ ದ್ಯಾವಿಷ್ಣು ಡ ಮೇಲೆ ಮಡಿಕೇರಿಯಲ್ಲಿ ವ್ಯವಸಾಯಗಾರರಲ್ಲಿ ಕಲವು ವರ್ತಕರನ್ನು ಮಾಡಿಕೊಂಡು ದನಗಳ ತಳಿಯನ್ನು ಉತ್ತಮಗೊಳಿಸುವದು ಮತ್ತು ಡೆಯರಿ ಫಾರಮ್ ಇಡುವದರ ವಿಷಯ ಪ್ರಸ್ತಾಪಿಸಿದರು. ಇವರು ಆ ದಿನ ವಾಪಸು ಬೆಂಗಳೂರಿಗೆ ಹೊರಟು ಹೋದರು. ಸಿಂಧಾದೇಶದ ಕೆಂಪು ಬಣ್ಣದ ಗೂಳಿಯು ತಳಿಯು ಇಲ್ಲಿಗೆ ಒಳ್ಳೆಯದಾಗುವದೆಂದು, ಮಡಿಕೇರಿಯಲ್ಲಿ ಸರಕಾರದವರು ಒಂದು ಡೆಯರಿ ಫಾರಮ್ ಸರಕಾರದವರು ಇಡುವುದು ಉತ್ತಮವೆಂದೂ ಇವರು ಅಭಿಪ್ರಾಯಪಟ್ಟಿರುವರೆಂದು ತಿಳಿಯುತ್ತೇವೆ

ಹಿಂದೂದೇಶ.

ರಾಮೇಶ್ವರ ತೀರ್ಥಸ್ನಾನಕ್ಕೆ ಸರಾಸರಿ ವರ್ಷಕ್ಕೆ 20 ಲಕ್ಷ ಯಾತ್ರಿಕರು ಹೋಗುತ್ತಿರುವರೆಂದು ಕಂಡು ಹಿಡಿಯಲಾಗಿದೆ

ಅಖಿಲಭಾರತ ವೈಷ್ಣವ ಮಹಾಸಭೆಯು ಬರುವ ನವಂಬರು ತಾರೀಕು 26ರಿಂದ 28ರ ವರೆಗೆ ಹೈದರಾಬಾದಿನಲ್ಲಿ ಸೇರುವದು.

ಸೆಂಟ್ರಲ್ ಸಿಖ್ ಲೀಗಿನವರ ಕಾಂಗ್ರೆಸ್ಸಿನ ಪರವಾಗಿ ಪಂಜಾಬು ಕೌನ್ಸಿಲಿಗೂ ಲೆಜಿಸ್ಲೇಟಿವ್ ಅಸೆಂಬ್ಲಿಗೂ ಉಮೇದುವಾರರನ್ನು ನಿಲ್ಲಿಸುವಂತೆ ತೀರ್ಮಾನಿಸಿರುವರು

ಹಿಂದೂಮಹಾಸಭೆಯು ಇದರ ಪ್ರಾಂತೀಕ ಉಪಸಭೆಗಳಿಗೆ ಕೌನ್ಸಿಲು ಚುನಾವಣೆಗೆ ಉಮೇದುವಾರರನ್ನು ನೇಮಿಸುವ ಅಧಿಕಾರ ಕೊಟ್ಟ ಕಾರಣಕ್ಕಾಗಿ ಸ್ವಾಮಿ ಶ್ರದ್ಧಾನಂದರವರು ಅದರ ಮೆಂಬರ ತನಕ್ಕೆ ರಾಜಿನಾಮೆ ಕೊಟ್ಟಿರುವರು.

ಬರೋಡದಲ್ಲಿರುವ ಹಿಸ್ಸ ಸಂಸ್ಥಾನದ ರಾಜರು ಅಲ್ಲಿ ಗೋವಧೆಯನ್ನು ಮಾಡಕೂಡದೆಂದು ಆಜ್ಞಾಪಿಸಿರುವದಲ್ಲದೆ ವರ್ಷದಲ್ಲಿ 8 ದಿವಸ ಯಾವ ಪ್ರಾಣಿಯನ್ನೂ ಕೊಲ್ಲಕೂಡದೆಂದು ಹುಕುಂ ಮಾಡಿರುವರಂತೆ

ಅಫೀಮು ಸೇದುವದರ ಸಂಬಂಧದ ಬಿಲ್ಲು ಅಸ್ಸಾಮ್ ಕೌನ್ಸಿಲಿನಲ್ಲಿ ಪಾಸಾಗಿದೆ. ಈ ಕಾನೂನಿನ ಮೇರೆ ಇಬ್ಬರು ಯಾ ಹೆಚ್ಚು ಜನರು ಜೊತೆಸೇರಿ ಅಫೀಮು ಸೇದಿದರೆ ಪ್ರತಿಯೊಬ್ಬನಿಗೂ ಒಂದು ತಿಂಗಳು ಸಜೆ ಯಾ ರೂ 50 ಜುಲುಮಾನೆ ಅಥವಾ ಇವೆರಡು ಶಿಕ್ಷೆಗಳೂ ವಿಧಿಸಲಾಗುವದೆಂದಿದೆ

ಅಹಮ್ಮದಾಬಾದಿನ ಮುನ್ಸಿಪಾಲಿಟಿಯ ಮೇನೇಜಿಂಗ್ ಕಮಿಟಿಯವರು ಮತ್ತು ಸೆಕ್ರೆಟರಿಯವರು ಸರಿಯಾಗಿ ಕೆಲಸ ಮಾಡಲಿಲ್ಲವೆಂಬ ಕಾರಣದಿಂದ ಅವರ ಅಧ್ಯಕ್ಷರಾಗಿದ್ದ ಮಿ. ವಿಠಲಭಾಯಿ ಪಟೇಲರವರು ರಾಜಿನಾಮೆ ಕೊಟ್ಟರು. ರಾಜಿನಾಮೆಯನ್ನು ವಾಪಸು ತೆಗೆದುಕೊಳ್ಳುವಂತೆ ಅವರನ್ನು ಕೋರಿಕೊಳ್ಳಬೇಕೆಂದು ಮುನ್ಸಿಪಾಲಿಟಿ ಮೆಂಬರುಗಳು ಬಹುಮತದಿಂದ ತೀರ್ಮಾನಿಸಿರುವರು.

ಸಿಖ್ ಗುರುದ್ವಾರಪ್ರಚಾರಕ ಕಮಿಟಿಯವರು ಗುರುದ್ವಾರಗಳ ... ಮಿಸ್ಸ ... ಸರಕಾರದವರು ... ಮೇಲೆ ನಡೆಸುತ್ತಿದ್ದ ಕೇಸನ್ನು ವಾಪಸು ತೆಗೆದು ಕೊಂಡು ಜೈಲಿನಲ್ಲಿದ್ದ ಆ ಮುಂದಾಳುಗಳನ್ನು ಲಾಹೋರಿನಲ್ಲಿ ತಾ 27—9—26ರಲ್ಲಿ ಜೈಲಿನಿಂದ ಬಿಡುಗಡೆಮಾಡಿರುವರು. ಅವರು ಮರುದಿನ ಅಮೃತಸರಕ್ಕೆ ಹೋದಲ್ಲಿ ಅವರಿಗೆ ದೊಡ್ಡ ಸ್ವಾಗತ ನೀಡಿದರು

ಕಾಂಗ್ರೆಸ್ ಮೆಂಬರು ತನ.

ಕಳೆದ ಮೇ ತಿಂಗಳಲ್ಲಿ ಒಕ್ಕಾಲಿಯಲ್ಲಿ ನಡೆದ ಕರ್ನಾಟಕದೇಶದ ಪ್ರಾಂತೀಕ ಸ್ವಯಂಸೇವಕರ ಕಾನ್ಫರನ್ಸಿನಲ್ಲಿ ತೀರ್ಮಾನಿಸಿದಂತೆ ಅವರು ತಾವು ಒಪ್ಪಿಕೊಂಡ ಪಾಲಿ ದೀಪಾವಳಿಗೇನೇ ಅಂದರೆ ನವೆಂಬರ್ ಆರನೇ ತಾರೀಖಿಗೆ 10,000 ಕಾಂಗ್ರೆಸ್ ಮೆಂಬರುಗಳನ್ನು ಸೇರಿಸಿರುವರೆಂದು ಪ್ರಕಟಿಸಲು ಸಂತೋಷಪಡುತ್ತೇನೆಂದು ಕರ್ನಾಟಕ ಪ್ರಾಂತೀಕ ವಾಲಂಟಿಯರ್ ಬೋರ್ಡಿನ ಸೆಕ್ರೆಟರಿಯಾದ ಡಾಕ್ಟರ್ ಯನ್ ಯಸ್ ಹರ್ಡೀಕರವರು ಬರೆದಿರುತ್ತಾರೆ

ವಿದೇಶ.

ಕಳೆದ ಹಾಗೆ ಒಗ್ಗಿ ಹೊಡೆದಾಗ ಗ್ರಾಜುಯೇಟು ... ದಲ್ಲಿ ಒಬ್ಬ ಶಾಸ್ತ್ರಜ್ಞನಿರುವ ... ಅಂತೆ

ಲಂಡನಿನಲ್ಲಿರುವ ... ನ ಸಂಗ್ರಹಾಲಯದ (ಬ್ರಿಟಿಷ ಮ್ಯೂಸಿಯಂ) ಪುಸ್ತಕ ಭಂಡಾರದಲ್ಲಿ 30 ಲಕ್ಷ ಪುಸ್ತಕಗಳಿವೆ

ಗಂಡಸರಂತೆಯೇ ಹೆಂಗಸರಿಗೂ ವಿ ... ಶರಬೇಕು ಕೊಡುವಂತೆ ರಷ್ಯಾ ಸರ್ಕಾರದವರು ತೀರ್ಮಾನಿಸಿರುವರು

ಚಿಕಾಗೋದ 'ಫೀಲ್ಡ್' ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿತವಾಗಿ ಇಡಲ್ಪಟ್ಟಿರುವ ಪ್ರಾಣಿಗಳಲ್ಲಿ ಒಂದು 40 ಕೋಟಿ ವರ್ಷಗಳ ಹಿಂದಿನದಂತೆ!

ಒಂದೇ ಕೂದಲಿಗಾಗಿಯೇ ಮನುಷ್ಯರು ಅನೇಕ ಕಾಡುಮೃಗಗಳನ್ನು ಕೊಲ್ಲುತ್ತಿರುವರು. ಭೂಲೋಕದಲ್ಲಿ ಈ ಉದ್ದೇಶಕ್ಕಾಗಿ ವರ್ಷಂಪ್ರತಿ ಸರಾಸರಿ 7 ಕೋಟಿ ಕಾಡುಮೃಗಗಳು ನಾಶಮಾಡಲ್ಪಡುತ್ತಿವೆಯೆಂದು ತಿಳಿಯಬರುತ್ತದೆ.

ಅಮೇರಿಕದೇಶದ ನ್ಯೂಯಾರ್ಕ ಪ್ರತಿಕಾಕಾರರೊಬ್ಬರು ತನ್ನ ಪತ್ರಿಕೆಯಲ್ಲಿ ವಿನೋದ ಮಾತುಗಳನ್ನು ಬರೆಯುತ್ತಿರುವ ಒಬ್ಬ ಹಾಸ್ಯ ಗಾರನಿಗೆ ವಾರಕ್ಕೆ ರೂ 3000 ಕೊಡುತ್ತಿರುವರಂತೆ!

ಕಳೆದ ತಾ 17ರಲ್ಲಿ ಅಮೇರಿಕದ ಫ್ಲೋರಿಡ ಪ್ರಾಂತ್ಯದ ಕರಾವಳಿಯಲ್ಲಿ ಗಂಟೆಗೆ 90 ಮೈಲಿ ವೇಗದಲ್ಲಿ ಹಾರಿದ ಪ್ರಚಂಡ ಬಿರುಗಾಳಿ ಎದ್ದು 38 ಸಾವಿರ ಜನರ ಮನೆಗಳಿಲ್ಲದಾಗಿವೆ. ಸುಮಾರು 360 ಜನರು ಮೃತಪಟ್ಟರೆಂದೂ ಒಟ್ಟು ನಷ್ಟವು 100 ರಿಂದ 350 ಮಿಲಿಯ ಡಾಲರುಗಳಾಗಬಹುದೆಂದು ಅಂದಾಜು ಮಾಡಲಾಗಿದೆಯೆಂದೂ ವರ್ತಮಾನ.

ಭೂಲೋಕದಲ್ಲಿ ಅತಿ ದೊಡ್ಡ ಐಶ್ವರ್ಯವಂತರಲ್ಲಿ ಒಬ್ಬರಾದ ಮತ್ತು ಅಮೇರಿಕದ ಪ್ರಸಿದ್ಧ ಫೋರ್ಡ್ ಮೋಟಾರ್ ಕಂಪೆನಿಯ ಮಾಲೀಕರಾದ ಹೆನ್ರಿ ಫೋರ್ಡ್‌ರವರು ಪೋಲೆಂಡಿನ ನೂತನ ಮಂತ್ರಿಯವರಿಗೆ ಅಗ್ಗ ಮಾಡಿಕೊಡುವ ಶರ್ತ ಮಗಳಿಗೆ 60 ಮಿಲಿಯ ಡಾಲರುಗಳನ್ನು ಸಾಲಕೊಡುವರಂತೆ. ಪ್ರಪಂಚದಲ್ಲಿ ಅವರಿಗೆ ಯಾರೂ ಇಷ್ಟು ದೊಡ್ಡ ಸಾಲ ಕೊಟ್ಟಿಲ್ಲ

ಆಫ್ರಿಕದ ಟ್ರಾನ್ಸ್‌ವಾಲಿನಲ್ಲಿ ಒಬ್ಬ ಸ್ತ್ರೀಯು ತನ್ನ ಗರ್ಭಿಣಿಯ ದಿವಸಗಳನ್ನು ಸಹಿಸಲಾರದೆ ಮಗು ಹೆರದೆ ಹಲವು 15 ವರ್ಷಗಳಾದರೂ ಇನ್ನೂ ಪ್ರಸವಿತಳಾಗಿರುವದಿಲ್ಲವಂತೆ! ಈ ಸುದ್ದಿಯನ್ನು ಕೇಳಿ ಹಲವು ಸುಪ್ರಸಿದ್ಧ ಡಾಕ್ಟರುಗಳು ಅಲ್ಲಿಗೆ ಹೋಗಿ ಆಕೆಯನ್ನು ಪರೀಕ್ಷಿಸಲು ಎಷ್ಟು ಚಿಕಿತ್ಸೆ ಮಾಡಿ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಈಗಲೂ ಆಕೆ ಜೀವಂತಳಾಗಿರುವಳಂತೆ! ಕಲಿಯುಗದಲ್ಲಿ ಕುಂಭಕರ್ಣನು ಈ ಸ್ತ್ರೀವೇಷದಲ್ಲಿ ಹುಟ್ಟಿರುವನೆಂದು ತೋರುತ್ತದಲ್ಲವೇ?

ಪತ್ರವ್ಯವಹಾರ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ವೀರಾಜಪೇಟೆ ಬೋರ್ಡ

"ಲೋಕಪಾವನದಲ್ಲಿ" 23—9—26 ರಲ್ಲು ಪ್ರಕಟಣೆಯಾದ ನಿಜವಲ್ಲದ ಬಾತ್ಮಿಗೆ ಉತ್ತರ

"ಲೋಕಪಾವನ"ದಲ್ಲಿ ಪ್ರಕಟಣೆಯಾದಂತೆ ವೀರಾಜಪೇಟೆ ಕೊಡಗರ ಭೋಜನದಲ್ಲಿ ನಾನು ಯಾವ ಸಮಾಜದ ಯಾ, ಕುಲದ ವಿಷಯ ಯಾವ ಭಾಷಣವನ್ನೂ ಮಾಡಿರುವದಿಲ್ಲ. ವೀರಾಜಪೇಟೆ ಕೊಡಗರು ಈ ಗತಕಾಲ ಸ್ಥಾಪನೆ ಮಾಡಬೇಕೆಂದಿರುವ ಪರಸ್ಪರ ಪ್ರಯೋಜನಾರ್ಥದ ಫಂಡಿಗೆ (Mutual Benefit Society) ಎಲ್ಲರೂ ಸೇರಬೇಕೆಂದೂ ಈ ಸಂಘವನ್ನು ಚೆನ್ನಾಗಿ ನಡೆಸಬೇಕೆಂದೂ ನಾನು ಹೇಳಿದ್ದಾಗಿದೆ

ನಿಜವಲ್ಲದ ಸಂಗತಿಯನ್ನು ಪ್ರಕಟಿಸಿದುದಕ್ಕೂ, ನನ್ನ ಮೇಲೆ ಈ ರೀತಿಯಾದ ಜಾತಿ, ಕೋಮು ದ್ವೇಷಗಳನ್ನು ಸೂಚಿಸುವ ಆರೋಪಣೆಗಳನ್ನು ಪ್ರಕಟಿಸಿದುದಕ್ಕೂ ನಾನು ವಿಷಾದಿಸುತ್ತೇನೆ. ಈಗಲೇ ಇಂಥಾ ಗೂಢಾರ್ಥವನ್ನು ಕಲ್ಪಿಸಿ, ನನ್ನ ಹೆಸರನ್ನು ವೃಥಾ ಸಂಶಯಾಸ್ಪದಕ್ಕೆ ಇಳಿಸುವ ಈ ಬಾತ್ಮಿಯು ವಿಷಯ ಯೋಚಿಸುವಾಗ, ಇಂಥಾ ಉಪಕಾರಗಳಿಗೆ ಸೇರುವದೇ ಒಳ್ಳೆಯದಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ. ಆದ್ದರಿಂದ ಈ ಹೊಸ ಪರಸ್ಪರ ಪ್ರಯೋಜನಾರ್ಥದ ಫಂಡಿನ ಕಮಿಟಿಮೆಂಬರಾಗಿಯಾಗಲೀ ಯಾ, ಶೇರುದಾರನಾಗಿಯಾಗಲೀ ಇರಲಿಕ್ಕೆ ನನಗೆ ಇಷ್ಟವಿಲ್ಲದ್ದರಿಂದ ನನ್ನ ರಾಜಿನಾಮೆಯನ್ನು ಈ ಸಂಘದ ಸೆಕ್ರೆಟರಿಗೆ ಕಳುಹಿಸುತ್ತೇನೆ

ಪಟ್ಟಿಯಂಡ ಸಂಜಪ್ಪ

ಮೂನಾರ್ನಾಡು ಮೀಟಿಂಗು.

ಅಯ್ಯಾ,

ತಾ. 26—9—26 ರಲ್ಲು ಮೂನಾರ್ನಾಡು ಪಾಂಡಾಣೆ ಮಂದಿನಲ್ಲು ನಾಡುಜನರ ಮೀಟಿಂಗ್ ಒಂದು ಮುಂದಿನ ಡಿ. ಬೋರ್ಡ್ ಮತ್ತು ಲೆ. ಕೌನ್ಸಿಲು ವಿಷಯವಾಗಿ ಮೆ. ಕೆ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೀಟಿಂಗಿಗೆ ಸುಮಾರು 150 ಜನರು ಸೇರಿದ್ದರು. ಡಿ. ಬೋರ್ಡ್ ಮತ್ತು ಲೆ. ಕೌನ್ಸಿಲು ವಿಷಯವಾಗಿ ಮೆ. ಪಿ. ಮುತ್ತಣ್ಣನವರು ವಿವರಿಸಿದನಂತರ ದೀರ್ಘಚರ್ಚೆಯಿಂದ ಮೆ. ಪಾಂಡಂಡ ಚಂಗಪ್ಪನವರನ್ನು ಡಿ. ಬೋರ್ಡಿನ ಚುನಾಯಿತ ಮೆಂಬರನ್ನಾಗಿ ಕಳುಹಿಸುವಂತೆ ಸರ್ವಸಮ್ಮತದಿಂದ ತೀರ್ಮಾನವಾಯಿತು. ಗೌಡುಗಳ ಲೀಡರೆಂದು ತೋರ್ಪಡಿಸುವ ಮೆ. ಮುದ್ದಪ್ಪನವರ ಬಂದ ನಿವಾರನ್ನು ಪತ್ರವು ಗೌಡುಗಳಿಗೆಲ್ಲಾ ಕಳುಹಿಸಿದ್ದು ಮುಖ್ಯವಾಗಿ ಪಂಗಡ ದ್ವೇಷವನ್ನು ಊರುವಂಥಾದೆಂಬುದಾಗಿ ಸಭಿಕರು ಆಲೋಚಿಸಿ ಬಹಳ ವಿಷಾದಿಸುತ್ತಾರೆ

ಪಿ ಯಂ ಮುತ್ತಣ್ಣ

ಸ್ವಂತ ಹೆಸರು ಸಂಶಯಕ್ಕೆ ಕಾರಣ!

ಮಹನೀಯರೆ,

"ಎಲ್ಲಾ ನೀವೇ ತಿನ್ನಿ" ಎಂಬ ಹೆಸರಿನ ಬಾತ್ಮಿಯೊಂದು ಕಳೆದವಾರದ 'ಲೋಕಪಾವನ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದನ್ನು ಬರೆದಂತ ಎಂ ಎಸ್ ಮಾದಪ್ಪನವರು ಯಾರೆಂದು ತಿಳಿಯದೆ ಹೋಯಿತು. ಇವರು ತಮ್ಮ ಪೂರ್ಣ ಹೆಸರನ್ನು ಪ್ರಕಟಿಸಿದ್ದರೆ ಇಂಥ ಸಂಶಯಕ್ಕೆ ಕಾರಣವಿರುತ್ತಿರಲಿಲ್ಲ. ನಾನು ಬರೆದದೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಇದು ತಪ್ಪು. ಈ ಬಾತ್ಮಿಯನ್ನು ನಾನು ಬರೆಯಲಿಲ್ಲ. ಆದುದರಿಂದ ಮಹನೀಯರು ಈ ಕರದಲ್ಲಿ ತಪ್ಪು ತಿಳಿಯಬಾರದೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಲೋಕಪಾವನದ ಸಂಪಾದಕರು ದಯವಿಟ್ಟು ಆ ಬಾತ್ಮಿಯನ್ನು ಬರೆದ ಎಂ ಎಸ್ ಮಾದಪ್ಪನವರು ಯಾರೆಂದು ಪೂರ್ಣ ಹೆಸರು ಪ್ರಕಟಿಸಿ ನಮ್ಮ ಸಂಶಯವನ್ನು ಹೋಗಲಾಡಿಸಬೇಕಾಗಿ ಕೇಳಿಕೊಂಡಿದ್ದೇನೆ. ಈ ಹೆಸರಿನ ಇನ್ನೊಬ್ಬರಿಲ್ಲದೆ, ನನ್ನ ಹೆಸರಿನಲ್ಲಿಯೇ ಬೇರೆಯವರು ಈ ಬಾತ್ಮಿಯನ್ನು ಬರೆದದ್ದಾಗಿದ್ದರೆ ಈ ಬಾತ್ಮಿಯನ್ನು ಮಹನೀಯರು ದಯವಿಟ್ಟು ಲಕ್ಷಿಸಬಾರದೆಂದು ನನ್ನ ಕೋರಿಕೆ

ಎಂ ಎಸ್ ಮಾದಪ್ಪ,
(ಮೇಕೇರಿರ ಎಸ್ ಮಾದಪ್ಪ).

ಅಯ್ಯಾ ಕ ಎಸ್ ಸಿ ಯವರೇ,

ನೀವು ನಮ್ಮ ದಿನದ ಬರೆದ ಬಾತ್ಮಿಗೆ ಜವಾಬು ಬರೆದು ಬಹಳ ಸಂತೋಷವಾಯಿತು. ನೀವು ಒಬ್ಬ ... ಬರೆದರೆಂಬ ಆಗ್ರಹದಿಂದಲೋ ಯಾ ಮತ್ತ್ಯಾವ ಕಾರಣದಿಂದಲೋ, ಆ ಬಾತ್ಮಿಗೆ ಅನಾವಶ್ಯ ಮಾದುದ್ದ ಜವಾಬನ್ನು ಬರೆದಿರುತ್ತೀರಿ. ನೀವು "ಮುದುಕರು ದ್ವಾಪರಯುಗದಲ್ಲಿ ಹುಟ್ಟಿ ಕಲಿಯುಗದಲ್ಲಿ ಜೀವಿಸುವ ಹಾಗೆ ಕಂಡು ಬರುತ್ತೆ" ಎಂದು ಬರೆದಿರುವಿರಿ. ಆದರೆ, ಮನುಷ್ಯನು ಯುಗದಲ್ಲಿ ಹುಟ್ಟಿದ್ದು ಮಾತ್ರವಲ್ಲದ, ಯುಗವು ಮನುಷ್ಯನಲ್ಲಿ ಹುಟ್ಟಲ್ಲವೆಂದು ನೀವು ಚೆನ್ನಾಗಿ ತಿಳಿಯಬೇಕು. ನೀವೇ ಇಂಥ ಆಚಾರವಿಚಾರಗಳನ್ನು ಮಾಡದುದಲ್ಲದೆ ಯುಗದ ಮಹಿಮೆ ಎಂದೂ ಅಲ್ಲವು. 'ಪಾಶ್ಚಾತ್ಯರ ಉಡುಪನ್ನು ಸಮಾಜಕ್ಕೆ ಸರಿಯಾಗಿ (According to the society) ಧರಿಸತಕ್ಕದ್ದೆಂದು ಬರೆಯುತ್ತೀರಿ. ಇದನ್ನು ನೋಡುವಾಗ ನಿಮ್ಮ ಸ್ವಜಾತಿಯ ಉಡುಪನ್ನು ಧರಿಸಿಕೊಂಡು ಒಂದು ಸಮಾಜಕ್ಕೆ ಹೋದರೆ ನಿಮಗೆ ಮರ್ಯಾದೆ ಇಲ್ಲವೆಂದು ಭಾವನೆಯಾಯಿತು. ಪಾಶ್ಚಾತ್ಯರ ಉಡುಪನ್ನು ಧರಿಸಿಕೊಂಡು ನೀವು ಅವರ ಸಭೆಗೆ ಹೋದಲ್ಲು ನಿಮ್ಮ ಗೌರವವೂ ಯಾ ಮರ್ಯಾದೆಯೂ ಇನ್ನೂ ಕಮ್ಮಿಯಾಗದಲ್ಲದೆ ಹೆಚ್ಚುವದಿಲ್ಲವೆಂದು ಖಂಡಿತ ತಿಳಿದಿರಿ. ಸ್ವಜಾತಿಯ ಉಡುಪನ್ನು ಧರಿಸಿ ನಿಮ್ಮ ಹಿರಿಯರ ಆಚಾರವಿಚಾರಗಳಲ್ಲಿ ನೀವು ಭಾಗಿಗಳಾದರೆ ನಿಮಗೂ ಮತ್ತು ನಿಮ್ಮಂಥ ಸುಪುತ್ರರನ್ನು ಪಡೆದ ನಮ್ಮ ಚಿಕ್ಕ ದೇಶಕ್ಕೂ ಮಾನ್ಯತೆಯೂ, ಸಂತೋಷವೂ ಉಂಟಾಗುವುದರಲ್ಲಿ ಯಾವ ಸಂಶಯವೂ ಇಲ್ಲವು. ನೀವು ಈಗಾಗಲೇ ಇಂಥ ಉಡುಪು ಆಚಾರವಿಚಾರಗಳನ್ನು ಹಿಂಬಾಲಿಸಿದ್ದರಿಂದ, ನಿಮಗೆ ಇದರ ಯಾವ ತರದ ಕುಂದುಕೊರತೆಗಳೂ ಕಾಣಲ್ಲ. ನಿಮಗೆ ನಿಮ್ಮ ನವೀನ ಆಚಾರವಿಚಾರಗಳೇ ಸುಬದ್ಧವಾಗಿ ಕಾಣುತ್ತಿಂದಾತು. "To offend and judge are distinct offices" ಎಂದು ಇಂಗ್ಲಿಷನಲ್ಲಿ ಒಬ್ಬ ಕವಿಯು ಹೇಳಿರುವನು. ಆದುದರಿಂದ ನೀವು ಈಗ ಆಚರಿಸುತ್ತಿರುವ ವಿಚಾರವು ನಿಮಗೆ ಎಂದೂ ಕಷ್ಟಿತವಾಗಿ ಕಂಡು ಬರಲಿಕ್ಕಿಲ್ಲವು. ಅದರ ಕುಂದುಕೊರತೆಗಳನ್ನು ಕಂಡುಹಿಡಿಯಲು ಮತ್ತೊಬ್ಬನು ಅವಶ್ಯವು

ವಿದ್ಯೆಯಿಂದ ಪ್ರಯೋಜನವಿಲ್ಲವೆಂದು ಯಾರೂ ಹೇಳಲಾರರು. ಆದರೆ ವಿದ್ಯೆಯನ್ನು ಕಲಿತ ಮಾತ್ರಕ್ಕೆ ಪಾಶ್ಚಾತ್ಯರನ್ನು ಹಿಂಬಾಲಿಸುವ ಅವಶ್ಯಕತೆ ಎಲ್ಲಿಯದು? ವಿದ್ಯೆಯನ್ನು ಕಲಿತು ಹಿಂದಿರುಗಿ ಬಂದು ಹಿಂದುಳಿದ ನಮ್ಮ ಜನರನ್ನು ಮುಂದು ತರಬೇಕೆಂಬುದೇ ನಮ್ಮ ಬಯಕೆಯು. ಉದ್ಯೋಗವನ್ನೇ ನೋಡಬೇಕೆಂದು ನಾವು ಎಂದೂ ಹೇಳೆವು. ಪರದೇಶಗಳಲ್ಲಿ ಆಗುತ್ತಿರುವ ಕೃಷಿ, ಕೈಗಾರಿಕೆ, ವ್ಯಾಪಾರ ಮೊದಲಾದವುಗಳನ್ನು ಹಿಡಿತದಿಂದಲೂ ವೃದ್ಧಿಪಡಿಸಬೇಕು. ಎಂದಿನವರೆಗೆ ನಮ್ಮ ದೇಶದ ವ್ಯಾಪಾರವು ಪರರ ಕೈಯಲ್ಲಿ ಇರುವುದೋ ಅಂದಿನವರೆಗೆ ನಮಗೆ ದಾರಿದ್ರ್ಯವು ತಪ್ಪದು. ಆದುದರಿಂದ ನಮ್ಮ ದೇಶೀಯ ಯುವಕರು ತಮ್ಮ ಹೊರಗಿನ ರೀತಿಯನ್ನು ಬಿಟ್ಟು ತಮ್ಮ ಒಳಗಿನ ಸ್ಥಿತಿಯನ್ನು ವೃದ್ಧಿಪಡಿಸಬೇಕೆಂಬುದೇ ನಮ್ಮ ಆಸೆಯು. ಈ ಹೊರಗಿನ ಡಂಭದಿಂದ ನಮ್ಮ ಜನರಿಗೆ ಯಾವ ಪ್ರಯೋಜನವೂ ಇಲ್ಲವು. ಆದುದ

ರಿಂದ ಇನ್ನಾದರೂ ನೀವು ಚೆನ್ನಾಗಿ ಪರಿಶೀಲಿಸಿ ಪರರನ್ನು ಹಿಂಬಾಲಿಸುವುದನ್ನು ಬಿಟ್ಟು ತಮ್ಮ ಸ್ವಜಾತಿಯ ಮತ್ತು ಸ್ವದೇಶದ ಮುಂದುವರಿಕೆಗೆ ಸಹಾಯಕರಾಗುವಿರೆಂದು ನಂಬುತ್ತೇನೆ

" ಮುಮುಕ."

ದಿವಂಗತ ಕೊಂಗಟ್ಟೀರ ಪೊನ್ನಪ್ಪನವರು

ಅಯ್ಯಾ,

ಈ ತಾರೀಕು 12ರಲ್ಲು ದೇವಸಾನಿಧ್ಯವನ್ನು ಹೊಂದಿದ ಮು ರಾ ಶ್ರೀ ಕೊಂಗಟ್ಟೀರ ಪೊನ್ನಪ್ಪನವರು ತಮ್ಮ ಯಪ್ಪನದಲ್ಲಿ ಮೈಸೂರು ದೇಶದಲ್ಲಿ ಉದ್ಯೋಗಮಾಡಿ ವಿಶ್ರಾಂತಿ ಹೊಂದಲು ಬಂದ ಬಳಿಕ ತನ್ನ ಮಾತೃಸ್ಥಾನವಾದ ಈ ಕೇರಿಯ ಶ್ರೀಮಂಗಲ ಗ್ರಾಮದಲ್ಲಿ ಬಾಲಕ ಬಾಲಕಿಯರಿಗೆ ಒಂದು ಪಾಠಶಾಲೆಯು ಇಲ್ಲದಿರುವುದನ್ನು ನೋಡಿ ಮನನೊಂದು ಯಾರೊಬ್ಬರಿಗೂ, ಯಾವ ವಿಧದ ತೊಂದರೆಯೂ ಕೊಡದೆ ತಮ್ಮ ಸ್ವಂತ ಹಣದಿಂದ 1925ನೇ ಇಸವಿಯಲ್ಲೇ ಈ ಗ್ರಾಮದ ಮಧ್ಯದಲ್ಲಿ ಅಂದರೆ ಮಡಿಕೇರಿ—ಸಿದ್ದಾಪುರ ರಸ್ತೆ ಪಕ್ಕದಲ್ಲಿ ಮೈಲು ೬೦ ಒಂದು ಹೊಸ ಪಾಠಶಾಲೆಯನ್ನು ಕಟ್ಟಿಸಿ ಕೆಲಸ ಮುಗಿಸಲು ಪ್ರಯತ್ನಿಸುವದರೊಳಗಾಗಿ ಈ ಊರಿನ ಬಡ ವಿದ್ಯಾರ್ಥಿಗಳ ಗ್ರಹಚಾರದಿಂದಲೋ, ಏನೋ ಎಂಬಂತೆ ಅಕಾಲ ಮೃತ್ಯುವಶರಾದ ಸದರಿ ಕಟ್ಟಡವು ಪೂರ್ತಿ ಇದ್ದು ನಿಲ ನಿಂತು ಹೋಯಿತು ಆದರೂ ಈ ಮಹಾನುಭಾವರು ತಮ ಗಿಂತ ಸಾಧಾರಣ 50 ರೂಪಾಯಿಯು ನಷ್ಟಕ್ಕೆ ದೇವರ ದಯೆ ಪ್ರಸಂಗದಿಂದ ತಾವು ಹಿಡಿದ ಕಾರ್ಯವನ್ನು ಸಾಧಿಸಿ ಬಂದು ಹೊಸ ಪಾಠಶಾಲೆಯನ್ನು ಕಟ್ಟಿಸಿ, ಮೊನ್ನೆ ತಾನೇ ಕಟ್ಟಡದ ಕೆಲಸ ಪೂರ್ಣವಾದ ಇವರ ಉದಾರ ಗುಣಕ್ಕೆ ಎಷ್ಟು ವಂದಿಸಿದರೂ ಸ್ವಲ್ಪವೇ ಅಂದರೆ ಈ ಮಹಾನುಭಾವರಿಗೆ ತಮ್ಮ ಊರಿನ ಬಡ ನಿವಾಸಿಗಳ ಮೇಲೆ ತಮಗಿದ್ದ ಪ್ರೀತಿಯನ್ನು ಇದರಿಂದ ತಮ್ಮ ವೃದ್ಧಾಪ್ಯ ಮತ್ತು ಜನ್ಮ ಅಂತ್ಯದಲ್ಲಿ ತೋರಿಸಿದ ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುವ

ಊರವ

ವೀರರಾಜಪೇಟೆ ಗೌರಿ ಗಣೇಶ ಮಹೋತ್ಸವ

ಈ ಮಹೋತ್ಸವವು ಈ ವರ್ಷ ಅಂದರೆ ಕಳೆದ ತಾರೀಕು 20ನೇ ಸಾಯಂಕಾಲ ವೀರರಾಜಪೇಟೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಮೆರವಣಿಗೆಯು ಸಾಯಂಕಾಲ 8 ಗಂಟೆಗೆ ಪ್ರಾರಂಭವಾಯಿತು. ದೂರದಿಂದ ಬಹು ಜನರು ಬಂದು ನೆರೆದಿದ್ದರು. ಎಲ್ಲಾ ಜನರೂ ಬಹು ಉತ್ಸಾಹದಿಂದ ಮೆರವಣಿಗೆಯನ್ನು ನೋಡುತ್ತಿದ್ದರು ಈ ವರ್ಷ ಹಿಂದಿನ ಅನೇಕ ವರ್ಷಗಳಿಂದ ನಡೆಯುತ್ತಿದ್ದುದಕ್ಕಿಂತ ಹೆಚ್ಚಿನ ಉತ್ಸಾಹದಿಂದಲೂ, ಸಮಾಧಾನದಿಂದಲೂ, ಮುತ್ತಿರುವೆಂಗಡಂ ಪಿಳ್ಳೆಯವರು ಈ ಉತ್ಸವವನ್ನು ನಡೆಸಿದುದಕ್ಕೆ ಜನರು ಅವರನ್ನು ಕೊಂಡಾಡುತ್ತಿದ್ದರು ಇವರು ಇನ್ನು ಮುಂದೆಯೂ ನಡೆಸುತ್ತಿದ್ದಂತೆ ಈ ಹಬ್ಬವನ್ನು, ಮೆರವಣಿಗೆಯನ್ನು ಬಹಳ ಚೆನ್ನಾಗಿ ಈ ವರ್ಷ ನಡೆಸಿದ್ದಕ್ಕೆ ಈ ಕಡೆಯ ಜನರು ಬಹಳವಾಗಿ ಇವರನ್ನು ಅಭಿನಂದಿಸುತ್ತಾರೆ

'ವೀರರಾಜಪೇಟೆಯವ'

ಎಡೆನಾಡು ಮಲೆ ಮಹಾದೇವನ ಭಕ್ತಜನಸಂಘ

ಅಯ್ಯಾ,

ತಾರೀಕು 12—9—26ರಲ್ಲು ಎಡೆನಾಡು ಮಲೆ ಮಹದೇವನ ಭಕ್ತಜನಸಂಘದವರು ಸದರಿ ದೇವಸ್ಥಾನದಲ್ಲು ಸೇರಿ ನಡೆಸಿದ ಜನರಲ್ ಮೀಟಿಂಗಿನ 10ನೇ ಕಲಂನಲ್ಲು ಮೆ. ಪುಳ್ಳಂಡ ಗಣಪತಿಯವರು ತಂದ ಠರಾವು ಈ ಕೆಳಗೆ ಕಂಡ ಮೇರೆ ಸರ್ವ ಸಮ್ಮತದಿಂದ ಮಂಜೂರಾಯಿತು

ಈ ಎಡೆನಾಡು ಮಲೆ ಮಹಾದೇವನ ದೇವಸ್ಥಾನದ ಎಲ್ಲಾ ದೇವತಾಕಾರ್ಯಗಳಿಗೂ ಪುರಾತನ ಕಾಲದಲ್ಲು ಎಡೆನಾಲ್ಕುನಾಡು ಅಂದರೆ ಭೈರವನಾಡು, ಬೇಟೋಳಿನಾಡು, ಪೆರನನಾಡು, ಮತ್ತು ಎಡೆನಾಡಿನವರು ಸಹ ಕೂಡ್ಯಾಡಿ ನಡೆಯುತ್ತಿದ್ದರೆಂತ ಪಾಲಿನಾಡಿನ ವೃದ್ಧಜನರಿಂದ ತಿಳಿಯಬರುತ್ತೆ. ಆದರೆ ಈಗ ಎಡೆನಾಡಿನವರು ವಿನಹ ಮಿಕ್ಕ ಮೂರು ನಾಡಿನವರು ಯಾವ ಕಾರಣದಿಂದ ಕೂಡ್ಯಾಡಿ ನಡಿಯುವದಿಲ್ಲ ಎಂಬ ಸಂಗತಿಯನ್ನು ಈ ಎಡೆನಾಲ್ಕುನಾಡಿನವರಲ್ಲು ಯಾರಾದರೂ ತಿಳಿದವರು ಇದ್ದರೆ ದಯವಿಟ್ಟು ಈ ಪತ್ರಿಕೆಯ ಮೂಲಕ ಬರೆದು ತಿಳಿಸಬೇಕಾಗಿ ಈ ಸಂಘವು ಕೇಳಿಕೊಳ್ಳುತ್ತದೆ.

ಸಿ ಜೆ ಸಂಬಪ್ಪ,

ಗೌ. ಸೆಕ್ರೆಟರಿ.

ಓಟರುಗಳೇ ಮೋಸಹೋಗಬೇಡಿ!

ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಕೌನ್ಸಿಲು ಮೆಂಬರುಗಳ ಚುನಾವಣೆಯು ಬಂತು. ಈಗ ಯಾರ ಬಾಯಲ್ಲಿಯೂ ಇದೇ ಮಾತು ಅದರೆ ನನಗಾಗಬೇಕು, ತನಗಾಗಬೇಕು ಎಂತ ಹೇಳುವುದೇ ಹೊರತು ದೇಶದ ಪುರೋಭಿವೃದ್ಧಿಗೆ ಏನುಮಾಡಬೇಕು, ಇದುವರೆಗೆ ಯಾರು ಇಂಥ ಕೆಲಸಗಳು ಮಾಡಿದ್ದಾರೆ, ಇನ್ನು ಮುಂದೆ ಯಾರು ಮಾಡಿಯಾರು, ಯಾರಿಗೆ ಅಂಥಾ ಶಕ್ತಿಯೂ, ಅನುಭವವೂ, ನಿಸ್ಪೃಹತೆಯೂ, ನಿಸ್ವಾರ್ಥ ಬುದ್ಧಿಯೂ, ಸರ್ವ ಪ್ರಜೆಗಳೂ ಒಂದೇಯೆಂಬ ಸಹೋದರತ್ವವೂ, ಸರ್ವಸಾಮುದ್ಯಷ್ಟಿಯೂ ಇದೆಯೆಂಬದನ್ನು ವಿಚಾರವೇ ಮಾಡದೆ ಕೇವಲ ಸ್ವಾರ್ಥಬುದ್ಧಿಯಿಂದ ಪ್ರೇರಿತರಾಗಿ ಮನಸ್ವಿ ಮಾತನಾಡುವದು ದೇಶದ ಏಳಿಗೆಗೆ ಸಾಧಕವಲ್ಲ ಕೊಡಗು ದೇಶಕ್ಕೆ ಚುನಾವಣೆ ಬಾನೂನು ಒಂದು ಮೂರೇ ವರುಷವಾಯಿತು. ಓಟರುಗಳಿಗೆ ಇನ್ನೂ ಆ ಭಾಗದ ತಿಳುವಳಿಕೆ ಚನ್ನಾಗಿ ಉಂಟಾಗಿರುವುದಿಲ್ಲ ದೇಶದ ಸ್ವಾತಂತ್ರ್ಯಕವಾದ ಕೆಲಸದಲ್ಲಿ ಕೂಡುವವರ ಸಮ್ಮಂಧವಾದ ಮಾತು ಇರುವುದಿಲ್ಲ ಮತ್ತು ಚುನಾವಣೆಯ ಕಾನೂನಿನಲ್ಲಿಯೂ ಮತದ ಮಾತೇ ಇರುವುದಿಲ್ಲ. ಆದ್ದರಿಂದ ಉಮೇದುವಾರರ ಬೋಧನೆಗಳನ್ನು ಓಟರುಗಳು ಚನ್ನಾಗಿ ಆಲೋಚಿಸಬೇಕು ತಮ್ಮ ತಮ್ಮ ಜಾತ್ಯಭಿಮಾನದಿಂದ ತಮ್ಮ ಜಾತಿಯವರು ತಮ್ಮನ್ನೇ ಚುನಾಯಿಸಬೇಕೆಂತ ಹೇಳಿದರೆ ಅಂದಾದ್ದಕ್ಕೆ ಕಿವಿಗೊಡದೆ ಯಾರಿಂದ ಸಂಪದಭಿವೃದ್ಧಿ ಕಾರ್ಯವಾಗುತ್ತದೆಯೋ ಅಂದವರಿಗೆ ತಮ್ಮ ಓಟರುಗಳನ್ನು ಉಪಯೋಗಿಸಬೇಕೇ ಹೊರತು ಜಾತ್ಯಾಭಿಮಾನದಿಂದ ಹುಂದುಂಬಿಸಲ್ಪಟ್ಟವರಾಗದ ಮತ್ತು ದೇಶದ ಹಿತವನ್ನು ಮಾಡಲು ಚನ್ನ ತೋರುವವರಿಗೆ ಖಂಡಿತ ತಮ್ಮ ಓಟುಗಳನ್ನು ಕೊಡಬಾರದು ಹಾಗೆ ಮಾಡದ್ದಾದರೆ ಓಟರುಗಳು ತಮ್ಮ ಜನ್ಮಸಿದ್ಧವಾದ ಹಕ್ಕನ್ನು ತಾವಾಗಿಯೇ ದುರುಪಯೋಗಮಾಡಿದಂತೆ ಆಗ ಮಾದಲ್ಲದೆ ತಮಗ ತಾವೇ ಕೇಡನ್ನು ಉಂಟುಮಾಡಿಕೊಳ್ಳುವರು ಆದ್ದರಿಂದ ಎಲೈ ಓಟರುಗಳಿರಾ! ನಿಮ್ಮ ಕೈಯಲ್ಲಿರುವ ನಿಮ್ಮ ಹಕ್ಕನ್ನು ಮತ್ತೊಬ್ಬರಿಗೆ ಕೊಡುವಾಗ ಬಹಳ ದೂರ ಯೋಚಿಸಿ ನಿಮ್ಮ ವಿಶ್ವಾಸಕ್ಕೆ ಪಾತ್ರರಾಗಿ ನಿಮಗೆ ನಂಬಿಕಯಿರುವ ದೇಶಾಭಿಮಾನಿಯಾದ ಜಾತಿ ಭೇದ ಬುದ್ಧಿಯಿಲ್ಲದ ಉಮೇದುವಾರರಿಗೆ ಸಹಾಯಮಾಡಿ ನಿಮ್ಮ ಪರವಾಗಿ ಕಳುಹಿಸಿಕೊಡಿ. ನೀವು ಪೂರ್ವಾಪರಗಳನ್ನು ಆಲೋಚನೆ ಮಾಡದೆ ಮುಖನೋತಿಗೆ ಅಧೀನರಾಗಿ ಮುಂದೆ ಪ್ರಯತ್ನ ಮಾಡುತ್ತೇನೆ ಎಂತ ಹೇಳುವಂಥವರಿಗೆ ಸಹಾಯಮಾಡಿದರೆ ನಿಮ್ಮನ್ನು ನೀವೇ ವಂಚಿಸಿಕೊಂಡ ಅಪವಾದಕ್ಕೆ ಗುರಿಯಾಗುವದಲ್ಲದೆ ನಿಮ್ಮ ಹಾನಿಯನ್ನು ನೀವೇ ಬಯಸಿದಂತೆ ಆಗುವುದು ಹಾಗೆ ಆದನಂತರ ವ್ಯಸನಪಟ್ಟು ಪ್ರಯೋಜನವಿಲ್ಲ ಈಗ ಮೊದಲೇ ಚನ್ನಾಗಿ ವಿಚಾರಮಾಡಿರಿ! ಯಾವ ಉಮೇದುವಾರನೇ ಆಗಲಿ ನಿಮ್ಮಲ್ಲಿ ಒಂದು ಓಟನ್ನು ಕೇಳಿದರೆ ನೀವು ಇದುವರೆಗೆ ಯಾವ ದೇಶ ಹಿತಕಾರ್ಯ ಮಾಡಿರುತ್ತೀರಿ! ನಿಮ್ಮಲ್ಲಿ ನಮಗೆ ನಂಬುಗೆ ಹೇಗೆ ಹುಟ್ಟಬೇಕು? ಒಂದುವೇಳೆ ನಮಗೆ ಆಗ ಇಲ್ಲದ ಸಲ್ಲದ ನಂಬಿಗೆ ವಿಶ್ವಾಸಹುಟ್ಟಿಸಿ ಓಟು ತೆಗದುಕೊಂಡುಹೋಗಿ ಇನ್ನು ಮೂರು ವರುಷ ನಮ್ಮ ಪ್ರತಿನಿಧಿಯಾಗಿ ನಿಂತು ನಮಗೆ ಹಿತವನ್ನೇ ಮಾಡುತ್ತೀರಿ ಎಂಬ ಭರವಸೆ ಯಾವದು ಎಂತ ಕೇಳಬೇಕು ಅಲ್ಲದೆ ಹಿಂದೆ ಏನಾದರೂ ಪ್ರಜಾಹಿತಕರವಾದ ಕೆಲಸಮಾಡಿದ ಉದಾಹರಣೆ ಕೊಟ್ಟರೆ ನಾವು ನಿಮಗೆ ಓಟು ಕೊಡುತ್ತೇವೆಯೆಂತ ಹೇಳಬೇಕು ಕೌನ್ಸಿಲಿಗೆ ಹೋಗದೇನೇ ಹೊರಗೆ ಇದ್ದುಕೊಂಡೇ ಪ್ರಜೆಗಳ ಹಿತಸಾಧಕವಾದ ಕಾರ್ಯಮಾಡಲು ಎಷ್ಟೋ ಅವಕಾಶಗಳಿವೆ ಇದುವರೆಗೂ ಅಂಥಾ ಅವಕಾಶಗಳ ಬಿಟ್ಟು ಇನ್ನು ಮುಂದೆ ಮಾಡುತ್ತೇನೆಂತ ಹೇಳುವವರ ಮಾತಿಗೆ ಎಷ್ಟರಮಟ್ಟಿಗೆ ಬೆಲೆ ಕೊಡಬಹುದೆಂಬದನ್ನು ಓಟರುಗಳೇ ಯೋಚಿಸಿರಿ ನೀವು ದುಡುಕಿದರೆ ಅದಕ್ಕೆ ಪ್ರತಿಕಾರವಿಲ್ಲ ಎ ಬಿ ಸಿ ಗೊತ್ತಿಲ್ಲದವನು ನಾಳೆ ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತೇನೆಂದರೆ ನಂಬುತ್ತೀರಾ! ಕೌನ್ಸಿಲು ಬರುವ ಮುಂಚೆಯೂ, ಕೌನ್ಸಿಲು ತರಿಸಲೂ ಪ್ರಯತ್ನಪಟ್ಟು ಸತತವಾಗಿ ದೇಶದ ಏಳಿಗೆ ತನು, ಮನ, ಧನಗಳಿಂದ ನಿರ್ವಂಚನೆಯಾಗಿ ದೇಶದ ಸೇವೆ ಮಾಡಿದ್ದರಿಂದಲೇ ಕಳೆದ ಚುನಾವಣೆಯಲ್ಲಿ ಪ್ರಜಾಪಕ್ಷದ ಮೆಂಬರುಗಳು ಹೆಚ್ಚು ಸಂಖ್ಯೆಯಲ್ಲಿ ಚುನಾಯಿತರಾಗಲು ಅವಕಾಶವಾಯಿತು ಹಾಗೆ ಪ್ರಜಾಪಕ್ಷದಲ್ಲಿ ಇಲ್ಲದವರೆಲ್ಲರೂ ಸೋತುಹೋದರು. ಈ ಉದಾಹರಣೆಯು ಓಟರುಗಳ ಮನಸ್ಸಿನಲ್ಲಿ ಚನ್ನಾಗಿ ಇರಬೇಕಾಗಿದೆ ಸೋತವರುಗಳು ಗದ್ದವರಿಗಿಂತಲೂ ವೃದ್ಧರಾಗಿಯೂ, ಐಶ್ವರ್ಯವಂತರಾಗಿಯೂ, ಹೆಚ್ಚು ಪ್ರಾಬಲ್ಯವಿದ್ದವರಾಗಿಯೂ ಇದ್ದರು ಆದರೂ ಯಾಕೆ ಜಯಶೀಲರಾಗಲಿಲ್ಲ! ಕಾರಣವನ್ನು ದೂರ ಹೋಗಿ ಹುಡುಕಬೇಕಾಗಿಲ್ಲ. ಇದು ಇಪ್ಪತ್ತನೆಯ ಶತಮಾನವು ಪ್ರಜೆಗಳಿಗೆ ಆಸುಭವವು ಹೆಚ್ಚುತ್ತಿದೆ ಯಾರಲ್ಲಿ ತಮಗೆ ನಂಬಿಕೆ ಇದೆಯೆಂಬದನ್ನು ಪರ್ಯಾಲೋಚಿಸುವ ಶಕ್ತಿಯು ಪ್ರಜೆಗಳಲ್ಲಿ ಹುಟ್ಟಿ ಅದನ್ನು ಕೂಡ ಮಾಡುವದು ಅವರಿಗೆ ಗೊತ್ತಾಗುತ್ತಿದೆ ಆದ್ದರಿಂದ ಈ ಸರ್ತಿಯೂ ಓಟರುಗಳು ತಮ್ಮ ವಿವೇಕವನ್ನು ಚನ್ನಾಗಿ ಉಪಯೋಗಿಸಿಕೊಂಡು ಯಾರಿಗೂ ಮೋಸಹೋಗದೆ ದೇಶದಸೇವೆ ಮಾಡಿದವನಿಗೇನೇ ಓಟುಕೊಟ್ಟು ತಮ್ಮ ಪ್ರತಿನಿಧಿಯಾಗಿ ಕಳುಹಿಸಿರಿ ಓಟು ಎಂದರೆ ಸಾಮಾನ್ಯವೆಂತ ಭಾವಿಸಬೇಡಿ. ಅದು ಒಂದು ಆಯುಧ ಆ ಆಯುಧವನ್ನು ಸರಿಯಾಗಿ ನಿಮ್ಮ ಹಿತಕ್ಕಾಗಿ ಉಪಯೋಗಿಸಲು ಶಕ್ತಿ ಇರುವಂಥವನಿಗೆ ಕೊಡಿ. ವೃಥಾ ಅಭಿಮಾನಕ್ಕೆ ಮರುಳಾಗಿ ನಿಮ್ಮ ಹಕ್ಕನ್ನು ದುರುಪಯೋಗ ಮಾಡಿಕೊಂಡರೆ ಇನ್ನು ಮೂರು ವರುಷ ಅದರ ಫಲವನ್ನು ನೀವೇ ಅನುಭವಿಸಬೇಕು ಕನ್ನಡಿಯಲ್ಲಿರುವ ಗಂಟಿಗಿಂತ ಕೈಯ್ಯಲ್ಲಿರುವ ಕಾಸು ಲೇಸು ಚೆನ್ನಾಗಿ ಆಲೋಚಿಸಿರಿ ಕೋಮು, ಕೋಮು ಎಂಬ ಅಭಿಪ್ರಾಯವು ಈಗೀಗ ಈ ದೇಶದಲ್ಲಿಯೂ ತಲೆ ಎತ್ತುತ್ತಲಿದೆ. ಇದು ಏಳಿಗೆಯ ಗುರುತಲ್ಲ. ಇದೇ ಹಿಂದೂದೇಶವೇ ಕೋಮುವಾರು ಪ್ರತಿನಿಧಿತ್ವವನ್ನು ನಿಷೇಧಿಸುತ್ತಿರುವಾಗ್ಯೂ ಇಲ್ಲಿ ಮಾತು ಎತ್ತುವದು ದೇಶಕ್ಕೆ ಅಪಾಯವೆಂತ ಗ್ರಹಿಸಬೇಕು

ನಿಷ್ಪಕ್ಷಪಾತಿ

"ಪ್ರಯಾಣಿ"ಕರಿಗೆ ಎಚ್ಚರಿಕೆ '

ಮಹನೀಯರೆ,

ಮಡಿಕೇರಿ ಕೊಡಲಿಪೇಟೆಯ ಇಂಪೀರಿಯಲ್ ರಸ್ತೆಯ ಮತ್ತು 19ನೇ ಮೈಲಿಯೊಳಗೆ ಮಾದರವಳ್ಳಿ ಗ್ರಾಮದ ಹತ್ತಿರವಿರುವ ಒಂದು ಸಣ್ಣ ಮೋರಿಯು ಆಗಾಯು ಒಂದು ಮೂರು ವರುಷಗಳಾಗಿದ್ದವು ಇದುವರೆಗೆ ದುರಸ್ತಾಗಿರಲಿಲ್ಲ ಮುದ್ದೈವದಿಂದ ಈ ವರ್ಷ ಇದರ ಕಾಮಗಾರಿ ಪ್ರಾರಂಭವಾಗಿ ನಡೆಯುತ್ತಿದೆ ಈ ಮೋರಿಯ ಕಟ್ಟಲು ರಸ್ತೆಯನ್ನು ಕತ್ತರಿಸಿ ಅದರ ಮಗ್ಗುಲಲ್ಲಿ ಬೇರೆ ಗಾಡಿ ಬರುವ ಇಕ್ಕಟ್ಟಾದ ದಾರಿಯನ್ನು ಮಾಡಿದ್ದಾರೆ. ರಸ್ತೆಯಲ್ಲಿ ತಿರುಗಾಡುವ ಜನರಿಗಾಗಲೀ, ಗಾಡಿಗಳಿಗಾಗಲೀ ಹಗಲು ಹೊತ್ತಿನಲ್ಲಿಯೇ ಸದರಿ ಮೋರಿ ಆಚೆಗೆ ಬಂದ ಹೊರತು ಕಾಣುವುದಿಲ್ಲ ರಸ್ತೆಯನ್ನು ದುರಸ್ತುಮಾಡುವಾಗಲೇ ಆ ರಸ್ತೆಯನ್ನು ಬಂದುಮಾಡಿ ಎರಡು ಕಡೆಗಳಲ್ಲೂ ಬೇಲಿಕಟ್ಟಿ ಬೋರ್ಡು ಹಾಕುವ ಸಂಪ್ರದಾಯವಿದೆ ಮೋರಿಯನ್ನೇ ಹೊಸದಾಗಿ ಕಟ್ಟುತ್ತಿರುವಾಗ ರಸ್ತೆಯ ಎರಡು ಕಡೆಗಳಲ್ಲೂ ಬೇಲಿಹಾಕಿ ಬೋರ್ಡು ಹಾಕಬೇಕಾದದ್ದು ಅತ್ಯವಶ್ಯ ಹೀಗಿರುತ್ತ ಮೇಲೆ ಹೇಳಿದ ಮಿಬಳ ಇಂಥ ಯಾವ ಎಚ್ಚರಿಕೆಯನ್ನೂ ಕೊಡದೆ ಕೆಲಸ ನಡಿಸುತ್ತಾ ಇದ್ದಾರೆ ಇದು ದಾರಿಕಾರರಿಗೂ, ಗಾಡಿ ಮೋಟಾರ್ ಟ್ರಾಫಿಕಿಗೂ ತುಂಬಾ ತೊಂದರೆಯಾಗಿದೆ ಹಗಲು ಹ್ಯಾಗಾದರೂ ಎಚ್ಚರಿಕೆ ತೆಗೆದುಕೊಳ್ಳಬಹುದು ರಾತ್ರಿಯಲ್ಲಿ ಏನು ಮಾಡಬಹುದು? ಬೇಲಿ ಕಟ್ಟದೆ ಇರುವುದು. ಗಾಡಿಗಳು ಸದರಿ ಮೋರಿಯಲ್ಲಿ ಬೀಳುವ ಸಂಭವ ಅನೇಕವಾಗಿ ಇದೆ ಬಹಳ ಜನರಿಗೆ ಇದರಿಂದ ತಪ್ಪು ಸಂಭವಿಸುವವರ ಸುದೈವದಿಂದ ಪಾರಾಗಿ ದಾಟಿದ್ದಾರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ನಿಗಕೊಟ್ಟು ಜನಗೂ, ದನಕರುಗಳಿಗೂ, ಇತರ ವಾಹನಗಳಲ್ಲಿ ಪ್ರಯಾಣ ಮಾಡುವವರಿಗೂ ಸಂಭವಿಸುವ ಅಪಾಯವನ್ನು ತಪ್ಪಿಸಲು ಪ್ರಯತ್ನ ಪಡುತ್ತಾರೆಂದು ನಿರೀಕ್ಷಿಸಿದೆ ಒಂದುವೇಳೆ ಮೇಲೆ ಹೇಳಿದ ಬೇಲಿ ಮಗ್ಗುಲೆ ಹಾಕಿ ತಿರುಗುವವರಿಗೆ ಎಚ್ಚರಿಕೆ ಕೊಡದೆ, ಅನಂದ ಅಪಾಯ ಸಂಭವಿಸಿದರೆ ಯಾರು ಜವಾಬ್ದಾರರಾಗಬೇಕು? ಈ ಕೆಲಸದ ಸೂಪರ್ವಿಜನ್ ಮಾಡುವ ಅಧಿಕಾರಿಗಳ ಗಮನಕ್ಕೂ ಈ ತೊಂದರೆಯು ಬೀಳದೆ ಇದಕ್ಕೆ ತಕ್ಕ ಪರಿಹಾರಮಾಡಲ್ಪಡದೆಯೂ ಇರುವದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ.

ಇದೆ ಸಂದರ್ಭದಲ್ಲಿಯೇ ರಸ್ತೆಗಳ ಮತ್ತು ಸಾತುವೆ ಬಾಬವಾಗಿಯು ಒಂದೆರಡು ಮಾತು ಹೇಳಬೇಕಾಗಿದೆ

ಕೊಡಗು ದೇಶದ ರಸ್ತೆಗಳು ಒಂದಾನೊಂದು ಕಾಲದಲ್ಲಿ ಬಹಳ ಹೆಸರುಗೊಂಡಿದ್ದವು ಈಗೀಗ ಅವುಗಳ ಸ್ಥಿತಿಯು ಕೇವಲ ಶೋಚನೀಯವಾಗಿದೆ ರಸ್ತೆಗಳ ಮೇಲೆ ಗಿಡಗಳು ನಿಂತದ್ದು ನೋಡಿದರಿಲ್ಲ. ಈಗಂತೂ ರಸ್ತೆ ಮೇಲೆ ಗುಂಡಿಗಳ ಸಂಖ್ಯೆ ಹೇರಳವಾಗಿದೆ ಇಂಪೀರಿಯಲ್ ರಸ್ತೆ ಪಾಡು ಹೀಗಿರುವಾಗ ಲೋಕಲ್ ಫಂಡು ರಸ್ತೆಗಳ ಪಾಡು ಹೇಳಬೇಕಾಗಿಯೇ ಇಲ್ಲ ಪಲ್ಲಿಪಟ್ಟಣದಿಂದ ಕೊಡ್ಲಿಪೇಟೆಗೆ ಬರುವ ರಸ್ತೆಯ ಗೋಳು ಬರೆದು ಮುಗಿಯುವ ಹಾಗಿಲ್ಲ ವರ್ಷಂಪ್ರತಿ ಈ ರಸ್ತೆಗೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮರಾಮತ್ತಿಗೆ 501/ ರೂಪಾಯಿ -600/—ರೂಪಾಯಿ ಖರ್ಚು ಎಂದು ಈ ರಸ್ತೆ ಇರುವದು ಸುಮಾರು 4½ ಮೈಲಿ ಕೊಡಗಿನ ರಸ್ತೆ ಮಗ್ಗುಲು ಚರಂಡಿಗಳು ಬಹಳ ಚನ್ನಾಗಿ ಮಾಡಲ್ಪಟ್ಟು ರಸ್ತೆಗಳ ಮೇಲೆ ನೀರು ಹೋಗುತ್ತಿರಲಿಲ್ಲ. ಈಗಂತೂ ರಸ್ತೆ ಮೇಲೆ ನೀರು ಹೋಗುತ್ತಾ ಇವೆ ಈಗಂತೂ ರಸ್ತೆ ಮೇಲೆ ಕರುನುಗ್ಗಿದ ರಸ್ತೆಯೇ ಅವರೂಪ ಮತ್ತು ಸಕಾಲದಲ್ಲಿ ಕಾಮಗಾರಿ ನಡಯದ್ದರಿಂದ ಇಂದಕ್ಕೆ ಹಣ ಖರ್ಚಾಗುವದು ತಪ್ಪುವದಿಲ್ಲ. ರಸ್ತೆಗಳು ಮಾತ್ರ ಪೂರ್ತ ಮಸ್ತಿಗೆ ಬರುವುದಿಲ್ಲ, ಹಾಗಾಗಿದೆ ಇನ್ನಾದರೂ ಸರಕಾರದವರು ಇದಕ್ಕೆ ನಿಗಾ ಕೊಡುವರಾಗಿ ನಂಬಿದೆ

ಶನಿವಾರಸಂತೆ ಬಂಗಡಪಕ್ಕ ರಸ್ತೆಯಲ್ಲಿರುವ ಕ್ಯಾಸಂತೆ ಸೇತುವೆಗೆ ರಿಪೇರಿಗಾಗಿ ಹಣ ಮಂಜೂರಾಗಿ ಮರುನಾಲ್ಕು ವರುಷವಾಯಿತೆಂತ ಕೇಳಿರುತ್ತೆ. ಇನ್ನು ಸೇತುವೆಯು ದುರಸ್ತಾಗಲಿಲ್ಲ. ಇದರ ಕಾರಣ ತಿಳಿಯದಾಗಿದೆ ಯಾವ ಕೆಲಸಕ್ಕೂ ಹಣವಿಲ್ಲವೆಂತ ಹೇಳುತ್ತಿರುವಾಗ ಹಣವದಗಿಸಿದ ಕೆಲಸವು ಸಹ ಜಾರಿಯಾಗದೆ ಇರುವದೆಂದರೆ ಆಶ್ಚರ್ಯವಾದ ಮಾತಾಗಿದೆ

ಸೇತುವೆಗಳ ಮೇಲೆ ಮರದ ಹಲಗೆಗಳನ್ನು ಹಾಕುವುದರ ಬದಲು ಕೊಡಗಿಗೆ ಸೇತುವೆ ಮೇಲೆ ಹಾಕಿರುವಂತೆ ಕಾಂಕ್ರಿಟ್ ಹಾಕುವುದೇ ಮೇಲು.

ಈಗಲೂ ಸಂಮ್ಮಂಧಪಟ್ಟ ಅಧಿಕಾರಿಗಳು ತಕ್ಕ ನಿಗೆ ಗೆಡುಕೊಂಡು ಜನಸಾಮಾನ್ಯಕ್ಕೆ ಉಂಟಾಗುವ ಅಪಾಯಗಳನ್ನು ತಪ್ಪಿಸಿ ಮೊದಲಿನ ಕೀರ್ತಿಯನ್ನು ವೃದ್ಧಿಗೊಳಿಸುತ್ತಾರೆಂದಾಗಿ ನಂಬಿದೆ.

"ಅಪಾಯಕ್ಕೆ ಸಿಕ್ಕಿದ್ದವ"

ಸ್ವಧರ್ಮ — ವಾರ ಪತ್ರಿಕೆ

ಸಂಪಾದಕರು — ದ ರಾ ಬೇಂದ್ರೆ, ಬಿ ಎ

ಲೋಕದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳವಣಿಗೆಗೆ ಸದ್ವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರವನ್ನು ಸಮಾಜದ ಮುಂದಿಡಲು ಹೊರಟಿರುವುದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಳ್ಳಿ ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ.

ವಾರ್ಷಿಕ ವರ್ಗಣಿ ರೂ 3—0—0

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ

786

ಹೆಸರಾದ ಮಾಲು. ತೋರಿಸಿ ಕರಿಸಿರಿ

ಬೆಳ್ಳೂರು ಉಂಡೆನಶ್ಯ.

ನಾವು ಕಳೆದ 30 ವರ್ಷಗಳಿಂದಲೂ ಹೆಸರಾದ ನಶ್ಯ ತಯಾರಮಾಡಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿಗೆ ವಿ. ಪಿ ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳನ್ನು ಹೊಂದಿರುತ್ತೇವೆ ನಮ್ಮ ನಶ್ಯವು ಮೂಗಿಗೆ ಸಂಬಂಧಪಟ್ಟ ವ್ಯಾಧಿಗಳನ್ನು ಗುಣಪಡಿಸುವುದಲ್ಲದೆ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತೆ ಒಂದು ತಿಂಗಳಿಟ್ಟರೂ ಕೆಡುವುದಿಲ್ಲ ಕಟ್ಟಿ ಕಳುಹಿಸಲು ಪಡೆಯುತ್ತೇವೆ ಒಂದು ಸಾರಿ ತರಿಸಿ ಪರೀಕ್ಷಿಸಿರಿ. ನಮ್ಮ ನಶ್ಯವು ಈ ಮೊದಲು ಸೇರು 1ಕ್ಕೆ 1—4—0 ರೂ ಗೆ ಮಾರುತ್ತಿದ್ದೆವು ಈಗ ಕಡಿಮೆ ದರದಿಂದ ... ಉಂಡೆ ಬರುತ್ತದೆ ... ಈ ರೀತಿ ... ವಾಯಿದೆ ಕಳೆದನಂತರ ... 0—4 0 ಹೆಚ್ಚಿಸಲ್ಪಡುವುದು

	24 ತೊಲೆ	ಸೇರು 1ಕ್ಕೆ	0—12—0,
	"	" 3ಕ್ಕೆ	2— 1- 0,
	"	" 6ಕ್ಕೆ	4— 0—0,
	"	" 9ಕ್ಕೆ	6— 0—0,
		" 12ಕ್ಕೆ	7— 8—0,
ಹೆಸರಾದ ಪುಡಿ	"	" 1ಕ್ಕೆ	1—10—0,
	"	" 1ಕ್ಕೆ	2— 0—0

ಬೀಡಿ, ನಶ್ಯ ವರ್ತಕರಿಗೆ ಅಗುವ ಹೊಗೆಸೊಪ್ಪು ನಶ್ಯದ ಎಲೆ ... ಬೇಕು ಸಹ ನಮ್ಮಲ್ಲಿ ಸಿಕ್ಕುತ್ತೆ.

ವಿ. ಪಿ ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸವರ್ತಕರಾದ ಏಜೆಂಟರುಗಳು ಬೇಕಾಗಿದೆ

ಸ್ಯಾಂಪಲ್ ಅಪೇಕ್ಷಿಸುವವರು 4ಆಣೆ ಸ್ಟಾಂಪು ಕಳುಹಿಸಬೇಕು.

ಆರ್ಡರ್ ಕೊಟ್ಟು ನಮ್ಮ ರಿಜಿಸ್ಟರಿಗೆ ದಾಖಲಾದವರಿಗೆ ಕಾಲಕ್ಕೆ ಸರಿಯಾಗಿ ಆರ್ಡರ್ ರಿಲೀಜ್ ಇಲ್ಲದೆ ಮಾಲು ಕಳುಹಿಸುತ್ತೇವೆ

ಹೆಚ್ಚಿನ ವಿವರಕ್ಕೆ ಕೆಳಗಿನವರಿಗೆ ಬರೆಯತಕ್ಕದ್ದು.

ಮ್ಯಾನೇಜರ್ ವಿ ಪಿ ಡಿಪಾರ್ಟ್‌ಮೆಂಟ್

ವಿಳಾಸ —

ಯಸ್ ಅಬ್ದುಲ್ ವಹಾಬ್ ಅಂಡ್ ಸನ್ಸ್,

ನಶ್ಯದ ವ್ಯಾಪಾರಿಗಳು,

ಬೆಳ್ಳೂರು ಪೋಸ್ಟು,

ಮೈಸೂರು ಡಿಸ್ಟ್ರಿಕ್ಟ್

52—7

Good Chance! Good Chance!!

Ammunition At cheaper rate

Gun Powder per lb	1—14—0
Percussion caps per box of 250	1—1—0
Elev Cartridges per 100	12—0—0
Lead shots per lb	0—8—0

Terms —Rs 5/- should be sent in advance for each order. Orders from coorgs should accompany the exemption certificate from the District Magistrate of Coorg.

Free —6 Rubber air balloons will be given to any customer who transacts business with me for more than Rs 20/- before 31st December, 1926

Moffussil order Promptly attended to

A. VENKATARANGAM CHETTY,

Ammunition & Sulphur Merchant,

No. 9, China Bazaar, Road, Madras.

12—2

Apply for our shooting Season's Clearance Sale Catalogue of Brand New Goods.

10 to 25 percent Reductions in Prices

No License Required!' No License Required



Webley and Scott Air Pistol, cal ·177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs 30/– Free delivery.

Powerful German Diana Air gun, Handsome and Accurate takes B S A Patern No 1 Slugs and Darts expressly recommendable for Target Practice Rs 15/ Free delivery

Brilliant Search Light Lamp for Night Sports Rs 30/– Free delivery

No License required to purchase or to possess the above items.

Reliable D B B L 12 bore guns	Rs 60/–	and upwards
Do S B B L 12 do	do 40/–	do
D B M L Guns	" 45/-	do
S B M L do	, 30/–	do
S B. B L Rifles	" 25/–	do
B L Revolvers and Pistols	, 30/–	do

Arms, Ammunition and shooting requisitesof almost every kind andquality offered at exceptionally favourable rates ANumber of good quality second hard weapons also offered for sale in theNew Catalogue

GOOLAMHUSIAIN ALLIBHOY & SONS

Largest Importers of Firearms and Ammunition, Cheapest priced firm in India,

24. 11 210 Abdul Rehman Street, BOMBAY.

ಪ್ರೋಬಿ

ಸ್ವದೇಶಿಯ ಹಿತ್ತಾಳೆ ಕಂದೀಲು (ಲಾಂದರು).

ಇದೀ ಕಂದೀಲು (ಲಾಂದರು) ಗಳನ್ನು ನಮ್ಮ ಸ್ವಂತ ಕಾರ್ಖಾನೆಯಲ್ಲಿ ನಾವೇ ಸಿದ್ಧಪಡಿಸಿದ್ದು ಬಾಳಿಕೆಯಲ್ಲಿಯೂ, ಬೆಳಕಿನಲ್ಲಿಯೂ, ಯಾವುದೇ ಪರದೇಶಿಯ ಕಂದೀಲಿಗಿಂತ ಮೇಲಾಗಿರುವದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ನಾವಿನ್ನು ಪರದೇಶದ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಬಾರದು

ತ್ವರೆ ಮಾಡಿ ಕೇಳಿಕೊಳ್ಳಿರಿ. ನಿಮ್ಮೂರಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಿ —

1 ಸಿ ಎಸ್ ನಾರಾಯಣರಾವ್ ಅಂಡ್ ಬ್ರದರ್ಸ್,

ಜನರಲ್ ಮರ್ಚೆಂಟ್ಸ್, ಚಿತ್ರದುರ್ಗ,

ಅಥವಾ

ಕಾರ್ಖಾನೆದಾರರು —

'ಓಗಲೆ ಗ್ಲಾಸ ವರ್ಕ್ಸ' ಲಿಮಿಟೆಡ್, ಓಗಲೆವಾಡಿ ಸಂ. (ಔಂಧ) ಜಿ. ಸಾತಾರಾ.

52—1

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಸಮಸ್ತ ಪೂ ಲಾಭ ಸಹಿತವಾದ ಪಾಲಿಸಿಗಳಿಗೆ

1927 ನೇ ಫೆಬ್ರುವರಿ ತಾ 28 ಕ್ಕೆ ಮುಂಚೆ ಸಾರಕ್ಕಪರಿಗೆಲ್ಲಾ ಆ ತಾರೀಖಿಗೆ ಆಗುವ ಪಂಚಸಾಲಿ ಬೋನಸ್ ಪಡೆಯಲು ಕೊಡಲಾಗುವುದು

ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು

ಬೆಂಗಳೂರು ಬ್ರಾಂಚ್:—	ಸಿ ಕ ಜಂಗಪ್ಪ,	ಮದರಾಸ್ ಬ್ರಾಂಚ್:—
152, ಕಮ್ಮರ್ಷಿಯಲ್ ಸ್ಟ್ರೀಟ್.	ಸ್ಪೆಷ್ಯಲ್ ಏಜಂಟ್,	9-10, ಸೆಕೆಂಡ್ ಲೈನ್ ಬೀಚ್
	ಬಿನ್ಸಲ್ ಸ್ಟುಡ್ ಎಸ್ಟೇಟ್,	
	ಸಿದ್ದಾಪುರ	

24—10

ತಯಾರಾಗಿದೆ.

ಸಮಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅವಿಶ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾಖಲೆ ಬಂದು ರಿಜಿಸ್ಟ್ರೇಶನು ಆಪೀಸಿಗೆ ಕಳುಹಿಸುವಾಗ ಅದು ಸರಿಯಾಗಿ ಬರಬೇಕಾದ್ದಲ್ಲ ಎಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ಹಲ್ಲಿಗನುಸಾರವಾಗಿ ತಯಾರಿಸಲ್ಪಟ್ಟ ನಾನಾ ಫಾರಮುಗಳೂ ನಮ್ಮಲ್ಲಿಯೂ ಮತ್ತು ಪಾರ್ಲೆಟ್ ಬಜ್ಜರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ತಯಾರಾಗುತ್ತಿವೆ.

ನಮ್ಮ ದೇಶದ ಸಹಕಾರ ಸಂಘಗಳ ಅವಶ್ಯಕತೆಗೆ ಸರಿಯಾಗಿ ತಯಾರಿಸಲ್ಪಟ್ಟ ಫಾರ ಬುಕ್ಕುಗಳು ನಮ್ಮಲ್ಲಿ ಪ್ರಿಂಟಾಗುತ್ತಿವೆ. ಬೇಗನೆ ಮಾರಾಟಕ್ಕೆ ತಯಾರಾಗುವವು ಕೆಲವು ಪುಸ್ತಕಗಳು ಮಾತ್ರ ತಯಾರಾಗುವುದರಿಂದ ಬೇಕಾದವರು ಮೊದಲೇ ಬರೆದು ತಿಳಿಸುವುದು ಉತ್ತಮವಾಗಿದೆ

"ಕೊಡಗು" ಆಫೀಸು, ಮಡಿಕೇರಿ ಮ್ಯಾನೇಜರ್.

ಕಿರ್ಲೋಸ್ಕರ,

ಉಕ್ಕಿನ ತಗಡಿನ ಕುರ್ಚಿಗಳು.

(ಚೇರ್‌ಸ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ.
(೨) ಕೂಡುವವರ್ಕೆ ಆರಾಮು.
(೩) ತಾಳಿಕೆಯಲ್ಲಿ ಗಟ್ಟಿ.
(೪) ತಗಣೆಗಳು ಸೇರುವದಿಲ್ಲ.
(೫) ಎತ್ತಾಡಲಿಕ್ಕೆ ಬರುವಷ್ಟು ಹಗುರ.

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ಸಮಾನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
16—1 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮೆಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಬಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟುಮಾಡಿ ನೋಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ್.
ಕೊಡಂದೆರ ಕುಟ್ಟಯ್ಯನವರು, ಯಂ. ಭುಜಂಗರಾಯರು
ರಾಯ್ ಬಹದ್ದೂರ್. ಬಿ.ಎ., ಬಿ.ಎಲ್.
ಸೆಕ್ರೆಟರಿ,
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಖು 1—7—1976.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನ್‌ಮೆಂಟ್ ಜೀವವಿಮೆ ಕಂಪೆನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಸರದೇಶೀ ಬಟ್ಟೆಗಳ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಜಕ್ಕೆಗಳು, ಶಾಲು ವಸ್ತ್ರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ, ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ.

52—27.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ಮಾಡಿರುತ್ತೆ. ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು. ಇದರ ಬಣ್ಣ ಹೋಗದು. ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಕಿಲ್ಲ. ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು. ಇದು ಸರಿಗೆ ಬಹು ಮುದ್ದಾದ ಆಭರಣ ಜೊತೆ 1ಕ್ಕೆ ರೂ. 2—8—0

ಇಮಿಟೇಷನ್ ವಜ್ರದ ಬೆಂಡೋಲೆಗಳು.

ಈ ಬೆಂಡೋಲೆಗಳನ್ನು ಬಹು ಹಸನಾದ ವಜ್ರದ ಕಲ್ಲುಗಳನ್ನು ಇಟ್ಟು ಅಪರಂಜಿ ಭಂಗಾರಕ್ಕೆ ಸಮಾನವಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರುವದು. ಇದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು. ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಭಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು. ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು.

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ. 3—0—0.
" " ಕೆಂಪು ಕಲ್ಲಿನ " " 3—8—0.

ಚಂದ್ರಹಾರ.

ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚಬೆಳ್ಳಿಯಿಂದ ತಯಾರಿಸಿ ಗಿಲೀಟು ಮಾಡಿದೆ. ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು. ನೋಡಲು ಸರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ

3 ಎಳೇ ಸರ 1ಕ್ಕೆ ರೂ. 3—4—
4 " " " 4—0—
4 " " " 5—4—

ವಿಳಾಸ:— ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂ 1223, ಮದರಾಸು.

52—41

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ದನಗಳ ಹಳೆಯ ಹಿಂಡಿ ಗೊಬ್ಬರದಲ್ಲಿರುವದಕ್ಕಿಂತಲೂ ಮೂರು ಪಾಲಷ್ಟು ಹೆಚ್ಚಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಬೆಳೆಗೆ ದೊರೆಯುವದಿಲ್ಲ. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಹೂವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ ಮುಂತಾದವು, ಎಲಕ್ಕಿ ಮೊದಲಾದ ತೋಟ ಪೈರುಗಳಿಗೂ ವಿಲುಪನ ಪುಡಿ ಅಥವಾ ದನದ ಗೊಬ್ಬರ ಮತ್ತು ಇತರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಬೆಳೆಗಳಿಗ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಡಲಿಕ್ಕೆ ಬರೇ ಉಪ್ಪಿನ ಹಾಗಿದ್ದು ಅಸಹ್ಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲ್ ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದವರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—18

CHILEAN NITRATE COMMITTEE,
Post Box 469, CALCUTTA

ಕರ್ಣಾಟಕ

ಪಸ್ತ್ಯವಿಷಹರ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆಡವಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪ್ಪಾಲು ಚಾರ್ಜು ಬೇರೆ
ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯—೨—೦

ಏಜೆಂಟರು ಬೇಕು, ಕೊಡಗಿನ ಸ್ಟೋರ್‌ಕೀಪರುಗಳು ತಮ್ಮ ಹೆಸರು ಮತ್ತು ಔಷಧದ ವ್ಯಾಪಾರಗಳ ಹೆಸರನ್ನು ತಿಳಿಸಿದಲ್ಲಿ ಅಂದವಾದ ಕ್ಯಾಲೆಂಡರ್ ಫ್ರೀ ಪ್ರುಕ್ತಟಿ.

12—5 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನೌಕರಿ ಕರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಇುವಿ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಕರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ. 24—6—'26 ಮೇನೇಜರ್,
ಮಡಿಕೇರಿ. "ಕೊಡಗು" ಆಫೀಸು.

ನೋಟೀಸು.

ಈ ಕೆಳಗಿನ ಮಹಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲುಮಾಡಲು ಒಪ್ಪಿಕೊಂಡಿದ್ದು ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಪಿ. ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಟ್ಟಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿದೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮ. ... ಅಪ್ಪಯ್ಯನವರು
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ನೆಡಿಯಂಡ ದೇವಯ್ಯನವರು
ನಾಪೋಕ್ಲು—ಮ. ಬಿದ್ದಂಡ ಸುಬ್ಬಯ್ಯನವರು.
ಮ. ಪೊನ್ನಜಂಡ ಮುದ್ದಪ್ಪನವರು
ಗೋಣಿಕೊಪ್ಪಲು—ಮ. ಜಮ್ಮಡ ಮಾದಪ್ಪನವರು
ಮಡಿಕೇರಿ—ಮ. ಪಿ. ಪೂವಯ್ಯನವರು.
ಅಮ್ಮತ್ತಿ ಸಿದ್ದಾಪುರ—ಮ. ಐನಂಡ ಮಾದಪ್ಪನವರು
" ಮತ್ತು ವೀರಾಜಪೇಟೆ—ಮ. ಕಲಿಯಂಡ ಸೋಮಯ್ಯನವರು
ಮಡಿಕೇರಿ ಸುಂಟಿಕೊಪ್ಪನಾಡು—ಮ. ಒಲ್ಲೇರ ... ಪ್ಪಯ್ಯನವರು

ಅಲ್ಲದೆ ಈ ಸಂಬಂಧ ಮ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುವಾಗ ಅವರಿಗೂ ಹಣ ಮೊಬಲಗು ಕೊಡಬೇಕಾಗಿ ಕೋರಿದೆ.

"ಕೊಡಗು" ಲಿಮಿಟೆಡ್. ಮೇನೇಜರ್,

Printed & published by P. Bellиappa, at "Kodagu" Press, Mercara for "Kodagu" Ltd.

Reg. No. M. 1580.
If not delivered please return to
"KODAGU" OFFICE MERCARA.

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ || ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಂ ||

ಸಂಪಾದಕ—ಕಂದ್ಯಂಡ ಬಿ. ಬೆಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸನ್ ೧೯೨೬ನೇ ಇಸವಿ ಅಕ್ಟೋಬರ್ ತಾರೀಕು ೮ನೇ ಶುಕ್ರವಾರ [ಸಂಚಿಕೆ ೧೮

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties	4 lbs- Rs 30/ 4 1/2 lbs- Rs 33/ 5 lbs- Rs 36/-Doz.	
Digging forks 4 prongs		Rs 48/ Doz
Mamooty forks 4 prongs		Rs 39/ Doz
Felling axes — Each		Rs. 3/ & 3/4/
Planting bars— Each		" 3/12/
Weeding forks — Each		" 1/12/
Garden trowels		" 1/12

GET IT AT SPENCERS- The House for all requisites

52—38

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ,
ಲಿಮಿಟೆಡ್, ಹೆಡ್ ಆಫೀಸು:- ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 15,94 80 ರೂಪಾಯಿಗಳನ್ನು ಲಾಭ ಸಹಿತ ಮಾಡಿರುವ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಮ್ಮೆಯಾಗಿ ಈ ಕೆಳಗೆ ತೋರಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆ ದಾರರಿಗೆ ರೂ 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ 67½
ಕ್ಲುಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ 54

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ

1923ರಲ್ಲಿ—ರೂ 1 74 00,000
1924 " 2,37 00,000
1925 " 2 96,00 000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ ೨೮
ಬೆಂಗಳೂರು

ಎಸ್ ಆರ್. ಕೃಷ್ಣಸ್ವಾಮಯ್ಯರ್
ಬ್ರಾಂಚ್ ಸಕ್ರೆಟರಿ

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವದು ಕಳೆಪುರಿ ಕಣ್ಣುರಿ, ಕಿವಿಯಿಂದ ಕೀವು ಸೋರುವದು ನಿದ್ರಾಭಂಗ, ಕಣ್ಣುನೋವು, ಅಪಸ್ಮಾರ ಪಿತ್ತ ಏರುವದು, ಜ್ಞಾಪಕ ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಶೀಘ್ರ ಗುಣಪಡಿಸುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ನಿಸ್ತೇಜವಾದ

ಕೂದಲನ್ನು ವೃದ್ಧಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಒಂದು ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ — ಇದು ಪ್ರಮೇಹ ವ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವದು ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ದಾತು, ಸುಡಿ ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ಹಿಡಿಯಲಿಕ್ಕೆ ಸಾಧ್ಯವಿಲ್ಲದಿರುವದು, ದೇಹದಲ್ಲಿ ಉರಿ ಬಾಯಾರಿಕೆ, ಸವಾ ಪಸ್ಟ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧ ಗಂಡಸರಿಗೂ ಹೆಂಗಸರಿಗೂ ಇದು ಅಮೃತವು ಸೀಸೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುತ್ತದೆ ಡಬ್ಬಿ 1ಕ್ಕೆ 6 ಆಣೆ, 3 ಡಬ್ಬಿಗಳಿಗೆ ರೂಪಾಯಿ 3-8 0

ಮಲೇರಿಯ ಮಲೇರಿಯ ಜ್ವರ ಚಿಕಿತ್ಸೆ.—ಇದು ಇಂಜಕ್ಷನ್ ಮತ್ತು ಕ್ವಿನೈನು ಗೆ ಮಿಗಿಲಾಗಿ ಗುಣಕಾರಿಯಾಗಿರುವ ಪರಿಣಾಮ ಔಷಧಿ, 3–4 ದಿವಸಕ್ಕೊಂದುಸಾರಿ ಬರುವ ಜ್ವರ, ಸದಾ ಬರುವ ಜ್ವರ ಮತ್ತು ಪ್ಲೀಹ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—0—0,

ಕಳಿಸಲಾಗುವ ತರಿಸಿ ಕೊಳ್ಳಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆಂಕನಾಡಿ.

42

ಸ್ವಮೋಹಿಸುತ್ತೇ.
(ಗುಣವಾಗದಿದ್ದರೆ ಹಣ ವಾಪಸ)
ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಸ್ತ್ರೀ ಅಥ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುತ್ತವೆ ಧಾತು ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾತಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರಿತವಾಗಿ ಪರಿಹರಿಸಿ ಶರೀರಕ್ಕೆ ಹೊಸ ಕಾಂತಿಯೂ ಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೬೦ ಗುಳಿಗೆ ಸಾಕಾಗುತ್ತದೆ ಒಟ್ಟು ೬೦ ಗುಳಿಗೆಗಳಿಗೆ ೪ ರೂಪಾಯಿ ಇವನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸುವದು ಉತ್ತಮ ಇದರ ಬೆಲೆ ಬಾಟ್ಲಿಗೆ ರೂ ೨—೧೨—೦

ಪ್ರಮೇಹನಿವಾರಿಣಿ—ಇದರ ಸೇವನೆಯಿಂದ ಮೂತ್ರಕೃಚ್ಛ್ರದ ಕೀವು ಹರಿಯುವ ರೋಗವು ಕೀವು ಬೀಳುವದು ಶೀಘ್ರವಾಗಿ ಗುಣವಾಗುವದು ಇದನ್ನು ಬಾಟ್ಲಿಗೆ ರೂ ೩—೮—೦ ೬ ಬಾಟಲಿ ಅನುಪಾನ ಪತ್ರಿಕೆ ಔಷಧ ಸಂಗಡ

ವಿಂಡಾಪಿ ಸ್ತ್ಯಾಂಪ ಕಳುಹಿಸಿದರೆ ಕ್ಯಾಟಲಾಗವು

ವಿಳಾಸ—
ವೈದ್ಯ ಜಿ ಎಲ್ ಜೋಶಿ ಮತ್ತು ಕಂಪೆನಿ.
37 ನಂ 6 ಪೋಸ್ಟ್ ಬಸವಾ, ಉತ್ತರ ಕರ್ನಾಟಕ

ARMS & AMMUNITION MART.
Mahomedally-Noorbhoy.



321 Abdul Rehman Street, near
Crawford Market, BOMBAY 3
Telegraphic Address - "SHOOTER" Bombay.

[52—6] Please write for Reduced net prices list for 1926.

"ಕೊಡಗು"

ಸನ್ ೧೯೨೬ ನೇ ಇಸವಿ ಅಕ್ಟೋಬರ್ ತಾ.
೮ನೇ ಶುಕ್ರವಾರ

ಡಿಸ್ಟ್ರಿಕ್ಟ್‌ಬೋರ್ಡಿನ ಭಾಷೆ.

ನಮ್ಮ ದೇಶದಲ್ಲಿ ಶೀಘ್ರದಲ್ಲೇ ಕೆಲಸಮಾಡಲು ಪ್ರಾರಂಭಿಸುವ ಚುನಾಯಿತ ಮೆಂಬರುಗಳ ಸಂಖ್ಯೆ ಹೆಚ್ಚಿರುವ ಡಿಸ್ಟ್ರಿಕ್ಟ್‌ಬೋರ್ಡಿನ ಚರ್ಚೆಗಳು ಕನ್ನಡ ಭಾಷೆಯಲ್ಲೇ ನಡೆದರೆ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತ ನಿಜವಾಗಿಯೂ ಪ್ರಜಾಜನರ ಅಭಿಪ್ರಾಯಕ್ಕನುಸಾರವಾಗಿ ನಡೆಬೇಕೆಂತ ಹೇಳಬಹುದು. ಈವರೆಗೆ ಜಾರಿಯಲ್ಲಿದ್ದ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಬರೇ ಐದು ಉದ್ಯೋಗಸ್ಥರಲ್ಲದ ಮೆಂಬರುಗಳನ್ನು ಸರಕಾರದವರು ನೇಮಿಸಿಕೊಳ್ಳುತ್ತಿದ್ದರು. ಉದ್ಯೋಗಸ್ಥ ಮೆಂಬರುಗಳ ಸಂಖ್ಯೆಯೇ ಬೋರ್ಡಿನಲ್ಲಿ ಹೆಚ್ಚಾಗಿದ್ದು ಆಗ ಬೋರ್ಡಿನ ಚರ್ಚೆಯು ಇಂಗ್ಲಿಷಿನಲ್ಲೇ ಆದರೂ ಹೆಚ್ಚಿಗೆ ಆಕ್ಷೇಪಣೆಗೆ ಅವಕಾಶವಿರಲಿಲ್ಲ. ಯಾಕೆಂದರೆ ಸರಕಾರಿ ಉದ್ಯೋಗಸ್ಥರಿಗೂ ಇಂಗ್ಲಿಷ್ ತಿಳಿದೇ ಇರುತ್ತಿತ್ತು. ಸರಕಾರದವರು ತಾವಾಗಿಯೇ ಆರಿಸಿಕೊಳ್ಳುವ ಮೆಂಬರುಗಳಿಗೂ ಇಂಗ್ಲಿಷ್ ತಿಳಿದಿರಬಹುದು, ಅಥವ ತಿಳಿದುಕೊಳ್ಳಲು ಅವಕಾಶಮಾಡಿಕೊಳ್ಳಲು ಅನುಕೂಲವಿರಬಹುದೆಂತ ಊಹಿಸಬಹುದಾಗಿತ್ತು. ಈಗ ಸರಕಾರದವರಿಗೆ ಇಷ್ಟವಿರುವ ಜನರು ಡಿಸ್ಟ್ರಿಕ್ಟ್‌ಬೋರ್ಡಿಗೆ ಪ್ರತಿನಿಧಿಗಳಾಗಿ ಆರಿಸಲ್ಪಡ ತ್ಯಾರಂಬದಿಲ್ಲ. ಸಮುದಾಯದ ಜನರ ಸೇವೆಮಾಡಿ ಸಮುದಾಯದ ಪ್ರೀತಿಯನ್ನು ಸಂಪಾದಿಸಿದ, ಮತ್ತು ಸಮುದಾಯದ ಸೇವೆಮಾಡಲು ಅವಕಾಶ ಮತ್ತು ಮನಸು ಇರುವುದಾದವರನ್ನೇ ಸಮುದಾಯದವರು ಆರಿಸಬೇಕೆಂಬ ತತ್ವವನ್ನು ಅವಲಂಬಿಸಿಯೇ ದೇಶದ ಆಡಳಿತ ನಡಿಸುವ ಡಿಸ್ಟ್ರಿಕ್ಟ್‌ಬೋರ್ಡ್ ಮುಂತಾದ ಸಂಸ್ಥೆಗಳು ಪ್ರಜಾಜನರು ಆರಿಸಿಕೊಳ್ಳುವ ಮೆಂಬರುಗಳಿಂದ ಕೂಡಿದ್ದಾಗಿರಬೇಕೆಂತ ಮಾಡುವದಾಗಿದೆ. ಬೋರ್ಡಿನಲ್ಲಿ ಚರ್ಚೆಯು ಇಂಗ್ಲಿಷಿನಲ್ಲಿ ನಡಿಯುವದಾದರೆ ಸಮುದಾಯದ ಕೆಲಸಮಾಡಲು ಎಲ್ಲಾ ಯೋಗ್ಯತೆಗಳಿದ್ದರೂ ಇಂಗ್ಲಿಷ್ ಭಾಷೆ ತಿಳಿಯದವರನ್ನು ಪ್ರಜಾಜನರು ಆರಿಸಿಕೊಳ್ಳಬಾರದೆಂತ ಮಾಡಿದಂತಾಯಿತು. ಪ್ರಜಾಜನರು ಪ್ರತಿನಿಧಿಗಳನ್ನು ಆರಿಸಿಕೊಳ್ಳಲು ಪೂರ್ಣ ಸ್ವತಂತ್ರವಿರಬೇಕಾದದಕ್ಕೆ ಒಂದು ಅಡ್ಡಿ ಮಾಡಿದಂತೆಯೇ ಆಯಿತು. ಈ ರೀತಿ ಇರುವ ಭಾಷೆಯ ಅಡಚಣೆಯನ್ನು ತೆಗೆದುಹಾಕುವದು ಬಹು ಅಗತ್ಯವಾಗಿದೆ.

ನಮ್ಮ ದೇಶದ ನ್ಯಾಯವಿಧಾಯಕ ಕೌನ್ಸಿಲಿನಲ್ಲಿ ಸಹ ಕನ್ನಡದಲ್ಲೇ ಚರ್ಚೆಗಳು ನಡೆಯುವದು ಯುಕ್ತವಾಗಿದೆ. ಆದರೆ ಈ ಸಭೆಯಲ್ಲಿ ನಡಿಯುವ ಭಾಷಣಗಳ ಪ್ರತಿಯೊಂದು ಶಬ್ದವನ್ನು ಬರೆದು ಪ್ರಕಟಿಸುತ್ತಿದ್ದಾರೆ. ಇಂಗ್ಲಿಷಿನಲ್ಲಿ ಷಾರ್ಟ್‌ಹ್ಯಾಂಡ್' ಎಂಬ ಒಂದು ವೇಗವಾಗಿ ಭಾಷಣಗಳನ್ನು ಬರಕೊಳ್ಳುವ ರೀತಿಯನ್ನು ಉಪಯೋಗಿಸುತ್ತಿರುವದರಿಂದ ಇಂಗ್ಲಿಷ್ ಭಾಷಣಗಳನ್ನು ಸಂಪೂರ್ಣವಾಗಿ ಬರಕೊಳ್ಳಲು ಅನುಕೂಲವಿದೆ. ಕನ್ನಡಭಾಷಣಗಳನ್ನು ಹೀಗೆ ಬರದುಕೊಳ್ಳಲು ಇನ್ನೂ ಅನುಕೂಲವಿಲ್ಲ. ಮತ್ತು ಕೌನ್ಸಿಲಿನಲ್ಲಿ ಕಾನೂನುಗಳನ್ನು ಮಾಡಬೇಕಾಗಿರುವದರಿಂದ ಈ ವರೆಗೆ ಜಾರಿಯಲ್ಲಿರುವ ಕಾನೂನಿನ ಭಾಷೆಯು ಇಂಗ್ಲಿಷೇ ಆಗಿರುವದರಿಂದ ಇಂಗ್ಲಿಷ್ ಭಾಷೆಯಲ್ಲೇ ಕಾನೂನು ಮಾಡುವ ಚರ್ಚೆಯು ನಡಿಯುವದು ಸುಲಭವೆಂತಲೂ ಹೇಳಬಹುದು. ಕೌನ್ಸಿಲ್ ಚರ್ಚೆಯು ಕನ್ನಡದಲ್ಲೇ ಆಗಬೇಕಾದರೂ ಈ ಮಾರ್ಪಾಡು ಆಗಬೇಕಾದರೆ ಕೆಲವು ಕಾಲವು ಬೇಕಾಗಬಹುದು. ಆದರೆ ಡಿಸ್ಟ್ರಿಕ್ಟ್‌ಬೋರ್ಡಿನ ಚರ್ಚೆಗಳನ್ನು ಕನ್ನಡದಲ್ಲೇ ಮಾಡಬೇಕೆಂತ ಈಗಲೇ ತೀರ್ಮಾನಿಸಲು ಇಂಥಾ ಅಡ್ಡಿಗಳೇನೂ ಇಲ್ಲ. ಡಿಸ್ಟ್ರಿಕ್ಟ್‌ಬೋರ್ಡಿನ ಚರ್ಚೆಗಳನ್ನು ಬರೆದಿಡುವದಿಲ್ಲ. ಅದರಲ್ಲಿ ತೀರ್ಮಾನವಾದ ರೆಝಲ್ಯೂಷನುಗಳನ್ನು ಮಾತ್ರ ಬರೆದು ಇಡುವದಾಗಿದೆ. ಮತ್ತು ಈ ಸಂಸ್ಥೆಯಲ್ಲಿ ಕಾನೂನುಮಾಡುವ ಕೆಲಸವೇನೂ ಇಲ್ಲ. ಆಡಳಿತದ ಮೇಲೆ ಅಭಿಪ್ರಾಯ ಮಾತ್ರ ಕೊಡುವದಾಗಿದೆ.

ಕೌನ್ಸಿಲಿನಲ್ಲಿ ಈಗ ಅಧ್ಯಕ್ಷರು ಚೀಫ್ ಕಮಿಶನರು ಕೌನ್ಸಿಲಿನಲ್ಲಿ ನಡೆಯುವ ಎಲ್ಲಾ ಭಾಷಣಗಳನ್ನು ಅಧ್ಯಕ್ಷರನ್ನೇ ಕುರಿತು ಮಾಡಬೇಕೆಂಬ ರೂಲ್ ಇದೆ. ಭಾಷಾ ಸಂಬಂಧವಾದ ಮಾತು ನಡೆಯುವಾಗ ಚೀಫ್ ಕಮಿಶನರನ್ನು ಸಂಬೋಧಿಸಿ ಮಾಡುವ ಭಾಷಣಗಳನ್ನು ಅವರಿಗೆ ತಿಳಿಯದ ಭಾಷೆಯಲ್ಲಿ ಮಾಡಿದರೆ ಪ್ರಯೋಜನವೇನು ಎಂತ ಈಗಿನ ಚೀಫ್ ಕಮಿಶನರು ಕೇಳಿದ್ದರು. ಕನ್ನಡ ದೇಶವನ್ನು ಆಳಲಿಕ್ಕೆ ಬರುವವರು ಕನ್ನಡ ತಿಳಿದುಕೊಂಡು ಬರಬೇಕೆಂತ ನಾವು ಹೇಳಬಹುದು. ಅಥವ ಕನ್ನಡ ತಿಳಿದವರನ್ನೇ ಅಧ್ಯಕ್ಷರನ್ನಾಗಿ ಆರಿಸಿಕೊಳ್ಳಲು ಅವಕಾಶಕೊಡಬೇಕೆಂತಾದರೂ ಹೇಳಬಹುದು. ಆದರೆ ಇದನ್ನೆಲ್ಲಾ ಜಾರಿಗೆ ತರಲಿಕ್ಕೆ ಸಮಯಬೇಕು. ಡಿಸ್ಟ್ರಿಕ್ಟ್‌ಬೋರ್ಡಿನ ಚರ್ಚೆಗಳು ಅಧ್ಯಕ್ಷರನ್ನು ಕುರಿತೇ ನಡೆಯಬೇಕೆಂಬ ರೂಲ್ ಇಲ್ಲ. ಆದರೆ ಅದೇ ಕ್ರಮವನ್ನೇ ಅನುಸರಿಸಬೇಕಾದರೂ ಇಲ್ಲಿಗೆ ಕಮಿಶನರಾಗಿ ಬರುವವರಿಗೆ ಕನ್ನಡ ತಿಳಿದಿರಬೇಕೆಂಬ ರೂಲ್ ಇದೆಯೆಂತ ತಿಳಿಯುತ್ತೇವೆ. ಆದ್ದರಿಂದ ಬೋರ್ಡಿನ ಚರ್ಚೆಗಳನ್ನು ಕನ್ನಡದಲ್ಲಿ ಮಾಡಿದರೆ ಕಷ್ಟವಿಲ್ಲ.

ಬೋರ್ಡಿನ ಮೆಂಬರುಗಳಲ್ಲಿ ಇಬ್ಬರು ಯುರೋಪಿಯನ್ ಪ್ಲಾಂಟರುಗಳಾಗಿರುತ್ತಾರೆ. ಇವರಿಗೆ ಸಾಧಾರಣವಾಗಿ ಕನ್ನಡ ತಿಳಿದೇ ಇರುತ್ತದೆ. ಇಂಜಿನೀಯರು ಮತ್ತು ಡಾಕ್ಟರಿಗೆ ಸ್ವಲ್ಪ ಕಷ್ಟವಾಗಬಹುದು. ಇವರು ಆಫೀಸರುಗಳಾದ್ದರಿಂದ ಇವರಿಗೆ ಭಾಷಣಗಳ ಸಾರಾಂಶವನ್ನು ತಿಳಿಸಿಕೊಡಲು ತಮ್ಮ ಗುಮಾಸ್ತರುಗಳಲ್ಲಿ ಯಾರನ್ನಾದರೂ ಇಟ್ಟುಕೊಳ್ಳಲು ಅನುಕೂಲವಿದೆ.

ಬೋರ್ಡಿನಲ್ಲಿ ನಡಿಯುವ ಚರ್ಚೆಯಲ್ಲಿ ಸಂಪೂರ್ಣ ತಿಳುವಳಿಕೆಯಿಂದ ಭಾಗಿಗಳಾಗಲು ಇಂಗ್ಲಿಷ್‌ಭಾಷೆ ತಿಳಿದವರಿಗೂ ಕಷ್ಟವಾಗುತ್ತದೆ. ಎಷ್ಟೋ ಓದಿದವರಾದರೂ ಈ ಪರದೇಶಿ ಭಾಷೆಯಲ್ಲಿ ತಮ್ಮ ಮನಸ್ಸಿನಲ್ಲಿ ಇದ್ದದ್ದನ್ನು ಪೂರ್ತಿಯಾಗಿ ವಿಡಿಸಿ ಹೇಳಲು ಕಷ್ಟವಾಗುತ್ತದೆ. ಅವರಲ್ಲೂ ತುಂಬಾ ಓದಿದವರಿಗೆ ಬೇರೆಯವರು ಮಾಡುವ ಭಾಷಣಗಳು ಅರ್ಥವಾಗಬಹುದಾದರೂ ತಮ್ಮ ಅಭಿಪ್ರಾಯವನ್ನು ಇಂಗ್ಲಿಷಿನಲ್ಲಿ ತಿಳಿಸಿಕೊಡಲು ಶಕ್ತಿಸಾಕಾಗುವದಿಲ್ಲ. ತನಗೆ ಇಂಗ್ಲಿಷ್ ತಿಳಿದೂ ಕನ್ನಡದಲ್ಲಿ ಮಾತನಾಡುವದು ನಾಚಿಕೆಯೆಂತ ಭಾವಿಸುತ್ತಾರೆ. ಈ ಕಾರಣದಿಂದ ತಮ್ಮ ಅಭಿಪ್ರಾಯವನ್ನು ಹೊರಪಡಿಸದೆ ಮೌನವಾಗಿ ಕೂರುವ ಸಂಭವವು ಉಂಟು. ಇದರಿಂದ ಇಂಥವರನ್ನು ಓಟುಕೊಟ್ಟು ಕಳುಹಿಸಿದ ಸಮುದಾಯದ ಜನರ ಅಭಿಪ್ರಾಯವು ಡಿಸ್ಟ್ರಿಕ್ಟ್‌ಬೋರ್ಡಿನ ಅಧಿಕಾರಿಗಳಿಗೆ ತಿಳಿಯದೆ ಹೋಗುವದರಿಂದ ತುಂಬಾ ನಷ್ಟವಾಗುತ್ತದೆ.

ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಗ್ರಾಮರಸ್ತೆ, ಗ್ರಾಮದ ಶಾಲೆ ಮತ್ತು ಆಸ್ಪತ್ರೆಗಳ ಆಡಳಿತವೇ ಮುಖ್ಯವಾಗಿ ಚರ್ಚಿಸಲ್ಪಡುವದಾಗಿದೆ. ಈ ರೀತಿ ದೇಶದ ಒಳಗಿನ ಮುಖ್ಯವಾಗಿ ಗ್ರಾಮಗಳಿಗೇನೇ ಸಂಬಂಧಿಸುವ ವಿಷಯಗಳನ್ನು ಇಂಗ್ಲಿಷಿನಲ್ಲಿ ಚರ್ಚಿಸಬೇಕೆಂಬುದು ನಾಚಿಕೆಗೇಡಿನ ಸಂಗತಿಯಾಗಿದೆ. ದೇಶದ ಆತ್ಮಗೌರವಕ್ಕೇನೇ ಹಾನಿಕರವಾದಂಥಾ ವಿಷಯವಾಗಿದೆ. ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತದಲ್ಲಿ ಸಹಾಯಕರಾಗಲು ಇಂಗ್ಲಿಷ್ ತಿಳಿದವರೇ ಆಗ ಬೇಕೆಂತ ಹೇಳಿದರೆ ದೇಶಕ್ಕೆ ತುಂಬಾ ತೊಂದರೆಯಿದೆ. ಏನೂ ಇಂಗ್ಲಿಷ್ ತಿಳಿಯದವರು ಲಕ್ಷಾಂತರ ರೂಪಾಯಿನ ವ್ಯಾಪಾರವನ್ನು ನಡಿಸುತ್ತಿರುವದನ್ನು ಯಾವಾಗಲೂ ನೋಡುತ್ತೇವೆ. ಇಂಥವರಿಗೆ ಸಹ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತದಲ್ಲಿ ಭಾಗಿಗಳಾಗಲು ಅರ್ಹತೆಯಿಲ್ಲವೆಂತಾದರೆ ನಾಚಿಕೆಗೇಡಲ್ಲವೇ? ಇಂಗ್ಲಿಷರು ಈ ದೇಶಕ್ಕೆ ಬರುವ ಮೊದಲು ದೇಶದ ಒಟ್ಟು ಆಡಳಿತವೂ ಕನ್ನಡದಲ್ಲೇ ಆಗುತ್ತಿರಲಿಲ್ಲವೇ? ದೇಶದವರು ತಮ್ಮ ಗೃಹಕೃತ್ಯದಂತಿರುವ ಡಿಸ್ಟ್ರಿಕ್ಟ್‌ಬೋರ್ಡಿನ ಆಡಳಿತವನ್ನು ನಡಿಸಲು ತಮ್ಮ ಭಾಷೆಯಿಲ್ಲವೆಂತ ಎಂದೂ ಒಪ್ಪಿಕೊಳ್ಳಬಾರದು. ಸ್ವದೇಶ ಪ್ರೀತಿ ಇರಬೇಕಾದರೆ ಮೊದಲು ಸ್ವಭಾಷಾ ಪ್ರೀತಿ ಇರಬೇಕು. ಸ್ವಭಾಷೆಯಲ್ಲಿ ಪ್ರೀತಿ ಇಲ್ಲದವರಿಗೆ ಸ್ವದೇಶದಲ್ಲಿ ಪ್ರೀತಿ ಇದೆಯೆಂತ ಒಪ್ಪುವದು ಕಷ್ಟವಾಗುತ್ತದೆ. ಐರ್ಲ್ಯಾಂಡಿನ ಸ್ವಾತಂತ್ರ್ಯದ ಹೋರಾಟದಲ್ಲಿ ಸ್ವಭಾಷೆಗೆ ಗೌರವವನ್ನು ಸ್ಥಾಪಿಸಿಕೊಳ್ಳುವದೇ ಮೊದಲನೇ ಭಾಗವಾಗಿತ್ತು. ದೇಶಭಾಷೆಯ ಪ್ರೀತಿಯನ್ನು ಬೆಳೆಸಲು ದೇಶಭಾಷೆಗೆ ಗೌರವವಿಕ್ಕುವಂತೆ ಪ್ರಜಾಪ್ರತಿನಿಧಿ ಸಭೆಗಳ ಚರ್ಚೆಗಳು ದೇಶಭಾಷೆಯಲ್ಲಿ ಆಗುವಂತೆ ಮಾಡಿಕೊಳ್ಳಬೇಕು. ಬೇರೆ ಪ್ರಾಂತ್ಯಗಳಲ್ಲಿ ಡಿ. ಬೋರ್ಡಿನ ಚರ್ಚೆಗಳು ಈಚೆಗೆ ದೇಶಭಾಷೆಯಲ್ಲೇ ಅನುಕೂಲಿಸಿ. ದೇಶದವರಿಗೆ ಸ್ವಭಾವಿಕವಾಗಿ ಇರುವ ಈ ಅಧಿಕಾರವನ್ನು ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ನೆರವೇರಿಸಿಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ.

ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳು

ಸರ್ ಎಮ್ ವಿಶ್ವೇಶ್ವರೈಯ್ಯನವರು ದಿವಾನರಾಗಿದ್ದಾಗ ಮೈಸೂರು ಸಂಸ್ಥಾನದ ಕೈಗಾರಿಕ ಕಾರ್ಖಾನೆಗಳ ಪ್ರೋತ್ಸಾಹಕ್ಕಾಗಿ ಕೈಗಾರಿಕ ಕಾರ್ಖಾನೆಗಳ ಮಾಲೀಕರೂ, ವ್ಯಾಪಾರಸ್ಥರೂ ಸರಕಾರದ ಪ್ರತಿನಿಧಿಗಳೂ ಸೇರಿ ಸಭೆ ನಡಿಸುವ ಪದ್ಧತಿಯಿತ್ತು. ಈಚೆಗೆ ಈ ಕ್ರಮ ನಿಂತುಹೋಗಿತ್ತು. ಈಗ ಹೊಸ ದಿವಾನರು ಪದವಿಗೆ ಬಂದನಂತರ ಸರ್ ವಿಶ್ವೇಶ್ವರಯ್ಯನವರ ಮೇಲ್ಪಂಕ್ತಿಯನ್ನು ಅನುಸರಿಸಲು ಪ್ರಾರಂಭಿಸಿದೆ. ಮೊನ್ನೆ 1ನೇ ತಾರೀಕಿನಲ್ಲಿ ಕೈಗಾರಿಕ ಕಾರ್ಖಾನೆ ಮಾಲೀಕರೂ, ಬ್ಯಾಂಕುಗಳೂ, ವ್ಯಾಪಾರಿಗಳೂ ಸಹ ಬೆಂಗಳೂರಲ್ಲಿ ಒಂದು ಸಭೆ ನಡಿಸಿದರು. ಈ ಸಭೆಯಲ್ಲಿ ಈಗಿನ ದಿವಾನರಾದ ಮಿರ್ಜಾ ಯಮ್' ಇಸ್ಮಾಯಿಲ್‌ರವರು ಹಾನುಪೂತಿ ಯುಕ್ತವಾದ ಭಾಷಣವೊಂದನ್ನು ಮಾಡಿದರು.

ಬೆಂಗಳೂರು ಸಿಟಿಯೊಂದರಲ್ಲಿ 1916—17ರಲ್ಲಿ 48 ಕಾರ್ಖಾನೆಗಳು ಮಾತ್ರ ಇದ್ದದ್ದು 192—25ರಲ್ಲಿ 197ಕ್ಕೆ ಏರಿರುತ್ತಲೂ ಆದರೆ ಇವುಗಳಲ್ಲಿ ದಿನ ಒಂದರ ಸರಾಸರಿ 20 ಜನರಿಗಿಂತ ಹೆಚ್ಚಿನ ಆಳುಗಳನ್ನು ಇಟ್ಟ ಕೆಲಸ ನಡೆಸುವವು 44 ಮಾತ್ರ ಆಗಿದೆಯೆಂತಲೂ ಇಂಥಾ ಚಿಕ್ಕ ಕೈಗಾರಿಕೆಗಳ ಬೆಳವಣಿಗೆಗೆ ಸರಕಾರದಿಂದ ಯಾವ ಸಹಾಯ ಬೇಕೆಂಬುದನ್ನು ತಿಳಿಸಿದರೆ ಸಹಾಯ ಕೊಡಲು ಪ್ರಯತ್ನಿಸುವೆನೆಂತಲೂ ಹೇಳಿದರು. ಬೆಂಗಳೂರು ಸಿಟಿಯಲ್ಲಿ ಮಾತ್ರ 8000 ಜನರು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೂಲಿ ಜನರು ಇದ್ದಾರೆಂತಲೂ ಇವರಿಗೆ ಒಳ್ಳೇ ಮನೆಗಳನ್ನು ಏರ್ಪಡಿಸಿ ಕೊಡುವಲ್ಲಿ ನಿಮ್ಮ ಸಲಹೆ ಬೇಕಾಗಿದೆಯೆಂತಲೂ, ಸಾಮಾನುಗಳನ್ನು ಸಾಗಿಸಲು ರೈಲ್‌ವೇ ಚಾರ್ಜು ಕಡಿಮೆ ಮಾಡುವದೇ ಮುಂತಾದ ಯಾವ ಯಾವ ವಿಧದಲ್ಲಿ ಸರ್ಕಾರಿ ಸಹಾಯ ಬೇಕಾಗಿದೆಯೆಂದು ತಿಳಿಸಬೇಕೆಂತಲೂ ಮೈಸೂರು ಬ್ಯಾಂಕಿನಿಂದ ಕಾರ್ಖಾನೆಗಳಿಗೆ ವರ್ಷ ಒಂದರ ಮೂರು ಕೋಟಿ ರೂಪಾಯಿಗಿಂತ ಹೆಚ್ಚಾಗಿ ಕೊಡಲಾಗುತ್ತದೆಯೆಂತಲೂ, ಬ್ಯಾಂಕಿನ ಹಣಕ್ಕೆ ಸಲಹ ಕೊಡಬೇಕಾಗಿದೆಯೆಂತಲೂ ರಫ್ತು ಸುಂಕವನ್ನು ತೆಗೆದುಹಾಕಿ ಅದರ ಬದಲಿಗೆ ಬೇರೆ ಯಾವ ತರದ ತೆರಿಗೆ ಹಾಕಬಹುದೆಂಬುದನ್ನು ತಿಳಿಸಬೇಕೆಂತಲೂ ಕೇಳಿಕೊಂಡರು.

ರೈಲ್‌ವೇಮಾರ್ಗವಾಗಿ ಈಗ ವರ್ಷ ಒಂದರ 2,23,000 ರೂಪಾಯಿ ಕ್ರಯದ ಸಾಮಾನುಗಳು ಮೈಸೂರು ಸಂಸ್ಥಾನದಿಂದ ಹೊರಗೆ ಹೋಗುತ್ತಿದೆಯೆಂತಲೂ 1913-14ರಲ್ಲಿ 16,17,00,000 ರೂಪಾಯಿನ ಸಾಮಾನು ಮಾತ್ರಹೋಗುತ್ತಿತ್ತೆಂತಲೂ ಹೇಳಿ, ಆದರೂ ವ್ಯಾಪಾರದ ಬೆಳವಣಿಗೆ ತೃಪ್ತಿಕರವಾಗಿಲ್ಲವೆಂತಲೂ, ದೊಡ್ಡ ವ್ಯಾಪಾರಗಳೆಲ್ಲಾ ದೇಶದ ಹೊರಗಿನವರ ಕೈಸೇರಿದೆಯೆಂತಲೂ, ಈ ವಿಷಯದಲ್ಲಿ ಹೊರಗಿನವರ ಯುಕ್ತ ಕೃತಜ್ಞತೆಯನ್ನು ಹೇಳಿಕೊಂಡು ದೇಶೀಯರೇ ಇಂಥಾ ಉದ್ಯಮಗಳನ್ನು ಕೈಕೊಳ್ಳುವದು ಯುಕ್ತವೆಂತ ಬೋಧಿಸಿದರು.

ಈ ರೀತಿ ಒಂದು ದೊಡ್ಡ ಸಂಸ್ಥಾನದ ಮಂತ್ರಿಯು ಪ್ರಜಾ ಜನರ ಸಾಂಪತ್ತಿಕ ಬೆಳವಣಿಗೆಗೆ ಉತ್ತೇಜನ ಕೊಡುವುದು ಮುಂದೆ ಬಂದರೆಂದರೆ ಅಂದಾ ಸಂಸ್ಥಾನವು ವೃದ್ಧಿಯಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಮೈಸೂರು ಸಂಸ್ಥಾನದಲ್ಲಿ ಎಷ್ಟೋ ಕೈಗಾರಿಕೆಗಳನ್ನು ಸರಕಾರದವರೇ ಆರಂಭಿಸಿ ಫಲಕಾರಿಯಾಗಿದೆಯೆಂದು ನಿವರ್ತನವಾದ ಈ ಉದ್ಯೋಗಗಳನ್ನು ಕೈಕೊಳ್ಳುವವರಿಗೆ ವಹಿಸಿಕೊಟ್ಟಿದ್ದಾರೆ. ನಮ್ಮ ಈ ಚಿಕ್ಕ ದೇಶದಲ್ಲಿ ಮರ ಮುಂತಾದ ಸಾಮಗ್ರಿ ತುಂಬಾ ಇರುವದರಿಂದ ಇಲ್ಲಿ ಬೆಂಕಿಪೆಟ್ಟಿಗೆ, ಕಾಗದ ಮುಂತಾದದ್ದನ್ನು ತಯಾರಿಸುವ ಕಾರ್ಖಾನೆಗಳನ್ನು ಸರಕಾರದವರೇ ಏರ್ಪಡಿಸಿ ಮೇಲ್ಪಂಕ್ತಿ ಹಾಕಿದರೆ ಪ್ರಜಾಜನರಲ್ಲಿ ಕೆಲವರು ಇಂಥಾ ಕೈಗಾರಿಕೆಗಳನ್ನು ಮುಂದೆ ಬಂದು ಹಿಡಿದರಲ್ಲಿ ಏನೂ ಸಂಶಯವಿಲ್ಲ.

ನಮ್ಮ ದೇಶದಲ್ಲಿ ಇಂಥಾ ಕೈಗಾರಿಕೆಗಳಿಗೆ ತುಂಬಾ ಅನುಕೂಲವಿದೆ. ಸ್ವಾಭಾವಿಕವಾಗಿ ಎತ್ತರ ಸ್ಥಳಗಳಿಂದ ಬೀಳುತ್ತಿರುವ ನೀರಿನ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉಂಟುಮಾಡಿಕೊಂಡರೆ ಕೊಡಗನ್ನೆಲ್ಲಾ ಕಾರ್ಖಾನೆಗಳಿಂದ ತುಂಬಿಸಬಹುದು. ಮಡಿಕೇರಿ ಸಮೀಪ ಇರುವ 'ಅಬ್ಬಿ ಫಾಲ್ಸ್' ಜಲಪಾತವನ್ನು ಉಪಯೋಗಿಸುವ ಯೋಜನೆ ಇತ್ತು. ನೀರನ್ನು ಕಟ್ಟಿ ತಡಿಯಬೇಕಾದರೆ ತುಂಬಾ ಸ್ಥಳವು ಬೇಕಾದ್ದರಿಂದ ಪ್ರಯೋಜನಕ್ಕಿಂತ ಹೆಚ್ಚು ನಷ್ಟವೆಂತ ಬಿಟ್ಟರು. ಕಡಿಯತ್ತುನಾಡು ಬೇಳೂರವರ ಗ್ರಾಮದಲ್ಲಿ [illegible] ಕಟ್ಟೆ ಕಟ್ಟಿಕೊಂಡು ವಿದ್ಯುಚ್ಛಕ್ತಿಯನ್ನು ಹುಟ್ಟಿಸಿಕೊಳ್ಳಬಹುದಾದ ಜಾಗವು ಒಂದು ಇದೆ. ಇದು ಇನ್ನು ಸರಕಾರದ ದೃಷ್ಟಿಗೆ ಬಿದ್ದಿದೆಯೋ ಇಲ್ಲವೋ ತಿಳಿಯದು. ಈ ಉಪಯೋಗದಿಂದಲೇ ಕೊಡಗಿನ ಸಾಂಪತ್ತಿಕ ಸ್ಥಿತಿಯನ್ನು ಬಹಳವಾಗಿ ಹೆಚ್ಚಿಸಬಹುದೆಂಬುದರಲ್ಲಿ ಸಂಶಯವಿಲ್ಲ.

ಆದರೆ ಇಷ್ಟರವರೆಗೆ ಪ್ರಜಾಹಿತವನ್ನೇ ಎಣಿಸಿ ಮಾಡುವ ಸರಕಾರವು ನಮಗೆ ದೊರಕಲು ಇನ್ನೂ ಕಾಲಬೇಕಾಗಿರುವದೆನೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ 11 ನೆಯ ಪ್ರಕರಣ

ಕ್ರೈಸ್ತರ ಸಹವಾಸ.

ಮಾರನೆಯ ದಿನ ಮಧ್ಯಾಹ್ನ 1 ಘಂಟೆಗೆ ಬೇಕರವರ ಪ್ರಾರ್ಥನಾಸಭೆಗೆ ಹೋದೆನು. ಹ್ಯಾರಿಸ್ ಕನ್ಯೆ, ಗಾಬು ಕನ್ಯೆ, ಕೋಟ್ಸರವರು ಮೊದಲಾದವರೊಡನೆ ನನಗೆ ಅಲ್ಲಿ ಬೇಕರವರು ಪರಿಚಯವನ್ನು ಮಾಡಿಸಿದರು. ಎಲ್ಲರೂ ದೇವರ ಪ್ರಾರ್ಥನೆಮಾಡಲು ಕೈಮುಗಿದುಕೊಂಡು ನಿಂತುಕೊಂಡರು. ನಾನೂ ಅವರಂತೆಯೇ ಕೈಮುಗಿದು ನಿಂತುಕೊಂಡೆನು. ಒಂ[illegible]ತಹನನೆಲ್ಲರ ಸಲುವಾಗಿ ಭಗವಂತನನ್ನು ಪ್ರಾರ್ಥಿಸುವುದು ರೀತಿಯು. ಆ ದಿವಸ ಶಾಂತಿಯಿಂದ ಕಳೆಯಬೇಕು. ಭಗವಂತನಿಗಾಗಿ ಹೃದಯಕವಾಟವನ್ನು ತೆರೆಯಬೇಕು. ನನ್ನ ಕುರಿತು ಅವರು ಪ್ರಾರ್ಥನೆಮಾಡಿದರು. "ಓ ಪ್ರಭು, ನಮ್ಮಲ್ಲಿಗೆ ಬಂದಿರುವ ಈ ಹೊಸ ಸಹೋದರನಿಗೆ ಕೂಡ ನಿನ್ನ ದಾರಿಯನ್ನು ತೋರಿಸು. ನಮಗುಂಟುಮಾಡಿರುವ ಶಾಂತಿಯನ್ನು ಇತನಿಗುಂಟುಮಾಡು. ನಮ್ಮನ್ನು ಕಾಪಾಡುವ ಯೇಸುಕ್ರಿಸ್ತನೇ ಇತನನ್ನೂ ಕಾಪಾಡುವವನಾಗು. ಕ್ರಿಸ್ತನ ಹೆಸರಿನಿಂದಲೇ ಇವೆಲ್ಲವನ್ನೂ ನಾವು ಕೇಳಿಕೊಳ್ಳುತ್ತೇವೆ" ಎಂದು ಅವರೆಲ್ಲರೂ ಪ್ರಾರ್ಥಿಸಿದರು. ಆ ಸಭೆಯಲ್ಲಿ ಸಂಗೀತವನ್ನು ಹಾಡುವುದು, ಪಿಯಾನೋ ಬಾರಿಸುವುದು ಮೊದಲಾದುವೇನೂ ಇರಲಿಲ್ಲ. ಪ್ರತಿದಿವಸದಲ್ಲೂ ಯಾವುದೋ ಒಂದು ಹೊಸವಿಷಯವನ್ನು ಕುರಿತು ಕೊಂಚಕಾಲ ಪ್ರಾರ್ಥನೆಯನ್ನು ಮಾಡಿ ಅನಂತರ ನಾವೆಲ್ಲರೂ ಊಟಕ್ಕೆ ಹೋಗುತ್ತಿದ್ದೆವು. ಪ್ರಾರ್ಥನೆಯು ಐದುನಿಮಿಷಕಾಲ ಮಾತ್ರ ನಡೆಯುತ್ತಿದ್ದಿತು. ಹ್ಯಾರಿಸ್, ಗಾಬುಕನ್ಯೆಯರಿಬ್ಬರೂ ಮಧ್ಯವಯಸ್ಸಿನವರಾಗಿದ್ದರು. ಅವರಿಬ್ಬರಿಗೂ ಮದುವೆಯಾಗಿರಲಿಲ್ಲ. ಕೋಟ್ಸರವರೂ ವಿರಾಗಿಯೇ. ಪ್ರತಿಭಾನುವಾರ ಸಾಯಂಕಾಲ 4 ಘಂಟೆಗೆ ತಮ್ಮ ಮನೆಗೆ ಟೀ ಕುಡಿಯಲು ಆ ಕನ್ಯೆಯರಿಬ್ಬರೂ ಕರೆಯುತ್ತಿದ್ದರು. ಅವರಿಬ್ಬರೂ ಒಟ್ಟಿಗೆ ಒಂದು ಮನೆಯಲ್ಲಿದ್ದರು. ಪ್ರತಿಭಾನುವಾರವೂ ಕೋಟ್ಸರವರಲ್ಲಿಗೆ ಹೋದಾಗ್ಯೂ ಆ ವಾರದಲ್ಲಿ ನಾನು ಮಾಡಿದ ಮತಕಾರ್ಯಗಳ ಪಟ್ಟಿಯನ್ನು ಅವರಿಗೆ ಕೊಡುತ್ತಿದ್ದೆನು. ನಾನೋದಿದ ಗ್ರಂಥಗಳಿಂದ ನನಗುಂಟಾದ ಭಾವವನ್ನು ಕುರಿತು ಅವರ ಕೂಡ ಚರ್ಚಿಸುತ್ತಿದ್ದೆನು. ತಮ್ಮ ಅನುಭವವನ್ನೂ ತಮಗುಂಟಾದ ಶಾಂತಿಯನ್ನೂ ಕುರಿತು ಆ ಕನ್ಯೆಯರಿಬ್ಬರೂ ಹೇಳುತ್ತಿದ್ದರು. ಕೋಟ್ಸರವರು ನಿಷ್ಕಪಟಿ ಮತ್ತು ಗಾಢವಾದ ಮತಾಭಿಮಾನವುಳ್ಳ ಯುವಕರು. ನಾನೆಲ್ಲಿಯಾದರೂ ಅವರ ಜೊತೆಗೆ ಹೋಗುತ್ತಿದ್ದೆವು. ಇತರ ಕ್ರೈಸ್ತಮತದವರಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ನನ್ನ ಪರಿಚಯವು ಹೆಚ್ಚಾದ ಮೇಲೆ ಅವರು ನನಗೆ ಅನೇಕ ಪುಸ್ತಕಗಳನ್ನು ಕೊಡುತ್ತಿದ್ದರು. ಅವೆಲ್ಲವನ್ನೂ ನಾನು ಓದಿ ಅವರ ಕೂಡ ಚರ್ಚಿಸುತ್ತಿದ್ದೆನು. 1893 ರಲ್ಲಿ ಒಹು ಗ್ರಂಥಗಳನ್ನೋದಿದೆನು. ಅವುಗಳ ಹೆಸರೆಲ್ಲವೂ ಈಗ ಜ್ಞಾಪಕವಿಲ್ಲವಾದರೂ ಡಾಕ್ಟರ್ ಪಾರ್ಕರವರ ವ್ಯಾಖ್ಯಾನವು, ಪಿಯರ್ಸನರವರ ಅಧಿಕಪ್ರಮಾಣಿಸಿದರ್ಶನವು, ಬಟ್ಲರವರ ಅನಾಲಜಿ ಮೊದಲಾದವುಗಳನ್ನೋದಿದೆನೆಂದು ಜ್ಞಾಪಕ. ಅವುಗಳಲ್ಲಿಯ ಕೆಲವು ಭಾಗಗಳು ಬೋಧಪ್ರದವಾಗಲಿಲ್ಲ. ಕೆಲವನ್ನು ನಂಬಿದೆನು, ಮತ್ತೆ ಕೆಲವನ್ನು ನಂಬಲಿಲ್ಲ. ಬಹು ಪ್ರಮಾಣಗ್ರಂಥಗಳಲ್ಲೆಲ್ಲಾ ಬೈಬಲು ಮತವೇ ನಿಜವೆಂದು ಹೇಳಲ್ಪಟ್ಟಿದೆ. ಅದು ನನಗೆ ರುಚಿಸಲಿಲ್ಲ. ಪಾರ್ಕರವರ ವ್ಯಾಖ್ಯಾನವು ನೀತಿಯನ್ನು ಬೋಧಿಸುತ್ತಿದೆ. ಬಟ್ಲರವರ ಅನಾಲಜಿ ಗ್ರಂಥವು ಸಾಧಾರಣವಾಗಿ ಬೋಧಪ್ರದವಾಗುವುದಿಲ್ಲವಾದುದರಿಂದ ಅದನ್ನು 4-6 ವೇಳೆ ಓದಬೇಕು. ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಲೋಸುಗ ಆ ಗ್ರಂಥವು ಬರೆಯಲ್ಪಟ್ಟಂತಿದೆ. ದೇವರಿದ್ದಾನೆಂಬ ವಿಷಯದಲ್ಲಿ ನನಗೆ ಆಗಲೇ ನಂಬಿಕೆ ಹುಟ್ಟಿದ್ದಿತಾದುದರಿಂದ ಆ ಗ್ರಂಥವಿಷಯಕವಾದವು ನನಗೆ ಅನಾವಶ್ಯಕವಾಗಿದ್ದಿತು. ಯೇಸುಕ್ರಿಸ್ತನೊಬ್ಬನೇ ಭಗವದವತಾರವಾದುದರಿಂದ ಭಗವಂತನ ಸಾನ್ನಿಧ್ಯವನ್ನು ಕೋರುವವರ್ಲ್ಲರೂ ಅವನ ಮೂಲಕವೇ ಸೇರಬೇಕೆಂಬ ವಿಷಯ ಸಂಬಂಧವಾದ ವಾದವು ಕೂಡ ನನಗೊಪ್ಪಲಿಲ್ಲ. ಕೋಟ್ಸರವರಿಗೆ ನನ್ನ ಮೇಲೆ ವಿಶೇಷಾನುರಾಗವಿದ್ದಿತು. ನನ್ನ ಕೊರಳಲ್ಲಿದ್ದ ತುಳಸೀಮಣಿಯ ಸರವನ್ನು ನೋಡಿದರು. ವೈಷ್ಣವರೆಲ್ಲರೂ ತುಳಸೀಮಣಿಸರವನ್ನು ಧರಿಸುತ್ತಾರೆ. ಅದು ಮೂಢಭಕ್ತಿಯೆಂದು ಅವರು ಭಾವಿಸಿದುದರಿಂದ ಅದರ ವಿಚಾರವಾಗಿ ನನಗೂ ಅವರಿಗೂ ಈ ಪ್ರಕಾರವಾಗಿ ಸಂಭಾಷಣೆಯು ನಡೆಯಿತು.

"ಈ ಸರವನ್ನು ನೀವು ಧರಿಸಕೂಡದು. ನಾನು ಅದನ್ನು ಕಿತ್ತು ಬಿಸಾಡುವೆನು."

"ಅದನ್ನು ನನಗೆ ನನ್ನ ತಾಯಿಯು ಕೊಟ್ಟಳು. ಅದನ್ನು ತೆಗೆಯಕೂಡದು."

"ನೀವು ಇದನ್ನು ನಂಬುತ್ತೀರಾ?"

"ಅದರ ಮಹಿಮೆಯು ನನಗೆ ತಿಳಿಯದು. ಅದನ್ನು ತೆಗೆದುಬಿಟ್ಟರೆ ನನಗೆ ಹಾನಿಯಾಗುತ್ತದೆಂದು ತಿಳಿದುಕೊಂಡಿರುವುದಿಲ್ಲ. ನನ್ನ ತಾಯಿಯು ಬಹಳ ವಿಶ್ವಾಸದಿಂದ ತನ್ನ ಕೈಗಳಿಂದಲೇ ಅದನ್ನು ನನ್ನ ಕೊರಳಲ್ಲಿ ಕಟ್ಟಿದಳು. ಆದರಿಂದ ನನಗೆ ಕ್ಷೇಮವಾಗುತ್ತದೆಂಬ ನಂಬಿಕೆಯಿಂದಲೇ ಆಕೆಯು ನನ್ನ ಕೊರಳಿಗೆ ಹಾಕಿರುವುದು. ಕಾಲಕ್ರಮೇಣ ಅದು ಹಳೆಯದಾಗಿ ಹರಿದುಹೋದಲ್ಲಿ ಪುನಃ ನಾನು ಮತ್ತೊಂದು ಸರವ ಹಾಕಿಕೊಂಡ ವಿನಾ ಇದನ್ನು ತೆಗೆಯಕೂಡದು" ಎಂದು ನಾನು ಹೇಳಿದೆನು. ನನ್ನ ಮಾತಿನಲ್ಲಿ ಕೋಟ್ಸರವರಿಗೆ ನಂಬಿಕೆಯಿಲ್ಲದಿದ್ದುದರಿಂದ ನಾನು ಹೇಳಿದ್ದನ್ನು ಅವರೊಪ್ಪಲಿಲ್ಲ. ನನ್ನ ಅಜ್ಞಾನವನ್ನು ಹೋಗಲಾಡಿಸಬೇಕೆಂದು ಅವರು ಯೋಚಿಸಿದರು. "ಇತರ ಮತಗಳಲ್ಲಿ ಸ್ವಲ್ಪ ಸತ್ಯವಿದ್ದರೂ ಮುಕ್ತಿಪಡೆಯಬೇಕೆನ್ನುವವರು ಕ್ರೈಸ್ತರಾದ ಹೊರತು ಸಾಧ್ಯವಿಲ್ಲವು. ಇದೊಂದೇ ಸತ್ಯವಾದ ಮತವು. ಪಾಪವು ಪರಿಹಾರವಾಗುವುದಕ್ಕೆ ಯೇಸುಕ್ರಿಸ್ತ ದೇವರಲ್ಲಿ ಮೊರೆಯಿಡಬೇಕು. ಅದು ವಿನಾ ಎಷ್ಟು ಪ್ರಾಯಶ್ಚಿತ್ತಗಳನ್ನು ಮಾಡಿದರೂ ಪಾಪ ನಾಶವಾಗುವುದಿಲ್ಲ. ಯೇಸುಕ್ರಿಸ್ತ ಮತವನ್ನು ಅವಲಂಬಿಸಿದಲ್ಲಿ ಕ್ರಿಸ್ತನು ದೇವರಲ್ಲಿ ಮನವಿಮಾಡಿಕೊಳ್ಳುತ್ತಾನೆ" ಎಂಬ ನಂಬಿಕೆಯು ನನಗೆ ಹುಟ್ಟಿಸಬೇಕೆಂಬುದು ಕೋಟ್ಸರವರ ಅಭಿಪ್ರಾಯವಾಗಿದ್ದಿತು. ಆದುದರಿಂದಲೇ ಅವರು ಅನೇಕ ಪುಸ್ತಕಗಳನ್ನು ನನಗೆ ಕೊಟ್ಟರು. ನಿಷ್ಠರಾದ ಕೆಲವು ಕ್ರೈಸ್ತರೊಡನೆ ನನಗೆ ಪರಿಚಯವನ್ನು ಸಹ ಮಾಡಿಸಿದರು. ಪ್ಲಿಮತ್ ಸೋದರರೆಂಬ ಒಂದು ಬಗೆಯ ಕ್ರೈಸ್ತರು ಕೂಡ ಕೋಟ್ಸರವರ ಮೂಲಕ ನನಗೆ ಪರಿಚಯಸ್ಥರಾದರು. ಕೋಟ್ಸರವರ ಮೂಲಕ ಪರಿಚಯಸ್ಥರಾದವರಲ್ಲಿ ಅನೇಕ ಜನರು ಯೋಗ್ಯರೇ ಆಗಿದ್ದರು. ಅವರೆಲ್ಲರೂ ದೈವಭೀತಿಯುಳ್ಳವರು. ಅದು ಕಾರಣ ಪ್ಲಿಮತ್ ಸೋದರರ ಕುಟುಂಬದಲ್ಲಿ ಒಬ್ಬರು ಮಾಡಿದ ವಾದವು ಮಾತ್ರ ಬಹಳ ಆಶ್ಚರ್ಯಕರವಾಗಿ ತೋರಿತು. 'ನಮ್ಮ ಕ್ರೈಸ್ತಮತಸೌಂದರ್ಯವನ್ನು ನೀವು ಗ್ರಹಿಸಲಾರಿರಿ. ನಿಮ್ಮ ಸಂಬಂಧವಾಗಿ ನೀವು ಇದುವರೆಗೆ ಮಾಡಿರುವ ಪಾಪವನ್ನು ಕುರಿತು ಯಾವಾಗಲೂ ನೀವು ಚಿಂತಿಸುತ್ತಿರುವಂತೆ ತೋರುತ್ತದೆ. ಅದನ್ನು ತಿದ್ದಿಕೊಳ್ಳುವುದರಲ್ಲಿ, ಪ್ರಾಯಶ್ಚಿತ್ತವನ್ನು ಹೊಂದುವುದರಲ್ಲೂ ನಿಮ್ಮ ಆಯುಷ್ಯವೆಲ್ಲವೂ ಕಳೆದು ಹೋಗುವುದು. ಈ ಪ್ರಕಾರವಾಗಿ ವಿರಾಮವಿಲ್ಲದೆ ಕರ್ಮ ಮಾಡುತ್ತಿರುವುದಾದರೆ ಮೋಕ್ಷವೆಂತಾಗುವುದು? ನಿಮಗೆಂದೂ ಶಾಂತಿಯಾಗುವುದಿಲ್ಲವು. ನಾವೆಲ್ಲರೂ ಪಾಪಾತ್ಮರೇ ಎಂದು ನೀವೊಪ್ಪಿಕೊಳ್ಳುವಿರಿ. ಇನ್ನು ನಮ್ಮ ನಂಬಿಕೆಯು ಎಷ್ಟು ಗಟ್ಟಿಯಾಗಿದೆಯೆಂಬುದನ್ನು ನೋಡೋಣ. ನಾವು ನೀತಿವರ್ತನದಲ್ಲಿರುವುದಕ್ಕೂ ಪಾಪಕಾರ್ಯವನ್ನು ನಿಗದಿಸುವುದಕ್ಕೂ ಮಾಡುವ ಪ್ರಯತ್ನಗಳೆಲ್ಲ ವ್ಯರ್ಥವು. ಆದರೂ ಮೋಕ್ಷವು ದೊರಕಲೇಬೇಕು. ಪಾಪಭಾರವನ್ನು ನಹಿಸಿಕೊಂಡಿರುವುದು ಹೇಗೆ? ಅದನ್ನು ಯೇಸುಕ್ರಿಸ್ತನ ಮೇಲೆ ಹೊರಿಸಬೇಕು. ದೇವರ ಮಕ್ಕಳಲ್ಲಿ ಪಾಪಮಾಡದಿರುವವನು ಅತನೊಬ್ಬನೇ. ತನ್ನನ್ನು ನಂಬಿದವರಿಗೆ ಶಾಶ್ವತ ಮುಕ್ತಿಯಾಗುವುದೆಂದು ಅತನೇ ಹೇಳಿರುವನು. ಭಗವಂತನ ಅನಂತಾನುಗ್ರಹವು ಅದರಲ್ಲೇ ಇರುವುದು. ಕ್ರಿಸ್ತನು ಪಾಪನಿವಾರಣಾರ್ಥವಾಗಿ ದೇಹವನ್ನು ಬಿಟ್ಟನೆಂದು ನಾವು ನಂಬಿದುದಾದರೆ ನಾವು ಮಾಡಿದ ಪಾಪವು ನಮ್ಮನ್ನು ಬಂಧಿಸುವುದಿಲ್ಲ. ಪಾಪಕೃತ್ಯವನ್ನು ಮಾಡದಿರಲಾಗದು. ಈ ಪ್ರಪಂಚದಲ್ಲಿ ಪಾಪಕಾರ್ಯವನ್ನು ಮಾಡದೆ ಯಾರೂ ಜೀವಿಸಿಕೊಂಡಿರಲಾರರು. ಅದು ಕಾರಣವೇ ಮನುಷ್ಯರೆಲ್ಲರೂ ಮಾಡಿದ ಪಾಪಕ್ಕೋಸ್ಕರವೇ ಕ್ರಿಸ್ತನು ತನ್ನ ತನುವನ್ನು ಬಿಟ್ಟನು. ಅದನ್ನು ಅಂಗೀಕರಿಸುವವರಿಗೇ ಶಾಶ್ವತ ಶಾಂತಿಯುಂಟಾಗುವುದು. ನಿಮ್ಮ ಜೀವಿತವು ಎಷ್ಟು ಅಂದೋಳಕರ (ಕಳವಳ)ವಾಗಿರುವದೆಂಬುದನ್ನೂ, ನಮಗೆಷ್ಟು ಶಾಂತಿ ಪ್ರಾಪ್ತವಾಗಿರುವುದೆಂಬುದನ್ನೂ ನೀವು ಯೋಚಿಸಿರಿ" ಎಂದು ಅವರು ಹೇಳಿದರು. ಈ ವಾದವು ನನ್ನ ಮನಸ್ಸಿಗೊಪ್ಪಲಿಲ್ಲವು. "ಕ್ರೈಸ್ತರೆಲ್ಲರೂ ನಂಬಿರುವಂತಹ ಕ್ರೈಸ್ತಮತವಿದೆಯೇ ಆಗಿದ್ದಲ್ಲಿ ನಾನು ಅದನ್ನು ಅಂಗೀಕರಿಸಲಾರೆನು. ನಾನು ಮಾಡಿದ ನನ್ನ ಪಾಪದಿಂದ ನಾನು ಮುಕ್ತನಾಗಬೇಕು. ಪಾಪಕೃತ್ಯವನ್ನು ಮಾಡದಿರುವಂತೆ ಕಾಪಾಡಬೇಕೆಂದು ನಾನು ಕೋರುತ್ತೇನೆ. ಪಾಪಚಿಂತೆಯೇ ಇಲ್ಲದಂತಿರಬೇಕೆಂದು ನಾನು ಅಪೇಕ್ಷಿಸುತ್ತೇನೆ. ಅದು ಲಭ್ಯವಾಗುವವರೆಗೂ ನಾನು ಹೀಗೆಯೇ ಇರುವೆನು" ಎಂದು ನಾನು ಹೇಳಿದೆನು. "ನಿಮ್ಮ ಪ್ರಯತ್ನವು ನಿಷ್ಫಲವಾದುದು. ನೀವು ನಾನು ಹೇಳಿದುದನ್ನು ಕುರಿತು ಪುನಃ ಚೆನ್ನಾಗಿ ಯೋಚಿಸಿರಿ" ಎಂದು ಅವರು ಹೇಳಿದರು. ತರುವಾಯ ಅವರು ಬಹಳ ಪಾಪಕೃತ್ಯಗಳನ್ನೇ ಮಾಡಿದರೂ ಅದನ್ನು ಕುರಿತು ತಮಗೆ ಯಾವ ಪರಿತಾಪವೂ ಇಲ್ಲವೆಂದು ಅವರು ನನಗೆ ತಿಳಿಸಿದರು. ಈ ವಾದವನ್ನು ಕ್ರೈಸ್ತರೆಲ್ಲರೂ ನಂಬರು. ಕೋಟ್ಸರವರಿಗೆ ದೈವಭೀತಿ ಬಹಳವಾಗಿದ್ದಿತು. ಅವರ ಹೃದಯವು ಪಾವನವು. ಆತ್ಮಪವಿತ್ರೀಕರಣವು ಸಾಧ್ಯವೆಂದು ಕೂಡ ಅವರು ನಂಬಿದ್ದರು. ಆ ಕನ್ಯೆಯರಿಬ್ಬರೂ ಕೂಡ ಕೋಟ್ಸರವರಂತೆಯೇ ನಂಬಿದ್ದರು. ನಾನು ಓದಿದ ಗ್ರಂಥಗಳು ಭಕ್ತಿಮಯವಾಗಿದ್ದುವು. ಪ್ಲಿಮತ್ ಸೋದರರ ಮತದಲ್ಲಿ ನನಗುಂಟಾದ ಸಂಶಯವನ್ನು ಕುರಿತು ಕೋಟ್ಸರವರು ಬಹಳ ಪರಿತಾಪಪಟ್ಟುಕೊಂಡುದರ ಮೇಲೆ ಕ್ರೈಸ್ತಮತದ ಮೇಲೆ ನನಗೆ ತಿರಸ್ಕಾರಭಾವವಿಲ್ಲವೆಂದು ನಾನು ಅವರಿಗೆ ಹೇಳಿದೆನು, ಪ್ಲಿಮತ್ ನ ವಿಚಾರವಾಗಿಯೂ ಅದರ ವ್ಯಾಖ್ಯಾನಕಾರರವಾಗಿಯೂ ನನಗೆ ಸಂದೇಹವಿರುತ್ತದೆ.

ಸ್ವಾಮಿ ವಿವೇಕಾನಂದರವರ ಭಾಷಣ.

('ಪ್ರಭು' ಎಂಬ ತ್ರೈಮಾಸಿಕ ಪತ್ರಿಕೆಯಿಂದ ಎತ್ತಿ ಬರೆದದ್ದು.)

ಫೆಬ್ರುವರಿ ೨೨, ೧೮೯೪.

ನಿನ್ನಿನ ದಿನ ಸಂಜೆಗೆ ಜೇ. ಜೇ. ಬೇಗ್ಲಿ ಇವರ ನಿವಾಸದಲ್ಲಿ ಶ್ರೀ ಸ್ವಾಮಿ ವಿವೇಕಾನಂದರವರು ಇದುವರೆಗಿನ ತಮ್ಮ ಅತ್ಯುತ್ತಮ ವ್ಯಾಖ್ಯಾನಗಳಲ್ಲೊಂದರಲ್ಲಿ, ಹಿಂದೂಧರ್ಮದ ಬೇರೆ ಬೇರೆ ಪಂಗಡದವರ ವೇದಾಂತ ತತ್ವಗಳ ವಿಷಯವನ್ನು ಕುರಿತು ಬಹಳ ಮನೋಹರವಾದ ರೀತಿಯಿಂದ ಹೇಳಿದರು. ಆಧ ದೊಡ್ಡ ಸ್ಥಳದಲ್ಲೂ, ಸ್ವಲ್ಪ ತಡಮಾಡಿ ಬಂದ ಎಷ್ಟೋ ಜನಗಳಿಗೆ ಸ್ಥಳದೊರೆಯದಂತೆ ಇತ್ತು.

ಸಾವಿರಾರು ವರ್ಷಗಳಿಗೆ ಹಿಂದೆಯೇ ಹಿಂದೂಸ್ಥಾನದಲ್ಲಿ ಆಧ್ಯಾತ್ಮಿಕ ಶಾಸ್ತ್ರವು ಈಗಿರುವುದಕ್ಕಿಂತ ಎಷ್ಟೋ ಹೆಚ್ಚು ಉನ್ನತಿಗೆ ಹೋಗಿತ್ತೆಂಬುದನ್ನು ಬೇರೆ ಬೇರೆ ಜನಾಂಗಗಳ ವೇದಾಂತ ತತ್ವಗಳ ದೃಷ್ಟಾಂತದಿಂದ ಸಿದ್ಧಮಾಡಿ ತೋರಿಸಲು ಎರಡು ಘಂಟೆಯ ಕಾಲ ಉಪನ್ಯಾಸಮಾಡಿದರು. ಮಧ್ಯೆ ಮಧ್ಯೆ ಸಂದರ್ಭಕ್ಕನುಕೂಲವಾದ ಸಂಸ್ಕೃತ ಗ್ರಂಥಗಳ ಮನೋಹರವಾದ ಕಥೆಗಳನ್ನು ಹೇಳುತ್ತ ಉಪನ್ಯಾಸವನ್ನು ಬಹಳ ಚಿತ್ತಾಕರ್ಷಕವಾಗುವಂತೆ ಮಾಡಿದರು.

ಬೇರೆ ಬೇರೆ ಜನಾಂಗದವರ ಪ್ರತಿ ಹಿಂದುವಿನ ಸ್ವಭಾವಗುಣವೆಂದರೆ ಯಾವುದನ್ನೂ ನಾಶಮಾಡದಿರುವುದು. ಆದರೆ ಆ ಎಲ್ಲವುಗಳ ಸಮರಸತೆಯನ್ನು ಕಂಡುಹಿಡಿದು ಅವುಗಳನ್ನು ತನ್ನವರೊಡನೆ ಸಮಯೋಗಿಸಿಕೊಂಡಿರಲು ಪ್ರಯತ್ನಮಾಡುವದೇ ಅತನ ಸಹಜ ಗುಣ. ಹಿಂದೂಸ್ಥಾನಕ್ಕೆ ಯಾವ ಹೊಸ ವಿಚಾರವು ಬಂದರೂ ಹಿಂದುವು ಅದರೊಡನೆ ಜಗಳವಾಡುವುದಿಲ್ಲ. ಅದಕ್ಕಾಗಿ ಆತಂಕವೂ ಆಗುವುದಿಲ್ಲ. ಆದರೆ ಅದನ್ನೂ ಸಾವಧಾನ ಚಿತ್ತದಿಂದ ಗಮನಿಸಿ, ಅದು ಯಾವ ಮೂಲತತ್ವಗಳನ್ನವಲಂಬಿಸಿಕೊಂಡಿರುತ್ತದೆಂಬುದನ್ನು ಶೋಧಿಸಿ ತಿಳಿದು ಅದಕ್ಕೂ ಯೋಗ್ಯಮರ್ಯಾದೆಯನ್ನು ಕೊಟ್ಟು ತನ್ನ ಬಳಿಯಲ್ಲಿಯೇ ಇಟ್ಟುಕೊಳ್ಳುತ್ತಾನೆ. ಏಕೆಂದರೆ ಇವರಿಗೆ ಇಂತಹ ಪಾಠವನ್ನು ಇವರ ದೇವರೇ ಧರ್ಮಬೋಧಕನಾಗಿ ಅವತಾರಮಾಡಿ ಕಲಿಸಿಕೊಟ್ಟು ಹೋದನು. ಈ ಅವತಾರ ಪುರುಷನು ತನ್ನ ವಿಷಯವಾಗಿ, ಇವರಿಗೆ ಈ ರೀತಿ ಬೋಧಿಸಿರುತ್ತಾನೆ. 'ಆ ದೇವನೇ ನಾನು, ಈಗ ಈ ಅವತಾರದಿಂದ ಬಂದಿರುತ್ತೇನೆ; ಎಲ್ಲಾ ಗ್ರಂಥಗಳ ಸಾರಭೂತನೂ ನಾನೇ, ಎಲ್ಲ ಧರ್ಮಚರಣೆಗಳ ಸ್ಥಿತಿಯೂ ನಾನೇ" ಎಂದ. ಈ ದೃಷ್ಟಿಯಿಂದಲೇ ಹಿಂದುವು ಯಾವ ಧರ್ಮವನ್ನೂ ತಿರಸ್ಕರಿಸುವುದಿಲ್ಲವೆಂದು ತಿಳಿಸಿ, ಮುಂದೆ ಅವತಾರವೆಂದರೇನೆಂಬುದನ್ನೂ ಸ್ಪಷ್ಟಪಡಿಸಿದರು.

ಹಿಂದೂ ಮತ್ತು ಕ್ರೈಸ್ತಧರ್ಮಗಳ ನಡುವೆ ಬಹಳ ಅಸಮಾನವಾದ ವಿಷಯ ಹೊಂದಿದೆ. ಕ್ರಿಸ್ತನ ರಕ್ತದಿಂದಲೇ ಮೋಕ್ಷವಾಗುವುದು, ಅದಿಲ್ಲದೆ ಬೇರೊಬ್ಬರ ರಕ್ತದಿಂದ ನಾವು ಪರಿಶುದ್ಧರಾಗಲಾರೆವು ಎಂಬಂಥ ವಿಚಾರಗಳನ್ನು ಹಿಂದುವಿಗೆ ಯಾರೂ ಕಲಿಸಲಿಲ್ಲ. ಯಹೂದಿಯರಲ್ಲೂ ಅದೇ ಧರ್ಮಭಾವನೆಯುಂಟು. ತಮ್ಮ ಧರ್ಮಭಾವನೆಯು ಇಷ್ಟು ಮಾತ್ರ ನಾನು ತಿನ್ನಬೇಕಾಗಿರುವ ಆಹಾರವು ಇಲ್ಲಿದೆ. ಇದರಲ್ಲಿ ಸ್ವಲ್ಪವನ್ನು ದೇವರಿಗಾಗಿ ಅರ್ಪಿಸುವ ಮೊದಲು ನಾನು ತಿನ್ನುವುದು ಅಯೋಗ್ಯವು. ಅದ್ದರಿಂದ ಈ ಭಾಗವನ್ನು ಬೇರೆ ಯಾರಿಗಾದರೂ ಕೊಟ್ಟು ನಾನು ಊಟಮಾಡುವೆನು' ಈ ನಿಷ್ಕಲಂಕವಾದ ಸರಳಭಾವದಿಂದಲೇ ನಾವು ಯಾವಾಗಲೂ ಎರಡನೆಯವರಿಗೆ ಕೊಡುತ್ತಿರುತ್ತೇವೆ. ಆದರೆ ಯಹೂದಿಯರ ಧರ್ಮಭಾವನೆಯಾದರೋ ವಿಚಿತ್ರವಾದದ್ದು, "ನನ್ನ ಪಾಪಗಳ ಅನಿಷ್ಟವೆಲ್ಲ ಈ ಕುರಿಯ ಮೇಲೆ ಬರಲಿ, ಇಂಥ ಈ ಕುರಿಯನ್ನು ನಾನು ಎರಡನೆಯವರಿಗೆ ದಾನಮಾಡಿ, ಪಾಪದಿಂದ ಮುಕ್ತನಾಗಿ ಸುಖಿಯಾಗುತ್ತೇನೆ' ಎಂಬಂಥಾದ್ದು. ಇಂಥ ಮನೋಹರವಾದ ವಿಚಿತ್ರ ವಿಚಾರಗಳ ಕಲ್ಪನೆಯೂ ಹಿಂದುಸ್ಥಾನದವರಿಗೆ ಬರಲಿಲ್ಲವೆಂತ ಬಹಳ ಆನಂದವಾಗುತ್ತಿದೆ. ಈ ವಿಧವಾದ ಧರ್ಮತತ್ವಗಳಿಂದ ಮೋಕ್ಷಫಳಿಸಿಕೊಳ್ಳಲು ನಾನಂತೂ ಎಂದೂ ಇಚ್ಛಿಸುವುದಿಲ್ಲ. ಯಾರಾದರೂ ಬಂದು ನನಗೆ "ಈ ತನ್ನ ರಕ್ತದಿಂದ ತಾವು ಸ್ವರ್ಗಕ್ಕೆ ಹೋಗಿರಿ" ಎಂದು ಕೇಳಿಕೊಂಡರೆ, ಅವರಿಗೆ ಈ ರೀತಿ ಹೇಳುತ್ತೇನೆ. "ಅಣ್ಣಾ ದೂರ ಸರಿ, ನಾನು ನರಕಕ್ಕೆ ಹೋಗುತ್ತೇನೆ, ನನ್ನ ಮೋಕ್ಷದ ಸಲುವಾಗಿ ನಿರಪರಾಧಿಗಳಾದ ಪ್ರಾಣಿಗಳ ಜೀವವನ್ನು ತೆಗೆದುಕೊಳ್ಳುವಂಥ ಹೇಡಿಯು ನಾನಲ್ಲ. ನಾನು ನರಕಕ್ಕೇನೂ ಹೆದರುವುದಿಲ್ಲ" ಎಂದು. ನಮ್ಮವರ ಈ ತರಹದ ಭಾವಗಳಿಂದಲೇ ಅಸಮಂಜಸವಾದ ಬೇರೆಯವರ ವಿಚಾರಗಳು ನಮ್ಮಲ್ಲಿ ಹುಟ್ಟಲಿಲ್ಲ. ನಮ್ಮ ಆ ಅವತಾರ ಪುರುಷನೇ ಈ ರೀತಿ ಹೇಳುತ್ತಾನೆ "ಜಗತ್ತಿನಲ್ಲಿ ಅಧರ್ಮವೂ ಅನಾಚಾರವೂ ವ್ಯಾಪಿಸಿಕೊಂಡಾಗಲೆಲ್ಲಾ ನಾನೇ ಬಂದು ದೇಶಕಾಲ ಪರಿಸ್ಥಿತಿಗಳಿಗೆ ಯೋಗ್ಯವಾದ ಪದ್ಧತಿಗಳ ಮೂಲಕ ಎಲ್ಲರನ್ನೂ ಉದ್ಧಾರಮಾಡುತ್ತೇನೆ. ಪ್ರಪಂಚದ ಯಾವ ಭಾಗದಲ್ಲೇ ಆಗಲಿ ಯಾರಾದರೂ ಜನತೆಯ ಉದ್ಧಾರಕ್ಕಾಗಿ ಒದ್ದು ಕಂಠಗಾಣಿಸುವ ಮಹಾತ್ಮರು ಕಂಡು ಬಂದರೆ, ಅಂಥವರಲ್ಲಿ ನಾನೇ ಶಕ್ತಿರೂಪನಾಗಿ ಇರುವೆನೆಂದು ತಿಳಿಯಿರಿ" ಎಂದ.

ನಾನು ಯಾವಧರ್ಮದವರ ವಿಷಯದಲ್ಲೂ ಅಸಮಾಧಾನವನ್ನು ತೋರಿಸದಿರುವುದಕ್ಕೆ ಇದೇ ಕಾರಣವೆಂಬುದನ್ನು ನೀವೆಲ್ಲರೂ ತಿಳಿದುಕೊಳ್ಳಬಲ್ಲಿರಿ. ನಮ್ಮ ಧರ್ಮ ಒಂದೇ ಮೋಕ್ಷದ ಮಾರ್ಗವೆಂದು ನಾವೆಂದೂ ಹೇಳುವುದಿಲ್ಲ. ಪೂರ್ಣಾತ್ಮವು ಎಲ್ಲ ಧರ್ಮದವರಿಗೂ ಸಾಧ್ಯವುಂಟು. ಇದಕ್ಕೇನು ನಿದರ್ಶನವೆಂದರೆ ಮಹಾಪುರುಷರು ಎಲ್ಲ ದೇಶಗಳಲ್ಲೂ ಕಂಡುಬರುತ್ತಾರೆ, ಮತ್ತು ಎಲ್ಲ ಜನಾಂಗಗಳಲ್ಲೂ ವಿಧವಿಧವಾದ ಧರ್ಮದವರಲ್ಲೂ ಎಷ್ಟೆಷ್ಟೋ ಜನ ನಿಷ್ಕಲಂಕ ಅಂತಃಕರಣದ ಒಳ್ಳೇ ಪುರುಷರೂ ಸ್ತ್ರೀಯರೂ

ಮುಂದೆ ಬರುತ್ತಿರುವುದನ್ನು ನೋಡಬಹುದು. ಆದುದರಿಂದ ಮೋಕ್ಷಕ್ಕೆ ಇದೊಂದೇ ಮಾರ್ಗವೆಂದು ಯಾವ ಧರ್ಮವನ್ನು ಮುಂದೆ ಹಿಡಿಯಲು ಬರುವಂತಿಲ್ಲ.

(ಮುಂದುವರಿಯುವುದು)

ಮಡಿಕೇರಿ ಮತ್ತು ಕಾಂತಮೂರ್ನಾಡು ಗೌಡ ಮಹಾಜನರಲ್ಲಿ ವಿಜ್ಞಾಪನೆ.

ಈ ನಾಡುಗಳ ಜನರ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿಗೆ ಒಬ್ಬ ಮೆಂಬರನನ್ನು ಶೀಘ್ರದಲ್ಲೇ ಚುನಾಯಿಸಬೇಕಾಗಿದೆ. ಈ ಚುನಾವಣೆಯಲ್ಲಿ ಮ. ರಾ. ರಾ. ಶ್ರೀ ಮನೆಯಪಂಡ ಬೆಳ್ಯಪ್ಪನವರು ಒಬ್ಬ ಉಮೇದ್ವಾರರಾಗಿದ್ದಾರೆ. ಇವರ ತಂದೆಯವರು ನಮ್ಮ ಜನಾಂಗಕ್ಕೆ ಗೌರವ ಕೊಟ್ಟು ಸಹಾಯ ಮಾಡುತ್ತಿದ್ದದ್ದು ನಿಮಗೆಲ್ಲರಿಗೂ ತಿಳಿದ ಸಂಗತಿಯಾಗಿದೆ. ಮ. ರಾ. ಶ್ರೀ ಬೆಳ್ಯಪ್ಪನವರೂ ಇವರ ತಂದೆಯವರ ಮೇಲ್ಪಂಕ್ತಿಯನ್ನು ಅನುಸರಿಸಿಯಾರೆಂತ ನಾನು ನಂಬುತ್ತೇನೆ. ಆದ್ದರಿಂದ ಓಟರುಗಳೆಲ್ಲರೂ ಮ. ರಾ. ಶ್ರೀ. ಮನೆಯಪಂಡ ಬೆಳ್ಯಪ್ಪನವರಿಗೆ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಯಲ್ಲಿ ಓಟು ಕೊಡಬೇಕಾಗಿ ಕೋರುತ್ತೇನೆ.

ಮಡಿಕೇರಿ, 2—10—26 — ತಮ್ಮ ವಿಧೇಯ, ಯಸ್. ಮುದ್ದಪ್ಪ.

COORG FOREST DEPARTMENT, SOUTH DIVISION.

NOTICE.

Mercara, 6—10—1926.

Tenders are invited for the purchase of the following approximate quantities of timber felled and logged departmentally in the Tittimati Range during the years 1911—12 to 1921—22.

Teak	6677	c. ft
Honne	8001	,,
Biti	274	,,
Nandi	3064	,,
Matti	5810	,,
Aisintega	60	,,
Jungle wood	67	,,

Tenders should reach this office on or before the 31st October 1926. For further particulars apply to the Divisional Forest Officer, South Coorg, Mercara.

ಡಿಸ್ಟ್ರಿಕ್ಟ್‌ಬೋರ್ಡಿಗೆ

ಅಮ್ಮತ್ತಿನಾಡು ನಾಡಿನ ಓಟುದಾರರಿಂದ ಚುನಾಯಿತರಾಗಬೇಕಾದ ಓಟರರು

ಪಾಂಡಂಡ ಚಂಗಪ್ಪನ ವಿಜ್ಞಾಪನೆಗಳು.

ಮಹಾನುಭಾವರೇ,

ಕೊಡಗಿನ ಇತಿಹಾಸದಲ್ಲಿ ದೇಶದ ಆಡಳಿತೆಯ ಸ್ಥಳೀಕ ಸರಕಾರವು ಡಿಸ್ಟ್ರಿಕ್ಟ್‌ಬೋರ್ಡು ಮೂಲಕ ನಡೆಯುತ್ತಿರುವುದು ಇದೇ ಪ್ರಥಮವಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ. ದೇಶದ ಆಡಳಿತೆಯ ಹಲವು ಭಾಗಗಳಲ್ಲಿ ಒಂದಾದ ಡಿಸ್ಟ್ರಿಕ್ಟ್ ಬೋರ್ಡು ಆಡಳಿತವು ಹಳ್ಳಿಯ ರೈತ ಜನರ ಮುಖ್ಯಾಂಶವಾಗಿರುತ್ತದೆ. ಡಿಸ್ಟ್ರಿಕ್ಟ್‌ಬೋರ್ಡು ಮೂಲಕ ದೇಶಸೇವೆ ಮಾಡುವದೆಂದರೆ ಹಳ್ಳಿಯ ರೈತ ಜನರ ಕ್ಷೇಮ ಚಿಂತೆಯನ್ನು ನೋಡಿ ಕಷ್ಟ ಪರಿಹರಿಸಲು ಪ್ರಯತ್ನಿಸುವುದು ಒಂದು ಸೇವೆಯೆಂದು ನನ್ನ ಭಾವನೆಯಾಗಿದೆ.

ನಾನು ಈಗ ಕೆಲವು ವರ್ಷಗಳಿಂದ ನಮ್ಮ ನಾಡು ಮತ್ತು ತಾಲೋಕಿನ ಸರ್ವ ಜನರ ಸ್ಥಿತಿಗತಿಗಳನ್ನು ನೋಡುತ್ತಿದ್ದು ಅವರ ಸುಧಾರಣೆಗೆಂದು ಸೊಂಟಗಟ್ಟುವ ಅಭಿಲಾಷೆಯು ನನ್ನಲ್ಲಿ ನೆಲೆಗೊಂಡಿರುತ್ತದೆ. ನಮ್ಮ ಬಾಂಧವರ ಕ್ಷೇಮ ಚಿಂತೆಯಲ್ಲಿ ಭಾಗಿಯಾಗಿಕೊಂಡು "ಆರೋಗ್ಯಭಾಗ್ಯವೇ ಸಕಲ ಭಾಗ್ಯ" "ವಿದ್ಯೆಯೇ ಅಷ್ಟೈಶ್ವರ್ಯ"ವೆಂಬ ತತ್ವವನ್ನು ಕೈಕೊಂಡು ಆಸ್ಪತ್ರೆ, ಶಾಲೆ, ಒಳರಸ್ತೆ ಮೊದಲಾದವುಗಳ ಅಭಿವೃದ್ಧಿಯನ್ನು ಏಕೋತ್ಸಾಹದಿಂದ ನಮ್ಮ ಬಾಂಧವರಲ್ಲಿ ನೆಲಸಬೇಕೆಂಬುದಾಗಿ ನಿರ್ಧರಿಸಿರುತ್ತೇನೆ.

ಅಲ್ಲದೆ ದೇಶಾಭಿವೃದ್ಧಿಗೆ ಮುಖ್ಯ ಸಾಧನವಾದ ಆಸ್ಪತ್ರೆ, ಶಾಲೆ ಮೊದಲಾದವುಗಳಿಗೆ ನನ್ನ ತಂದೆಯವರೇ ಎಷ್ಟು ಉತ್ತೇಜನವನ್ನು ಕೊಟ್ಟಿರುತ್ತಾರೆಂಬುದನ್ನು ನಾನು ಇಲ್ಲಿ ಬೇರೆ ವರ್ಣಿಸಬೇಕಾದ್ದಿಲ್ಲ. ನನ್ನ ನಾಡಿನವರೆಲ್ಲರೂ ನನ್ನ ತಂದೆಯವರ ಉದ್ದೇಶ್ಯವನ್ನೇ ಪಾಲಿಸಬೇಕೆಂಬ ಅಭಿಲಾಷೆಯಿಂದ ನನ್ನನ್ನು "ಡಿಸ್ಟ್ರಿಕ್ಟ್‌ಬೋರ್ಡಿ"ಗೆ ಒಬ್ಬ ಚುನಾಯಿತ ಮೆಂಬರನಾಗಿ ನಿಲ್ಲಲು ಕೇಳಿಕೊಂಡದ್ದರಿಂದ ನಾನು ಅವರ ಅಭಿವೃದ್ಧಿಯನ್ನು ಬಯಸಿ ನನ್ನ ನಾಡಿನ ಮತ್ತು ತಾಲೋಕಿನ ಮೇಲಿರುವ ನನ್ನ ಮಮತೆಯನ್ನು ತೋರಿಸಲು ಇದೇ ಸಮಯವೆಂದರಿತು ತಮ್ಮ ದಾಸತ್ವವನ್ನು ಕೈಕೊಳ್ಳಲು ಉದ್ಯುಕ್ತನಾಗಿ ಮುಂದೆ ಬಂದಿರುತ್ತೇನೆ.

ಆದುದರಿಂದ ತಾವುಗಳು ನನ್ನಲ್ಲಿ ಅಭಿಮಾನವಿಟ್ಟು ತಮ್ಮ ಹಕ್ಕಿನ ಓಟು ಒಂದನ್ನು ತಾವು, ತಮ್ಮ ಇಷ್ಟ ಮಿತ್ರರೂ, ನೆರೆಹೊರೆಯವರೂ ನನಗೆ ಕೊಟ್ಟು ತಮ್ಮ ಪ್ರತಿನಿಧಿಯಾಗಿ ಚುನಾಯಿಸಿದಲ್ಲಿ ತಮ್ಮ ಸೇವಕನಾಗಿ ಮನಃಪೂರ್ವಕವಾದ ಕೆಲಸ ಮಾಡಲು ನಿರ್ಧರಿಸಿರುತ್ತೇನೆ.

ಇತಿ ತಮ್ಮ ನಿರಂತರ ಕ್ಷೇಮಾಭಿಲಾಷಿ,
ಪಾಂಡಂಡ ಚಂಗಪ್ಪ.

ನೋಟೀಸ್.

ನಾಪೋಕ್ಲುನಾಡು ಬಲಮುರಿ ಗ್ರಾಮದ ಪೇರಿಯಂಡ ಕಾಳಪ್ಪನವರ ಮಗಳು ... ಮೂಲಕ ಸಮಸ್ತ ಜನರಿಗೂ ಪ್ರಸಿದ್ಧಪಡಿಸುವುದೇನೆಂದರೆ —

ನನ್ನ ತಂದೆಗೆ ನಾನು ಒಬ್ಬಳೇ ಮಗಳಾಗಿದ್ದೇನೆ. ನನ್ನ ತಂದೆ ಕಾಳಪ್ಪನವರ ಹೆಸರಿನಲ್ಲಿ ಬಲಮುರಿ ಗ್ರಾಮದಲ್ಲಿ ಸ್ವಯಾರ್ಜಿತವಾಗಿ ಪಡೆದ ನಾಗಿನ ಸರ್ವೆ ನಂಬ್ರ 180 ಮತ್ತು 205ರ 1—14 ಎಕ್ರೆಯ ಭೂಮಿ ಮತ್ತು ಇದಕ್ಕೆ ಸೇರಿದ ಬಾಣೆ ಬಾಗ ನನ ಜಮಾಬಂದಿ ನಡೆದು ಬರುತ್ತಲಿದೆ. ಸದರಿ ಸೊತ್ತನ್ನು ಖಾಸಾ ಮಗಳಾದ ನನಗೆ ವಿರೋಧವಾಗಿ ಬೇರೆ ಜನರಿಗೆ ಗಿರ್ವಿ ಭೋಗ್ಯ, ಕ್ರಯ ವಗೈರೆ ಪರಾಧೀನ ಮಾಡಲು ಏರ್ಪಾಡಿನಲ್ಲಿರುವದಾಗಿ ತಿಳಿಯುತ್ತೇನೆ. ಸದರಿ ಸೊತ್ತಿಗೆ ನಾನೇ ಖಾಸಾ ಹಕ್ಕುದಾರಳಾಗಿರುವದರಿಂದ ನನ್ನ ಒಪ್ಪಿಗೆ ಶಿವಾಯಿ ಯಾರೂ ತೆಗೆದುಕೊಳ್ಳಕೂಡದಾಗಿಯೂ, ಹಾಗೆ ತೆಗೆದುಕೊಂಡರೆ ಅದು ಅಸಿಂಧುವಾಗಿರಬೇಕಾಗಿಯೂ ಈ ಮೂಲಕ ಕೇಳಿಕೊಳ್ಳೋಣಾಗಿದೆ.

ಬಲಮುರಿ ಗ್ರಾಮ, 2—10—26. — ಪೇರಿಯಂಡ ಕಾಳಮ್ಮ.

ದಸರಾ ಕಾರ್ಯಕ್ರಮ.

೭ನೇ ತಾರೀಖಿನ ದಿನ ಬೆಳಿಗ್ಗೆ ೯ ಘಂಟೆಗೆ ಶ್ರೀಮನ್ಮಹಾರಾಜರವರು ಸಿಂಹಾಸನಾರೋಹಣ ಮಾಡುವರು. ... ಗ ದಿವಾನರೂ, ಸರದಾರ ಶ್ರೀ. ಲಕ್ಷ್ಮೀಕಾಂತರಾಜ ಅರಸರೂ (ರಾಜರ ಭಾವ ಮೈದುನರು) ಸಚಿವರೂ, ... ರೂ ಮತ್ತು ಅರಸು ಮನೆತನದ ಶ್ರೀಮಂತರೂ ನಜರನ್ನು ಒಪ್ಪಿಸುವರು. ಸಾಯಂಕಾಲ ೭ ಘಂಟೆಗೆ ದರ್ಬಾರಿನಲ್ಲಿ ... ಆಗ ಅಧಿಕಾರಿಗಳೆಲ್ಲರೂ ನಜರನ್ನು ಒಪ್ಪಿಸುವರು. ... ಯ ಸಾಯಂಕಾಲ ದರಬಾರಿನಲ್ಲಿ ... ಮತ್ತು ... ಸು ಅಧಿಕಾರಿಗಳು ನಜರನ್ನು ಒಪ್ಪಿಸುವರು. ಪ್ರತಿ ... ಬೆಳಿಗ್ಗೆ ಸಾಯಂಕಾಲ ಪಟ್ಟದಾನೆಗಳೊಂದಿಗೆ ಉತ್ಸವ ... ಗೆ ಹೋಗಿ ಬರುತ್ತದೆ.

೧೫ನೇ ತಾರೀಖಿನ ದಿನ ಸಾಯಂಕಾಲ ೭ ... ಬಾರಿಗೆ ಯುರೋಪ್ಯ ಅತಿಥಿಗಳೂ ಬರುವರು. ಪ್ರಿ... ಡೆಂಟರು ಬರುವರು.

೧೬ನೇ ಬೆಳಿಗ್ಗೆ ಪಟ್ಟದಾನೆ ಕುದುರೆಗಳು ಬನ್ನಿಮಂಟಪಕ್ಕೆ ಹೋಗಿಬರುತ್ತವೆ. ಸಾಯಂಕಾಲ ಶ್ರೀಮನ್ಮಹಾರಾಜರವರು ಗಜಾರೂಢರಾಗಿ ಮೆರವಣಿಗೆ ಹೊರಡುತ್ತಾರೆ.

ಪ್ರಕಟಣೆ.

ವೀರಾಜಪೇಟೆನಾಡು ಡಿಸ್ಟ್ರಿಕ್ಟ್‌ಬೋರ್ಡ್ ... ಗಳಲ್ಲಿ ಅಯ್ಯರು ಬಿಟ್ಟಿಯಂಡ ನಂಜಪ್ಪನ ವಿಜ್ಞಾಪನೆ.

ಈ ನಾಡಿನ ಪರವಾಗಿ ಆರಿಸಿಕೊಳ್ಳಬೇಕಾದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರತನಕ್ಕೆ ನಾನು ಉಮೇದ್ವಾರನಾಗಿದ್ದೇನೆ. ನಾನು ಕಳೆದ ಇಪ್ಪತ್ತು ವರ್ಷಗಳಿಂದ ಸಾರ್ವಜನಿಕ ಕಾರ್ಯಗಳಲ್ಲಿ ಅಭಿರುಚಿ ತೆಗೆದುಕೊಂಡು ಸಾರ್ವಜನಿಕ ಅಭಿವೃದ್ಧಿಯನ್ನು ಹಾರೈಸಿ ಕೆಲಸ ಮಾಡುತ್ತಿರುವದು ... ತಿಳಿದ ಸಂಗತಿಯಾಗಿದೆ. ಪ್ರಜೆಗಳ ಕಷ್ಟ ಸುಖ ತಿಳಿದು ... ರಿಗಾಗಿ ಹೋರಾಡಲು ಶಕ್ತಿಯೂ, ಅನುಭವವೂ ನನಗೆ ... ಯೆಂತ ತಮಗೆ ತೋರಿದರೆ ಶೀಘ್ರದಲ್ಲೇ ಆಗಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲಿ ತಮ್ಮ ಓಟನ್ನು ... ರವಾಗಿ ಕೊಡಬೇಕೆಂತ ಕೇಳಿಕೊಳ್ಳುತ್ತೇನೆ.

ವೀರಾಜಪೇಟೆ, ತಾ. 3—10—1926. — ಬಿಟ್ಟಿಯಂಡ ನಂಜಪ್ಪ.

ವರ್ತಮಾನ ಸಂಗ್ರಹ.

ಒಳದೇಶ

ನಲ್ಲುತೋಕ್ಲು ಗ್ರಾಮದ ಮಂಡೆಪಂಡ ... ರು ತಾ ... ರ ಸಾಯಂಕಾಲ ಶಿವಾಧೀನರಾದರೆಂದು ... ಬು ವಿಷಾದಿಸುತ್ತೇವೆ.

ಕಾವೇರಿ ಜಾತ್ರೆಯ ಸಮಯದಲ್ಲಿ ಯಾತ್ರಿಕರ ಅನುಕೂಲಾರ್ಥವಾಗಿ ಭಾಗಮಂಡಲದಲ್ಲಿ ಒಂದು ತಾತ್ಕಾಲಿಕ ಚಿಕಿತ್ಸಾ ಆಸ್ಪತ್ರೆಗೆ ಸಬ್ ಅ. ಸರ್ಜನರಾದ ಮ. ... ನ ... ರವರನ್ನು ಕಳುಹಿಸುವರು.

ಸಂಪಾಜೆನಾಡಿನವರು ಕಮಿಶನರಿಗೆ ಅರ್ಜಿ ... ವೇರೆ ಟ್ರಾನ್ಸ್‌ಪೋರ್ಟ ಕಂಟ್ರಾಕ್ಟು ಕಾರುಗಳಿಗೆ ... ಮಾಡಲು ಭಾಗಮಂಡಲದ ಪಾರುಪತ್ಯಗಾರರು ... ಡು ಸಾರಿ ಸಂಪಾಜೆಗೆ ಹೋಗುವಂತೆ ನಿರ್ಧರಿಸಿ ... ತಿಳಿಯಬರುತ್ತದೆ.

ಮಡಿಕೇರಿ ಚೌಕದಲ್ಲಿ ಹೋಟೆಲು ಇಟ್ಟುಕೊಂಡಿರುವ ... ನಾಯರ ರಾಮನೆಂಬವನು ತಾ 5 ರಲ್ಲಿ ... ಸ್ಥ ಹೆಂಡತಿಗೆ ಯಾವುದೋ ಕಾರಣದಿಂದ ಮಚ್ಚಿನಿಂದ ... ನವಿಗೆ ಅವನು ಹಿಲಾರೋಡ್ ಒಳ ಇತ್ತ ಹತ್ಯ ಮಾಡಿಕೊಂಡಿರುತ್ತಾನೆ.

ತುಲಾ ಸಂಕ್ರಮಣದ ಸಮಯದಲ್ಲಿ ಕಾವೇರಿ ... ಗಾಗಿ ಭಾಗಮಂಡಲಕ್ಕೆ ಪ್ಲೇಗುಗಳಿದ್ದ ಸ್ಥಳಗಳಿಂದ ... ಈ ತಾ. 5 ರಿಂದ ನವಂಬರು 22ರ ವರೆಗೆ ಬರುವವರನ್ನು ... ಧಿಸಲ್ಪಟ್ಟಿದೆಯೆಂದೂ, ಹಾಗೆ ಬಂದವರನ್ನು ಹಿಂದಕ್ಕೆ ... ಕಳುಹಿಸಲಾಗುವುದೆಂದೂ ಚೀಫ್ ಕಮಿಷನರು ಪ್ರಕಟಿಸಿರುವರು.

ದಕ್ಷಿಣಕೊಡಗು ಅತ್ಲೆಟಿಕ್ ಯೂನಿಯನ್ನಿನವರ ... ಮೂರನೆಯ ವಾರ್ಷಿಕ ಸ್ಪೋರ್ಟ್ಸ್ ಇದೇ ತಾ. 1 ... ದಿತ್ಯವಾರ ಪೊನ್ನಂಪೇಟೆಯ ಜಿಮ್ಖಾನ ಗ್ರೌಂಡಿನಲ್ಲಿ ... ಜಿ. ಟೆಸ್ಸಿಂಗ್ ಯು ಯು. ಸಿ. ಯವರ ಅಧ್ಯಕ್ಷತೆಯಲ್ಲಿ ನಡೆಯುವುದರಿಂದ ಇದಕ್ಕೆ ಎಲ್ಲರಿಗೂ ಆಹ್ವಾನವಿದೆ.

ಸೋಮವಾರಪೇಟೆ ಬಳಿ ಕುಸುಬೂರು ತೋಟದ ... ಪ್ಪ ಪಿಳ್ಳರವನು ಇನ್ನೊಬ್ಬನನ್ನು ಕೊಂದು ... ಸ್ ಸೆಶ್ಶನ್ಸ್ ಕೋರ್ಟಿನಲ್ಲಿ ವಿಚಾರ ನಡೆದು ಮರಣ ... ಶಿಕ್ಷೆಗೆ ಗುರಿಪಡಿಸಲ್ಪಟ್ಟಿದ್ದನು. ಅವನು ... ಕೊಲ್ಲಲು ಕಾರಣವೇನೂ ಇಲ್ಲದ್ದರಿಂದ ಅವನಿಗೆ ... ಗೆ ಬುದ್ಧಿಭ್ರಮೆ ಇತ್ತೋ ಎಂಬ ಸಂಶಯವಿರುವದರಿಂದ ... ಯನ್ನು ಕಡಿಮೆಮಾಡಲು ಸ್ಥಳೀಯ ಸರಕಾರಕ್ಕೆ ಸೆಶ್ಶನ್ಸ್ ... ಯರು ಬರೆಯುತ್ತಾರಂತೆ.

ಪಿ. ಡಬ್ಲ್ಯು. ಡಿ ಆಫೀಸು ಹೆಡ್ ಡ್ರಾಫ್ಟ್ಸ್‌ಮನ್ ... ಗಿರುವ ಮ.. ಕಾಂಡವ ಬಿಮ್ಮಯ್ಯ ಎಂಬವರು ಕಳೆದ ... 3 ನೇ ಆದಿತ್ಯವಾರ ದಿನ ರಾತ್ರಿ ಇನ್ಸೂರ್ ... ಮಾಡಿದ್ದ ಎ. ಜೆ /71—28195, ಬಿ. ಇ. /49—31 ... ನಂ. ನ ಎರಡು ನೋಟುಗಳನ್ನು ಕವರಿಗೆ ಹಾಕಿ ...

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ



ಇದರ ಸೇವನೆಯಿಂದ ವೀರ್ಯವು ನೀರಸಾತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನು ಧಾರ್ಡ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮಿದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೩ ಯಾ ೪ ಡಬ್ಬಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ತೃಪ್ತಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಅಂಚೆ ಚಾರ್ಜು ೧ರಿಂದ ೪ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಆವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್, ಮಿಸ್ರಿ, ಬೆಂಗಳೂರು ಸಿಟಿ. — ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು, ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

12—1

ರಿ ಮಾಡಿ ತನ್ನ ಜೇಬಿನಲ್ಲಿಟ್ಟು ತಾನು ವಾಸವಿರು ವ ಮಡಿಕೇರಿ ಚೌಕದಲ್ಲಿರುವ ಬುಡುಪಿ ಬ್ರಾಹ್ಮಣರ ಹೋಟೇ ನಲ್ಲಿಟ್ಟಿದ್ದದ್ದನ್ನು ಮಾರನೆ ಓದಿನೋಡುವಾಗ್ಯೆ ಅದನ್ನು ಯಾ ರೋ ಅಪಹರಿಸಿಕೊಂಡು ಹೋಗಿರುತ್ತಾರೆಂದು ಕಂಡು ಬಂ ದಿದೆ. ಈ ವಿಷಯ ಪೋಲೀಸ್ ವಿಚಾರದಲ್ಲಿದೆ.

ಹಿಂದೂದೇಶ.

ಮಹಾತ್ಮ ಗಾಂಧಿಯವರ 57ನೆ ವರ್ಧಂತಿಯು 3ನೇ ತಾ ರೀಖಿನಲ್ಲಿ ಹಿಂದುಸ್ಥಾನದ ಅನೇಕ ಕಡೆಗಳಲ್ಲಿ ನಡಿಸಲ್ಪಟ್ಟಿತು.

ಡಾಕ್ಟರ್ ಎನ್ನಿಬೆಸೆಂಟಮ್ಮನವರ 80ನೇ ವರ್ಧಂತಿ ಉ ತ್ಸವವು ಮದ್ರಾಸಿನಲ್ಲಿ ಕಳೆದ ಶನಿವಾರ ನಡಿಸಲ್ಪಟ್ಟಿತು.

ಆಂಧ್ರ ವಿಶ್ವವಿದ್ಯಾಲಯದಲ್ಲಿ ತೆಲುಗು ಭಾಷೆಯಲ್ಲೇ ವಿದ್ಯಾಭ್ಯಾಸ ಕೊಡುವ ವಿಷಯವನ್ನು ನೋಡಲು ಒಂದು ಕ ಮಿಟಿಯು ನೇಮಕವಾಗಿದೆ

ಹತ್ತನೇ ಅಖಿಲಭಾರತ ಹಿಂದೂ ಮಹಾ ಸಭೆಯು ಈ ಸಾರಿ ಹುಬ್ಬಳ್ಳಿಯಲ್ಲಿ ನಡಿಸಲ್ಪಡುವದೆಂದು ತೀರ್ಮಾನವಾಗಿದೆ. ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲು ಒಂದು ಬಲವಾದ ಕಮಿಟಿಯು ನೇಮಿಸಲ್ಪಟ್ಟಿದೆ.

ಬೊಂಬಾಯಿಯ ಪ್ರಸಿದ್ಧ ಕೋಟ್ಯಾಧೀಶರಾದ ಸರ್ ದೋರಾಬ್ ಟಾಟಾರವರು ಪರಲೋಕವಾಸಿಯಾದರು. ಇವರು ತಮ್ಮ ಮರಣಶಾಸನದಲ್ಲಿ ಧರ್ಮ ಕಾರ್ಯಗಳಿಗೆ 2 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಬರೆದಿಟ್ಟಿರುತ್ತಾರೆ.

ಬರೋಡದ ಲೆಜಿಸ್ಲೇಟಿವ್ ಕೌನ್ಸಿಲಿನ ಒಂದು ಕೂಟದ (ಸಭೆ)ಯಲ್ಲಿ ಒಬ್ಬ ಮನುಷ್ಯ 1 ಕ್ಕಿಂತ ಹೆಚ್ಚು ಲಗ್ನಗಳನ್ನು ಮಾಡಕೂಡದೆಂದು ಅಲ್ಲಿಯ ಮಹಾರಾಜರು ಹುಕುಂ ಮಾಡಿರುವರು.

ಪಂಜಾಬಿನ ಅಟೋಕ ಎಂಬ ಸ್ಥಳದಲ್ಲಿ ಈ ವರ್ಷ ಬಿದ್ದ ಅತಿವೃಷ್ಟಿಯಿಂದ ಸಾವಿರಕ್ಕಿಂತ ಹೆಚ್ಚು ಮನೆಗಳೂ 82 ಬಾವಿಗಳೂ ಹಾಳಾಗಿರುವವು. ಅಲ್ಲದೆ 14 ಜನರು ಪ್ರಾಣ ಕಳಕೊಂಡರು.

ಕೊಡಗು ಮತ್ತು ನೀಲಗಿರಿ ಟಪಾಲುಗಳನ್ನು ಅರಸೀಕೆರೆ, ಮೈಸೂರು ಮಾರ್ಗವಾಗಿ ಮೋಟಾರಿನಿಂದ ಸಾಗಿಸುವ ವಿಚಾರವು ನಡೆದಿರುವುದರಿಂದ ಬೊಂಬಾಯಿ ಟಪಾಲು 12 ಗಂಟೆ ಮೊದಲು ತಲಪುವದಾಗಿ ತಿಳಿಯುತ್ತದೆ

ಬಂಗಾಳದಲ್ಲಿ ಪ್ರೈಮರಿ ವಿದ್ಯಾಭ್ಯಾಸವನ್ನು ಮುಫ ತ್ತು ಮತ್ತು ಕಡ್ಡಾಯವಾಗಿ ಕೊಡುವ ಬಗ್ಗೆ ರೈತರ ಉತ್ಪ ತ್ತಿಯ ರೂಪಾಯಿ ಒಂದರ ಐದು ಪೈಯಂತೆ ಕಂದಾಯ ಹಾ ಕಿಕೊಳ್ಳಬೇಕೆಂತ ಬಂಗಾಳಿ ಸರಕಾರದವರು ತೀರ್ಮಾನಿಸಿರು ತ್ತಾರೆ

ಬಾಲ ಗಂಗಾಧರ ತಿಲಕರ ವಿಗ್ರಹವನ್ನು ನಿಲ್ಲಿಸಲು ಮುನ್ಸಿಪಲ್ ಜಾಗ ಕೊಡಬೇಕೆಂತಲೂ ಮುನ್ಸಿಪಾಲಿಟಿಯ ಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕೈನೂಲು ಬಟ್ಟೆಯನ್ನೇ ಉಪ ಯೋಗಿಸಬೇಕೆಂತಲೂ ನಾಗಪುರ ಮುನ್ಸಿಪಾಲಿಟಿಯವರು ತೀ ರ್ಮಾನಿಸಿರುತ್ತಾರೆ.

"ನಾವು ಹಿಂದೂ ಜನರನ್ನು ನಾಯಿಗಳೆಂದು ತಿಳಿದಿದ್ದೆ ವು. ಅವರು ನಮ್ಮಂತೆಯೇ ನಾಗರಿಕ ಮನುಷ್ಯರೇ ಆಗಿದ್ದಾ ರೆಂದು ಕಂಡುಬಂತು" ಎಂದು ದಕ್ಷಿಣ ಆಫ್ರಿಕದಿಂದ ಬಂದ ಡೆಪ್ಯುಟೇಶನಿನವರು ಸ್ವೀಕರಿದರೆಂದು ಅವರ ಸಂಗಡಲೇ ಇದ್ದ ಸುಬ್ರಾಯನ ಯೂರೋಪಿಯನರೊಬ್ಬರು ಪ್ರಕಟಿಸಿರುವರಂತೆ.

ಮದ್ರಾಸು ಪ್ರಾಂತ್ಯದಲ್ಲಿರುವ ಜಾಗಿರುಗಳು, ವ್ರದ ಕೋರ್ಟು ಮತ್ತು ಸ್ಕೂಲು ಸಂಸ್ಥಾನಗಳು ಈ ವರೆಗೆ ಮ ದ್ರಾಸು ಸರಕಾರದ ಅಧೀನದಲ್ಲಿದ್ದವು. ಈ ತಿಂಗಳಿಂದ ವೈಸ ರಾಯರವರ ನಿಯಂತ್ರಣ ಅಧೀನದಲ್ಲಿರತಕ್ಕದ್ದೆಂದು ಇಂಡಿಯಾ ಸರಕಾರದ ಹುಕುಂ ಆಗಿದೆ.

ಹಿಂದೂದೇಶದಲ್ಲಿರುವ ಹಲವು ಜಾತಿಯ ಜನರ ಎತ್ತ ರದ ಅಳತೆಯು ಹಾಕಲ್ಪಟ್ಟದ್ದರಲ್ಲಿ ಸರಾಸರಿ ಈ ಮೇರೆ ಕಂಡು ಬಂದಿದೆ. ಇಂಗ್ಲಿಷರು 5 ಅಡಿ 7 ಇಂಚು, ಪಂಜಾಬಿ ಹಿಂ ದು 5 ಅ. 6 ಇಂ, ಮದ್ರಾಸಿ ಹಿಂದು 5 ಅ. 5 ಇಂ., ಬೊಂ ಬಾಯಿ ಹಿಂದು 5 ಅ 4½ ಇಂ., ಬಂಗಾಳಿ ಹಿಂದು 5 ಅ. 5½ ಇಂ, ಸಿಂಹಳ 5 ಅ. 5¼ ಇಂ., ಇಂಡಿಯನ್ ಕ್ರೈಸ್ತ 5 ಅ 6 ಇಂ.

ಹಿಂದುಸ್ಥಾನಕ್ಕೆ ಪರದೇಶದಿಂದ ಬರುವ ಬೆಂಕಿಕಡ್ಡಿಗೆ ಜಿಲೆಯ ಶೇಕಡ ನೂರಕ್ಕಿಂತ ಹೆಚ್ಚಿಗೆ ದರದ ಸುಂಕ 1922ರಿಂದ ದ ಹಾಕುತ್ತಲಿದೆ ಈ ಬಾಬಿನಿಂದ 1922-23ರಲ್ಲಿ 154 ಲಕ್ಷ ರೂಪಾಯಿ ಉತ್ಪತ್ತಿ ಇದ್ದದ್ದು 1923-24ರಲ್ಲಿ 138 ಲಕ್ಷ ಕ್ಕೂ 1925-26ರಲ್ಲಿ 118 ಲಕ್ಷಕ್ಕೂ ಇಳಿದಿದೆ. ಈ ಸುಂಕ ಹೆಚ್ಚು ಮಾಡಿದ್ದರಿಂದ ಹಿಂದುಸ್ಥಾನದಲ್ಲೇ ಅನೇಕ ಬೆಂಕಿಕಡ್ಡಿ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟಿವೆ. ಕೆಲವು ಒಳ್ಳೆಯ ಮರ ಗಳನ್ನು ಇನ್ನೂ ಕೆಲವರು ಪರದೇಶದಿಂದ ತರಿಸುವ ಮರವ ನ್ನೂ ಉಪಯೋಗಿಸುತ್ತಿದ್ದಾರೆ. ಈ ಬಾಬಿನ ಸುಂಕದ ಉ ತ್ಪತ್ತಿ ಕಡಿಮೆಯಾದದ್ದಕ್ಕಾಗಿ ಸುಂಕದ ದರ ಕಡಿಮೆ ಮಾಡಿದ ರೆ ಆದೀತೋ, ಅಥವಾ ಬೇರೆ ಯಾವ ವಿಧದಿಂದಲಾದರೂ ಈ ಉತ್ಪತ್ತಿಯನ್ನು ಹೆಚ್ಚಿಸಲು ಅನುಕೂಲವಿದೆಯೋ ಎಂಬುದನ್ನು ತನಿಖೆ ಮಾಡಲು ಇಂಡಿಯಾ ಸರಕಾರದವರು ತೀರ್ಮಾನಿಸಿ ರುತ್ತಾರೆ.

ಡಾಕ್ಟರ್ ವರದರಾಜು ನಾಯುಡುರವರು ಹೇಳಿರುವದೇ ನೆಂದರೆ "ಅತ್ಯುತ್ತಮ ಮನುಷ್ಯನಿಗೆ ಓಟ್ ಕೊಡಿರಿ. ಸ್ವಾರ್ಥ ನಾಶಕ್ಕಾಗಿ ಧರ್ಮವನ್ನ ಅರ್ಹರಾದವರಿಗೆ, ಪ್ರಜೆಗಳ ಮೇಲೆ ಸ ರಕಾರಕ್ಕೆ ಇರುವ ಬಲವನ್ನು ಧಿಕ್ಕರಿಸಲು ಸರಕಾರವು ಮಾ ಡುವ ಪ್ರಯತ್ನಕ್ಕೆ ಭಯವಿಲ್ಲದೆ ಎದುರು ನಿಲ್ಲುವವರಿಗೆ, ತಮ್ಮ ದೇಶದ ಉದ್ಧಾರಕ್ಕಾಗಿ ತಮ್ಮ ಸರ್ವಸ್ವವನ್ನು ತ್ಯಾಗಮಾಡ ಲು ಸಮರ್ಥರಾಗಿರುವವರಿಗೆ ಓಟು ಕೊಡಿ. ಜಾತಿ ಪ್ರೀತಿಗೆ ಪಾತ್ರನಾದವನು, ಸರಕಾರದ ಸಂಗಡ ಸೇರಿರಾಗುವವನು ಯಾವ ಜಾತಿಯವನೇ ಆದರೂ ಅವನಿಗೆ ಓಟ್ ಕೊಡಿ. ತ ನಗೆ ಅಥವ ಇಷ್ಟಮಿತ್ರರಿಗೆ ಸರಕಾರಿ ಉದ್ಯೋಗ ಪಡೆಯಬೇ ಕೆಂತ ಇರುವವನು ಜಾತಿಗಾಗಿ ಹೋರಾಡುವನೆಂತ ಹೇಳು ವವನು ಮತ್ತು ಸ್ವಜಾತಿ ಪ್ರೇಮಿಯಾಗಿರುವವನು ರಾಷ್ಟ್ರೀಯ ನೀತಿ ನಡೆಸುವವನೂ ಸಹ ನಮ್ಮ ದೇಶದ ಭವಿಷ್ಯತ್ತಿನ ಶತ್ರು ಗಳೇ ಆಗಿದ್ದಾರೆ."

ವಿದೇಶ.

ಒಂದು ಫ್ರೆಂಚ್ ಆಕಾಶ ವಿಮಾನವು ಇಂಗ್ಲೆಂಡಿಗೆ ಬರು ವಾಗ ಆಕಾಶದಲ್ಲಿ ಬೆಂಕಿಹತ್ತಿ ಅದನ್ನು ನಡಿಸುತ್ತಿದ್ದವರೂ ಮತ್ತು ಅದರಲ್ಲಿ ಇದ್ದ ಯಾತ್ರಿಕರೂ ಸಹ ಸುಟ್ಟುಹೋದರು

ಇರುವೆಗಳು ಬಹು ಜಾಗ್ರತೆಯಾಗಿ ನಡೆಯುತ್ತವೆ ಅ ವುಗಳಷ್ಟು ಜಾಗ್ರತೆಯಾಗಿ ಮನುಷ್ಯರು ಹೆಜ್ಜೆಹಾಕಿದರೆ ಗಂ ಟೆಗೆ ಸುಮಾರು 800 ಮೈಲಿ ನಡೆಯಬಹುದೆಂದು ಲೆಕ್ಕ ಹಾಕ ಲ್ಪಟ್ಟಿದೆ.

ಲಂಡನಿನಲ್ಲಿ ನಡೆದ ಐ. ಸಿ. ಯಸ್. ಪರೀಕ್ಷೆಯಲ್ಲಿ ಮೂ ವತ್ತು ಯುರೋಪಿಯನರೂ, ಐದು ಹಿಂದೀಯರೂ ಪಾಸಾ ಗಿರುತ್ತಾರೆ ಇನ್ನೂ ಪ್ರಕಟವಾಗಲಿಕ್ಕಿರುವ ಪಟ್ಟಿಯಲ್ಲಿ 11 ಯುರೋಪಿಯನರೂ ಆರು ಹಿಂದೀಯರೂ ಪಾಸಾಗಿರು ತ್ತಾರೆಂತಲೂ ವರ್ತಮಾನವಿದೆ.

ಜರ್ಮನಿಯ ಡಾಕ್ಟರರೊಬ್ಬರು ಮಲೇರಿಯಾಜ್ವರಕ್ಕೆ ಉ ತ್ತಮವಾದ ಔಷಧಿಯೊಂದನ್ನು ಕಂಡು ಹಿಡಿದಿರುವರಂತೆ ಕೆಲವು ಔಷಧಿಗಳ ಮಿಶ್ರಣದಿಂದ ಮಾಡಿರುವ ಈ ಔಷಧಿಗೆ ಪ್ಲಾಸಮೋಚಿನ್ನವೆಂದು ಹೆಸರಿಟ್ಟಿರುವರು. ಮೊದಲು ಇ ದನ್ನು ಹುಚ್ಚರ ಆಸ್ಪತ್ರೆಯಲ್ಲಿ ಉಪಯೋಗಿಸಿದ ನಂತರ ಬೇರೆ ಕಡೆಗಳಲ್ಲಿ ಪ್ರಯೋಗಿಸಿ ತುಂಬಾ ಜಯವಾಗಿದೆಯಂತೆ ಇ ದು ನಮ್ಮ ದೇಶದಲ್ಲಿಯೂ ಪ್ರಚಾರಕ್ಕೆ ಬಂದರೆ ಶ್ರೇಯಸ್ಕರವ ಪಾಗಲೇ ಹೇಳುವುದು.

ಇಂಗ್ಲೆಂಡಿನ ಮುಖ್ಯಮಂತ್ರಿಯಾದ ಬಾಲ್ಡ್ವಿನ್ನಾರವ ರಿಗೆ ಈ ವರೆಗೆ 8000 ಹುಣಿಗೆನಿಸಿವನ್ನು ಸೇರುವ ಪಯಿಪ್ ಗಳು ಬಹುಮಾನವಾಗಿ ಬಂದಿವೆ ಅಲ್ಲದೆ ಉತ್ಸವಕಾಲದ ಮ ಬಾಕಿನ ಚೀಲಗಳು ಲೆಕ್ಕವಿಲ್ಲದೆ ಸಿಕ್ಕಿವೆಯಂತೆ. ಪತ್ನೇ ಕೈ ಯಲ್ಲಿ ಹಿಡಿಯುವ ಕೋಲುಗಳು, ಛತ್ರಿಗಳು, ಊಟದ ನಾನಾ ತರದ ಸಾಮಾನುಗಳು ಬಹುಮಾನವಾಗಿ ಬಂದಿರುವದರಿಂದ ಅವುಗ ಳನ್ನೆಲ್ಲಾ ಹೇಗೆ ಉಪಯೋಗಿಸುವದೆಂಬುದು ಅವರ ಪತ್ನಿಯ ವರಿಗೆ ಒಂದು ಕಷ್ಟದ ಪ್ರಶ್ನೆಯಾಗಿದೆಯಂತೆ!

ಲಂಡನಿನಲ್ಲಿ ಮುಸಲ್ಮಾನರ ಒಂದು ಮಸೀದಿಯು 3ನೇ ತಾರೀಖಿನಲ್ಲಿ ತೆರೆಯಲ್ಪಟ್ಟಿತು ಸಾವ್ಕಾರಿನವಾಜಿ ಮಂ ತ್ರಿಯಾದ ಅಬ್ದುಲ್ ಖಾದರ್ ಎಂಬವರು ಈ ಮಸೀ ದಿಯನ್ನು ತೆರೆದಿದ್ದಾಗಿದೆ. ಮೆಕ್ಕಾ ರಾಜನಾದ ಇಬನ್ ಸೌದರ ಮಗನಾದ ಎಮಿರ್ ಫೈಸಲ್ ಎಂಬವನು ಈ ಕಾ ರ್ಯವನ್ನು ಮಾಡಬೇಕೆಂತ ನೇಮಕವಾಗಿತ್ತು ಆದರೆ ಈ ಕಟ್ಟಡವನ್ನು ಕಟ್ಟಿಸಿದನವರೊಬ್ಬರು ಅಹಿದ ಭಾಷಣದಿಂದ ಈ ಮಸೀದಿಯು ಕ್ರಿಸ್ತಿಯನರಿಗೂ ಉಪಯೋಗಕ್ಕೆ ಬರಲಾಗುತ್ತ ದೆಂಬ ವರ್ತಮಾನ ಹುಟ್ಟಿ ಎಮಿರ್ ಫೈಸಲ್‌ರು ಈ ಮಸೀದಿ ಯನ್ನು ತೆರೆಯಕೂಡದೆಂತ ಇವರ ತಂದೆಯವರ ಆಜ್ಞೆಯಾದ್ದ ರಿಂದ ಇವರು ಹೋಗಲಿಲ್ಲ.

ಪತ್ರವ್ಯವಹಾರ

[ಪತ್ರಿಕಾದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕ ರ್ತರು ಜವಾಬ್ದಾರರಲ್ಲ. ಸಂ.]

ಶ್ರೀರಾಮಕೃಷ್ಣ ವೇದಾಂತ ಸಂಘ, ಪೊನ್ನಂಪೇಟೆ.

ಅಯ್ಯಾ,

ಈ ಸಂಘದ ಪ್ರೆಸಿಡೆಂಟರಾಗಿದ್ದು ತಾರೀಕು 25—9—26 ರಲ್ಲಿ ದಿವಂಗತರಾದ ಮ. ಶ್ರೀ ಪಿ ಗಣಪಯ್ಯನವರ ಆತ್ಮ ಶಾಂತಿಗೋಸ್ಕರ ಪ್ರತ್ಯೇಕವಾಗ ಒಂದು ಸಭೆಯು ತಾರೀಕು 2—10—26ರಲ್ಲಿ ಮ. ಶ್ರೀ. ಪ್ಲೀಡರ್ ಬಿ. ಸಂ ಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸುಮಾರು ಅರುವತ್ತೈದು ಜನರು ನೆರೆದಿದ್ದರು. ಇವರ ಕೈಕೆ ಅ ನೇಕರು ಇವರ ಗುಣಕಥನಗಳನ್ನು ಹೊಗಳಿದರು ಅನಂತರ ಅವ ರ ಹೆಸರು ಸ್ಥಿರಸ್ಥಾಯಿಯಾಗಿರುವಂತೆ ಒಂದು ಸ್ಮಾರಕ ಫಂ ಡನ್ನು ವಿಸ್ತರಿಸಿ ಈ ಮಠದ ಈ ಸಂಘಕ್ಕೆ ಒಂದು ಕಾ ಯಂ ಕಟ್ಟಡವನ್ನು ಕಟ್ಟಿಸ ಬೇಕಾಗಿ ತೀರ್ಮಾನವಾಯಿತು. ಈ ವಿಷಯವನ್ನು ಬೆಂಗಳೂರು ಶ್ರೀ ರಾಮಕೃಷ್ಣ ಮಠಕ್ಕೂ, ಪತ್ರಿಕೆಗಳಿಗೂ, ಅವರ ಕುಟುಂಬಕ್ಕೂ ತಿಳಿಸಬೇಕಾಗಿ ತೀ ರ್ಮಾನವಾಯಿತು.

ಸಣ್ಣಯ್ಯ

ಪ್ರಕಟಣೆಯ ಪ್ರತಿಫಲ.

ಅಯ್ಯಾ ಎಡಿಟರವರೇ,

ನಾನು ಕಳೆದ ವಾರ ನನ್ನ ದಾಸಿಗಳು ಪರಾರಿಯಾಗಿ ಹೋಗಿರುವುದರಿಂದ ಅವನ್ನು ಯಾರಾದರೂ ಪುನಃ ತ್ತರು ಪತೆಮಾಡಿ ಕೊಡಬೇಕಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದ ನಷ್ಟೆ. ಈ ಪ್ರಕಟಣೆ ಮೇರೆ ತಾರೀಕು ೬ ನೇ ದಿನ ಒಬ್ಬ ಪುಣ್ಯಾತ್ಮರ ನನ್ನ ದಾಸಿಗಳನ್ನು ಪತೆಮಾಡಿಕೊಟ್ಟದ್ದ ರಿಂದ ಸದರಿಯವರಿಗೂ ಮತ್ತು ನಿಮ್ಮ ಪತ್ರಿಕೆಗೂ ಸಹ ತುಂ ಬಾ ವಂದಿಸುತ್ತೇನೆ ದೇಶಾಭಿಮಾನಿಗಳು ಈ ವಿಷಯಕ್ಕೆ ತುಂ ಬಾ ನಿಗಾಯಿಟ್ಟು ದನಗಳ ಪರಾರಿಯ ಕಾಲದಲೇ ಪತ್ರಿಕೆಯಲ್ಲಿ ಪ್ರಕಟಿಸುವದು ಬಹಳ ಒಳ್ಳೆಯದೆಂತ ನನ್ನ ಅಭಿಪ್ರಾಯ ವಾಗಿದೆ.

ಚಂಬಾಂಡ ಕಾಳಪ್ಪ

ಗಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ.

ಅಯ್ಯಾ,

ಮ. ಕೋದಂಡ ಚಿಣ್ಣಪ್ಪನವರು "ಲೋಕಪಾವನ"ದ ಲ್ಲಿ ಒಂದು ಲೇಖನವನ್ನು ಪ್ರಕಟಿಸಿದನ್ನು ನೋಡಿದೆನು. ದೇಶದ ಮುಖಂಡರೆಲ್ಲರೂ ಸೇರಿದ್ದ ಮಹಾಜನಸಭೆ ಮೀಟಿಂಗಿನ ಲ್ಲಿ ಐದು ವರ್ಷಕ್ಕೆ ಒಂದಾವರ್ತಿ ಗಜೆಟೆಡ್ ಪ್ರಾವಿನ್ಶಿಯಲ್ ಉದ್ಯೋಗಸ್ಥರನ್ನು ಈ ದೇಶದಿಂದ ಹೊರಗೆ ವರ್ಗಾಯಿಸಬೇ ಕೆಂತಲೂ ಅವರ ಬದಲಿಗೆ ದೇಶೀಯರನ್ನೇ ನೇಮಿಸಿಕೊಳ್ಳಬೇ ಕೆಂತಲೂ ರಿಸಾಲ್ಯುಶನ್ ತೀರ್ಮಾನವಾಯಿತು ಈ ರಿಸಾಲ್ಯುಶನಿಂದ ಅರ್ಥವೇನಾಯಿತೆಂದರೆ ಗಜೆಟೆಡ್ ಪ್ರಾವಿನ್ಶಿಯಲ್ ಉದ್ಯೋ ಗಸ್ಥರು ಐದು ವರ್ಷಕ್ಕಿಂತ ಹೆಚ್ಚಿಗೆ ಈ ದೇಶದಲ್ಲಿ ಕೆಲಸ ಮಾ ಡುವದರಿಂದ ದೇಶಕ್ಕೆ ಕೆಡಕಿದೆಯೆಂತ ದೇಶದ ಎಲ್ಲಾ ಮಂಗಳ ದವರೂ ಒಪ್ಪಿದಂತೆಯೇ ಆಯಿತು. ಅದನ್ನು ಜಾರಿಗೆ ಹೇಗೆ ತರಬೇಕೆಂಬುದರಲ್ಲಿ ಮತ ಭೇದವಿದೆಯಷ್ಟೆ. ಇಲ್ಲಿನ ಉದ್ಯೋಗ ಸ್ಥರನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂತ ರಿಸಾಲ್ಯುಶನ್ ಮಾಡಿದರೆ ಅದನ್ನು ಹೇಗೆ ಜಾರಿ ಮಾಡಬೇಕೆಂಬುದನ್ನು ಯೋ ಚಿಸಬೇಡವೇ? ಮದ್ರಾಸ್ ಆಗಲೀ ಇಂಡಿಯಾ ಸರಕಾರವ ಆಗಲೀ ಇಲ್ಲಿನ ಉದ್ಯೋಗಸ್ಥರನ್ನು ತೆಗೆದುಕೊಳ್ಳಬೇಕಾದರೆ ಅವರ ಉದ್ಯೋಗಸ್ಥರನ್ನು ಇಲ್ಲಿಗೆ ಕಳಿಸದೆ ಹೋದರೆ ಒಪ್ಪಿಯಾ ರೇ? ಆದ್ದರಿಂದ ಮ. ಕೋದಂಡ ಚಿಣ್ಣಪ್ಪನವರು ಸೂಚಿಸಿದ ಮೇರೆ ಮದ್ರಾಸಿಗೂ ಇಲ್ಲಿಗೂ ಆಫೀಸರುಗಳನ್ನು ಅದಲು ಬ ದಲು ಮಾಡಿಕೊಳ್ಳುವದು ಲೇಸು.

ಈ ಅಭಿಪ್ರಾಯವನ್ನು ಸೂಚಿಸುವ ರಿಸಾಲ್ಯುಶನ್ನು ಕೌನ್ಸಿ ಲ್ ಚರ್ಚೆಗೆ ಕೆಲವು ಮೆಂಬರುಗಳು ಕಳುಹಿಸಿದರು. ಈ ರಿ ಸಾಲ್ಯುಶನ್ ಕೌನ್ಸಿಲಿನ ಚರ್ಚೆಯ ರೂಲಿಗೆ ಅನುಗುಣವಾಗಿದ್ದ ರಿಂದ ಚರ್ಚೆಗೆ ಬರಲಾಗುವುದಿಲ್ಲವೆಂತಲೂ ಇಲ್ಲಿನ ಪ್ರಾವಿ ನ್ಶಿಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಮದ್ರಾಸ್ 'ಕೇಡರ್' ಗೆ ಸೇರಿಸಬೇಕೆಂತ ರಿಸಾಲ್ಯುಶನ್ ರೂಪಾಂತರ ಮಾಡಬಹುದೆನ್ನು ವಂತ ಹೇಳಿದ್ದಕ್ಕೆ ಮ. ಮಂಜಯ್ಯನವರ ಚಿಣ್ಣಪ್ಪನವರು ಒಪ್ಪಿ ಕೊಂಡರೆಂತ ತಿಳಿಯುತ್ತೇನೆ. ಇದು ಯುಕ್ತವಾಗಿದೆ. ಇ ದರಿಂದ ಕೊಡಗಿನ ಯುವಕರಿಗೆ ಉದ್ಯೋಗ ಸಿಕ್ಕಲು ಹೆಚ್ಚಿ ನ ಅವಕಾಶವಾದೀತು. ಮದ್ರಾಸಿನಲ್ಲಿ ಈಗ ಉದ್ಯೋಗ ಕೇಳಿದರೆ ನೀವು ಕೊಡಗು ದೇಶದವರು, ನಿಮಗೆ ಇಲ್ಲಿ ಎಡೆ ಇಲ್ಲವೆಂತ ಹೇಳುತ್ತಾರಂತೆ ಕೊಡಗಿನ ಗಜೆಟೆಡ್ ಉದ್ಯೋ ಗಗಳು ಮದ್ರಾಸ್ ಉದ್ಯೋಗಗಳ ಗುಂಪಿಗೆ ಸೇರಿಸಲ್ಪಟ್ಟಿದ್ದ ರಾದರೆ ಮದ್ರಾಸ್ ಗಜೆಟೆಡ್ ಉದ್ಯೋಗಗಳಿಗೆಲ್ಲಾ ಕೊಡಗಿ ನವರು ಅರ್ಹರೆಂತಲೇ ಆಯಿತು ಒಂದಾಗಿ ಸೇರಿಸಿದರೆ ಈ ಉದ್ಯೋಗಗಳ ವಿಷಯದಲ್ಲಿ ಮದ್ರಾಸ್ ಕೊಡಗು ಎಂಬ ಭೇದವಿರಲು ಸಾಧ್ಯವಿಲ್ಲ ಮದ್ರಾಸ್ ಹುದ್ದೆಗೆ ಕೊಡಗು ಸೇರುವದರಿಂದ ಕೊಡಗಿಗೆ ಲಾಭವಿದೆಯೋ ಹೊರತು ನಷ್ಟವಿ ಲ್ಲ. ಮತ್ತು ಈಗ ಅಧಿಕಾರದಲ್ಲಿರುವ ಕೊಡಗಿನ ಗಜೆಟೆಡ್ ಉದ್ಯೋಗಸ್ಥರಿಗೂ ಸಹ ಪ್ರಯೋಜನವೇ. ಯಾಕೆಂದರೆ ಮದ್ರಾಸಿನಲ್ಲಿ ಪ್ರಾವಿನ್ಶಿಯಲ್ ಉದ್ಯೋಗಗಳಲ್ಲಿ ಹೆಚ್ಚಿನ ಸಂ ಬಳದ ಮತ್ತು ಅಧಿಕಾರದ ಪದವಿಗಳಿಗೆ ಏರಲು ಇವರಿಗೆ ಅವ ಕಾಶ ದೊರೆಯುತ್ತದೆ.

ಒಂದೇ ಉದ್ಯೋಗದಲ್ಲಿ ಒಬ್ಬನೇ ಆಗಲೀ ಯಾ ರೇ ಆಗಲೀ ಐದು ವರ್ಷಕ್ಕಿಂತ ಹೆಚ್ಚು ಕಾಲವಿದ್ದರೆ ಕೆಡಕಿದೆ ಎಂಬ ಮೂಲ ತತ್ವವನ್ನು ಎಲ್ಲಾ ಪಾರ್ಟಿಯವರು ಒಪ್ಪಿರುವಾ ಗ ಈ ತತ್ವವನ್ನು ಜಾರಿಗೆ ತರಲು ಯಾವ ರೀತಿಯನ್ನಾದರೂ ಕಂಡು ಹಿಡಿಯಬೇಕಾದದ್ದು ದೇಶದ ಹಿತಚಿಂತಕರ ಕರ್ತವ್ಯ ವಾಗಿದೆ

"ಪ್ರಜೆ"

ಪರೆಯ ನಿರುಪ.

ಅಯ್ಯಾ ಮಹಾಶಯರೇ,

ನಮ್ಮ ದೇಶದ ಧರ್ಮದ ಉಳಿವಿಗೆ ತಕ್ಕ ಹಾದಿಯನ್ನು ನವ ಕಾಲದ ಬಗ್ಗೆ ನಿಮಿಂದ ಮನಗಾಣುತ್ತಾರೋ ಈ ಮಗದ ಅ ನೇಕತರದ ವಾರ್ತೆ ನಡೆಯುತ್ತಿತ್ತಷ್ಟೆ. ಆದರೆ ಈ ಮನೆ ಗಳ ಅಗಲಿಯೇ ಯಾವ ಜಗಳವೆಂಬ ಸಂಗತಿಗಳೇನಾದರೂ ಗೊತ್ತಾಗಲೇ ಇಲ್ಲ. ಈ ವರ್ಷವೂ ನಾಯಿಗಳ ಹರಿವ ನ್ನು ಸರಕಾರದಿಂದ ಹೊರಡಿಸದೆ ಬೊಬ್ಬೆ, ಧರ್ಮ ಎಲ್ಲಾ ಗಾ ಳಿ ಪಾವಳಿಯನ್ನು ನಾನು ಪ್ರಶ್ನಿಸಲಿಕ್ಕಾಗುವದಿಲ್ಲ. ವರ್ಷ ವರ್ಷವೂ ನಡೆಯುವ ಈ ಕಟ್ಟು ಯಾಕಿರುವದೋ ಗೊತ್ತಿಲ್ಲ. ಎಲ್ಲಾ ಕಡೆಗಳಿಂದ ನಷ್ಟ ಪಡುವುದೂ, ಕಡೆ ಹೀಗೆಲ್ಲಾ ತೊಂದರೆಗಳನ್ನು ಸಹಿಸುವುದೇ ಗರೀಬ ರೈತರ ಗತಿಯಾಗಿದೆ.

ರೈತ.

ಮನದ ನುಡಿಗಳು.

ಮನುಷ್ಯ ಒಪ್ಪವು ಪುಣ್ಯಮಾಡಿದವರಿಗೇ ಸಿಕ್ಕುವುದೆಂ ದು ಹಿಂದೂ ಶಾಸ್ತ್ರವೆಲ್ಲ ಘೋಷಿಸುವುದು. ಅದರ ಪ್ರಾಪ್ತಿ ಮಾಡಿ ಏನು ತಾನೇ ಪ್ರಯೋಜನವು? ಜನ್ಮವಿತ್ತದೇವನ ಹ

ಣವೆಂಬ ಪಾಶದಲ್ಲಿ ಸಿಲುಕಿ ಮರಣಪರಿಯಂತರ ನರಳುತ್ತಿರ ಬೇಕು. ಇದೇ ಪುಣ್ಯವೂಡಿದಕ್ಕೆ ಫಲವೆನ್ನುತ್ತೀರೋ? ಹಣ ಕ್ಕೆ ಈ ಯುಗದಲ್ಲಿ ಸಿಕ್ಕಿರುವ ಏಳಿಗೆಯನ್ನು ವಿವರಿಸಲು ಅಸಾಧ್ಯವು. ಪುರಾಣಪ್ರಸಿದ್ಧರಾದ ನಾರದರೇ ಕಲಿಯುಗದಲ್ಲಿ ಹಣವೆಂಬ ಅವತಾರವನ್ನೆತ್ತಿರಬೇಕು. "ನಾರದ ಕಲಹಪ್ರಿಯ" ಎಂದು ಪುರಾಣಗಳಲ್ಲಿ ಹೇಳಿರುವುದು ಎಲ್ಲರೂ ತಿಳಿದಿರಬಹುದು. ತನ್ನೋರೀತಿ ಕಲಿಯುಗದಲ್ಲಿ ಹಣವು ಹಲವರನ್ನು ಗರೀಬರನ್ನಾಗಿಯೂ, ಮತ್ತು ಕೆಲವರನ್ನು ಐಶ್ವರ್ಯವಂತರನ್ನಾಗಿಯೂ ಮಾಡಿ, ಎರಡು ಪಂಗಡದವರಿಗೂ ಕಲಹವನ್ನುಂಟುಮಾಡಿ, ತಾನು ಪ್ರತ್ಯೇಕ ನಿಂತುಕೊಂಡು ತನ್ನ ಮಹಿಮೆಯನ್ನು ಜೊಗಳಿ ಹಿಗ್ಗುತ್ತಿರುವುದು. ತಾನು ನಿಷ್ಪಕ್ಷಪಾತಿ ಎನ್ನಿಸಿ ಕೊಳ್ಳಬೇಕೆಂದು ಕೆಲವರನ್ನು ಐಶ್ವರ್ಯವಂತರಾಗಿ ಮಾಡಿದರೂ ಅವರನ್ನು ಕೇವಲ ಸಂತೋಷ ಯುಕ್ತರಾಗಿ ಮಾಡಲೊಲ್ಲದು. ಅವರಿಗೆ ಮಿತಿಯಾದ ಆಸೆ, ಕಳ್ಳಕಾಕರ ಭಯ, ಗರೀಬರಲ್ಲಿ ಅಗ್ರಹವನ್ನು, ದುರ್ಬುದ್ಧಿ, ದುರ್ವ್ಯಾಪಾರ ಮೊದಲಾದ ದುಷ್ಕೃತ್ಯದಲ್ಲಿ ಆಸೆಯನ್ನು ಉಂಟುಮಾಡುವುದರಲ್ಲಿಯೇ ತನ್ನ ಶಕ್ತಿಯನ್ನು ತೋರಿಸುವುದು. ಐಶ್ವರ್ಯವಂತರ ಪಾಡೇ ಹೀಗಾದ ಮೇಲೆ ಮೊದಲೇ ದಾರಿದ್ರ್ಯವನ್ನು ಹೊಂದಿ ನರಳುತ್ತಿರುವವರ ಪಾಡು ಎಷ್ಟು ಕಷ್ಟತರವಾಯವಾಗಿರಬೇಕು. ಹಣವು ನಮ್ಮನ್ನು ಇಷ್ಟರಲ್ಲಿಯೇ ಬಿಡಲೊಲ್ಲದು. ಕೆಲವರನ್ನು ಹುಟ್ಟು ದಾರಿದ್ರರನ್ನಾಗಿಯೂ, ಯಾ ಹುಟ್ಟು ಐಶ್ವರ್ಯವಂತರನ್ನಾಗಿಯೂ ಮಾಡದೆ, ಅವರಿಗೆ ಒಂದು ಮಧ್ಯಸ್ಥಾನವನ್ನ ಕೊಟ್ಟು, ಅವರು ಪಡುತ್ತಿರುವ ಕಷ್ಟವನ್ನು ಕಂಡು ಸಂತೋಷಪಟ್ಟು ತನ್ನ ದೊಡ್ಡ ವಿಜಿಗಳನ್ನು ಎರಡು ಕೈಗಳಿಂದಲೂ ಬುರಿಹಾಕಿಕೊಳ್ಳುತ್ತಿರುವುದು. ಈ ಮಧ್ಯಸ್ಥಿಕೆಯನ್ನು ಹೊಂದಿದವರ ಪಾಡು ಇನ್ನೂ ದುರ್ಭರವಾದದ್ದು. ಅವರು ದಾರಿದ್ರ್ಯವನ್ನು ಹೀಯಾಳಿಸಿ ಐಶ್ವರ್ಯವಂತರ ಸಭೆಗೆ ಹೋಗಲು ಪ್ರಯತ್ನಿಸಿ, ಕಡೆಗೆ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಬಾವಲಿಯ ಹಾಗೆ ಕಷ್ಟಕ್ಕೆ ಒಳಗಾಗಬೇಕಾಗುವುದು. ಈ ಹಣದ ಶಕ್ತಿಯು ಎಂಥದ್ದಾಗಿರಬೇಕು. ಜನರು ಅದರ ಕೃಪೆಯನ್ನು ಹೊಂದಲಿಕ್ಕಾಗಿ ಎಂಥ ತುಚ್ಛ ಕೆಲಸವನ್ನಾದರೂ ಮಾಡಲು ಹಿಂಜರಿಯರು. ತಮ್ಮ ಸ್ವಂತ ಒಂದು ಪತ್ರರನ್ನು ಸಂಹರಿಸಿದ್ದೂ ಸಹ ನಾವು ಎಷ್ಟೋ ಕಂಡೂ, ಕೇಳಿಯೂ, ಇಲ್ಲವೇ ಈ ಹಣವೇ? ಹೀಗೆಲ್ಲಾ ಜನರನ್ನು ನಿರ್ಬಂಧನಗಳಿಗೊಳಪಡಿಸುತ್ತಿರುವ ಈ ನಿನ್ನ ಮಾಯೆಗೆ ಅಂತ್ಯಕಾಲವು ಎಂದು ಒದಗುವುದೋ ತಿಳಿಯೆನು. ಈ ತುಚ್ಛ ಸಂತೋಷದಿಂದ ನಿನಗೇನು ಪ್ರಯೋಜನವು. ಇಂದಿನ ವರೆಗೆ ಪಟ್ಟ ಸಂತೋಷದಲ್ಲಿಯೇ ನೀನು ತೃಪ್ತಿಹೊಂದು. ಇನ್ನಾದರೂ ಈ ನಿನ್ನ ಮಾಯೆಯನ್ನು ಬಿಟ್ಟು ಜನರನ್ನು ಸಂಕಷ್ಟಗಳಿಂದ ಬಿಡಿಸಿ ಅವರಿಗೆ ಸಮಪಾಲನ್ನ ದಾರಿಯನ್ನು ತೋರಿಸಿಕೊಂಡು ನಿನ್ನನ್ನು ಸದಾ ಪೂಜೆಯಿಸೆನು

ಭಕ್ತ.

ಸೋಮವಾರಪೇಟೆ ತಾಲೋಕು ಓಟರುಗಳ ವಿಪುಲ ಮೆಚ್ಚಿಕೆ.

ಅಯ್ಯಾ,

ಈ ತಾಲೋಕಿನ ಪರವಾಗಿ ಕಾಫಿ ಪ್ಲಾಂಟರ್ ಮ. ಶ್ರೀ ಸಿ. ಸುಬ್ಬಯ್ಯನವರು ಚುನಾಯಿಸಲ್ಪಟ್ಟು ಕಾನ್ಸಿಲಿಗೆ ಹೋಗಿ ಜನರಿಗಳನ್ನು ಚುನಾಯಿಸಿ ಸಹಾಯ ಪಡೆದಿದ್ದರು. ಆಗ ಮ. ಶ್ರೀ ಸಿಂಪಕೆದ ಸುಬ್ಬಯ್ಯನವರು ಕಾನ್ಸಿಲಿಗೆ ನಿಲ್ಲುವಲ್ಲವೆಂತ ಒಪ್ಪಿ ಒಗಗಿಸಬೇಕೆಂದು ಹೇಳಿಕೊಂಡು ದೇಶದಲ್ಲಿ ಹುಟ್ಟು ಪ್ರಚಾರ ಮಾಡಿಕೊಂಡು ಸಂಚರಿಸುವುದಾಗಿ ತಿಳಿಯುತ್ತೇನೆ. ಈ ಪ್ರಚಾರದ ಉದ್ದೇಶ್ಯ ಮ. ಶ್ರೀ. ಸುಬ್ಬಯ್ಯನವರು ಕಾನ್ಸಿಲಿಗೆ ನಿಲ್ಲಿಸುವುದಿಲ್ಲವೆಂತ ಯಾರಿಗೂ ತಿಳಿಸಿರುವುದಿಲ್ಲ. ಆದಕಾರಣ, ಓಟರುಗಳಿಗಾ, ತಾವುಗಳು ಈ ವಿಧವಾದ ಸುಳ್ಳು ಮಾತುಗಳಿಗೆ ಒಳಗಾಗಿ ಮೋಸಹೋಗಬೇಡಿರಿ. ದೇಶದ ಏಳಿಗೆಗೆ ಅವರ ಹಾಗೆ ಪ್ರಯತ್ನಪಟ್ಟ ದೇಶಸೇವಕರು ಇರುವುದು ಈ ತಾಲೋಕಿನಲ್ಲಿ ಬೇರೆ ಯಾರೂ ಇಲ್ಲ. ಆದ್ದರಿಂದ ತಾವುಗಳೆಲ್ಲರೂ ಸುಳ್ಳುಜೋಡನೆಗೆ ಬೆರಗಾಗಿ ದೇಶಕ್ಕೆ ಅಪಕಾರಮಾಡಬೇಡಿ. ಈ ಸರ್ತಿಯೂ ಸಹ ಮ. ಶ್ರೀ. ಸಿಂಪಕೆದ ಸುಬ್ಬಯ್ಯನವರಿಗೇನೇ ಓಟು ಕೊಟ್ಟು ತಮಗಳ ಪರವಾಗಿ ಚುನಾಯಿಸಬೇಕೆಂತ ನನ್ನ ಅಭಿಪ್ರಾಯ. ಮ. ಶ್ರೀ. ಸುಬ್ಬಯ್ಯನವರು ಕಾನ್ಸಿಲಿಗೆ ನಿಲ್ಲುವುದಿಲ್ಲವೆಂತ ಹೇಳಿಕೊಂಡು ತಿರುಗುತ್ತಿರುವವರ ಪಟುತ್ವನ್ನು ಖಂಡಿತವಾಗಿಯೂ ನಂಬಬೇಡಿ.

ದೇಶಾಭಿಮಾನಿ.

ಲೋಕಪಾವನದ ಧ್ವನಿಯು

ತಾರೀಕು 26—9—26ರಲ್ಲಿ ಲೋಕಪಾವನದಲ್ಲಿ ಎಂ. ಎಸ್. ಪೂವಪ್ಪ ಎಂಬವರಾಗಿ ಇನ್ಸ್ಪೆಕ್ಟರ್ ರುಜು ಹಾಕಿ ಮ. ಕೋಟೆರ ಚಿಣ್ಣಪ್ಪನವರು ತಾ. 16—9—26ರ ವೀರಾಜಪೇಟೆಯ ಕೊಡಗರ ಮೀಟಿಂಗಿನಲ್ಲಿ ಎದ್ದ ಹೋದ ಸಂಗತಿಯನ್ನು ಪತ್ರಿಕೆಯಲ್ಲಿ ಓದಿದೆನು. ಅಲ್ಲದೆ ಈಗಲೂ, ಈ ಮೊದಲೂ ಇಪ್ಪತ್ತು ಮತ್ತು ನಮ್ಮ ಬೇಕಿರ್ತಾಗಿ ಹೋರಾಡುವ ಅನೇಕ ಸಹಾಯದ ವಿಷಯ ಒದಗುತ್ತಿರುವ ಪತ್ರಿಕೆಗಳನ್ನು ಓದುತ್ತಾ ಇದ್ದೇನೆ. ಈ ಪತ್ರಿಕೆಯು ಹೊರಟಂದಿನಿಂದಲೂ ಮೆ.

ಚಿಣ್ಣಪ್ಪನವರ, ಯಾ, ಮೆ. ವೆಂಕಪ್ಪಯ್ಯನವರ, ಇಲ್ಲವೇ, ಶಾಲಾ ಸ. ಆ. ಇನ್ಸ್ಪೆಕ್ಟರ ಇಲ್ಲವೆ, ಸಹಕಾರ ಸಂಘದ ಅಧಿಕಾರಿಗಳ ಸ್ತುತಿ ಪಾಠಗಳಲ್ಲಿಯೇ ಮಗ್ನವಾಗಿರುವುದು ವಾಚಕರಿಗೆ ತಿಳಿಯದ್ದಲ್ಲ. ಕಳೆದ ಚುನಾವಣೆಯಲ್ಲಿ ಜಯಶೀಲರಾಗದೆ ಇದ್ದ ಕಲವು ಮಹನೀಯರಿಗೆ ಜಯಶೀಲರಾದವರನ್ನ ಯಾವ ತರದಲ್ಲಾದರೂ ಹೀಯಾಳಿಸಿ, ಈಗ ಬರುವ ಚುನಾವಣೆಯಲ್ಲಾದರೂ ಇಲ್ಲದ್ದನ್ನ ಬರೆದು ಗೆಲ್ಲಬೇಕೆಂಬ ಭಾವನೆಯಿಂದ ಈ ರೀತಿ ಇಲ್ಲದ ಆರೋಪಣೆಗಳನ್ನೂ, ಕಲ್ಪನೆಗಳನ್ನೂ ಬರೆಯುತ್ತಿರುವರೆಂದು ಎಲ್ಲರಿಗೂ ತಿಳಿದೇ ಇದೆ.

ವೀರಾಜಪೇಟೆ ಊಟಕ್ಕೆ ನಾನು ಸೇರಿರುವವನಾದ್ದರಿಂದಲೂ, ನಮನ್ನ ಸಂಗತಿಗಳನ್ನು ಬಲ್ಲವನಾದ್ದರಿಂದಲೂ ಈ ವಿಷಯ ನಿಜ ಸಂಗತಿಗಳನ್ನು ವಾಚಕರ ಮುಂದಿಡುತ್ತೇನೆ. ವೀರಾಜಪೇಟೆಯಲ್ಲಿರುವ ಕಲವು ಕೊಡವರು ಸೇರಿ ತಾ.9—9—26ರಲ್ಲಿ ಕೊಡವರಿಗೆ ಒಂದು ಪರಸ್ಪರ ಪ್ರಯೋಜನಾರ್ಥದ ಫಂಡೂ, ಸತ್ತವರನ್ನು ದಫನ ಮಾಡಲಿಕ್ಕೆ ಒಂದು ಜಾಗವನ್ನೂ ಮಾಡಬೇಕೆಂದು ಮೀಟಿಂಗ್ ಮಾಡಿದರು. ಮೀಟಿಂಗಿನಲ್ಲಿ ಏಕಾಭಿಪ್ರಾಯದಿಂದ ಒಂದು ಪರಸ್ಪರ ಸಂಘವನ್ನು ಏರ್ಪಡಿಸಬೇಕೆಂದೂ, ಕೊಡವರಿಗೆ ಕಷ್ಟಕಾಲದಲ್ಲಿ ಸಹಾಯ ಮಾಡಬೇಕೆಂದು ಈ ವಿಷಯ ರೂಲ್ಸ್‌ಗಳನ್ನು ವಂಜೂರ್ಮಾಡಲಿಕ್ಕೆ ತಾ 16—9—26ರಲ್ಲಿ ಜನರಲ್ ಮೀಟಿಂಗ್ ಮಾಡಬೇಕೆಂತಲೂ, ಜನರಲ್ ಮೀಟಿಂಗಿಗೆ ಒಂದು ಸಂತೋಷ ಊಟವನ್ನು ಏರ್ಪಡಿಸಬೇಕೆಂದೂ, ಊಟಮಾಡಬೇಕೆಂದೂ, ಊಟದಲ್ಲಿ ಯಾವ ವಿಧದಲ್ಲಿಯೂ ಮದ್ಯಪಾನ ಸೇರಿಸಕೂಡದೆಂದೂ ತೀರ್ಮಾನವಾಯಿತು. ಈ ಬಗ್ಗೆ ಏರ್ಪಾಡುಮಾಡಲು ಒಂದು ಕಮಿಟಿ ಸಹ ಏರ್ಪಾಡಾಗಿ ಎಲ್ಲಾ ಕೆಲಸವನ್ನು ಕಮಿಟಿಯವರು ಮಾಡುವಂತೆ ತೀರ್ಮಾನವಾಯಿತು.

ಈ ಕಮಿಟಿಯವರ ಪೈಕಿ ಒಬ್ಬರು ಮೆ ಚಿಣ್ಣಪ್ಪನವರಲ್ಲಿ ಚಂದಾಹಣ ವಸೂಲಿಗೆ ಹೋದಾಗ, ಅವರು ಮದ್ಯಪಾನ ಸೇರಿಸಿದರೆ ಊಟಕ್ಕೆ ಬರುವವರಿಲ್ಲವೆಂದು ಹೇಳಿದರು. ಈ ಮೊದಲೇ ಮೀಟಿಂಗಿನಲ್ಲಿ ತೀರ್ಮಾನ ಮಾಡಿದ ಮೇರೆ ಮದ್ಯಪಾನವಿಲ್ಲವೆಂದು ಕಮಿಟಿಯವರು ಹೇಳಿದ್ದರಿಂದ ಪಟ್ಟಿಯಲ್ಲಿ ಮದ್ಯಪಾನ ಕೂಡಿಸುವುದಿಲ್ಲವೆಂಬ ಶರ್ತಿನ ಮೇಲೆ ಚಂದಾ ಹಾಕುತ್ತೇವೆಂದಾಗಿ ಬರೆದು ತಮ್ಮ ಚಂದಾವನ್ನು ಕೊಟ್ಟರು. ತಾ. 16 9 26ರ ಮೀಟಿಂಗ್ ಒಂದೇ ಜಂತು. ಸಾಯಂಕಾಲ 1 ಗಂಟೆಯ ಬದಿ 7½ ಗಂಟೆಯವರೆಗೆ ಸಹಕಾರ ಸಂಘದ ಮೀಟಿಂಗ್ ಆಗಿ ಎಲ್ಲವೂ ಸರಿಯಾಗಿ ನಡೆಯಿತು.

ಊಟಕ್ಕೆ 10 ನಿಮಿಷ ಮೊದಲು ಕಮಿಟಿಯವರು [illegible] ಕಳೆದರು. ಅವರು ಕೇಳುವುದಕ್ಕೆ ಮೊದಲೇ ಕೋಣೆಯಲ್ಲಿದ್ದ ಗೇಲನ್ ಸಾರಾಯಿಯ ವಾಸನೆಯು ಎಲ್ಲರಿಗೂ ಬಡಿಯುತ್ತಿತ್ತು. ಬಹುಮತದವರು ಸಾರಾಯಿ ಬೇಕೇ ಬೇಕೆಂದು ಕೂಗಿದರು. ಆಗ ಮೆ. ಚಿಣ್ಣಪ್ಪನವರು ಈ ಪಿಶಾಚಿಯನ್ನು ಕೂಡಿಸುವುದು ಒಳ್ಳೆಯದಲ್ಲವೆಂದೂ, ಕೂಡಿಸುವುದಿಲ್ಲವೆಂಬುದಾಗಿ ಮೊದಲು ತೀರ್ಮಾನವಾದ ರೀತಿ ತಾನು ಚಂದಾ ಕೊಟ್ಟಿರುವೆನಾಗಿಯೂ, ಅಧ್ಯಕ್ಷರಿಗೆ ಇಂಥಾ ಸಂಗತಿಯನ್ನು ಚರ್ಚೆಗೆ ತರುವ ಹಕ್ಕಿಲ್ಲವಾಗಿಯೂ, ಒಂದುವೇಳೆ ಚರ್ಚೆ ಮಾಡುವುದಾದರೆ ತಾನು ಅಧ್ಯಕ್ಷತನ ಬಿಡಬೇಕಾಗಿಯೂ ಓಟಿಗೆ ಬಿಟ್ಟರೆ ತಾನು ಎದ್ದು ಹೋಗುತ್ತೇನಾಗಿಯೂ ಹೇಳಿದರು. ಇವರನ್ನು ಅನುಸರಿಸಿ ಕೆಲವು ಜನರು ಮಾತಾಡಿದರು. ಅಧ್ಯಕ್ಷರು ಬಹುಮತಕ್ಕೆ ಒಪ್ಪಿದ್ದರಿಂದ, ಚಿಣ್ಣಪ್ಪನವರು ತಾನು ಅಂಥಾ ಸಭೆಯಲ್ಲಿರುವುದು ತನ್ನ ಮತಕ್ಕೆ ವಿರೋಧವೆಂದು ಹೇಳಿದ್ದಲ್ಲದೆ ಎಲ್ಲರೂ ಚೆನ್ನಾಗಿ ಕೂಡಿ ಆದಬೇಕೆಂದು ಮಾಡಿದ ಈ ಸಭೆಯಲ್ಲಿ ಹೀಗೆ ಮಾಡಿದ್ದು ಅನ್ಯಾಯವೆಂಬುದಾಗಿಯೂ, ಇವರು ಚನ್ನಾಗಿ ಊಟಮಾಡಿ, ಕುಡಿಯುವುದು ಒಳ್ಳೆದೆಂದು ಸಭೆಯಿಂದ ತಟ್ಟನೆ ಎದ್ದುಹೋದರು. ಮೆ. ಚಿಣ್ಣಪ್ಪನವರು ಎದ್ದು ಹೋದದ್ದು ನ್ಯಾಯವೆಂದು ಅನೇಕರ ಮತವಾಗಿದೆ. ಅವರು ಆ ಗ್ರಾಮದವರಾಯಿತಿನಿಂದಲೇ, ಮದ್ಯನಿಷೇಧ ಕಾನ್‌ಫರೆನ್ಸಿನಲ್ಲಿಯೂ, ಜಮೀನುದಾರರ ಸಂಘದಲ್ಲಿಯೂ ಈ ಪಿಶಾಚಿಯನ್ನು ಓಡಿಸಬೇಕೆಂದು ಪ್ರಯತ್ನಪಡುವುದು ಎಲ್ಲರಿಗೂ ವೇದ್ಯವಿದೆ. ಅವರಾದರೂ ಈ ಸಭೆಯಲ್ಲಿ ಈ ಎರಡು ಸಂಘಗಳ ಉದ್ದೇಶವನ್ನು ಕೈಯಲ್ಲಾಗುವ ಮಟ್ಟಿಗೆ ಬೋಧಿಸಿ ಈ ಕಾರ್ಯವನ್ನು ಮಾಡುವುದಕ್ಕೆ ನಮ್ಮ ಲೋಕಪಾವನದ ಗೆಳೆಯರಲ್ಲದೆ ಇತರರು ಅವನಿಂದಿಸುತ್ತಾರೆ. ಕಳೆದ ವರ್ಷದ ಬಡ್ಜೆಟ್ ಭಾಷಣದಲ್ಲಿ ಈ ಮದ್ಯನಿಷೇಧದ ವಿಷಯ ನ್ಯಾಯವಿಧಾಯಕ ಸಭೆಯಲ್ಲಿ ಮಾತಾಡುವಾಗ ಅವರು ಕುಡುಕತನವು ಕಳ್ಳತನ ಮತ್ತು ನರಹತ್ಯೆಗಳಿಗಿಂತ ಕಟ್ಟದೆಂತಲೂ, ಕುಡುಕತನದಿಂದ ಈ ಎರಡು ಕೃತ್ಯಗಳು ಜನಿಸುತ್ತವೆಂಬುದನ್ನು ಹೇಳಿರುತ್ತಾರೆ.

ಕುಡುಕತನದಿಂದ ಪರಿಣಾಮವೇನು?

ಈ ಊಟವು ಸಮಾಪ್ತಿಯಾಗುವುದಕ್ಕೆ ಮೊದಲು, ಗಲಾಟೆಗೆದ್ದು ಅವನಿಗೆ ಜಾಸ್ತಿ ಆಯಿತು ' ನನಗೆ ಕಮ್ಮಿ ಆಯಿತೆಂಬ ಗಲಿಬಿಲಿ ಒಬ್ಬೊಬ್ಬ ಉದ್ಯೋಗಸ್ಥರು ಮತ್ತು ಮಹನೀಯರು ಸ್ವಂತ ಸ್ವಂತ ಸಾರಾಯಿ ಸರಬರಾಯಿ ಮಾಡುವುದು, ಇದೆಲ್ಲಾ ನಡೆದು ಅತ್ಯಸ್ತಿಯು ಏರ್ಪೇಶವಾಯಿತು. ಮಡಿಕೇರಿ ಊಟದ ಪರಿಣಾಮವೇನಾಯಿತು. ನರ್ಕ್ನೆಯಿಂತೆಂಬ ಮಹಾಕವಿಯು ಹೇಳಿದ್ದಂತೆ, ' ಮನುಷ್ಯರು

ವಿಷಗಳನ್ನು ಬಾಯಿಗೆ ಹಾಕಿಕೊಂಡು ಅದು ಒಳಗೆ ಹೋಗು ಕೂಡಲೇ ಮದವೋಗದಿಂದ ಮೃಗಗಳೇ ಆಗುತ್ತಾರಲ್ಲವೇ?

ನಮ್ಮ ದುರಾದೃಷ್ಟ.

ಒಳ್ಳೆಯ ಕೆಲಸಕ್ಕೆ ನಮ್ಮ ಜನರು ಹೋರಾಡುವಲು ಹೆಂಡ, ಸಾರಾಯಿ ಪ್ರತಿ ಊಟಕೂಟದಲ್ಲಿ ಸೇರಿಸುವ ಚಳವಳಿಕ್ಕೆ ಮೋರಾಟವು ಪ್ರಾರಂಭವಾಗಿದೆ. ಇದನ್ನು ಹಿಮ್ಮೆಟ್ಟಿಸುವವರು ಕಟ್ಟಳೆನರಾಗಿ ಲೋಕಪಾವನವೇ ಇದನ್ನಾದರೂ ದೇಶದಲ್ಲಿ ಪ್ರೋತ್ಸಾಹಿಸಿ ದೇಶದ ಜನರ ಉದ್ಧಾರಮಾಡು. ಲೋಕಪಾವನವೆಂಬ ಹೆಸರನ್ನು ದೃಢದಿಂದ ಸಾರ್ಥಕವಾಗಿ ಮಾಡು.

ಹಾಜರಿ

"ಮೋಟಾರಿನ ಅವಗಢ"

ಅಯ್ಯಾ,

ತಾ 13—9—26ನೇ ದಿನ "ಶಂಕರವಿಲಾಸ್" ಬಸ್ಸು ಮಡಿಕೇರಿಯಿಂದ ಪುತ್ತೂರಿಗೆ ಹೋಗುವಾಗ್ಗೆ ತಾವು ಬಸ್ಸಿನಿಂದ ಸ್ವಲ್ಪ ಮುಂದೆ ಒಂದು ಸಂಕದಲ್ಲಿ ನಿಂತ ಸಿ. ಟಿ. ಬಸ್ಸನ್ನು ಬಿಟ್ಟು ಮುಂದರಿಸುವಾಗ ಸಂಕದ ಗಾರ್ಡ್‌ಕಲ್ಲು ತಗಲಿ ಕರ್‌ವರ್ಟ್ ಸಮೇತ ಬಸ್ಸು ಎಂಟೆತ್ತು ಅಡಿ ಆಳದ ಹಳ್ಳಕ್ಕೆ ಬಿದ್ದುಬಿಟ್ಟಿತೆಂತಲೂ ಈ ತಾ 21—9—26ನೇ ದಿನ ಪುತ್ತೂರಿನಿಂದ ಮಡಿಕೇರಿಗೆ ಹೋಗುವಾಗ್ಗೆ ಶಂಕರವಿಲಾಸ್ ನಿಂತು ಒಂದು ಇಕ್ಕಟ್ಟಾದ ಸ್ಥಳದಲ್ಲಿ ಸಿ. ಪಿ. ಸಿ. ಬಸ್ ಮುಂದರಿಸುವಾಗ್ಗೆ ಡೇಶ್ ಆಗಿ ಒಂದು ಸಣ್ಣ ಸಂಕದ ಕರ್‌ವರ್ಟ್ ಸಮೇತಲೂ ತಿಳಿಯುತ್ತೇನೆ. ಹೀಗೆ ಪೈಪೋಟಿ ಪೂಟಾಪೋಟಿಯಿಂದ ಬಸ್ಸ್ ಓಡಿಸಿ ಇಂಥಾ ಅನಾಹುತಗಳು ಬಂದರೆ ಪ್ರಯಾಣಿಕರ ಗತಿ ಏನಾದೀತು.

ಆದುದರಿಂದ ಇಂಥಾ ಅವಗಢಗಳಾಗದಂತೆ ಬಸ್ಸಿನ ಡ್ರೈವರರಿಗೆ ಎಚ್ಚರಿಕೆಯನ್ನು ಆಗಾಗ್ಗೆ ಪೋಲೀಸು ಅಧಿಕಾರಿಗಳು ಕೊಡುತ್ತಿದ್ದರೆ ಪ್ರಾಣ ಅಪಾಯವಾಗಲಿಕ್ಕಿಲ್ಲ. ಇಂಥಾ ಅವಗಢಗಳು ಅಲ್ಲಲ್ಲಿ ಆಗುತ್ತಲೇ ಇರುವುದೆಂಬುದು ವರ್ತಮಾನ ಪತ್ರಿಕೆಗಳನ್ನು ಓದುವವರೆಲ್ಲರಿಗೂ ತಿಳಿದುದರಿಂದ ಈ ವಿಷಯ ಹೆಚ್ಚು ಬರೆಯಲು ಅಗತ್ಯವಿಲ್ಲ. ಮೇಲಧಿಕಾರಿಗಳೇ ಜೋರಾಗಿ ಬಸ್ಸು ಓಡಿಸುವ ಪದ್ಧತಿಯನ್ನು ನಿಲ್ಲಿಸಿ ಪ್ರಾಣಾಪಾಯಾದಿಗಳಿಲ್ಲದಂತೆ ಮಾಡಿ.

"ದೂರದರ್ಶಿ"

ದಿವಂಗತ ಪುತ್ತಮನೆ ಗಣಪಯ್ಯಯ್ಯನವರು.

ಕಂಗೆಟ್ಟನಾಡು ಪ. ಲೇ. ಸಂಘದವರು ಮೂಮುಡಿ ಶಾಲೆಯಲ್ಲಿ ತಾರೀಕು 26—9—26 ರಲ್ಲು ಸೇರಿ ದಿವಂಗತ ಮೆ. ಪುತ್ತಮನೆ ಗಣಪಯ್ಯನ್ನು ಯ. ಒ. ಯಸ್. ಯವರ ವಿಷಯದಲ್ಲು ಮೆ. ಚೆಪ್ಪುಡೀರ ಯಸ್. ಪೂವಪ್ಪನವರ ಅಧ್ಯಕ್ಷತೆಯಲ್ಲು ನಡೆಸಿದ ಮೀಟಿಂಗಿನ ವಿವರ

ಮೆ ದಿವಂಗತ ಪಿ. ಗಣಪಯ್ಯನವರು ನಮ್ಮ ಈ ದಿನ ಸಂಘ ಸ್ಥಾಪನೆಯಾಗುವ ಮೊದಲು ನಮ್ಮ ನಾಡಿನವರು ವೆಂಬರುಗಳನ್ನು ಸೇರಿಸಿ ಒಂದು ಪ್ರಂಡ್ಲಿ ಯೂನಿಯನ್ ಸೊಸೈಟಿಯನ್ನು ಏರ್ಪಡಿಸಿ ಅದಕ್ಕೆ ತಾವೇ ಪ್ರೆಸಿಡೆಂಟಾಗಿ ನಿಂತು ಮೂರು ವರ್ಷಕಾಲವನ್ನು ಸದ್ರಿ ಯೂನಿಯನ್ನಲ್ಲೇ ಕಳೆದು ಸದರಿ ಯೂನ್ಯಿಯನಿನ ಜನರನ್ನು ಐಕ್ಯಮತದ ಯಾವ ಆರೋಪಣೆಯೂ ಬಾರದ ರೀತಿ ನಡಿಸುತ್ತಾ ಬಂದರು.

ಅನಂತರ ಸದ್ರಿ ಯೂನಿಯನನ್ನು ತೆಗೆದು ಸದ್ರಿ ನಾಡಿನಲ್ಲಿ ಆ ವರೆಗೆ ಇಲ್ಲದೆ ಇದ್ದ ಪ. ಲೇ. ಸಂಘವನ್ನು ಸ್ಥಾಪನೆ ಮಾಡಬೇಕೆಂದು ಜನರೊಡನೆ ಆಲೋಚಿಸಿ ಜನರಿಗೆ ಬೋಧನೆ ಕೊಟ್ಟು ಒಂದು ಸಂಘವನ್ನು ಸ್ಥಾಪನೆ ಮಾಡಲು ಇವರು ಕಾರಣರಾದರು:

ಅನಂತರ ಅವರು ನಮ್ಮ ಕಿಗ್ಗಟ್ಟುನಾಡಿನ ಪರವಾ ಕೌನ್ಸಿಲ್ ಮೆಂಬರುತನಕ್ಕೆ ನಿಂತು ಜಯಶೀಲರಾಗಿ ಆ ಸಂಗಾಯಿತಿನಿಂದ ಇದುವರೆಗೆ ಏನನ ಒಳ್ಳಿದನೆಂಬ ಭೇದವಿಲ್ಲದೆ ಜನ ನಡಿಸುತ್ತಾ ಇದ್ದವರು ಯಾವದೊಂದೂ ಕಾಯಿಲೆ ಇಲ್ಲದೆ ಕೋಲೆ ಮದ್ದಿಗೆ ಪೊಕ್ಕಿಡಿದಂತೆ ಫಕ್ಕನೆ ತಾ. 25—9—26ನೇ ಶನಿವಾರ ದಿನ ಬೆಳಗ್ಗೆ ಪರಲೋಕವನ್ನೈದಿದುದುಕ್ಕಾಗಿ ತುಂಬಾ ವ್ಯಸನಪಡುತ್ತೇವೆ.

ಸದ್ರಿಯವರ ಆತ್ಮಕ್ಕೆ ಶಾಂತಿಯನ್ನೂ ಅವರ ಪತ್ನಿ ಸುತರಿಗೆ ಸುಖವನ್ನೂ ಕೊಡಲೆಂದು ಭಗವಂತನನ್ನು ಪ್ರಾರ್ಥಿಸಿ ಮೀಟಿಂಗನ್ನು ವಿಸರ್ಜಿಸಲ್ಪಡು ಮಾಡಲಾಯಿತು.

ಸಿ. ಯಸ್. ಪೂವಯ್ಯ.
ಅಧ್ಯಕ್ಷ.

ಇದೇ ಮೇರೆ ತಾ. 27—9—26ರಲ್ಲು ಶ್ರೀಮಂಗಲದ ಡಿನವರು ಹುದಿಕೇರಿಯಲ್ಲಿ ಮೆ. ಅಜ್ಜಮಾಡ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡಿಸಿ ಮೆ. ಗಣಪಯ್ಯನವರ ಮರಣದ ವಿಷಯ ವ್ಯಸನ ಸೂಚಕವಾದ ಠರಾವನ್ನು ಮಾಡಿದರೆಂದು ಇನ್ನೊಂದು ಜಾಸ್ತಿ ಬಂಗಿದೆ.

ಸಂ

MPIRE OF INDIA LIFE
SSURANCE CO., LTD.
(Established 1897.)
LL WITH PROFIT POLICIES;
Issued before 28th February 1927
l share in the BONUS Distribution
the five years ending on that date.
OSPECTUS ON APPLICATION
galore Branch · Madras Branch
Commercial Street 9 & 10 Second
Line Beach.
C. K. Chengappa
Special Agent. Riverside Estate.
24—11 Siddapur.

786

ಮವಾದ ಸೂಲು. ಕೊಡಿನೂಡಿ ತರಿಸಿರಿ.

ಬೆಳ್ಳೂರು ಉಂಡೆನಶ್ಯ.

ನಮ್ಮ ಕಳೆದ 30 ವರ್ಷಗಳಿಂದಲೂ ಪನಪಾದ ನಶ್ಯ ತಯಾರಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳ ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿಗೆ ಸಮ್ಮಂದ ವ್ಯಾಧಿಗಳನ್ನು ಗುಣಪಡಿಸುವುದಲ್ಲದೆ ಮನಸ್ಸಿಗೆ ಹರ್ಷವುಂಟುಮಾಡುತ್ತೆ. ಒಂದು ಸಲ ತರಿಸಿ ನೋಡಿ.

24 ತೊಲೆ ತೂಕ	1ಕ್ಕೆ	0—12—0
" "	3ಕ್ಕೆ	2—1—0
" "	6ಕ್ಕೆ	4—0—0
" "	9ಕ್ಕೆ	6—0—0
" "	12ಕ್ಕೆ	7—8—0
" "	1ಕ್ಕೆ	0—10—0
ಪನಪಾದ ಪುಡಿ " "	5ಕ್ಕೆ	2—0—0

ನಮ್ಮ ವಿಳಾಸ.— ಎಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಗಳು,
ಬೆಳ್ಳೂರು ಪೋಸ್ಟು,
ಮೈಸೂರು ಡಿಸ್ಟ್ರಿಕ್ಟ್.

52—8

Good Chance! Good Chance!!

Ammunition At cheaper rate

Gun Powder per lb.	1—14—0
Percussion caps per box of 250.	1—1—0
Eley Cartridges per 100.	12—0—0
Lead shots per lb.	0—8—0

Terms —Rs. 5/- should be sent in advance for each order. Orders from coorgs should accompany the exemption certificate from the District Magistrate of Coorg.

Free.—6 Rubber air balloons will be given to any customer who transacts business with me for more than Rs. 20/ before 31st December, 1926.

Moffussil order Promptly attended to:
S. VENKATARANGAM CHETTY,
Ammunition & Sulphur Merchant,
No. 9, China Bazaar, Road, Madras.
22—3

Apply for our shooting Season's Clearance Sale Catalogue of Brand New Goods.
10 to 25 percent Reductions in Prices.
No License Required!! No License Required!



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/- Free delivery.

Pwerful German Diana Air gun, Handsome and Accurate, takes B. S. A. Patern No 1 Slugs and Darts, expressly recommendable for Target Practice Rs 15/ Free delivery.

Brilliant Search Light Lamp for Night Sports Rs 30/-. Free delivery.

No License required to purch se or to possess the above items.

Reliable D B B L 12 bore guns	Rs 60/- and upwards.	
Do S. B B L 12 do	do 40/-	do
D B. M L Guns	" 45/-	do.
S B M L. do.	" 30/-	do.
S B. B L Rifles	" 25/-	do
B L Revolvers and Pistols	" 30/-	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition,
Cheapest priced firm in India,
24. 12 210 Abdul Rehman Street, BOMBAY.

ಪ್ರೋರ್ಣ

ಸ್ವದೇಶೀಯ ಹಿತ್ತಾಳೆ ಕಂದೀಲು (ಲಾಂದರು).

ಇದೇ ಕಂದೀಲು (ಲಾಂದರು) ನಮ್ಮ ... ಯಲ್ಲಿ ತಯಾರಾಗಿ ಸಿದ್ಧಪಡಿಸಿದ್ದು, ಬೆಳಕಿನಲ್ಲಿಯೂ, ಬಾಳಿಕೆಯಲ್ಲಿಯೂ, ಯಾವುದೇ ಪರದೇಶೀಯ ಕಂದೀಲಿಗಿಂತ ಮೇಲಾಗಿರುವುದು ಬದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ಸಾಧ್ಯವಾದಷ್ಟು ಪರದೇಶದ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಬಾರದು.

ತ್ವರೆ ಮಾಡಿ ಕೇಳಿಕೊಳ್ಳಿರಿ ನಿಮ್ಮೂರಿನಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಿ —
1. ಸಿ. ಎಸ್. ನಾರಾಯಣರಾವ್ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಚಿತ್ರದುರ್ಗ,
ಅಥವಾ
ಕಾರ್ಖಾನೆದಾರರು —
'ಓಗಲೆ ಗ್ಲಾಸ ವರ್ಕ್ಸ್' ಲಿಮಿಟೆಡ್, ಓಗಲೇವಾಡಿ ಸಂ. (ಔಂಧ) ಜಿ. ಸಾತಾರಾ.

52—2.

೧೬ ಚಿತ್ರಪಟಗಳುಳ್ಳ

ಸಚಿತ್ರ ಮಹಸತಿ ಕಥೆ.

೭೮ ಕಥೆಗಳು ೧೬೩ ಫಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀಪಾತಿವ್ರತ್ಯ ಬ್ರಾಹ್ಮಣ, ವೈಶ್ಯ, ಶೂದ್ರ, ಕುಟುಂಬ ಸಂಬಂಧ ಮುಂತಾದವು ... ಕಥಾರೂಪದಲ್ಲಿ ಚಿತ್ರಕಥಾ ... ಧರ್ಮವೇ ಮುಂತಾದ ... ನೀತಿಬೋಧಕವಾಗಿಯೂ ... ಸ್ತ್ರೀಯರು, ಪುರುಷರು, ಬಾಲಕರು ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ... ಲೋಕಾನುಭವಕ್ಕೆ ಬೇಕಾದ ಅನೇಕ ವಿಷಯಗಳು ಇದರಿಂದ ತಿಳಿದುಬರುವುದು. ... ಈ ಕಥೆಯನ್ನು ಓದುವದರಿಂದ, ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ... ವಿವೇಕಾವಿವೇಕವನ್ನು ತಿಳಿಯತಕ್ಕ ಜ್ಞಾನವನ್ನು ಉಂಟುಮಾಡುವುದು. ಬೇಕಾದವರು ವಿ. ಪಿ. ಪೋಸ್ಟು ಮೂಲಕ ತರಿಸಿಕೊಳ್ಳಬಹುದು.

ದಪ್ಪಕಾಗದ ಕ್ರಯ ಪ್ರತಿ ೧ಕ್ಕೆ ರೂ. ೩-೦-೦. ಟಪ್ಪಾಲು ಹಾಸಲು ೦-೮-೦.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಕಥೆ ೩ ಭಾಗಗಳಿದ್ದು ... ಪುಟಗಳು ಕ್ರಯ ೩-೪-೦. ಸಚಿತ್ರ ... ಪುಟಗಳು, ಕ್ರಯ ರೂ. ೩.

ಸಚಿತ್ರ ಶ್ರೀರಾಮತತ್ತ್ವಾಮೃತ ... ಸೀತಾರಾಮಾಂಜನೇಯ ಸಂವಾದ ... ಪುಟಗಳು ... ಇವುಗಳಿಗೆ ಟಪಾಲು ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ)ಗೆ ಬರೆದರೆ ಕಳುಹಿಸುವೆವು.

ನಮ್ಮ ವಿಳಾಸ— ಎ. ಆರ್. ಕೃಷ್ಣಸ್ವಾಮಿ ಶೆಟ್ಟಿ,
ಬುಕ್ಕ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

52—18

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರರಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಯಮಗಳೂ, ... ನೊಂದಾಯಿಸಲು ... ಬೇಕಾದ ... ನಮ್ಮಲ್ಲಿಯೂ ಮತ್ತು ... ನಲ್ಲಿಯೂ ದೊರೆಯುತ್ತವೆ.

ಪ್ರಕಾಶಕ ... ವಾರ ಪತ್ರಿಕೆ

ಸಂಪಾದಕರು ... ದಿ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ... ಸದಾಚಾರವೇ ಸರಿಯಾದ ಸಾಧನ. ... ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ ರೂ. ೩-೦-೦

ಕಾರ್ಯಾಧಿಪತಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಜೇಲರ್ಸ)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ

(೨) ಕೂಡುವದಕ್ಕೆ ಆರಾಮು

(೩) ತಾಳಿಕೆಯಲ್ಲಿ ಗಟ್ಟಿ,

(೪) ತಗಣೆಗಳು ಸೇರುವದಿಲ್ಲ,

(೫) ಎತ್ತಾಡಲಿಕ್ಕೆ ಬಹುವಷ್ಟು ಹಗುರ.

ಇತ್ಯಾದಿ

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ಸಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16–2 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮೂಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೊತ್ತಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6–4–0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೆರ ಕುಟ್ಟಯ್ಯನವರು, ರಾಯ್ ಬಹದ್ದೂರ್

ಟ್ರೆಜರರ್. ಯಂ. ಭುಜಂಗರಾಯರು ಬಿ.ಎ, ಬಿ.ಎಲ್.

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ.ಎ, ಬಿ ಎಲ್

ತಾರೀಕು 1—7—1926

ಒಂದು ಪ್ರಬಲವಾದ ಪ್ರಶ್ನೆ

ನಿಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ವತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಎಲ್ಲಾ ಕಂಪೆನಿಗಳಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆ ಪ್ರೀಮಿಯಂ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಸೆಕ್ಯೂರಿಟಿ ಕಂಪೆನಿಯ ರಿಪೋರ್ಟುಗಳು, ಶರತುಗಳು ಈ ಕಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯನ್ನು ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ಕೈಮಗ್ಗದ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತೆ, ಎಲ್ಲಾ ತರದ ಸೀರೆಗಳು ಚಕ್ಕಗಳು, ಶಾಲು ವಸ್ತ್ರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ

ವೀರಾಜಪೇಟೆ, ದಕ್ಷಿಣ ಕೊಡಗು.

ಕೆ. ಪಿ. ಚಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—28.

ರೋಲ್ಡ್‌ಗೋಲ್ಡ್ ಇಂಗ್ಲೀಷ್ ಸ್ಟೈಲ್ ಕೈ ಬಳೆಗಳು.

ಇದನ್ನು ಅಮೇರಿಕಾದೇಶದ ಕೆನಡಿಯನ್ ಗೋಲ್ಡ್ ಎಂಬ ಥಳಥಳಿಸುವ ಭಂಗಾರದಿಂದ ತಯಾರಾದದ್ದು ಒಂದಿರುತ್ತೆ ಇದನ್ನು ದೊಡ್ಡವರೂ, ಚಿಕ್ಕವರೂ ಉಪಯೋಗಿಸಬಹುದು ಇದರ ಬಣ್ಣ ಹೋಗದು ಹೆಂಗಸರು ಇದನ್ನು ಕೈಯಲ್ಲಿ ಹಾಕಿಕೊಂಡರೆ ಬೇರೆ ಯಾವ ಆಭರಣಗಳೂ ಬೇಡಲ್ಲ ಒಂದು ಜೊತೆಯಿದ್ದರೆ ಒಂದು ಕುಟುಂಬದವರೆಲ್ಲಾ ಉಪಯೋಗಿಸಬಹುದು ಇದು ರಿಗೆ ಬಹು ಮುದ್ದಾದ ಆಭರಣ. ಜೊತೆ 1ಕ್ಕೆ ರೂ. 2–8–0

ಇಮಿಟೇಷನ್ [illegible]ದ ಪೆಂಡೋಲೆಗಳು.

ಈ ಪೆಂಡೋಲೆಗಳನ್ನು ಬಹು ಹಸನಾದ ವಜ[illegible]ಗಳನ್ನು ಇಟ್ಟು ಅಪರಂಜಿ ಬಂಗಾರಕ್ಕೆ ಸಮಾನವಾದ ಸೀಮೆಯ ಭಂಗಾರದಿಂದ ಕಟ್ಟಡ ಕಟ್ಟಿರ[illegible]ದರ ಪ್ರಕಾಶವು ಸಾಚಾವಜ್ರದ ಕಲ್ಲುಗಳಿಗೆ ಸರಿಯಾಗಿರುವದು ಇದರ ಬಣ್ಣವು ಕೆಡದಂತೆ ವಿಲಾಯತಿಯಲ್ಲಿ ಎಲೆಕ್ಟ್ರಿಕ್ ಪವರಿನಿಂದ ಅಪರಂಜಿ ಬಂಗಾರದ ಗಿಲೀಟು ಕೊಟ್ಟಿರುವದು. ಇದನ್ನು ನೋಡಿದವರು ನಿಜವಾದ ಓಲೆ ಎಂದೇ ಹೇಳುವರು ಈಗಿನ ಕಾಲದಲ್ಲಿ ಶ್ರೀಮಂತರೂ, ಜಮೀನ್‌ದಾರರೂ ಮುಂತಾದವರು ಬಹಳವಾಗಿ ಇವನ್ನೇ ಉಪಯೋಗಿಸುತ್ತಿರುವರು

ಕ್ರಯ 1ಕ್ಕೆ 7 ಕಲ್ಲಿನ ಬಿಳಿಯ ಓಲೆ ಜೊತೆ ರೂ 3–0–0

„ „ ಕೆಂಪು ಕಲ್ಲಿನ „ „ 3–8–0

ಚಂದ್ರಹಾರ.



ಇದನ್ನು ಚಿಕ್ಕವರೂ ದೊಡ್ಡವರೂ ಉಪಯೋಗಿಸುವಂತೆ ಅಚ್ಚುಬೆಳ್ಳಿಯಿಂದ ತಯಾರಿಸಿ ಗಿಲೀಟು ಮಾಡಿದೆ ಇದನ್ನು ಪ್ರತಿಯೊಬ್ಬ ಸ್ತ್ರೀಯರೂ ಧರಿಸಿಕೊಳ್ಳಬಹುದು ನೋಡಲು ರದ ಹಾಗೇ ಇರುವದು. ಬಣ್ಣಕ್ಕೆ 3 ವರ್ಷ ಗ್ಯಾರಂಟಿ

3 ಎಳೆ ಸರಕ್ಕೆ ರೂ. 3–4–0

4 „ „ 4–0–0

5 „ „ 5–4–0

ವಿಳಾಸ — ಬ್ರಿಟಿಷ್ ಟ್ರೇಡಿಂಗ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ 1223 ಮದರಾಸ.

52–42

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15 16% ಆದರೆ ಇದು ಮ ಬಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಗೋಳದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಬತ್ತ, ಕಬ್ಬು, ತೆಂಗು, ಅಡಿಕೆ, ಮಾವು ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಇತರ ಗೊಬ್ಬರ ಮತ್ತು ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟ್ಯಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ಸೋರೆಕ್ಕ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100 200 ರಾತ್ತಲ್ ಸಾಕಾಗುವದು ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ' ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು

52–19

CHILEAN NITRATE COMMITTEE,
Post Box 469, CALCUTTA.

ಕರ್ಣಾಟಕ ಮಗ್ನೀಷಿಯ ಕಂಪೆನಿ

ಚಳಿಜ್ವರ, ಮಲೇರಿಯ ಜ್ವರ ಇನ್‌ಫ್ಲುಯೆಂಝ ಆದಿಯ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦–೧೪–೦

ಟಪ್ಪಾಲು ಚಾರ್ಜು ಬೇರೆ

ಡಜನ್ ಬಾಟ್ಲಿಗಳಿಗೆ ಟಪ್ಪಾಲುವೆಚ್ಚ ಸಹ ರು. ೯–೩–೦

ಏಜಂಟರು ಬೇಕು, ಕೊಡಗಿನ ಸಕ್ಕಿಲ್ಯಾಸ್ಪತ್ರೆಗಳು ತಮ್ಮ ಸ್ಮಾರಕ ಮೂರು ಜನ ವೈದ್ಯರ ಪ್ರಮಾಣಗಳ ಹೆಸರನ್ನು ತಿಳಿಸಿದಲ್ಲಿ ಆದರ ಪ್ರಾಟೆಂಗ್ ಪೇಪರು, ಪ್ರಕಟಿ

12–6 ಕರ್ಣಾಟಕ ಬ್ರದರ್ಸ್

ಗಿರಗಾಂವ, ಮುಂಬಾಯಿ.

ನೌಕರಿ ಖರಾರು ಫಾರಮುಗಳು

1920ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡು ಕೊಳ್ಳಬಹುದು

ತಾ. 24–6–'26 ಮೇನೇಜರ್,

ಮಡಿಕೇರಿ. ಕೊಡಗು" ಆಫೀಸು

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮೆ. ಬಿ. ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಕಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ ಐ ಕಿಟ್ಟಿರ ಅಪ್ಪಯ್ಯನವರು

ಮೂರ್ನಾಡು—ಕಪ.ಆಯರ್ ಸ್ಟೋರಿನಲ್ಲಿ ಮೆ ಮಡೆಯಂಡ ದೇವಯ್ಯನವರು.

ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು

ಮೆ. ಪೊನ್ನಚಂಡ ಮುದ್ದಪ್ಪನವರು

ಗೋಣಿಕೊಪ್ಪಲು—ಮೆ ಬಮ್ಮಡ ಮಾದಪ್ಪನವರು

ಮಡಿಕೇರಿ—ಮೆ ಜಿ ಪೂವಯ್ಯನವರು

ಅಮ್ಮತ್ತಿ ಸಿದ್ದಾಪುರ—ಮೆ ಎರಂಡ ಮಾದಪ್ಪನವರು

ಮತ್ತು ವೀರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರು

ಮಡಿಕೇರಿ ಸುಂಟಿಕೊಪ್ಪನಾಡು—ಮೆ. ಬಲ್ಲಚಂಡ ಬೆಳ್ಳಿಯಪ್ಪನವರು.

ಶ್ರೀಮಂಗಲನಾಡು—ಇಟ್ಟಿರ ಚಂಗಪ್ಪನವರು

ಅಲ್ಲದೆ ಈ ಸಮ್ಮಂಧ ಮೆ. ಚಂಗಾಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲಿ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಮೊಬಲಗು ಕೊಡಬೇಕಾಗಿ ಕೋರಿಕೆ

"ಕೊಡಗು" ಲಿಮಿಟೆಡ್. ಮೇನೇಜರ್,

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

ರಿಜಿಸ್ಟರ್ಡ ನಂಬರು ಎಮ್–೮–೧೦

ಶಿಕ್ಷೇನ ಧೂತದಯಯಾ ವಿದ್ಯಾ ನೀತಿ ಶ್ರಯುಕ್ತ ತಾಃ || ಐಕ್ಯಮತ್ಯೇಲಕಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸನ್ ೧೯೨೬ನೇ ಇಸವಿ ಅಕ್ಟೋಬರಾರೀಕು ೧೫ನೇ ಶುಕ್ರವಾರ [ಸಂಚಿಕೆ ೧೯

SPENCER & CO., LTD.

MERCARA & POLIBETTA.

ESTATE TOOLS DEPARTMENT.

Yate's hammer headed mamooties	4 lbs- Rs 30/ 4 1/2 lbs- Rs. 33/	5 lbs- Rs 36/-Doz.
Digging forks 4 prongs	.	Rs 48/ Doz.
Mamooty forks 4 prongs	. .	Rs 39/ Doz
Felling axes — Each	. .. ..	Rs. 3/ & 3/4/
Planting bars— Each	. . . ..	,, 3/12/
Weeding forks — Each	.. .. ..	,, 1/12/
Garden trowels	. ..	,, 1/12/

GET IT AT SPENCERS- The ouse for all requisites

52—39

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಸ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಕೊಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಎಂದು ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಪರ್ಯಂತರವಾದಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ 67½
ಕ್ಲುಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಒಸಾಸುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ಸ್ಪಷ್ಟವಾಗುತ್ತದೆ

1923ರಲ್ಲಿ—ರೂ	1,74,00,000
1924	,,	2,37,00,000
1925	,,	2,96,00,000

ಇದನ್ನು ದಿನದಿನಕ್ಕೂ ಅಭಿವೃದ್ಧಿಯಾಗುತಲೇ ಇದೆ ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸಮಯ.

ಬೇಕಾದ ವಿವರಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು.

ಎಲ್ ಆರ್. ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸಕ್ರೆಟೆರಿ.

ಮನೋಲ್ಲಾಸಿನಿ ತೈಲ.

ತಲೆನೋವು ತಲೆ ತಿರುಗುವುದು ತಲೆಯಿಂ ಕಣ್ಣುಗಳಿಂದ ನೀರು ಸೋರುವುದು ನಿದ್ರೆಯಿಲ್ಲದಿರುವಿಕೆ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳನ್ನೆಲ್ಲ ನಿಶ್ಚಿತ ಗುಣವಾಗುತ್ತವೆ ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ಡಜನ್ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ.— ಇದು ಪ್ರಮೇಹ- ಮೂತ್ರಕೃಚ್ಛ್ರ ಮೂತ್ರ ಹನಿಹನಿಯಾಗಿ ಬೀಳುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಬಿಟ್ಟುಬಿಟ್ಟು ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲ 1, 3, 6ಕ್ಕೆ ರೂ 1—4—0, 3—8—0, 6—12—0.

ರೋಮನಾಶಿನಿ.— ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ಗಲ್ಲಿಗೆ 6 ಅಣೆ, 3 ಡಬ್ಬಿಗಳಿಗೆ ದಜನಿಗೆ 3-8-0

ಶಕ್ತಿ ಯ ಮಲೇರಿಯ ದಕ್ಕೆ.—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿದರೂ ಗುಣವಾಗದಿರುವ ಮಲೆಜ್ವರ, ದಿನಬಿಟ್ಟು 3–4 ದಿವಸಕ್ಕೊಂದುಸಾರಿ ಬರುವ ಜ್ವರ ನಡುಗಿ ಬರುವ ಜ್ವರ, ಚಳಿ ಜ್ವರಗಳು ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ. 4—0—0, 6ಕ್ಕೆ ರೂ 7—0—0.

ಅಂಚೆ ಖರ್ಚು ಬೇರೆ.

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

43

ಸತ್ಯಮೇವ ಜಯತೇ.
(ಗುಣವಾಗದಿದ್ದರೆ ಹಣ ವಾಪಸ)
ದಾಕ್ಟರ್ ಪಿಸ್ಟಿಕ ಕಾಪೋರ್ಲ್ಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಶೀಘ್ರ ಸ್ಖಲನ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವವು ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ, (ಬಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು ಪಿತ್ತದ ಭಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಆಶ್ಚರ್ಯ ಗುಣವಾಗಿ ದೇಹಕ್ಕೆ ನವೀನತ್ವವೂ ಕಾಂತಿಯೂ ರಕ್ತಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಟ್ಟಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ ತೈಲ**ವನ್ನು ಉಪಯೋಗಿಸಿದರೆ ಉತ್ತಮ ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦

ಪ್ರಮೇಹನಿವಾರಣ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೀವು ಹಳದಿಯಂತ ಹೋಗಿದಕ್ಕೆ ಕೀವು, ಉರಿ ವಗೈರೆ ಆದಿಯಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೩—೮—೦ ಟ ಖ ಬೇರೆ ಇನುವಾತ ನವಶ್ರಿಕೆ ಔಷಧಿ ಸಂಗದ

ವಂದಾಣ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು.

ವಿಳಾಸ —
ವೈದ್ಯ ಜಿ ಎಲ್ ಜೋಶಿ ಮತು ಕಂಪೆನಿ.
38 ನಂ 6. ಪೋಸ್ಟ್ ಒಸವಾ, ಉತ್ತರ ಕಾರವಾ

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY 3
Telegraphic Address —"SHOOTER" Bombay.

[52—7] Please write for Reduced net: prices list for 1926.

"ಕೊಡಗು"

ಸ ೧೯೨೬ನೇ ಇಸವಿ ಅಕ್ಟೋಬರ್ ತಾ. ೧೫ನೇ ಶುಕ್ರವಾರ

ಮದ್ರಾಸು ಅಧಿಪತ್ಯದಲ್ಲಿ ನಿಷಾ ಸೇವನೆ.

ಮದ್ರಾಸು ಅಧಿಪತ್ಯದಲ್ಲಿ ಸಿಷಾಸೇವನೆಯನ್ನು ಹೇಗೆ ಕಡಿಮೆ ಮಾಡಬಹುದೆಂಬುದನ್ನು ಕಸಿಶಿವಮಾಡುವ ಬಗ್ಗೆ ಒಂದು ಕಮಿಟಿ ನೇಮಕವಾಗಬೇಕೆಂತ 1921 ರಲ್ಲಿ ಮದ್ರಾಸು ಕೌನ್ಸಿಲಿನಲ್ಲಿ ತೀರ್ಮಾನವಾದಂತೆ ನೇಮಿಸಲ್ಪಟ್ಟ ಕಮಿಟಿಯ ರಿಪೋರ್ಟಿನ ಮೇಲೆ ಅಲ್ಲಿಯ ಸರ್ಕಾರದ ತೀರ್ಮಾನವು ಈ ವಾರ ಪ್ರಕಟವಾಗಿದೆ. ಈ ಕಮಿಟಿಯ ಮೆಂಬರುಗಳಾಗಿ ನೇಮಿಸಲ್ಪಟ್ಟವರು ನಿಷಾನಿಷೇಧವನ್ನು ಪೂರ್ತಿ ನಂಬಿದವರಂತೆ ಕಾಣುವುದಿಲ್ಲ. ಇಂಥಾ ಕಮಿಟಿಯ ಮೆಂಬರುಗಳನ್ನು ನೇಮಿಸುವ ಹಕ್ಕು ಸರ್ಕಾರದವರಿಗೆ ಇರುವುದರಿಂದ ಸರ್ಕಾರದ ಅಭಿಪ್ರಾಯಗಳಲ್ಲಿ ಸಹಾನುಭೂತಿ ಇರುವವರನ್ನೇ ಕಮಿಟಿಗೆ ನೇಮಿಸಿಕೊಳ್ಳುವುದು ಸ್ವಭಾವಿಕವಾಗಿದೆ. ಆದುದರಿಂದ ಸ್ವಾಭಾವಿಕವಾಗಿ ಇಂಥಾ ಕಮಿಟಿಗಳ ಸಿಫಾರಸ್ಸುಗಳು ಸರ್ಕಾರದವರ ತತ್ವವನ್ನು ಅವಲಂಬಿಸಿಯೇ ಇರುವುದಾಗಿವೆ. ಮದ್ರಾಸು ಸರ್ಕಾರದಿಂದ ನೇಮಕವಾದ ಎಕ್ಸೈಸ್ ಕಮಿಟಿಯ ವರದಿಯೇ ಇದಕ್ಕೆ ಒಂದು ಉದಾಹರಣೆಯಾಗಿದೆ. ಆದಕಾರಣ ಇಂಥಾ ಕಮಿಟಿಯ ಮೆಂಬರುಗಳನ್ನು ಆರಿಸುವ ಹಕ್ಕನ್ನು ಪ್ರಜಾಪ್ರತಿನಿಧಿಗಳ ಬಹುಮತವಿರುವ ನ್ಯಾಯವಿಧಾಯಕ ಸಭೆಗಳಿಗೆ ಕೊಡುವುದು ಯುಕ್ತವಾಗಿದೆ.

ನಿಷಾಸೇವನೆಯನ್ನು ಸಂಪೂರ್ಣವಾಗಿ ಮದ್ರಾಸು ಪ್ರಾಂತ್ಯದಲ್ಲಿ ನಿಲ್ಲಿಸುವುದು ತತ್ಕಾಲದಲ್ಲಿ ಸಾಧ್ಯವಿಲ್ಲವಂತ ಕೊಟ್ಟ ಕಮಿಟಿಯವರ ಅಭಿಪ್ರಾಯವನ್ನು ಅಲ್ಲಿಯ ಸರ್ಕಾರವು ಒಪ್ಪಿಕೊಂಡಿದೆ. ಈ ಕಮಿಟಿಯ ವರದಿಯ ಮೇಲೆ ಅಲ್ಲಿಯ ಕೌನ್ಸಿಲಿನಲ್ಲಿ ಚರ್ಚೆಯಾದ ಠರಾವುಗಳ ಪೈಕಿ "20 ವರ್ಷಗಳಲ್ಲಿ ನಿಷಾಸೇವನೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ಉದ್ದೇಶದಿಂದ ನಿಷಾಪದಾರ್ಥಗಳ ಮಾರಾಟದ ಅಂಗಡಿಗಳನ್ನು ಕಡಿಮೆ ಮಾಡಬೇಕು ಮತ್ತು [illegible] ಸರ್ಕಾರದ ಉತ್ಪತ್ತಿಯನ್ನು [illegible] ಕುಡಿಯುವದನ್ನು [illegible] ಕಳೆದ [illegible] ತಿಂಗಳಲ್ಲಿ [illegible] ಇದಕ್ಕೆ ಪರವಾಗಿ 39 ಜನರೂ, ವಿರೋಧವಾಗಿ 6 [illegible] ಇದರಿಂದ ಈ ಕಮಿಟಿಯ ಸಿಫಾರಸ್ಸು ಪ್ರಜಾಮತಕ್ಕೆ ಒಪ್ಪಿಗೆಯಾಗಿಲ್ಲವೆಂತ ಸ್ಪಷ್ಟವಾಗಿದೆ. ಮದ್ರಾಸು ಸರ್ಕಾರದವರು ನಿಷಾಸೇವನೆಯನ್ನು ಹಿಂದೂಸ್ಥಾನದಲ್ಲಿ ಸಂಪೂರ್ಣವಾಗಿ ನಿಲ್ಲಿಸಬೇಕೆಂಬ ತತ್ವಕ್ಕೆ ಒಪ್ಪುತ್ತಾರಾದರೂ ಈ ತತ್ವವನ್ನು ಸಾಧಿಸಲಿಕ್ಕೆ ಕಾಲಮಿತಿಯನ್ನು ಇಡಬಾರದೆಂತ ಅವರ ಅಭಿಪ್ರಾಯವಾಗಿದೆ. ಕಾಲಮಿತಿಯಿಡದೆ ಇಂಥಾ ತತ್ವಗಳನ್ನು ಒಪ್ಪುವದರಿಂದ ಪ್ರಯೋಜನವೇನೂ ಇಲ್ಲ.

ಸ್ಥಳೀಯ ಜನರ ಅಭಿಪ್ರಾಯದಂತೆ [illegible] ಅಂಗಡಿಗಳನ್ನು [illegible] ತೆರೆಯುವುದೂ, ಅಂಗಡಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದೂ, ಇವನ್ನು ಮಾರುವ ಗಂಟೆಗಳನ್ನು ಕಡಿಮೆ ಮಾಡುವುದು, ಇವುಗಳ ಕ್ರಯವನ್ನು ಹೆಚ್ಚಿಸುವುದೂ [illegible] ನಿಷಾಸೇವನೆಯನ್ನು ನಿಲ್ಲಿಸುವ ಉಪಾಯಗಳಾಗಿರುವುದನ್ನು ಕಮಿಟಿಯವರು ಸಿಫಾರಸ್ಸು ಮಾಡದೆ ಇರುವುದು ವಿಷಾದಕರ. ಸರ್ಕಾರಕ್ಕೆ ಬೇಕಾದ ಅಭಿಪ್ರಾಯಗಳು ಇವೇ ಆಗಿರುವುದರಿಂದ ಇವುಗಳನ್ನು ಮದ್ರಾಸು ಸರ್ಕಾರವು ಒಪ್ಪಿಕೊಂಡಿದೆ.

[illegible] ಇದು [illegible] ಒಂದು [illegible] ಕಮಿಟಿ [illegible] ಕೆಲವು ಅಭಿಪ್ರಾಯಗಳನ್ನು [illegible] ಅಂಗಡಿಗಳನ್ನು [illegible] ಮಾಡಲು ಲೈಸೆನ್ಸಿಂಗ್ ಬೋರ್ಡುಗಳು ನೇಮಕವಾಗಬೇಕೆಂತ [illegible] ಅಂಗಡಿಗಳ ವಿಷಯ ಈ ಬೋರ್ಡಿಗೆ [illegible] ಹಕ್ಕನ್ನು [illegible] ನಮ್ಮ [illegible] ಕಡಿಕಿಲ್ಲವೆಂದು [illegible] ಕೆಲಸರಿವ್ಯಾರೆ. ಈ ಅಭಿಪ್ರಾಯವು ಉಚಿತವಲ್ಲ. ಸಾರಾಯಿ ಸುಲಭ ಕ್ರಯದಲ್ಲಿ ಗ್ರಾಮಗಳಲ್ಲಿ ದೊರೆಯುವುದರಿಂದ ಗ್ರಾಮಸ್ಥರೂ, ಕೂಲಿಕಾರರೂ ಇದನ್ನು ಆಗಾಗ್ಗೆ ಸೇವಿಸಿ ಎಷ್ಟು ನೋವನುಭವಿಸುತ್ತಾರೆಂದೂ, ಅದರಿಂದ ಎಷ್ಟು ಅಶಕ್ತರಾಗುತ್ತಾರೆಂದೂ, ಎಷ್ಟು ಬಡವರಾಗುತ್ತಾರೆಂದೂ ಯಾರಿಗೂ ತಿಳಿಯದ್ದಲ್ಲ.

ಈ ಕಮಿಟಿಯ ಸಿಫಾರಸ್ಸುಗಳಲ್ಲಿ ಒಂದು ಮಾತ್ರ ಸ್ವಲ್ಪ ಪ್ರಯೋಜನವಾದದ್ದಾಗಿ ಕಾಣುತ್ತದೆ. ಮೇಲೆ ಸೂಚಿಸಿದ ಲೈಸೆನ್ಸಿಂಗ್ ಬೋರ್ಡುಗಳನ್ನು ನೇಮಿಸಬೇಕೆಂಬುದೇ ಇದು. ಸಾರಾಯಿ, ಅಫೀಮು, ಗಾಂಜ ಮತ್ತು ಪರದೇಶಿ ನಿಷಾಪದಾರ್ಥಗಳ ಅಂಗಡಿಗಳ ಸಂಖ್ಯೆ ಮತ್ತು ಸ್ಥಳವನ್ನು ನಿರ್ಣಯಿಸುವ ಈ ಬೋರ್ಡಿಗೆ ಇರುವ ಹಕ್ಕು. ಆದರೆ ಸಂಖ್ಯೆಯನ್ನು ಕಡಿಮೆಮಾಡುವ ವಿಷಯದಲ್ಲಿ ಇದಕ್ಕೆ ಪೂರ್ತಿ ಸ್ವತಂತ್ರ್ಯವಿರುವುದಿಲ್ಲ. ಮೊದಲನೇ ಸಾರಿ ನೇಮಕವಾಗುವ ಬೋರ್ಡಿನವರು ಈಗ ಇರುವ ಅಂಗಡಿಗಳ ಸಂಖ್ಯೆಯನ್ನು ಶೇಕಡ [illegible]ಕ್ಕಿಂತ ಹೆಚ್ಚು ಇಳಿಸಕೂಡದು. ಆ ನಂತರ ನೇಮಕವಾಗುವ ಬೋರ್ಡು ಶೇಕಡ 3 ಕ್ಕಿಂತ ಇಳಿಸಕೂಡದು. ಕೆಳಗೆ ತೋರಿಸುವ ಮೇರೆ ಈ ಬೋರ್ಡಿನ ಮೆಂಬರುಗಳ ಬಹುಮತವು ಸರ್ಕಾರದ ಪರ ನಿಲ್ಲುವ ಸಂಭವವು ಹೆಚ್ಚಾಗಿರುವ ಇದರ ಸ್ವತಂತ್ರ್ಯವನ್ನು ಈ ರೀತಿ ನಿರ್ಬಂಧಿಸಿರುವುದರಿಂದ ಬೋರ್ಡಿನಿಂದ ಹೆಚ್ಚು ಪ್ರಯೋಜನವಾಗಲಾರದೆಂಬುದು ಸ್ಪಷ್ಟವಾಗುತ್ತದೆ.

ಈ ಬೋರ್ಡಿನವರು ನವಂಬರು ತಿಂಗಳಲ್ಲಿ ಮೀಟಿಂಗು ಮಾಡಿ ಅವರ ಸ್ವಾಧೀನಕ್ಕೆ ಒಳಪಟ್ಟ ಅಂಗಡಿಗಳ ಸಂಖ್ಯೆಯನ್ನೂ, ಸ್ಥಳಗಳನ್ನೂ ನಿರ್ಣಯಿಸಿ ಜನರ ಆಕ್ಷೇಪಣೆ ಕೇಳಲು ಪ್ರಕಟಿಸುತ್ತಾರೆ. ಹಾಗೆ ಪ್ರಕಟಿಸಿದ 21 ದಿವಸಗಳೊಳಗೆ ಆಕ್ಷೇಪಣೆಗಳಿದ್ದ ಜನರು ಈ ಬೋರ್ಡಿಗೆ ಬರೆದುಕೊಳ್ಳಬೇಕು. ಕೂಡಲೇ ಮೀಟಿಂಗು ಮಾಡಿ ಅಂಥಾ ಆಕ್ಷೇಪಣೆಗಳ ಮೇಲೆ ಈ ಬೋರ್ಡಿನ ತೀರ್ಮಾನ ಕೊಡಬೇಕು. ಆಯಾ ಪ್ರಾಂತ್ಯದ ಕಲೆಕ್ಟರು ಆ ತೀರ್ಮಾನದ ಮೇಲೆ ಎಕ್ಸೈಸ್ ಕಮಿಷನರಿಗೆ ಸಿಫಾರಸು ಮಾಡಬಹುದು. ಬೋರ್ಡಿನ ತೀರ್ಮಾನವನ್ನು ಮಂಜೂರು ಮಾಡುವ ಅಧಿಕಾರವು ಎಕ್ಸೈಸ್ ಕಮಿಷನರಿಗೆ ಇದೆ. ಇದರಿಂದಲೂ ಬೋರ್ಡಿನ ಅಧಿಕಾರವು ಎಷ್ಟು ಕಡಿಮೆಯಾಗಿದೆಯೆಂದು ತಿಳಿಯುವುದು.

ಈ ಬೋರ್ಡಿನ ಮೆಂಬರುಗಳು ಯಾರೆಂದರೆ—1. ರೆವೆನ್ಯು ಡಿವಿಜನ್ ಆಫೀಸರು, 2. ಪೋಲೀಸು ಡಿಪ್ಯುಟಿಸುಪರಿಂಟೆಂಡೆಂಟರು, 3 ಎಕ್ಸೈಸ್ ಇನ್ಸ್‌ಪೆಕ್ಟರು, 4. ಬೋರ್ಡಿನ ಸರಹದ್ದಿನೊಳಗಿರುವ ಪ್ರತಿಯೊಂದು ಮುನ್ಸಿಪಾಲಿಟಿಯಿಂದ ಒಬ್ಬ ಚುನಾಯಿತ ಮೆಂಬರು, 5 ತಾಲ್ಲೋಕು ಬೋರ್ಡಿನಿಂದ ಇಬ್ಬರು ಚುನಾಯಿತ ಮೆಂಬರುಗಳು, 6 ಲೈಸೆನ್ಸ್‌ದಾರರ ಪ್ರತಿನಿಧಿ ಒಬ್ಬ, 7. ಅಲ್ಲಿ ನಿಷಾನಿಷೇಧ ಸಂಘಗಳಿದ್ದರೆ ಅವುಗಳ ಚುನಾಯಿತ ಪ್ರತಿನಿಧಿ ಒಬ್ಬ, ಅಂಥಾ ಸಂಘಗಳಿಲ್ಲದಿದ್ದರೆ ಅಲ್ಲಿಯ ಕಲೆಕ್ಟರು ನೇಮಿಸುವವನೊಬ್ಬ 8 ಕೂಲಿಕಾರರ ಸಂಘಗಳಿದ್ದರೆ ಅವುಗಳ ಚುನಾಯಿತ ಮೆಂಬರು ಒಬ್ಬ, ಅಂಥಾ ಸಂಘಗಳಿಲ್ಲದಿದ್ದರೆ ಕಲೆಕ್ಟರು ನೇಮಿಸುವ ಮೆಂಬರೊಬ್ಬ. ಈ ಒಂಭತ್ತು ಮೆಂಬರುಗಳ ಪೈಕಿ ಸಾಧಾರಣವಾಗಿ 6 ಜನರು ಸರ್ಕಾರದ ಪರವಾಗಿಯೇ ಇರುತ್ತಾರೆಂತ ಹೇಳಬಹುದು. ಯಾಕಂದರೆ, ಸಾಧಾರಣವಾಗಿ ನಿಷಾನಿಷೇಧದ ಸಂಘಗಳು ಮತ್ತು ಕೂಲಿಕಾರರ ಸಂಘಗಳು ಎಲ್ಲಾ ಕಡೆಯಲ್ಲಿ ಇರುವುದಿಲ್ಲವಾದದರಿಂದ ಇವುಗಳ ಪರವಾಗಿ ಕಲೆಕ್ಟರಿಂದ ನೇಮಿಸಲ್ಪಡುವ ಮೆಂಬರುಗಳು ಸರ್ಕಾರದ ಪರವಾಗಿಯೇ ನಿಲ್ಲುವುದರಲ್ಲಿ ಸಂಶಯವಿಲ್ಲ. ಲೈಸೆನ್ಸುದಾರರ ಪ್ರತಿನಿಧಿಯೂ ಸರ್ಕಾರದ ಕಡೆಯೇ ನಿಲ್ಲುವನು.

ಇಂಥಾ ಬೋರ್ಡಿನಲ್ಲಿ ಪ್ರಜಾಪ್ರತಿನಿಧಿಗಳ ಸಂಖ್ಯೆ ಹೆಚ್ಚಿದ್ದು, ಸಾರಾಯಿ ಮುಂತಾದವುಗಳನ್ನು ಮಾರುವ ಅಂಗಡಿಗಳ ಸಂಖ್ಯೆಯನ್ನೂ, ಸ್ಥಳವನ್ನೂ ನಿರ್ಣಯಿಸುವ ಪೂರ್ಣ ಸ್ವತಂತ್ರ್ಯ ಈ ಬೋರ್ಡಿಗೆ ಕೊಟ್ಟರೆ ನಿಜವಾಗಿಯೂ ಇಂಥಾ ಬೋರ್ಡಿನಿಂದ ಹೆಚ್ಚು ಪ್ರಯೋಜನವಾದೀತು. ನಮ್ಮ ದೇಶದ ಸರ್ಕಾರವು ಬೇರೆ ಪ್ರಾಂತ್ಯಗಳಂತೆ ಎಕ್ಸೈಸ್ ಕಮಿಟಿಯನ್ನು ನೇಮಿಸಿ, ಠರಾವಿನ ಜನರ ಪ್ರತಿನಿಧಿಗಳ ಬಹುಮತವೂ, ಪೂರ್ಣ ಸ್ವತಂತ್ರ್ಯವೂ ಇರುವ ಲೈಸೆನ್ಸ್ ಬೋರ್ಡನ್ನು ನೇಮಕ ಮಾಡಿ [illegible] ವರ್ಷದಲ್ಲೇ ನಿಷಾಸೇವನೆಯನ್ನು ಕಡಿಮೆ ಮಾಡಲು ಪ್ರಯತ್ನಿಸಬೇಕಾಗಿ ಆಶಿಸುತ್ತೇವೆ.

ಪ್ರ ಕ ಟ ಣೆ.

ಶ್ರೀಮಂಗಲನಾಡಿನ ಡಿಸ್ಟ್ರಿಕ್ಟ್‌ಬೋರ್ಡ್ [illegible]

ಬಿಟ್ಟಿಯಂಡ ಉತ್ತಯ್ಯನ ವಿಜ್ಞಾಪನೆ

ಈ ನಾಡಿನ ಪರವಾಗಿ ಚುನಾಯಿಸಬೇಕಾದ ಡಿ. ಬೋರ್ಡ್ ಮೆಂಬರುತನಕ್ಕೆ ನಾನು ಒಬ್ಬ ಉಮೇದ್ವಾರನಾಗಿದ್ದೇನೆ. ಜನರ ಕಷ್ಟ ಸುಖಗಳನ್ನು ತಿಳಿದು [illegible] ಕಾರ್ಯಗಳಲ್ಲಿ ಅಭಿರುಚಿ ವಹಿಸಿಕೊಂಡು ಕೆಲಸ [illegible] ನನಗೆ ಶಕ್ತಿಯೂ, ಸಮಯವೂ, ಅನುಭವವೂ, ಮತ [illegible]ವನ್ನು ಇರುವುದರಿಂದ ಶೀಘ್ರದಲ್ಲಿಯೇ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲಿ ತಮ್ಮ ಓಟನ್ನು ನನ್ನ ಪರವಾಗಿ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

ತೆರಾಲು., ತಮ್ಮ ವಿಧೇಯ

ತಾ 12—10—26, ಬಿಟ್ಟಿಯಂಡ ಉತ್ತಯ್ಯ

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್.

ನೋಟೀಸ್.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲ್, ಪೊನ್ನಂಪೇಟೆ ಶ್ರೀಮಂಗಲ ಒಮ್ಮ ಕಾನ್‌ಸ್ಟಿಟ್ಯುಯನ್ಸಿಯ ಒಬ್ಬರು [illegible] ಇಸವಿ ನವಂಬರು 2ನೇ ತಾರೀಕು ಮುಂಚೆ ಒಂದು [illegible]ವನ್ನು ಚುನಾವಣೆ ಮಾಡಬೇಕಾಗಿ ಕೊಡಗು ಚೀಫ್ ಕಮಿಷನರ್ ಸಾಹೇಬರವರು ಇಚ್ಛಿಸಿರುವ [illegible]ವುದರಿಂದ ಸದರಿ ಓಟರರ ಸಮುದಾಯದ [illegible] ಸರನಾದ ದಕ್ಷಿಣ ಕೊಡಗು ತಾಲ್ಲೋಕು ಸುಭೇದಾರರಾಗಿರುವ [illegible] ನಾನು ಈ ಕೆಳಗಿನ ಸಾರ್ವಜನಿಕ ನೋಟೀಸನ್ನು ಈ ಮೂಲಕ ಕೊಟ್ಟಿರುತ್ತೇನೆ.

ಸಾರ್ವಜನಿಕ ನೋಟೀಸು.

(1) ಚುನಾವಣೆಯಾಗಬೇಕಾದ ಜನರ ಸಂಖ್ಯೆ ಒಂದು ಆಗಿರುತ್ತದೆ.

(2) ನಿಮಾರಸು ಪತ್ರಗಳು ಈ ಕೆಳಗೆ ದಸ್ಕತ್ತು ಮಾಡಿದವರಿಗೆ ದಕ್ಷಿಣ ಕೊಡಗು ತಾಲ್ಲೋಕು ಆಫೀಸಿನಲ್ಲಿ ಒಪ್ಪಿಸಬೇಕು. ಅವುಗಳು 1926ನೇ ಇಸವಿ ಅಕ್ಟೋಬರ್ [illegible]ನೇ ತಾರೀಖಿನಲ್ಲಿ ಯಾ ಅದಕ್ಕೆ ಮುಂಚೆ ಪೂರ್ವಾಹ್ನ [illegible] ಗಂಟೆಯಿಂದ ಅಪರಾಹ್ನ 3 ಗಂಟೆಯೊಳಗೆ ಹಾಜರು ಮಾಡಲ್ಪಡತಕ್ಕದ್ದು.

(3) ನಿಮಾರಸು ಪತ್ರದ ಫಾರಮುಗಳನ್ನು ಮೇಲೆ ಹೇಳಲ್ಪಟ್ಟ ಆಫೀಸಿನಲ್ಲಿ 1926ನೇ ಇಸವಿ ಅಕ್ಟೋಬರ್ ತಾರೀಖಿಗೆ ಮೊದಲು ಯಾವ ದಿವಸದಲ್ಲೇ ಆಗಲಿ ಪೂರ್ವಾಹ್ನ 11 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ಪಡೆಯಬಹುದು.

(4) ನಿಮಾರಸು ಪತ್ರಗಳು ದಕ್ಷಿಣ ಕೊಡಗು ತಾಲ್ಲೋಕು ಆಫೀಸಿನಲ್ಲಿ 1926ನೇ ಅಕ್ಟೋಬರ್ 20 ನೇ ತಾರೀಖು ಬೆಳಿಗ್ಗೆ 11 ಗಂಟೆಗೆ ಪರಿಶೋಧನ ಮಾಡಲ್ಪಡುವುವು.

(5) ಚುನಾವಣೆಯು ವಿಷಯವಾಗಿ ಪೋಲಿಂಗ್ ಸಂಗತಿಯಲ್ಲಿ ಪೋಲು 1926ನೇ ಇಸವಿ ಅಕ್ಟೋಬರ್ [illegible] ತಾರೀಖಿನಲ್ಲಿ ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನದ ವರೆಗೆ ಮತ್ತು ಅಪರಾಹ್ನ 1 ಗಂಟೆಯಿಂದ ಸಾಯಂಕಾಲ 6 ಗಂಟೆಗೆ ಜರುಗತಕ್ಕದ್ದು.

(6) ಯಾವ ಓಟರನಾದರೂ ಚುನಾಯಿಸುವ ಪಟ್ಟಿಯಲ್ಲಿ ಯಾವ ಪೋಲಿಂಗ್ ಪ್ರದೇಶದೊಳಗೆ ಆತನ ಹೆಸರು ಕಂಡು ಬರುತ್ತದೋ ಆ ಪ್ರದೇಶದ ಹೊರಗೆ ಆತನನ್ನು ಓಟು ಕೊಡುವುದಕ್ಕೆ ಬಿಡುವುದಿಲ್ಲ. ಪ್ರತಿಯೊಂದು ಪೋಲಿಂಗ್ ಪ್ರದೇಶದಲ್ಲಿ ಓಟರರು ಓಟು ಕೊಡಬಹುದಾದ ಪೋಲಿಂಗ್ ಸ್ಟೇಷನ್‌ಗಳನ್ನು ಅಲ್ಲಿ ಇರತಕ್ಕ ಪ್ರಿಸೈಡಿಂಗ್ ಆಫೀಸರನ್ನು ಕಾಣಿಸುವ ಒಂದು ಪಟ್ಟಿಯು ಇದಕ್ಕೆ ಲಗತ್ತು ಮಾಡಲ್ಪಟ್ಟಿದೆ.

ಪೋಲಿಂಗ್ ಸ್ಟೇಷನ್‌ಗಳ ಮತ್ತು ಪ್ರಿಸೈಡಿಂಗ್ ಆಫೀಸರ್‌ಗಳ ಪಟ್ಟಿ.

ಪೊನ್ನಂಪೇಟೆ—ಶ್ರೀಮಂಗಲ.

ನಂ	ಪೋಲಿಂಗ್ ಸ್ಟೇಷನಿನ ಹೆಸರು	ಪ್ರಿಸೈಡಿಂಗ್ ಆಫೀಸರನ ಹೆಸರು
	ಭಾಗ 1—ರಿಜಿಸ್ಟ್ರೇಷನ್ ವೃತ್ತ—ಪೊನ್ನಂಪೇಟೆನಾಡು	
1.	ಪೊನ್ನಂಪೇಟೆನಾಡು ಆಫೀಸು	ಮ ॥ ಬಿ ಉತ್ತಪ್ಪ [illegible] ಕ್ಯಾಡ್, ಪೊನ್ನಂ[illegible]
2.	ಗೋಣಿಕೊಪ್ಪಲು ವೆಸ್ಲೆಯನ್ ಮಿಷನ್ ಸ್ಕೂಲ್	ಮ ಬಿ ಜಿ ನಂಜಪ್ಪ, [illegible] ಪೆಕ್ಟರ್, [illegible]
3	ಅಂಮತಿ ಬಾಸೆ ಬಂಗ್ಲೆ	ಮ ॥ ದೇವಯ್ಯ, [illegible]
	ಭಾಗ 2—ರಿಜಿಸ್ಟ್ರೇಷನ್ ವೃತ್ತ—ಶ್ರೀಮಂಗಲನಾಡು	
1	ಶ್ರೀಮಂಗಲನಾಡು ಆಫೀಸು	ಮ ॥ ನರಸಿಂಹಮೂರ್ತಿ, [illegible] ಕ್ಯಾಡ್, ಶ್ರೀಮಂ[illegible]
2	ಕುಟ್ಟ ಹುಡಿಕೇರಿ ಹುಡಿಗಿಯರ ಶಾಲೆ (ಹಳೆಯ ನಾಡು ಕಚೇರಿ)	ಮ ॥ [illegible] ನಲ್ [illegible]
3	ತೆರಾಲು ಸ್ಕೂಲ್	ಮ ಬಿ ಪಿ ಮಚ್ಚಣ್ಣ, [illegible] ಸಬ್ ಇನ್ಸ್‌ಪೆಕ್ಟರ್, ದಕ್ಷಿಣ [illegible]

ವೀರರಾಜೇಂದ್ರಪೇಟೆ, ಅಕ್ಟೋಬರ್ 9ನೇ ತಾ. 1926ನೇ ಇಸವಿ.

ಕೆ. ರಂಗಯ್ಯ, ರಿಟರ್ನಿಂಗ್ ಆಫೀಸರ್, ಪೊನ್ನಂಪೇಟೆ ಶ್ರೀಮಂಗಲ ಓಟರರ ಸಮುದಾಯ

ಮಹಾತ್ಮಗಾಂಧಿಯವರ ಸ್ವಚರಿತ್ರೆ.

(ತಾ 9—7—26ರ ಸಂಚಿಕೆಯಿಂದ ಮುಂದುವರಿದದ್ದು)

ಒಂದನೆಯ ಭಾಗದಲ್ಲಿ 24ನೆಯ ಪ್ರಕರಣ

(ಇದು ಈಗತಾನೆ ಎಂಗ್ ಇಂಡ್ಯಾ ಪತ್ರಿಕೆಯಲ್ಲಿ ಪ್ರಕಟವಾಗಿದೆ)

1870 ರಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಒಂದು ದೊಡ್ಡ ಪ್ರದರ್ಶನವು ಒದಗಿತು ತತ್ಸಂಬಂಧವಾಗಿ ಅಗಾಧವಾದ ಪ್ರಯತ್ನಗಳು ನಡೆಯುತ್ತಿದ್ದುದನ್ನು ಪತ್ರಿಕೆಯಲ್ಲೋದುತ್ತಿದ್ದೆನು. ಪ್ಯಾರಿಸ್ ಪಟ್ಟಣವನ್ನು ನೋಡಬೇಕೆಂದು ನನಗೆ ಬಹಳ ಆಶೆಯಿದ್ದಿತಾದುದರಿಂದ ಪ್ರದರ್ಶನಕ್ಕೆ ಹೋದಲ್ಲಿ ಎರಡು ಕೆಲಸಗಳೂ ಆಗುವವೆಂದು ಯೋಚಿಸಿದೆನು. ಪ್ರದರ್ಶನದಲ್ಲಿ ಒಂದು ಉನ್ನತವಾದ ಶಿಖರವೇರ್ಪಡಿಸಲ್ಪಟ್ಟಿದ್ದು ಮುಖ್ಯವಾಗಿದ್ದಿತು. ಅದು ಕಬ್ಬಿಣದಿಂದ ನಿರ್ಮಿಸಲ್ಪಟ್ಟಿದ್ದಿತಲ್ಲದೆ ಅದರ ಎತ್ತರವು 1,000 ಅಡಿಯಿದ್ದಿತು. 1,000 ಅಡಿ ಎತ್ತರದಲ್ಲಿ ಯಾವ ಕಟ್ಟಡವೂ ನಿಲ್ಲುವುದಿಲ್ಲವೆಂದು ಅಗೆಲ್ಲರೂ ತಿಳಿದಿದ್ದರು. ಪ್ರದರ್ಶನದಲ್ಲಿ ಇನ್ನೂ ಅನೇಕ ವಿಶೇಷ ಪದಾರ್ಥಗಳಿದ್ದುವು. ಪ್ಯಾರಿಸ್ಸಿನಲ್ಲಿ ಒಂದು ಶಾಖಾಹಾರಭೋಜನಶಾಲೆಯು ಇರುವುದೆಂದು ನಾನು ಪತ್ರಿಕೆಯಲ್ಲಿ ಓದಿದ್ದೆನಾದುದರಿಂದ ಅದರಲ್ಲಿ ಒಂದು ಕೊಠಡಿಯನ್ನೇರ್ಪಡಿಸಿಕೊಂಡೆನು. ನಾನು ಮಾರ್ಗದಲ್ಲೇ ನಡೆದುಕೊಂಡು ಅಲ್ಲಿಗೆ ಹೋಗಿ ನೋಡಿದೆನು. ಆ ನಗರದಲ್ಲಿ 7 ದಿವಸಗಳಿಂದ ಪಾದಚಾರಿಯಾಗಿಯೇ ಸುತ್ತಿದ್ದುದರಿಂದ ಅನೇಕ ಭಾಗಗಳನ್ನು ನೋಡಲು ಅನುಕೂಲವಾಯಿತು. ಪ್ರದರ್ಶನ ಪಟವೂ ವಿವರವನ್ನು ತಿಳಿಸುವ ಪುಸ್ತಕಗಳೂ ನನ್ನ ಬಳಿಯಲ್ಲಿದ್ದುದರಿಂದ ಆಯಾ ದಾರಿಯನ್ನು ಕಂಡುಹಿಡಿಯಲು ಸಾಧ್ಯವಾಗಿದ್ದಿತು. ಆ ಪ್ರದರ್ಶನವು ಬಹಳ ದೊಡ್ಡದು ಮತ್ತು ಅದರಲ್ಲಿ ಅನೇಕ ವಿಧವಾದ ಪದಾರ್ಥಗಳು ಶೇಖರಿಸಲ್ಪಟ್ಟಿದ್ದುವು. ನನಗೆ ಅವುಗಳು ಜ್ಞಾಪಕವಿಲ್ಲವಾದರೂ ಆ ಶಿಖರವು ಮಾತ್ರ ಚನ್ನಾಗಿ ಜ್ಞಾಪಕದಲ್ಲಿದೆ. ಎರಡು ಮೂರು ವೇಳೆ ನಾನು ಆ ಶಿಖರದ ಮೇಲಕ್ಕೆ ಹತ್ತಿದ್ದೆನು. ಮೊದಲನೆಯ ಅಂತಸ್ತಿನಲ್ಲಿ ಭೋಜನಶಾಲೆ ಏರ್ಪಡಿಸಲ್ಪಟ್ಟಿದ್ದಿತು. ಒಂದು ಸಾರಿ ನಾನು ಅಲ್ಲಿ ಊಟಮಾಡಿದೆನು. ಒಂದು ವೇಳೆಗೆ 1 ರೂ ಕೊಡಬೇಕಾಗಿದ್ದಿತಾದರೂ ಊಟವೇನೂ ಅಷ್ಟಾಗಿ ವಿಶೇಷವಾಗಿ ಕಂಡುಬರಲಿಲ್ಲ. ಕೊಟ್ಟ ಹಣವು ಒಂದು ದಂಡವೇ ಆಗಿದ್ದಿತು.

ಪ್ಯಾರಿಸ್ಸಿನಲ್ಲಿ ದೇವಾಲಯಗಳು.

ಅಲ್ಲಿನ ಹಳೇ ದೇವಾಲಯಗಳು ನನಗೆ ಜ್ಞಾಪಕವಿವೆ. ಅವುಗಳ ಭಿನ್ನತ್ವವನ್ನೂ ಪ್ರಶಾಂತವನ್ನೂ ನಾನೆಂದಿಗೂ ಮರೆಯಲಾರೆನು. ಅವುಗಳಲ್ಲಿಯ ಅದ್ಭುತವು ಚಿತ್ರಕೆಲಸವಾಗಿದ್ದಿತು. ಚಿತ್ರವು ಬಹು ರಮ್ಯವಾಗಿರುವುದಲ್ಲದೆ ಒಣ್ಣದಲ್ಲಿ ಬರೆಯಲ್ಪಟ್ಟಿರುವುದು. ಅದಕ್ಕಾಗಿ ಲಕ್ಷಾಂತರ ಧನ ವ್ಯಯವಾಗಿರುತ್ತದೆ. ಅಷ್ಟೊಂದು ಹಣವನ್ನು ವೆಚ್ಚಮಾಡಿದವರು ನಿಜವಾಗಿ ದೈವಭಕ್ತಿಯುಳ್ಳವರೆಂದೇ ನನಗೆ ತೋರಿತು. ಪ್ಯಾರಿಸ್ ಪಟ್ಟಣದಲ್ಲಿಯ ಶೋಕಿ, ತ್ಯಾಗ, ಸ್ವಾತಂತ್ರ್ಯ ಮೊದಲಾದವುಗಳ ವಿಚಾರವಾಗಿ ನಾನು ಬಹಳವಾಗಿ ಓದಿದ್ದೆನು. ಅವು ಪ್ರತಿ ಬೀದಿಯಲ್ಲೂ ಗೋಚರವಾಗುತ್ತಿದ್ದುವಲ್ಲದೆ ಆ ದೇವಾಲಯಗಳಲ್ಲಿ ಮಾತ್ರ ಇತರ ತ್ಯಾಗಗುಣಗಳೇ ಕಾಣುವುದೆಂದು ನನಗೆ ತೋರಿತು. ಪ್ರಜೆಗಳ ಪದ್ಧತಿಯೂ ಬದಲಾಯಿಸಿ ಅವರಿಗೆ ವಿನಯವು ವಿಶೇಷವಾಗಿರುವುದು. ಎಂತಹ ಗದ್ದಲವೂ ಕೇಳುವುದಿಲ್ಲ. ಮೇರಿ ಕಿರಾವಿಗ್ರಹದ ಸನ್ನಿಧಿಯಲ್ಲಿ ಜನಗಳು ಯಾರಾದರೊಬ್ಬರು ಪ್ರಾರ್ಥನೆಯನ್ನು ಮಾಡುತ್ತಲೇ ಇರುವರು. ಆ ವಿಗ್ರಹದ ಇದಿರಿಗೆ ಕುಳಿತವರು ಶಿಲಾವಿಗ್ರಹವನ್ನು ಪ್ರಾರ್ಥಿಸುತ್ತಿರಲಿಲ್ಲವು. ಯಥಾರ್ಥ ಶಕ್ತಿಯುಳ್ಳ ದೇವರನ್ನೇ ಪ್ರಾರ್ಥಿಸುತ್ತಿದ್ದರು. ಅಂತವರು ಭಗವಂತನ ಶಕ್ತಿಯನ್ನು ಸ್ತುತಿಸುತ್ತಿದ್ದರಲ್ಲದೆ ಅವರ [illegible]ಸುತ್ತಿರಲಿಲ್ಲವು. ನನಗೆ ಅದು ಕೊಂಚ ಜ್ಞಾಪಕವಿದೆ.

ಮನುಷ್ಯನ ಅವಿವೇಕವು

ಆ ಶಿಖರಸ್ತಂಭದ ಸಂಕೇತವು ನನಗೆ ಸರಿಯಾಗಿ ಜ್ಞಾಪಕವಿಲ್ಲವು. ಪ್ರದರ್ಶನದ ಬಹಳ ವಿಮರ್ಶೆಯನ್ನು ಓದಿದೆನು. ಸ್ತೋತ್ರಮಾಡುವವುಗಳನ್ನೂ, ನಿರಸನವಾದುವುಗಳನ್ನೂ ಓದಲು ಸಾಧ್ಯವಾಯಿತು. ಅವುಗಳನ್ನು ನಿರಸನಮಾಡಿದವರಲ್ಲಿ ಟಾಲ್‌ಸ್ಟಾಯಿಯವರು ಮುಖ್ಯರು. "ಮನುಷ್ಯನ ಜ್ಞಾನಕ್ಕೆ ಮಾತ್ರವಾಗಿ ಅವಿವೇಕಕ್ಕಾಗಿಯೇ ಈ ಸ್ತಂಭವು ಪ್ರಯೋಜನವು. ಪದಾರ್ಥಗಳಲ್ಲೆಲ್ಲಾ ಹೊಗೆಸೊಪ್ಪು ಅಧಮಾಧಮವು. ಅದರ ಕಾರ್ಯವನ್ನು ಕುಡಿದವನು ಹುಚ್ಚನಾಗುವನು. ಅದನ್ನು ಸೇದುವವನ ಬಾಯಿ ಹೊಗೆಯಿಂದ ಅವರಿಗೆ ಕೊಂಡಲ್ಲದೆ ಅವನು ಗಾಳಿಮನೆಯನ್ನೂ ಭಾವಪ್ರಪಂಚವನ್ನೂ ನಿರ್ಮಿಸಲಾರಂಭಿಸುವನು. ಆ ಶಿಖರವೂ ಅಂತಹ ಮೂರ್ಖತನದ ಉಂಟುಮಾಡುವುದು" ಎಂದು ಟಾಲ್‌ಸ್ಟಾಯಿಯವರು ಬರೆದಿರುವರು. ಆ ಸ್ತಂಭದಲ್ಲಿ ನನಗೆ ಅಂತಹ ಸೌಂದರ್ಯವೇನೂ ಕಂಡುಬರಲಿಲ್ಲವು. ಆದರಿಂದ ಪ್ರದರ್ಶನಕ್ಕಾದರೂ ಯಾವ ಸೌಂದರ್ಯವೂ ಉಂಟಾಗಲಿಲ್ಲ. ಅದು ನೂತನವಾಗಿಯೂ, ಅದ್ಭುತಾಕೃತಿಯುಳ್ಳುದರಿಂದಲೇ ಅದನ್ನು ನೋಡಲು ಸಾವಿರಾರು ಜನರು ಬರುತ್ತಿದ್ದರು. ಅದು ಪ್ರದರ್ಶನದಲ್ಲಿ ಒಂದು ಆಟವಾಗಿದ್ದಿತು. ನಮಗೆ ಯಾವುದರ ಮೇಲಾದರೂ ಪ್ರೇಮಸಂಬಂಧವಾದ ಆಕರ್ಷ ಹುಟ್ಟಿತೆಂದರೆ ನಾವು ಕೂಡ ಚಿಕ್ಕಮಕ್ಕಳ ಸಮಾನರಾಗುವೆವು. ಅದಕ್ಕೆ ಈ ಸ್ತಂಭವೇ ನಿದರ್ಶನ ಎಂದು ಮಹಾತ್ಮರು ಬರೆದಿರುವರು.

ಪ್ರಕಟಣೆ.

ಶ್ರೀಮಂಗಲನಾಡು ಓಟರುಗಳಲ್ಲಿ ಕಿರಿಯಮಾಡ ನಂಜಪ್ಪನ ವಿನಂತಿ.

ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರು ಪದಕ್ಕೆ ನಾನು ಒಬ್ಬ ಉಮೇದುವಾರನಾಗಿ ನಿಂತಿರುತ್ತೇನೆ ನೀವೆಲ್ಲರೂ ನಿಮ್ಮ ಓಟನ್ನು ನನಗೆ ಕೊಟ್ಟು ನಮ್ಮ ನಾಡಿನ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಕೆಲಸಮಾಡಲು ಅವಕಾಶ ಮಾಡಿಕೊಡಬೇಕಾಗಿ ನಿಮಗಳನ್ನು ಅತಿವಿನಯದಿಂದ ಕೋರುತ್ತೇನೆ

ಮಡಿಕೇರಿ,   ನಾಡಿನ ಹಿತಚಿಂತಕ,

9—10—26   ಕಿರಿಯಮಾಡ ಎಸ್. ನಂಜಪ್ಪ.

ಸ್ವಾಮಿ ವಿವೇಕಾನಂದರವರ ಭಾಷಣ.

('ಪ್ರೇಮ' ಎಂಬ ತ್ರೈಮಾಸಿಕ ಪತ್ರಿಕೆಯಿಂದ ಎತ್ತಿ ಬರೆದದ್ದು)

ಫೆಬ್ರವರಿ ೨೭, ೧೮೯೫.

(ಕಳೆದ ವಾರದಿಂದ ಮುಂದುವರಿದದ್ದು)

ಬೇರೆ ಬೇರೆ ಪರ್ವತಗಳಿಂದ ಹೊರಟು ಬೇರೆ ಬೇರೆ ಸ್ಥಳಗಳಲ್ಲಿ ಹರಿದು ಹೋಗುವ ಎಲ್ಲಾ ನದಿಗಳೂ ಒಂದೇ ಸಮುದ್ರಕ್ಕೆ ಸೇರುವಂತೆಯೇ ಬೇರೆ ಬೇರೆ ಧರ್ಮತತ್ವಗಳ ಆಧಾರದಿಂದ ಉತ್ಪನ್ನವಾಗಿ ವಿವಿಧ ಮಾರ್ಗಗಳನ್ನು ತೋರಿಸುವಂತಿರುವವರ ಎಲ್ಲ ಮತಗಳ ಉದ್ದೇಶವೂ ಕೊನೆಗೆ ನನ್ನನ್ನೇ ಸೇರುವುದಿರುತ್ತದೆ ಎಂದು ದೇವರೇ ನಮ್ಮವರಿಗೆ ಹೇಳಿರುವ ಈ ವಾಕ್ಯವನ್ನು ಹಿಂದಿನ ಪ್ರತಿಯೊಬ್ಬನೂ ತನ್ನ ನಿತ್ಯ ಪೂಜೆಯ ವೇಳೆಯಲ್ಲಿ ಉಚ್ಚರಿಸುತ್ತಿರುತ್ತಾನೆ. ಈ ಎಲ್ಲ ದೃಷ್ಟಿಗಳಿಂದ ವಿಚಾರಮಾಡಿ ನೋಡಲು ನಮ್ಮಲ್ಲಿ ಮತದ್ವೇಷಗಳಿಗೆ ಅವಕಾಶವೇ ಕಂಡುಬರುವದಿಲ್ಲ. ನಮ್ಮ ಪ್ರಾಚೀನರಾದ ತತ್ವಜ್ಞಾನಿಗಳೇ ಇಂತಹವು. ಇಂತಹ ಸಮರಸಭಾವನೆಯ ಧರ್ಮವನ್ನು ಪ್ರಚಾರಮಾಡಿ ಆಚರಣೆಯಲ್ಲಿ ತರುತ್ತ ಬಂದವರಾಗಿ ನಾವು ಇವರೆಲ್ಲರಿಗೂ ಬಹಳ ಋಣಿಗಳೂ ಕೃತಜ್ಞರೂ ಆಗಿರುತ್ತೇವೆ. ನಮ್ಮಲ್ಲಿ ಈ ಎಲ್ಲರಿಗೂ ಬಹಳ ಮರ್ಯಾದೆಯುಂಟು.

ಹಿಂದುಗಳು ಬಹಳ ಭಕ್ತಿಯಿಂದ ವಿಗ್ರಹಗಳನ್ನು ಆರಾಧಿಸುತ್ತಾರೆ. ಆದರೆ ಬಾಬಲೋನಿಯನ್ ಮತ್ತು ರೋಮನ್ ಜನಗಳ ವಿಷಯವಾಗಿ ನೀವು ಕೇಳಿರುವಂತೆ ಮಾತ್ರ ಅಲ್ಲ. ಈ ಹಿಂದುಗಳು ವಿಗ್ರಹವನ್ನು ಪೂಜೆಮಾಡಿ ಅದರ ಮುಂದೆ ಕೂತು ಕಣ್ಣುಮುಚ್ಚಿಕೊಂಡು ತಾನು ಅವರ ಮಹಾತ್ಮನ ಸ್ವರೂಪನೇ ಇದ್ದೇನೆಂಬ ಭಾವನೆಯಿಂದ ವಿಚಾರಮಾಡಲಾರಂಭಿಸುತ್ತಾರೆ. "ನನಗೆ ಹುಟ್ಟು ಸಾವುಗಳಿಲ್ಲ, ತಂದೆ ತಾಯಿಗಳಿಲ್ಲ ಮತ್ತು ದೇಶ ಕಾಲ ಪರಿಸ್ಥಿತಿಗಳ ಬಂಧನಗಳ್ಯಾವುವೂ ಇಲ್ಲ. ನಾನು ಸಚ್ಚಿದಾನಂದ ಸ್ವರೂಪನೇ ಆಗಿದ್ದೇನೆ, ನನಗೂ ಆ ಪರಮಾತ್ಮನಿಗೂ ಭೇದವಿಲ್ಲ. ಗ್ರಂಥಗಳು ನನ್ನನ್ನು ತಿಳಿಸಲಾರವು. ತೀರ್ಥಕ್ಷೇತ್ರಾದಿಗಳೂ ನನ್ನ ನಿಜಾಂಶವನ್ನು ತಿಳಿಸಲಾರವು. ನಾನು ಸರ್ವಾಂತರ್ಯಾಮಿಯು, ಸದಾನಂದನು, ನಾನೇ ಆ ಪರಮಾತ್ಮನು" ಎಂದು ಉಚ್ಚರಿಸುತ್ತ ಮತ್ತೆ ಈ ರೀತಿ ಹೇಳುತ್ತಾನೆ— 'ದೇವಾ ನಾನು ಅಶಕ್ತನಿದ್ದೇನೆ. ನನ್ನನ್ನು ನನ್ನಲ್ಲೇ ಲೀನಗೊಳಿಸು," ಎಂದು ಹೇಳಿ ಆ ವಿಗ್ರಹದ ಸಾಂಕೇತಿಕ ಗುಣಗಳನ್ನು ಒಂದೊಂದನ್ನಾಗಿ ನೆನೆಸಿಕೊಂಡು ಧ್ಯಾನಿಸುತ್ತಾ ಹೋಗುತ್ತಾನೆ.

ಧರ್ಮವು ಜ್ಞಾನದ ಮೇಲೆ ಅವಲಂಬಿಸಿಲ್ಲ. ಜೀವದ ಜೀವಾಳವೇ ಅದಾಗಿರುತ್ತದೆ. ಆ ಧರ್ಮವೇ ದೇವರು. ಸಾಮಾನ್ಯ ಪುಸ್ತಕ ಜ್ಞಾನದಿಂದ ಅದನ್ನು ತಿಳಿಯಲಸಾಧ್ಯ ಮತ್ತು ಎಂಥ ವಾಕ್ಚಾತುರ್ಯಕ್ಕೂ ಅದು ನಿಲುಕುವದಿಲ್ಲ. ಪ್ರತಿಯೊಂದು ಅಂಗುಲದಷ್ಟನ್ನೂ ಬಿಡದೆ ಆತ್ಮನಿಗೆ ತಂದಾಗಲೇ ಅದಕ್ಕೆ ಆ ಶುಭನಾಮವು ಯೋಗ್ಯವಾದದ್ದಾಗುತ್ತದೆ. ಈಗ ನಿಮ್ಮಲ್ಲಿ ಬಹಳ ವಿದ್ಯಾವಂತನಾದವನೊಬ್ಬನನ್ನು ಶಕ್ತಿಯನ್ನು ಶಕ್ತಿಯಂತೆಯೇ ಭಾವಿಸಲು ಹೇಳೋಣ. ಅವನು ಆ ರೀತಿ ಭಾವಿಸಲಾರನು. ನೀವೂ ಮನಸ್ಸಿನಲ್ಲಿ ಶಕ್ತಿಯನ್ನು ಕಲ್ಪಿಸಲಾರಿರಿ. ಅವನೂ ಕಲ್ಪಿಸಲಾರನು. ಅವರೆ ಯೋಗ್ಯ ಶಿಕ್ಷಣವಿಲ್ಲದೆ ಶಕ್ತಿಯ ವಿಚಾರವಾಗಿ ಯೋಚನೆಮಾಡುವುದು ಅಸಾಧ್ಯ. ನೀವು ಪರಮಾರ್ಥ ಜ್ಞಾನದ ವಿಷಯವಾಗಿ ಬೇಕಾದಷ್ಟು ಕಲಿತಿರಬಹುದು. ದೊಡ್ಡ ಪಂಡಿತರುಗಳೂ ಆಗಿರಬಹುದು. ಆದರೆ ಹಿಂದೂ ಬಾಲಕನು 'ನಿನ್ನ ಧರ್ಮಕ್ಕೂ, ಅವುಗಳಿಗೂ ಯಾವ ಸಂಬಂಧವೂ ಇಲ್ಲ" ಎಂದು ಹೇಳಬಹುದಾಗಿದೆ. ನಿನ್ನ ಜೀವದಲ್ಲಿ ಶಕ್ತಿಯನ್ನು ಶಕ್ತಿಯಂತೆಯೇ ಕಲ್ಪಿಸಬಲ್ಲೆಯಾ? ಆಗಲೇ ಎಲ್ಲ ಸಂಶಯಗಳೂ ನಿವಾರಣೆಯಾಗುತ್ತವೆ. ಅಂತರಂಗದ ದೋಷಗಳೆಲ್ಲವೂ ಸರಿಹೋಗುತ್ತವೆ. ಆಗ ಯಾವವಿಧ ಭಯವೂ ಇರಲಾರದು. ಜೀವಾತ್ಮ ಪರಮಾತ್ಮರ ಐಕ್ಯತೆ ಸಿದ್ಧವಾಗಲೇ ಎಲ್ಲ ಸಂಶಯಗಳೂ ಪತ್ರದಿಂದೂ ತೊಂದರೆಕೊಡದಂತೆ ಒಮ್ಮೆಲೇ ಅಡಗಿ ಹೋಗುತ್ತವೆ.

ತತ್ವಾಯದಿಂದ ಜನಗಳಿಗೆ ಧರ್ಮವನ್ನು ಬೋಧಿಸಿಲ್ಲವೆಂದು ಹೇಳಿಕೊಳ್ಳುತ್ತೀರಿ. ಆದರೆ ಈ ರೀತಿ ಎಷ್ಟು ಜನಗಳನ್ನು ನಿಮ್ಮ ಧರ್ಮಕ್ಕೆ ತಕ್ಕೊಂಡಿದ್ದೀರಿ? ಈಗ ಅವರೆಲ್ಲಾ ಎಲ್ಲಿ? ಇಡೀ ಪ್ರಪಂಚದ 1/6 ಜನಗಳು ಚೀನಾದೇಶದ ನಿವಾಸಿಗಳಿದ್ದಾರೆ. ಇವರೆಲ್ಲರೂ ಬೌದ್ಧರು. ಅಲ್ಲದೆ ಜಪಾನ್, ಟಿಬೇಟ್, ರಷ್ಯಾ, ಸೈಬೀರಿಯ, ಬರ್ಮ, ಸಯಾಂ ಮೊದಲಾದ ಅನೇಕಾನೇಕ ದೇಶಗಳ ಜನಗಳೂ ಇದ್ದಾರೆ. ಅವರಂತಿರಲಿ, ಆದರೆ ಈ ಕ್ರೈಸ್ತಧರ್ಮವು ಅವುಗಳಿಂದಲೇ ಉತ್ಪನ್ನವಾದದ್ದಾಗಿದೆ ಬೇರಲ್ಲಿಂದಲೂ ಬರಲಿಲ್ಲ. ಮತ್ತು ಇದು ಹೇಗೆ ಬಂದಿತೆಂಬುದನ್ನು ನೋಡೋಣ. ರಕ್ತ ಪಾತಮಾಡದೆ ಈ ಧರ್ಮವು ಮುಂದೆ ಬಂದಿತೆಂತಲೋ? ನೀವು ಇಷ್ಟೆಲ್ಲ ಹೊಗಳಿಕೊಳ್ಳುತ್ತೀರಿ. ಆದರೆ ಹೇಳಿರಿ, ನಿಮ್ಮ ಧರ್ಮವು ಕತ್ತಿಯ ಸಹಾಯವಿಲ್ಲದೆ ಮುಂದೆ ಬಂದಿರುವ ಒಂದು ಪ್ರಸಂಗವನ್ನು? ಒಂದೇ ಒಂದು ಪ್ರಸಂಗವನ್ನು ಎಲ್ಲಾದರೂ ತೋರಿಸಿಕೊಡಿರಿ! ಎರಡನೆಯದನ್ನು ನಾನು ಕೇಳುವುದಿಲ್ಲ. 'ನನ್ನ ಪ್ರತಿಸ್ಪರ್ಧಿಗಳನ್ನು ನಾಶಮಾಡು' ಎಂದು ಹೇಳಿ ತಲೆಬಾಗಿಸಿ ಭಕ್ತಿಯಿಂದ ನಮಸ್ಕರಿಸಿ ಪ್ರಾರ್ಥಿಸುತ್ತಾನೆ. ಆದರೆ ಈ ರೀತಿಯಾದ ಪ್ರಾರ್ಥನೆಯು ಅದರ ಮೇಲೆ ಮತ್ತೆ ದೇವರನ್ನು ಕುರಿತು 'ದೇವರೇ ಅಪ್ರಾಮಾಣಿಕತನದಿಂದ ಮಾಡುವ ಈ ನಿನ್ನ ಪೂಜೆಗಾಗಿ ನನ್ನನ್ನು ಕ್ಷಮಿಸು" ಎಂದು ಹೇಳಿ ಪೂಜೆಯನ್ನು ಮುಗಿಸುತ್ತಾನೆ.

ಹಿಂದುಗಳು ಯಾವಾಗಲೂ ತಮ್ಮ ವಿಗ್ರಹಗಳನ್ನು ಪೂಜಿಸುತ್ತಾರೆಂದು ಕೇಳುತ್ತಿರುತ್ತೀರಿ. ಆದರೆ ಇವರ ಇಂತಹ ಭಕ್ತಿಯ ವಿಷಯಕ್ಕೇನು ಹೇಳುತ್ತೀರಿ? ಈ ಪಶ್ಚಿಮ ದೇಶಗಳಿಗೆ ಬಂದಿರುವವರಲ್ಲಿ ನಾನೇ ಮೊದಲನೆಯವನು. ಹಿಂದೂ ಸನ್ಯಾಸಿಯು ಸಮುದ್ರವನ್ನು ದಾಟುವುದು ಪ್ರಪಂಚದ ಚರಿತ್ರೆಯಲ್ಲೆಲ್ಲಾ ಇದೇ ಮೊದಲನೇ ಸಾರಿ. ಇಂಥಲ್ಲಿ ನಮ್ಮ ಮೇಲಿನ ನಿಮ್ಮ ವ್ಯಾಖ್ಯಾನಗಳನ್ನು ಕೇಳುತ್ತಿರುತ್ತೇನೆ ಮತ್ತು ಜನರು ಈ ರೀತಿ ಆಡುವ ಎಲ್ಲ ನಿಂದೆಗಳೂ ನನಗೆ ಗೊತ್ತಾಗುತ್ತವೆ. ಆದರೆ ನಮ್ಮ ಜನಾಂಗದವರು ನಿಮ್ಮನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರು? ಅವರು ನಿಮ್ಮನ್ನು ನೋಡಿ ಅರ್ಧ ನಗೆಯಿಂದ ಹೀಗೆ ಹೇಳುತ್ತಾರೆ, "ಇವರೆಲ್ಲಾ ಮಕ್ಕಳು. ಭೌತಿಕ ಶಾಸ್ತ್ರಾದಿಗಳಲ್ಲಿ ಇವರು ಬಹಳ ಪಾರಂಗತರಿರಬಹುದು. ದೊಡ್ಡ ದೊಡ್ಡ ಸಮಾಜಗಳನ್ನು ನಿರ್ಮಿಸುವ ಶಕ್ತಿಯೂ ಇವರಿಗಿರಬಹುದು, ಆದರೆ ಧರ್ಮವಿಚಾರದಲ್ಲಿ ಇವರಿನ್ನೂ ಮಕ್ಕಳೇ" ಎಂದು. ನಮ್ಮವರ ಸ್ವಭಾವ ಗುಣವು ಈ ತರಹದ್ದು.

ಒಂದು ವಿಷಯವನ್ನು ನಿಮಗೆ ಸ್ಪಷ್ಟವಾಗಿ ಹೇಳುತ್ತೇನೆ. ನಿಮ್ಮನ್ನು ದ್ವೇಷ ಬುದ್ಧಿಯಿಂದ ದೂಷಿಸಲು ಹೀಗೆ ಹೇಳುವೆನೆಂದು ಮಾತ್ರ ತಿಳಿದುಕೊಳ್ಳಬಾರದು. ನೀವು ನಮ್ಮ ಜನಗಳಿಗೆ ಅನ್ನ, ಬಟ್ಟೆ, ವಿದ್ಯೆ, ಬುದ್ಧಿಗಳನ್ನೆಲ್ಲಾ ಕೊಟ್ಟು ಸತ್ಕರಿಸುತ್ತೇವೆನ್ನುತ್ತೀರಿ! ವಿಶೇಷವಾಗಿ ನಮ್ಮ ದೇಶಕ್ಕೆ ಬಂದು ನಮ್ಮ ಹಿರಿಯರ, ನಮ್ಮ ಧರ್ಮ, ಮತ್ತು ನಮ್ಮ ಆಚಾರ, ವ್ಯವಹಾರಗಳನ್ನೆಲ್ಲಾ ಅಪಹಾಸ್ಯಮಾಡಿ ದೂಷಿಸುವುದಕ್ಕಾಗಿ! ಇವರು ನಮ್ಮ ಗುಡಿಗಳ ಮುಂದೆ ಹಾದುಹೋಗುತ್ತ ಅಲ್ಲಿರುವವರನ್ನು ಕಂಡು, "ಎಲೈ ವಿಗ್ರಹಾರಾಧಕರೇ, ನಿಮಗೆ ನರಕವಾಸವು ಎಂದಿಗೂ ತಪ್ಪಿದ್ದಲ್ಲ" ಎನ್ನುತ್ತಿರುವರು. ಆದರೆ ಇವರು ಇದೇ ರೀತಿ ಹಿಂದೂಸ್ಥಾನದ ಮುಸಲ್ಮಾನರಿಗೆ ಮಾಡಲಾರರು. ಏಕೆಂದರೆ ಒಮ್ಮೆಲೇ ಕತ್ತಿಯು ಹೊರಬೀಳುತ್ತದೆ. ಹಿಂದುವಾದರೋ ಇಂಥ ವಿಷಯಗಳಲ್ಲಿ ಬಹು ಸಾಧುವು. "ಮೂರ್ಖರು ಮಾತನಾಡಿಕೊಳ್ಳಲಿ" ಎಂದುಕೊಂಡು ಸುಮ್ಮನೆ ಮುಂದೆ ಹೋಗಿಬಿಡುವನು. ಇದೇ ಅವನ ಸ್ವಭಾವ. ಅಪಹಾಸ್ಯ ಮಾಡಲೂ ಮತ್ತು ದ್ವೇಷದಿಂದ ದೂಷಿಸಲೂ, ಜನಗಳನ್ನು ತಮ್ಮ ಕಡೆ ಮಾಡುವ ನೀವಾದರೂ ಎಂತಹ ಸ್ವಭಾವದವರೆಂಬುದನ್ನು ವಿಚಾರಮಾಡಿರಿ, ನೋಡೋಣ? ಎಷ್ಟು ಒಳ್ಳೆಯ ಉದ್ದೇಶದಿಂದಲೇ ಆಗಲಿ, ನಿಮ್ಮಲ್ಲಿಯ ಸ್ವಲ್ಪ ಮಾತ್ರ ದೋಷವನ್ನು ತೋರಿಸಿಕೊಡುವವನು, ಕಲಿಸುವವರು ಮತ್ತು ಬಯ್ಯುವವರು, ಬೇರೆ ಮತ್ತಾವ ವಿಚಾರವನ್ನಾದರೂ ಹೇಳಲಿ, ಆದರೆ ಈ ವಿಚಾರದಲ್ಲಿ ಮಾತ್ರ ನಮ್ಮ ತಂಟೆಗೆ ಬರಬೇಡಿರಿ, ನಾವು ಸ್ವತಂತ್ರ ಜೀವಿಗಳು" ಎಂದು ಆರ್ಭಟಿಸುತ್ತ ಹಿಂದಕ್ಕೆ ಸರಿಯುತ್ತೀರಿ.

ನೀವು ಬೇಕಾದಂತೆ ಮಾಡಿಕೊಳ್ಳಿರಿ. ಆದರೆ ನಾವು ಮಾತ್ರ ಈಗಿನ ಸ್ಥಿತಿಯಲ್ಲೇ ಪೂರ್ಣ ಸಂತೋಷಪಡುತ್ತಿದ್ದೇವೆ. "ಜಗದವೆಲ್ಲವೂ ನರಕಮಯವಾಗಿದ್ದು ಮನುಷ್ಯನು ಮಾತ್ರ ನೀಚನಾಗಿರುತ್ತಾನೆ" ಎಂಬಂಥ ಅಸಂಬಂಧ ಶಬ್ದಗಳನ್ನು ನಮ್ಮ ಮಕ್ಕಳಿಗೆ ನಾವು ಕಲಿಸುವುದಿಲ್ಲ. ಹಿಂದೂ [illegible] ಯಾರೇ ಬಂದರೂ ಕೂಡ ಸಮುದ್ರದ ಮಣ್ಣನ್ನಾಗ್ಲಿ ನಿಮ್ಮ ದೇಶದ ಮೇಲೆ [illegible] ಕೂಡ ನೀವು ನಮಗೆ [illegible] [illegible] ಅವನ ಆಗಬಾರದು. [illegible] ನಮ್ಮ [illegible] [illegible] ಎಂದು? ಏಕೆ? ಜನಗಳು ಸ್ವಾತಂತ್ರ್ಯವನ್ನು [illegible] [illegible] ಅವಲಂಬಿಸಿ [illegible] [illegible] ನಾವು ಎಲ್ಲಾದರೂ [illegible] ಧರ್ಮ [illegible] ಗಳ ನಿಮ್ಮವರಿಗೆ [illegible] [illegible] — ನಿಮ್ಮ ಧರ್ಮದೊಂದಿಗೆ ನೀವು ನಮ್ಮ [illegible] ಇದ್ದುಬಿಡಿರಿ. ಆದರೆ ನಮ್ಮ ಧರ್ಮದ ವಿಚಾರದಲ್ಲಿ ಮಾತ್ರ ಪ್ರವೇಶಿಸಬೇಡಿರಿ' ಎಂದೂ ನೀವು ಹ

ತ್ತಾಯದಿಂದ ಒಸಗಳಿಗೆ ಧರ್ಮವನ್ನು ಬೋಧಿಸಿಲ್ಲವೆಂದು ಹೇಳಿಕೊಳ್ಳುತ್ತೀರಿ. (ಈ ಪೇರದ ಒಕ್ಕೆಯು ಕೈ ತಪ್ಪಿನಿಂದ ಮೂರನೇ ಪುಟದ ಮೂರನೇ ಕಲಮಿನ ಶುರುವಿನಲ್ಲಿ ಬಿದ್ದಿದೆ ಅದನ್ನು ಈ ಪೇರಕ್ಕೆ ಸೇರಿಸಿ ಓದಿಕೊಳ್ಳತಕ್ಕದ್ದು ಸಂ)
(ಮುಂದುವರಿಯುವುದು.)

ಪ್ರಕಟಣೆ.

ಶ್ರೀಮಂಗಲನಾಡು ಓಟರುಗಳಲ್ಲಿ ಚೆಪ್ಪುಡಿರ ಐ. ಸುಬ್ಬೆಯ್ಯನ ವಿಜ್ಞಾಪನೆ.

ಮಹನೀಯರೇ,

ಬೇಗನೆ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲಿ ಈ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ನಾನು ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ನಿಮ್ಮ ಪ್ರತಿನಿಧಿಯಾಗಿ ಎಷ್ಟರ ಮಟ್ಟಿಗೆ ಕೆಲಸ ಮಾಡಲು ಶಕ್ತನಾಗಿರುತ್ತೇನೆಂದು ನಿಮಗೆಲ್ಲರಿಗೂ ತಿಳಿಯದು. ನಾನು ಹುಟ್ಟಿದಂದಿನಿಂದ ಆ ನಾಡಿನ ಮಧ್ಯದಲ್ಲಿಯೇ ಇದ್ದುಕೊಂಡು ಇಲ್ಲಿಯವರ ಸ್ಥಿತಿಗತಿಗಳನ್ನು ಚೆನ್ನಾಗಿ ಅರಿತವನಾದ್ದರಿಂದ ನಿಮ್ಮ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಹೋರಾಡಲು ನನಗೆ ಹೆಚ್ಚು ಅನುಕೂಲವಿದೆ. ನೀವೆಲ್ಲರೂ ನನ್ನ ಇಷ್ಟಮಿತ್ರರಾಗಿರುವದರಿಂದ ನಿಮ್ಮಲ್ಲಿ ನನಗಿರುವ ವಿಶ್ವಾಸದ ಮೇಲೆ ನಾನು ಚುನಾವಣೆಗೆ ನಿಂತದ್ದಾಗಿದೆ. ಆದದರಿಂದ ಬೇರೆ ಉಮೇದುವಾರರುಗಳಂತೆ ಎಲ್ಲರಿಗೂ ಹಸ್ತಪತ್ರಿಕೆಗಳನ್ನು ಹಂಚುವ ಅವಶ್ಯಕತೆ ಇಲ್ಲವೆಂದು ನಾನು ನಂಬಿದ್ದೇನೆ.

ನೀವು ನಿಮಗಿರುವ ಒಂದು ಓಟನ್ನು ನನಗೆ ಕೊಟ್ಟು ಡಿಸ್ಟ್ರಿಕ್ಟ್‌ಬೋರ್ಡಿಗೆ ನನ್ನನ್ನು ನಿಮ್ಮ ಪ್ರತಿನಿಧಿಯಾಗಿ ಕಳುಹಿಸಬೇಕಾಗಿ ಅತಿ ವಿನಯದಿಂದ ಕೋರುತ್ತೇನೆ.

ಕೋತೇರು, ನಿಮ್ಮ ಸೇವಕ

ತಾ 12—10—26 ಚೆಪ್ಪುಡಿರ ಐ. ಸುಬ್ಬೆಯ್ಯ.

ನೋಟೀಸ್.

1926ನೇ ಇಸವಿ ಅಕ್ಟೋಬರ್ ತಾರೀಕು 20ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆಯಲ್ಲಿ ವಿಕ್ಟೋರಿಯಾ ರೀಡಿಂಗ್ ರೂಮು [illegible] ಮಹಾಸಭೆಯು (ಜನರಲ್ ಮೀಟಿಂಗ) [illegible] ಎಂದು ಈ ಮೂಲಕ ತಿಳಿಸಲಾಗಿರುತ್ತೆ

ಮೀಟಿಂಗಿನಲ್ಲಿ ಈ ಕೆಳಗೆ ಕಂಡ ವಿಷಯಗಳು [illegible]

1 1925—1926 ನೇ ವರ್ಷದ [illegible]

[illegible]

2 [illegible]

3 1925—1926ನೇ ವರ್ಷಕ್ಕೆ [illegible]

4 1922—1923 ಮತ್ತು 1923—1924 ಈ ಎರಡು ವರ್ಷಗಳ [illegible] ಬಾಕಿಯಾದ [illegible] ವಿಷಯ.

5 ಡೈರೆಕ್ಟರುಗಳ ಚುನಾವಣೆ

ಕ ಅಪ್ಪಯ್ಯ
(ಕಾರ್ಯದರ್ಶಿ)

ವಿನಂತಿ.

ಮಹನೀಯರೆ,

ನಾನು ಈ ತಾರೀಕು 7ನೇ ಗುರುವಾರ ದಿನ ಸಾಯಂಕಾಲ ಗಾಡಿಯಲ್ಲಿ ಬರುವಾಗ್ಗೆ ಕೊಡ್ಲಿಪೇಟೆಯಿಂದ ರಾತ್ರಿ 11 ಗಂಟೆಯ ಸಮಯಕ್ಕೆ ಸಾಯಂಕಾಲ ಹೊರಟು ಶನಿವಾರಸಂತೆ ಜಂಕ್ಷನ್ ರೋಡ್ ಹತ್ತಿರ ಬರುವಾಗ 1½ ಗಂಟೆಯಾಯಿತು. ಅಲ್ಲಿ ಗಾಡಿ ಎತ್ತುಗಳು ಸ್ವಲ್ಪ ತೊಂದರೆ ಕೊಟ್ಟದ್ದರಿಂದ ಇಳಿಯಬೇಕಾಯಿತು. ಇದನ್ನೆಲ್ಲಾ ಸುಧಾರಿಸಿಕೊಂಡು ಸರಿ 2 ಗಂಟೆಗೆ ಗಾಡಿಗೆ ಹತ್ತಿದೆನು. ಹಾಗೆಯೇ ಹೋಗುತ್ತಾ ಸೋಮವಾರಪೇಟೆಗೆ 3 ಮೈಲಿ ದೂರದಲ್ಲಿ (ಗೌಡಳ್ಳಿ ಬಳಿ) ಎಚ್ಚರವಾದನಂತರ ಜೇಬು ನೋಡಿದವಾಗ್ಯೆ ನನ್ನ ನೋಟು ಕೇಸ್ ಎಲ್ಲೊ ಹೋಗಿತ್ತು. ಸದರಿ ನೋಟ್ ಕೇಸಿನಲ್ಲಿ ಇದ್ದ ನಂಬರ P L/76—12198ರ 100/- ರೂಪಾಯಿಯ ನೋಟ್ ಒಂದು ಮತ್ತು ಒಂದ 5/ ರೂ ನೋಟು ಸಹ ಕೂಡಿ ಒಟ್ಟಾರ 105/ ರೂಪಾಯಿಗಳನ್ನು ಗಾಡಿ ಎತ್ತುಗಳ ಉಪದ್ರದಿಂದ ನಾನು ಕಳಕೊಂಡದಾಯಿತು. ಇದು ಸಿಕ್ಕಿದ ಯಾ ಬೇರಯವರ ಕೈಯಲ್ಲಿ ಕಂಡ ಮಹನೀಯರು ನನಗೆ ತಿಳಿಸಿದರೆ ಅವರಿಗೆ 10 ರೂ ಇನಾಮು ಕೊಡುತ್ತೇನೆ.

ಯಂ ಬಿ ಕರುಂಬೈಯ್ಯ,
ರಕ್ಷಿದ್ದಿ ಎಸ್ಟೇಟ್
ಹಾನ್ಬಾಲ್ ಪೋಸ್ಟ್,
ಮೈಸೂರು ಪ್ರಾಂತ್ಯ

ಪ್ರಕಟಣೆ.

ಸ್ಟ್ರೆಚರ್ ಡ್ರಿಲ್ ಮತ್ತು ಅಂಬ್ಯುಲನ್ಸಿನಲ್ಲಿ ತರಬೇತಾಗಿ ಪ್ರಥಮ ಚಿಕಿತ್ಸೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸರ್ಟಿಫಿಕೇಟು ಪಡೆದಿರುವ ಪ್ರಬುದ್ಧರ ಪಂಥದಾಟವನ್ನು ಬೆಂಗಳೂರು ಪ್ರಾವಿನ್ಶಿಯಲ್ ಸಂಟರಿನವರು ಕೂಡ್ಲೆ ಏರ್ಪಡಿಸುವುದರಿಂದ ಸದರಿ ಪಂಥದಾಟಕ್ಕೆ ಕೊಡಗಿನಿಂದ ಹೋಗಲು ಇಚ್ಛಿಸುವವರು ಇದೇ ಅಕ್ಟೋಬರ್ ತಿಂಗಳ ಆಖೈರಿನೊಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡಲ್ಲಿ ಅವರನ್ನು ಕಳುಹಿಸಲು ತಕ್ಕ ಏರ್ಪಾಡು ಮಾಡಲಾಗುವುದು. ಪಂದ್ಯಾಟದಲ್ಲಿ ಜಯಶೀಲರಾದವರಿಗೆ [illegible] ಚಿನ್ನದ ಯೂನಿಯನ್ ಬ್ಯಾಡ್ಜ್ ಶೀಲ್ಡ್ ಸಹ ಕೊಡಲ್ಪಡುತ್ತೆ

ಮಡಿಕೇರಿ, A P Cariappa,
12—10—26 Hon Secretary
St. John Ambulance Assn
Mercara

ತಿಂಗಳಿಗೆ ೩ ಲಕ್ಷ ರೂ. ವರಮಾನ!

ವಿಚಿತ್ರ ಅಭಿನಾಯಕಾರನೆಂದು ಪ್ರಸಿದ್ಧಿಗೊಂಡಿರುವ ಹೆರಾಲ್ಡ್ ಲಾಯಿಡ್ ಎಂಬವನಿಗೆ ತಿಂಗಳಿಗೆ ಮೂರು ಲಕ್ಷ ರೂಪಾಯಿ ಸಂಬಳವಿದೆ! ಅವನನಂತರ ಹೆಚ್ಚು ಸಂಬಳವಿರುವದು ಚಾರ್ಲಿ ಚಾಪ್ಲಿನ್ ಎಂಬವನಿಗೆ. ಇವನಿಗೆ ತಿಂಗಳಿಗೆ ಎರಡು ಲಕ್ಷ ರೂಪಾಯಿಯಂತೆ. ಇವರಿಬ್ಬರನ್ನು ಸಿನಾಮಕ್ಕೆ ಹೋಗುತ್ತಿರವವರು ಚೆನ್ನಾಗಿ ಬಲ್ಲರ

ವರ್ತಮಾನ ಸಂಗ್ರಹ.

ಒಳದೇಶ

ಈ ತಾ. 30ರಲ್ಲಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರ [illegible] ಮೀಟಿಂಗು ಒಂದು ಒಮೊನ್ನಾಹರ ಸಂಘದ ಹಾಲಿನಲ್ಲಿ [illegible] ಯುವುದು

ದಸರಾ ಉತ್ಸವದ ಸಂಬಂಧ ಮಡಿಕೇರಿಯಲ್ಲಿ [illegible] 16ರಲ್ಲಿ ಮೂರು ಮಂಟಪಗಳ ಮೆರವಣಿಗೆಯು ನಡೆ[illegible] ದೆಂದು ತಿಳಿಯುತ್ತೇವೆ.

ಮದ್ರಾಸು ಎಕೌಂಟೆಂಟ್ ಜನರಲ್‌ರವರ ಆಫೀಸಿನ ಆಫೀಸರುಗಳು ಕೊಡಗಿನ ಸರ್ಕಾರದ ಎಲ್ಲಾ ಇಲಾಖೆಗಳನ್ನು ಚೆಕ್ಕುಮಾಡಲು ಈ ತಾರೀಕು 18 ರಲ್ಲಿ [illegible] ರಿಗೆ ಬರಲಿಕ್ಕಿರುವರು

ಒಡಿಶ್ಯಲ್ ಶಿರಸ್ತೆದಾರರಾಗಿದ್ದು ರಜೆಯಲ್ಲಿದ್ದ ಮುಂಬಿನಾಡ ಅಪ್ಪಯ್ಯನವರ ರಜೆ ತೀರಿ ಈಗ ಅವರು ಕೊಡಗಿಗೆ ಸಂಬಂಧಪಟ್ಟ ಕೋರ್ಟ್ ತೀರ್ಮಾನಗಳನ್ನು ಸಂಗ್ರಹಿಸಲಿಕ್ಕಾಗಿ ಎರಡು ತಿಂಗಳ ವರೆಗೆ ಸ್ಪೆಶ್ಯಲ್ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ

ಹಂಗಾಮಿ ಎಸಿಸ್ಟೆಂಟ್ ಪೊಲೀಸು ಸುಪರಿಂಟೆಂಡೆಂಟ್ ಕೆಲಸಕ್ಕೆ ಒಪ್ಪಿಸಲು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮತ್ತು ಪೊಲೀಸ್ ಸುಪರಿಂಟೆಂಡೆಂಟವರು ವೀರಾಜಪೇಟೆಯಲ್ಲಿ ೮ ತಾ 12 ರಲ್ಲಿ ಹೆಡ್ ಕಾನ್‌ಸ್ಟೇಬಲರಿಗೆ [illegible] ಟೆಸ್ಟ್ ಪರೀಕ್ಷೆಯನ್ನು ನಡೆಸಿದರು

ಕಾವೇರಿ ಜಾತ್ರೆಯ ಪ್ರಯಾಣಿಕರ ಅನುಕೂಲಕ್ಕಾಗಿ ತಾ 15 ರಿಂದ 20 ರ ವರೆಗೆ ಮಡಿಕೇರಿಯಿಂದ ಭಾಗಮಂಡಲಕ್ಕೆ ಕಾವೇರಿ ಸರ್ವಿಸು ಮತ್ತು ವಿಕ್ಟೋರಿಯ ಸರ್ವಿಸ್ ಬಸ್ಸುಗಳು, ಮತ್ತು ಮಲ್ಲುಶೆಟ್ಟಿಯವರ ಲಾರಿಯೂ ನಡೆಸಲ್ಪಡುತ್ತವೆ ಎಂದು ತಿಳಿಯುತ್ತೇವೆ,

ಕಳೆದ ತಾ 21ರಲ್ಲಿ ಮಡಿಕೇರಿ ಗ್ರಾಮದ ಸೇವಾ [illegible] ಳದವರು ಒಂದ ಮೀಟಿಂಗು ಮಾಡಿ ಮೆ ಪಿ ಗಣಪಯ್ಯನವರ ಮರಣದಿಂದ ಉಂಟಾದ ನಷ್ಟವನ್ನು ಕುರಿತು [illegible] ವನ್ನು ಸೂಚಿಸಿದರೆಂದು ಅವರ ಅಧ್ಯಕ್ಷರಾದ ಮೆ [illegible] ಗಣಪತಿಯವರು ತಿಳಿಸುತ್ತಾರೆ

ಸ್ಕೂಲ್ ಇನ್‌ಸ್ಪೆಕ್ಟರಾದ ಮೆ [illegible] ರವರು ಗಳೂರಿಂದ ತಾ 14ರಲ್ಲಿ ಶನಿವಾರಪೇಟೆಗೆ ಬಂದು [illegible] ರಲ್ಲಿ ಸೋಮವಾರ ಪೇಟೆಗೆ ಹೋಗಿ, ಅಲ್ಲಿಂದ ತಾ [illegible] ಮಡಿಕೇರಿಗೆ ಬಂದು ಮರುದಿನ ಸಂಪ್ರಾಜೆ ಸ್ಕೂಲಿನ [illegible] ಸ್ಪೆಕ್ಷನ್ ಮಾಡುವರಾಗಿ ತಿಳಿಯಬರುತ್ತದೆ

ಕೊಡಗ [illegible] ಕಂಪನಿಯ ಶೇರುದಾರರ [illegible] ಮೀಟಿಂಗು ಈ ತಾರೀಕು 20ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ವೀರಾಜಪೇಟೆ ವಿಕ್ಟೋರಿಯ [illegible] ರೂಮಿನಲ್ಲಿ ನಡೆಯುವುದು. ಈ ಮೀಟಿಂಗಿನ [illegible] ನೋಟೀಸು ಕಳೆದ ವರ್ಷದ ವರದಿಯೊಡನೆ ಶೇರುದಾರರೆಲ್ಲರಿಗೆ ಕಳುಹಿಸಲಾಗಿದೆ

ಮೆ ಪುತ್ತಮನೆ ಗಣಪಯ್ಯನವರ ಮರಣದಿಂದ ಖಾಲಿಯಾದ ಕೌನ್ಸಿಲ್ ಮೆಂಬರುಸ್ಥಾನಕ್ಕೆ ಕಿಗ್ಗಟ್ಟುನಾಡಿನ ಒಮ್ಮೆದವರ ಪರವಾಗಿ ಇನ್ನೊಬ್ಬರನ್ನು ಆರಿಸಲು ಈ ತಾ 30 ರಲ್ಲಿ ಚುನಾವಣೆಯು ನಡೆಯುವುದು. ಇದರ ಸಂಬಂಧ ತಪಸೀಲು ನೋಟೀಸ ಇನ್ನೊಂದು ಕಡೆ ಪ್ರಕಟವಾಗಿದೆ

ತಾರೀಕು 10ರಲ್ಲು ಪೋಸ್ಟ್‌ಬೆಸ್ಟ್ ಯೂನಿಯನ್ [illegible] ವಾರ್ಷಿಕ ಕ್ರೈಲು ಮುಹೂರ್ತ ಸಮಾರಂಭ [illegible] ದ ನಡೆಯಿತು. ಅಲ್ಲಿ ನೆರೆದಿದ್ದವರಿಗೆ ತಿಂಡಿತೀರ್ಥ [illegible] ನಂತರ ಪ್ರೆಸಿಡಂಟರಾದ ಮೆ ಪಿ ಜಿ ಟೆಪ್ಪಿಂಗ್‌ರವರ ಕೊಂತ ಮೇರೆ [illegible] ಯಂ. ಚೆಣ್ಣಪ್ಪನವರ [illegible] ರಲ್ಲಿ ಗದ್ದವರಿಗೆ ಇನಾಮುಗಳನ್ನು ಹಂಚಿದರು

ತಾ 13ರಲ್ಲು ಮಧ್ಯಾಹ್ನದ ಮೇಲೆ ಮಡಿಕೇರಿ ಸ್ಕೂಲಿನಲ್ಲಿಯೂ ರಾತ್ರಿ ವೇದಾಂತ ಸಂಘದಲ್ಲಿಯೂ [illegible] ಪೂಜೆಯು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಶ್ರೀ [illegible] ರಾಜೆ ಶಂಕರ ನಾರಾಯಣರಾಯರು ಪೂಜೆಯನ್ನು [illegible] ನೊಗನಾಗಿ ಉಪನ್ಯಾಸ ಮಾಡಿದರು. ಇವರ [illegible] ಚಾಮುಂಡೇಶ್ವರಿಯ ಚರಿತ್ರೆಯೂ ಚೆನ್ನಾಗಿ ಚಿತ್ರಿಸ [illegible] ಪೂಜೆಯ ಸಂಬಂಧವಾಗಿ ಅಲೌಕಿಕ ವಿಚಾರವೂ [illegible] ಆಡಗಿತ್ತು. ಉಪಾಧ್ಯಾಯರನ್ನು, ವಿದ್ಯಾರ್ಥಿಗಳನ್ನು ಉತ್ಸವಗಳಲ್ಲಿ ಏಕೀಕರಿಸುವುದು ಲಾಭದಾಯಕವಾದ [illegible]

ಒರುವ ಕೌನ್ಸಿಲು ಚುನಾವಣೆಗಾಗಿ ತಯಾರಿಸಿದ [illegible] ಲರುಗಳ ಪಟ್ಟಿಯಲ್ಲಿ ಓಟಿನ ಹಕ್ಕಿದ್ದು ಹೆಸರು ಬಿಟ್ಟುಹೋಗಿರವವರು ಮತ್ತು ಪಟ್ಟಿಯನ್ನು ಕುರಿತು ಬೇರೆ ಏನ [illegible] ಪುಕಾರುಗಳಿರುವವರು ನವಂಬರು ತಾ. 8 ರೊಳಗೆ [illegible] ಗ್ ಆಫೀಸರಿಗೆ ಒದಕೊಳ್ಳತಕ್ಕದ್ದೆಂದೂ, ಇಂಥಾ [illegible] ಅರ್ಜಿಗಳನ್ನು ವಿಚಾರಿಸಲು ರಿವೈಸಿಂಗ್ ಆಫೀಸರು ನ [illegible] 15 ರೊಳಗೆ ಯಾವನಾದರೊಂದು ತಾರೀಕನ್ನು ನಿ [illegible] ದೆಂದೂ, ರಿಟರ್ನಿಂಗ್ ಆಫೀಸರುಗಳು ಓಟರುಗಳ [illegible] ದ ಪಟ್ಟಿಯನ್ನು ಡಿಸೆಂಬರು ಒಂದರೊಳಗೆ ಪುನಹ [illegible] ಕ್ಕದ್ದೆಂದೂ ಚೀಫ್ ಕಮಿಷನರು ಗಜೆಟಿನಲ್ಲಿ ಪ್ರಕಟಿ [illegible]

ತಿದ್ದುಪಡಿ.

ಕಾವೇರಿ ಜಾತ್ರೆಯ ಸಮಯದಲ್ಲಿ ಭಾಗಮಂಡಲದಲ್ಲಿ ಒಂದು ತಿಂಗಳ ವರೆಗೆ ಹಂಗಾಮಿ ಆಸ್ಪತ್ರೆಯು ಇರ[illegible] ಎಂದು ಕಳೆದ ವಾರ ಪ್ರಕಟಿಸಿದ್ದು ಸರಿಯಲ್ಲ. ಒಂದು ವಾರ ಮಾತ್ರ ಆಸ್ಪತ್ರೆಯು ಇಡಲಾಗುವುದೆಂದು ತಿಳಿಯುತ್ತೇವೆ.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೈದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುನದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ



ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಸಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ಬಂದು ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬಿವನ್ನು ೧೫ ದಿನ ಸೇವಿಸಿದಲ್ಲಿ ಗುಣವು ನಿಶ್ಚಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಭ್ಯಾಸಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್ ಮಿಸ್ರಿ, ಬೆಂಗಳೂರು ಸಿಟಿ,

ಡಿ. ಮುನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—2

ಹಿಂದೂದೇಶ.

[illegible]ಗಪುರ ಮುನ್ಸಿಪಾಲಿಟಿಯಲ್ಲಿ ಲೋಕಮಾನ್ಯ ತಿಲಕರ [illegible]ಮೆಯನ್ನು ಸ್ಥಾಪಿಸಲು ಸ್ಥಳವನ್ನು ಕೊಡುವಂತೆ ಆ[illegible]ನ್ಸಿಪಲ್ ಕಮಿಟಿಯವರು ಒಪ್ಪಿರುವರು.

[illegible]ದ್ರಾಸು ಪ್ರಾಂತ್ಯದಿಂದ ಎಸೆಂಬ್ಲಿಗೆ ಐದು ಮೆಂಬರು [illegible] ಮದ್ರಾಸು ಕೌನ್ಸಿಲಿಗೆ ಆರು ಮೆಂಬರುಗಳೂ ಸ್ವರಾ[illegible]ದ ಕಡೆಯಿಂದ ಎದುರಾಳಿಗಳಿಲ್ಲದೆ ಚುನಾಯಿಸಲ್ಪ[illegible].

[illegible]ದೂದೇಶದಲ್ಲಿ ಉಪಯೋಗಿಸಲ್ಪಡುತ್ತಿರುವ ಮೋ[illegible] ಗಾಡಿಗಳೆಲ್ಲವೂ ಪರದೇಶದಲ್ಲೇ ತಯಾರಾದವು. ಈ [illegible]2 ಮೋಟಾರುಗಳು ಇಂಡಿಯಾದಲ್ಲಿರುವವು. ಇ[illegible]ಗಿ ಹಿಂದೀಯರ 7 ಕೋಟಿ 5 ಲಕ್ಷ ರೂಪಾಯಿ ಗ[illegible]ದೇಶಕ್ಕೆ ಸಂದಿವೆ.

[illegible]ಂಗಳೂರಿನ ಬೀದಿಗಳಲ್ಲಿ ತಿರುಗುತ್ತಿರುವ ಪೋಲಿ ನಾ[illegible] ಕೊಲ್ಲಲು ಒಂದು ಹೊಸ ವಿಧಾನವನ್ನು ಕಂಡು [illegible]ವರು. ಅವುಗಳನ್ನೆಲ್ಲಾ ಹಿಡಿದು ಒಟ್ಟು ಸೇರಿಸಿ [illegible] ತರಹದ ವಿಷಗಾಳಿಯನ್ನು ಅವು ಉಸಿರಾಡುವಂತೆ [illegible]ಕೊಲ್ಲುತ್ತಿರುವರು.

"ಬೊಂಬಾಯಿ ಕ್ರಾನಿಕಲ್" ಎಂಬ ದೈನಿಕ ಇಂಗ್ಲಿಷ್ ಪತ್ರಿಕೆಯನ್ನು ನಡಸುವುದರಲ್ಲಿ ಛಾಪಾಖಾನೆ ಸಮೇತ [illegible] ಮಿ. ಟ್ರಿಸೀ ಎಂಬವರು 1,40,000 ರೂಪಾಯಿಗಳಿಗ [illegible]ಕೊಂಡಿರುವರು. ಈ ಮಹನೀಯರು ಕಾಂಗ್ರೆಸ್ಸಿಗ [illegible]ರಾದುದರಿಂದ ಆ ಪತ್ರಿಕೆಯ ಧ್ಯೇಯವನ್ನು ಬದಲಾ[illegible]ವುದಿಲ್ಲವೆಂದು ಹೇಳಿರುವರು.

[illegible]ಂಗಾಳ ಸರ್ಕಾರದವರಿಂದ ಮಂಡಲೆ ಸೆರೆಮನೆಯಲ್ಲಿ [illegible]ರುವ ಕಲ್ಕತ್ತೆಯ ಮುನ್ಸಿಪಾಲಿಟಿಯ ಮುಖ್ಯ ಅಧೀಕ[illegible] ಸುಭಾಸ ಚಂದ್ರ ಬೋಸರವರು ಕಲ್ಕತ್ತೆಯ ಪರವಾಗಿ [illegible]ಲು ಚುನಾವಣೆಗೆ ಉಮೇದುವಾರರಾಗಿ ನಿಂತಿರುವರ[illegible] ಅವರಿಗೇನೇ ಓಟು ಕೊಡಬೇಕೆಂದು ಸಂಬಂಧ ಪಟ್ಟವರ [illegible]ವರ ಓಟರರಲ್ಲಿ ವಿಜ್ಞಾಪಿಸಿಕೊಂಡಿರುವರು. ಬೋ[illegible]ವರು ಜೈಲಿನಿಂದ ಕಳುಹಿಸಿರುವ ಹಸ್ತಪತ್ರಿಕೆಯನ್ನು ಜನ[illegible] ಹಂಚಲು ಅಧಿಕಾರಿಗಳು ಬಿಟ್ಟಿರುವುದಿಲ್ಲ.

ವಿದೇಶ.

ಸ್ವಿಟ್ಸರ್ಲೆಂಡಿನಲ್ಲಿ ಕೆಲಸ ಮಾಡುವವರ ಸಂಖ್ಯೆಯು ಹ[illegible]ಮೂರು ಸಾವಿರ ಮಾತ್ರವಾಗಿದ್ದರೂ ಕೂಡ ಆ ದೇಶದ ಒಂದು ವರ್ಷದ ಉತ್ಪತ್ತಿಯು 54 ಕೋಟಿ ರೂಪಾಯಿಗಳಂತೆ!

ಭೂಲೋಕದ ಒಟ್ಟು ಜನಸಂಖ್ಯೆಯು 184 ಕೋಟಿ [illegible]ಗಿದೆ. ಇದರಲ್ಲಿ 50 ಕೋಟಿ ಬಿಳೇಜನರು, 50 ಕೋಟಿ [illegible]ದಿಯವರು, 45 ಕೋಟಿ ಕೆಂಪು ಬಣ್ಣದವರು, 30 ಕೋಟಿ ಕಪ್ಪು ವರ್ಣದವರು, ಮತ್ತು 10 ಕೋಟಿ ಇತರರು ಎಂ[illegible] ಲೆಕ್ಕ ಹಾಕಲ್ಪಟ್ಟಿದೆ.

[illegible]ರ್ಕಿಯಾದ ಪಾದ್ರಿಗಳು ಮತ್ತು ಅವರ ಕುಟುಂಬವನ್ನು [illegible]ಕೊಂದು ನಾಶಮಾಡಿ ಹೊಸ ಸರ್ಕಾರವನ್ನು ಸ್ಥಾಪಿಸ[illegible] ಅಲ್ಲಿಯ ಕೆಲವು ದೊಡ್ಡ ಮನುಷ್ಯರು ನಡಿಸುತ್ತಿ[illegible] ಒಳಸಂಚು ಹೊರಬಿದ್ದಿದೆ. ಈ ಒಳಸಂಚಿಗೆ ಸೇರಿದ ಕ[illegible]ವರು ಗುಂಡು ಹಾಕಿ ಕೊಲ್ಲಲ್ಪಟ್ಟಿರುವರು.

[illegible]ರ್ಯನಿಗಿಂತಲೂ 300 ಪಾಲಷ್ಟು ದೊಡ್ಡದಾಗಿರು[illegible] ಎಂಬ ಒಂದು ನಕ್ಷತ್ರವಿರುವದೆಂದು ಕಂಡು [illegible]ಡಿಡಿದಿದೆ. ಗಂಟೆಗೆ 60 ಮೈಲಿ ವೇಗದಲ್ಲಿ ಓಡುವ [illegible] ಗಾಡಿಯು ಈ ನಕ್ಷತ್ರದ ಪ್ರದಕ್ಷಿಣೆ ಬರಬೇಕಾ[illegible]70 ವರ್ಷಗಳು ಹಿಡಿಯುವವೆಂದು ಲೆಕ್ಕ ಹಾಕಲ್ಪಟ್ಟಿದೆ.

ಪ್ರಕಟಣೆ.

[illegible]ಗಲನಾಡು ಡಿಸ್ಟ್ರಿಕ್ಟ್ ಬೋರ್ಡು ಓಟರುಗಳಲ್ಲಿ

ಚಿಪ್ಪುಡಿರ ಅಪ್ಪಯ್ಯನವರ ಮಗ ಪೊನ್ನಪ್ಪನ ವಿನಂತಿ.

[illegible]ಯರೇ,

[illegible]ಮ್ಮ ಈ ನಾಡಿನ ಪರವಾಗಿ ಆರಿಸಿಕೊಳ್ಳಬೇಕಾದ ಡಿ[illegible] ಬೋರ್ಡು ಮೆಂಬರುತನಕ್ಕೆ ನಾನು ಒಬ್ಬ ಉಮೇ[illegible]ಗಿ ನಿಂತಿರುತ್ತೇನೆ. ಈ ಮೊದಲೇ ಕೆಲವು ವರ್ಷ[illegible] ಜಮಾನುದಾರರ ಸಂಘದಲ್ಲು ನಾನು ನಮ್ಮ ನಾಡಿ[illegible] ಪರವಾಗಿ ಮಾಡಿರುವ ಸೇವೆ ತಮಗೆಲ್ಲರಿಗೂ ತಿಳಿ[illegible]. ನಮ್ಮ ನಾಡಿನ ಪರವಾಗಿ ತಮ್ಮ ದಾಸತ್ವವನ್ನ[illegible]ಲು ಉದ್ಯುಕ್ತನಾಗಿ ಈಗ ಮುಂದೆ ಬಂದಿರುತ್ತೇನೆ. [illegible] ನಡಿಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆ[illegible]ಮ್ಮ ಓಟನ್ನು ನನ್ನ ಪರವಾಗಿ ಕೊಟ್ಟು ನಿಮಗೆಲ್ಲರ[illegible]ದ ದೇಶಸೇವೆ ನಡಸಲು ಅವಕಾಶ ಮಾಡಿಕೊಡುವಿರಾ[illegible]ರುತ್ತೇನೆ.

[illegible]ಂಪೇಟೆ, ನಿಮ್ಮ ಸೇವಕ,
[illegible]—26, ಚಿಪ್ಪುಡಿರ ಪೊನ್ನಪ್ಪ.

ಪತ್ರವ್ಯವಹಾರ

[illegible]ತ್ತಿಗಾರರು ಕೊಡುವ ಅಭಿಪ್ರಾಯಗಳಿಗೆ ಪತ್ರಿಕಾಕ[illegible] ಬಾಧ್ಯರಲ್ಲ. ಸಂ.]

[illegible]ಬಾರದ ಓಟರುಗಳು ಓಟುಕೊಡುವ ವಿಧಾನ'

[illegible]ದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರುಗಳ [illegible]ಯಲ್ಲಿ ಬರೆಹ ಬಾರದ ಓಟರುಗಳು ಹೇಗೆ ಓಟುಮಾಡಬೇಕೆಂಬ ಬಗ್ಗೆ ಮದರಾಸು ಸರಕಾರದವರು ಒಂದು ಪ್ರೆಸ್ ಕಮ್ಯೂನಿಕ್ಕನ್ನು ಪ್ರಕಟಿಸಿದ್ದು ತಾ 5—10—26ರ "ಹಿಂದೂ" ಪತ್ರಿಕೆಯಲ್ಲಿ ನೋಡಿದೆನು. ಆ ಏರ್ಪಾಡು ಸರ್ವರಿಗೂ ಸಮರ್ಪಕವಾಗಿದೆ.

ನಮ್ಮ ಕೊಡಗು ಸರಕಾರದವರೂ ಕೂಡ ಸಮೀಪದಲ್ಲಿಯೇ ಇಲ್ಲಿ ನಡಿಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಕೌನ್ಸಿಲ್ ಚುನಾವಣೆಗಳಲ್ಲಿ ಅದೇ ಕ್ರಮವನ್ನು ಜಾರಿಗೆ ತರಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ. ಅಂಥ ಕ್ರಮವನ್ನು ಅನುಸರಿಸುವುದರಿಂದ ಯಾರಿಗೂ ಯಾವ ಸಂದೇಹವೂ ಉಂಟಾಗುವದಿಲ್ಲ. ನಮ್ಮ ಸರಕಾರದವರೂ ಕೂಡ ಇದಕ್ಕೆ ತಕ್ಕ ಗಮನಕೊಟ್ಟು ತಕ್ಕ ಏರ್ಪಾಡು ಮಾಡುತ್ತಾರಾಗಿ ನಿರೀಕ್ಷಿಸಿದೆ.

ಮೇಲೆ ಉದಹರಿಸಿದ ಕಮ್ಯೂನಿಕ್ಕಿನ ಸಾರಾಂಶ ಈ ಕೆಳಗೆ ಕಂಡಂತೆ ಇದೆ—ಓಟರನು ಬ್ಯಾಲೆಟ್ ಪೇಪರನ್ನು ಓದಲು ತನಗೆ ಬರುವುದಿಲ್ಲವೆಂತಲೂ, ತನಗೆ ಅದನ್ನು ಓದಿ ಹೇಳಬೇಕೆಂತಲೂ ಪೋಲಿಂಗ್ ಆಫೀಸರರನ್ನು ಕೇಳಬಹುದು. ಹಾಗೆ ಕೇಳಿದರೆ ಪೋಲಿಂಗು ಆಫೀಸರರು ಅದನ್ನು ಓದಿ ಮಾತ್ರ ಹೇಳತಕ್ಕದ್ದೇ ಹೊರ್ತು ನೀನು ಯಾರಿಗೆ ಓಟುಕೊಡುತ್ತೀಯಂತ ಆ ಓಟರರನ್ನು ಕೇಳಕೂಡದು. ಓಟರನು ಇಂಥವರಿಗೆ ತನ್ನ ಓಟು ಗುರ್ತುಮಾಡಬೇಕೆಂತ ಕೇಳಿದರೆ ಮಾತ್ರ ಹಾಗೆ ಮಾಡತಕ್ಕದ್ದು ಮತ್ತು ಹಾಗೆ ಅವರು ಗುರ್ತು ಮಾಡಿ ಬ್ಯಾಲೆಟ್ ಪೇಪರನ್ನು ಬ್ಯಾಲೆಟ್ ಪೆಟ್ಟಿಗೆಯೊಳಗೆ ಹಾಕಲು ಓಟರನ ಕೈಗೇ ಕೊಡತಕ್ಕದ್ದು.

ಹೀಗೆ ಓಟುಮಾಡುವಾಗ ಪೋಲಿಂಗ್ ಆಫೀಸರರೂ, ಉಮೇದುವಾರರೂ, ಅವರ ಏಜಂಟರುಗಳೂ ಮತ್ತು ಓಟರನೂ ಮಾತ್ರವೇ ಅಲ್ಲಿ ಇರತಕ್ಕದ್ದು. ಬೇರೆ ಯಾರನ್ನೂ ಅಲ್ಲಿ ಸೇರಿಸಕೂಡದು. (ಬೇರೆಯವರು ಓಟರನ್ನು ಪ್ರೇರೇಪಿಸಿ ಅವನ ಇಚ್ಛೆಯನ್ನು ಬದಲಾಯಿಸಲೂ ಅವಕಾಶವಿರದಂತೆ) ಓಟರನು ಪೋಲಿಂಗು ಆಫೀಸರರಿಗೆ ಹೇಳುವುದನ್ನು ಕೇಳಲೂ, ಪೋಲಿಂಗು ಆಫೀಸರರು ಬ್ಯಾಲೆಟ್ ಪೇಪರಿನಲ್ಲಿ ಓಟರನಿಗಾಗಿ ಗುರ್ತುಮಾಡುವುದನ್ನು ನೋಡಲೂ, ಉಮೇದುವಾರರಿಗೂ ಅವರ ಏಜಂಟರಿಗೂ ಹಕ್ಕು ಇರುತ್ತೆ.

ನ್ಯಾಯಾಭಿಲಾಷಿ.

ಸಂಶಯವು ಇನ್ನೂ ಪರಿಹಾರವಾಗಿರುವುದಿಲ್ಲ!

ಮಹನೀಯರೇ,

'ಲೋಕಪಾವನ' ದಲ್ಲಿ 'ಎಲ್ಲಾ ನೀವೇ ತಿನ್ನಿ" ಎಂಬದಾಗಿ ಎಂ. ಎನ್. ಮಾದಪ್ಪನವರ ರುಜುವಿನಿಂದ ಪ್ರಕಟವಾದ ಚಾತ್ಮಿಯನ್ನು ತಾನು ಬರೆದದ್ದಲ್ಲವೆಂದು ಎಂ ಎನ್. ಮಾದಪ್ಪನವರು ಅಲ್ಲಿಗಳದ ಮೇಲೆ, ಅದನ್ನು ಬರದದ್ದು ಎಂ ಎನ್ ಮಾದಪ್ಪನವರಲ್ಲ, ಮೇಕೇರಿರ ಮುದ್ದಪ್ಪನವರು, ಮುದ್ರಣ ತಪ್ಪಿನಿಂದ ಮಾದಪ್ಪ ಎಂದು ಬಿದ್ದದ್ದಾಗಿದೆಯೆಂದು ಆ ಪತ್ರಿಕೆಯ ಸಂಪಾದಕರು ಕಳೆದವಾರ ಪ್ರಕಟಿಸಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ನಾನು ಆ ಚಾತ್ಮಿಯನ್ನು ಎಂದೂ ಬರೆಯಲಿಲ್ಲ. ಅದು ಯಾರ ಕಲ್ಪನೆ ಎಂಬುದು ಗೊತ್ತಾಗುವುದಿಲ್ಲ. ಈ ಸಂಗತಿಯಲ್ಲಿ ತಪ್ಪು ಅಭಿಪ್ರಾಯದಿಂದ ಯಾರಾದರೂ ನನ್ನ ಮೇಲೆ ಅಪರಾಧ ಹೊರಿಸಬಾರದಾಗಿ ಎಲ್ಲರ ತಿಳುವಳಿಕೆ ಬಗ್ಗೆ ಇಲ್ಲಿ ಬರೆದುಕೊಂಡದ್ದಾಗಿದೆ.

ಎಂ. ಜಿ. ಮುದ್ದಪ್ಪ.
(ಮೇಕೇರಿರ ಮುದ್ದಪ್ಪ.)

ಅಮ್ಮತ್ತಿ ಮೀಟಿಂಗು

ಅಯ್ಯಾ,

ತಾ 5—10—26ರಲ್ಲಿ ಅಮ್ಮತ್ತಿನಾಡು ಮಹದೇವ ಭಕ್ತಜನ ಸಂಘದ ಜನರಲ್ ಮೀಟಿಂಗು ಮು ಕುಟ್ಟಂಡ ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಅಮ್ಮತ್ತಿ ಕ್ರಿಕೆಟ್ ಮೈದಾನದಲ್ಲಿ ನಡೆಯಿತು. 95 ಜನರು ಹಾಜರಿದ್ದರು. ಸೆಕ್ರೆಟರಿಯವರು ಕಳೆದ ವರ್ಷದ ಲೆಕ್ಕಗಳನ್ನು ಸಭೆಯಮುಂದೆ ಓದಿದರು. ಇದರ ಮೇಲೆ ದೀರ್ಘ ಚರ್ಚೆ ನಡೆದು ಲೆಕ್ಕಗಳನ್ನು ಆಡಿಟ್ ಮಾಡಲು ಮೂವರು ಜನರ ಒಂದು ಸಬ್ ಕಮಿಟಿಯನ್ನೂ ದೇವಸ್ಥಾನದ ಕಟ್ಟಡದ ವಿಷಯ ತೀರ್ಮಾನಿಸಲು ಇನ್ನೊಂದು ಸಬ್ ಕಮಿಟಿಯನ್ನೂ ನೇಮಿಸಿದ ನಂತರ ಮೀಟಿಂಗು ವಿಸರ್ಜನೆಯಾಯಿತು.

ಕೂಡಲೇ ಇನ್ನೊಂದು ಪಬ್ಲಿಕ್ ಮೀಟಿಂಗು ಮು. ಕೆ. ತಮ್ಮಯ್ಯನವರ ಅಧ್ಯಕ್ಷತೆಯಲ್ಲಿಯೇ ನಡೆಯಿತು. ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಯಾರನ್ನು ಆರಿಸಬೇಕೆಂಬ ಚರ್ಚೆಯು ನಡೆಯಿತು. ಮೆ ಕೇಳಪಂಡ ಅಪ್ಪಯ್ಯನವರ ಮತ್ತು ಮು. ಐನಂಡ ಮುತ್ತಣ್ಣನವರ ಹೆಸರುಗಳು ಸೂಚಿಸಲ್ಪಟ್ಟವು. ಡಿ. ಬೋರ್ಡಿಗೆ ಉಮೇದುವಾರರಾಗಿ ನಿಲ್ಲುವ ಬೇರೆ ಜನರು ಇರಬಹುದೆಂತಲೂ, ಇಲ್ಲಿ ಆರು ಗ್ರಾಮಗಳ ಮಾತ್ರ ಹಾಜರಿದ್ದು ಈ ನಾಡಿನ ಬಾಕಿ ನಾಲ್ಕೈದು ಗ್ರಾಮದ ಜನರು ಹಾಜರಿಲ್ಲದೆ ಇರುವದರಿಂದಲೂ ಇಂಥವರನ್ನೇ ಆರಿಸಬೇಕೆಂದು ಇಲ್ಲಿ ತೀರ್ಮಾನಿಸುವುದರ ಬದಲು ಪೋಲಿಂಗ್ ದಿನ ಓಟು ಕೊಟ್ಟು ತೀರ್ಮಾನಿಸುವುದೇ ಉತ್ತಮವೆಂದೂ ಕೆಲವರು ಹೇಳಿದರು. ಇಲ್ಲಿ ಸೇರಿದವರಾದರೂ ತಮ್ಮ ಅಭಿಪ್ರಾಯವನ್ನು ಸೂಚಿಸುವುದು ಒಳ್ಳೆಯದೆಂದು ಇನ್ನು ಕೆಲವರು ವಾದಿಸಿದರು. ಈ ವಿಷಯ ಓಟಿಗೆ ಹಾಕಲಾಗಿ ಇಲ್ಲಿ ತೀರ್ಮಾನಿಸಬೇಕೆಂದು 21 ಜನರೂ ತೀರ್ಮಾನಿಸಕೂಡದೆಂದು 16 ಜನರೂ ಓಟು ಕೊಟ್ಟರು. ಬಾಕಿಯವರು ಸುಮ್ಮನಿದ್ದರು. ಮೆ. ಅಪ್ಪಯ್ಯನವರನ್ನು ಆರಿಸಬೇಕೆಂದು ಓಟಿಗೆ ಹಾಕಲಾಗಿ ಹಾಜರಿದ್ದ 62 ಜನರ ಪೈಕಿ 27 ಜನರು ಮಾತ್ರ ಅವರ ಪರವಾಗಿ ಕೈ ಎತ್ತಿದರು. ಮು. ಐ ಮುತ್ತಣ್ಣನವರು ಹಿಂತೆಗೆದು ಮು ಐನಂಡ ಮಾದಪ್ಪನವರು ಡಿ. ಬೋರ್ಡಿಗೆ ಒಬ್ಬ ಉಮೇದುವಾರರಾಗಿದ್ದಾರೆಂದು ತಿಳಿಸಿದರು. ನಂತರ ಮೀಟಿಂಗು ಬರಕಾಸ್ತಾಯಿತು. ಅಮ್ಮತ್ತಿನಾಡಿನ ಪಾರಪತ್ಯಗಾರರಾದ ಮು. ಕೇಳಪಂಡ ಐಯ್ಯಣ್ಣನವರು ಮೀಟಿಂಗಿನಲ್ಲಿ ಹಾಜರಿದ್ದದರಿಂದ ಅಷ್ಟು ಜನರಾದರೂ ಮು. ಅಪ್ಪಯ್ಯನವರ ಪರ ಕೈ ಎತ್ತಿದ್ದಾಗಿದೆಯೆಂದು ಕೆಲವರು ಅಂದುಕೊಳ್ಳುತ್ತಿದ್ದರು.

"ಹಾಜರಿದ್ದ ಸಂಘದ ಮೆಂಬರು."

ಕೌನ್ಸಿಲು ಚುನಾವಣೆಗೂ ಕೊಡವಸಭೆಗೂ ಸಂಬಂಧವಿಲ್ಲವೋ?

ಮಹನೀಯರೇ,

ಹೊಸ ಕೊಡವ ಸಭೆಗೂ ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳಿಗೂ ಸಂಬಂಧವೇ ಇಲ್ಲವೆಂದು ಕೆಲವರು ಪಂಥಾಭಿಮಾನವಾಗಿ ಓಟರುಗಳಲ್ಲಿ ಹೇಳುತ್ತಿರುವದಲ್ಲದೆ ಪತ್ರಿಕೆಗಳಲ್ಲಿಯೂ ಪ್ರಕಟಿಸುತ್ತಿರುವರು. ಹೊಸಕೊಡವ ಸಭೆ ಬೇಕೆನ್ನುವ ಒಂದು ಪಂಗಡವೂ, ಗ್ರಾಮನಾಡುಗಳಲ್ಲಿರುವ ನಮ್ಮ ಹಳೇ ಸಭೆಯೇ ನಮಗೆ ಸಾಕಾಗಿರುವುದರಿಂದ ಹೊಸ ಸಭೆಯ ಅವಶ್ಯವಿಲ್ಲವೆನ್ನುವ ಇನ್ನೊಂದು ಪಂಗಡವೂ ಈಗ ದೇಶದಲ್ಲಿರುವಾಗ್ಯ ಈ ಹೊಸ ಸಭೆಗೂ ಚುನಾವಣೆಗಳಿಗೂ ಸಂಬಂಧವಿಲ್ಲವೆನ್ನುವುದು ನಿಜವೋ ಎಂದು ವಿಚಾರಿಸಬೇಕಾದದ್ದು ಅತ್ಯವಶ್ಯವಾಗಿದೆ.

ಹೊಸ ಕೊಡವಸಭೆಯು ಈಗ ಸ್ಥಾಪಿಸಲ್ಪಟ್ಟಿರುವಂತೆ ಜಮ್ಮಗಾರರ ಸಭೆಯೆಂದು ತೋರ್ಪಡಿಸಲ್ಪಡುತ್ತಿದ್ದರೂ ಅದರ ಹೆಸರಿನಿಂದಲೇ ಅದು ಒರೇ ಕೊಡವರದೆಂದು ಗೊತ್ತಾಗುವುದು. ಅವಕ್ಕೆ ಜಮ್ಮಗಾರರೆಲ್ಲರೂ ಸೇರಬಹುದಾದರೆ ಈ ಸಭೆಯ ರೂಲ್ಸುಗಳನ್ನು ತಯಾರಿಸುವಾಗಾಗಲೀ, ಮಂಜೂರು ಮಾಡುವಾಗಾಗಲೀ ಕೊಡವರಲ್ಲದ ಬೇರೆ ಜಮ್ಮ ಹಿಡುವಳಿಗಾರರ ಅಭಿಪ್ರಾಯ ತೆಗೆದುಕೊಳ್ಳಲಿಲ್ಲವೇಕೆ? ಕೊಡವರ ಆಚಾರ ಪದ್ಧತಿ, ಉಡಿಗೆತೊಡಿಗೆಗಳನ್ನು ಹಿಂಬಾಲಿಸುವವರ ಸಭೆಯೆಂದು ಹೇಳುವದಾದರೆ ಅಂಥಾ ವಿಶ್ಲೇಷಣ ಸೇರಿಸದೆ ಸಭೆಯನ್ನು ಸ್ಥಾಪಿಸಲು ಕಾರಣವೇನು? ಅಲ್ಲದೆ ಕೊಡವರ ಭಾಷೆ, ಆಚಾರ, ಪದ್ಧತಿ ಉಡಿಗೆತೊಡಿಗೆಗಳನ್ನು ಬೇರೆ ಎಲ್ಲಾ ಕೋಮಿನವರಿಗಿಂತಲೂ ಚೆನ್ನಾಗಿ ಹಿಂಬಾಲಿಸುವ ಕಂಬಟ್ಟಕೊಳಿಯರು ಮತ್ತು ಕುಡಿಯರಿಗೆ ಈ ಸಭೆಗೆ ಸೇರಲು ಎಡೆಯೂ, ಹಿಂದಿನ ಈ ಪಂಗಡದವರಾದ ಇವರ ಪರ ಮೆಂಬರುಗಳಿಗೆ ಕಮಿಟಿಯಲ್ಲಿ ಸ್ಥಳವೂ ಯಾಕೆ ಕೊಡಲಿಲ್ಲ? ಇಷ್ಟು ಮಾತ್ರವಲ್ಲದೆ ಅವರ ರೂಲ್ಸುಗಳಿಂದ ಹೆಚ್ಚು ವರಮಾನ ತೆರಿಗೆ ಕೊಡುವವರೂ, ಹೆಚ್ಚಿನ ಪೆನ್ಸನ್ದಾರರೂ, ಲಾಯರುಗಳೂ, ಗ್ರ್ಯಾಜುವೇಟುಗಳೂ ಇವರೆಲ್ಲರು ಪ್ರೆಸಿಡೆಂಟರ ಅನುಮತಿಯಿಂದ ಕಮಿಟಿ ಮೆಂಬರುಗಳಾಗಬಹುದೆಂದು ಮುಂತಾಗಿ ಇರುವುದರಿಂದ ಇದರ ಅಧಿಕಾರ ಹೆಚ್ಚಾಗಿ ಐಶ್ವರ್ಯವಂತರ ಕೈಯ್ಯಲ್ಲಿರುವದೆಂದೇ ಹೇಳಬಹುದಲ್ಲವೇ?

ಇಂಥಾ ಸಂಶಯಗಳಿಂದ ತುಂಬಿರುವ ಈ ಸಭೆಯು ಯಾವದಾದರೂ ಒಂದು ಕೋಮಿನವರ ಏಳಿಗೆಗೆ ಹೊರಟದ್ದಲ್ಲವೆಂತಲೂ ಕೋಮಿನ ಹೆಸರು ಹೇಳಿಕೊಂಡು ಕೆಲವರು ತಮ್ಮ ಸ್ವಪ್ರಯೋಜನವನ್ನು ಸಾಧಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನವೆಂದೂ ಅರಿತುಕೊಂಡೇ ದೇಶದ ಹೆಚ್ಚಿನ ಕೊಡವರೂ ಜಮ್ಮಗಾರರು ಈ ಸಭೆಗೆ ಸೇರದೆ ಇದಕ್ಕೆ ವಿರೋಧಿಸಿದ್ದಾಗಿದೆ. ದಕ್ಷಿಣ ಕೊಡಗಿನ ಹಲವು ನಾಡು ಮತ್ತು ಗ್ರಾಮಗಳಲ್ಲಿ ಕಳೆದ ವರ್ಷ ಈ ಸಮಯದಲ್ಲಿಯೇ ಮೀಟಿಂಗುಗಳು ನಡೆದು ಶೇಕಡ 90ರಷ್ಟು ಜನರು ಈ ಹೊಸ ಚಳವಳವನ್ನು ಖಂಡಿಸಿ, ಈ ಸಭೆಯನ್ನು ವಿರೋಧಿಸಿ ಠರಾವುಗಳನ್ನು ಪಾಸುಮಾಡಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅದರೂ ಕೂಡ ಕೆಲವು ಮಹನೀಯರು ದೇಶದ ಬಹುಮತದ ಅಭಿಪ್ರಾಯವನ್ನು ತೃಣೀಕರಿಸಿ ಹೊಸ ಸಭೆಯೊಂದನ್ನು ಸ್ಥಾಪಿಸಿದರು. ಹೀಗೆ ಸ್ಥಾಪಿತವಾಗಿ ಕೆಲವು ದಿವಸಗಳಲ್ಲಿಯೇ ನಾಪೋಕ್ಲಿನಲ್ಲಿ ನಡೆದ ಜಮಾಬಂದಿ ಸ್ತ್ರೀರ ಸಂಘದ ಕಾನ್ಫರೆನ್ಸಿನ ಸಮಯದಲ್ಲಿ ದೇಶದ ಎಲ್ಲಾ ಭಾಗಗಳಿಂದ ಬಂದು ಅಲ್ಲಿ ನೆರದಿದ್ದ ನೂರಾರು ಕೊಡವ ಮಹನೀಯರು ಶೇಕಡ 99 ರಷ್ಟು ಬಹುಮತದಿಂದ ಹೊಸ ಕೊಡವ ಸಭೆಯು ಅವಶ್ಯವಿಲ್ಲವೆಂದು ಠರಾವು ಪಾಸುಮಾಡಿದ್ದು ಯಾರಿಗೂ ತಿಳಿಯದ್ದಲ್ಲ. ಅದರೂ ಕೂಡ ಈ ಸಭೆಯು ಮುಕ್ತಾಯಗೊಳ್ಳಲಿಲ್ಲ. ನಂತರ ಒಂದೆರಡು ಕಮಿಟಿ ಮೀಟಿಂಗುಗಳಾದವೆಂದು ವರ್ತಮಾನವಾಯಿತು. ರಾಜಕೀಯ ವಿಷಯಗಳನ್ನು ಒಳಕೊಳ್ಳಲಿಲ್ಲವೆಂದು ಸಾರಿದ ಈ ಸಭೆಯ ಕಮಿಟಿ ಮೀಟಿಂಗು ಒಂದರಲ್ಲಿ ಗವರ್ನ್ಮೆಂಟ್ ಉದ್ಯೋಗಸ್ಥರ ಪಕ್ಷಪಾತ ವಿಷಯ ಚರ್ಚಿಸಲ್ಪಡುವದೆಂದು ಹೊರಬಿದ್ದ ನೋಟೀಸನ್ನು ನೋಡಿದ್ದಾಯಿತು. ಗವರ್ನ್ಮೆಂಟ್ ಉದ್ಯೋಗಸ್ಥರ ಪಕ್ಷಪಾತವು ರಾಜಕೀಯ ವಿಷಯವಲ್ಲವೇ? ಹೀಗೆ ಜನರ ಕಣ್ಣು ಕಟ್ಟಲು ಮಾಡುವ ಪ್ರಯತ್ನವು ಎಷ್ಟರವರೆಗೆ ಫಲಿಸುವುದು? ಈ ಕೊಡವ ಸಭೆಯು ಬಡವ ಬಲ್ಲಿದರೆಂಬ ಭೇದವಿಲ್ಲದೆ ಕೊಡವರನ್ನೆಲ್ಲಾ ಉದ್ಧಾರಮಾಡುತ್ತದೆಂದು ಇದರ ಮುಂದಾಳುಗಳು ತಮ್ಮ ಭಾಷಣಗಳಲ್ಲಿ ಹೇಳಿದ ಮೇರೆ ಈ ವರೆಗೆ ಏನು ಕೆಲಸಮಾಡಿದೆಯೆಂದು ನೋಡಿದರೆ ಯಾರಿಗೆ ತಾನೇ ನಿರಾಶೆಯಾಗದಿರುವದು? ಅದು ಮಾಡಿದ ಒಂದು ಕೆಲಸವು ಮಾತ್ರ ಎಲ್ಲರಿಗೂ ಕಾಣುವಂತಿದೆ. ಅದೇ

ಸೆಂದರೆ— ಗುಬ್ಬಿ ನಾಟಕ ಮಂಡಳಿಯವರನ್ನು ಬೇಡಿಕೊಂಡು 500 ರೂಪಾಯಿ ಧರ್ಮವನ್ನು ಸಂಪಾದಿಸಿದೆ. ಹಾ! ಏನಾಶ್ಚರ್ಯ! ಕೊಡವ ಸಭೆಯ ಪ್ರಥಮ ಬಂಡವಾಳವು ಕೊಡವೇತರ ಮಹನೀಯರೊಬ್ಬರ ಧರ್ಮದ ಹಣವು. ಇದರ ಮೇಲೇ ಈ ಸಭೆಗೆ ಸೇರಿದ ಕೊಡವ ಐಶ್ವರ್ಯವಂತ ಮಹನೀಯರು ಎಷ್ಟು ಹಣವನ್ನು ಈ ಸಭೆಗೆ ಕೊಟ್ಟು ಅದರ ಮೂಲಕ ಬಡವರಿಗೆ ಸಹಾಯಮಾಡಿರುವರೆಂಬುದನ್ನು ಎಲ್ಲರ ತಿಳುವಳಿಕೆಗೆ ಪ್ರಕಟಿಸಿದ್ದರೆ ಗುಟ್ಟು ಹೊರಬೀಳುತ್ತಿತ್ತು.

ಈ ಸಭೆಯನ್ನು ಹೊರಡಿಸಲು ಪ್ರಯತ್ನಿಸಿದಾಗಲೇ ಇದು ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗಳಿರುವ ಕೆಲವು ಐಶ್ವರ್ಯವಂತರ ಒಂದು ಉಪಾಯವೆಂದು ಕೆಲವರು ಸೂಚಿಸಿದರು. ಇದರ ಕಮಿಟಿಯಲ್ಲಿರಲು ಧನವಂತರಿಗೇನೇ ಹೆಚ್ಚು ಅವಕಾಶ ಕೊಟ್ಟ ರೂಲ್ಸು ಈ ಸೂಚನೆಯನ್ನು ಬಲಪಡಿಸಿತು. ಆದರೆ, ನಾಡಿನ ಜನರು ಇದರ ಉದ್ದೇಶವನ್ನು ಅರಿತವರಾಗಿ ಬಹುಮತದಿಂದ ಇದಕ್ಕೆ ಸೇರದೆ ಹೊರಗೆ ನಿಂತರು. ಆದುದರಿಂದ ಈ ಸಭೆಯನ್ನು ಕೌನ್ಸಿಲು ಚುನಾವಣೆಗೆ ಉಪಯೋಗಿಸಲು ಇದರ ಮುಂದಾಳುಗಳಿಗೆ ಸಾಧ್ಯವಾಗಲಿಲ್ಲ; ಮಾತ್ರವಲ್ಲ ಈ ಸಭೆಗೂ, ಚುನಾವಣೆಗೂ ಏನೊಂದೂ ಸಂಬಂಧವಿಲ್ಲವೆಂದೂ ಅವರೇ ಹೇಳುತ್ತಿರುವರು. ಗೆಜೆಟೆಡ್ ಉದ್ಯೋಗಸ್ಥರ ವರ್ಗಾವರ್ಗಿ ಮುಂತಾದ ರಾಜಕೀಯ ವಿಷಯಗಳನ್ನು ಚರ್ಚಿಸಬಹುದಾದ ಈ ಸಭೆಗೂ, ರಾಜಕೀಯ ಸಂಸ್ಥೆಗಳಾದ ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್‌ಬೋರ್ಡುಗಳ ಚುನಾವಣೆಗೂ ಸಂಬಂಧವಿಲ್ಲವೆನ್ನುವುದರಲ್ಲಿ ಅರ್ಥವೇನಿದೆ. ರಾಜಕೀಯ ವಿಷಯಗಳಿಗೆ ಕಾರ್ಯಮಾಡಲು ಪ್ರತ್ಯೇಕ ಸಭೆಗಳು ಬೇಕೆನ್ನುವವರು ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್‌ಬೋರ್ಡುಗಳಲ್ಲಿಯೂ ಪ್ರತ್ಯೇಕ ಹೋರಾಡುವರಲ್ಲವೇ?

“ನಾನು ಖಂಡಿತವಾಗಿ ‘ಕೊಡವ’ ನಾದುದರಿಂದ ನವ ‘ಕೊಡವ’ ಸಭೆಗೆ ಸಹಪಾಠಿಯಾಗಿರುವುದರಲ್ಲಿ ಏನಾಶ್ಚರ್ಯ? ಕೊಡವರಲ್ಲದ ಅಂದರೆ ‘ಕೊಡವರ’ ಆಚಾರ ವಿಚಾರದಲ್ಲಿ ಇಲ್ಲದವರು ಮಾತ್ರ ‘ಕೊಡವ’ ಸಭೆಯನ್ನು ತಿರಸ್ಕರಿಸುವರೆಂದು ನೀವೂ ನಾನೂ ಸಹ ಯೋಚಿಸಬೇಕಾಗದು,’ ಎಂದು ಸೆಪ್ಟಂಬರು 3 ನೇ ತಾರೀಕಿನ ‘ಕೊಡಗು’ ಪತ್ರಿಕೆಯಲ್ಲಿ ಕೊಡವಸಭೆಯ ಪ್ರೋತ್ಸಾಹಕರೊಬ್ಬರು ಬರೆದಿದ್ದುದನ್ನು ವಾಚಕರು ಓದಿರಬಹುದು. (ಕೊಡವರ ಆಚಾರ ಪದ್ಧತಿ ತಪ್ಪಿಹೋಗಿರುವವರಿಗೇ ತಮ್ಮನ್ನು ತಿದ್ದಿಕೊಂಡು ಪುನಹ ಕೊಡವ ಆಚಾರ ಪದ್ಧತಿಯನ್ನನುಸರಿಸಲಿಕ್ಕಾಗಿ ಹೊಸಕೊಡವ ಸಭೆಯು ಬೇಕಾಗಿರುವದಲ್ಲದೆ ಕೊಡವರ ಆಚಾರ ಪದ್ಧತಿಗೆ ಸರಿಯಾಗಿರುವವರಿಗೆ ಈ ಸಭೆಯಿಂದ ಅವಶ್ಯವೇನೂ ಇರುವದಿಲ್ಲವೆಂದು ಯಾರಿಗೆ ತಾನೇ ತಿಳಿಯದು, ಇದಂತಿರಲಿ.) ಆ ಮಹನೀಯರೇ ‘ಕೊಡವ ಸಭೆಗೂ, ಕೌನ್ಸಿಲು ಚುನಾವಣೆಗೂ ಏನೂ ಸಂಬಂಧವಿಲ್ಲವೆಂದು ಕೆಲವು ದಿನಗಳನಂತರ ಬರೆದಿರುವದು ನೋಡಿದರೆ ಯಾರಿಗ ತಾನೇ ನಗೆಬರದೆ ಇರುವದು. ಹೊಸ ಕೊಡವ ಸಭೆಯನ್ನು ತಿರಸ್ಕರಿಸುವ ಕೊಡವರು ದೇಶದಲ್ಲಿ ಹೆಚ್ಚಾಗಿರುವಾಗ್ಯೂ ಆ ಮಹನೀಯರು ಯೋಚಿಸುವಂತೆ, ಅಂಥವರೆಲ್ಲರೂ ಕೊಡವರಲ್ಲದವರಾದರೆ, ಖಂಡಿತವಾದ ಕೊಡವರು ಅಂದರೆ ಅವರ ಯೋಜನೆಯಂತೆ ಕೊಡವ ಸಭೆಗೆ ಸೇರಿದವರು ಕೊಡವರಲ್ಲದವರಿಂದ ಓಟು ಕೇಳುವದು ನ್ಯಾಯವೋ? ಹಾಗೆ ಅಭಿಪ್ರಾಯಪಡುವವರಿಗೆ ಕೊಡವಸಭೆಗೆ ಸೇರದವರು ಹೇಗೆ ತಾನೇ ಓಟುಕೊಡುವರು? ಆದಕಾರಣವೇ ಹೆಚ್ಚಿನ ಜನರ ಓಟು ತಮಗೆ ದೊರೆಯಲಾರದೆಂಬ ಭಯದಿಂದಲೇ ಕೊಡವ ಸಭೆಗೂ, ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಗಳಿಗೂ ಸಂಬಂಧವಿಲ್ಲವೆಂದು ಅಂಥವರು ಒತ್ತಿ ಹೇಳುತ್ತಿರುವದಾಗಿದೆಯೆಂದು ನನಗೆ ತೋರುತ್ತದೆ. ನಾಡಿನವರ ಬಹುಮತದ ಅಭಿಪ್ರಾಯಕ್ಕೆ ಮೀರಿ ಕೊಡವ ಸಭೆಗೆ ಸೇರಿದವರ ವಿಷಯ ಚುನಾವಣೆಯಲ್ಲಿ ಹೇಗೆ ವರ್ತಿಸಬೇಕೆಂದು ನಾಡಿನ ಓಟರುಗಳಿಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ಕೊಡವ ಸಭೆಗೂ ಚುನಾವಣೆಗೂ ಏನೂ ಸಂಬಂಧವಿಲ್ಲವೆಂಬ ಕುರುಡುಮಾತಿಗೆ ಯಾರೂ ಕಿವಿಕೊಡಲಿಕ್ಕಿಲ್ಲವೆಂದು ನಾನು ಪ್ರತ್ಯೇಕ ಬರೆಯಬೇಕಾಗಿಲ್ಲ. ಚುನಾವಣೆಯು ಮುಗಿಯುವುದರೊಳಗೆ ಇನ್ನು ಏನೇನು ಚಮತ್ಕಾರದ ಮಾತುಗಳು ಹುಟ್ಟುವವೆಂದು ಹೇಳಲಾರೆನು. ಆದರೆ ಓಟರುಗಳೆಲ್ಲರೂ ‘ಬಹು ಜಾಗರೂಕರಾಗಿರಬೇಕಾಗಿದೆ.

“ದೂರದೃಷ್ಟಿ”

ಕೊಡವ ಭಾಷೆಯು ಕನ್ನಡವಲ್ಲವೇ?

ಅಯ್ಯಾ ಕೊಡವ ಸಹೋದರರೇ,

ಕರ್ನಾಟಕ ವಿಶ್ವವಿದ್ಯಾಲಯದ ವಿಷಯ ಚರ್ಚೆ ನಡೆಯುವಾಗ, ಕೊಡವಭಾಷೆಗೂ ಕನ್ನಡಕ್ಕೂ ಹೆಚ್ಚಿನ ಸಂಬಂಧ ವಿಲ್ಲವೆಂದೂ, ಕೊಡವ ಭಾಷೆಯಲ್ಲಿ ಹೆಚ್ಚಿನ ಮಲಯಾಳೀ ಶಬ್ದಗಳಿರುವುವೆಂದೂ, ಕೊಡವ ಬಾಲಕರು ಮಲಯಾಳೀ ಭಾಷೆಯನ್ನು ಬೇರೆ ಯಾವ ಭಾಷೆಯನ್ನು ಕಲಿಯುವುದಕ್ಕಿಂತಲೂ ಹೆಚ್ಚು ಬೇಗನೆ ಕಲಿಯುವರೆಂದೂ, ಒಬ್ಬ ಮಹನೀಯರು ಅಭಿಪ್ರಾಯಕೊಟ್ಟದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕೊಡವ ಭಾಷೆಯ ಪರಿಚಯವು ನನಗೆ ಹೆಚ್ಚಾಗಿ ಇಲ್ಲದಿದ್ದುದರಿಂದ ಈ ವರೆಗೆ ಆ ವಿಷಯವನ್ನು ಗಮನಕ್ಕೆ ತಂದಿರಲಿಲ್ಲ. ಈಗ ಕೊಡವ ಭಾಷೆಯಲ್ಲಿರುವ ಶಬ್ದಗಳನ್ನು ಒಂದೊಂದಾಗಿ ತೆಗೆದುಕೊಂಡು ನೋಡಿದರೆ ಮುಕ್ಕಾಲುಪಾಲು ಶಬ್ದಗಳು ಕನ್ನಡ ಶಬ್ದಗಳಾಗಿ ಕಂಡುಬರುತ್ತವೆ. ಪರಂತು ಕೊಡವ ಭಾಷೆಯಲ್ಲಿರುವ ಮಲಯಾಳೀ ಶಬ್ದಗಳ ಸಂಖ್ಯೆಯು ಬಹಳ ಸಣ್ಣದಾಗಿದೆ. ವಾಚಕರ ಅವಗಾಹನೆಗಾಗಿ ಈ ಕೆಳಗೆ ಕೆಲವು ಶಬ್ದಗಳನ್ನು ಕೊಡುವೆನು.

ಈ ಕೆಳಗಿನವುಗಳು ಕೊಡವ ಭಾಷೆಯಲ್ಲಿ ಕಂಡುಬರುವ ಶುದ್ಧ ಕನ್ನಡ ಶಬ್ದಗಳು :—

ಅಪ್ಪ, ಅವ್ವ, ಅಣ್ಣ, ಅಕ್ಕ, ಮಾವ, ತಂಗೆ, ತಮ್ಮಣ, ಭಾವ, ಅಜ್ಜ, ಅಜ್ಜಿ, ಬಾಲ(ಹುಡುಗ), ಹುಡುಗ, ಯೌವನಸ್ಥ, ರೈತ, ಮುದ್ಕ, ಮುದ್ಕಿ, ಆಳ್, ಜನ, ಮಕ್ಕ, ಚಿಕ್ಕಪ್ಪ; ಬಾಯಿ, ಕೈ ಹಣೆ, ತೊಡೆ, ಕೋಳಿ, ನಾಯಿ, ಮಂಗ, ಕತ್ತೆ, ಆನ, ಕುದುರೆ; ಚರ್ಮ, ಬಾಲ, ಚಕ್ಕಳ, ಗುಳ್ಳೆನರಿ, ನೀರ್ ನಾಯಿ, ಚಿರತೆ, ಸಿಂಹ, ಮರ, ಕೊಂಬ್, ಬೇರ್, ಚಕ್ಕೆ, ಅಕ್ಕಿ, ಕ್ರಿಂಸು, ಸಾಮನ್, ಅಳತೆ, ನೀರುಳ್ಳಿ, ಕೊತ್ತಂಬರಿ, ಬೆಲ್ಲ, ತರಕಾರಿ, ಬಾಳೆಕಾಯಿ, ಎಣ್ಣೆ, ಅಂಗಡಿ, ಪುಸ್ತಕ, ಕಾಗದ, ಅಕ್ಷರ, ಓದ್, ಕೊಡೆ, ಕೋಲ್, ದೋಣಿ, ಮಡಕೆ, ಕೊಡಪಾನ, ಗಡಿಗೆ, ತಪ್ಪಲೆ, ಬಡತನ, ಊಬ, ಕಾರ, ಮನೆ, ಯಜಮಾನ, ಗಟ್ಟಿಗ, ಬುದ್ಧಿವಂತ,

ಈ ಕೆಳಗಿನವುಗಳು ಸಂಸ್ಕೃತ, ಹಳೆಗನ್ನಡ ಅಥವಾ ಗ್ರಾಮ್ಯ ಶಬ್ದಗಳು. ಆದರೆ ಇವುಗಳೆಲ್ಲವೂ ಕನ್ನಡದಲ್ಲಿ ಉಪಯೋಗಿಸಲ್ಪಡುವ ಶಬ್ದಗಳು.

ಒಂಟಿ ಒಳಗ, ಸಂಸಾರ ಸಾಗರ, ಒಡೆಯ ಪೊಣ್ಣ್, ಭೂಲೋಕ, ತೃಪ್ತಿ, ಬಾಲ್ಯ, ಗುಂಪ್, ಗುಡ್ಡೆ, ಕಣ್ಣ್, ಮೂಕ್, ಹಲ್ಲು, ಶಾಕ, ವಿದಿಸ್, ಸಣ, ಆಸ್ತಿ, ಸ್ವತ್ತ್, ಐಶ್ವರ್ಯ, ಮಹಿಮೆ, ದುಃಖ, ದರಿದ್ರ, ಲಕ್ಷ್ಮಣ, ಆಟ್, ಕೂರಿ, ನೆಟ್ಟ್, ಬಿತ್ತ್, ಒಟ್ಟೆ, ಪೂಜೆ, ರಾಜ, ರಾಣಿ, ಕುರ್ಚಿ, ಮೇಜಿ, ಜಂಬಿ ಕೂಲಿ, ಜಾತಿ, ಮುಖ್ಯ, ಸಾಧು, ಕೂಳ್, ನೆಯ್, ಪಾಲ್, ಅವ, ಇವ, ಆರ್, ಕಿಡಿಕೆ, ಸಂತೋಷ, ಸ್ನೇಹಿತ, ಮಿತ್ರ, ಇಷ್ಟ, ಪ್ರೀತಿ, ದಯೆ, ಕರುಣೆ, ಕಠಿಣ, ಹೃದಯ, ಆತ್ಮ, ಶಾಂತಿ, ಸಮಯ, ಕಾಲ, ತಿಂಗ, ದಿನ, ವಾರ,

ಈ ಮೇಲೆ ಬರೆದವುಗಳಲ್ಲಿ ಕೆಲವು ಶಬ್ದಗಳಲ್ಲಿ ಸ್ವಲ್ಪ ಉಚ್ಚಾರ ಬೇಧಗಳು ಮಾತ್ರ ಕಂಡು ಬರುತ್ತವೆ. ಇವುಗಳನ್ನು ಮಾದರಿಗಾಗಿ ಮಾತ್ರ ಬರೆದಿದ್ದೇನೆ. ಇವುಗಳಲ್ಲದೆ ಇನ್ನೂ ಎಷ್ಟೋ ಕನ್ನಡ ನಾಮ ಪದಗಳು, ಮತ್ತು, ಬಾ, ಪೋ, ಮಾಡ್, ಇವೇ ಮೊದಲಾದ ಕ್ರಿಯಾ ಪದಗಳು ಕೊಡವ ಭಾಷೆಯಲ್ಲಿ ಕಂಡು ಬರುತ್ತವೆ. ಸಾಧಾರಣವಾಗಿ ಮಾತನಾಡುವಾಗ ಬರುವ ಶಬ್ದಗಳೆಲ್ಲವೂ ಕನ್ನಡ ಶಬ್ದಗಳೇ. ಆದರೆ ಕೆಲವು ಶಬ್ದಗಳಿಗೆ ಪ್ರತ್ಯಯಗಳು ಕೂಡಿಸಲ್ಪಟ್ಟಿವೆ. ಇನ್ನೂ ಕೆಲವಕ್ಕೆ ಉಚ್ಚಾರ ಬೇಧವು ಬಂದಿದೆ. ಇಷ್ಟೇ ಹೊರತು, ಇನ್ನೇನು ವ್ಯತ್ಯಾಸಗಳು ಕಂಡು ಬರುವುದಿಲ್ಲ. ಚೆನ್ನಾಗಿ ಪರಿಶೀಲಿಸಿ ನೋಡಿದರೆ ಕೊಡವ ಭಾಷೆಯಲ್ಲಿ ಹೆಚ್ಚು ಕನ್ನಡ ಶಬ್ದಗಳು ಕಂಡು ಬರುವವು. ಕೊಡವ ಭಾಷೆಯಲ್ಲೇ ಮಾತ್ರ ಬರುವ ಶಬ್ದಗಳು ಕಡಿಮೆ. ತಮಿಳು, ತುಳು ಮತ್ತು ಮಲೆಯಾಳ ಶಬ್ದಗಳು ಕೇವಲ ಕಡಿಮೆಯೆಂದೇ ಹೇಳಬಹುದು.

ಈ ಮೇಲೆ ಕಾಣಿಸಿದ ಭಾಷಾ ಪರಿಶೀಲನದಿಂದ ಕೊಡಗು ಕನ್ನಡ ನಾಡೆಂದೂ, ಕೊಡಗು ನಿವಾಸಿಗಳೆಲ್ಲರೂ ಶುದ್ಧ ಕನ್ನಡಿಗರೆಂದೂ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅಲ್ಲದೆ ಕೊಡವ ಬಾಲಕರಿಗೆ ಬೇರೆ ಯಾವ ಭಾಷೆಯನ್ನು ಕಲಿಯುವುದಕ್ಕಿಂತಲೂ, ಕನ್ನಡವನ್ನು ಕಲಿಯುವುದೇ ಅತ್ಯಂತ ಸುಲಭವೆಂದೂ ಇದರಿಂದ ತಿಳಿದು ಬರುತ್ತದೆ. ಕನ್ನಡ ಭಾಷೆಗೂ ಕೊಡವ ಭಾಷೆಗೂ ಕೆಲವು ಪ್ರತ್ಯಯ ಮತ್ತು ಉಚ್ಚಾರ ಬೇಧಗಳಿರುವುದರಿಂದ ಪ್ರಾರಂಭದಲ್ಲಿ ಕೊಡವ ಬಾಲಕರಿಗೆ ಕನ್ನಡವನ್ನು ಕಲಿಯಲು ಸ್ವಲ್ಪ ಕಷ್ಟವಾಗಬಹುದು.

ಅಲ್ಲದೆ ಮಲೆಯಾಳಕ್ಕೂ ಕೊಡವ ಭಾಷೆಗೂ ಏನೊಂದೂ ಸಂಬಂಧವಿಲ್ಲವು. ಉಚ್ಚಾರದಲ್ಲಿ ಬೇಧ, ಪ್ರತ್ಯಯದಲ್ಲಿ ಬೇಧ; ಇಷ್ಟಲ್ಲದೆ ಶಬ್ದಗಳೇ ಪ್ರತ್ಯೇಕವಾಗಿವೆ. ಹೀಗಿರುತ್ತ ಮಲೆಯಾಳವನ್ನು ಕಲಿಯುವುದು ಕೊಡವ ಮಕ್ಕಳಿಗೆ ಹೇಗೆ ಸುಲಭವಾಗುವುದೋ ನನಗೆ ತಿಳಿಯದು. ಬಹುಶಃ ಕೊಡವ ಬಾಲಕರು ಚಿಕ್ಕದಾಗಿರುವಾಗ ಮಲಯಾಳೀ ಕೂಲಿಯವರೊಡನೆ ಅಥವಾ ಕತ್ತಿ, ಛತ್ರಿ ವ್ಯಾಪಾರ ಮಾಡುವ ಮಾಪಿಳ್ಳೆಯವರೊಡನೆ ಮಿಳಿತವಾಗಿ ಕೆಲವು ಮಲಯಾಳೀ ಶಬ್ದಗಳನ್ನು ಕಲಿತುಕೊಳ್ಳಬಹುದು. ಹುಡುಗರು ಚಿಕ್ಕದಾಗಿರುವಾಗ ಯಾವ ಭಾಷೆಯನ್ನಾದರೂ ಕಲಿಯುವುದು ಬಹಳ ಸುಲಭವೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಇದಲ್ಲದೆ ಇನ್ನೊಂದು ವಿಷಯವಿದೆ, ಕನ್ನಡವಲ್ಲಾಗಲಿ, ಕೊಡವ ಭಾಷೆಯಲ್ಲಾಗಲಿ ಕಂಡು ಬಾರದೆ ಇರುವ ನಾಲ್ಕು ಅಕ್ಷರಗಳು ಮಲೆಯಾಳೀ ಅಕ್ಷರ ಮಾಲೆಯಲ್ಲಿರುವುವು. ಈ ಅಕ್ಷರಗಳನ್ನು ಮಲಯಾಳಿಗಳಲ್ಲದೆ ಇತರರಿಗೆ ಸರಿಯಾಗಿ ಉಚ್ಚರಿಸಲು ಕೂಡ ಬಹಳ ಕಷ್ಟವಾಗುವುದು.

ಈ ಕಾರಣಗಳಿಂದ ಕೊಡವ ಬಾಲಕರಿಗೆ ನಿಜವಾಗಿಯೂ ಕನ್ನಡ ಕಲಿಯಲು ಅತ್ಯಂತ ಸುಲಭವೆಂದೂ, ಕೊಡವ ಭಾಷೆಯು ಸ್ವಲ್ಪ ಪರಿವರ್ತನೆಯನ್ನು ಹೊಂದಿರುವ ಕನ್ನಡ ಭಾಷೆಯೆಂದೂ ಕಂಡು ಬರುತ್ತದೆ. ಆದುದರಿಂದ ಕೊಡವ ಸಹೋದರರೇ, ನಿಮ್ಮ ಮಾತೃ ಭಾಷೆಯು ಕನ್ನಡವೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲವು. ಈಗ ಈ ಮಾತೃ ಭಾಷೆಯಾದ ಕನ್ನಡದ ಏಳಿಗೆಗೆ ಗಮನ ಕೊಡತಕ್ಕದ್ದು ಎಲ್ಲರ ಕರ್ತವ್ಯವಾಗಿದೆ. ಕನ್ನಡ ಭಾಷೆಗೆ ಒಂದು ಪ್ರತ್ಯೇಕ ಪ್ರಾಂತ್ಯವಾಗಲಿಕ್ಕೂ, ಒಂದು ಪ್ರತ್ಯೇಕ ವಿಶ್ವವಿದ್ಯಾಲಯವಾಗಲಿಕ್ಕೂ ದಯವಿಟ್ಟು ಎಲ್ಲರೂ ಪ್ರಯತ್ನಿಸಿರಿ.

ಕರ್ನಾಟಕಾಭಿಮಾನಿ.

ಕೊಡಗು ಮಹಾಶಯರೇ,

ಶ್ರೀಸದ್ಗುರು ಸಿದ್ಧಾರೂಢಸ್ವಾಮಿಗಳವರ ಈಚೆ
ಟಿಸಿರುವ ಅವರ ಮಹಾತ್ಮೆಯ ಚರಿತ್ರೆಯನ್ನು ನಾನು
ಓದಿನೋಡಿದಲ್ಲಿ ಅದರಲ್ಲಿ ನಮೂದಿಸಿರುವ ಸಂಗತಿ
ನ್ನ ಹೃದಯದಲ್ಲಿ ನಾಟಿ, ಖುದ್ದಾಗಿ ಹೋಗಿ ಪರಾಂಬರಿ
ಡಿದಲ್ಲಿ ಅವರ ಮಹಾತ್ಮೆಯು ಚರಿತ್ರೆಯ ಕಾರ್ಯತತ್ವ
ರಿಸಿ ನಡೆದು ಬರುವದನ್ನು ಕಣ್ಣಾರ ಕಂಡು ಬಂತು. ಪ್ರ
ವೂ ಸಾವಿರಗಟ್ಲೆ ಜನರ ಸಮೂಹವು ಸ್ವಾಮಿಯವರ ದ
ರ್ಶನಕ್ಕೆ ಬರುತ್ತಾ ಇರುತ್ತಾರೆ. ಅವರ ಪ್ರಿಯ ಶಿಷ್ಯ
ಭಜನೆ ವಗೈರೆಗಳಿಂದ ಸ್ವಾಮಿಗಳಿಗೆ ಆನಂದಪಡಿಸುತ್ತಾ
ವುದನ್ನು ನೋಡಿದರೆ, ದೇವಲೋಕವನ್ನು ಕಾಣದೆ ಇ
ಮಗೆ ಅದೇ ದೇವಲೋಕವೆಂದು ಕಾಣುತ್ತೆ. ಗ್ರಂಥಕರ್ತ
ಕಟಿಸಿದ ಮೇರೆ ಗಂಗೆ, ಯಮುನ, ಕಾವೇರಿ ಮು
ತೀರ್ಥಯಾತ್ರೆಗಳಲ್ಲಿ ಉಪವಾಸ, ಜಾಗರಣೆ ಇದ್ದು ಜ
ತಾನು ಮಾಡಿದ ಪಾಪವು ಪರಿಹಾರವಾಗುತ್ತದೆ ಎಂಬ
ನ್ನು ಗುರುಹಿರಿಯರು ಹೇಳುತ್ತಿದ್ದದ್ದು ಮಹಾನುಭಾವ
ಳಿಗೆ ವೇದ್ಯವಿರಬಹುದು. ತನ್ನೋರೀತಿ ಈ ಕಲಿಕಾಲ
ಶ್ರೀಸದ್ಗುರು ಸಿದ್ಧಾರೂಢ ಸ್ವಾಮಿಗಳವರ ಚರಿತ್ರೆಯ
ಹಾಶಯರು ತರಿಸಿಕೊಂಡು ಓದಿದಲ್ಲೂ, ಅವರ ಪಾದ
ಮೂಡಿಬಂದಲ್ಲೂ ಈ ಚರಿತ್ರೆಯನ್ನು ಓದಿದನ್ನು ಕೇಳಿ
ನಹ ತಾವು ಮಾಡಿದಂಥಾ ಕೋಟ್ಯಾಂತರ ಪಾಪಗಳ
ಳಿದುಕೊಂಡು ಪವಿತ್ರರಾಗಿ ಮುಕ್ತಿಯನ್ನು ಪಡೆಯುವ
ಅಭಿಪ್ರಾಯವು ನನ್ನಲ್ಲಿ ತುಂಬಿಕೊಂಡ ರೀತಿ ಎಲ್ಲ
ತುಂಬಿ ತುಳುಕಬಹುದಾಗಿ ನಂಬುತ್ತೇನೆ.

ತಿಂಗೂರು ಲಿಂಗಪ್ಪ.

ಕೌನ್ಸಿಲ್ ಚುನಾವಣೆ ಬಂತು!

ಮಹನೀಯರೆ,

“ಎದ್ದೇಳಿ, ಕೌನ್ಸಿಲ್ ಚುನಾವಣೆಯು ಬಂತು.
ಭಂಗವಾದರೂ ಚಿಂತೆ ಇಲ್ಲ; ಬೊಜ್ಜು ಬೆಳೆದ ಹೊಟ್ಟೆ
ಯಾಸವಾದರೂ ಸರಿಯೇ. ಆಕೃತಿ ಬದಲಾದರೂ
ಇಲ್ಲ. ಅತ್ತಿತ್ತ ಓಡಾಡಿ ಸವಿ ಮಾತಾಡಿ, ನಾಡಿನ ಜ
ನರನ್ನು ಮರುಳುಗೊಳಿಸಲು ಪತ್ಕಾರು ಗೊಡ್ಡು ಮಾ
ನ್ನೂ, ಶತಕ ಸವಿ ಮಾತುಗಳನ್ನೂ ಚೀಲದಲ್ಲಿ ಹಾಕಿ
ಟಾರ್ ಅಬ್ಬರದೊಡನೆ ನಮ್ಮ ಬಂಗ್ಲೆಗಳನ್ನು ಬಿಡೋಣ
ಗ್ಯಯ್ಯ ಎಂದು ಕರೆಯೋಣ, ಇರುವ ನಾಲ್ಕಾರು
ಸಭೆಯ ಪೊಳ್ಳು ಫಲಗಳನ್ನು ನಾಡವರಿಗೆ ಬೋಧಿಸಿ
ಹಾಗೀಗಾಡಿ ಓಟುಗಳನ್ನು ಸಂಪಾದಿಸೋಣ, ಬಿಡೋಣ
ನಾಕು. ಕಮಿಷನರವರ ಊಟಕ್ಕ, ಚೀಫ಼್ ಕಮಿಷ
ರ ಭೇಟಿಗೆ, ಮೈಸರಾಯರು ಒಂದರ ಒಡಿ ಕತ್ತಿ ಮೆರವ
ಗೆ ಅಡ್ಡಿ ಇಲ್ಲವಲ್ಲಾ ಎಂಬವೊಂದೇ ನಮ್ಮ ಹಲ ಕೆಲವ
ಭಕ್ತರ ಆಶೆಯಾಗಿತ್ತು. ಇದರೊಂದಿಗೆ ಈಗಿನದೊಂದ
ಹೆಚ್ಚಿನ ಆಶೆಯು ತುಂಬಿ ತುಳುಕುತ್ತಿದೆ. ಅದೇನು
ಹಳ್ಳಿ ಕಡೆಗಳ ಕೆಲವು ಬಡ ಯೌವನಸ್ಥರು ಕಳೆದ ಚುನಾ
ಯಲ್ಲಿ ಅವರ ದೇಶಸೇವೆಯ ಬಲದಿಂದ ಕೌನ್ಸಿಲಿಗೆ
ದ್ದು ನಮ್ಮ ಕಂಬಿ ರುಮಾಲವರಿಗೆ ತಡೆಯಲಾರದೆ
ಅಲ್ಲಿಂದೀಚೆಗೆ ಕಂಬನಿಗಳನ್ನು ಸುರಿಸುತ್ತಾ, ಉರಿಯು
ಣ್ಣುಗಳಿಗೆ ತಂಪು ಕನ್ನಡಿ ಇಡುತ್ತಾ ರೌದ್ರ ರೂಪ
ತಾಳಿರುತ್ತಾರೆ. ನಾಡವರನ್ನು ಅಡಗಿಸೋಣ, ಬಿಗಿ
ನ್ನು ಮುರಿಯೋಣ, ನಮ್ಮ ಸೇವೆ ಬಲಿಯುದವರನ್ನ
ಸೋಣ, ನಾನ ಬಡಿಯೋಣ, ಸಂಘ ಸಂಸ್ಥೆಗಳಿಗೆ ಅ
ಗೋಣ, ವಿರೋಧ ಪತ್ರಿಕೆಗಳನ್ನು ಹೊರಡಿಸೋಣ,
ದ ಕೇಸುಗಳನ್ನು ಸೂಡಿಸಿ ಚಾರ್ಜ್ ಮಾಡಿಸಿಕೊಳ್ಳ
ಹ್ಯಾಗೂ ಅಡಗಿಸಿ ದಡ್ಡ ಹಳ್ಳಿ ಜನರನ್ನು ಒತ್ತರಂತೆ
ಕೊಳ್ಳೋಣ; ನಮ್ಮ ಅಜ್ಜಂದಿಯರು ಹಾಗೆ ಮಾಡಿಲ್ಲ
ನಾವು ನಾವೇ, ನಾಡವರು ನಾಡವರೇ ಎಂಬ ಧ್ಯೇಯ
ಮನದಲ್ಲಿ ಇಟ್ಟುಕೊಂಡು 20ನೇ ಶತಮಾನವೆಂಬುದನ್ನ
ದೆ ಹೊರಡುತ್ತಿರುವರು. ನಾಡು ಮಹನೀಯರೇ, ತ
ನ್ನು ಎದುರುಗೊಳ್ಳಿ. ಇನ್ನು ಇವರಿಂದ (Shake hand)
ಕ್ ಹೇಂಡ್, ಆಶೀರ್ವಾದ, ಯಾವಾಗ ಸಿಕ್ಕೀತು, ಇವ
ಟ್ಟ ಮೋರೆಯ ಪರದೇಶಿ ಉಡುಪನ್ನು ಯಾವಾಗ ಕಾ
ಇವರ ಕಾರ್ಯವು ನೆರವೇರಿದ ಮೇಲೆ ಇವರನ್ನು
ದು ಇನ್ನು 36 ತಿಂಗಳು ಕಳೆದನಂತರವೇ. ಇದನ್ನ
ಕಾಣತಕ್ಕವರು ನಮ್ಮ ಬಡ ಕಾವಿ ಬಟ್ಟೆಯ ಯೌವನಸ್ಥ
ಡವರೇ. ಇವರೇ ಬೈದ ಬೈಗಳಕ್ಕೂ, ಸೇಳಿದ
ಕೊಡುವ ಊಟಕ್ಕೂ ಇನ್ನು ನಮಗೆ ಸಿಕ್ಕತಕ್ಕವರು.
ವರನ್ನು ಅಡಗಿಸಬೇಕೆಂದು ಉದ್ದೇಶಪಡತಕ್ಕವರು ಇನ್ನ
ಪವಿತ್ರ ಭೂಮಿಯಲ್ಲಿ ಇರುವರಲ್ಲಾ! ಈ ಭೂಮಿ
ಹ್ಯಾಗೆ ತಾನೇ ಇವರನ್ನು ತಾಳಿರುವಳು. ಹ್ಯಾಗೂ
ಲಿ, ಸ್ವಾರ್ಥಪರರ ಆಶಾಭಂಗದ ದಿನವು ಸಮೀಪಿಸುವ
ಈಗಾಗಲೇ ಬರುತ್ತಿದೆ. ಅಸೂಯೆಯೂ, ಹೊಟ್ಟೆಕಿಚ್ಚೂ
ವರನ್ನೇ ಮೊದಲು ನುಂಗುವದು ಎಂಬ ನ್ಯಾಯವು
ಘದಲ್ಲಿ ಕಾಣಬರುವ ದಿನವು ಇದೇ. ಬಡ ನಾಡಿನವ
ಮ್ಮ ಓಟಿನ ಶಕ್ತಿಯನ್ನು ಸರಿಯಾಗಿ ಉಪಯೋಗಿಸಿ
ಗೌರವವನ್ನು ಉಳಿಸಿ. ಸ್ವಾರ್ಥಪರರ ಆಶಾಭಂಗವನ್ನ
ಣಾಸಿ, ಬಡವ ಸ್ವೈರದ ಹಿತ ಚಿಂತನೆಯನ್ನು ಮಾಡುವ
ಬರುಗಳನ್ನು ಉಳಿಸುವದು ನಿಮ್ಮ ಕರ್ತವ್ಯವಾಗಿದೆ.

ಬಡ ಓಟರು

EMPIRE OF INDIA LIFE ASSURANCE CO. LTD.

(Established 1897.)

ALL WITH PROFIT POLICIES;

Issued before 28th February 1927 will share in the BONUS Distribution for the five years ending on that date.

PROSPECTUS ON APPLICATION.

Bangalore Branch — 52 Commercial Street.

Madras Branch — 9 & 10 Second Line Beach.

C. K. Chengappa.
Special Agent. Riverside Estate.
24–12 Siddapur.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

ರಿಸರ್ವ್ ಫಂಡು	8086	12	2
ಕರ್ಜ್ ಕಳೆದು ಲಾಭ	913	15	1
ಒಟ್ಟು	16054	4	1

ಸಂಘದ ಮೆಂಬರುತನವನ್ನು ದಿನೇ ದಿನೇ ಹೆಚ್ಚುತ್ತಾ ಒ ರ ಕಾರಣ ಕೆಲವು ಮೆಂಬರುಗಳು ಈ ಸಂಘವನ್ನು ಒಡೆದು ಅವರವರ ಗ್ರಾಮ ಸಂಘಗಳಾಗಿ ಗ್ರಾಮಗಳಲ್ಲಿಗೆ ಇಡಬೇಕೆಂದು ಪ್ರಯತ್ನಪಟ್ಟಾಗ್ಯೂ ನಮ್ಮ ಕಮಿಟಿಯವರ ಮತ್ತು ಹೆಚ್ಚು ಸಂಖ್ಯೆ ಮೆಂಬರುಗಳ ಅಭಿಪ್ರಾಯದಿಂದ ಸಂಘವು ಒಂದು ದೊಡ್ಡ ಸಂಸ್ಥೆಯಾಗಿ ಆಗಲೂ ನಡೆಯುತ್ತಾ ಇದೆ. ಇದ ನ್ನು ಒಂದು ಸೆಂಟ್ರಲ್ ಸಂಘದಂತೆ ಯೋಚಿಸಿ ಇದಕ್ಕೆ ಬ್ರಾಂಚು ಯಾ ಶಾಖೆಗಳಾಗಿ ಚಿಕ್ಕ ಚಿಕ್ಕ ಸಂಘಗಳನ್ನು ಅ ವರವರ ಗ್ರಾಮಗಳಲ್ಲಿ ಸ್ಥಾಪಿಸುವದು ಉತ್ತಮವೆಂದು ಅನೇ ಕರ ಅಭಿಪ್ರಾಯ.

ರಿಜಿಸ್ಟ್ರಾರರ ರಿಪೋರ್ಟು ಪ್ರಕಾರ ಪತ್ರಾಪಾಲತವಿಲ್ಲ ದೆಯೂ, ಉದಾಸೀನವಿಲ್ಲದೆಯೂ ತಕ್ಕ ಕಾಲಗಳಲ್ಲಿ ಮೆಂಬ ರುಗಳಿಗೆ ತೊಂದರೆಕೊಡದೆ ಹಣ ವಸೂಲಾತಿ ಮಾಡಿಯೂ, ವ ಸೂಲಾತಿ ವಿಷಯದಲ್ಲೂ ತಕ್ಕ ಅವಧಿಯಲ್ಲು ತಗಾದಿಸಿಯೂ ಕೆ ಲಸ ಮಾಡುವದೇ ಸಭೆಗಳ ಕರ್ತವ್ಯವಾಗಿದೆ.

ಮತ್ತು ಸಂಘದಲ್ಲಿ ಹಣ ಕಮ್ಮಿ ಇದ್ದ ಪಕ್ಷ ಮೆಂಬ ರುಗಳಿಂದಲೂ ಮೆಂಬರುಗಳಲ್ಲದ ಬೇರೆ ಜನರಿಂದಲೂ ಹಮ್ಮಿ ಒಟ್ಟಿಗೆ ಹಣ ಒದಗಿಸಿಕೊಂಡು ಮೆಂಬರುಗಳಿಗೆ ಕಡಿಮೆ ಬಡ್ಡಿ ಯಿಂದ ಸಾಲ ಕೊಟ್ಟು ಅವರಿಗೆ ಅವಶ್ಯ ಇರುವ ಕಂತು ಕೊ ಟ್ಟು ಸಹಾಯ ಮಾಡಿ ಸಹಕಾರ ತತ್ವಗಳನ್ನು ಬೋಧಿಸಿ ಒಗ್ಗ ಟ್ಟಿನ ಪ್ರಯೋಜನವನ್ನು ಹೊಂದಬೇಕೆಂಬುದೇ ನಮ್ಮ ಆಶ ಯಾಗಿದೆ.

ಸಂಘದ ಕಮಿಟಿಯವರು ತೊಂದರೆ ತೆಗೆದುಕೊಂಡು ಮೆಂಬರುಗಳಿಗೆ ಉಂಟುಮಾಡುವ ಕ್ಷೇಮವನ್ನು ಯೋಚಿಸಿ ದೆ ಸಾಲ ವಸೂಲಾತಿಯ ವಿಷಯದಲ್ಲಿ ಉದಾಸೀನರಾಗಿ ಸಂಘ ದ ಕೆಲಸಕ್ಕೆ ಅಡಚಣೆ ಮಾಡುವ ಮೆಂಬರುಗಳು ಇನ್ನಾದರೂ ಮುಂದಕ್ಕೆ ತೃಪ್ತಿಕರವಾಗಿ ನಡಿಸಿಕೊಂಡು ಬರಬೇಕಾಗಿ ನಮ್ಮ ಕೋರಿಕೆ.

ಈ 21 ವರ್ಷಗಳಲ್ಲಿಗೆ ಮೆಂಬರುಗಳು ಕಮಿಟಿಯವರಿ ಗೆ ಸಹಾಯ ಕೊಟ್ಟು ಕಂಡು ಕೊರತೆಗಳು ಇಲ್ಲದ ರೀತಿ ನ ಡಿಸಿಕೊಂಡು ಬಂದ ವಿಷಯದಲ್ಲಿ ನಾವು ವಂದಿಸುತ್ತೇವೆ.

ನಮ್ಮ ಸಂಘದಲ್ಲಿ ಮೆಂಬರುತನವಿಲ್ಲದ ಮಹಿಳೆಯರೂ ವ ಹಿತೈಷಿಗಳೂ ಸಂಘದ ಅಭಿವೃದ್ಧಿಯನ್ನು ಅದರ ಆರ್ಥಿಕ ಸ್ಥಿತಿಯನ್ನು ಭದ್ರಪಡಿಸುವುದಕ್ಕಾಗಿ ... ಹಣ ಸಹಾಯ ಮಾಡಿದವರಿಗೆ ನಮ್ಮ ವಂದನಾಪೂರ್ವಕ ವಂದನೆ.

ಇಂದಿನ ಸೊಸೈಟಿಯು ... ಕಾರ್ಯದ ವಿಷಯ ಕಳೆದ ... ಮೆಂಬರುಗಳ ಜನರಲ್ ಬಾಡಿ ಮೀಟಿಂಗನ್ನು ... ಕಾರ್ಯಗಳನ್ನು ... ಮಾಡಿದ್ದರಿಂದ ಈ ದಿನ ... ಘಟ್ಟಬೇಕೆಂತವನ್ನು ನಾವು ಹಿಡಿದಿದ್ದೇವೆ.

ಈ ಕಾರ್ಯವನ್ನು ನಡಿಸಿದ ಕೆಲಸಗಳಿಂದ ಏನಾದರೂ ತ ಪ್ಪುಗಳು ಬಂದರೆ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇನೆ. ತಾಪುಗಳಿಲ್ಲಾ ನನ್ನ ಪನ್ನದ ಪತ್ರಕ್ಕೆ ಸಹಾಯಿಸಿ ನೀಡಿದ ವಿಷ ಯಕ್ಕೆ ನಾನು ಬಹಳ ಸಂತೋಷಪಡುವವನಾಗಿದ್ದೇನೆ.

ತಾ 3—10—26 ಅಪ್ಪಾರಂಡ ಪೂವಯ್ಯ,
ಪ್ರೆಸಿಡೆಂಟ್.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಪೇಟಂಟ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ
(೨) ಕೂಡುವದಕ್ಕೆ ಆರಾಮು
(೩) ಬಾಳಿಕೆಯಲ್ಲಿ ಗಟ್ಟಿ
(೪) ತಗಣೆಗಳು ಸೇರುವದಿಲ್ಲ
(೫) ಎತ್ತ್ಯಾಪಲಿಕ್ಕೆ ಬರುವಷ್ಟು ಹಗುರ

ಇತ್ಯಾದಿ

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯ ಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ.

ಸವಿಸ್ತರ ಸಂಗತಿಯು ಬಗ್ಗೆ ಬರೆದು ಕೇಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

10—4 ಜಿ. ಸಾತಾರ್.

ಇಂಗ್ಲಿಷ್ ಹೇರ್ ಡಿಸ್ಟ್ರಾಯರ್ ಸೋಪ್.

ಈ ಸೋಪು ವಿಲಾಯತಿಯಲ್ಲಿ ತಯಾರಾದದು. ಶರೀರದ ಯಾವ ಭಾಗದಲ್ಲಿಯಾದರೂ ಕ್ಷೌರ ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿ ಕ್ಷೌರ ಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಬಂದೇ ಒಂದು ನಿಮಿಷದಲ್ಲಿ ತೆಗೆದ ಬಿಡು.

ಕ್ರಯ 3 ಸಾಬೂನುಗಳ ಪೆಟ್ಟಿಗೆ 1ಕ್ಕೆ 1—4—0

ವಿಳಾಸ — ಮ್ಯಾಗ್ನೇಲಿಯಾ ಏಜೆನ್ಸಿ ಪೋಸ್ಟು ಬಾಕ್ಸ್ ನಂ 232 ಮದರಾಸು

ಸ್ಪಿರಿಟ್ ಸ್ಟೋವ್ ಎಂಬ ಅಡಿಗೆಮಾಡುವ ಒಲೆ.

ಇವುಗಳನ್ನು ಬ್ರಿಟಿಷ್‌ನವರು ಹೊಸನಾದ ಹಿತ್ತಾಳೆಯಿಂದ ಮಾಡಿದವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಕಟ್ಟಿಗೆ ಸೌದೆ ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆ ತುಂಬಿ ಕಣ್ಣುಗಳು ಕೆಟ್ಟುಹೋಗುವವು. ಆದರೆ ಇದರಿಂದ ಯಾವ ತೊಂದರೆಯೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. ಕ್ರಯ 1ಕ್ಕೆ ರೂ 3-0-0

ವಿಳಾಸ — ಸಿಟಿ ವಾಚ್ ಕಂಪೆನಿ 16 ತಿರ ಪಳ್ಳಿ ಬೀದಿ ಮದರಾಸು



ಅಮೇರಿಕನ್ ಎಲಕ್ಟ್ರಿಕ್ ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.

ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಇವನ್ನು ಊಟಿಸಲಿಕ್ಕೆ ಕಡ್ಡಿ ಎಣ್ಣೆ ಯಾವುದೂ ಬೇಕಿಲ್ಲ. ಇದರ ಮೇಲೆ ಇರುವ ಗುಂಡಿಯನ್ನು ಅದುಮಿದರೆ ತನಗೆ ತಾನೇ ಉರಿಯುವದು. ಮತ್ತು ಇದರಲ್ಲಿ ವಿದ್ಯುಚ್ಛಕ್ತಿಯು ಮುಗಿಯದೆ ಇರುವದು. ಜೇಬಿನಲ್ಲಿ ಇಟ್ಟುಕೊಳ್ಳಬಹುದು. ರಾತ್ರಿಯಲ್ಲಿ ಸಂಚರಿಸುವವರಿಗೆ ಮತ್ತು ಇತರರಿಗೂ ಬಹು ಸಹಾಯವಾದದ್ದು.

ಕ್ರಯ ಬ್ಯಾಟರಿ ಸಹಿತ 1ಕ್ಕೆ ರೂ 3-0-0

ವಿಳಾಸ — ಬ್ರಿಟಿಷ್ ಟ್ರೇಡಿಂಗ ಕಂಪೆನಿ

52—43 ಪೋಸ್ಟು ಬಾಕ್ಸ್ P B No 1223, ಮದರಾಸ

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	1[illegible] 870
ಒಟ್ಟು ಬಂದ ಠೇವಣಾತಿ	—	1 08 927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡಲ್ಪಡುತ್ತದೆ.

ಒಂದು ವರ್ಷ ಮುದ್ದತಿನ ಠೇವಣಿಗೆ ಸಹಕಾರಿ ಸಂಘಗಳಿಗೆ ಶೇಕಡ ಸಾಲಿಯಾನ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕರೆಂಟು ಠೇವಣಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು — ಕೂಡಂಡರ ಕುಟ್ಟಯ್ಯನವರು, ರಾವ್ ಬಹದ್ದೂರ್

ವೈಸ್ ಪ್ರೆಸಿಡೆಂಟ್ — ಮಂ ಭುಜಂಗರಾಯರು ಬಿ.ಎ. ಬಿ.ಎಲ್

ಸೆಕ್ರೆಟರಿ

ಸಿ. ಡಬ್ಲ್ಯು. ವೆಂಕಟಯ್ಯನವರು, ಬಿ.ಎ., ಬಿ.ಎಲ್

ತಾರೀಕು 1—7—1926

ಒಂದು ಪ್ರಬಲವಾದ ಪ್ರಶ್ನೆ

ನಿಮ್ಮ ಹಣವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳು ಕೋಟಿ ರೂಪಾಯಿಗಳಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆ ಕಂಪನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆ ಇದ್ದರೆ ಲಾಭ ಕೊಡುವ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಕಂಪನಿ ಯ ನಿಯಮಗಳು, ಶರತ್ತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿ ಬಟ್ಟೆ ಎಂದರೇನು?

ಕೈರಾಟೆಯಲ್ಲಿ ಕೈಯಿಂದ ನೂಲು ತೆಗೆದು ಕೈಮಗ್ಗದಲ್ಲಿ ನೇಯುವ ಬಟ್ಟೆಯೇ ಖಾದಿ. ಈಗಾಗಲೇ ನಮ್ಮ ಸ್ವದೇಶದಲ್ಲಿ ಪರದೇಶದ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಜಮಖಾನಗಳು ಶಾಲು ವಸ್ತ್ರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ, ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರರಾಜಪೇಟೆ, ದಕ್ಷಿಣ ಕೊಡಗು. — ಕೆ ಪಿ ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ

52—30.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15 16% ಅಂದರೆ ಮಿಕ್ಕ ಎಲ್ಲಾ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ನಾಲಕು ಪಾಲು ಹೆಚ್ಚಾಗಿರುವದು. ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು. ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಕೃಷಿಕರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಮೀನು ಗೊಬ್ಬರ ವಗೈರೆ ಇತರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿಕೊಡುತ್ತದೆ.

ಈ ಗೊಬ್ಬರವು ಸೊಟ್ಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಸಹ್ಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲು ಸಾಕಾಗುವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—21

CHILEAN NITRATE COMMITTEE,
Post Box 469, CALCUTTA

ಚಳಿಜ್ವರ ಮಲೇರಿಯ ಜ್ವರ, ಇನ್‌ಫ್ಲುಯೆಂಜ ಆದಿ ಜ್ವರ ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧ

ಬೆಲೆ ಬಾಟ್ಲಿಯೊಂದಕ್ಕೆ ರು ೦-೧೪-೦
ಟಪ್ಪಾಲು ಹಾಶಿಲ್ ಬೇರೆ

ಇಂಡೋ ಬಾಮ್.

ಸಂಧಿವಾತ, ತಲೆಶೂಲೆ, ಸೊಂಟನೋವು ಉಳುಕ, ಚೇಳುಕಡಿತ ಮೊದಲಾದವುಗಳ ಮೇಲೆ ಹಚ್ಚತಕ್ಕ ದಿವ್ಯವಾದ ಔಷಧ! ಬೆಲೆ ೧೦ ಆಣೆ. ಟಪ್ಪಾಲ ವೆಚ್ಚ ಬೇರೆ.

12—8 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನೌಕರಿ ಅರ್ಜಿ ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕಾಲವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಕರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಣಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು.

ತಾ 24—6—26 ಮೇನೇಜರ್,
ಮಡಿಕೇರಿ "ಕೊಡಗು" ಆಫೀಸು

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ ಅವರಿಗೆ ರಶೀತಿ ಪುಸ್ತಕಗಳನ್ನು ಸಹ ಏಜಂಟರು ಮತ್ತು ಗೌಡ ಕುಟ್ಟಪ್ಪನವರ ಜವಾಬು ದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಭಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ. ಪಟ್ಟಡ ಅಪ್ಪಯ್ಯನವರು
ಪೊನ್ನಂಪೇಟೆ/ಮೂರ್ನಾಡು—ಶಿವ ಶಿವಯರ್ ಸ್ಟೋರಿನಲ್ಲಿ ಮೆ. ಮಡೆಯಂಡ ಚೇಟ್ಟಯ್ಯನವರು
ನಾಪೋಕ್ಲು—ಮೆ. ಅರೆಯಡ ಸುಬ್ಬಯ್ಯನವರು
ಮೆ. ಪೊನ್ನಚಂಡ ಮಂದಪ್ಪನವರು
ಗೋಣಿಕೊಪ್ಪಲು—ಮೆ. ಜಮ್ಮಡ ಮಾದಪ್ಪನವರು
ಮಡಿಕೇರಿ—ಮೆ. ಬಿ ಮಾದಯ್ಯನವರ
ಅಮ್ಮತ್ತಿ, ಸಿದ್ದಾಪುರ—ಮೆ. ಐನಂಡ ಮಾದಪ್ಪನವರು
" ಮತ್ತು ವೀರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರ
ಮಡಿಕೇರಿ ಸುಂಟಿಕೊಪ್ಪ ನಾಡು—ಮೆ. ಒಳ್ಳರಂಡ ಅಯ್ಯನವರು
ಶ್ರೀಮಂಗಲನಾಡು—ಇಟ್ಟಿರ ಚಂಗಪ್ಪನವರು

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವರು. ಅವರಿಗೂ ಸಹ ಮೊಬಲಗು ಕೊಡಬೇಕೆಂದು ಕೋರಿಕೆ.

'ಕೊಡಗು' ಲಿಮಿಟೆಡ್ ಮೇನೇಜರ್,

Printed & published by P. I Belliappa, at "Kodagu" Press, Mercara for "Kodagu" Ltd.

If not delivered please return to
'KODAGU' OFFICE MERCARA.

ಕೊಡಗು.

[illegible]

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ್ವ ೧೯೨೬ನೆ ಇಸವಿ ಅಕ್ಟೋಬರ್ ತಾರೀಖು ೨೯ನೇ ಶುಕ್ರವಾರ [ಸಂಚಿಕೆ ೨೦

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties	4 lbs- Rs 30/	4 1/2 lbs- Rs. 33/	5 lbs- Rs 36/-Doz
Digging forks 4 prongs			Rs. 48/ Doz
Mamooty forks 4 prongs			Rs 39/ Doz
Felling axes — Each			Rs 3/ & 3/4/
Planting bars— Each			,, 3/12/
Weeding forks — Each			,, 1/12/
Garden trowels			,, 1/12/

GET IT AT SPENCERS- The House for all requisites

52—41

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) [illegible] 91 80 [illegible] ಕಂಪೆನಿಯ ಕ್ರಮದ ರೀತಿಯಲ್ಲಿ [illegible]

ಜೀವಮಾನಾವಧಿಯ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½

ಕ್ಲಿಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ [illegible]

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ

1923ರಲ್ಲಿ—ರೂ	1,74 00,000
1924 ,,	2,37 00,000
1925 ,,	2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತಲೇ ಇದೆ [illegible] ಹಣವನ್ನು [illegible] ತೀರಿಸಲು [illegible]

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ 56 ಮಂಗಳೂರು. — ಎಲ್. ಆರ್. ಕೃಷ್ಣಸ್ವಾಮಿಯ್ಯರ್ ಬ್ರಾಂಚ್ ಸೆಕ್ರೆಟರಿ

—30

ಮನೋಲ್ಲಾಸಿನಿ ತೈಲ.

[illegible]

[illegible]

1, 3, 6ಕ್ಕೆ ರೂ 1—1—0 3—3—0, 6—12—0

ರೋಮನಾಶಿನಿ — ಈ ಹುಡಿಯನ್ನು [illegible] ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿಗಳಿಗೆ 6 ಆಣೆ, 3 ಡಬ್ಬಿಗಳಿಗೆ 1 ರೂಪಾಯಿ 3 8 0

[illegible] — [illegible] ಜ್ವರ, [illegible] 1ಕ್ಕೆ ರೂ 1—8—0, 3ಕ್ಕೆ ರೂ 4—0—0 6ಕ್ಕೆ ರೂ 7—0—0,

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆನರಾ.

52—45

ಸತ್ಯಮೇವಜಯತೇ
(ಗುಣವಾದವಿದ್ದರೆ ಜಣ ಪರಶ)

[illegible]

ಮದನೋದ್ಭವ ಗುಳಿಗೆ.

[illegible] ಈ ಗುಳಿಗೆಯು ಸೇವನೆಯಿಂದ ಗುಣಾಂಶವಾಗಿ ಧಾತು ಪುಷ್ಟಿಕ, ವೀರ್ಯವರ್ಧಕ [illegible] ಗುಳಿಗೆಗಳು [illegible] ಬಾಟ್ಲಿಗೆ ರೂ ೨—೧೨—೦.

ಸ್ವಪ್ನದೋಷನಿವಾರಣಿ—ಇದರ ಸೇವನೆಯಿಂದ [illegible] ಗುಣವಾಗುವದು [illegible]

ವಿಳಾಸ —

ವೈದ್ಯ [illegible] ಕಂಪೆನಿ
40 ನಂ 6 ಪೋಸ್ಟ್ [illegible], ಉತ್ತರ ಕಾನಡಾ

ARMS & AMMUNITION MART.
Mahomedally-Noorbhoy.

321 Abdul Rehman Street, near
Crawford Market, BOMBAY 3
Telegraphic Address.—"SHOOTER"
Bombay.

[52—9] Please write for Reduced net prices list for 1926

"ಕೊಡಗು"

೧೯೨೬ನೇ ಇಸವಿ ಅಕ್ಟೋಬರ್ ತಾ. ೨೯ನೇ ಶುಕ್ರವಾರ

ರಾಜಕೀಯ ಚಳವಳದಲ್ಲಿ ಪಾರ್ಟಿ ಪದ್ಧತಿ.

ಹಿಂದಿನ ಸ್ಥಾನದ ವೈಸರಾಯರು ಪಂಜಾಬ್ ಕೌನ್ಸಿಲ್ ಮೆಂಬರುಗಳ ಮುಂದೆ ಮಾಡಿದ ಭಾಷಣದಲ್ಲಿ, ಸ್ವತಂತ್ರ ಸರಕಾರ ಪದ್ಧತಿಯಲ್ಲಿ ಪಾರ್ಟಿಗಳು ಇರಬೇಕಾದದ್ದು ಅವಶ್ಯವಾಗಿದೆ ಮತ್ತು ಸ್ವಾಭಾವಿಕವಾಗಿದೆ ಎಂತ ಹೇಳಿದ್ದಾರೆ. ಹಾಗಾದರೆ ಸ್ವತಂತ್ರ ರಾಜ್ಯಗಳಲ್ಲೆಲ್ಲಾ ಪಾರ್ಟಿಗಳಿರಬೇಕೆಂದಾದರೆ ನಮ್ಮ ದೇಶದಲ್ಲಿ ಇರುವ ಪಾರ್ಟಿ ಕಲಹಗಳು ಯುಕ್ತವಾದವೆಂತ ವಾಚಕರಿಗೆ ತೋರಬಹುದು. ಜನರೊಳಗೆ ಅನ್ಯೋನ್ಯ ಜಗಳಗಳಾಗುವಂಥ, ಒಂದು ಪಾರ್ಟಿಯು ಜನರನ್ನು ಇನ್ನೊಂದು ಪಾರ್ಟಿಯವರು ವ್ಯಕ್ತಿಶಃ ದೂಷಿಸುವಂಥ ಮತ್ತು ಜಾತಿಗಳನ್ನು ಅನುಸರಿಸುವಂಥ ಪಾರ್ಟಿಗಳಿರಬೇಕೆಂಬುದು ವೈಸರಾಯರ ಅಭಿಪ್ರಾಯವಲ್ಲ. ದೇಶದ ಆಡಳಿತ ಆದಿ ಒಟ್ಟಾಗಿ ರಾಜಕೀಯ ವಿಷಯಗಳ ಮೇಲೆ ಆಲೋಚನೆ ಮಾಡುತ್ತಿರುವಂಥ ಜನರೆಲ್ಲರೂ ಒಂದೇ ರೀತಿಯಾಗಿ ಅಭಿಪ್ರಾಯಪಡುವದು ಸಾಧ್ಯವಿಲ್ಲ. ಆದ್ದರಿಂದ ಮುಖ್ಯ ಸಂಗತಿಗಳಲ್ಲಾದರೂ ಒಪ್ಪುವ ಜನರು ಗುಂಪುಗಳಾಗುವದು ಸ್ವಾಭಾವಿಕವಾಗಿದೆ. ನಮ್ಮ ದೇಶವು ಸ್ವತಂತ್ರ ಸರಕಾರ ಉಳ್ಳದ್ದಲ್ಲವಾದರೂ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ಅಭಿಪ್ರಾಯವು ಜನರಲ್ಲಿ ಹುಟ್ಟುತ್ತಿರುವಾಗ ಇತರ ದೇಶದ ಆಡಳಿತದ ಮೇಲೆ ಚರ್ಚಿಸಬಹುದಾದ ಅವಕಾಶವುಳ್ಳ ಕೌನ್ಸಿಲ್ ಸ್ಥಾಪಿಸಲ್ಪಟ್ಟಂದಿನಿಂದ ಪಾರ್ಟಿಗಳು ತಲೆದೋರಿವೆ. ದೇಶದ ಶಕ್ತಿಯನ್ನು ಒಟ್ಟುಗೂಡಿಸಿ ಜೋಡಿಸಿ ದೇಶದ ಅಭ್ಯುದಯಕ್ಕೆ ಬೇಕಾದ ಕಾರ್ಯಗಳನ್ನು ಮಾಡಿಸಿಕೊಳ್ಳಲು ಪಾರ್ಟಿ ಪದ್ಧತಿಯೊಂದೇ ದಾರಿಯೆಂತ ವೈಸರಾಯರು ಹೇಳಿದ್ದಾರೆ. ಆದ್ದರಿಂದ ಸಾರ್ವಜನಿಕ ಕಾರ್ಯಗಳಲ್ಲಿ ಹೋರಾಡುವ ಪಾರ್ಟಿಗಳ ಸಿದ್ಧಾಂತಗಳನ್ನು ತಿಳಿದುಕೊಂಡು ದೇಶದವರು ತಮ್ಮ ಪ್ರತಿನಿಧಿಗಳನ್ನು ಚುನಾವಣೆಗಳಲ್ಲಿ ಪಾರ್ಟಿಯನ್ನನುಸರಿಸಿ ಆರಿಸಿಕೊಳ್ಳುವದೇ ಸರಿಯಾದ ದಾರಿಯಾಗಿ ತೋರುತ್ತದೆ.

ದೇಶದಲ್ಲಿ ಪಾರ್ಟಿಗಳು ಉಂಟಾಗಿರುವಾಗ ಚುನಾಯಿತರಾಗುವ ಮೆಂಬರನೊಬ್ಬನು ತಾನು ಯಾವ ಪಾರ್ಟಿಗೂ ಸೇರಿದವನಲ್ಲವೆಂತ ಹೇಳುವ ಅದ. ಗೌರವದ ಮಾತೆಂತ ಹೇಳಲಿಕ್ಕಾಗುವದಿಲ್ಲ. ದೇಶದ ಸಮುದಾಯಕ್ಕೆ ಸಂಬಂಧಪಟ್ಟ ಮುಖ್ಯ ವಿಷಯಗಳಲ್ಲಿ ತಮ್ಮ ಪ್ರತಿನಿಧಿಯು ಯಾವ ಪಾರ್ಟಿಯ ಸಂಗಡ ಓಟು ಕೊಡುತ್ತಾನೆಂಬುದು ಓಟರುಗಳಿಗೆ ತಿಳಿದಿರುವದು ಅಗತ್ಯವಾಗಿದೆ. ಯಾವ ಪಾರ್ಲಿಮೆಂಟಿನಲ್ಲೇ ಆಗಲೀ ಕೌನ್ಸಿಲಿನಲ್ಲೇ ಆಗಲೀ ಚುನಾಯಿತರಾಗುವವರೆಲ್ಲರೂ ಸರ್ವ ಸಮರ್ಥರಾಗಿರುವದಿಲ್ಲ. ಕೆಲವು ಪ್ರತಿನಿಧಿಗಳು ಮಾತ್ರ ಸಮರ್ಥರಾಗಿದ್ದು ಇತರರು ಅಂಥಾ ಸಮರ್ಥ ಮೆಂಬರುಗಳಿಗೆ ಜೊತೆಯಾಗಿರುತ್ತಾರಷ್ಟೆ. ಸಾರ್ವಜನಿಕ ಕೆಲಸಗಳಲ್ಲಿ ಕೆಲಸ ಮಾಡಿದವರಾಗಿದ್ದರೆ ಅಂಥವರಿಗೆ ಸ್ವಂತ ಅಭಿಪ್ರಾಯಗಳೂ ಇರುತ್ತವೆ. ಅಂಥವರು ಸಾರ್ವಜನಿಕ ಪ್ರಶ್ನೆಗಳಲ್ಲಿ ತಮ್ಮ ಆಲೋಚನೆ ಕೊಡಲು ಶಕ್ತರಿರುತ್ತಾರೆ. ಪಾರ್ಲಿಮೆಂಟುಗಳಲ್ಲಿ ಅಥವಾ ಕೌನ್ಸಿಲುಗಳಲ್ಲಿ ವಾದಿಸಲು ಬೇಕಾದಷ್ಟು ವಾಕ್ಚಾತುರ್ಯವಿಲ್ಲದಿದ್ದರೂ ಮೆಂಬರುಗಳು ಸ್ವಂತವಾಗಿ ನಡೆಸಿಕೊಳ್ಳುವ ಚರ್ಚೆಗಳಲ್ಲಿ ಆಲೋಚನೆ ಕೊಟ್ಟರೆ ಸಾಕಾಗಿದೆ. ಇಂಥಾ ಆಲೋಚನೆ ಕೊಡುವಾಗಲಾದರೂ ತಮ್ಮ ಪ್ರತಿನಿಧಿಯು ಯಾವ ಪಾರ್ಟಿಗೆ ಅನುಗುಣವಾಗಿ ಮತ ಕೊಟ್ಟಾನೆಂಬುದನ್ನು ಚುನಾಯಿಸುವ ಓಟರುಗಳು ತಿಳಿದುಕೊಳ್ಳಬೇಕು.

ಪಾರ್ಟಿ ಪದ್ಧತಿ ಇರಬೇಕೆಂತ ಒಪ್ಪಿಕೊಳ್ಳುವದಾದರೆ ಪಾರ್ಟಿಗೆ ಸೇರಿದವರು ತಮ್ಮ ಸ್ವಂತ ಅಭಿಪ್ರಾಯಗಳನ್ನು ಸಾಧಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನಮ್ಮ ದೇಶದ ಕೌನ್ಸಿಲಿನಲ್ಲಿ ಕೆಲವರು ತಮ್ಮ ಸ್ವಂತ ಅಭಿಪ್ರಾಯವನ್ನು ಬಿಟ್ಟು ಓಟು ಕೊಡಬೇಕಾಯಿತೆಂತ ಒಪ್ಪಿಕೊಂಡರು. ಇದು ಬಹಳ ದೊಡ್ಡ ತಪ್ಪು ಎಂಬಂತೆ ಕೆಲವರು ಟೀಕಿಸಿದ್ದನ್ನು ಕೇಳುತ್ತೇವೆ. ಈ ವಿಷಯದಲ್ಲಿ ವೈಸರಾಯರು ಹೇಳಿರುವದೇನೆಂದರೆ—"ಬಹಳ ಕಡಿಮೆ ಸಂಖ್ಯೆ ಜನರು ಮಾತ್ರ ಒಂದೇ ಅಭಿಪ್ರಾಯದವರಾಗಿರುತ್ತಾರೆ. ಆದ್ದರಿಂದ ಯಾವ ಪಾರ್ಟಿಯಲ್ಲೇ ಆದರೂ ಪ್ರತಿಯೊಬ್ಬನೂ ತನ್ನ ತನ್ನ ಉದ್ದೇಶವನ್ನು ಅಭಿಲಾಷೆಗಳನ್ನು ಬಿಟ್ಟುಕೊಟ್ಟು ತನ್ನ ಪಾರ್ಟಿಯ ಮೆಂಬರುಗಳ ವಿಶ್ವಾಸ ಮತ್ತು ಸಹಾಯವನ್ನು ಪಡೆದುಕೊಳ್ಳಬೇಕಾಗುತ್ತದೆ" ಇದು ಸರ್ವರಿಗೂ ತಿಳಿದಿರಬೇಕಾದ ಸಾಧಾರಣ ಸಂಗತಿಯಾದರೂ ವೈಸರಾಯರೇ ಹೇಳಿದರೆಂತ ತಿಳಿದರೆ ಸಂಶಯವುಳ್ಳವರೂ ಸಹ ಒಪ್ಪಬಹುದಾಗಿದೆ. ಹಿಂದೂ ದೇಶದಲ್ಲಿ ಉತ್ಸಾಹದಿಂದ ಕೆಲಸಮಾಡುತ್ತಿರುವ ಸ್ವರಾಜ್ಯಪಾರ್ಟಿಯಲ್ಲಿಯೂ ಸಹ ಇಂಥ ಒಪ್ಪಂದಗಳು ಇದ್ದೇ ಇವೆ. ಮತ ಸಂಬಂಧವಾದ ವಿಷಯಗಳಲ್ಲಿ ಮಾತ್ರ ಆಯಾ ಮತದ ಮೆಂಬರುಗಳು ವ್ಯಕ್ತಿ ಸ್ವಾತಂತ್ರ್ಯ ಉಳ್ಳ ಭಾಗದವರು ಒಪ್ಪದೆ ಇರುವ ವಿಷಯಗಳಲ್ಲಿ ಮಾತ್ರ ಪಾರ್ಟಿ ಮೆಂಬರುಗಳಿಗೆ ಸ್ವತಂತ್ರವಿದೆ. ಮಿಕ್ಕ ಎಲ್ಲಾ ಸಂಗತಿಗಳಲ್ಲಿ ಪಾರ್ಟಿಯ ತೀರ್ಮಾನದಂತೆ ಓಟು ಕೊಡತಕ್ಕವರಾಗಿರಬೇಕು.

ಈ ರೀತಿ ಪಾರ್ಟಿಗಳನ್ನು ಅನುಸರಿಸಿದರೇನೇ ದೇಶದ ಚುನಾವಣೆಗಳಲ್ಲಿ ಉತ್ಸಾಹವು ಹುಟ್ಟೀತು. ಮತ್ತು ಚುನಾವಣೆಯಿಂದ ಪ್ರಯೋಜನವೂ ಆದೀತು. ದೇಶದ ಜನರ ಪ್ರತಿನಿಧಿಗಳಾಗಿ ಬರುವ ಮೆಂಬರುಗಳ ಪೈಕಿ ಹೆಚ್ಚು ಇರುವ ಪಾರ್ಟಿಯ ಅಭಿಪ್ರಾಯವೇ ದೇಶಕ್ಕೆ ಒಪ್ಪಿಗೆಯಾಗುವ ಅಭಿಪ್ರಾಯವೆಂತ ಸರಕಾರವೂ ಸ್ವಲ್ಪವಾದರೂ ತಿಳಿದುಕೊಳ್ಳುತ್ತದೆ. ಯಾವ ಪಾರ್ಟಿಯ ಅಭಿಪ್ರಾಯವು ದೇಶದ ಅಭಿಪ್ರಾಯವಾಗಿ ಬೇಕೋ ಆ ಪಾರ್ಟಿಯ ಜನರನ್ನೇ ಆರಿಸಿಕೊಳ್ಳಬೇಕಾದದ್ದು ಓಟರುಗಳ ಕರ್ತವ್ಯವಾಗಿದೆ

ದೇಶಕ್ಕೆ ಸ್ವಾತಂತ್ರ್ಯ ದೊರಕುವ ವರೆಗೆ ಆಶಿಸಿಕೊಳ್ಳುವ ಜನರಲ್ಲಿ ಪಂಗಡಗಳಿರಬಾರದೆಂದು ಹೇಳುವದಿಲ್ಲ. ಸರಕಾರವೇ ಒಂದು ಪಾರ್ಟಿ, ಸರಕಾರದಿಂದ ಸ್ವಾತಂತ್ರ್ಯವನ್ನು ಪಡೆಕೊಳ್ಳಲು ಹೋರಾಡುವ ಸಮುದಾಯದವರ ಒಗ್ಗಟ್ಟಾದ ಒಂದು ಪಾರ್ಟಿ, ಇವೆರಡು ಪಾರ್ಟಿಗಳು ಇರಬೇಕಾದದ್ದು ದೇಶದ ಈಗಿನ ಸ್ಥಿತಿಗೆ ಯುಕ್ತವಾದದ್ದು. ಆದರೆ ನಮ್ಮ ದೇಶದ ದುರ್ದೆಶೆಯಿಂದ, ಇಡೀ ಹಿಂದೂಸ್ಥಾನದ ಈಗಿನ ರಾಜಕೀಯ ಚಳವಳದಲ್ಲಿ ಉಂಟಾಗಿರುವಂತೆ, ಇಲ್ಲಿಯೂ ಪಾರ್ಟಿಗಳು ತಲೆದೋರಿವೆ. ಹೀಗೆ ಪಾರ್ಟಿಗಳು ಹುಟ್ಟಿರುವಲ್ಲಿ ಅವುಗಳನ್ನು ದೇಶದ ಅಭ್ಯುದಯಕ್ಕೆ ಅನುಕೂಲವಾಗುವಂತೆ ಉಪಯೋಗಿಸಿಕೊಳ್ಳಬೇಕಾದದ್ದು ಜನರ ಕರ್ತವ್ಯವಾಗಿದೆ

ಚುನಾವಣೆ.

ಇದೇ ಹಿಂದಿನ ಸ್ಥಾನದಲ್ಲಿ ಕೌನ್ಸಿಲು ಚುನಾವಣೆಗಾಗಿ ಓಟು ಕೇಳುವ ಚಳವಳಿಯು ಬಹಳ ಅಬ್ಬರದಿಂದ ನಡೆಯುತ್ತಿದೆ. ಹಾಗೆಯೇ ಈ ದೇಶದಲ್ಲಿಯೂ ನಡೆಯುತ್ತಿದೆ. ಸಣ್ಣ ದೇಶವು ಚಿಕ್ಕದಾದರೂ ಚಳವಳಿಯ ಅಬ್ಬರವೇನೂ ಕಡಿಮೆ ಇಲ್ಲ. ಆದರೆ ಹಿಂದೂ ದೇಶದ ಬೇರೆ ಪ್ರಾಂತ್ಯಗಳಲ್ಲಿ ಕಾಲಕ್ಕೆ ಸರಿಯಾಗಿ ಓಟರುಗಳ ಪಟ್ಟಿಯು ತಯಾರಾಗಿ ಚುನಾವಣೆಯ ತಾರೀಕುಗಳು ನಿಶ್ಚೈಸಲ್ಪಟ್ಟಿವೆ. ಬರುವ ನವಂಬರು ತಾರೀಕು 8 ಮತ್ತು 9ರಲ್ಲಿ ಹಲವು ಪ್ರಾಂತ್ಯಗಳಲ್ಲಿ ಚುನಾವಣೆಯು ನಡೆಯುವುದು. ನಮ್ಮ ಈ ದೇಶದಲ್ಲಾದರೋ ಎರಡು ಸಂಸ್ಥೆಗಳ ಅಂದರೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಲೆಜಿಸ್ಲೇಟಿವ್ ಕೌನ್ಸಿಲು ಇವೆರಡರ ಚುನಾವಣೆಗಳು ಒಂದರ ಮೇಲೊಂದು ಬರುವಂತೆ ತೋರುತ್ತವೆ ಇಲ್ಲಿ ಕಾಲದ ಮಿತಿ ಯೇನೂ ಕಂಡುಬರುವದಿಲ್ಲ. ಡಿಸ್ಟ್ರಿಕ್ಟ್ ಬೋರ್ಡು ಓಟರುಗಳ ಪಟ್ಟಿಯನ್ನು ಆಗೋಸ್ತು ತಿಂಗಳಲ್ಲಿಯೇ ತಯಾರಿಸಿ ಸೆಪ್ಟಂಬರು 9ರೊಳಗೆ ಪಟ್ಟಿಯಲ್ಲಿ ಹೆಸರು ಬಿಟ್ಟುಹೋದವರು ಫಿರ್ಯಾದುಗಳನ್ನು ಒಪ್ಪಿಸಿಕೊಳ್ಳತಕ್ಕದೆಂದೂ ಪ್ರಕಟಿಸಲಾಗಿತ್ತು. ಇಂಥಾ ಫಿರ್ಯಾದುಗಳು ದೇಶದ ಬೇರೆ ಬೇರೆ ಕಡೆಗಳಲ್ಲಿ ಸೆಪ್ಟಂಬರ್ ತಾ. 15ರಿಂದ 18ರ ವರೆಗೆ ವಿಚಾರಿಸಲ್ಪಡುವವೆಂದು ನೋಟೀಸು ಹೊರಟಿತ್ತು. ಆದರೆ ಈ ವರೆಗೆ ಅಂಥಾ ವಿಚಾರಣೆಯೂ ನಡೆದಿರುವದಿಲ್ಲ. ಫಿರ್ಯಾದುಗಳನ್ನು ಕುರಿತು ಆರ್ಜಿಗಳಿಗೆ ಒಪ್ಪಿಸುವ ತಾರೀಕನ್ನು ಮುಂದರಿಸಿದಾಗಿದೆಯೆಂದು ಜನರಿಗೆ ತಿಳಿಸಲೂ ಇಲ್ಲ. ಅಧಿಕಾರಿಗಳ ಇಂಥಾ ಮೌನಕ್ಕೆ ಕಾರಣವೇನೆಂದು ಗೊತ್ತಾಗುವದಿಲ್ಲ.

ಓಟರುಗಳ ಪಟ್ಟಿಯು ಪ್ರಿಂಟಾಗಲು ತಡವಾದದ್ದೇ ಅವಕಾಶಕ್ಕೆ ಕಾರಣವೆಂದು ಸುದ್ದಿ. ಇದು ನಿಜವಾದರೆ, ಇಂಥಾ ಮುಖ್ಯ ಕೆಲಸವನ್ನು ಬರೇ ಪ್ರಿಂಟಿಂಗ್ ತೊಂದರೆಯ ಕಾರಣದಿಂದ ಕಾಲಕ್ಕೆ ಸರಿಯಾಗಿ ನಡಿಸದೆ ಇರುವದು ಸರಿಯಲ್ಲ. ಪಟ್ಟಿಯನ್ನು ಕಾಲಕ್ಕೆ ಸರಿಯಾಗಿ ಪ್ರಿಂಟು ಮಾಡಿಸಿಕೊಳ್ಳುವ ಏರ್ಪಾಡು ಮಾಡಬೇಕಾದದ್ದು ಅಧಿಕಾರಿಗಳ ಕೆಲಸ. ಹಾಗೆ ಒಪ್ಪಂದ ಪ್ರಕಾರ ಪ್ರಿಂಟುಮಾಡಿಕೊಡುವವರಿಗೆ ಕೆಲಸವನ್ನು ಕೊಟ್ಟಿದ್ದರೆ ಇಷ್ಟರೊಳಗೆ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯನ್ನು ಮುಗಿಸಬಹುದಾಗಿತ್ತು. ಅಧಿಕಾರಿಗಳು ಅಲ್ಪ ಅಗ್ಗ ಪ್ರಿಂಟಿಂಗಿಗೆ ಗಮನಕೊಟ್ಟರೇ ಹೊರತು ಸಮಯದ ಬೆಲೆಯನ್ನು ಗಣಿಸಲೇ ಇಲ್ಲ. ಒಂದೇ ಕಡೆಯಲ್ಲಿ ಪ್ರಿಂಟುಮಾಡಲು ಅವಕಾಶವಾಗುವುದೆಂದು ಕಂಡರೂ ಆ ಕೆಲಸವನ್ನು ಅಧಿಕಾರಿಗಳು ಬೇರೆ ಎರಡು ಮುದ್ರಾಕ್ಷರಶಾಲೆಗಳಿಗೆ ಹಂಚಿ ಬೇಗನೆ ಪ್ರಿಂಟುಮಾಡಿಸಿಕೊಳ್ಳಬಹುದಾಗಿತ್ತು. ಈ ಅವಕಾಶಕ್ಕೆ ಜವಾಬ್ದಾರರು ಯಾರೆಂದು ಜನರಿಗೆ ತಿಳಿಸಿದ್ದರೆ ಉತ್ತಮವಾಗುತ್ತಿತ್ತು.

ಕೌನ್ಸಿಲು ಚುನಾವಣೆಯ ಗತಿಯು ಹೀಗಿದೆ. ಚೀಫ್ ಕಮಿಶನರವರ 24—4—'26 ರ 51 ನೇ ನೋಟಿಫಿಕೇಶನ್ ಪ್ರಕಾರ ಕೌನ್ಸಿಲು ಓಟರುಗಳ ಪಟ್ಟಿಯು ಆಗೋಸ್ತು ತಿಂಗಳಲ್ಲಿ ತಯಾರಿಸಲ್ಪಟ್ಟು ಅದೇ ತಿಂಗಳಲ್ಲಿ ಪ್ರಕಟಿಸಲ್ಪಡಬೇಕಾಗಿತ್ತು. ಹಾಗೆ ಪ್ರಕಟವಾಗಿ ಫಿರ್ಯಾದುಗಳಿಗೆ ಒಂದು ತಿಂಗಳ ಸಮಯವು ಇಡಲಾಗಿತ್ತು. ತಿದ್ದುಪಡಿ ಮಾಡಿ ನಿರ್ಧರಿಸಿದ ಪಟ್ಟಿಯು ನವಂಬರು 10ರೊಳಗೆ ಪ್ರಕಟವಾಗಬೇಕಾಗಿತ್ತು. ಆದರೆ ಆ ನೋಟಿಫಿಕೇಶನ್ನನ್ನು ತಿದ್ದುಪಡಿಸಿ ಚೀಫ್ ಕಮಿಷನರು ಅಕ್ಟೋಬರು 1ರಲ್ಲಿ ನಂ. 120ರ ಇನ್ನೊಂದು ನೋಟಿಫಿಕೇಶನನ್ನು ಹೊರಡಿಸಿರುವರು. ಇದರ ಪ್ರಕಾರ ಓಟರುಗಳ ಪ್ರಥಮ ಪಟ್ಟಿಯನ್ನು ಆಗೋಸ್ತು, ಸೆಪ್ಟಂಬರು ಮತ್ತು ಅಕ್ಟೋಬರು ತಿಂಗಳುಗಳಲ್ಲಿ ತಯಾರಿಸಿ ಪ್ರಕಟಿಸುವಂತೆಯೂ, ನವಂಬರು 8ರೊಳಗೆ ಫಿರ್ಯಾದು ಅರ್ಜಿಗಳನ್ನು ಕೊಡುವಂತೆಯೂ, ಡಿಸೆಂಬರು 1ರೊಳಗೆ ನಿರ್ಧರಿಸಿದ ಪಟ್ಟಿಯನ್ನು ಪ್ರಕಟಿಸುವಂತೆಯೂ ಇದೆ. ಈ ತಿದ್ದುಪಡಿಗೆ ಕಾರಣ ಕೂಡ ಪಟ್ಟಿಯ ಪ್ರಿಂಟಿಂಗಿನ ತಡವೇ ಕಾರಣವೆಂದು ತೋರುತ್ತದೆ. ಆದರೆ ಈ ವರೆಗೆ ದೇಶದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಓಟರುಗಳ ಪಟ್ಟಿ ಮಾತ್ರ ಪ್ರಕಟವಾಗಿದೆ ಕೌನ್ಸಿಲಿನ ಪಟ್ಟಿಯು ಇನ್ನೂ ಬಹಿರಂಗವಾಗಿರುವದಿಲ್ಲ. ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲಿನ ಓಟರುಗಳ ಪಟ್ಟಿ ಒಂದೇ ಆದರೆ ಹಾಗೆಂದು ಜನರಿಗೆ ತಿಳಿಸಬೇಕಾದದ್ದು ಅವಶ್ಯ. ಅಲ್ಲದೆ ಕೌನ್ಸಿಲಿಗೆ ಪ್ರತ್ಯೇಕ ಪಟ್ಟಿ ಇದ್ದರೆ ಅದನ್ನು ಪ್ರಕಟಮಾಡದೆ ಇರುವಲ್ಲಿ ನವಂಬರು 8ರೊಳಗೆ ಓಟರುಗಳಿಗೆ ಫಿರ್ಯಾದು ಅರ್ಜಿ ಒಪ್ಪಿಸಿಕೊಳ್ಳಲು ಸಮಯ ಸಾಲದೆಂದು ಹೇಳಬೇಕಾಗಿದೆ.

ಮೂರು ವರ್ಷಗಳ ಹಿಂದೆ ನಡೆದ ಕೌನ್ಸಿಲು ಚುನಾವಣೆಯಲ್ಲಾದರೋ ಎಲ್ಲವೂ ತುರಿತದಲ್ಲಿಯೂ ಅನುಭವವಿಲ್ಲದೆಯೂ ನಡಿಸಲ್ಪಟ್ಟ ಕಾರಣ ಬಿಟ್ಟುಹೋದ ಓಟರುಗಳ ಹೆಸರನ್ನು ಸೇರಿಸಿಕೊಳ್ಳುವಂತೆ ಅರ್ಜಿ ಬರೆಯಲು ಅವಕಾಶವು ಕೊಡಲಾಗಲಿಲ್ಲ. ಆದರೆ ಈ ಸಾರಿಯಾದರೂ ಹಿಂದಿನ ಅನುಭವದಿಂದ ಅಧಿಕಾರಿಗಳು ಎಲ್ಲವನ್ನು ಕ್ರಮವಾಗಿ ನಡಸಿ ಅಸಮಾಧಾನಕ್ಕೆ ಎಡೆಕೊಡಲಿಕ್ಕಿಲ್ಲವೆಂದು ನಂಬಿದ್ದೆವು. ಆದರೆ ನಮ್ಮ ನಂಬಿಕೆಯು ನಿಜವಾಗಲಿಲ್ಲವೆಂದು ವ್ಯಸನಪಡಬೇಕಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಕೌನ್ಸಿಲಿನ ಚುನಾವಣೆಗಳು ಯಾವಾಗ ನಡೆಯುವವೆಂದು ಇನ್ನೂ ನಿಶ್ಚೈಸಲ್ಪಟ್ಟಿರುವದಿಲ್ಲವಂತೆ. ಆದುದರಿಂದ ಭರದಿಂದ ಹೊರಟ ಚುನಾವಣೆ ಚಳವಳಿಯು ತಣ್ಣಗಾಗುವ ಸಂಭವವು ಕಾಣುತ್ತದೆ. ಅಕ್ಟೋಬರು ತಿಂಗಳಲ್ಲೇ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯು ನಡೆಯುವದೆಂದು ನಂಬಿ ಒಂದೆರಡು ತಿಂಗಳುಗಳ ಮೊದಲೇ ಓಟು ಕೇಳಲು ಹೊರಟ ಉಮೇದುವಾರರು ಚುನಾವಣೆಯು ಇನ್ನೂ ಒಂದೆರಡು ತಿಂಗಳು ಮುಂದಕ್ಕೆ ಹೋಗಬಹುದಾದರೆ ಬೇಸರ ಉಂಟಾಗದೆ ಇರದು. ಮೊದಲಿನಿಂದಲೇ ಚುನಾವಣೆಯ ದಿನವನ್ನು ನಿಶ್ಚೈಸಿ ಪ್ರಕಟಿಸಿದ್ದರೆ ಎಲ್ಲರೂ ತಮ್ಮ ಕೆಲಸವನ್ನು ಅದಕ್ಕನುಸಾರವಾಗಿ ನಡಿಸಿಕೊಳ್ಳುವರು. ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲು ಚುನಾವಣೆಗಳು ಒಂದಕ್ಕೊಂದು ಸಮೀಪವಿರುವಂತೆ ಮಾಡುವುದು ಉಚಿತವಲ್ಲ. ಎರಡಕ್ಕೂ ಓಟರುಗಳು ಒಂದೇ ಆದುದರಿಂದ ಅವರ ಮನಸ್ಸಿನಲ್ಲಿ ಗಲಿಬಿಲಿಯುಂಟಾಗುವುದು; ಉಮೇದುವಾರರಿಗೂ ಅನುಕೂಲವಾಗುವುದಿಲ್ಲ. ಮೊದಲು ಕೌನ್ಸಿಲು ಚುನಾವಣೆಯನ್ನು ಜನವರಿ ತಿಂಗಳಿಗೆ ಇಟ್ಟರೆ ಆದರೆ ಕುಯಿಲು ಕೆಲಸದ ದೆಸೆಯಿಂದ ಹಲವು ರೈತರು ತಮ್ಮ ಓಟು ಕೊಡಲು ಪೋಲಿಂಗ್ ಸ್ಟೇಶನಿಗೆ ಬರಲಿಕ್ಕೆ ಕಷ್ಟವಾಗಿ ತೋರುತ್ತದೆ. ಆದುದರಿಂದ ಡಿಸೆಂಬರು ತಿಂಗಳೇ ಚುನಾವಣೆಗೆ ಒಳ್ಳೇ ಸಮಯವು. ಚುನಾವಣೆಯು ಉತ್ಸಾಹದಿಂದ ನಡೆಯಬೇಕಾದರೆ ಅಧಿಕಾರಿಗಳು ಮೇಲಿನ ಸೂಚನೆಗಳಿಗೆ ಗಮನಕೊಡುವರಾಗಿ ಆಶಿಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ 13 ನೆಯ ಪ್ರಕರಣ.

ಟ್ರಾನ್ಸ್‌ವಾಲಿನ ಶಾಸನವು

ಟ್ರಾನ್ಸ್‌ವಾಲಿನಲ್ಲೂ, ಆರೆಂಜ್ ಫ್ರೀಸ್ಟೇಟಿನಲ್ಲೂ ವಾಸಿಸುವ ಭಾರತೀಯರ ಸ್ಥಿತಿಗತಿಗಳೆಲ್ಲವನ್ನೂ ಈ ಸ್ವಕೀಯಚರಿತ್ರೆಯಲ್ಲಿ ವಿವರಿಸಲು ಅವಕಾಶವಿಲ್ಲವು. ಅವನ್ನು ತಿಳಿಯಲಿಚ್ಛಿಸುವವರು "ದಕ್ಷಿಣಾಫ್ರಿಕೆಯ ಸಾತ್ವೀಕನಿರೋಧದ ಚರಿತ್ರೆ" ಎಂಬ ಗ್ರಂಥವನ್ನು ಓದಬೇಕು. ಇಲ್ಲಿ ಸೂಚಿಸಿದುದು ವಿವರಿಸಲ್ಪಡುವುದು. 1888 ರಲ್ಲೇ ಅದಕ್ಕೆ ಪೂರ್ವದಲ್ಲೇ ಆರೆಂಜ್ ಫ್ರೀಸ್ಟೇಟಿನವರು ಮಾಡಿದ ಶಾಸನದಿಂದ ಭಾರತೀಯರ ಹಕ್ಕೆಲ್ಲವೂ ತೆಗೆಯಲ್ಪಟ್ಟಿರುವುದು. ಅವರು ಹೋಟೆಲುಗಳಲ್ಲಿ ವೈಟರುಗಳಾಗಿಯೋ, ಕೂಲಿಯವರಾಗಿಯೋ ಇರಬೇಕಾಗಿರುವುದು. ಅಲ್ಲಿ ವರ್ತಕರ ಮಾಡು [illegible] ಭಾರತೀಯರಿಗೆ ಕೊಂಚ ನಾಮಮಾತ್ರಕ್ಕೆ ಪರಿಹಾರವನ್ನು ಕೊಟ್ಟು ಅವರನ್ನು ಹೊರಗೆ ಹಾಕಿದರು. ಆ ವರ್ತಕರು [illegible] ವಿಜ್ಞಾಪಿಸಿಕೊಂಡರಾದರೂ ಅಲ್ಲಿ ಅವರ ಮೊರೆಯನ್ನು ಯಾರೂ ಕೇಳಲಿಲ್ಲವು. 1885 ರಲ್ಲಿ ಟ್ರಾನ್ಸ್‌ವಾಲಿನೊಳಗೆ ಕಠಿಣವಾದ ಒಂದು ಶಾಸನವು ಮಾಡಲ್ಪಟ್ಟಿತು. 1886 ರಲ್ಲಿ ಅದರೊಳಗೆ ಸ್ವಲ್ಪ ಬದಲಾವಣೆಯಾಯಿತು. ಪ್ರತಿಯೊಬ್ಬ ಭಾರತೀಯನೂ 3 ಪೌಂ. ನ ಪ್ರವೇಶ ಧನವನ್ನು ಕೊಡಬೇಕು. ಭಾರತೀಯರಿಗೆ ನಿವೇಶ ಸ್ಥಳವಲ್ಲದೆ ಬೇರೆ ಯಾವ ಭೂಮಿಯೂ ಇರಕೂಡದು. ಓಟನ್ನು ಕೊಡುವ ಸ್ವಾತಂತ್ರ್ಯವು ಭಾರತೀಯನಿಗಿಲ್ಲವು. ಈ ನಿಬಂಧನೆಗಳು ಭಾರತೀಯರಿಗೆ ಮಾತ್ರವಲ್ಲದೆ ಏಷ್ಯಾಖಂಡದ ವಾಸಿಗಳಿಗೆಲ್ಲಾ ಅನ್ವಯಿಸುವುವಲ್ಲದೆ ಇತರ ಖಂಡದವರಾರಿಗೂ ಅನ್ವಯಿಸುವುದಿಲ್ಲ. ಈ ಪ್ರತ್ಯೇಕ ನಿಬಂಧನೆಗಳೇ ಅಲ್ಲದೆ ಬಣ್ಣದವರಿಗೆ ಅನ್ವಯಿಸುವ ನಿಬಂಧನೆಗಳೆಲ್ಲವೂ ಏಷ್ಯಾಖಂಡದ ವಾಸಿಗಳಿಗೆ ಅನ್ವಯಿಸುವುವು. ಆ ನಿಬಂಧನೆಗಳ ಪ್ರಕಾರ ಸಾರ್ವಜನಿಕ ಪಕ್ಕದಲ್ಲಿರುವ ಕಾಲುದಾರಿಯಲ್ಲಿ ನಡೆದು ಹೋಗಲು ಭಾರತೀಯರಿಗೆ ಹಕ್ಕಿಲ್ಲವು. ರಾತ್ರಿ 9 ಗಂಟೆಯ ಮೇಲೆ ಅಪ್ಪಣೆ ಚೀಟಿ ಇಲ್ಲದೆ ಬೀದಿಗೆ ಹೋಗಕೂಡದೆಂಬ ನಿಬಂಧನೆಯು ಬಣ್ಣದವರಿಗೆ ಭಾರತೀಯರಿಗೆ ಮಾತ್ರ ಸರಿಸವುದು(?). ಅರಬ್ಬಿಯವರೆಂದು ಭಾವಿಸಲ್ಪಡುವವರಿಗೆ ಈ ನಿಬಂಧನೆಯು ವರ್ತಿಸುವುದಿಲ್ಲವೆಂದು ಅವರ ಮೇಲೆ ಅನುಗ್ರಹಿಸಿ [illegible]. ಕೆಲವರನ್ನು ವಿನಾಯಿತಿಸಲು ಪೊಲೀಸರಿಗೆ ಅಧಿಕಾರವಿರುತ್ತದೆ. ನಾನು ಸಾಮಾನ್ಯವಾಗಿ ರಾತ್ರಿವೇಳೆಯಲ್ಲಿ ಕೋಟ್ಸರವರೊಡನೆ ತಿರುಗಾಡಲು ಹೋಗುತ್ತಿದ್ದೆನು. ನಾನು ಮನೆಗೆ ಹಿಂದಿರುಗಿ ಬರುವಾಗ್ಗೆ ರಾತ್ರಿ 10 ಗಂಟೆ ಕೂಡ ಆಗುತ್ತಿತ್ತು. ಪೊಲೀಸಿನವರು ನನ್ನನ್ನು ಎಲ್ಲಿ ಹಿಡಿಯುವರೋ ಎಂದು ನನ್ನ ಕೋಟ್ಸರವರು ಭಯಪಡುತ್ತಿದ್ದರು. ತಮ್ಮ ಕೆಲಸಗಾರರಿಗೆ ಅವರು ಅನುಮತಿ ಚೀಟಿಯನ್ನು ಕೊಡಬಲ್ಲರಲ್ಲದೆ ನನಗೆ ಹೇಗೆ ಕೊಡಲಾಗುತ್ತಿದ್ದಿತು? ಅವರಿಗೆ ಅಂತಹ ಅಧಿಕಾರವಿದ್ದಲ್ಲಿ ಅದು ವಿಶ್ವಾಸದ್ರೋಹವಾಗುತ್ತಿತ್ತಲ್ಲವೆ? ಆದಕಾರಣ ಕೋಟ್ಸರವರ ಮಿತ್ರರೊಬ್ಬರು (ಅವರ ಹೆಸರು ನನಗೀಗ ಮರೆತುಹೋಗಿರುವುದು) ನನ್ನನ್ನು ಸರ್ಕಾರದ ವಕೀಲರಾದ ಡಾಕ್ಟರ್ ಕ್ರಾಜ್‌ರವರಲ್ಲಿಗೆ ಕರೆದುಕೊಂಡು ಹೋದರು. ನಾನೂ ಡಾಕ್ಟರ್ ಕ್ರಾಜ್‌ರವರೂ ಒಂದೇ ಇನ್ನಿಗೆ ಸೇರಿದ ಬ್ಯಾರಿಸ್ಟರುಗಳೆಂದು ನಮ್ಮ ಸಂಭಾಷಣೆಯಲ್ಲಿ ವ್ಯಕ್ತವಾಯಿತು. ನಾನು ಅನುಮತಿ ಚೀಟಿಯನ್ನು ಪಡೆಯಬೇಕೆಂಬ ವಿಚಾರದಲ್ಲಿ ಆತನು ಕೂಡ ಬಹಳ ಚಿಂತಿಸಿದನು. ಅನುಮತಿಚೀಟಿಯನ್ನು ಕೊಡುವುದಕ್ಕೆ ಮರ್ಯಾದೆಯಾಗುವುದಿಲ್ಲವೆಂದು ಒಂದು ಕಾಗದವನ್ನು ಬರೆದುಕೊಟ್ಟನು. ರಾತ್ರಿ ಬೀದಿಗೆ ಹೋದಲ್ಲಿ ನನ್ನನ್ನು ಪೊಲೀಸಿನವರು ಯಾವಾಗಲೂ ಹಿಡಿಯಕೂಡದೆಂದು ಅದರಲ್ಲಿ ಬರೆಯಲ್ಪಟ್ಟಿದ್ದಿತು. ನಾನು ಅದನ್ನು ಯಾವಾಗಲೂ ಜೇಬಿನಲ್ಲಿ ಇಟ್ಟುಕೊಂಡಿದ್ದೆನಾದರೂ ಅದರ ಅವಶ್ಯಕತೆಯು ನನಗೆ ಯಾವಾಗಲೂ ಬೀಳಲಿಲ್ಲವು. ಡಾಕ್ಟರ್ ಕ್ರಾಜ್‌ರವರು ನನ್ನನ್ನು ಆಹ್ವಾನಿಸಿದ್ದುದರ ಮೇಲೆ ನಾನು ಅವರ ಮನೆಗೆ ಆಗಾಗ್ಗೆ ಹೋಗುತ್ತಿದ್ದೆನು. ಅವರಿಗೂ ನನಗೂ ಸ್ನೇಹ ಬೆಳೆಯಿತು. ಅದರ ಮೂಲಕ ಸುಪ್ರಸಿದ್ಧರಾದ ಅವರ ಸೋದರರೊಂದಿಗೆ ನನಗೆ ಪರಿಚಯವುಂಟಾಯಿತು. ಕ್ರಾಜ್‌ರವರು ಜೋಹಾನ್ಸ್‌ಬರ್ಗಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲ್ಪಟ್ಟರು. ಬೋಯರ ಯುದ್ಧದಲ್ಲಿ ಒಬ್ಬ [illegible]ಯ ಹುನ್ನಾರ ಮಾಡಿದುದರಿಂದ, ಆತನು ಅವರ ಮೇಲೆ [illegible] ನಡೆಸಿದನು. ಅದರಿಂದ ಸ್ಕ್ರೀವರಿಗೆ 7 ವರ್ಷ ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಿತು. ನ್ಯಾಯಾಧಿಪತಿಗಳು ಆತನ ಬ್ಯಾರಿಸ್ಟರ್ ಸನ್ನದನ್ನು ರದ್ದು ಮಾಡಿದರು. ಯುದ್ಧಾನಂತರ ಡಾಕ್ಟರ್ ಕ್ರಾಜ್‌ರವರು ಬಿಡಲ್ಪಟ್ಟರು. ಅವರು ಪುನಃ ಟ್ರಾನ್ಸ್‌ವಾಲಿನ ಕೋರ್ಟಿನಲ್ಲೇ ನ್ಯಾಯವಾದಿಯಾಗಿ ಕೆಲಸ ನಡೆಸಿದರು. ಅವರ ಕೂಡ ನನಗುಂಟಾದ ಸ್ನೇಹ ನನಗೆ ಬಹಳ ಉಪಕರಿಸಿತು. ನಾನು ಪ್ರೆಸಿಡೆಂಟ್ ಕ್ರೂಗರವರ ಬೀದಿಗೆ ಸಮೀಪವಾಗಿದ್ದ ಬಯಲು ಪ್ರದೇಶದಲ್ಲಿ ತಿರುಗಾಡಲು ಹೋಗುತ್ತಿದ್ದೆನು. ಆ ಬೀದಿಯಲ್ಲೇ ಪ್ರೆಸಿಡೆಂಟ್ ಕ್ರೂಗರವರ ಮನೆ ಇರುವುದು. ಅದಕ್ಕೆ ಆವರಣವಿಲ್ಲವು. ಇತರ ಮನೆಗಳಂತೆಯೇ ಅವರ ಮನೆಯು ಇರುವುದಲ್ಲದೆ ವಿಶೇಷವಾಗಿಲ್ಲವು. ಪ್ರಿಟೋರಿಯಾದಲ್ಲಿ ಐಶ್ವರ್ಯವಂತರ ಮನೆಗಳಿಗೆ ಆವರಣಗಳಿರುತ್ತವೆ. ಆ ಮನೆಗಳಿಗೆ ಬಹಳ ಕೆಲಸ ಮಾಡಲ್ಪಟ್ಟಿರುವುದು. ಕ್ರೂಗರವರಿಗೆ ಆಡಂಬರ ಬೇಕಾಗಿರಲಿಲ್ಲವೆಂದು ಎಲ್ಲರೂ ಹೇಳುತ್ತಿದ್ದರು. ಅವರು ಅಧ್ಯಕ್ಷರಾಗಿದ್ದುದರ ನಿದರ್ಶನವಾಗಿ ಒಬ್ಬ ರಕ್ಷಕಭಟನು ಮನೆಯ ಸುತ್ತಲೂ ಗಸ್ತು ತಿರುಗುತ್ತಿದ್ದನು. ನಾನು ಅವನಿದಿರಿಗೆ ಹೋಗುತ್ತಿದ್ದೆನಾದರೂ ಅವನು ಯಾವಾಗಲೂ ನನ್ನನ್ನು ಏನೆಂದೂ ಕೇಳಲಿಲ್ಲವು. ಅಲ್ಲಿ ಪೊಲೀಸು ಆಳುಗಳು ಬದಲಾಯಿಸುತ್ತಿದ್ದರು. ಒಂದು ದಿನ ಒಬ್ಬ ಹೊಸಬನಿರುವಾಗ್ಗೆ ನಾನು ಅಲ್ಲಿ ಕಾಲುದಾರಿಯಲ್ಲಿ ಹೋಗುತ್ತಿದ್ದೆನು. ಅವನು ನನ್ನ ಕೂಡ ಏನನ್ನೂ ಹೇಳದೆ ನನ್ನನ್ನು ಹಿಡಿದು ತನ್ನ ಹಿಂದಕ್ಕೆ ನೂಕಿದನು. ನಾನು ಆಗ ದಿಗ್ಭ್ರಾಂತನಾಗಿ ನೀನೇಕೆ ಹೀಗೆ ಮಾಡಿದೆ? ಎಂದು ಅವನನ್ನು ಕೇಳಿದೆನು. ಅಷ್ಟರಲ್ಲಿ ಕೋಟ್ಸರವರು ಕುದುರೆಸವಾರರಾಗಿ ಆ ದಾರಿಯಲ್ಲಿ ಹೋಗುತ್ತಿರುವಾಗ್ಗೆ ಈ ಅವಮಾನವನ್ನು ಕಂಡು ನನ್ನನ್ನು ಕರೆದುಕೊಂಡರು. "ಗಾಂಧಿ ನಿನಗಾದ ಅವಮಾನವನ್ನು ನೋಡಿದೆನು. ನನಗೆ ಬಹಳ ವ್ಯಾಕುಲವಾಗಿದೆ. ನೀನು ಮೊಕದ್ದಮೆ ಮಾಡುವುದಾದಲ್ಲಿ ನಾನು ಸಾಕ್ಷಿ ಹೇಳುತ್ತೇನೆ" ಎಂದು ಕೋಟ್ಸರವರು ಹೇಳಿದರು. ತಾವು ಚಿಂತಿಸಬೇಕಾದುದಿಲ್ಲ. ಪೊಲೀಸಿನವನ ದೋಷವೇನೂ ಇಲ್ಲವು. ಅವನಿಗೆ ಬಿಳೀ ತೊಗಲಿನವರೆಲ್ಲರೂ ಒಂದೇ. ಅವರು ಕೂಲಿಯವರ (ಆಫ್ರಿಕದವರ) ನ್ನೆಲ್ಲಾ ಹೀಗೆಯೇ ನಡೆಸುತ್ತಿದ್ದರು. ನನ್ನನ್ನು ಕೂಡ ಅವರಂತೆಯೇ ಹೀಗೆ ನಡೆಸಿದರಾದರೂ ನಾನು ಕೇಸನ್ನು ಮಾಡುತ್ತೇನೆಂದು ತೀರ್ಮಾನಿಸಿಕೊಳ್ಳಲಿಲ್ಲ, ಎಂದು ನಾನು ಹೇಳಿದೆನು. "ನಿಮ್ಮ ಸಹಜಸ್ವಭಾವದಿಂದ ಹೀಗೆ ಹೇಳುತ್ತೀರಿ, ಚೆನ್ನಾಗಿ ಆಲೋಚಿಸಿ. ಇಂತಹ ನೀಚರಿಗೆ ಬುದ್ಧಿ ಕಲಿಸದೆ ಬಿಡಕೂಡದು" ಎಂದು ಕೋಟ್ಸರವರು ನನ್ನ ಕೂಡ ಹೇಳಿ ಆ ಪೊಲೀಸಿನವನನ್ನು ಮೂದಲಿಸಿದರು. ಆ ಪೊಲೀಸಿನವನು ಡಚ್ಚನವನಾದುದರಿಂದ ಡಚ್ ಭಾಷೆಯಲ್ಲೇ ಅವನಿಗೂ ಕೋಟ್ಸರವರಿಗೂ ಸಂಭಾಷಣೆ ಜರುಗಿತು. ನನಗೆ ಅದು ಅರ್ಥವಾಗಲಿಲ್ಲವು. ಆದರೆ ಕಡೆಯಲ್ಲಿ ಪೊಲೀಸಿನವನು ನನ್ನ ಕ್ಷಮಾಪಣೆಯನ್ನು ಕೋರಿದನು. ನಾನು ಅದಕ್ಕೆ ಮೊದಲೇ ಅವನನ್ನು ಕ್ಷಮಿಸಿದ್ದೆನು. ಅಂದಿನಿಂದ ನಾನು ಆ ಬೀದಿಯಲ್ಲಿ ತಿರುಗುವುದನ್ನೇ ಬಿಟ್ಟೆನು. ವೃಥಾ ಇಂತಹ ಅವಮಾನಕ್ಕೆ ಗುರಿಯಾಗಬೇಕೆಂದು ಇತರ ಬೀದಿಗಳಲ್ಲಿ ತಿರುಗಾಡುತ್ತಿದ್ದೆನು.

ಭಾರತೀಯರ ದುರವಸ್ಥೆ.

ಆಗಿನಿಂದಲೂ ಭಾರತೀಯರ ದುರವಸ್ಥೆಯನ್ನು ಕುರಿತು ನಾನು ಬಹಳ ತೀಕ್ಷ್ಣವಾಗಿ ಆಲೋಚಿಸತೊಡಗಿದೆನು. ಅದನ್ನು ಕುರಿತು ಭಾರತೀಯರ ಕೂಡ ಆಲೋಚಿಸಿದೆನು. ಅವಕಾಶವು ದೊರೆತಾಗ ಬ್ರಿಟಿಷ್ ಏಜೆಂಟರ ಕೂಡ ಚರ್ಚಿಸಿ ಒಂದು ಕೇಸನ್ನು ಕೂಡ ವಿಚಾರಣೆಗೆ ಪರೀಕ್ಷಾರ್ಥವಾಗಿ ಕಳುಹಿಸಲು ಯೋಚಿಸಿದೆನು. ಓದುವುದರಿಂದಲೂ, ಕೇಳುವುದರಿಂದಲೂ, ಸ್ವಾನುಭವದಿಂದಲೂ ಭಾರತೀಯರ ದುರವಸ್ಥೆಯನ್ನು ಗ್ರಹಿಸುವವನಾದೆನು. ಆತ್ಮಗೌರವನ್ನು ಕಾಪಾಡಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ಭಾರತೀಯರಿಗೆ ದಕ್ಷಿಣಾಫ್ರಿಕೆಯು ತಕ್ಕ ಸ್ಥಳವಲ್ಲವೆಂದು ನನಗೆ ತೋರಿತು. ಇದು ನನಗೆ ಮುಖ್ಯ ವಿಷಯವಾಗಿದ್ದಿತಾದರೂ ದಾದಾ ಅಬ್ದುಲ್ಲಾರವರ ಕೇಸು ಇದಕ್ಕಿಂತಲೂ ಮುಖ್ಯವಾಗಿದ್ದಿತು.

ನಾಮದಾರ ಶ್ರೀನಿವಾಸ ಶಾಸ್ತ್ರಿಗಳ ಭಾಷಣ.

ಕೋಮುವಾರು ವಿಭಾಗ.

ನಾಮದಾರ ಶಾಸ್ತ್ರಿಗಳು ತಮ್ಮದೊಂದು ಭಾಷಣದಲ್ಲಿ ಕೋಮುವಾರು ಚುನಾವಣೆಯ ಬೆಳವಣಿಗೆಯ ಇತಿಹಾಸವನ್ನು ಕುರಿತು ಹೀಗೆಂದಿರುವರು:—"ಕೋಮುವಾರು, ಯಾ ಜಾತಿವಾರು ಪಂಗಡಗಳ ಮತ್ತು ಪ್ರತಿನಿಧಿತ್ವದ ಭಾವನೆಯು ಹಿಂದೂ ದೇಶದಲ್ಲಿ ಹುಟ್ಟಿ ಬಹಳ ಕಾಲವಾಗಲಿಲ್ಲ. ಅನೇಕ ವರ್ಷಗಳ ವರೆಗೆ ಅಖಿಲಭಾರತೀಯ ಕಾಂಗ್ರೆಸ್ ಸಭೆಯು ಯಾವ ಬಗೆಯ ಪಂಗಡ ವಿಭಾಗಗಳಿಗೂ ಎಡೆಕೊಡದೆ ಇದ್ದುದಲ್ಲದೆ ದೇಶದ ಭಿನ್ನ ಭಿನ್ನ ಜನಾಂಗಗಳನ್ನೂ ಮತಗಳನ್ನೂ ಒಳಗೊಂಡು ಹೆಸರಿಗೆ ತಕ್ಕಂತೆ ಪೂರ್ಣ ರಾಷ್ಟ್ರೀಯವಾಗಿತ್ತು. ಆದರೆ 1909 ನೇ ಇಸವಿಯಲ್ಲಿ ಮೋರ್ಲೆ-ಮಿಂಟೋ ಸುಧಾರಣೆಗಳು ಜಾರಿಗೆ ಬಂದಾಗ ಹಿಂದೂದೇಶದ ಮುಸಲ್ಮಾನರು ತಮ್ಮ ಹಕ್ಕುಬಾಧ್ಯತೆಗಳು ತಪ್ಪಿಹೋಗಬಹುದೆಂಬ ಭಯದಿಂದ ಪ್ರತ್ಯೇಕ ಮತದಾರಿಕೆ ಹಕ್ಕನ್ನು, ಪ್ರತ್ಯೇಕ ಪ್ರತಿನಿಧಿತ್ವವನ್ನೂ ಕೇಳಿ, ಎರಡನ್ನೂ ಬಹು ಪ್ರಯತ್ನ ಪೂರ್ವಕ ಪಡೆದುಕೊಂಡರು. ಕಾಂಗ್ರೆಸ್ ಸಭೆಯು ಈ ಏರ್ಪಾಡು ವೃದ್ಧಿಹೊಂದುತ್ತಿರುವ ರಾಷ್ಟ್ರೀಯ ಭಾವನೆಗೆ ಕೇಡೆಂದು ವಿರೋಧಿಸಿದರೂ, ಯಾರೂ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಲಕ್ಷಿಸಲಿಲ್ಲ. ಈ ತರದ ಏರ್ಪಾಡು ಕೊನೆಗೆ ಅವರ ಬಾಯಿ ಮುಚ್ಚುವುದಕ್ಕಾಗಿ ಹೋಯಿತು.

1915ರಲ್ಲಿ ಕಾಂಗ್ರೆಸು ಸಭೆಯು ಪಂಗಡಭೇದವಿಲ್ಲದೆ ರಾಷ್ಟ್ರೀಯ ಏರ್ಪಾಡುಗಳನ್ನು ಕಾಯಾಡಿಸಲು(?) ಯತ್ನಿಸಿದರು. ಕೊನೆಗೆ ಮಹಮ್ಮದೀಯರ ಮಟ್ಟಿಗಾದರೂ ಬೇರೆ ಪ್ರತಿನಿಧಿತ್ವವು, ಮತದಾರಿಕೆ ಹಕ್ಕುಗಳು ಬೇಕೆಂದು ಒಪ್ಪಿಕೊಳ್ಳದೆ ನಿರ್ವಾಹವಿಲ್ಲವಾಯಿತು. ಇಲ್ಲದಿದ್ದರೆ ಮಹಮ್ಮದೀಯರು ಯಾವ ಏರ್ಪಾಟುಗಳಿಗೂ ಒಪ್ಪುತ್ತಿರಲಿಲ್ಲ. ಆದರೂ ಈ ಕೋಮುವಾರು ಮತದಾರಿಕೆಯು ತಾತ್ಕಾಲಿಕ ಸಮಯಪರಿಹಾರವೆಂದು ಸರ್ವರೂ ತಿಳಿದಿದ್ದರು. ಅಲ್ಲದೆ ಲಖ್ನೋ ಕಾಂಗ್ರೆಸ್ಸಿನಲ್ಲಿ ಹಾಜರಿದ್ದವರಿಗೆ ಹಾಗೆ ಯೋಚಿಸುವುದಕ್ಕೆ ಕಾರಣವೂ ಇದ್ದಿತು. ಸಾಧಾರಣವಾಗಿ ಹತ್ತು ಯಾ ಹದಿನೈದು ವರ್ಷಗಳಲ್ಲಿ ಈ ಏರ್ಪಾಡು ಕೊನೆಗಾಣಬಹುದೆಂದು ಎಲ್ಲರೂ ನಂಬಿದ್ದರು. ಈ ಏರ್ಪಾಡುಗಳ ವಿಷಯದಲ್ಲಿ ಅತಿ ಉತ್ಸುಕರಾಗಿದ್ದವರೂ ಸಹ ಇದೊಂದು ಅನಿವಾರ್ಯ ಕೇಡು ಎಂದು ಹೇಳುತ್ತಿದ್ದರಲ್ಲದೆ ಮಹಮ್ಮದೀಯ ಪಂಗಡವು ಎಂದು ತಮ್ಮ ಹಕ್ಕುಬಾಧ್ಯತೆಗಳು ಸುರಕ್ಷಿತವಾಗಿರುವವೆಂದು ತಿಳಿಯುತ್ತದೋ ಅಂದು ತಾವಾಗಿ ಕೋಮುವಾರು ಏರ್ಪಾಡುಗಳನ್ನು ಬಿಟ್ಟುಕೊಡುವರೆಂದು ಯೋಚಿಸಿದ್ದರು. ಅಷ್ಟರಲ್ಲೇ ಇನ್ನು ಹೆಚ್ಚಿನ ಬದಲುಗಳ ಸೂಚನೆಯು ಎಲ್ಲರಿಗೂ ತೋರಿತ್ತು. ಆದರೆ ಮುಂದಿನ ವರ್ಷಗಳಲ್ಲಿ ಇವರ ಆಶೆಯು ಎಷ್ಟರ ಮಟ್ಟಿಗೆ ಆಕಾಶ ನಗರ ನಿರ್ಮಾಣಕ ಯೋಚನೆಗಳೆಂದು ಅನುಭವದಿಂದ ಗೊತ್ತಾಗಿ ಹೋಗಿದೆ. ಹೆಚ್ಚಿನ ಮತ್ತು ನಾಮಮಾತ್ರಕವಲ್ಲದ ಕೋಮುವಾರು ಏರ್ಪಾಡುಗಳನ್ನು ದುರ್ಲಕ್ಷಿಸುವುದಕ್ಕೆ ಕಲಿಯುವುದರ ಬದಲು ಯಾರ ಕ್ಷೇಮಕ್ಕಾಗಿ ಆ ಏರ್ಪಾಡುಗಳು ಜಾರಿಗೆ ತರಲ್ಪಟ್ಟವೋ ಆ ಕೋಮು ಇನ್ನೂ ಹೆಚ್ಚು ಹೆಚ್ಚು ಕೋಮುವಾರು ವಿಭಾಗಗಳಿಗೆ ಇಚ್ಛೆಯನ್ನು ಪ್ರಕಟಿಸತೊಡಗಿತು.

ಹೀಗಿರಲು ಅವರ ದುರಾವಸ್ಥೆಕ್ಕೆ ವೃದ್ಧಿಯನ್ನೈದುತ್ತಿದ್ದ ಈ ಇಚ್ಛೆಯು ದುಸ್ಸಾಧ್ಯವಾದ ಪ್ರಯತ್ನ ಪೂರ್ವಕ ಮುಂದುವರಿಸಲ್ಪಟ್ಟಿತು. ತಮ್ಮ ಇಚ್ಛೆಯ ಮೇರೆಯನ್ನು ಸಂಕ್ಷೇಪಿಸುವ ಬದಲು ಮುಸಲ್ಮಾನರು ತಮ್ಮ ಮತದಾರಿಕೆಯ ಹಕ್ಕನ್ನು ಕೆಲವು ಪ್ರಾಂತ್ಯಗಳ ಲೋಕಲ್ ಬೋರ್ಡುಗಳಲ್ಲಿಯೂ ಮುನಿಸಿಪಾಲಿಟಿಗಳಲ್ಲಿಯೂ ಸ್ಥಾಪಿಸಿದ್ದಲ್ಲದೆ ಅವುಗಳಲ್ಲಿ ಕೋಮುವಾರು ಪ್ರತಿನಿಧಿತ್ವವನ್ನು ಸರಕಾರದ ಕಾನೂನು ಕಾಯಿದೆಗಳಿಂದ ಒಪ್ಪಿಕೊಳ್ಳುವಂತೆ ಮಾಡಿದರು. ಇಷ್ಟಾದರೂ ತೃಪ್ತಿಹೊಂದಲಿಲ್ಲ. ಅವರ ಕೋಮುವಾರು ಹಕ್ಕುಗಳ ಆಶೆಯು ವೃದ್ಧಿಹೊಂದಿ ಸರಕಾರೀ ಉದ್ಯೋಗಗಳನ್ನು ಆಕ್ರಮಿಸತೊಡಗಿತು. ಇನ್ನು ಕೆಲವು ವರ್ಷಗಳ ಕೆಳಗೆ ಈ ಹಾನಿಕಾರಕ ತತ್ವವು ವಿಶ್ವ ವಿದ್ಯಾಲಯದ ನಿಬಂಧನೆಗಳಲ್ಲಿಯೂ ಕಾಲಿಡಲು ಎಡೆ ಕೊಡಲ್ಪಟ್ಟಿತು. ಜ್ಞಾನಾರ್ಜನೆಯ ಮಂದಿರಗಳಲ್ಲಾದರೂ ಈ ದುಷ್ಟ ವಿಷಯಕ್ಕೆ ಅವಕಾಶವಿರಲಾರದೆಂದು ಸರ್ವರೂ ತಿಳಿದಿದ್ದರು. ಆದರೆ ಎಂದು ಸರ್ ಮಹಮ್ಮದ್ ಶಫಿಯವರ ಅಧಿಕಾರದಲ್ಲಿ ಢಕ್ಕಾ ಯೂನಿವರ್ಸಿಟಿಯ ನಿಬಂಧನೆಗಳನ್ನು ತಯಾರಿಸಿ ಕಾಯಿದೆ ಪುಸ್ತಕದಲ್ಲಿ ಸೇರಿಸಿದರೋ ಅಂದು ಅವರ ಆಶೆಯು ಅಳಿದು ಹೋಯಿತು.

"ಜನಾಂಗವನ್ನು ಎಷ್ಟೋ ಕೋಮು ಪಂಗಡಗಳಾಗಿ ಒಡೆಯುವುದಕ್ಕೆ ಎಡೆಗೊಟ್ಟ ಪ್ರತಿಯೊಂದು ಕೋಮಿನ ಪ್ರತಿನಿಧಿಗಳಿಗೆ ತಾವು ಹಿಂದೂ ಜನಾಂಗಕ್ಕೆ ಸೇರಿದ ಪ್ರಜೆಗಳಲ್ಲ, ತಾವು ಅದರ ಒಂದು ಚಿಕ್ಕ ಪಂಗಡದ ಪ್ರಜೆಗಳು ಮಾತ್ರ, ಇಡೀ ಜನಾಂಗದ ಅಭಿವೃದ್ಧಿಯನ್ನು ಪರ್ಯಾಲೋಚಿಸುವುದು ತಮ್ಮ ಕರ್ತವ್ಯವಲ್ಲ. ತಮ್ಮ ತಮ್ಮವರ ಏಳಿಗೆಯನ್ನು ಹಾರೈಸುವುದೇ ತಮಗೆ ಬೇಕಾದುದು" ಎಂದು ತಿಳಿಯುವುದಕ್ಕೆ ಅವಕಾಶ ಕೊಟ್ಟ ಪ್ರಜಾಪಕ್ಷೀಯ ರಾಜಕೀಯ ಏರ್ಪಾಟುಗಳು (democratic constitution) ತನ್ನ ಐಕ್ಯತೆಯನ್ನು ಅರಿತಿರುವ ಹಿಂದೂ ಜನಾಂಗದ ವೃದ್ಧಿಯನ್ನುಂಟುಮಾಡುವ ಏರ್ಪಾಡುಗಳೇ ಆಗಿರಲಿಲ್ಲ. ಇಂಗ್ಲೆಂಡು ದೇಶದ ಹಿಂದೂದೇಶಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಸ್ವಾಭಾವಿಕವಾದ ಮಧ್ಯದಾರಿಯನ್ನು ಹಿಡಿದು ನಮ್ಮ ಅಧಿಪತ್ಯದ ಬ್ರಾಹ್ಮಣೇತರರಿಗೆ ಬೇರೆ ಮತದಾರಿಕೆಯನ್ನು ಕೊಡಲಿಲ್ಲ. ಆದರೂ ಅವರಿಗೆ ಒಂದೇ ಮತದಾರಿಕೆ ಹಕ್ಕಿನ ಮೇಲೆ ಕೆಲವು ಸ್ಥಳಗಳನ್ನು ಬೇರೆ ತೆಗೆದಿಡಲಾಯಿತು. ಕಳೆದ ಎರಡು ಚುನಾವಣೆಗಳ ಫಲಿತಾಂಶದಿಂದ ಹೀಗೆ ಅವರಿಗಾಗಿ ಪ್ರತ್ಯೇಕವಿಟ್ಟ ಸ್ಥಳಗಳ ಹಕ್ಕನ್ನು ಅವರಿಗೆ ಕೊಡುವ ಅವಶ್ಯಕತೆಯೇ ಇಲ್ಲವಾಯಿತು. ಬ್ರಾಹ್ಮಣೇತರರು ಪ್ರತಿಯೊಂದು ಭಾಗದಲ್ಲಿಯೂ, ತಾವು ಬೇಡಿದುದಕ್ಕಿಂತ ಹೆಚ್ಚಾಗಿಯೇ ಹೊಂದಿಕೊಂಡರು. ಅವರು ಇನ್ನು ಮುಂದೆ ಕಾಯಿದೆ ಪುಸ್ತಕದಲ್ಲಿ ಸ್ಥಳಗಳನ್ನು ಪ್ರತ್ಯೇಕವಾಗಿ ತೆಗೆದು ಇಡಬೇಕೆಂದು ಹೇಳುವ ಆ ತತ್ವವು ಆ ಪುಸ್ತಕವನ್ನು ಅವಮಾನಗೊಳಿಸುವುದಕ್ಕೆ ಬೇರೆ [illegible] ಅನುಭವದಿಂದ ನಿಷ್ಕಾರಣವಾಗಿಯೇ ಹೇಳಬೇಕಾಗಿದ್ದಿತು. ಅಖಿಲಭಾರತ ಕ್ರೈಸ್ತ ಸಭೆಯು ಐಕ್ಯ ಭಾವನೆಗಳಿಂದ ಉತ್ತೇಜಿಸಲ್ಪಟ್ಟು ಪ್ರತಿ ವರ್ಷವೂ ಪ್ರತ್ಯೇಕ ಪ್ರತ್ಯೇಕ ಕೋಮುಗಳ ಮತದಾರಿಕೆ ಹಕ್ಕು ಸ್ಥಾಪನೆಗೆ ವಿರೋಧಿಸುತ್ತಿದ್ದುದಲ್ಲದೆ ತಮ್ಮ ಮಟ್ಟಿಗಾದರೂ ಅಂಥ ಹಕ್ಕು ಬೇಡವೆಂದು ಸಂತೋಷದಿಂದ ವ್ಯಕ್ತಪಡಿಸಿತ್ತು.

ಮೇಲಿನ ಸಭೆಯ ವರ್ತನೆಯು ಬಹು ತೃಪ್ತಿಕರವೆಂಬುದು ನಿಜವಾದರೂ ಅದರ ಅಂಗವಾದ ಮದ್ರಾಸಾಧಿಪತ್ಯದ ಸ್ಥಿತಿಯನ್ನು ನೋಡಿದರೆ ನನ್ನ ಸಂತೋಷವು ಸಂಕುಚಿತವಾಗುತ್ತದೆಂದು ಹೇಳುವುದಕ್ಕೆ ದುಃಖಪಡುತ್ತೇನೆ. ಇಲ್ಲಿನ ಹಿಂದೀಯ ಕ್ರೈಸ್ತ ಜನರು ಅಖಿಲಭಾರತ ಹಿಂದೀಯ ಕ್ರೈಸ್ತ ಸಭೆಯ ಅಭಿಮತಕ್ಕೆ ವಿರೋಧವಾಗಿ ತಮಗೆ 1919ನೇ ಇಸವಿಯಲ್ಲಿ ದೊರೆತ ಪ್ರತ್ಯೇಕ ಮತದಾರಿಕೆ ಹಕ್ಕನ್ನು ಇನ್ನೂ ಆದರಿಸಿಕೊಂಡಿರುವರು. ಆ ಹಕ್ಕನ್ನು ಅವರು ಬಿಟ್ಟುಕೊಡುವಂತೆ ತೋರಲಿಲ್ಲ. ಅದರ ಪಂಗಡದ ಅನೇಕಾನೇಕ ಮರ್ಯಾದಸ್ಥ ಗೃಹಸ್ಥರ ಉತ್ಕೃಷ್ಟ ಉದಾಹರಣೆಗಳನ್ನು ಅವರು ಅನುಸರಿಸುವಂತೆ ತೋರಲಿಲ್ಲ. ಅವರ ಪಂಗಡದ ಮರ್ಯಾದಸ್ಥ ಗೃಹಸ್ಥನೋರ್ವರು ಸರಕಾರದಿಂದ ಹೆಚ್ಚಾಗಿ ರಕ್ಷ-

ಸ್ಸುತ್ತುವ ತಮ್ಮ ಸಮುದಾಯಕ್ಕಿರುವ ಹಕ್ಕುಗಳನ್ನು ಬಿಟ್ಟು ಬಿಟ್ಟು ತಾವು ಭಾರತೀಯರೊಡನೆ ಏಕೀಕರಿಸಲು ಸಿದ್ಧರಿದ್ದೇವೆ ಎಂದು ಎಷ್ಟೋ ವೇಳೆ ಪ್ರಕಟಪಡಿಸಿರುವರು. ಅವರಲ್ಲಿ ಅನೇಕರ ಹೆಸರು ನನಗೆ ಗೊತ್ತಿದ್ದರೂ ಹೇಳಲಾರೆ. ಮುಂದಿನ ಜನಾಂಗದ ಆಧ ಮುಂದಿರುವ ಮಹನೀಯರಿಗೆ ಕೀರ್ತಿಯಿರಲಿ.

ಭಾರತ ಖಂಡದ ರಾಜಕೀಯ ವಾತಾವರಣದಲ್ಲಿ ಸ್ವಲ್ಪ ಕಾಲದ ಹಿಡೆ, ಯಾವ ಕಾರಣದಿಂದಲೋ, ಯಾವ ನ್ಯಾಯದಿಂದಲೋ ರಾಷ್ಟ್ರೀಯ ಮತ್ತು ಪ್ರಜಾಪಕ್ಷೀಯ ಎಂದು ಹೇಳಿಕೊಳ್ಳುವ ಕೋಮುವಾರಿನ ಒಂದು ಪಾರ್ಟಿಯ ವೃದ್ಧಿಯಂತಹ ಮಹತ್ವಾದ ಶಕ್ತಿ ಸೂಚನೆಯು ಜೀಕೊಂಡು ಉಂಟಾಗಿರಲಿಲ್ಲ. ಅಲೋಚಿಸಿ ನೋಡಿ! ಒಂದು ಪ್ರಜಾಪಕ್ಷೀಯವೆಂದೆನ್ನಿಸಿಕೊಳ್ಳುವ ರಾಜಕೀಯ ಪಾರ್ಟಿಯು ತನ್ನದ್ಲೇ ಕೋಮಿನಲ್ಲಿ ಹುಟ್ಟಿದವರು ಜನರನ್ನು ಬಿಟ್ಟು ಹಾಕುತ್ತದೆ. ಒಂದು ರಾಜಕೀಯ ಸಂಘವು ಒಬ್ಬ ಮನುಷ್ಯನನ್ನು ಅವನು ಅವರ ತತ್ವಗಳನ್ನನುಸರಿಸದೆ ಇದ್ದರೆ ಹೊರತು ಇನ್ನು ಯಾವ ಕಾರಣಗಳಿಂದ ಹೊರಗೆ ಹಾಕಬಹುದೆಂದು ನನಗೆ ಗೊತ್ತಿಲ್ಲ. ಕಾರ್ಯತಃ ಮುಖ್ಯ ಎಲ್ಲಾ ರಾಜಕೀಯ ವಿಷಯಗಳಲ್ಲಿ ನಾನು ಸ್ವರಾಜ್ಯಪಕ್ಷದ ಮತದಂತಿರುವ ಜಸ್ಟಿಸ್ ಪಕ್ಷದ ಅಭಿಪ್ರಾಯಗಳಂತಿದ್ದರೂ ನನಗೆ ಜಸ್ಟಿಸ್ ಪಾರ್ಟಿಯಲ್ಲಿ ಸ್ಥಳವೇ ಇಲ್ಲದಾಗಿದೆ.

ಇಂಥಾ ಸ್ಥಿತಿಯಲ್ಲಿ ಹೊಸ್ತಗಿ ತೋರುವವರು ಸ್ವಜಾತಿ ರಾಜಕೀಯವೆಂದು [illegible]. ಚುನಾವಣೆಯ ಜಯದ ಫಲವನ್ನು ತಕ್ಕೊಳ್ಳಲಾಗ [illegible] ಪಾರ್ಟಿಯು ಒಂದು ದಿವಸ ಮತ್ತು ಅಧಿಕಾರದಲ್ಲಿದ್ದರೆ ನನ್ನ ಅಭಿಪ್ರಾಯದಲ್ಲಿ ಅದು ದೇಶಕ್ಕೆ ಅಪಾಯಕರವೇ ಸರಿ. ಈ ರೀತಿ ಕಠಿಣ ಶಬ್ದಗಳನ್ನು ಹಾಸ್ಯರೂಪವಾಗಿಯೂ, ನ್ಯಾಯಸೂಚಕವಾಗಿಯೂ ನಾನು ಉಪಯೋಗಿಸಿದೇನೆ. "ಬ್ರಾಹ್ಮಣನ ಸಮುದಾಯವು ರಾಜಕೀಯ, ನ್ಯಾಯ ಪರಿಪಾಲನೆಗಳ ವಿಷಯದಲ್ಲಿ ಬಹಳ ಅನರ್ಥವನ್ನು ಮಾಡಿರುವದು, ಹಿಂದೂದೇಶವನ್ನು ಉಳಿಸುವದಕ್ಕೆ ಮುಂದಿನ ಭಾರತ ಜನಾಂಗದ ಏಳಿಗೆಗೆ ಬ್ರಾಹ್ಮಣ ಸಮೂಹವನ್ನು ಜನಾಂಗಯ ಸ್ಪರ್ಧೆಯಿಂದ ಹೊರಗೆ ಹಾಕುವುದು ತಮ್ಮ ಕರ್ತವ್ಯ" ವೆಂದು ಅಲೋಚಿಸುವ ಜನರೊಡನೆ ಒಡನಾಡಲು ನನ್ನ ಮನಸ್ಸು ಒಪ್ಪುವುದಿಲ್ಲ ಬಡಂಬಡ. ಕಡೆಗೆ ನಾನು ಹೇಳುವುದಿಷ್ಟೇ. ಯಾವಾಗ ಬ್ರಾಹ್ಮಣರು, ಬ್ರಾಹ್ಮಣೇತರರು ಏಕೀಭವಿಸಿ, ಒಂದೇ ಗುರಿಗೆ ಒಂದೇ ಧ್ಯೇಯದಿಂದ ನಡೆದಾಗ ಒಂದೇ ರಾಜ್ಯವಸ್ಥಾನದಿಂ [illegible] ಈ ದಿನವನ್ನು [illegible] ನೋಡ ತ್ರಿದ್ವೇಷ ರಾಜಕೀಯ [illegible] ಅಭಿಪ್ರಾಯಗಳೂ ಪರಸ್ಪರ ಕಟ್ಟಿಗಿದ್ದ, ಜಾತಿಭೇದಗಳನ್ನೆಲ್ಲ ರಾಜಕೀಯ ಪಕ್ಷವು ನಿರ್ಮೂಲವ ದಿವಸವನ್ನೇ ಕಾಯುತ್ತಿರುತ್ತೇನೆ.

ಬರುವ ಚುನಾವಣೆ.

(ಸ್ವಂತ ಬಾತ್ಮಿದಾರರು ಬರೆದಿರುವುದು.)

ಬೇಗನೆ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲು ಚುನಾವಣೆಗಳಿಗೆ ಈ ಕೆಳಗಿನ ಮಹನೀಯರು ಉಮೇದುವಾರರಾಗಿ ನಿಲ್ಲುತ್ತಾರಾಗಿ ತಿಳಿಯಬರುತ್ತದೆ. ಉಮೇದುವಾರರು 'ನಾಮಿನೇಶನ್' ಪೇಪರು (ಉಮೇದುವಾರಿಕೆಯ ಅರ್ಜಿ) ಕೊಡುವ ತಾರೀಕು ಇನ್ನೂ ನಿಶ್ಚೈಸಲ್ಪಟ್ಟಿರುವುದಿಲ್ಲ. ಆಗ ಅರ್ಜಿ ಹಾಕಿಕೊಳ್ಳುವಾಗ ಬೇರೆ ಹೊಸ ಉಮೇದುವಾರರು ಹೊರ ಬರಲೂ ಬಹುದು. ಮತ್ತು ಇವರ ಪೈಕಿ ಯಾರಾದರೂ ಅರ್ಜಿ ಹಾಕದೆ ಹಿಂತೆಗೆಯಲೂ ಬಹುದು. ಆದರೆ ಇವರು ಈಗ ಓಟು ಕೇಳುವ ಕೆಲಸಕ್ಕೆ ಕೈ ಹಾಕಿದವರು ಮಾತ್ರ ಆಗಿರುತ್ತಾರೆ.

ಡಿಸ್ಟ್ರಿಕ್ಟ್ ಬೋರ್ಡಿಗೆ

1. ಶ್ರೀಮಂಗಲನಾಡಿನ ಪರವಾಗಿ.—ಮ. ರಾ. ಶ್ರೀ ಗಳಾದ 1. ಅಜ್ಜಮಾಡ ಮಾದಪ್ಪನವರು, 2. ಚೆಪ್ಪುಡೀರ ಎ. ಪೊನ್ನಪ್ಪನವರು, 3. ಚೆಪ್ಪುಡಿರ ಐ. ಸುಬ್ಬಯ್ಯನವರು, ಮತ್ತು 4. ಕಿರಿಯಮಾಡ ಎಸ್. ಸಂಜಪ್ಪನವರು.

2. ಪೊನ್ನಂಪೇಟೆನಾಡಿನ ಪರವಾಗಿ.—1. ಮೆ. ಪುತ್ತಮನೆ ಮುದ್ದಯ್ಯನವರು ಮತ್ತು 2. ಮೆ. ಚಪ್ಪುಡೀರ ಎಸ್. ಪೂವಯ್ಯನವರು.

3 ಅಮ್ಮತ್ತಿನಾಡಿನ ಪರವಾಗಿ:—1. ಮೆ. ಐನಂಡ ಮಾದಪ್ಪನವರು ಮತ್ತು 2. ಮೆ. ಕೇಳಪಂಡ ಅಚ್ಚಯ್ಯನವರು.

4. ವೀರಾಜಪೇಟೆನಾಡಿನ ಪರವಾಗಿ.—ಮ. ರಾ. ಶ್ರೀಗಳಾದ 1. ಬಿಟ್ಟಿಯಂಡ ಸಂಜಪ್ಪನವರು, 2. ನಾಯಡ ಚೆಕ್ಕಪ್ಪನವರು ಮತ್ತು 3. ಕೀತಿಯಂಡ ಕುಶಾಲಪ್ಪನವರು.

5. ನಾಪೋಕ್ಲುನಾಡಿನ ಪರವಾಗಿ.—ಮ. ರಾ. ಶ್ರೀಗಳಾದ 1. ಅರಮಣ ಸುಬ್ಬಯ್ಯನವರು, 2 ಉದಿಯಂಡ ಮಾಚಯ್ಯನವರು ಮತ್ತು 3 ಬಿದ್ದಂಡ ಸುಬ್ಬಯ್ಯನವರು.

6 ಭಾಗಮಂಡಲನಾಡಿನ ಪರವಾಗಿ.—1. ಮೆ. ಬಿದ್ದಮಲೆ ಮುದ್ದಪ್ಪನವರು ಮತ್ತು 2. ರಾ. ಸಾ. ಪಟ್ಟಮಾಡ ದೇವಯ್ಯನವರು.

7. ಮಡಿಕೇರಿನಾಡಿನ ಪರವಾಗಿ.—ಮೆ. ಮನೆಯಪಂಡ ಎಂ. ಚೆಕ್ಕಪ್ಪನವರು ಮತ್ತು 2. ಮೆ. ಪಾಂಡಂಡ ಬಾಗಪ್ಪನವರು.

8. ಸುಂಟಿಕೊಪ್ಪನಾಡಿನ ಪರವಾಗಿ:—1. ಮೆ. ಕೊಂಗಟ್ಟಿರ ಅಪ್ಪಯ್ಯನವರು ಮತ್ತು 2. ಮೆ. ಕಿಗ್ಗಾಲು ಬಾಚಯ್ಯ ಪಟೇಲರು.

9 ಫ್ರೇಜರ್‌ಪೇಟೆನಾಡಿನ ಪರವಾಗಿ:—ಮೆ. ಎಸ್. ಎಸ್. ರಾಮುಶೆಟ್ಟರು.

10. ಸೋಮವಾರಪೇಟೆನಾಡಿನ ಪರವಾಗಿ.— ಮೆ. ಚಾಡ್ಲು ಕಾಳಪ್ಪನವರು.

11. ಶನಿವಾರಸಂತೆನಾಡಿನ ಪರವಾಗಿ:—ಒಬ್ಬ ಲಿಂಗಾಯತರು ಮತ್ತು ಒಬ್ಬ ಒಕ್ಕಲಿಗರು (ಇವರಿಬ್ಬರ ಹೆಸರು ತಿಳಿಯಬಂದಿಲ್ಲ.)

ಡಿಸ್ಟ್ರಿಕ್ಟ್ ಬೋರ್ಡಿಗೆ ನಾಡಿಗೊಬ್ಬರ ಪ್ರಕಾರ 11 ನಾಡುಗಳಿಗೆ 11 ಮೆಂಬರುಗಳನ್ನು ಮಾತ್ರ ಚುನಾಯಿಸಬೇಕಾಗಿದೆ.

ಕೌನ್ಸಿಲಿಗೆ

1. ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಪರವಾಗಿ— ಒಮ್ಮತ್ತಕ್ಕೆ (ಚುನಾಯಿಸಬೇಕಾದದ್ದು 3 ಮೆಂಬರುಗಳು) ಮ. ರಾ. ಶ್ರೀ. ಗಳಾದ 1 ಪಾರ್ವಂಗಡ ಕುಶಾಲಪ್ಪನವರು, 2. ಮನೆಯಪಂಡ ಎಂ. ಚಿಣ್ಣಪ್ಪನವರು, 3. ಕೊಳ್ಳಿಮಾಡ ಕರುಂಬಯ್ಯನವರು, 4 ರಾ. ಬಾ. ಕೊಡಂದೇರ ಕುಟ್ಟಯ್ಯನವರು, ಮತ್ತು 5. ಮಾಚಿಮಾಡ ಪೊಚ್ಚಯ್ಯನವರು. ನಾಗಿಗೆ (ಚುನಾಯಿಸಬೇಕಾದದ್ದು ಒಂದು ಮೆಂಬರು.) 1. ಮೆ. ಸಿ. ಎನ್. ವೆಂಕಪ್ಪಯ್ಯನವರು, 2. ಮೆ. ಗುಂಗಾಡನ ತಿಮ್ಮಯ್ಯನವರು.

2. ವೀರಾಜಪೇಟೆ— ಅಮ್ಮತ್ತಿ—ನಾಪೋಕ್ಲು ನಾಡುಗಳ ಪರವಾಗಿ.—ಒಮ್ಮತ್ತಕ್ಕೆ (ಬೇಕಾದದ್ದು ಮೂರು [illegible]) ಮ. ರಾ. ಶ್ರೀ. ಗಳಾದ 1. ಬಿಟ್ಟಿಯಂಡ ಸಂಜಪ್ಪ [illegible] 2. ಕೋಟೆರ ಚಿಣ್ಣಪ್ಪನವರು, 3. ಸಂದ್ಯಂಡ ಚೆಕ್ಕಪ್ಪ [illegible] 4. ಅಪ್ಪಾರಂಡ ಬಾಗಪ್ಪನವರು, 5. ಕೋದಂಡ [illegible] ನವರು, 6. ನಡಿಕೇರಿಯಂಡ ಸೋಮಯ್ಯನವರು, 7. ಬಿದ್ದಂಡ ಬೋಪಯ್ಯನವರು ನಾಗಿಗೆ (ಬೇಕಾದದ್ದು ಒಂದು ಮೆಂಬರು) 1. ಮೆ. ಪಿ. ಜಿ. ಲೋಬೋರವರು ಮಹಮದ್ ಅಹ್ಮದ್ ಸಾಹೇಬರವರು.

3. ಮಡಿಕೇರಿ ತಾಲೋಕು ಪರವಾಗಿ—ಜನ [illegible] ಕಾದದ್ದು ಇಬ್ಬರು) 1 ಮೆ. ಕೆಂಬಡತಂಡ ಮಂದಣ್ಣ 2 ಮೆ. ತಿಕ್ಕಡ ಪೂವಯ್ಯನವರು, 3 ಬಿದ್ದಂಡ [illegible] ಯ್ಯಪ್ಪನವರು, 4. ಮೆ ಪಾಡೇಕಂಡ ಮೇದಪ್ಪ [illegible] ತ್ತು 5 ರಾ. ಸಾ ಪಟ್ಟಮಾಡ ದೇವಯ್ಯನವರೂ [illegible] ರೆಂದು ಸುದ್ದಿ. ಇನ್ನೊಬ್ಬ ಗೌಡ ಮಹನೀಯರು [illegible] ತ್ತಾರೆಂದು ವರ್ತಮಾನವಿದೆ (ಇವರ ಹೆಸರು ಗೊ[illegible] ರುವುದಿಲ್ಲ.) ನಾಗಿಗೆ (ಬೇಕಾದದ್ದು ಒಬ್ಬ) 1. ಮೆ. [illegible] ಲಿ ಮುದ್ದಪ್ಪನವರು, 2. ಮೆ. ರಸೂಲ್‌ಖಾನ್ ಸಾಹೇಬರು ನಿಲ್ಲುತ್ತಾರೆಂದು ಸುದ್ದಿ.

4. ಸಂಜರಾಯಪಟ್ಟಣ ತಾಲೋಕಿನ ಪರವಾಗಿ — [illegible] ಕ್ಕೆ (ಬೇಕಾದದ್ದು ಒಬ್ಬ) ಮೆ. ಚಾಡ್ಲು ಕಾಳಪ್ಪನವರು [illegible] ಗಿಗೆ (ಬೇಕಾದದ್ದು ಒಬ್ಬ) ಮೆ. ಸಿದ್ದರ ಸುಬ್ಬಣ್ಣ [illegible] ಲಿಂಗಾಯತರೊಬ್ಬರು ನಿಲ್ಲುತ್ತಾರೆಂದು ಸುದ್ದಿ ಇ[illegible] ವರ ಹೆಸರು ಗೊತ್ತಾಗಿರುವುದಿಲ್ಲ.)

ಮದ್ರಾಸು ಕೊಡಗರ ಸಂಘ.

ಮದ್ರಾಸು ಕೊಡಗರ ಸಂಘದವರು ಈ ತಾ [illegible] 'ಹೊಟೆಲ್ ಬೊಸ್ಕೊ' ದಲ್ಲಿ ನೇರ ಕಾವೇರಿ ಸಂಕ್ರಮಣವನ್ನು ಆಚರಿಸಿದರು. ಜಸ್ಟಿಸರಾದ ಮೆ. ಎ. ಜೆ. ನಾವೆನಾರವರು ಮತ್ತು ಅವರ ಪತ್ನಿಯವರು, ಪ್ರೊ[illegible] ಮಿಶನರಾದ ಮೆ. ಟ್ರಾವರ್ಸ್ ಫಿಲಿಪ್ಸರವರು, ಮತ್ತು [illegible] ಯವರು, ರಾ. ಬಾ. ಕೋದಂಡ ಅಪ್ಪಯ್ಯನವರು. [illegible] ಣ ಕಳುಹಿಸಲ್ಪಟ್ಟ ಬೇರೆ ಹಾಜರಿದ್ದರು. ತಿಂಡಿತೀರ್ಥದನಂತರ ಸಂಘದ ಅಧ್ಯಕ್ಷರಾದ ಮೆ. ಐ. ಸಿ. ಕ[illegible] ರು ಸುಪ್ರಸಿದ್ಧ ಅತಿಥಿಗಳಿಗೆ ಯೋಗ್ಯಮಾತುಗಳಿಂದ [illegible] ವನ್ನೀಡಿದರು. ಕೆಲವು ಕಾಲದ ಹಿಂದೆ ಕೊಡಗಿನ [illegible] ಮೇಜಿಸ್ಟ್ರೇಟರಾಗಿಯೂ ಸಂಕಟ ಕಮಿಶನರಾಗಿಯ [illegible] ಮೆ. ಕರ್ಷ್ಟನಾವೆನ್‌ರವರು, ಕೊಡಗಿನ ನೋಟದ [illegible] ರ್ಯವನ್ನು ತಾನು ಅಲ್ಲಿ ಕಳೆದ ಸಂತೋಷಕಾಲವನ್ನು [illegible] ಕೆಲವು ಮಾತುಗಳನ್ನಾಡಿದರು. ಕೊಡಗಿನ ನಿವಾ[illegible] ಯೂರೋಪಿಯನರಿಗೂ ಸಂಬಂಧವು ಯಾವಾಗ[illegible] ಗಿಯೇ ಇತ್ತೆಂದು ಹೇಳಿದರು. ಮೆ. ಕರ್ಷ್ಟನಾವೆ[illegible] ಮತ್ತು ಪ್ರೊ. ಫಿಲಿಪ್ಸರವರು ಕೊಡಗಿನಲ್ಲಿ ಬಹು [illegible] ಯಾಗಿದ್ದರೆಂದು. ಮುಂತಾಗಿ ರಾ ಬಾ. ಸಿ. ಅಪ್ಪ[illegible] ರು ನೂತಾಡಿದರು. ಮಿಸೆಸ್ ಚೆಟ್ ಸಿ. ತಿಮ್ಮಯ್ಯ[illegible] ರು ಕೆಲವು ಉತ್ತಮ ಹಿಂದುಪದಗಳನ್ನು ಹಾಡಿ [illegible] ರ ಮನಸ್ಸನ್ನು ಉಲ್ಲಾಸಗೊಳಿಸಿದರು.

ಐ ಸಿ. ಸುಬ್ಬಯ್ಯ.

ಸೆಕ್ರೆಟರಿ.

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ಬೋಧರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಡ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್‌ಕಂದಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅವನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ಯಾ ೩ ಡಬ್ಬಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬ ೧ಕ್ಕೆ ರೂ. ೨—೦—೦ ಅಂಚೆ ಖರ್ಚು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ಶರಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಅಡ್ರೆಸ್,
ಮಿಸ್ರಿ ಬೆಂಗಳೂರು ಸಿಟಿ.

ಪಿ. ಮನ್ನಾಲಾಲ್, ಡಿಲ್ಲಿ ಸೇಟಿನ ವೈದ್ಯರು,
ಸಾಲಂಮಿಸ್ರಿ ಮುರಬ್ಬಾ ಡಿಪೋ,
ಬೆಂಗಳೂರು ಸಿಟಿ.

14—3

ವರ್ತಮಾನ ಸಂಗ್ರಹ.

ಒಳದೇಶ

ಚೀಫ್ ಕಮಿಶನರವರು ಈ ತಾರೀಕು 22ರಲ್ಲಿ [illegible] ರಿನಿಂದ ಮಡಿಕೇರಿಗೆ ಬಂದಿರುವರು.

ಹೊದ್ದೂರು ಗ್ರಾಮದ ಮೆ. ಚಾರಿರ ಸುಬ್ಬಯ್ಯ [illegible] ಈ ತಾ. 28ರಲ್ಲಿ ಶಿವಾಧೀನರಾದದ್ದಕ್ಕೆ ವ್ಯಸನಪಡು[illegible]

ಈ ತಾರೀಕು 31ರಲ್ಲಿ ಕಿಗ್ಗಟ್ಟುನಾಡಿನಲ್ಲಿ ನಡೆ[illegible] ದ್ದ ಚುನಾವಣೆಗೆ ಎದುರಾಳಿಗಳಿಲ್ಲದ್ದರಿಂದ ಮೆ. [illegible] ಡ ಮಾಚಯ್ಯನವರು ಕೌನ್ಸಿಲು ಮೆಂಬರಾಗಿ ಆರಿಸ[illegible] ವರು.

ಫ್ರೇಜರ್‌ಪೇಟೆಯ ಗಣಪತಿ ರಥೋತ್ಸವವು [illegible] ವೆಂಬರು ತಾರೀಕು 7ರಿಂದ 11ರ ವರೆಗೆ ನಡೆಯುವ[illegible] ವಾಡಿಕೆಯಂತೆ ದನಗಳ ಪ್ರದರ್ಶನವೂ ಮಾರಾಟವೂ [illegible] ಮಯದಲ್ಲಿ ಜರಗುವುದು.

ದಕ್ಷಿಣ ಕೊಡಗು ಸ್ಪೋರ್ಟ್ಸ್‌ಕ್ಲಬ್ಬಿನ ಹಾಕಿ [illegible] ಮೆಂಟು ತಾ. 29—10—'26 ರಿಂದ ನವಂಬರು [illegible] ರಗೆ ನಡೆಯುವುದೆಂದೂ ಆಟಗಳು ಪೊಳ್ಳಿಬೆಟ್ಟ ಮೈದಾ[illegible] ಆಡಲ್ಪಡುವದೆಂದೂ ತಿಳಿಯಬರುತ್ತದೆ.

ಈ ಪತ್ರಿಕೆಯಲ್ಲಿ ಈ ಮೊದಲು ತಾನು ಶ್ರೀಮಂಗಲ ನಾಡಿನ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಗೆ ಉಮೇದುವಾರನಾಗಿ ನಿಲ್ಲುತ್ತೇನೆಂದು ಪ್ರಕಟಿಸಿದಂತೆ [illegible] ಲ್ಲುವದಿಲ್ಲವೆಂದು ಮೆ. ಬಟ್ಟಿಯಂಡ ಉತ್ತಯ್ಯನವರು [illegible] ಸಿರುತ್ತಾರೆ.

ರಾ. ಬಾ. ಕೊಡಂದೆರ ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಮೆ. ಪಿ. ಯಸ್. ಕುಶಾಲಪ್ಪನವರು ತಾ. 30—[illegible] ನೇ ಶನಿವಾರ ಸೆಂಟ್ರಲ್ ಹೈಸ್ಕೂಲು ಹಾಲಿನಲ್ಲಿ ಮ[illegible] ಯಲ್ಲಿ ಭಿಕ್ಷುಕರ ಸಮಸ್ಯೆಯನ್ನು ಕುರಿತು ಚರ್ಚಿಸ[illegible]

ಇಂಡಿಯಾ ಸರ್ಕಾರದ ಟೆಲಿಗ್ರಾಮ್ ಮೇರೆ 'ಆರ್ಮಿಸ್ಟಿಸ್' ದಿನವನ್ನು ಆಚರಿಸಲಿಕ್ಕಾಗಿ ನವಂಬರು ತಾ 11 ರಲ್ಲಿ ಪ್ರಾತಃಕಾಲದವರೆಗೆ ಟ್ರೆಜರಿ ಹೊರತು ಬಾಕಿ ಸರ್ಕಾರಿ ಆಫೀಸು ಗಳಲ್ಲಾ ಮುಚ್ಚಲ್ಪಡತಕ್ಕವೆಂದೂ, ಅದೇ ದಿನ ಬೆಳಗ್ಗೆ 11 ಗಂಟೆಗೆ ಎರಡು ಮಿನಿಟುಗಳವರೆಗ ಪೇಟೆಯಲ್ಲಿ ವ್ಯಾಪಾರ ವಹಿವಾಟುಗಳನ್ನು ನಿಲ್ಲಿಸುವಂತೆ ಪೋಲೀಸು ಡಿಪ್ಯುಟಿ ಸುಪರಿಂಟೆಂಡೆಂಟರು ಏರ್ಪಾಡು ಮಾಡುವರೆಂದೂ ಕಮಿಶನರು ತಿಳಿಸಿರುತ್ತಾರೆ.

ಕೌನ್ಸಿಲು ಚುನಾವಣೆಯಲ್ಲಿ ಓಟಿನ ಹಕ್ಕಿದ್ದು ಓಟರುಗಳ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋದವರೂ, ಪಟ್ಟಿಯಲ್ಲಿ ಬೇರೆ ಯಾವದೂ ತಪ್ಪು ಕಂಡು ಹಿಡಿದವರೂ ಆ ತಪ್ಪುಗಳನ್ನು ಸರಿಪಡಿಸುವ ಬಗ್ಗೆ ನವಂಬರು 12 ರೊಳಗ ರಿವೈಸಿಂಗ್ ಆಫೀಸರಿಗ ಅರ್ಜಿಯನ್ನು ಕಳುಹಿಸಿಕೊಳ್ಳಬೇಕೆಂದು ಈ ಮೊದಲೇ ಪ್ರಕಟವಾಗಿತ್ತು. ಅದರಂತೆ ಬಂದ ಅರ್ಜಿಗಳನ್ನು ರಿವೈಸಿಂಗ್ ಆಫೀಸರು ನವಂಬರು ತಾ 12ರಲ್ಲಿ ಪೊನ್ನಂಪೇಟೆಯಲ್ಲಿಯೂ 13 ರಲ್ಲಿ ವೀರಾಜಪೇಟೆಯಲ್ಲಿಯೂ, 14ರಲ್ಲಿ ಮಡಿಕೇರಿಯಲ್ಲಿಯೂ, 15 ರಲ್ಲಿ ಸೋಮವಾರಪೇಟೆಯಲ್ಲಿಯೂ ವಿಚಾರಿಸುವರೆಂದು ಅವರು ಪ್ರಕಟಿಸಿರುತ್ತಾರೆ.

ಒಲಮುರಿ ಗ್ರಾಮದ ಕಾಟುಮನೆ ಮಂದಣ್ಣನ ಮತ್ತನ್ನು ಮ. ರಾ. ಶ್ರೀ ಪಟ್ಟಡದ ಚಿಣ್ಣಪ್ಪನವರಿಗ 99 ವರ್ಷಕ್ಕೆ ಗೇಣಿಗೆ ಕೊಟ್ಟರೂ ಅವರಿಗೆ ಸ್ವಾತ್ತು ಸ್ವಾಧೀನವಾಗದೆ ಇದ್ದುದರಿಂದ ಕ್ರಿಮಿನಲ್ ಕೋರ್ಟಿನಲ್ಲೂ ಅನಂತರ ಸಿವಿಲ್ ಕೋರ್ಟಿನಲ್ಲೂ ವ್ಯಾಜ್ಯ ನಡೆದು ಕಳೆದವಾರ ಕಕ್ಷಿಗಾರರು ರಾಜಿ ಮಾಡಿಕೊಂಡರು. ಪ್ರತಿವಾದಿ ಮಂದಣ್ಣನವರ ವಾದಿಯಾದ ಮಿ ಚಿಣ್ಣಪ್ಪನವರಿಗೆ ಐದು ವರ್ಷದವರೆಗ ಯಾವಾಗ ಲಾದರೂ ಪ್ರತಿವಾದಿಯು ಹೊಂದಿಕೊಂಡಿದ್ದ 500 ರೂ ಗಳನ್ನು ಕೊಟ್ಟರೆ ಮಿ. ಚಿಣ್ಣಪ್ಪನವರ ಸ್ವಾತ್ತನ್ನು ಬಿಟ್ಟುಬಿಡಬೇಕೆಂತಲೂ ಆ ಅವಧಿಯೊಳಗೆ ಹಣ ಕೊಡದೆ ಇದ್ದರೆ ಸ್ವಾತ್ತು ವಾದಿಯ ಸ್ವಾಧೀನದಲ್ಲೇ 99 ವರ್ಷದವರೆಗೂ ಇರಬೇಕೆಂದೂ ರಾಜಿಯಾಗಿ ಇದರಂತೆಯೇ ಡಿಕ್ರಿ ಪಡೆದುಕೊಂಡಿರುತ್ತಾರೆ

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಆ ದಿನ ಕೊಡಗು ಜಮೀನ್ದಾರರ ಸಂಘದ ಹಾಲಿನಲ್ಲಿ ನಡೆದು, ಮಡಿಕೇರಿ ಟವುನ್ ಸೊಸೈಟಿಗೆ 800 ರೂ ಬಿಳುಗೂರು ಸೊಸೈಟಿಗೆ 500 ರೂ ಎಮ್ಮೆಗುಂಡಿ ಸೊಸೈಟಿಗೆ 500 ರೂ ಟೀಚರ್ಸ ಸ್ಟೋರ್ಸ್‌ಗೆ 200 ರೂ ಮತ್ತು ವೀರಾಜಪೇಟೆ ಟವುನ್ ಸೊಸೈಟಿಗೆ 500 ರೂ ಸಾಲ ಮಂಜೂರಾಗಿರುತ್ತೆ. ಜನರಲ್ ಮೀಟಿಂಗಿನ ಸ್ಥಳ ಮತ್ತು ತಾರೀಖನ್ನು ನಿಶ್ಚೈಸುವುದೂ, ಡೈರೆಕ್ಟರುಗಳ ರಿಪೋರ್ಟನ್ನು ಮಂಜೂರ್ಮಾಡುವುದೂ ಇನ್ನೊಂದು ಮೀಟಿಂಗಿಗ ಮುಂದರಿಸಿ ಇಡಲಾಯಿತು. ಪಿ. ಭುಜಂಗರಾಯರು ಬಿ.ತಾನಿಯ ಕೆಲಸಕ್ಕೆ ರಾಜಿನಾಮೆ ಕೊಟ್ಟದ್ದರಿಂದ ರಾ ಸಾ ಪಟ್ಟಮಾಡ ದೇವಯ್ಯನವರು ಆ ಸ್ಥಳಕ್ಕೆ ಆರಿಸಲ್ಪಟ್ಟರು. ಬ್ಯಾಂಕಿನ ಬಿಟ್ಟು ಡೈರೆಕ್ಟರಾಗಿದ್ದ ಮಿ ದಿವಂಗತ ಪೃತ್ಯುಂಡ ಗಣಪಯ್ಯನವರ ಮರಣಾಂತಕ್ಕೆ ಒಂದು ಸಂತಾಪ ಪತ್ರವನ್ನು ಬರೆಯುವಂತೆ ತೀರ್ಮಾನಿಸಿದರು

ಹಿಂದೂದೇಶ.

ಗೌಹಾಟಿ ಕಾಂಗ್ರೆಸ್ಸಿನ ಸಮಯದಲ್ಲಿ ಅಲ್ಲಿ ಅಖಿಲಭಾರತ ಸಂಪಾದಕರ ಸಮ್ಮೇಳನ ನಡೆಯುವದೆಂದು ತಿಳಿಯಬರುತ್ತದೆ

ಲೆಜಿಸ್ಲೇಟಿವ್ ಅಸೆಂಬ್ಲಿಗೆ ಪಂಡಿತ ಮೋತಿಲಾಲ್ ನಹರುರವರು ಮತ್ತು ಪಂಡಿತ ಮದನಮೋಹನ ಮಾಳವೀಯರು ಎದುರಾಳಿಗಳಿಲ್ಲದೆ ಚುನಾಯಿಸಲ್ಪಟ್ಟಿರುವರು

ಮೈಸೂರು ಮಂತ್ರಿ ಮಂಡಲಕ್ಕೆ ಒಬ್ಬ ಉದ್ಯೋಗಸ್ಥರಲ್ಲದ ಮೆಂಬರನ್ನು ನೇಮಿಸಬೇಕೆಂಬ ಅಲ್ಲಿಯ ಎಸೆಂಬ್ಲಿಯ ಕೋರಿಕೆ ಮೇರೆ ಮಿ ರಾಮಚಂದ್ರರಾವ್ ಅಡ್ವಕೇಟರವರನ್ನು ಮಂತ್ರಿ ಮಂಡಲಕ್ಕೆ ಒಬ್ಬ ಮೆಂಬರಾಗಿ ನೇಮಿಸಿರುವರು

ಲಕ್ನೋದ ದನಗಳ ಪ್ರದರ್ಶನಕ್ಕೆ ಒಂದು ವಿಶೇಷತರದ ಪಶುವು ತರಲ್ಪಟ್ಟಿದೆ. ಇದಕ್ಕೆ ಮನುಷ್ಯನದಂತ ಮುಖವೂ, ಹೋತನದಂತ ಕಿವಿಗಳೂ, ಕರಡಿಯದಂತ ಬಾಲವೂ ಇರುವದಲ್ಲದೆ ಇದರ ಚರ್ಮವು ಕಂಪಾಗಿದ್ದು ಮೈ ಮೇಲೆ ಕೂದಲುಗಳೇ ಇಲ್ಲ ತಲೆಯ ಮೇಲೆ ಮಾತ್ರ ಉದ್ದವಾದ ಕೂದಲುಗಳಿವೆ

ಇಷ್ಟೇಟು ಅಟವು ಮೊದಲು ಭಾರತದಲ್ಲಿ ಹುಟ್ಟಿದ್ದು ಈಗ ಪರದೇಶದಲ್ಲಿ ಬಹು ಪ್ರಬಲವಾಗಿದೆ ರಾಜಾಧಿರಾಜರೂ, ಅವರ ಮಂದಿರು ಮಕ್ಕಳೂ ಈ ಆಟದಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ ಇಂಗ್ಲೆಂಡದಲ್ಲಿ ವರ್ಷಗಟ್ಲೆ 25 ಲಕ್ಷ ಪಾಕೇಟುಗಳು ಖರ್ಚಾಗುತ್ತವೆ ಇದರ ಒಂದೊಂದು ಆಟದಲ್ಲಿ 2 ಲಕ್ಷ ರೂಪಾಯಿ ಸೋಲು ಗೆಲುವುಗಳು.

ಮದ್ರಾಸಿನ 'ಹಿಂದೂ' ಪತ್ರಿಕೆಯ ಸಂಪಾದಕರಾದ ಶ್ರೀ ರಂಗಸ್ವಾಮಿ ಅಯ್ಯಂಗಾರರವರು ತಾ 22ರಲ್ಲಿ ಮದನಪಲ್ಲಿಯಲ್ಲಿ ಶಿವಾಧೀನರಾದುದಕ್ಕೆ ವ್ಯಸನಪಡುತ್ತೇವೆ ಹಿಂದೂ ದೇಶದ ಪತ್ರಿಕಾಕರ್ತರುಗಳಲ್ಲಿ ಗಟ್ಟಿಗರಾದವರ ಪೈಕಿ ಇವರೂ ಒಬ್ಬರು. ಇವರು ತನ್ನ 40ನೇ ವಯಸ್ಸಿನಲ್ಲಿಯೇ ಅಕಾಲ ಮರಣ ಹೊಂದಿದ್ದು ಪತ್ರಿಕಾ ಪ್ರಪಂಚಕ್ಕೆ ಒಂದು ದೊಡ್ಡ ನಷ್ಟವಾಗಿದೆ.

ವಿದೇಶ.

ಒಂಟೆಯಂತಹ ಕಾಲುಗಳಿರುವ ಮನುಷ್ಯನೊಬ್ಬನು ಜರ್ಮನಿಯಲ್ಲಿರುವನಂತೆ! ಆದರೆ ಅವನ ಮಕ್ಕಳ ಕಾಲುಗಳು ಮನುಷ್ಯರದಂತಿವೆ

ಇರುವೆಯು ಬುದ್ಧಿ ಶಕ್ತಿಯು ಬಹು ವಿಶೇಷವಾದುದೆಂದೂ, ಮನುಷ್ಯರು ಇಲ್ಲದಿದ್ದರೆ ಇರುವೆಗಳೇ ಈ ಪ್ರಪಂಚವನ್ನು ಆಳುತ್ತಿದ್ದುವೆಂದೂ ಒಬ್ಬ ವಿಜ್ಞಾನಿ ಕಂಡುಹಿಡಿದಿರುವನಂತೆ.

1927 ನೇ ಇಸವಿಯ ಜೂನ್ 15 ರ ವರೆಗೆ ಯೂರೋಪಿನ ರಾಷ್ಟ್ರಗಳಲ್ಲಿ ಸ್ವಲ್ಪವನ್ನೂ ಉಂಟಾಗಿ ಯುದ್ಧ ಸಂಭವಿಸಬಹುದೆಂದು ಜರ್ಮನಿಯ ಒಬ್ಬ ಜ್ಯೋತಿಷ್ಯನು ಭವಿಷ್ಯ ಹೇಳಿರುವನು.

ಈ ವರೆಗ ಅತಿ ವೇಗವಾಗಿ ಹಾರಿದ ವಿಮಾನವು 220 ಮಿನಿಟುಗಳಲ್ಲಿ 200 ಮೈಲಿ ದೂರ ಹಾರಿದ ಅಮೇರಿಕದ ಒಂದು ವಿಮಾನವು ಸರಾಸರಿ ಗಂಟೆಗ 232 ಮೈಲಿ ವೇಗದಲ್ಲಿ ಹಾರಿದೆ ವಿಮಾನದ ವೇಗವು ಹಾರುವಾಗದರ ನಾಲ್ಕರಷ್ಟಾಯಿತು!

ಅಮೇರಿಕಾ ದೇಶದಲ್ಲಿ ಹಲವು ಅದ್ಭುತ ಸಂಗತಿಗಳನ್ನು ನಡೆಸುತಿರುವರು ಮನೆಗಳನ್ನೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಯ್ಯುವ ಯಂತ್ರಗಳನ್ನು ಕಂಡುಹಿಡಿದಿರುವರು ಮೂಗವತ್ತೊಂದು ಮನೆಗಳನ್ನು ೧೭ ವರ್ಷ ದಿವಸ ಗಳಲ್ಲಿ ಸಾಗಿಸಿ ಬ್ರಾಂಕ್ಸ್ ಎಂಬ ಪಟ್ಟಣದ ಇತ್ತ ಆ ರೂವರೆ ಮೈಲು ದೂರದಲ್ಲಿ ಸ್ಥಾಪಿಸಿರುವರಂತೆ

ಚಿತ್ರಪಟಗಳನ್ನು ಕಳುಹಿಸುವ ಒಂದು ವಿಶೇಷ ವಿಧಾನ ಕಂಡುಹಿಡಿಯಲ್ಪಟ್ಟಿದೆ ತಂತಿ, ವಿಮಾನ, ಹಡಗು ಯಾವದನ್ನೂ ಉಪಯೋಗಿಸದೆ ಅಮೇರಿಕದಿಂದ ಇಂಗ್ಲೆಂಡಿಗ ಕಾಲು ನಿಮಿಷದಲ್ಲಿ ಚಿತ್ರಪಟವು ಕಳುಹಿಸಲಾಗುತ್ತಿರುವದು ಒಂದು ಸ್ಥಳದಲ್ಲಿ ಚಿತ್ರಪಟದ ಮೇಲೆ ಒಂದು ಮುಳ್ಳನ್ನು ಆಡಿಸಿದರೆ ವಿದ್ಯುಚ್ಛಕ್ತಿಯ ಬಲದಿಂದ ಇನ್ನೊಂದು ಸ್ಥಳದಲ್ಲಿ ಇಟ್ಟಿರುವ ಮುಳ್ಳು ಹಾಗೆಯೇ ಆಡುವದರಿಂದ ಕಾಗದದ ಮೇಲೆ ಪಟವು ಬರೆಯಲ್ಪಡುವದಂತೆ

SALE OF SANDAL WOOD,

On 7th December 1926 at 12 noon about 185 tons of cleaned sandalwood will be sold in small lots in public auction at Fraserpet

For further particulars apply to—

The Chief Forest Officer,

3—2 Coorg Mercara

ಪತ್ರವ್ಯವಹಾರ

ಬಾತ್ಮಿದಾರರು ಬರುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಸಂ]

ನಾಪೋಕ್ಲು ಮೀಟಿಂಗು.

ಅಯ್ಯಾ,

ಚುನಾವಣೆಯ ಸಂಬಂಧ ದೇಶದಲ್ಲಿ ಹಲವು ಮೀಟಿಂಗುಗಳು ನಡೆಯುತ್ತಿರುವದರಿಂದ ನಾಪೋಕ್ಲಿನ ಈ ಮೀಟಿಂಗೂ ಅವುಗಳಲ್ಲಿ ಒಂದೆಂದು ಭಾವಿಸಿ, ಇದರ ಪ್ರೊಸೀಡಿಂಗ್ಸನ್ನು ಪ್ರಕಟಿಸದೆ ಬಿಟ್ಟಿರಬಹುದಾಗಿಯೂ ಚುನಾವಣೆ ಸಂಬಂಧ ಮಾತ್ರವಲ್ಲ, ಕೊಡವರೆಲ್ಲರ ವಿಷಯವೂ ಚೆನ್ನಾಗಿ ಚರ್ಚಿಸಲ್ಪಟ್ಟ ಮತ್ತು ತುಂಬಾ ಜನರು ನೆರೆದಿದ್ದ ಒಂದು ಮುಖ್ಯವಾದ ಈ ಮೀಟಿಂಗಿನ ವಿವರವನ್ನು ಖಂಡಿತವಾಗಿಯೂ ಪ್ರಕಟಿಸಬೇಕಾಗಿ ಕೋರುತ್ತೇನೆ

ಈ ತಾ 23ರಲ್ಲಿ ನಾಪೋಕ್ಲಿನಲ್ಲಿ ನಡೆದ ಈ ಮೀಟಿಂಗಿಗೆ ನಾಪೋಕ್ಲು ನಾಡಿನ ಸುಮಾರು 225 ಜನರು ಹಾಜರಿದ್ದರು ಮಿ ನಾಪನರವಂಡ ಪೊನ್ನಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಸಭೆಯನ್ನು ಸೇರಿಸಿದ ಮಿ. ಕೋಟೆರ ಚಿಣ್ಣಪ್ಪನವರು ಡಿಸ್ಟ್ರಿಕ್ಟ್ ಬೋರ್ಡು ಮತ್ತು ಕೌನ್ಸಿಲು ಚುನಾವಣೆಗಳಿಗೆ ಈ ನಾಡು ಮತ್ತು ತಾಲೋಕಿನ ಪರವಾಗಿ ಉಮೇದುವಾರರನ್ನು ನಿಶ್ಚೈಸುವದಕ್ಕಾಗಿಯೇ ಈ ಮೀಟಿಂಗು ಸೇರಿಸಲಾಯಿತೆಂದೂ, ಈ ಸಂಬಂಧ ಈಗ ದೇಶದಲ್ಲಿ 'ಕೊಡವ ಸಭೆ' ಯೆಂದೂ "ಲೋಕಪಾವನ ಪಾರ್ಟಿ" ಮತ್ತು ಜಮೀನ್ದಾರರ ಸಂಘ ಯೆಂದೂ "ಕೊಡಗು" ಪತ್ರಿಕಾ ಪಾರ್ಟಿಗಳು ತೋರುತ್ತಿವೆಯೆಂದೂ, ದೇಶದಲ್ಲಿ ಒಗ್ಗಟ್ಟನ್ನು ಸರಿಪಡಿಸತಕ್ಕವನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಜಮೀನ್ದಾರರ ಸಂಘದ ಪಾರ್ಟಿಯವರಿಗೆ ಎಲ್ಲರೂ ಒತ್ತಾಸೆಕೊಡಬೇಕೆಂದೂ ಮಾತಾಡಿ ಹೇಳಿದರು. ಕೊಡವರ ಉದ್ಧಾರಕ್ಕಾಗಿಯೇ ಕೊಡವ ಸಭೆ ಹೊರಟಿದೆಂದೂ, ಮುಖ್ಯ ದೇಶದೊಳಗಿನ ಅಲ್ಲಿಯ ಸ್ಥಳೀಕರಿಗೇನೇ ಹೆಚ್ಚಿನ ಪ್ರಾಮುಖ್ಯತೆ ಇರುವದರಿಂದ ಇಲ್ಲಿ ಕೊಡವರಿಗೆ ಪ್ರಾಮುಖ್ಯತೆ ಇರಬೇಕೆಂದೂ, ಕೆಲವು ಕಾಲಕ್ಕೆ ಹಿಂದೆ ಸರಕಾರದವರು ದೇಶದ ಪರ ಅಭಿಪ್ರಾಯಕ್ಕಾಗಿ ಕೊಡವರನ್ನು ಕೇಳುತ್ತಿದ್ದರು, ಈಗ ಗೌಡ, ಬ್ರಾಹ್ಮಣ ಮೊದಲಾದವರನ್ನು ಕೇಳುತ್ತಾರೆಂದೂ, ಕೊಡವ ಸಭೆಗೂ ಚುನಾವಣೆಗಳಿಗೂ ಸಂಬಂಧವಿಲ್ಲವೆಂದೂ ಮೊದಲಾಗಿ ಮಿ. ಪಾಲೇಕಂಡ ಮೇದಪ್ಪನವರು ಹೇಳಿದರು. ಮಿ. ಗಳಾದ ಬಿದ್ದಂಡ ಬೋಪಯ್ಯನವರು, ಸುಬ್ಬಯ್ಯನವರು, ಕಾರ್ಯಪ್ಪನವರು ಮತ್ತು ಮಿ. ಉದಿಯಂಡ ಮಾಚಯ್ಯನವರು ಕೊಡವ ಸಭೆ ಪರವಾಗಿ ಮಾತಾಡಿದರು.

ಕೊಡವಸಭೆಗೆ ಜಮ್ಮಾದವರೆಲ್ಲರೂ ಸೇರಬಹುದಾದುದರಿಂದ ಅದು ಕೊಡವರಿಗೆ ಮಾತ್ರವಲ್ಲವೆಂದೂ, ಅದರ ರೂಲ್ಸಿನ ಪ್ರಕಾರ ಅದು ಕೆಲವು ಐಶ್ವರ್ಯವಂತರ ಪ್ರಯೋಜನಕ್ಕೆ ಮಾತ್ರವಾಗಿದೆಯೆಂದು ತೋರುತ್ತದೆಂದೂ, ದೇಶದ ಅಭಿಪ್ರಾಯ ತಿಳಿಯಲು ಈಗ ಸರಕಾರದವರು ಮೊದಲಿನಂತೆ ಕೆಲವು ರಿಟೈರ್ಡ ಉದ್ಯೋಗಸ್ಥರು ಮತ್ತು ಕೆಲವು ಐಶ್ವರ್ಯವಂತರನ್ನು ಮಾತ್ರ ಕೇಳದೆ ಚುನಾಯಿತ ಪ್ರತಿನಿಧಿಗಳನ್ನು ಕೇಳುವುದು ಕೆಲವರಿಗೆ ಅಸಮಾಧಾನವಾದಂತೆ ಕಾಣುತ್ತದೆಂದೂ, ದೇಶದ ಬಹುಮತದವರ ಅಭಿಪ್ರಾಯದಂತೆ ನಡೆಯುವವರನ್ನೇ ಡಿ. ಬೋರ್ಡು ಮತ್ತು ಕೌನ್ಸಿಲಿಗೆ ಚುನಾಯಿಸುವುದು ಯೋಗ್ಯವೆಂದೂ ಮಿ ಪಂದ್ಯಂಡ ಬೆಳ್ಳಿಯಪ್ಪನವರು ಹೇಳಿದರು. ಡಿ ಬೋರ್ಡಿಗೆ ಮಿ. ಅರೆಯಡ ಸುಬ್ಬಯ್ಯನವರನ್ನು ನಿಲ್ಲಿಸಬೇಕೆಂದು ಮಿ ಕೆ ಪಿ. ಚಿಣ್ಣಪ್ಪನವರು ಸೂಚಿಸಿದರು ಮಿ ಉದಿಯಂಡ ಮಾಚಯ್ಯನವರು ಮತ್ತು ಮಿ ಬಿದ್ದಂಡ ಸಬ್ಬಯ್ಯನವರು ತಾವು ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕೆಲಸ ಮಾಡಲು ತಯಾರಾಗಿದ್ದೇವೆ, ತಮಗ ಒತ್ತಾಸೆಕೊಡಬೇಕೆಂದು ಕೇಳಿಕೊಂಡರು ಈ ನಾಡಿನ ಬಹು ಮತದವರ ಅಭಿಪ್ರಾಯವನ್ನು ನಿರಾಕರಿಸಿ ಕೊಡವ ಸಭೆಗ ಸೇರದವರಿಗ ಓಟುಕೊಡಬಾರದೆಂದು ನಾಕೈದು ಮಂದಿ ಯುವಕರು ವಾದಿಸಿದರು. ಚರ್ಚೆಯು ದೀರ್ಘವಾಗಿ ಐದು ಗಂಟೆ ಸಮೀಪಿಸುತ್ತಾ ಬಂದುದರಿಂದ ಜನರು ಮೀಟಿಂಗಿನಿಂದ ಹೊರಟು ಹೋಗಲು ಪ್ರಾರಂಭಿಸಿದರು. ಡಿ. ಬೋರ್ಡು ಉಮೇದುವಾರತನವನ್ನು ಓಟಿನ ಮೂಲಕ ತೀರ್ಮಾನಿಸಬೇಕೆಂದು ಕೆಲವರು ಸೂಚಿಸಿದರು ಓಟಿಗೆ ಹಾಕಬಾರದೆಂದು ಮಿ ಬಿ. ಎಂ. ಕಾರ್ಯಪ್ಪ, ಸುಬ್ಬಯ್ಯ ನವರು ವಾದಿಸಿದರು. ಓಟಿನ ಮೂಲಕವೇ ತೀರ್ಮಾನಿಸಬೇಕೆಂದು ಉತ್ತರವಾದ ಅಧ್ಯಕ್ಷರು ನಿರ್ಧರಿಸಿದರು ಓಟಿಗೆ ಹಾಕಲಾಗಿ 63 ಜನರು ಮಿ ಅರೆಯಡ ಸುಬ್ಬಯ್ಯನವರ ಪರವಾಗಿಯೂ, ಮೂವರು ಮಿ. ಉದಿಯಂಡ ಮಾಚಯ್ಯನವರಿಗೂ ಕೈ ಎತ್ತಿದರು. ಮಿ ಬಿ ಸಬ್ಬಯ್ಯನವರ ಪರ ಎಷ್ಟು ಜನರಿದ್ದಾರೆಂದು ಅಧ್ಯಕ್ಷರು ಕೇಳಿದಾಗ ಯಾರೂ ಕೈ ಎತ್ತಲಿಲ್ಲ. ಮಿ. ಬಿ. ಬೋಪಯ್ಯನವರು ಹೇಳಿದರೂ ಮಿ. ಸುಬ್ಬಯ್ಯನವರ ಪರ ಯಾರೂ ಕೈ ಎತ್ತಲಿಲ್ಲ

ನಂತರ, ಕೌನ್ಸಿಲಿನಲ್ಲಿ ಈ ತಾಲೋಕಿನ ಜಮ್ಮಾದವರ ಪರವಾಗಿ ಇರುವ ಮೂರು ಮೆಂಬರರ ಸ್ಥಳಕ್ಕೆ ಮಿ. ಪಟ್ಟಿಯಂಡ ಗಣಪನವರು, ಮಿ ಕೋಟೆರ ಚಿಣ್ಣಪ್ಪನವರು ಮತ್ತು ತಾನು ಉಮೇದುವಾರರಾಗಿ ನಿಂತು ಓಟಿಗೆ ಕೆಲಸ ಮಾಡುತ್ತಿದ್ದೇವೆಂದೂ, ಕೌನ್ಸಿಲಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ತಾವು ಮಾಡಿದ ಕೆಲಸವು ಓಟರುಗಳಿಗೆ ತೃಪ್ತಿಕರವಾಗಿ ಕಂಡುಬಂದಲ್ಲಿ ಈ ಸಾರಿಯೂ ತಮಗ ಓಟುಕೊಡಬೇಕೆಂದೂ ಮಿ ಕೆ ಐ ಬೆಳ್ಳಿಯಪ್ಪನವರು ನೆರೆದಿದ್ದವರಲ್ಲಿ ವಿಜ್ಞಾಪಿಸಿಕೊಂಡರು

"ಹಾಜರಿದ್ದವ"

ಹುದಿಕೇರಿ ಮೀಟಿಂಗು.

ಅಯ್ಯಾ

ಈ ತಾ 18ರಲ್ಲಿ ಬಾಡಗೇರಿನಾಡು ತಕ್ಕರಾದ ಮಿ ಅಜ್ಜಿಕುಟ್ಟಿರ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಹುದಿಕೇರಿಯಲ್ಲಿ ಒಂದು ಮೀಟಿಂಗು ನಡೆಯಿತು ಸುಮಾರು 60 ಜನರು ಸೇರಿದ್ದರು ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡು ಮೆಂಬರತನಕ್ಕೆ ಯಾರಿಗೆ ಓಟು ಕೊಡಬೇಕೆಂಬ ವಿಷಯವು ಚರ್ಚಿಸಲಾಯಿತು ಮಿ ಕೆ ಎಸ್ ನಂಜಪ್ಪನವರು, ತಾನೊಬ್ಬ ಉಮೇದುವಾರನಾಗಿರುವ ಕಾರಣ ತನಗೆ ಓಟು ಕೊಡಬೇಕೆಂದು ಕೇಳಿಕೊಂಡರು ಮಿ ಚೇಂದಿರ ತಿಮ್ಮಯ್ಯನವರು ಮತ್ತು ಮಿ ಅಜ್ಜಿಕುಟ್ಟಿರ ಕಾಳಪ್ಪನವರು ಕೊಡವ ಸಭೆಗೆ ಸೇರಿದವರಿಗೆ ಓಟು ಕೊಡತಕ್ಕದೆಂದು ಮುಂತಾಗಿ ಮಾತಾಡಿದರು. ಮಿ ಕೆ ಎಸ್ ನಂಜಪ್ಪನವರು ಕೊಡವ ಸಭೆಗೆ ಒತ್ತಾಸೆಯಾಗಿ ಮಾತಾಡಿದರು. ... ಸಿ ಕಾರ್ಯಪ್ಪನವರು ಮಿ. ಕೆ. ನಂಜಪ್ಪನವರ ಬಾಷಣಕ್ಕೆ ಅನುಮೋದಿಸಿ ಮಾತಾಡಿದರು ನಂತರ ಡಿ ಬೋರ್ಡು ಮೆಂಬರತನಕ್ಕೆ ಮಿ ಗಳಾದ ಚೆ ಎಸ್ ತಿಮ್ಮಯ್ಯನವರು, ತೀತಿರ ಸುಬ್ಬಯ್ಯನವರು ಮತ್ತು ಅಜ್ಜಮಾಡ ಮಾಗಪ್ಪನವರು ಇವರ ಮೂವರ ಹೆಸರುಗಳು ಪ್ರತ್ಯೇಕವಾಗಿ ಸೂಚಿಸಲ್ಪಟ್ಟವು ಮಿ. ಗಳಾದ ಚೇಂದಿರ ಪೂವಪ್ಪನವರು, ಮಿ ಕರುಂಬಯ್ಯನವರು ಮತ್ತು ತೀತಿರ ದೇವಯ್ಯನವರು, ಡಿಸ್ಟ್ರಿಕ್ಟ್ ಬೋರ್ಡಿಗೆ ಈ ನಾಡಿನವರ ಪೈಕಿ ಒಬ್ಬರಿಗೆ ಓಟು ಕೊಡಬೇಕೆಂತಲೂ, ಈಗ ಮುಂದೆ ಬಂದಿರುವ ಉಮೇದುವಾರರುಗಳು ತಮ್ಮೊಳಗೆ ಒಪ್ಪಂದ ಮಾಡಿಕೊಂಡು ಒಬ್ಬರನ್ನೇ ನಿಲ್ಲಿಸುವುದು ಉತ್ತಮವೆಂದೂ ಮೊದಲಾಗಿ ಬಾಷಣ ಮಾಡಿದರು. ಅದರಂತೆಯೇ ಅಲ್ಲಿದ್ದ ಕೆಲವು ಉಮೇದುವಾರರು ಒಪ್ಪಂದ ಮಾಡಿಕೊಂಡು ಅಲ್ಲಿ ನೆರೆದಿದ್ದವರ ಬಹುಮತದ ಮೇರೆ ಮಿ ಅಜ್ಜಮಾಡ ಮಾಗಪ್ಪನವರಿಗೆ ಡಿ ಬೋರ್ಡು ಚುನಾವಣೆಯಲ್ಲಿ ಒತ್ತಾಸೆ ಕೊಡುವಂತೆ ತೀರ್ಮಾನ ಮಾಡಿದರು.

ಅ. ಕಾಳಪ್ಪ

(ಅಧ್ಯಕ್ಷರು)

ನಾವು ಯಾರಿಗೆ ಭಿಕ್ಷೆಯನ್ನು ಕೊಡಬೇಕು?

ದೇಶಾಭಿಮಾನಿಗಳೇ, ಈಗಿನ ಕಾಲವಸ್ಥೆಗೆ ಸರಿಯಾಗಿ ಪ್ರತಿಯೊಬ್ಬನೂ ನಡೆಕೊಳ್ಳಬೇಕಾದುದು ಅವಶ್ಯವು. ಏಕೆಂದರೆ ಮಳೆಗಾಲದಲ್ಲಿ ಮಳೆಯು ಬದಲು ಬಿಸಿಲೂ, ಬಿಸಿಲಿನ ಕಾಲದಲ್ಲಿ ಮಳೆಯೂ ಆಗಿ ನಮಗೆ ಧಾನ್ಯಗಳು ಬೆಳೆಯುವ ಈ ಚಿಕ್ಕದಾದ ಕೊಡಗಿನಲ್ಲಿಯ ಜನರ ಅಭಿವೃದ್ಧಿಯು ಯಾವ ರೀತಿಯಲ್ಲಿ ಸೂರ್ಯನ ಪ್ರತಾಪವು ಪ್ರಚಂಡವಾದ ಮೇಲೆ ತಗ್ಗುತ್ತದೋ ಅದೇ ಪ್ರಕಾರ ತಗ್ಗುತ್ತಿರುವುದನ್ನು ಸರ್ವರೂ ಬಲ್ಲೆವಷ್ಟೆ. ಹಾಗಾದ ಪಕ್ಷಕ್ಕೆ ದೇವರೇ ಗತಿಯೆಂದು ಗರ್ವ ಅಹಂಕಾರವನ್ನು ಅವನ ಮೇಲೆ ಹೊರಿಸಿ ಯಾರು ಕಷ್ಟಪಡದೆ [illegible] ಸಂಪಾದನೆಗೆ ಹಾತೊರೆಯುತ್ತಾರೋ ಅಂಥವರು ಈ ಪ್ರಪಂಚವನ್ನು ಬಿಟ್ಟು ಬಿಟ್ಟು ಹೋದರೆ ಸ್ವಲ್ಪವಾದರೂ ಜನರ ಭಾರವು ಕಡಿಮೆಯಾಗಬಹುದೆಂದು ನಂಬುತ್ತೇನೆ. ಇದರ ವಿಷಯವಾಗಿ ನಾವು ನಿತ್ಯ ಕಾಣುತ್ತಿರುವ ಒಂದು ಸಣ್ಣ ಸಂಗತಿಯಾದರೂ ಪತ್ರಿಕೆಯ ಅಭಿವೃದ್ಧಿಯನ್ನು ಬಯಸುವ ಒಂದು ಉದಾಹರಣೆಯನ್ನು ಈ ಕೆಳಗೆ ಸೂಚಿಸುವೆನು. ಅದರಿಂದ ಸರ್ವ ಮಹನೀಯರೂ ಈ ಸಂಗತಿಗೆ ಗಮನಕೊಡಬೇಕಾಗಿ ಪ್ರಾರ್ಥನೆ.

ಉತ್ಪತ್ತಿಯು ಕಡಿಮೆಯಾಗುತ್ತಾ ಬಂದ ಹಾಗೆ ಭಿಕ್ಷುಕರ ಸಂಖ್ಯೆಯೂ ಹೆಚ್ಚುತ್ತಾ ಬರುತ್ತಿದೆ. ನಾವು ಯಾರಿಗೆ ಭಿಕ್ಷೆಯನ್ನು ಕೊಡಬೇಕು?

ಸಾಧಾರಣವಾಗಿ [illegible] ಈ [illegible] ಮೇಲೆ ಅಂಗಹೀನರಾಗಿ [illegible] ವೃದ್ಧರೂ [illegible] ತಮ್ಮ ಆಹಾರವನ್ನು ಸಂಪಾದಿಸಿ [illegible] ಇದ್ದಾರೆ, ಅಂಥವರಿಗೆ [illegible] ಸ್ವಲ್ಪವಾದರೂ ಪುಣ್ಯವನ್ನು [illegible] ಅದಲ್ಲದೆ ಈಗ [illegible] ಆರೋಗ್ಯವಂತರಾಗಿಯೂ ಇರುವವರು [illegible] ಅದರಿಂದ ಅಂಥವರಿಗೆ ಭಿಕ್ಷೆಯನ್ನು ಕೊಡುವುದು ಪೂರಾ ಅನ್ಯಾಯವೆಂದು ನಾನು [illegible] ಹೇಳುತ್ತೇನೆ. ಏಕೆಂದರೆ ಈ ಪ್ರಕಾರ [illegible] ಮಾಡುತ್ತಾ ಬಂದರೆ, ಇನ್ನು [illegible] ತಮ್ಮ ತಮ್ಮ ಆಹಾರವನ್ನು ಕಷ್ಟದಿಂದ ಸಂಪಾದಿಸುವವರ ಸಂಖ್ಯೆಯು ಕಡಿಮೆಯಾಗುತ್ತದೆ. [illegible] ಇವರ ಸಂಖ್ಯೆಯು ಹೆಚ್ಚುತ್ತಾ ಬಂದಹಾಗೆ [illegible] [illegible] [illegible] [illegible] ಅದರಿಂದ [illegible] [illegible] ಕೊಡದೆ [illegible] ಕೆಲಸವನ್ನು ಕೊಡುವುದಾಗಿ ಹೇಳಬೇಕೆಂದು ನಾನು ಬೇಡುತ್ತೇನೆ.

ಅವರಿ [illegible] [illegible] [illegible] [illegible] ಅದರ [illegible] ಒಂದು [illegible] ಕೊಡುವುದರಿಂದ [illegible] ತಾವು [illegible] ಇನ್ನು [illegible] ಉಪಕಾರಮಾಡಿದಂತಾಗುವದೆಂದು ಹೇಳುತ್ತೇನೆ.

ಅದ್ದರಿಂದ [illegible] ಅಧಿಕಾರಿಗಳು ಇವರ ವಿಷಯ ಶಕ್ತಿ ಇಲ್ಲದ ಗರೀಬರನ್ನು ಸರಕಾರವು ಉಪೇಕ್ಷಿಸದೆ [illegible] [illegible] ಬಂದವರಿಗೆ [illegible] (ಒಕ್ಕಲಿಗೆ) [illegible] [illegible] [illegible] ಆಶ್ರಮದಲ್ಲಿ ನಡೆಯುವ ಸರ್ವ [illegible] ದೇಶದಲ್ಲಿ ಹೀಗೆ [illegible] ಗಳು ಅಭಿವೃದ್ಧಿ ಹೊಂದುತ್ತಿರುವದನ್ನು ತಿಳಿಸಿ ಸರ್ವರನ್ನು ರಕ್ಷಿಸಬೇಕಾಗಿ ನಮಸ್ಕರಿಸುತ್ತೇನೆ.

ವಿದ್ಯಾರ್ಥಿ

ಸೆಂಟ್ರಲ್ ಹೈಸ್ಕೂಲಿನ ಸ್ಕೌಟುದಳ.

ಮಿ ಥಾಮ್ಸನ್ ಸಾಹೇಬರವರು ಸೆಂಟ್ರಲ್ ಹೈಸ್ಕೂಲಿನ ಮುಖ್ಯ ಉಪಾಧ್ಯಾಯರಾಗಿದ್ದಾಗ ಈ ಸ್ಕೌಟುದಳವು ಏರ್ಪಡಿಸಿತು. ಅದನ್ನು ಮಿ ಥಾಮ್ಸನ್ ಸಾಹೇಬರೂ, ಮಿ ಪಿ ಸಿ ಉತ್ತಯ್ಯನವರೂ, ಮಿ ಕೆ ಉತ್ತಯ್ಯನವರೂ ಪಾಲಿಸುತ್ತಿದ್ದರು. ಸುಮಾರು ಎರಡು ವರ್ಷಗಳ ಮೇಲೆ ಅದು ತನ್ನ ಜೀವನವನ್ನು ತಾಳಿತು. ಆಗ ಮಿ. ಬ್ರೇಯರ್ಲಿ ಸಾಹೇಬರವರು ಮುಖ್ಯ ಉಪಾಧ್ಯಾಯರಾಗಿ ಬಂದರು. ಇವರೂ ಮಿ. ಪಿ ಎ ಪೂವಯ್ಯನವರೂ ಅದನ್ನು ಪಾಲಿಸತೊಡಗಿದರು. ಇದು ತನ್ನ ನಾಲ್ಕನೆಯ ವರ್ಷದಲ್ಲಿ ಸ್ವಲ್ಪ ಬಲಕುಂದುತ್ತಾ ಬಂದಿತು. ಕಡೆಗೆ ಐದನೇ ವರ್ಷದಲ್ಲಿ ಮಿ. ಬ್ರೇಯರ್ಲಿ ಸಾಹೇಬರವರು ವರ್ಗವಾಗಿ ಹೋದಾಗ ಈ ದಳವು ಮುದಿಯಾಯಿತು.

ಮಿ. ಪಿ. ಮಂಗೇಶರಾಯರು ಮುಖ್ಯ ಉಪಾಧ್ಯಾಯರಾಗಿ ಬಂದರು. ಇವರು ಬಂದು ಸ್ವಲ್ಪ ದಿವಸಗಳಲ್ಲೇ ಈ ದಳವು ಸತ್ತುಹೋಗಿ ಅದರ ಹೆಸರೇ ಅಡಗಿಹೋಯಿತು. ದೇಶದಲ್ಲೆಲ್ಲಾ ವ್ಯಸನವು ಹಬ್ಬಿಹೋಯಿತು. ಅದರಿಂದ ಸಹಾಯ ಹೊಂದಿದ್ದ ಅನೇಕ ಜನರು ಗೋಳಿಡ ತೊಡಗಿದರು. ನಾನೂ ಅತ್ತೆನು. ಕೆಲವರು ಆ ದಳವನ್ನು ಜೀವಪಡಿಸುವಂತೆ, ಇಲ್ಲವೇ ಬೇರೆ ಹೊಸದಳವನ್ನೇ ಏರ್ಪಡಿಸುವಂತೆ ಧೈರ್ಯದಿಂದ ಮಿ. ಪಿ. ಮಂಗೇಶರಾಯರನ್ನು ಕೇಳಿಕೊಂಡರು. ಆದರೂ ಮಿ ಮಂಗೇಶರಾಯರು ಅವರ ಕೋರಿಕೆಗಳನ್ನು ನೆರವೇರಿಸಲಿಲ್ಲ.

ಈಗ ಮಿ. ಮಂಗೇಶರಾಯರು ಹೋಗಿ ಹೊಸ ಮುಖ್ಯ ಉಪಾಧ್ಯಾಯರು ಬಂದಿರುವರಂತೆ. ಅವರು ಈ ವಿಷಯದಲ್ಲಿ ಸ್ವಲ್ಪ ತೊಂದರೆಯನ್ನು ತೆಗೆದುಕೊಂಡು ಆ ದಳವನ್ನು ಮುಂದಕ್ಕೆ ತರಬೇಕಾಗಿ ಬೇಡಿಕೊಳ್ಳುತ್ತೇನೆ.

ಸ್ಕೌಟಾಗಿದ್ದ ಹಳೆಯ ವಿದ್ಯಾರ್ಥಿ

ಲೋಕಲ್ ಫಂಡ್ ಸ್ಕೂಲುಗಳ ಪಂಚಾಯಿತದಾರರ.

ಆಯಾ,

ಪ್ರತಿ ಲೋಕಲ್‌ಫಂಡ್ ಸ್ಕೂಲಿಗೂ ಪಂಚಾಯಿತರನ್ನು ನೇಮಿಸುವ ಸಂಗತಿ ವಾಚಕರಿಗೆ ತಿಳಿದಿದೆಯಷ್ಟೆ. ಆದರೆ ಅವರ ಪ್ರಯತ್ನ ಮತ್ತು ಶ್ರದ್ಧೆ [illegible] ಹಕ್ಕು ಮಾಡಿ ನಡೆದು ಕೊಟ್ಟಿರುವಂತೆ ಕಾಣುತ್ತದೆ. ಈ ಪೈಕಿ ಒಬ್ಬರೆ ಒಬ್ಬರು ಸರಿಯಾಗಿ ಸ್ಕೂಲ್ ಅಭಿವೃದ್ಧಿ ಬಗ್ಗೆ ಮುತುವರ್ಜಿ ಇಟ್ಟು ನೋಡುತ್ತಾ ಇದ್ದರೆ, ಉಳಿದ ಬಾಕಿ ಇರುವ ವೃದ್ಧರಾದ ಮೆಂಬರುಗಳು ಯಾವ ತರದ ಉಪಕಾರಕ್ಕೂ ಬಾರದವರಾಗಿ ಇರುವ ಕಾರಣದಿಂದ ಆ ತನಿಖೆ ಇನಿಯಾದ್ಯಾವ ಮೆಂಬರಿಗೂ ಸಹ ಕೆಲಸಕ್ಕೆ ಬಾರದ್ದಿರುವದಿಲ್ಲ. ಸ್ಕೂಲುಗಳನ್ನು ನೋಡಿದರೆ ಪಂಚಾಯಿತರು ಅಪಕ್ಷಪಾತರಾದ ಕೆಲಸ ತುಂಬಾ ಇದೆಯೆಂತ ತಿಳಿಯುತ್ತದೆ. ಆದ್ದರಿಂದ ಅಧಿಕಾರಿಗಳು ಈ ಸಂಗತಿಯನ್ನು ಮನಸ್ಸಿಗೆ ತಂದು, ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರು ಚುನಾವಣೆಯಂತೆಯೇ 3 ಯಾ 5 ವರ್ಷಕ್ಕೊಂದಾವರ್ತಿಯಾದರೂ ಆಯಾಯ ಸ್ಕೂಲುಗಳ ಅಭಿವೃದ್ಧಿ ಬಗ್ಗೆ ಆಯಾಯ ಗ್ರಾಮಸ್ಥರು ಮೆಂಬರುಗಳನ್ನು ಆರಿಸಿಕೊಳ್ಳುವ ಪದ್ಧತಿಯನ್ನು ಏರ್ಪಡಿಸಬೇಕಾಗಿ ಅಪೇಕ್ಷಿಸುತ್ತೇನೆ.

ಎ ಕಾರ್ಯಪ್ಪ

ಎಡನಾಡು ಮಲೆ ಮಹಾದೇವರ ಹಬ್ಬ ಒಂದು ಸಂಪಕ್ತೆ

ಆಯ್ಯಾ,

ತಾ. 1—10—1926 ರ "ಕೊಡಗು" ಪತ್ರಿಕೆಯ 6 ನೇ ಪುಟದಲ್ಲಿ ಪತ್ರಿಕಾ ಮತಾಂತರ ತಿಳಿಸಬೇಕಾಗಿ ಕೇಳಿಕೊಂಡದ್ದಕ್ಕೆ ಹಿರಿಯರಿಂದ ನನಗೆ ತಿಳಿದ ಸಂಗತಿಯನ್ನು ಇಲ್ಲಿ ವಿವರಿಸಿದ್ದೇನೆ.

1 ಎಡನಾಡು, 2 ಬೇಟೋಳಿನಾಡು, 3 ನೆರವನಾಡು, 4 ಭೈರವನಾಡು, 5 ಅಜ್ಜಿನಾಡು, 6 ಪೊಂದರ್ಕನಾಡು, ಸಹ ಒಂದಾಗಿ 1872ನೇ ಇಸವಿ ವರಗೂ ನ್ಯಾಯಬಾಣೆಪಾಡು ಕೋಲು, ಮಲೆಮಹದೇವರ ಹಬ್ಬ ಸಹ ನಡಿಸುತ್ತಲೂ, ಬೇಪರ ತಡಂಬು ಕೊಂದುಗೇರಿಗೆ ಒಂದು ಕಾವೇರಿ ಹೂಳೆಯಲ್ಲಿ ಸ್ನಾನ ಮಾಡುತ್ತಲೂ ನಡದು ಬರುತ್ತಾ ಇತ್ತು.

ಬೈರವನಾಡಿನಲ್ಲಿ ಬೊಳ್ಳಿರ ಪುನತನವರು ಸ್ವಲ್ಪ ಮುಂಪರಿಯಲು ತಾನು ದೇಶತಕ್ಕನಾಗಿಯೂ ನ್ಯಾಯಬಾಣೆಯಲ್ಲಿ ತಕ್ಕ ಮರ್ಯಾದಿ ಸಿಕ್ಕಲಿಲ್ಲವಾಗಿ ಸಹ ಠಕ್ಕಮಯವಾದ ಜಗಳವಾದ ಕಾರಣದಿಂದ ಅಜ್ಜಿನಾಡು, ಭೈರವನಾಡು, ಪೊಂದರ್ಕನಾಡು, ಸಹ ಒಂದಾಗಿ ತೋರಣ ಕಾಡಿದ ಒಳಿ ಬಂದು ಕೋಲುಬಾಣೆ ಮಾಡಿದರು. ಅಲ್ಲಿಯೂ ಜಗಳದಿಂದ ಕೊಂಡಂಗೇರಿಯಲ್ಲಿ ಮಾಡಿ, ಅಲ್ಲಿಯೂ ಆಗದ ಬೋಳ್ಳರ ಹಟ್ಟಿಯಲ್ಲಿ ಪಂಪಾಡಿ ಅಜ್ಜಪ್ಪ ದೇವರ ಸ್ಥಾನ ಸಹ ಬೊಳ್ಳರ ಮನೆ ಬಾಗಿಲು ಮುಂದೆ ಕಟ್ಟಿದ್ದಾಗಿದೆ. ಅಲ್ಲಿ ಈಗಲೂ ಕೋಲು ನಡಿಯುತ್ತಾ ಇದೆ. ನ್ಯಾಯಬಾಣೆ ಕೋಲುಬಾಣೆಗಾಗಿ ಅದಕಾಲದಿಂದ ಮಲೆ ಮಹಾದೇವರ ಹಬ್ಬಕ್ಕೆ ಸಹ ಸೇರದೆ, ಕದರಿ ನಾಡವರಲ್ಲಿ ಸಂಬಂಧವಿಲ್ಲವಾಗಿಯೂ ಮ ರಾ ರಾ ರಾ ಬಾ ಮುಕ್ಕಾಟ್ಟಿರ ಐಯ್ಯಣ್ಣನವರು ಹೇಳಿದ ಹಳೇ ನ್ಯಾಯ ಇನ್ನು ಇದ, ಅಲ್ಲದೆ ನಾನೂ ಬರೆದು ಇಟ್ಟಿದ್ದೇನೆ. ಪೇಪರಿನಲ್ಲಿ ಸ್ಥಳ ಸಿಕ್ಕಲಿಕ್ಕಿಲ್ಲವೆಂಬುದಕ್ಕೆ ಬಾಕಿ ಮಾಡಿದ್ದೇನೆ.

ಆ ಸಂವತ್ಸರಗಳಲ್ಲಿ ನಿಷ್ಪಾಪದಿಂದ ಒಗ್ಗಟ್ಟು ಒಡೆದು ಚೆಲ್ಲಾಪಿಲ್ಲಿಯಾಯಿತು. ಪೂರ್ವದಲ್ಲಿ ಒಗ್ಗಟ್ಟು ಒಡೆಯುತ್ತಿರಲಿಲ್ಲವಂತೆ! ಇನ್ನಾದರೂ ಮಲೆದೇವರು ಒಳ್ಳೆ ಮನಸ್ಸು ಕೊಟ್ಟು ನಿರಾಬಾಧವಾಗಿ ಸದರಿ 6 ನಾಡವರು ಒಂದಾಗಿ ಹಬ್ಬಮಾಡಲಿಕ್ಕೆ ಮನಸ್ಸು ಬರಲೆಂದು ಸರ್ವರಿಗೂ ನನ್ನ ನಮಸ್ಕಾರ.

ಕೊಳುವಂಡ ಐಯ್ಯಪ್ಪ.

ಯಾರಿಗೆ ಓಟು ಕೊಡಬೇಕು?

ಮಹನೀಯರೇ,

ಈಗಾಗಲೇ ಕೌನ್ಸಿಲು ಮತ್ತು ಡಿಸ್ಟ್ರಿಕ್ಟ್ ಬೋರ್ಡಿಗೆ ನಿಲ್ಲುವ ಉಮೇದುವಾರರುಗಳ ಹಸ್ತಪತ್ರಿಕೆಗಳು ಪ್ರಕಟವಾಗಿವೆ. ಆದರೆ ಯಾರಿಗೆ ಓಟು ಕೊಡಬೇಕೆಂದು ನನ್ನ ಮನಸ್ಸಿನಲ್ಲಿರುವ ಅಭಿಪ್ರಾಯಗಳನ್ನು ನಿಮ್ಮ ಮುಂದಿಟ್ಟಿರುವೆನು. ದಯವಿಟ್ಟು ಅದನ್ನು ಪರಿಶೀಲಿಸಿ ನೋಡಬೇಕೆಂದು ನನ್ನ ವಿಜ್ಞಾಪನೆ.

ನಿಮ್ಮ ಓಟುಗಳನ್ನು

೧. ಸದಾ ಖಾದಿಯನ್ನೇ ಧರಿಸುವವರಿಗೆ ಕೊಡಿರಿ, ಇವರೇ ಬಡವರ ಮಿತ್ರರು.

೨. ಮದ್ಯವೆಂಬ ರಾಕ್ಷಸಿಯನ್ನು ಹೊಡೆದೋಡಿಸುವವರಿಗೆ ಕೊಡಿರಿ.

೩. ದೇಶಾಭಿಮಾನದಿಂದ ತುಂಬಿ ತುಳುಕುತ್ತಿದ್ದು ಬ್ರಾತೃ ವಾತ್ಸಲ್ಯವೆಂಬ ಕಾರ್ಮೋಡಗಳ ಮೇಲಿನಿಂದ ಶುಭ್ರವಾಗಿ ಸೂರ್ಯನಂತಿರುವ ಸ್ವರಾಜ್ಯವನ್ನು ಒಂದೇ ದೃಷ್ಟಿಯಿಂದ ನೋಡುವವರಿಗೆ ಕೊಡಿರಿ.

೪ ಮತ್ತು ಭಾಷಾಭಿಮಾನಿಗಳಿಗೂ ನಿಮ್ಮ ಮತಗಳ ಕೊಡಿರಿ.

ಖಾದಿಯನ್ನು ಧರಿಸದ ಮುಂದಾಳುಗಳೆನಿಸಿಕೊಳ್ಳುವವರಿಗೆ ನಮ್ಮ ಮತಗಳನ್ನು ಕೊಡುವುದರಿಂದ ಬಡವನ ಬಾಯ ತುತ್ತು ಅನ್ನವನ್ನು ಕಸಿದಂತೆ ಹೊಟ್ಟೆಯಂತೆಯಾಗಿ, ಮಹಾಪಾಪಕ್ಕೆ ಗುರಿಯಾಗಬೇಕಾದೀತು. ಮತದಾರರೇ, ಖಾದಿಯನ್ನು ಧರಿಸುವವರಿಗೆ ನಿಮ್ಮ ಓಟುಗಳನ್ನು ಕೊಟ್ಟು ಹಸಿವಿನಿಂದ ಬಳಲಿ ಬಾಯಾರಿದ ಬಡವನಿಗೊಂದು ತುತ್ತು ಅನ್ನವ ಪುಣ್ಯವನ್ನು ಸಂಪಾದಿಸಿರಿ! ದೇಶ ಸೇವೆ ಮಾಡಿರಿ!! ದರಿದ್ರನಾರಾಯಣನ ಆಶೀರ್ವಾದಗಳನ್ನು ಪಡೆಯಿರಿ!!!

ಪಿ ಸುಬ್ಬಯ್ಯ

ನಾಪೋಕ್ಲು ಭಾಗದ ಒಂದು ರಸ್ತೆ.

ಅಯ್ಯಾ,

ನಾಲ್ಕುನಾಡಿನವರ ದುರ್ಭಾಗ್ಯವೇ! ಸರಕಾರದವರು ಕಣ್ಣೆತ್ತಿ ಈ ಕಡೆ ನೋಡಲಾರರೇ? [illegible] ರೈತರು ಏನು ಮಾಡಿದರು? ಬಹು ಪುರಾತನ ಕಾಲದಿಂದಲೂ ಇದ್ದು [illegible] ಗ್ರಾಮಗಳಿಗಾಗಿ ಹಾದು ಹೋಗುವ ಈ ರಸ್ತೆಯು ಈಗಲೂ ಹೀನಸ್ಥಿತಿಯಲ್ಲಿ ಇದೆಯಲ್ಲವೇ? ಎಷ್ಟೋ ಮಂದಿ ಕಾವೇರಿಗೆ ಹೋಗುವ ಯಾತ್ರಿಕರ ಪತ್ರದ ದಾರಿಯನ್ನು ಈ ರಸ್ತೆಯಲ್ಲಿ ಇಟ್ಟಿದ್ದಾರೆ ಎಂದರೆ ಎಲ್ಲರೂ ವ್ಯಸನಪಡುವ ಸಂಗತಿಯಾಗಿದೆ. ಕಾಡುಪ್ರದೇಶವೆಂದೆಣಿಸುವ ನಾಲ್ಕುನಾಡಿನ 7–8 ಗ್ರಾಮಗಳನ್ನು ಕಗ್ಗತ್ತಲೆಯಲ್ಲಿ ಹೊಣೆಗಾರರನ್ನಾಗಿ ತಪ್ಪಾಗಲಾರರು. ಕೊಡಗಿನ ಇತರ ಕಡೆಗಳಲ್ಲಿರುವ ಲೋಕಲ್‌ಫಂಡ್ ರಸ್ತೆಗಳು ಇದರಷ್ಟು ಹೀನಸ್ಥಿತಿಯಲ್ಲಿರಲಾರವೆಂದು ಭಾವಿಸುತ್ತೇನೆ. ಕಾಡು ಕವಿದುಕೊಂಡು ರಸ್ತೆಯಲ್ಲಿ ಕಲ್ಲುಮುಳ್ಳುಗಳು ತುಂಬಿ ಸೀದಾ ಎರಡಿಯಿಂದ ರಸ್ತೆಯ ಪಕ್ಕೆ ಹಾದು ಹಳ್ಳ ಗುಂಡಿಯನ್ನಾಗಿ ಮಾಡಿ ಇರಕ್ಕೆ ಅಡ್ಡವಾಗಿ ಹರಿಯುವ ಯಾವ ಹೊಳೆಗೂ ಸೇತುವೆ ಇಲ್ಲದ ಗಾಡಿ [illegible] ಯಲಿಕ್ಕೆ ಆಸ್ಪದವಿಲ್ಲದೆ ಇದೆಯಲ್ಲಾ!

ಈ ರಸ್ತೆಯ 1ನೇ ಪ್ರಯೋಜನ ಕಾವೇರಿಗೆ ಹೋಗುವ ಯಾತ್ರಿಕರಿಗೆ ಈ ಮೇಲೆ ಗ್ರಾಮದ ಬಡ ರೈತರಿಗೂ ಕಾವೇರಿ ಸಂಕ್ರಮಣ ಕಳೆಯಿತು. ರಸ್ತೆಗೆ ಇನ್ನೂ ಪ್ರಾರಂಭಿಸಿಲ್ಲ [illegible] ಬರತಕ್ಕದಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೇ, ಇದನ್ನು ಡಿ ಬೋರ್ಡಿನಿಂದ ತಪ್ಪಿಸಿ ಇಂಪೀರಿಯಲ್ ರಸ್ತೆಯನ್ನಾಗಿ ಮಾಡಿಸುವಿರಾ ಇಲ್ಲವೇ ಇದಕ್ಕಿಂತ ಚೆನ್ನಾಗಿ ಗಾಡಿ ಪ್ರಯಾಣಕ್ಕೆ ಉದ್ದಕ್ಕೆ ಎಡೆಕೊಡುವಂತೆ ಮಾಡಿಸುವಿರಾ? ಹಾಗೆ ಮಾಡಿದರೆ ಎಷ್ಟೋ ಮಂದಿ ಯಾತ್ರಿಕರಿಗೂ ಗ್ರಾಮದವರಿಗೂ ಸಹಾಯ ಮಾಡಿದಂತಾಗುವದು.

ಈ ರಸ್ತೆಯ ಹೀನಸ್ಥಿತಿಯಿಂದ ಬಡವರಾದ ನಮಗೆ ಉಂಟಾಗುವ ತೊಂದರೆಯನ್ನು ಕೇಳಬಾರದು. ನಾವು ಕಷ್ಟಪಟ್ಟು ಬೆಳೆಸುವ ಅಲ್ಪಸ್ವಲ್ಪ ಭತ್ತ, ಕಾಫಿ, ಯಾಲಕ್ಕಿ, ಕಿತ್ತಳೆ, ಬಾಳೆ ಮೊದಲಾದವುಗಳಿಗೆ ಧಾರಣೆ ಸಿಕ್ಕದಿರುವದು. ಗಾಡಿ [illegible] ಗಾಡಿದ್ದರಿಂದ ವ್ಯಾಪಾರಿಗಳು ಈ ಕಡೆ ಸುಳಿಯುವದೇ [illegible] ನಾವೇ ತಲೆಹೊರೆಯಲ್ಲಿ ಇವರ ಕಾಲು ಬುಡಕ್ಕೆ ತೆಗೆದುಕೊಂಡು ಹೋಗಬೇಕು. ಹಾಗೆ ಹೋದರೆ ನಮ್ಮ ಸರಕಿಗೆ ಒಳ್ಳೇ ಧಾರಣೆಯೇ ಸಿಕ್ಕುವದಿಲ್ಲ. ಆ ಅಲ್ಪಸ್ವಲ್ಪ ಧಾರಣೆಯೂ ತಲೆಹೊರೆ ಇತರ ಖರ್ಚು ಹೋಗಲಾಗಿ ಬಾಕಿ [illegible] ಇರುವದಿಲ್ಲ. ಬಳೆ ಒಂದೆಂದರೆ ಇಲ್ಲಿ ಭತ್ತಕ್ಕೆ ಧಾರಣೆಯೇ ಇಲ್ಲ. ಬಡವರಾದ ನಾವು ಕಂದಾಯ ಕಟ್ಟಲಿಕ್ಕೆ ಬಗೆ ಅಕ್ಕಿಮೂಟೆ ತಲೆಹೊರೆಯಲ್ಲಿ 20—25 ಮೈಲು ದೂರವಿರುವ ಪೇಟೆಗಳಿಗೆ ಹೊತ್ತುಕೊಂಡು ಹೋಗಿ ವಿಕ್ರಯಿಸಿ ಹಣ ಮಾಡಿ ಕಂದಾಯ ಕಟ್ಟಬೇಕು. ಬರಗಾಲ ಅಂದರೆ ಈ ಸಮಯ ಒಂದೆಂದರೆ ಇಲ್ಲಿ ಎಲ್ಲಿಯೂ ಭತ್ತ ಸಿಕ್ಕುವದೇ ಇಲ್ಲ. ಹೀಗಾಗಿಯೇ ಕಳೆದ ವರ್ಷ ಈ ಕಡೆ ಭತ್ತಕ್ಕೆ ಬಟ್ಟಿ 10 ರೂ. ಕ್ರಯವಾಗಿತ್ತು. ಬಡವರ ಗೋಳು! ಕಡೆಗೆ 10ರೂ. ಕೊಡುತ್ತೇನೆಂದರೂ ಭತ್ತವು ಇರಲಿಲ್ಲ. ದಯಾಳುವಾದ ಸರಕಾರವೇ ಈ ರಸ್ತೆಯನ್ನು ದುರಸ್ತು ಮಾಡಿದ್ದೇ ಆದರೆ ಖಂಡಿತವಾಗಿಯೂ ನಿಮ್ಮ ಉತ್ಪತ್ತಿ ಹೆಚ್ಚುವದು. ಇಲ್ಲಿಯ ಜನರು ಬೇರೆ ಕಡೆ ಕೆಲಸಕ್ಕೆ ಹೋಗುವುದಕ್ಕಿಂತ ತಮ್ಮ ತಮ್ಮ ಭಾಗದಲ್ಲೇ ಹೆಚ್ಚಾಗಿ ಕಾಫಿ, ಯಾಲಕ್ಕಿ, ಕಿತ್ತಳೆ, ಬಾಳೆ ಮೊದಲಾದ ಕಲೆ ಫಸಲನ್ನು ಬೆಳೆಸಿಕೊಳ್ಳುವರು. ಆಗ ವ್ಯಾಪಾರಿಗಳು ಬಂದು ಹೆಚ್ಚು ಧಾರಣೆ ಕೊಟ್ಟು ನಮ್ಮನ್ನೆಲ್ಲಾ ಪ್ರೋತ್ಸಾಹಿಸುವರು. ಸರಕಾರದ ಕಂದಾಯವೂ ಹೆಚ್ಚುವದು. ಈ ನಾಡಿನಲ್ಲಿ ಎಲ್ಲಿಯೇ ಆಗಲಿ, ಬೆಟ್ಟ ಪ್ರದೇಶವೇ ಆಗಲಿ, ತಗ್ಗು ಪ್ರದೇಶವೇ ಆಗಲಿ ಕಾಫಿ ಮತ್ತು ಯಾಲಕ್ಕಿ ಬೆಳೆಸಲಿಕ್ಕೆ ಲಾಯಕ್ಕಾದ ಕಾಡುಗಳು [illegible] ಇವೆ, ಕಿತ್ತಳೆಯು ಈಗ ಈ ಕಡೆಯೇ ಬೋರರೋಗ ಬಾಧೆ ಇಲ್ಲದಿರುವದು. ಸರಕಾರವೇ ಈ ರಸ್ತೆಯನ್ನು ಇಂಪೀರಿಯಲ್ ರಸ್ತೆಯನ್ನಾಗಿ ಮಾಡಿ ನಾವು ಕಾಫಿ, ಯಾಲಕ್ಕಿ, ಕಿತ್ತಳೆ, ಬಾಳೆ ವಗೈರೆ ಬೆಳೆಸಲು ಪ್ರೋತ್ಸಾಹ ಕೊಟ್ಟು ಕ್ಷಾಮದ ಭಾದೆಯಿಂದ ನಮ್ಮನ್ನು ಕಾಪಾಡು. ಇನ್ನು ಬರತಕ್ಕ ಡಿ ಬೋರ್ಡ್ ಮೆಂಬರರೇ, ಗರೀಬರಾದ ನಮ್ಮ ಈ ಹವಾಲನ್ನು ಮರೆಯಬೇಡಿ.

23—10—26. ಬಿ. ಪಿ. ಪೊನ್ನಯ್ಯ

ಬಲ್ಲಮಾವಟಿ.

ನೋಟೀಸ್.

...ದಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ. ಕೊಡಗು ಕಮೀಶನರ್ ಸಾಹೇಬರವರು ಮಡಿಕೇರಿಯಲ್ಲಿ ...ವಾಗ ಅರಮನೆಯಲ್ಲಿ ಪ್ರತಿ ನಿತ್ಯವೂ ಮಧ್ಯಾಹ್ನ 12 ಗಂ ...ರವಿಕೆಯಾಗಿ ಅವರಿಗೆ ಅರ್ಜಿದಾರರು ಖುದ್ದಾಗಿ ಅರ್ಜಿ ಕೊಡಬಹುದು. ಅರಮನೆಯ ಬಾಗಿಲಿನಲ್ಲಿ ಇಟ್ಟ ಅರ್ಜಿ ಪೆಟ್ಟಿಗೆಯಿಂದ ಅರ್ಜಿಗಳು ಪ್ರತಿದಿನವೂ ತೆಗೆಯು...ತ್ತವೆ

ಟಿ. ಜೆ. ಟಾಸ್ಕರ್,
ಕಮೀಶನರ್.

786

...ಸನಾದ ಮಾಲು. ತೋರಿಸಿದರೆ ತಲಸಿರಿ.

ಬೆಳ್ಳೂರು ಉಂಡೆನಶ್ಯ.

...ನಾವು ಕಳೆದ 30 ವರ್ಷಗಳಿಂದಲೂ ಹಸನಾದ ನಶ್ಯ ತಯಾರುಮಾಡಿಸಿ ಮೈಸೂರು ಸೀಮೆಯಲ್ಲದೆ ಇತರ ದೇಶಗಳಿಗೂ ವಿ. ಪಿ. ಮೂಲಕ ಕಳುಹಿಸಿ ಅನೇಕ ಸರ್ಟಿಫಿಕೇಟುಗಳನ್ನು ಪಡೆದಿರುತ್ತೇವೆ. ನಮ್ಮ ನಶ್ಯವು ಮೂಗಿನ ಸಮಸ್ತ ವ್ಯಾಧಿಗಳನ್ನು ಗುಣಪಡಿಸುವದಲ್ಲದೆ ಮೂರು ವರ್ಷವಿಟ್ಟರೂ ಕೆಡುವದಿಲ್ಲ. ... ನಮ್ಮ ನಶ್ಯವು ಈ ಸೋಡಬು ... 1ಕ್ಕೆ 1—4—0, 1—8—0 ರೂ. ನಂತೆ ಮಾರುತ್ತಿದ್ದೆವು. ಈಗ ... ... ಅಕ್ಟೋಬರು ಅಂತ್ಯದೊಳಗೆ ಬರತಕ್ಕ ಆರ್ಡರುಗಳಿಗೆ 1 ...ದ ವರೆಗೂ ಈ ಕೆಳಗೆ ಕಂಡ ದರದಂತೆ ಕಳುಹಿಸು... ವಾಯಿದೆ ಕಳೆದನಂತರ ಒಂದಕ್ಕೆ ... 0—4—0 ಹೆಚ್ಚಿಸಲ್ಪಡುವದು.

ದರ:	24 ತೊಲೆ	ಸೇರು	1ಕ್ಕೆ	0—12—0,
	,,	,,	3ಕ್ಕೆ	2— 1—0,
	,,	,,	6ಕ್ಕೆ	4— 0—0,
	,,	,,	9ಕ್ಕೆ	6— 0—0,
	,,	,,	12ಕ್ಕೆ	7— 8—0,
ಹಸನಾದ ಪುಡಿ	,,	,,	1ಕ್ಕೆ	0—10—0,
,,	,,	,,	5ಕ್ಕೆ	2— 0—0.

ಪೇಡಿ, ನಶ್ಯ ಡಬ್ಬಿಗೆ ಬೇಕಾದ ಹೊಗೆಸೊಪ್ಪು, ನಶ್ಯದ ಕಡ್ಡಿ, ಲೇಕು ಸಹ ನಮ್ಮಲ್ಲಿ ಸಿಕ್ಕುತ್ತೆ.

ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಸಮರ್ಥರಾದ ಏಜೆಂಟರುಗಳು ಬೇಕಾಗಿದೆ.

ಸ್ಯಾಂಪಲ್ ಅಪೇಕ್ಷಿಸುವವರು 4 ಅಣೆ ಸ್ಟಾಂಪು ಕಳುಹಿಸತಕ್ಕದ್ದು.

ಪಾಯಿಂ ಆರ್ಡರ್ ಕೊಟ್ಟು ನಮ್ಮ ರಿಜಿಸ್ಟರಿಗೆ ದಾಖಲಾದವರಿಗೆ ಕಾಲಕ್ಕೆ ಸರಿಯಾಗಿ ಆರ್ಡರ್ ನಿರೀಕ್ಷಿಸದೆ ಇಲ್ಲದೆ ಹಸನಾದ ಮಾಲು ಕಳುಹಿಸುತ್ತೇವೆ.

ಪತ್ರಿಸ ವಿವರಕ್ಕೆ ಮ್ಯಾನೇಜರವರಿಗೆ ಬರೆಯತಕ್ಕದ್ದು

ಮ್ಯಾನೇಜರ್ ಮಹಮ್ಮದ್ ಹನೀಫ್.

...ಮ್ಮ ವಿಳಾಸ — ಎಸ್. ಅಬ್ದುಲ್ ವಹಾಬ್ ಅಂಡ್ ಸನ್ಸ್,
ನಶ್ಯದ ವ್ಯಾಪಾರಿಗಳು,
52—10 ಬೆಳ್ಳೂರು ಪೋಸ್ಟ್,
ಮೈಸೂರು ಡಿಸ್ಟ್ರಿಕ್ಟ್.

Good Chance! Good Chance!!

Ammunition At cheaper rate

Gun Powder per lb.	1—14—0
Percussion caps per box of 250.	1—1—0
Eley Cartridges per 100.	12—0—0
Lead shots per lb.	0—8—0

Terms.—Rs 5/- should be sent in advance for each order. Orders from Coorgs should accompany the exemption certificate from the District Magistrate of Coorg.

Free.—6 Rubber air balloons will be given to any customer who transacts business with me for more than Rs. 20/ before 31st December, 1926.

Mofussil order Promptly attended to:
S. VENKATARANGAM CHETTY,
Ammunition & Sulphur Merchant,
No. 9, China Bazaar Road, Madras.
12—5

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal ·177 or ·22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B. S. 4. Patern No 1 Slugs and Darts. expressly recommendable for Target Practice Rs. 15/ Free delivery

Brilliant Search Light Lamp for Night Sports Rs. 30/— Free delivery.

No License required to purchase or to possess the above Items.

Reliable D B B L 12 bore guns	Rs. 60/— and upwards		
Do. S. B B L 12	do	do. 40/—	do
D B. M L Guns		,, 45/-	do.
S B. M L. do.		,, 30/—	do.
S B. B L Rifles		,, 25/—	do
B L Revolvers and Pistols		. 30/—	do.

Arms,Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition
Cheapest priced firm in India,

24. 14 210 Abdul Re[h]man Street, BOMBAY.

ಪೂರ್ಣ

ಸ್ವದೇಶಿಯ ಹಿತ್ತಾಳೆ ಕಂದೀಲು (ಲಾಂದರು).



ಇದೀ ಕಂದೀಲು (ಲಾಂದರು) ವನ್ನು ನಮ್ಮ ಸ್ವಂತ ಕಾರಖಾನೆಯಲ್ಲಿ ನಾವೇ ಸಿದ್ಧಪಡಿಸಿದ್ದು ಬೇಕಿನಲ್ಲಿಯೂ, ಬಾಳಿಕೆಯಲ್ಲಿಯೂ, ಯಾವ ಪರದೇಶೀಯ ಕಂದೀಲಿಗಿಂತ ಮೇಲಾಗಿರುವದೆಂದು ಒದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ನಾವಿನ್ನು ಪರದೇಶದ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಬಾರದು.

ತ್ವರೆ ಮಾಡಿ ಕೇಳಿಕೊಳ್ಳಿರಿ ನಿಮ್ಮೂರಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಿ:—

1. ಸಿ. ಎನ್. ನಾರಾಯಣರಾವ್ ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಚಿತ್ರದುರ್ಗ,
ಅಥವಾ
ಕಾರ್ಖಾನೆದಾರರು.—

'ಓಗಲೆ ಗ್ಲಾಸ ವರ್ಕ್ಸ' ಲಿಮಿಟೆಡ್, ಓಗಲೆವಾಡಿ ನಂ. (ಔಂಧ) ಜಿ. ಸಾತಾರಾ.

52—4.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳಿಗೆ

1927 ನೇ ಫೆಬ್ರುವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಆಗುವ

ಪಂಚಸಾಲು ಬೋನಸ್ ವೊಬಲಗು ಕೊಡಲಾಗುವುದು

ಪ್ರೊಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್:— 152, ಕನ್ನಿಂಗ್‌ಹ್ಯಾಮ್ ಸ್ಟ್ರೀಟ್.

ಮದರಾಸ ಬ್ರಾಂಚ್:— 9-10, ಸೆಕೆಂಡ್ ಲೈನ್ ಬೀಚ್.

ಸಿ. ಕೆ. ಚಂಗಪ್ಪ,
ಸ್ಪೆಷಲ್ ಏಜೆಂಟ್,
ರಿವರ್ ಸೈಡ್ ಎಸ್ಟೇಟ್,
ಸಿದ್ದಾಪುರ.

24—13

ತಯಾರಾಗಿವೆ.

ಸರಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ಯಾವ ಎರಡು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಒಪ್ಪಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರಜಿಸ್ಟ್ರೇಷನಿನ ನಾನಾ ತಯಾರಿಸಲ್ಪಟ್ಟ ನಾನಾ ಫಾರಮುಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಖಿದ್ಮತ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮ್ಯಾನೇಜರ್ "ಕೊಡಗು" ಮಡಿಕೇರಿ.

ಕನ್ನಡ **ಸ್ವಧರ್ಮ** ಮಾಸ ಪತ್ರಿಕೆ

ಸಂಪಾದಕರು.—ಡಾ ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸಮಾಜಧರ್ಮವೇ ನಿಶ್ಚಳವಾದ ಹಾದಿ. ಸಮಾಜಧರ್ಮದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂಥಹ ಸುವಿಚಾರಗಳನ್ನು ಸನಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ
"ಸ್ವಧರ್ಮ" ಕಾರ್ಯಾಲಯ,
ಹಾಳಮುಡ್ಡಿ, ಧಾರವಾಡ.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಪೇಟೆಂಟು)

ಇವುಗಳ ಮುಖ್ಯ ಗುಣವೇನೆಂದರೆ:—

(೧) ಬೆಲೆಯಲ್ಲಿ ಅಗ್ಗ.

(೨) ಕೂಡುವದಕ್ಕೆ ಆರಾಮ.

(೩) ಬಾಳಿಕೆಯಲ್ಲಿ ಗಟ್ಟಿ

(೪) ತಗಣೆಗಳು ಸೇರುವದಿಲ್ಲ

(೫) ಎತ್ತಾಡಲಿಕ್ಕೆ ಒಯುವಷ್ಟು ಹಗುರ.

ಇತ್ಯಾದಿ.

ನಿಮ್ಮಕ್ಕೆ ಬೇಕಾಗಿರುವಂಥ ಯಾವದೇ ಕುರ್ಚಿ ಯ ನಮೂನೆಗಳಿಂದಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ನಮ್ಮಕರ ಸೂಚೀಪತ್ರ ಒಸ್ಗೆ ಬರೆದು ತಿಳಿದು ಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—5 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮೆಯಾದ ಠೇವಣಾತಿ	—	1,08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಸಾಲ ಕೊಡಲಾಗುವದು.

ಒಂದು ವರ್ಷ ಬಾಯಿದೆ ಆಪ ಹೆಚ್ಚಿನ ಬಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ರೂ. 6—4—0ರ ದರದಲ್ಲಿ ಬಡ್ಡಿ ದೊರೆಯುತ್ತದೆ. ಕಡಿಮೆ ಬಾಯಿದೆಯ ಠೇವಣಾತಿಗಳಿಗೆ ಶೇಕಡ ನಾಲಿಯಾನ ೫ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು, ಕೊಡಂದೆರ ಕಾಳಪ್ಪನವರು, ರಾಯ್ ಬಹದ್ದೂರ್. ಟ್ರೆಜರರ್. ಯಂ. ಭುಜಂಗರಾಯರು ಬಿ.ಎ. ಬಿ.ಎಲ್.

ಸಕ್ರೆಟರಿ

ಸಿ. ಜಿ. ವೆಂಕಟಸ್ವಾಮಿಯ್ಯನವರು, ಬಿ.ಎ. ಬಿ.ಎಲ್.

ತಾರೀಕು. 1—7—1926.

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ಬೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ ೧೮ರೂ ಕಡಿಮೆ ಯಲ್ಲಿಬೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ, ಕರಾರಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಸರದೇಶೀಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಚೆಕ್ಕಗಳು, ಶಾಲು ವಸ್ತ್ರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ದಕ್ಷಿಣ ಕೊಡಗು. ಕೆ. ಪಿ. ಚಿಣ್ಣಪ್ಪ, ಪ್ರೊಪ್ರೈಟರ್, ಖಾದಿಭಂಡಾರ,

52—31.

ಇಂಗ್ಲಿಷ್ ಹೇರ್ ಡಿಸ್ಟ್ರಾಯರ್ ಸೋಪ್.

ಈ ಸೋಪು ವಿಲಾಯಿತಿಯಲ್ಲಿ ತಯಾರಾದದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ, ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯು ಇಲ್ಲದೆ ಕತ್ತಿಯಿಂದ ಬೋಳಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆಯುತ್ತದೆ.

ಕ್ರಯ 3 ಸಾಬೂನುಗಳ ಪೆಟ್ಟಿಗೆ 1ಕ್ಕೆ 1—4—0.

ವಿಳಾಸ:—ಮನೋಲಿಯಾ ಏಜನ್ಸಿ, ಪೋಸ್ಟ್ ಬಾಕ್ಸ್ ನಂ 232, ಮದರಾಸ್.

ಸ್ಪಿರಿಟ್‌ಸ್ಟೋವ್ ಎಂಬ ಅಡಿಗೆಮಾಡುವ ಒಲೆ.



ಇವುಗಳನ್ನು ಬ್ರಿಟಿಷ್‌ನವರು ಹಸನಾದ ಹಿತ್ತಾಳೆಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು ಬೆರಣಿ, ಸೌದೆ ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆ ತುಂಬಿ ಕಣ್ಣುಗಳು ಕೆಟ್ಟುಹೋಗುವವು ಆದರೆ ಇದರಿಂದ ಯಾವಕಷ್ಟವೂ ಇಲ್ಲ ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆಮಾಡಬಹುದು. ಕ್ರಯ 1ಕ್ಕೆ ರೂ. 3—0—0.

ವಿಳಾಸ:—ಸಿಟಿ ವಾಚ್ ಕಂಪೆನಿ, 16 ತಿರುಪಳ್ಳಿ ಬೀದಿ, ಮದರಾಸು.

ಅಮೇರಿಕನ್ ಎಲಕ್ಟ್ರಿಕ್ ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.



ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು ಇವನ್ನು ಉರಿಸಲಿಕ್ಕೆ ಬತ್ತಿ ಎಣ್ಣೆ ಯಾವುದೂ ಬೇಕಿಲ್ಲ. ಇದರ ಮಧ್ಯದಲ್ಲಿರುವ ಗುಂಡಿಯನ್ನು ಅದುಮಿದರೆ ತನ್ನಿಂತಾನೇ ಉರಿಯುವದು. ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ ಮುಂತಾದ ಪಟ್ಟಣಗಳಲ್ಲಿ ಇರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು. ಬೇಕಾದಾಗ ಉಪಯೋಗಿಸಿಟ್ಟುಕೊಳ್ಳಬಹುದು. ರಾತ್ರಿಯಲ್ಲಿ ಸಂಚರಿಸುವವರಿಗೂ ಮತ್ತು ಇತರರಿಗೂ ಬಹು ಪ್ರಯೋಜನವಾದದ್ದು.

ಕ್ರಯ ಬ್ಯಾಟರಿ ಸಹಿತ 1ಕ್ಕೆ ರೂ. 3—0—0

ವಿಳಾಸ:—ಬ್ರಟಿಷ್ ಟ್ರೇಡಿಂಗ್ ಕಂಪೆನಿ,

52—44 ಪೋಸ್ಟ್ ಬಾಕ್ಸ್ P. B. No. 1223, ಮದರಾಸ

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ್ ಸಸ್ಯಾಹಾರವು

15-16% ಅಂದರೆ ಸಿಹಿ ಪ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಜಾಸ್ತಿಯಾಗಿರುವದು. ಇದರಲ್ಲಿ ಇತ್ಯವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಗಿಡಗಳಿಗೆ ದೊರೆಯಲಾರದು ಅದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.

ಭತ್ತ, ಕಬ್ಬು, ತೆಂಗು, ಅಡಿಕೆ, ಮಾವು, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಚಾ, ರಬ್ಬರು, ಏಲಕ್ಕಿ ಮೊದಲಾದ ತೋಟ ಸೈರುಗಳಿಗೂ ಎಲುಬಿನ ಪುಡಿ ಅಥವಾ ಬೇರೆ ಗೊಬ್ಬರ ವಗೈರೆ ಇತರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು. ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ.

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ. ಎಕರೆ ಒಂದಕ್ಕೆ 100-200 ರಾತ್ತಲ್ ಸಾಕಾಗವದು. ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ" ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು.

52—22

CHILEAN NITRATE COMMITTEE,
Post Box 469, CALCUTTA.

ನಿರ್ವಾಣ

ಚಳಿಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಝ ಆಮಶಂಕೆ ಜ್ವರ, ಮೊದಲಾದವುಗಳ ಮೇಲೆ ಅಸ್ಪೃತಿನವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦

ಟಪ್ಪಾಲು ಖರ್ಚು ಬೇರೆ

ಇಂದ್ರೋ ಬಾಮ್.

ಸಂಧಿವಾತ, ತಲೆಶೂಲೆ, ಸೊಂಟನೋವು, ಉಳುಕು, ಚೇಳುಕಡಿತ ಮೊದಲಾದವುಗಳ ಮೇಲೆ ಹಚ್ಚತಕ್ಕ ದಿವ್ಯವಾದ ಔಷಧ! ಬೆಲೆ: ೧೦ ಆಣೆ. ಟಪ್ಪಾಲುವೆಚ್ಚ ಬೇರೆ.

12—9 ಕರ್ನಾಟಕ ಬ್ರದರ್ಸ್, ಗಿರಗಾಂವ್, ಮುಂಬಾಯಿ.

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಅನುಭವಪೂರ್ಣ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡು ಕೊಳ್ಳಬಹುದು

ತಾ. 24—10—'26 ಮೇನೇಜರ್,

ಮಡಿಕೇರಿ, "ಕೊಡಗು" ಆಫೀಸು.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಚ. ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿಕೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮ. ಪಚ್ಚೆರ ಅಪ್ಪಯ್ಯನವರು.

ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮ. ಪ ತಿಯಂಡ ದೇವಯ್ಯನವರು.

ನಾಪೋಕ್ಲು—ಮ. ಅರೆಯಡ ಸುಬ್ಬಯ್ಯನವರು.

ಮ. ಪೊನ್ನಂಡ ಮುದ್ದಪ್ಪನವರು.

ಗೋಣಿಕೊಪ್ಪಲು—ಮ. ಜಮ್ಮಡ ಮಾದಪ್ಪನವರು.

ಹುದಿಕೇರಿ—ಮ. ಚ. ಮಾದಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮ. ಏನಂಡ ಮಾದಪ್ಪನವರು.

" ಮತ್ತು ವೀರಾಜಪೇಟೆ—ಮ. ಕಲಿಯಂಡ ಸೋಮಯ್ಯನವರು.

ಮಡಿಕೇರಿ-ಸುಂಟಿಕೊಪ್ಪನಾಡು—ಮ. ಬಲ್ಲರಂಡ ಅಪ್ಪಯ್ಯನವರು.

ಪೊನ್ನಂಪೇಟೆನಾಡು—ಮ. ಪಿ. ಜಿ ಮುದ್ದಯ್ಯನವರು.

ಶ್ರೀಮಂಗಲನಾಡು—ಮ. ಇಟ್ಟೀರ ಚಂಗಪ್ಪನವರು.

ಅಲ್ಲದೆ ಈ ಸಮ್ಬಂಧ ಮ. ಚಂಗುಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲಿ ಸಂದರ್ಭಾನುಸಾರ ತಿರುಗುತ್ತಿರುವಾಗ ಅವರಿಗೂ ಸಹ ಮೊಬಲಗು ಕೊಡಬೇಕಾಗಿ ಕೋರಿಕೆ.

'ಕೊಡಗು' ಲಿಮಿಟೆಡ್. ಮೇನೇಜರ್.

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to,
"KODAGU" OFFICE MERCARA.

ಕೊಡಗು.

ವಾರ್ಷಿಕ ಚಂದಾ ರೂ. ೩—೮—೦

ಸತ್ಯೇನ ಧಾರ್ಯತೇ ವಿದ್ಯಾ ಶೀಲ ಪ್ರಯತ್ನತಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಃ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸ್ ೧೯೨೬ನೇ ಇಸವಿ ನವಂಬರ್ ತಾರೀಕು ೫ನೇ ಶುಕ್ರವಾರ [ಸಂಚಿಕೆ ೨೨

SPENCE & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties		4 lbs- Rs 30/ 4 1/2 lbs- Rs. 33/ 5 lbs- Rs 36/-Doz.
Digging forks 4 prongs	.. ..	Rs. 48/ Doz
Mamooty forks 4 prongs	.. ..	Rs. 39/ Doz
Felling axes —	Each	Rs. 3/ & 3/4/
Planting bars—	Each	,, 3/12/
Weeding forks —	Each	,, 1/12/
Garden trowels	.. .. ..	,, 1/12/

GET IT AT SPENCERS- The House for all requisites

52—42

ಸ್ಥಾಪಿತವಾದದ್ದು 1874 ಮೂಲಧನ 7 ಕೋಟಿ ರೂಪಾಯಿಗಳ

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು= ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು — ಲಾಭ— ರೂ. 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಹೆಚ್ಚು ಬೋನಸ್ ಒಪ್ಪೊವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ.

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½.

ನಿಷ್ಕೃಷ್ಟಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಒಳ್ಳೆಯ ಆದಾಯವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ 1,74 00,000
1924 ,, 2,37,00 000
1925 ,, 2 96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ಶೇಖರಿಸಲು ಇದೇ ಸುಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು.

ಎಸ್. ಆರ್. ಕೃಷ್ಣಸ್ವಾಮೈಯ್ಯರ್
ಬ್ರಾಂಚ್ ಸೆಕ್ರೆಟರಿ.

52—31

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಭಾರ ಕಣ್ಣುರಿ, ಶಿರಯಿಂದ ಶೀತ ಸೋರುವದು ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವದು, ನೆನಪು ಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಹಿಂಗಿಸಿ ಗುಣಮಾಡುತ್ತದೆ ಉದುರುವ ಕೂದಲನ್ನು ನಿಲ್ಲಿಸಿ ನಿಸ್ತೇಜವಾಗಿರುವ ಕೂದಲನ್ನು ಬೆಳೆಸಿ ಕೂದಲಿಗೆ ಸೌಂದರ್ಯವನ್ನೂ ಕಪ್ಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಚಿಕ್ಕ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರದಲ್ಲಿ ಧಾತು, ಹೋಯ್ಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು, ಮೂತ್ರದಲ್ಲಿ ಧಾತು, ಹೋಯ್ಯುವಾಗ ಉರಿಯುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದೆ ತುದಿ ಹೋಗುವದು, ಅಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಚಿಕ್ಕ—ಬಾಟ್ಲು 1, 3, 6ಕ್ಕೆ ರೂ 1—4—0, 3—8—0; 6—12—0.

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ದಬ್ಬಿ ೧ಕ್ಕೆ 6 ಆಣೆ, 3 ದಬ್ಬಿಗಳಿಗೆ ರೂ. 1, 1 ಡಜನಿಗೆ 3—8—0

ಕಟುಕಶಾಯ ಮಲೇರಿ ರಕ್ಷೆ.—ಇದು ಇಂಗ್ಲಿಷ್ ಮದ್ದು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯಾ ದಿನಬಿಟ್ಟು ಬರುವ ಜ್ವರ, ಚಳಿಜ್ವರ, ನಡುಗಿ ಬರುವ ಜ್ವರ, ನಾಲ್ಕು ಜ್ವರಗಳ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಬರುವ ಜ್ವರಕ್ಕೆ 3—4 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ನಾಲ್ಕು ಜ್ವರಗಳ
ಕೊಡುತ್ತದೆ ಸೀಸೆ 1ಕ್ಕೆ ರೂ. 1—8—0, 3ಕ್ಕೆ ರೂ. 4—0—0; 6ಕ್ಕೆ ರೂ 7—0—0,

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕಂಕನಾಡಿ.

ಮತ್ತು ಕೊಡಗು 10ಸ ಸೋಮವಾರ

52—46

Good Chance! Good Chance!!

Ammunition At cheaper rate

Gun Powder per lb	1—14—0
Percussion caps per box of 250.	1—1—0
Eley Cartridges per 100.	12—0—0
Lead shots per lb	0—8—0

Terms.—Rs. 5/- should be sent in advance for each order Orders from coorgs should accompany the exemption certificate from the District Magistrate of Coorg

Free—6 Rubber air balloons will be given to any customer who transacts business with me for more than Rs. 20/ before 31st December, 1926.

Moffussil order Promptly attended to:

S. VENKATARANGAM CHETTY,

Ammunition & Sulphur Merchant,

No. 9, China Bazaar Road, Madras.

12—6

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3

Telegraphic Address.—"SHOOTER" Bombay.

[52—10] Please write for Reduced nett prices list for 1926

"ಕೊಡಗು"

ಸಂ ೧೯೨೬ ನೇ ಇಸವಿ ನವಂಬರ್ ತಾ. ೫ನೇ ಶುಕ್ರವಾರ

ಕೌನ್ಸಿಲಿನ ಠರಾವುಗಳ ಗತಿ.

ಈ ವಾರದಲ್ಲಿ ನಡೆದ ಕೊಡಗು ಕೌನ್ಸಿಲು ಮೀಟಿಂಗಿನ ಪ್ರಥಮ ದಿನ ಸೆಕ್ರೆಟರಿಯವರು, ಕೌನ್ಸಿಲಿನಲ್ಲಿ ಕಳೆದ ವರ್ಷ ಪಾಸಾಗಿದ್ದ ಕೆಲವು ಠರಾವುಗಳ ಮೇಲೆ ಚೀಫ್ ಕಮಿಷನರು ಮಾಡಿದ್ದ ತೀರ್ಮಾನವನ್ನು ಕೌನ್ಸಿಲಿನ ಮುಂದಿಟ್ಟದ್ದು ಇನ್ನೊಂದು ಕಡೆ ವಿವರವಾಗಿ ಪ್ರಕಟಿಸಲ್ಪಟ್ಟಿದೆ. ಇದನ್ನು ನೋಡಿದ ಕೂಡಲೆ ಸರ್ಕಾರದವರ ವರ್ತನೆಯಿಂದ ಕೌನ್ಸಿಲಿನ ಬೆಲೆಯು ಬಹಳ ಮಟ್ಟಿಗೆ ಕಡಿಮೆಯಾಗುತ್ತಿದೆಯೆಂದು ಯಾರಿಗಾದರೂ ತೋರದೆ ಇರದು. ಕೌನ್ಸಿಲಿನಲ್ಲಿ ಬಹುಮತದಿಂದ ಪಾಸಾದ ಆರು ಠರಾವುಗಳಲ್ಲಿ ಒಂದನ್ನಾದರೂ ಚೀಫ್ ಕಮಿಷನರು ಸಂಪೂರ್ಣವಾಗಿ ಮಂಜೂರು ಮಾಡದೆ ಇರುವುದು ಎಷ್ಟು ಮಾತ್ರಕ್ಕೂ ನ್ಯಾಯ ಸಮ್ಮತವಲ್ಲ. ಸರ್ಕಾರದ ಇಂಥಾ ಅಲಕ್ಷ್ಯಭಾವದ ವರ್ತನೆಗೆ ಕಾರಣವೇನೆಂದೂ ಅದನ್ನು ಹೋಗಲಾಡಿಸುವ ದಾರಿ ಯಾವದೆಂದೂ ಯೋಚಿಸುವುದು ದೇಶದವರ ಕರ್ತವ್ಯವಾಗಿದೆ.

ಮೇಲೆ ಸೂಚಿಸಿದ ಠರಾವುಗಳ ಪೈಕಿ ಬಹು ಮುಖ್ಯವಾದುದು ಕಳೆದ ಸೆಟ್ಲ್‌ಮೆಂಟಿನಲ್ಲಿ ಜಮ್ಮಾ ಹಿಡುವಳಿಯ ಕಂದಾಯ ಬದಲಾವಣೆ ಮಾಡಿದನ್ನು ರದ್ದುಮಾಡಬೇಕೆಂಬುದೇ ಆಗಿದೆ. ಈ ಸೆಟ್ಲ್‌ಮೆಂಟ್ ಮಾಡುವ ಮುಂಚೆ ಜಮ್ಮಾದ ಕಂದಾಯವನ್ನು ಬದಲಾಯಿಸಕೂಡದೆಂದು ಈಗ ಹೇಳುವ ಕಾರಣಗಳೆಲ್ಲವೂ ಹಿಂದೆ ಪರ್ಯಾಲೋಚಿಸಲ್ಪಟ್ಟಿದ್ದುವು ಎಂದು ಚೀಫ್ ಕಮಿಷನರು ತೋರಿಸುವರು. ಕಾರಣಗಳೆಲ್ಲಾ ನ್ಯಾಯವಾದ ರೀತಿಯಲ್ಲಿ ಪರ್ಯಾಲೋಚಿಸಲ್ಪಟ್ಟಿದ್ದರೆ ಸೆಟ್ಲ್‌ಮೆಂಟಿನಲ್ಲಿ ಕಂದಾಯ ಬದಲಾವಣೆ ಮಾಡಲು ಅವಕಾಶ ಇರುತ್ತಿರಲಿಲ್ಲವೆಂದು ಹೇಳಬಹುದು. ಜಮ್ಮಾವು ಸಾಗಿನ ಅರ್ಧ ದರ ಕಂದಾಯವುಳ್ಳದೆಂದು ಸರ್ಕಾರದವರು ಹೊಸ ವಾದವನ್ನು ಹೂಡಿದ್ದು ಪೂರಾ ತಪ್ಪು ಮತ್ತು ರಾಗಾಯಿತಿಯಿಂದಲೂ ಅರ್ಧಕ್ಕಿಂತಲೂ ಕಡಿಮೆ ತೆರುತ್ತಿರುವರೆಂದು ಹೇಳುವರು. ಕೊಡಗು ಹಿಂದಿನ ಕಾಲದಲ್ಲಿ ಸಾಗಿನ ದರವು ಎಕರೆ ಒಂದಕ್ಕೆ ರೂ 10ರಿಂದ 12ರ ವರೆಗೆ ಪ್ರಚಲಿತವಾಗಿದ್ದರೂ ಜಮ್ಮಾದ ದರವು ಯಾವಾಗಲೂ ೧ ರೂಪಾಯಿ ಮಾತ್ರ ಆಗಿತ್ತು. ಹಾಗಿದ್ದು ಜಮ್ಮಾವು ಸಾಗಿನ ಅರ್ಧ ದರವೆಂದು ಸರ್ಕಾರದವರು ವಾದಿಸುವುದು ಎಂದಿಗೂ ಯೋಗ್ಯವಲ್ಲ. ಒಪ್ಪಂದದಲ್ಲಿ ಅಲ್ಲದ ಜಮ್ಮಾ ಕಂದಾಯವನ್ನು ಬದಲಾಯಿಸಕೂಡದೆಂಬುದು ಸಿಸ್ಟಮ್ ನಿರ್ಧಾರದಲ್ಲಿಯೇ ವ್ಯಕ್ತವಾಗುತ್ತದೆ. ಕಂದಾಯದ ಹೊರೆಯು ಎಲ್ಲರ ಮೇಲೆ ಒಂದೇ ದರದಲ್ಲಿ ಬೀಳಬೇಕಾದದ್ದು ನ್ಯಾಯವೆಂದೂ, ಜಮ್ಮಕ್ಕೆ ಸಿರಮು ಕಂದಾಯದ ರಿಯಾಯಿತಿ ಕೊಟ್ಟರೆ ಸಾಗಿನ ಮೇಲೆ ಹೊರೆಯು ಹೆಚ್ಚುವುದು ಹೆಚ್ಚೆಂದೂ ಸರ್ಕಾರದವರ ಅಭಿಪ್ರಾಯ. ಇದು ಜಮ್ಮದವರಿಗೂ ಸಾಗಿನವರಿಗೂ ಮನಸ್ತಾಪವನ್ನುಂಟುಮಾಡಬೇಕೆಂಬ ಸೂಚನೆಯೆಂದು ತೋರುತ್ತದೆ. ಜಮ್ಮದವರಿಗೆ ಸಿರಮು ಕಂದಾಯವಾದರೆ ಕಡಿಮೆ ತೆರಿಗೆಯೆಲ್ಲಾ ಸಾಗಿನವರ ಮೇಲೆ ಬೀಳಬೇಕೆಂದು ಯಾರೂ ಹೇಳುವುದಿಲ್ಲ. ಇಷ್ಟರ ವರೆಗೆ ಹಾಗೆ ಆಗಿದ್ದೂ ಇಲ್ಲ. ಲೋಕಲ್ ಫಂಡ್ ಸೆಸ್ಸು ಜಮ್ಮಕ್ಕೆ ಸಾಗಿನ ಎರಡರಷ್ಟು ಹೆಚ್ಚಾಗಿರುವುದೇ ಇದಕ್ಕೆ ದೃಷ್ಟಾಂತ. ಸಾಗಿನ ಕಂದಾಯವನ್ನು ಸಿರಮು ಮಾಡಲು ಯಾರೂ ಆಕ್ಷೇಪಣೆಯಾಗಿಲ್ಲ. ದೇಶದ ಅಭಿವೃದ್ಧಿಗೆ ಹೆಚ್ಚಾಗಿ ಹಣವು ಬೇಕಾದಲ್ಲಿ ಆಯಾಯ ಉದ್ದೇಶವನ್ನು ಕುರಿತು ಹೊಸ ತೆರಿಗೆಗಳನ್ನು ಕೊಡುವುದಕ್ಕೆ ದೇಶದ ಜನರು ಆಕ್ಷೇಪಿಸಲಾರರು. ಆದರೆ ಸರ್ಕಾರದವರು ಇಂಥಾ ನಡಗೆಗಳನ್ನು ಹಿಡಿದು ಜಮ್ಮದ ವಳಿದಾರರ ಸಿರಮು ಕಂದಾಯದ ಹಕ್ಕನ್ನು ಕಸಕೊಳ್ಳುವುದರಿಂದ ಪ್ರಜೆಗಳ ವಿಶ್ವಾಸವನ್ನು ಕಳಿಸಿದಂತಾಗುವುದಲ್ಲದೆ ಮತ್ತೇನೂ ಇಲ್ಲ.

ಒಮ್ಮದ ರೈತರಿಂದ ಬಿಟ್ಟಿ ಬಿಟ್ಟಿ ಕೆಲಸಮಾಡಿಸುವದನ್ನು ನಿಲ್ಲಿಸಬೇಕೆಂದು ಪಾಸಾದ ಠರಾವಿಗೆ ಸಂಪೂರ್ಣವಾಗಿ ಒಪ್ಪದಿದ್ದರೂ ಸಾಗೆ ಕೆಲಸಕ್ಕೆ ರೈತರನ್ನು ಕರೆಸುವುದನ್ನು ಕಡಿಮೆ ಮಾಡಿ ಕೆಲವು ಟ್ರೈಬಿಗಳಿಂದ ಇಸ್ಸಾಲು ಸಾಗಿಸುವುದಕ್ಕೆ ಪೋಲೀಸಿನವರನ್ನು ಪಹರೆಯಾಗಿ ಕಳುಹಿಸುತ್ತಿರುವರೆಂದು ಚೀಫ್ ಕಮಿಷನರು ತಿಳಿಸಿರುತ್ತಾರೆ. ಇಷ್ಟರಿಂದಲೇ ಈ ಬಿಟ್ಟಿ ಬಿಟ್ಟಿ ಪದ್ಧತಿಯು ಅನ್ಯಾಯವಾದುದೆಂದು ಸರ್ಕಾರದವರು ಒಪ್ಪಿಕೊಂಡಂತಾಯಿತು. ಅಂಥಾದರಲ್ಲೂ ಕೂಡ ಈ ವಾರ ನಡೆದ ಕೌನ್ಸಿಲು ಮೀಟಿಂಗಿನಲ್ಲಿ ಜಮ್ಮದವರಿಗೆ ಕೊಡಗಿನಿಂದ ಹೊರಗೆ ಲೈಸನ್ಸ್ ಇಲ್ಲದ ಪಿಸ್ತೂಲನ್ನು ಹಿಡಿಯುವ ಹಕ್ಕನ್ನು ಕೊಡಬೇಕೆಂಬ ಠರಾವು ಚರ್ಚಿಸಲ್ಪಟ್ಟಾಗ ಫೈನೇನ್ಸ್ ಮೆಂಬರರು ಆರ್ಮ್ಸ್ ಆಕ್ಟಿನ ರಿಯಾಯಿತಿಯು ಮಿಲಿಟರಿ ಮತ್ತು ಪೋಲೀಸು ಸರ್ವಿಸಿಗಾಗಿ ಕೊಟ್ಟದ್ದಾಗಿರುವುದರಿಂದ ಬಿಟ್ಟಿ ಬಿಟ್ಟಿ ಕೆಲಸವನ್ನು ರದ್ದು ಮಾಡಬೇಕೆಂದು ಕೇಳುವ ಮೆಂಬರರೇ ಪಿಸ್ತೂಲಿನ ರಿಯಾಯಿತಿ ಕೊಡಬೇಕೆಂದು ವಾದಿಸುವುದರಲ್ಲಿ ನ್ಯಾಯವೇನೂ ಇಲ್ಲವೆಂದು ಹೇಳಿದರು. ಆದರೆ ಕೋವಿ, ಕತ್ತಿ ಹಿಡಿಯುವ ಹುಟ್ಟು ಹಕ್ಕಿಗೂ, ಬಿಟ್ಟಿ ಬಿಟ್ಟಿಗೂ ಏನೊಂದೂ ಸಂಬಂಧವಿಲ್ಲ. ಒಂದು ವೇಳೆ ಆರ್ಮ್ಸ್ ಆಕ್ಟಿನ ರಿಯಾಯಿತಿಯು ಮಿಲಿಟರಿ ಸರ್ವಿಸಿಗಾಗಿ ಕೊಡಲ್ಪಟ್ಟದ್ದೆಂದು ಹೇಳಿದರೂ ಅದು ಮೊದಲು ಬ್ರಿಟಿಷರಿಗೆ ಮಾಡಿದ ಮಿಲಿಟರಿ ಸಹಾಯಕ್ಕಾಗಿದೆಯಲ್ಲದೆ ಇನ್ನು ಮುಂದೆ ಪ್ರಪಂಚದ ಅಂತ್ಯದ ವರೆಗೂ ಮಾಡಲಿಕ್ಕಿರುವ ಬಿಟ್ಟಿ ಬಿಟ್ಟಿ ಸರ್ವಿಸಿಗಲ್ಲವೆಂಬುದನ್ನು ಸರ್ಕಾರದವರು ಈ ರೀತಿಯೇ ತಿಳುಕೊಳ್ಳಬೇಕಾಗಿತ್ತು. ಸದ್ಯ ಇನ್ನಾದರೂ ತಿಳುಕೊಳ್ಳುವುದು ಉತ್ತಮ. ದಾಸತ್ವದ ಹೀನಪದ್ಧತಿಯಾದ ಬಿಟ್ಟಿ ಬಿಟ್ಟಿಗಾಗಿ ಕೋವಿ ಕತ್ತಿ ಹಿಡಿಯುವ ಹಕ್ಕು ಕೊಡಹುದು ಮತ್ತು ಜಮ್ಮದವರಿಗೆ ಕೊಟ್ಟದ್ದಾಗಿದೆಯೆಂಬುದು ದೊಡ್ಡ ಆಕ್ಷೇಪದ ಸಂಗತಿಯಾಗಿದೆ. ಇದು ಕೊಟ್ಟ ಸರ್ಕಾರಕ್ಕೂ ಅನುಭವಿಸುತ್ತಿರುವ ಪ್ರಜೆಗಳಿಗೂ ಕೂರಿರುವ ಮಾತಾಗಿದೆ. ಸಾಗಲೀಕರನ್ನಿಸಿಕೊಳ್ಳುವ ಬ್ರಿಟಿಷರ ಆಳಿಕೆಯಲ್ಲಿಯೂ ದಾಸತ್ವದ ಚಿಹ್ನೆಯು ಇನ್ನೂ ಉಳಿಯುತ್ತಲಿರುವುದು ಅವರ ಶ್ರೇಯಸ್ಸನ್ನು ಎಂದಿಗೂ ಹೆಚ್ಚಿಸುವದಿಲ್ಲ. ಬ್ರಿಟಿಷ ಅಂಗವಾದ ಕೊಡಗಿನವರಿಗೂ ಇದು ಒಂದು ಬಹುಮಾನವಲ್ಲ. ಆದುದರಿಂದ ಸರ್ಕಾರದವರು ಈ ಪದ್ಧತಿಯನ್ನು ಕೂಡಲೆ ರದ್ದುಪಡಿಸುವುದು ಯುಕ್ತ. ಇಲ್ಲವಾದರೆ ಜನರು ಈ ವಿಷಯದಲ್ಲಿ ಇನ್ನೂ ಸಿದ್ರಿಸಬಾರದು.

ರಿಸರ್ವ್ ಫಾರೆಸ್ಟಿನಲ್ಲಿ ರೈತರ ದನಗಳನ್ನು ಮಾಫಿಯಾಗಿ ಮೇಯಿಸಲು ಬಿಡಬೇಕೆಂಬ ಠರಾವು ಕೌನ್ಸಿಲು ಮುಂದೆ ಬಂದಿದ್ದಾಗ್ಯೂ ಅಂದಾಜು ರಿಯಾಯಿತಿಯು ಅವರ ಇರುವ ಪ್ರದೇಶಗಳನ್ನು ಸೂಚಿಸಿ ಠರಾವು ತಂದರೆ ಯೋಚನಾರ್ಹವೆಂದು ಸರ್ಕಾರದವರು ಹೇಳಿದ್ದರು. ಅದೇ ಮೇರೆ ಮೂನು ತಾಲ್ಲೂಕು ರಿಸರ್ವ್ ಫಾರೆಸ್ಟಿನಲ್ಲಿ ದನಗಳನ್ನು ಮಾಫಿಯಾಗಿ ಮೇಯಿಸಲು ಬಿಡಬೇಕೆಂದು ತಂದ ಠರಾವು ಪಾಸಾದದನ್ನು ಚೀಫ್ ಕಮಿಷನರು ಮಂಜೂರು ಮಾಡದೆ ಇರುವುದು ಅವರು ಜನರ ಸ್ಥಿತಿಗತಿಗೆ ನಿರ್ಲಕ್ಷ್ಯರಾಗಿರುವುದನ್ನು ವ್ಯಕ್ತಪಡಿಸುತ್ತದೆ. ಜುನಾಯಿತ ಮೆಂಬರರುಗಳ ಪೈಕಿ ಕೆಲವರು ಇದಕ್ಕೆ ವಿರೋಧಿಸಿದರೂ ಇದು ಆ ಪ್ರದೇಶದ ಜನರಿಗೆ ಅನಾವಶ್ಯಕವಾದದೆಂದು ಯೋಚಿಸಿದ ವಾದದಲ್ಲಿಯೂ ಕಾರಣ ನೀಡಿಸಿರುವುದಿಲ್ಲ. ಆದರೆ ಬಹುಮತದ ವಾದದಲ್ಲಿ ಆವಶ್ಯಕತೆಯನ್ನು ಕುರಿತು ಸಕಾರಣವಾದ ಸೂಚನೆಗಳಿಂದ ಪಾಸಾದ ಠರಾವನ್ನು ಸರ್ಕಾರವು ತಿರಸ್ಕರಿಸಿರುವುದು ... ನೋಡಿದರೆ ಸರ್ಕಾರಿ ಮೆಂಬರುಗಳು ಕೌನ್ಸಿಲಿನ ಚರ್ಚೆಯಲ್ಲಿ ಸೂಚಿಸಿದ ಅಭಿಪ್ರಾಯಗಳಿಗೇನೇ ಚೀಫ್ ಕಮಿಷನರು ಬೆಂಬಲವಾಗಿರುವುದು ವ್ಯಾಪಕವಾಗಿರುವಂತೆ ಕಾಣುತ್ತದೆ.

ವೀರರಾಜಪೇಟೆ ಮೈಸ್ಕೂಲಿನಲ್ಲಿ ಗಣಿತ ವಿದ್ಯೆಯ ಬೋಧೆಯನ್ನು ವಿಸ್ತರಿಸಬೇಕೆಂಬ ಠರಾವನ್ನು ಈಗ ಒಪ್ಪಿಕೊಳ್ಳಲಿಕ್ಕಾಗುವುದಿಲ್ಲವೆಂತಲೂ ತಕ್ಕ ಸಮಯ ದೊರೆತಾಗ ಯೋಚಿಸಲಾಗುವುದೆಂತಲೂ ಹೇಳಿರುವರು. ಇದು ತಕ್ಕ ಸಮಯದಲ್ಲೇ ಜುನಾಯಿತ ಮೆಂಬರುಗಳು ಪಾಸಿಸಿ ಈ ವಿಷಯವನ್ನು ಬಹುಮತದಿಂದ ಪಾಸುಮಾಡಿದ್ದಾಗಿದೆ. ವಿದ್ಯಾಭ್ಯಾಸದ ಅಭಿವೃದ್ಧಿಗೂ ಕೂಡ ಸರ್ಕಾರದವರು ಈ ರೀತಿ ಅಲಕ್ಷ್ಯಭಾವವನ್ನು ತೋರಿಸುತ್ತಿರುವುದು ದೇಶದ ಹಿತಕ್ಕೆ ಆಘಾತವೆಂದೇ ಹೇಳಬೇಕಾಗಿದೆ. ವಿದ್ಯಾಪ್ರಚಾರವೇ ಜನರ ಪುರೋಭಿವೃದ್ಧಿಗೆ ಅಸ್ತಿಭಾರವೆಂಬುದು ಸರ್ವಸಮ್ಮತವಾಗಿರುವಲ್ಲಿ ನಮ್ಮ ಈ ಚಿಕ್ಕ ದೇಶದಲ್ಲಿ ಎರಡು ಸಂಪೂರ್ಣ ಹೈಸ್ಕೂಲುಗಳಾಗುವುದಕ್ಕೂ ಉತ್ತೇಜನ ಕೊಡದೆ ಇರುವುದು ಅತಿ ಶೋಚನೀಯ.

ಲೋಕಲ್ ಬೋರ್ಡ್ ಮತ್ತು ಮುನ್ಸಿಪಲ್ ರೆಗ್ಯುಲೇಶನ್‌ಗಳನ್ನು ತಿದ್ದುಪಡಿಮಾಡಲು ಬಿಲ್ಲುಗಳನ್ನು ತರಬೇಕೆಂಬ ಠರಾವಿನ ಮೇಲೆ ಮಾಡಿದ ತೀರ್ಮಾನವೂ ತೃಪ್ತಿಕರವಲ್ಲ. ಕೆಲವು ವರ್ಷಗಳ ಮೊದಲೇ ಸಿಕ್ಕಬೇಕಾಗಿದ್ದ ಕೆಲವು ಮಾರ್ಪಾಡುಗಳು ಡಿಸ್ಟ್ರಿಕ್ಟ್ ಬೋರ್ಡಿಗೂ, ವೀರರಾಜಪೇಟೆ ಮುನ್ಸಿಪಾಲಿಟಿಗೂ ಈಗ ದೊರೆತಿರುವ ಇಷ್ಟು ಮಾತ್ರದಿಂದ ಜನರ ಅವಶ್ಯಕತೆಗಳು ಕಡಿಮೆಯಾಗಿರುವುದಿಲ್ಲ. ಸ್ಥಳೀಯ ಸ್ವರಾಜ್ಯವಾದ ಈ ಎರಡು ಸಂಸ್ಥೆಗಳಿಗೆ ಇನ್ನೂ ತಕ್ಕಷ್ಟು ಹಕ್ಕುಗಳು ದೊರೆತಿರುವುದಿಲ್ಲ. ಈ ವಿಷಯದಲ್ಲಿ ಕೊಡಗಿನ ಪ್ರಾಂತ್ಯಗಳು ಎಷ್ಟೋ ಮುಂದುವರಿದವೆ. ಈ ಸಂಗತಿಯಲ್ಲಿ ನಮ್ಮ ಸರ್ಕಾರದವರು ಕಾಲ ತಳ್ಳುತ್ತಾ ಬರುವುದು ಬಹಳ ಅಸಮಾಧಾನಕರ.

ಒಟ್ಟಾರೆ ಚೀಫ್ ಕಮಿಷನರವರು ಕೌನ್ಸಿಲಿನ ತೀರ್ಮಾನಗಳಿಗೆ ಸಾಕಷ್ಟು ಬೆಲೆ ಕೊಡದೆ ತಳ್ಳಿರುವುದರಿಂದ ಕೌನ್ಸಿಲು ಸರ್ಕಾರದ ಮೇಲೆ ಜನರಿಗಿದ್ದ ವಿಶ್ವಾಸವು ಕಡಿಮೆಯಾಗಲು ಅವಕಾಶ ಉಂಟಾಗಿದೆ. ರೈತರಿಗೆ ಸಂಬಂಧಪಡುವ ಇಂಥಾ ವಿಷಯಗಳಲ್ಲಿ ಜನರ ಅಭಿಪ್ರಾಯವನ್ನು ಸೂಚಿಸಲಿಕ್ಕಾಗಿ ಕೌನ್ಸಿಲಿನಲ್ಲಿ ಠರಾವುಗಳನ್ನು ಪುನಃ ಪುನಃ ತಂದು ಪಾಸುಮಾಡಬೇಕಾದದ್ದು ಪ್ರತಿನಿಧಿಗಳ ಕರ್ತವ್ಯವಾಗಿದೆ.

ಕೊಡಗು ಕೌನ್ಸಿಲು ಮೀಟಿಂಗು.

ತಾ. 2—11—'26ರಲ್ಲಿ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಕೊಡಗು ಕೌನ್ಸಿಲು ಮೀಟಿಂಗು ಪ್ರಾರಂಭವಾಯಿತು. ಕಮಿಷನರಾದ ಮಿ ಟಾಸ್ಕರವರು ರಜೆಯಲ್ಲಿ ಹೋಗಿದ್ದಾಗ ಕೌನ್ಸಿಲು ಮೆಂಬರು ತನಕ್ಕೆ ರಾಜಿನಾಮೆ ಕೊಟ್ಟಿದ್ದದರಿಂದ ಅವರೂ, ಹೊಸದಾಗಿ ಇನ್‌ಸ್ಪೆಕ್ಟರಾಗಿ ಬಂದಿರುವ ಮಿ. ಸಾಂಡರ್ಸ್, ಹೊಸದಾಗಿ ಚುನಾಯಿತರಾದ ಮಿ ಟಿಪ್ಪಿಂಗ್, ಮಿ ... ಮತ್ತು ಮಿ ಮಾಚಿಮಾಡ ಮಾಚೈಯ್ಯನವರೂ ಮೇರೆ ರಾಜಭಕ್ತಿಯ ಪ್ರಮಾಣ ಮಾಡಿದನಂತರ ಕಾರ್ಯಕ್ರಮವು ಪಟ್ಟಿಯ ಮೇರೆ ಕೆಲಸ ಪ್ರಾರಂಭವಾಯಿತು. ಮೊದಲು ಮಿ ಟಾಸ್ಕರವರು ಕೌನ್ಸಿಲ್ ಮೆಂಬರರಾದ ಮಿ ಪುತ್ತಮನ ಗಣಪಯ್ಯನವರ ಮರಣದಿಂದ ಉಂಟಾದ ವ್ಯಸನವನ್ನು ಸೂಚಿಸಿ ಅವರ ಕುಟುಂಬಕ್ಕೆ ಅರ್ಪಿಸಬೇಕೆಂಬ ಠರಾವನ್ನು ಸಭೆಯ ಮುಂದೆ ತಂದರು. ಅವರ ಪರಿಶ್ರಮಯನ್ನು ಸೂಕ್ಷ್ಮವಾಗಿ ಸೂಚಿಸಿ ಅವರ ಮರಣದ ಕೌನ್ಸಿಲಿಗೆ ತುಂಬಾ ನಷ್ಟವಿದೆಯೆಂದೂ, ಇಂಗ್ಲಿಷ ಬಿದ್ದರೂ ಅವರು ತುಂಬಾ ಅನುಭವಶಾಲಿಯಾದದರಿಂದ ಕೌನ್ಸಿಲು ಚರ್ಚೆಗೆ ಸಹಾಯಕರಾಗಿದ್ದರೆಂದೂ ಅವರ ಸೂಚನೆ ಮೇರೆಯೇ ಈ ದಿನ ಪಾಸಾಗಬಹುದಾದ ಪಂಚಾಯತಿ ಬಿಲ್ಲನ್ನು ಸರ್ಕಾರವು ಕೌನ್ಸಿಲು ಮುಂದೆ ತಂದದೆಂತಲೂ ಶ್ಲಾಘಿಸಿದರು. ಮಿ. ಪಂದ್ಯಂಡ ಬೆಳ್ಳಿಯಪ್ಪ, ಮಿ. ಪಾಲೇಕಂಡ ಮೇದಪ್ಪನವರು, ಮಿ. ಪಿ ತಿಮ್ಮರಾಯರು ಮತ್ತು ಮಿ ಸಿ ಎಸ್. ಮಾಚಯ್ಯನವರು ನಿನ್ನೆ ಮೆಂಬರರು ಹೇಳಿದ ಅಭಿಪ್ರಾಯಗಳಿಗೆ ಒತ್ತಾಸೆ ಕೊಡಲಾಗಿ ಎಲ್ಲರೂ ಎದ್ದುನಿಂತು ಠರಾವನ್ನು ಪಾಸುಮಾಡಿದರು.

ಮೆಂಬರರಿಂದ ಮೊದಲೇ ಕಳುಹಿಸಲ್ಪಟ್ಟಿದ್ದ 25 ಪ್ರಶ್ನೆಗಳಿಗೆ ಬರೆದ ಜವಾಬುಗಳು ಮೆಂಬರುಗಳ ಮುಂದಿಟ್ಟಿದ್ದುವು. ಇವುಗಳಲ್ಲಿ ಕೆಲವುದರ ಮೇಲೆ ಹೆಚ್ಚಿನ ಸವಾಲುಗಳು ಕೇಳಲ್ಪಟ್ಟುವು.

ಮೊದಲು ಕೌನ್ಸಿಲಿನಲ್ಲಿ ಪಾಸಾಗಿದ್ದ ಈ ಕೆಳಗಿನ ಠರಾವುಗಳ ಮೇಲೆ ಸರ್ಕಾರವು ಮಾಡಿದ ತೀರ್ಮಾನವು ಸೆಕ್ರೆಟರಿಯವರಿಂದ ಓದಲ್ಪಟ್ಟಿತು. ತಾ 16—3ರಲ್ಲಿ ಪಾಸಾದ 'ಜಮ್ಮಾ ರೈತರಿಂದ ಬಿಟ್ಟಿಬಿಟ್ಟಿ ಕೆಲಸ ನಿಲ್ಲಬೇಕೆಂಬ' ಠರಾವಿಗೆ—ಈ ಠರಾವನ್ನು ಒಪ್ಪಿದರೂ ಅಂಗೀಕರಿಸಲಿಕ್ಕಾಗುವದಿಲ್ಲವಾದರೂ ಇರುಸಾಲು ಸಾಗಿಸುವುದಕ್ಕೆ ಜಮ್ಮಾ ರೈತರನ್ನು ಕರೆಯುವುದು ಕಡಿಮೆ ಮಾಡಿ ಪೋಲೀಸು ಪಹರೆಯ ಏರ್ಪಾಡು ಮಾಡಲಾಗಿದೆ.

ತಾ 16—3—25ರಲ್ಲಿ ಪಾಸಾದ ಜಮ್ಮಾ ಹಿಡುವಳಿಯ ಕಂದಾಯವನ್ನು ಕಳೆದ ಸೆಟಲ್‌ಮೆಂಟಿನಲ್ಲಿ ಜಾಸ್ತಿಮಾಡಿದ್ದನ್ನು ರದ್ದುಪಡಿಸಿ ಪೂರ್ವದ ದರವನ್ನೇ ಮುಂದುವರಿಸಬೇಕೆಂಬ ಠರಾವಿಗೆ ಸರಕಾರದ ನಿರ್ಣಯ—ಠರಾವನ್ನು ಚೀಫ್ ಕಮಿಷನರು ಅಂಗೀಕರಿಸಲಾಗಲಿಲ್ಲ. ಆಗಿಂದಾಗ್ಗೆ ಕಂದಾಯವನ್ನು ವ್ಯತ್ಯಾಸಪಡಿಸಬೇಕಾದ್ದೆ ಕಮಿಷನರು ಠರಾವಿನ ಚರ್ಚೆಕಾಲದಲ್ಲಿ ಸವಿಸ್ತಾರವಾಗಿ ಕೊಟ್ಟಿರುತ್ತಾರೆ. ಈ ವಿಷಯವನ್ನು ಪೂರ್ವದಲ್ಲೇ ಪರ್ಯಾಲೋಚನೆಗೆ ತೆಗೆದುಕೊಂಡ ಇರುವ ಸಕಾರಣಗಳನ್ನೇನೂ ಈಗ ಠರಾವನ್ನು ಪುಷ್ಟೀಕರಿಸಿದವರೂ ಕೊಟ್ಟಿರುವದಿಲ್ಲ. ಸಮುದಾಯದವರ ಮೇಲೆ ತಯ ಹಾಕುವ ಪದ್ಧತಿ ಮೇರ ಕಂದಾಯವು ಸರ್ವತ್ರ ಒಂದೇ ರೀತಿ ಹಂಚಲ್ಪಡಬೇಕು. ಜಮ್ಮಾ ಹಿಡುವಳಿಗೆ ಇನ್ನೂ ಹೆಚ್ಚಿಗೆ ರಿಯಾಯ್ತಿ ತೋರಿಸಿದರೆ ಸಾಗು ಮೇಲೆ ಕಂದಾಯದ ಹೊರ ಇನ್ನೂ ಹೆಚ್ಚಿಗೆ ಬೀಳಬೇಕಾಗುತ್ತದೆ.

12—1—26ರಲ್ಲಿ ಪಾಸಾದ ಇನ್‌ಸ್ಪೆಕ್ಟರ್ ಬಂಗ್ಲೆಯನ್ನು ಟ್ರಾವಲರ್ಸ್ ಬಂಗ್ಲೆಗಳಾಗಿ ಮಾಡಿಕೊಡಬೇಕೆಂಬ ಠರಾವಿಗೆ ಚೀಫ್ ಕಮಿಷನರಿಗೆ ಇದನ್ನು ಒಪ್ಪಿಕೊಳ್ಳಲಾಗಲಿಲ್ಲವೆಂಬ ಜವಾಬು ಕೊಟ್ಟಿರುತ್ತಾರೆ.

ತಾ. 11—3—26ರಲ್ಲಿ ಪಾಸಾದ ಮೂರು ತಾಲ್ಲೂಕಿನಲ್ಲಿ ಮಾಫಿಯಾಗಿ ದನ ಮೇಯಿಸಲು ಬಿಡಬೇಕೆಂಬ ಠರಾವಿಗೂ ಆಗುವದಿಲ್ಲವೆಂಬ ಜವಾಬು.

ತಾ. 11—3—26ರಲ್ಲಿ ಪಾಸಾದ ವೀರರಾಜಪೇಟೆ ಸ್ಕೂಲಿನಲ್ಲಿ ಮ್ಯಾತ್‌ಮ್ಯಾಟಿಕ್ಸ್ ಸೆಕ್ಷನ್ ತೆರೆಯಬೇಕೆಂಬ ಠರಾವಿಗೆ—ಈಗ ಈ ಠರಾವನ್ನು ಒಪ್ಪಿಕೊಂಡು ಜಾರಿಮಾಡಲಿಕ್ಕಾಗುವದಿಲ್ಲ. ಅನುಕೂಲ ದೊರೆತಾಗ ಈ ವಿಷಯವು ಆಲೋಚನೆಗೆ ತೆಗೆದುಕೊಳ್ಳಲಾಗುತ್ತದೆ.

ತಾ 2—3—1926ರಲ್ಲಿ ಪಾಸಾದ ಮುನಿಸಿಪಲ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡ್ ಕಾನೂನನ್ನು ತಿದ್ದಿ ಜನರ ಪ್ರತಿನಿಧಿಗಳಿಗೆ ಆ ಸಂಸ್ಥೆಗಳನ್ನು ಬಿಟ್ಟುಕೊಡಲಿಕ್ಕೆ ಬಿಲ್ ತರಬೇಕೆಂಬ ಠರಾವಿಗೆ ಜವಾಬೇನೆಂದರೆ—ವೀರರಾಜಪೇಟೆ ಮುನಿಸಿಪಾಲಿಟಿಯನ್ನು ಚುನಾವಣೆಗೆ ಬಿಟ್ಟುಕೊಟ್ಟು ಚುನಾಯಿತ ಅಧ್ಯಕ್ಷನನ್ನು ಮಾಡಿಕೊಳ್ಳಬಹುದೆಂತ ತಾ. 6—5—1926ರ ಚೀಫ್ ಕಮಿಷನರು ರೂಲ್ಸ್ ಮಾಡಿರುತ್ತಾರೆ.

5—8—1926ರ ನೋಟಿಫಿಕೇಶನ್ ಮೇರೆ ಡಿಸ್ಟ್ರಿಕ್ಟ್ ಬೋರ್ಡಿಗೆ ಚುನಾವಣೆ ಒಗ್ಗೆ ಹೊಸ ರೂಲ್ಸ್ ಮಾಡಲಾಗಿದೆ.

ಅನಂತರ ಗ್ರಾಮ ಪಂಚಾಯತಿ ಬಿಲ್ಲಿನ ಚರ್ಚೆ ಪ್ರಾರಂಭವಾಯಿತು. ಸಿಲೆಕ್ಟ್ ಕಮಿಟಿ ರಿಪೋರ್ಟನ್ನು ಸಭೆಯು ಒಪ್ಪಿಕೊಂಡ ಮೇಲೆ ಸೆಕ್ಷನ್‌ಗಳಲ್ಲಿ ಬದಲಾವಣೆಗಳಾಗಬೇಕ

(4ನೇ ಪುಟದಲ್ಲಿ ಮುಂದುವರಿದಿದೆ.)

ಪ್ರಕಟಣೆ.

...ಟನಾಡು ಡಿಸ್ಟ್ರಿಕ್ಟು ಬೋರ್ಡು ಓಟರುಗಳಲ್ಲಿ ...ರ ಎಸ್. ಪುಟ್ಟಯ್ಯನ ವಿನಂತಿ.

...ರೇ,

... ಈ ನಾಡಿನ ಪರವಾಗಿ ಅಧಿಕೃತವಾಗಿ ... ರ್ಡು ಮೆಂಬರುತನಕ್ಕೆ ನಾನು ಅಭ್ಯರ್ಥಿಯಾಗಿ ನಿಂತಿರುತ್ತೇನೆ. ನನ್ನ ನಾಡಿನ ಪರವಾಗಿ ತ... ಕ್ಕವನ್ನು ನ್ಯಾಯವಾಗಿಯೂ ಉದ್ದಿಶ್ಯನಾಗಿ ಅಗ... ಡುತ್ತೇನೆ. ಬೋಗನಗರಿಯವರಿಂದ ದೂರ ... ಜನಗಳ ಹಿತವಾಗುವ ಕೆಲಸಗಳನ್ನು ಮಾಡಲು ... ನನಗೆ ಓಟುಕೊಟ್ಟು ದೇಶಸೇವೆ ಮಾಡಲು ಅವಕಾಶಮಾಡಬೇಕಾಗಿ ಕೋರುತ್ತೇನೆ.

...ಪೇಟೆ ತಮ್ಮ ಸೇವಕ,

...10—26 ಚಿಟ್ಟೀರ ಎಸ್. ಪುಟ್ಟಯ್ಯ.

"ಕಾರ್ಯಕರ್ತ."

ಮಹಾತ್ಮಗಾಂಧಿಯವರ ಸ್ವಚರಿತ್ರೆ.

...ರಡನೆಯ ಭಾಗದಲ್ಲಿ 11 ನೆಯ ಪ್ರಕರಣ.

ದಾದಾ ಅಬ್ದುಲ್ಲಾ ಮೊಕದ್ದಮೆ

ಪ್ರಿಟೋರಿಯಾದಲ್ಲಿ ನಾನು ವಾಸವಾಗಿದ್ದ ಒಂದು ವ... ಗಳೊಳಗೆ ನನಗೆ ಅನುಭವವಾದ ಅನೇಕ ... ದೇಶಸೇವಾ ವಿಧಾನವನ್ನು ಬಿಡಿಸಿ ... ಪರಮಾತ್ಮನನ್ನು ನಾನು ಅಲ್ಲೇ ಗ್ರಹಿಸಿದವನಾದೆ ... ಅಲ್ಲೇ ನನ್ನೊಳಗಿದ್ದ ಸಾರ್ವಜನಿಕ ... ನ್ಯಾಯವಾದಿ ವೃತ್ತಿಗೆ ಸಂಬಂಧಿಸಿದ ಯಥಾರ್ಥ ... ಕೂಡ ನನಗೆ ಹುಟ್ಟಿದವು. ... ನಾದ ... ರ ಚರ್ಚೆಯಲ್ಲಿ ಅನುಭವ ... ವಿಷಯವನ್ನು ಗ್ರಹಿಸಿದ್ದಾರೆ ಆ ಸಂಗತಿಯನ್ನು ನಾನು ಅಲ್ಲೇ ಗ್ರಹಿಸಿಕೊಂಡೆನು. ನಾನು ನ್ಯಾಯವಾದಿಯಾಗಿ ಕೆಲಸ ಮಾಡಬಹುದೆಂಬ ಧೈರ್ಯವೂ ನನಗೆ ಅ... ಹುಟ್ಟಿದುದು. ನ್ಯಾಯವಾದಿಯಾಗಿ ಕೆಲಸದಲ್ಲಿ ಜಯ... ವನ್ನು ಪಡೆಯಲು ಅವಶ್ಯಕವಾದ ಮುಖ್ಯಾಂಶವನ್ನು ಅಲ್ಲೇ ಗ್ರಹಿಸಿದೆನು. ದಾದಾ ಅಬ್ದುಲ್ಲರವರ ... 7,20,000 ರೂಪಾಯಿಗಳದಾಗಿದ್ದುದರಿಂದ ಅದು ... ವಾದದ್ದು. ವ್ಯಾಪಾರ ಸಂಬಂಧವಾಗಿ ಆ ದಾವೆ ... ಟ್ಟಿದ್ದುದರಿಂದ ಅದರಲ್ಲಿ ಲೆಕ್ಕ ವಿಚಾರವು ಬಹಳವಾ... ಕೆಲವು ಪ್ರಾಮಿಸರಿ ನೋಟುಗಳೂ, ಪ್ರಾಮಿಸರಿ ನೋ... ಕೊಡಲು ಮಾಡಿದ ವಾಗ್ದಾನವೂ ಆ ದಾವೆಗೆ ... ಗಿದ್ದುವು. ವಾದಿಯು ಪ್ರಾಮಿಸರಿ ನೋಟುಗಳ ... ದಿಂದ ಹಣವನ್ನು ಕೊಡಬೇಕೆಂದು ಮಾಡಿ... ಪ್ರತಿವಾದಿಗಳ ವಾದವು. ಆ ದಾವೆಯಲ್ಲಿ ನ್ಯಾ... ಅಂಶವೂ ಬಹಳವಾಗಿದ್ದಿತು. ಅದು ಬಹಳ ತೊಡಕಾದ ... ವು. ಎರಡು ಪಕ್ಷದವರೂ ಸುಪ್ರಸಿದ್ಧರಾದ ವಕೀಲ... ನ್ನೇ ನಿಯಮಿಸಿದ್ದರು. ಆದ್ದರಿಂದ ಅವರ ಕೆಲಸಗಳನ್ನು ... ಲಿಸಲು ನನಗೆ ಒಳ್ಳೇ ಅವಕಾಶವು ದೊರೆಕಿತು. ವಾ... ದ ದಾವೆಯನ್ನು ಸಿದ್ಧಪಡಿಸಿ ಅವಕ್ಕೆ ಸಾಕ್ಷ್ಯಾಧಾರಗಳನ್ನು ... ಅನ್ವೇಷಿಸಲು ನನಗೆ ನಿಯಮಿಸಲ್ಪಟ್ಟಿದ್ದ ... ಸಿದ್ಧಪಡಿಸುವುದರಲ್ಲಿ ಒಟ್ಟಿನಲ್ಲಿ ಎಷ್ಟನ್ನು ಸ್ವೀಕರಿಸಿ, ಎಷ್ಟನ್ನು ತಿರಸ್ಕರಿಸಬೇಕೆಂಬುದನ್ನು ಅರಿತುಕೊ... ನ್ಯಾಯವಾದಿಯು ಅದ್ದರ ... ಗೆ ... ನನಗೆ ... ಪರವಾಗಿದ್ದಿತು. ಈ ದಾವೆಯನ್ನು ಸಿದ್ಧಪಡಿಸುವ... ಗಿದ್ದ ಗ್ರಹಣ ಶಕ್ತಿಯನ್ನೂ ಏಕಾಗ್ರತೆಯನ್ನೂ ಸಿದ್ಧಪಡಿಸ... ದಲ್ಲಿ ... ನಾನು ಗ್ರಹಿಸಿಕೊಂಡೆನು ... ಬಹಳ ಶ್ರದ್ಧೆಯಿಂದ ದಾದಾ ಸಂಬಂಧದಲ್ಲಿ ಕೆಲಸದ... ಏಕಾಗ್ರತೆಯಿಂದ ಅದನ್ನು ಸಿದ್ಧಪಡಿಸಿದೆನು. ... ಕಾಗಿದ್ದ ಲೆಕ್ಕದ ಕಾಗದಗಳನ್ನು ನಾಂಗವಾಗಿ ಓದಿದೆನು. ... ಅಬ್ದುಲ್ಲಾರವರು ಒಳ್ಳೇ ಸಮರ್ಥರು. ಅವರಿಗೆ ನನ್ನಲ್ಲಿ ... ಪೂರ್ಣ ವಿಶ್ವಾಸವಿದ್ದುದರಿಂದ ನನ್ನ ಕೆಲಸವು ಸುಲಭವಾ... ಲೆಕ್ಕವನ್ನು ಇರಿಯುವ ವಿಧಾನವನ್ನು ನಾನು ಕಲಿತು ... ಂಡೆನು. ಗುಜರಾತಿ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಅನೇ... ಕಾಗದಗಳನ್ನು ಪರಿವರ್ತನ ಮಾಡಬೇಕಾಗಿದ್ದುದರಿಂದ ಆ ... ಭ್ಯಾಸವೂ ಕೂಡ ನನಗೆ ಹೆಚ್ಚಿತು.

ನಾನು ಮತ ವಿಷಯದಲ್ಲಿಯೂ, ಪ್ರಜಾಸೇವೆಯಲ್ಲಿಯೂ ಶ್ರದ್ಧೆ... ವನಾಗಿದ್ದರೂ ನನ್ನ ಮುಖ್ಯವಾದ ಕೃತಿಯು ವ್ಯಾಜ್ಯ... ಆಗಿತ್ತು. ನ್ಯಾಯಶಾಸ್ತ್ರವನ್ನು ಓದುವುದು ದಾವೆಗ... ... ಕ್ಕೆ ... ಗಳನ್ನು ಬಿಡಿ ಸಿದ್ಧಪಡಿಸುವುದು ... ಕಾಗದಗಳನ್ನೇ ನಾನು ಮುಖ್ಯವಾಗಿ ... ... ಎರಡು ಪಕ್ಷದವರ ಲೆಕ್ಕದ ನನ್ನ ವಶದಲ್ಲಿದ್ದಿತು... ಕಾಗದಗಳನ್ನು ಸಂಪೂರ್ಣವಾಗಿ ಓದಿದ್ದುದರಿಂದ ದಾ... ವಾದವೆಲ್ಲವೂ ನನಗೆ ಸ್ಪಷ್ಟವಾಗಿದ್ದಿತು. ವಿಷಯಗ... ಸತ್ಯಸ್ಥಿತಿ ಮುಖ್ಯಾಲು ಪಾಲು ಗೆಲ್ಲುವುದು ನಿಶ್ಚಯ ... ದು ಪ್ರಿಟೋರಿಯಾ ಅವರಿಗೆ ಹೇಳಿದ್ದರು. ಒಂದು ಕೇಸಿನ ... ವಿಷಯವನ್ನು ನನ್ನ ಕಕ್ಷಿದಾರನಿಗೆ ಅನುಕೂಲವಾಗಿದ್ದಿ... ನ್ಯಾಯ ನಿರ್ಣಯಗಳನ್ನು ಮಾತ್ರ ಪ್ರತಿಕೂಲವಾಗಿ ... ಸಿದುವು. ನನಗೂ ಸ್ವಲ್ಪಮಟ್ಟಿಗೆ ... ವಾದಿ ... ಲ್ಲಿ ಮಿಸ್ಟರ್ ... ನ್ಯಾಯವಾದಿಗಳಾಗಿದ್ದ ಬ್ಯಾರಿಸ್ಟರ್ ಲಿ... ... ನಾರ್ಡ್ರವರ ಸಹಾಯವನ್ನು ಕೋರಿದೆನು. ಅವರು ... ರ ನನ್ನ ಕಡೆ ಪರಿಶೋಧಿಸಿ "ವಿಷಯವನ್ನು ನಾವು ಸಿದ್ಧಪ

ಡಿಸಿದರೆ ನ್ಯಾಯನಿರ್ಣಯಗಳನ್ನು ಕುರಿತು ನಾವು ಯೋಚಿಸಬೇಕಾದುದಿಲ್ಲವೆಂದು ನನಗೆ ಚೆನ್ನಾಗಿ ತಿಳಿದಿರುತ್ತೇನೆ. ಆದುದರಿಂದ ಇದನ್ನೊಂದು ಚೆನ್ನಾಗಿ ಓದಿಕೊಂಡು ಬಾ" ಎಂದು ಹೇಳಿದರು. ನಾನು ಪುನಃ ಶ್ರದ್ಧೆಯಿಂದ ಓದಿದಾಗ ... ವಿಷಯಗಳೇ ಗೋಚರಿಸಿದುವು. ಕಡೆಯಲ್ಲಿ ಒಂದು ... ಅದ ಒಂದು ಕೇಸು ಕೂಡ ನನ್ನ ನಾವಗೆ ... ಯಾಗಿ ದೊರಕಿತು. ನಾನು ಬಹಳ ಸಂತೋಷದಿಂದ ಅದನ್ನು ... ಯವರಿಗೆ ಕೊಟ್ಟೆನು. ... ಗೆಲ್ಲುವುದು ನಿಶ್ಚಯ, ಆದರೆ ಯಾವ ನ್ಯಾಯಾಧಿಪತಿಯು ಈ ದಾವೆ... ಚರ್ಚೆಯನ್ನು ನಡೆಸುವುದನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ" ಎಂದು ಅವರು ಹೇಳಿದರು. ದಾದಾ ಅಬ್ದುಲ್ಲಾ ಸೇಠರು ಹೇಳಿದುದನ್ನೆಲ್ಲಾ ಸಿದ್ಧಗೊಳಿಸಿದಾಗ ಈ ವಿಷಯವು ... ಯನ್ನು ತಿಳಿಯಿತು ... ಹೊಂದಿರುವುದನ್ನು ನಾನು ಅ... ನ್ನು ಸರಿಯಾಗಿ ಗ್ರಹಿಸಲಿಲ್ಲವು. ವಿಷಯಗಳೆಂದರೆ ಸತ್ಯವಾದ ... ಗಳು ... ನ್ಯಾಯವಾದಿ ... ಗ್ರಹಿಸಿ ನನಗೆ ಕೊಂಡಲ್ಲಿ ನ್ಯಾಯಸಿಂಹಾಸನವು ... ನನಗೆ ಅನುಕೂಲವಾಗಿರುವುದು. ಆದ್ದರಿಂದ ಅವರಿಗೆ ಜಯವಾಗದೇ ಇರದು. ಆದರೆ ವಾದಿ ಪ್ರತಿವಾದಿಗಳಿಬ್ಬರೂ ಬಂಧುಗಳೇ. ಎರಡು ಪಕ್ಷದವರೂ ಒಂದೇ ಊರಿನಲ್ಲಿ ವಾಸಿಸುತ್ತಿರುವರು. ಈ ದಾವೆಯು ... ಕಾಲ ನಡೆಯುವುದೆಂದು ಯಾರಿಗೂ ತಿಳಿಯದು. ಒಂದು ವೇಳೆ ಇದು ಕೊನೆಯವರೆಗೂ ನಡೆದಲ್ಲಿ ಎರಡು ಪಕ್ಷದವರಿಗೂ ಬಹಳ ನಷ್ಟ ... ಅನುಕೂಲ ... ಲ್ಲಿ ತ್ವರಿತವಾಗಿ ದಾವೆಯು ತೀರಬೇಕೆಂದು ಎರಡು ಪಕ್ಷದವರೂ ಅಪೇಕ್ಷಿಸಿದರು. ನಾನು ತಾಯಬ್ ಸೇಠರನ್ನು ಭೇಟಿಮಾಡಿ ಮಧ್ಯಸ್ಥರ ತೀರ್ಮಾನವನ್ನು ಅಂಗೀಕರಿಸಬೇಕೆಂದು ಕೋರಿದೆನು. "ಎರಡು ಸ್ನೇಹಿತರಿಗೂ ವಿಶ್ವಾಸವಾಗುವ ... ದವರ ಮಧ್ಯಸ್ಥಿಕೆಯು ಕೂಡಿದರೆ ದಾವೆಯು ತೀರ್ಪಾಗುವುದು. ... ವಕೀಲರ ಫೀಜು ... ಗಳು ಹೆಚ್ಚುತ್ತಿರುವುದು. ಎರಡು ಪಕ್ಷದವರೂ ಅವರನ್ನು ಸಹಕರಿಸುವುದರಿಂದ ತಕ್ಕಷ್ಟು ಧನನಷ್ಟವಾಗಿದೆ. ಈ ಸ್ನೇಹಿತರುಗಳ ... ಸಾಕು ... ದಾವೆಯಿಂದ ಇತರ ಕೆಲಸಗಳನ್ನು ನೋಡಲು ಅವರಿಗೆ ಅವಕಾಶವಿಲ್ಲದಂತಾಗುವುದು. ಪರಸ್ಪರ ದ್ವೇಷವೂ ಹೆಚ್ಚುವುದು. ನನಗೆ ವಕೀಲವೃತ್ತಿಯಲ್ಲಿ ಅಸಹ್ಯತೆ ಹುಟ್ಟಿದ ... ಹುಟ್ಟಿತು. ವಕೀಲರುಗಳು ತಮ್ಮ ಕಕ್ಷಿದಾರರಿಗೆ ಅನುಕೂಲವಾದ ವಿಷಯಗಳನ್ನು ಶೇಖರಿಸಿಕೊಳ್ಳುವುದರಲ್ಲಿ ನಿಷ್ಣಾತರಾಗುವರು. ದಾದಾ ಗೆದ್ದರೂ ನಷ್ಟ ಮಾಡಿದ ಹಣವೆಲ್ಲವೂ ಪ್ರತಿವಾದಿಯಿಂದ ವಾದಿಗೆ ಬರುವುದಿಲ್ಲವು. ಕೋರ್ಟಿನ ... ಪ್ರಕಾರವಾಗಿ ನಿರ್ದಿಷ್ಟವಾದ ... ಬರಲ್ಪಡುವುದು. ಕಕ್ಷಿದಾರನು ವಕೀಲನಿಗೆ ಕೊಟ್ಟ ಹಣವೆಲ್ಲವೂ ಪ್ರತಿವಾದಿಯಿಂದ ಕೊಡಿಸಲ್ಪಡುವುದಿಲ್ಲ. ಆದುದರಿಂದ ಎರಡು ಪಕ್ಷದವರೂ ಈ ರೀತಿಯಾಗಿ ನಷ್ಟಪಡಬೇಕಾಗುವುದು. ಅದು ನನಗೆ ಇಷ್ಟವಿಲ್ಲವಾದುದರಿಂದ ರಾಜಿಮಾಡಿ ... ಕೂಡ ರಾಜಿಮಾಡಲು ಶಕ್ತಿಮೀರಿ ಪ್ರಯತ್ನಪಡಬೇಕೆಂದು ತೀರ್ಮಾನಿಸಿದೆನು. ... ಕಡೆಗೆ ತಾಯಬ್ ಸೇಠರು ಒಪ್ಪಿದರು. ಒಬ್ಬ ಮಧ್ಯಸ್ಥರನ್ನು ನಿಯಮಿಸಿದರು. ಅವರು ವಿಚಾರಣೆ ಮಾಡಿದರು. ದಾದಾ ಅಬ್ದುಲ್ಲಾರವರಿಗೆ ಅನುಕೂಲವಾಗಿ ತೀರ್ಪನ್ನು ಕೊಟ್ಟರು. ಆ ತೀರ್ಪನ್ನು ಕೂಡಲೇ ಅನುಸರಿಸಿದ ಕಾಲದಲ್ಲಿ ಅ... ಪ್ಪಂದು ಹಣವನ್ನು ಒಂದಾವರ್ತಿಗೆ ತಾಯಬ್ ಸೇಠರು ಕೊಡಲಾರರು. ಪೋರುಬಂದರಿನ ಮೆಮನ್ನರಲ್ಲಿ ಒಂದು ಸಂಪ್ರದಾಯವಿರುವುದು. ಅವರು ದಿವಾಳಿಯಾಗಲು ಎಂದಿಗೂ ಅಂಗೀಕರಿಸುವುದಿಲ್ಲ. ಅವರ ಸ್ಥಿತಿ ಒಂದಲ್ಲಿ ಆ ... ತ್ತವನ್ನು ಮಾಡಬೇಕಾದ್ದರಿಂದು ನಾನು ಕೇಳಿಕೊಂಡೆನು. ಅ... ಪಡು ಸಾವಿರದ 181,000 ರೂ.ಗಳನ್ನು, ದಾದಾ ಬಿಡಿ... ಸ್ತು ತಯಬ್ ಸೇಠರು ಒಂದೇ ಗಂಟಿನಲ್ಲಿ ದಾದಾ ಅಬ್ದುಲ್ಲಾ... ಗೆ ಕೊಡಬೇಕಾಗಿದ್ದುದರಿಂದ ತಯಬ್ ಸೇಠರು ದಿವಾಳಿಯಾಗಲು ಅಂಗೀಕರಿಸಲಿಲ್ಲ, ಏನಾದರೂ ಕಡಿಮೆ ಮಾಡಬೇಕೆಂದು ಕೇಳಿಕೊಳ್ಳಲಿಲ್ಲ. ಅದ್ದರಿಂದ ಮಾಡುವ ವೇಳೆ ತೀರಿಸಲು ಅವರಿಗೆ ಸುಲಭವಾಗಿದ್ದಿತು. ಅವಕ್ಕೆ ಎರಡು ಪಕ್ಷದವರೂ ಒಪ್ಪುತ್ತಿರುವಂತೆ ಮಾಡುವುದೂ ಕಷ್ಟಕರವಾಗಿ ನನಗೆ ತೋರಿತು. ಆದರೂ ಕಡೆಗೆ ಆ ಪ್ರಯತ್ನವು ಸಫಲವಾಯಿತು. ತಾಯಬ್ ಸೇಠರಿಗೆ ಬಹಳ ಅನುಕೂಲವಾಗುವ ಹಾಗೆ ದೀರ್ಘ ಕಾಲದ ... ದಾದಾ ಅಬ್ದುಲ್ಲಾಯವರು ಅಂಗೀಕರಿಸಿ ಕಂತು ... ವನ್ನು ನಿಶ್ಚಯಿಸಿದರು. ನನಗೆ ಬಹಳ ಸಂತೋಷವಾಯಿತು. ವಕೀಲನ ಮುಖ್ಯ ಕರ್ತವ್ಯವನ್ನು ನಾನು ಆಗ ಗ್ರಹಿಸಿಕೊಂಡವನಾದೆನು. ಮನುಷ್ಯನನ್ನು ಯೋಗ್ಯನಾಗಿ ಪ್ರ... ಸಹ ಎರಡು ಪಕ್ಷದವರುಗಳ ಸ್ನೇಹವನ್ನುಂಟುಮಾಡುವುದೇ ಆತನ ಮುಖ್ಯ ಕರ್ತವ್ಯವು. ಈ ಮುಖ್ಯಾಂಶವು ನನ್ನ ಮನಸ್ಸಿನಲ್ಲಿ ನಾಟಿ ಹೋಯಿತು. ನಾನು ಇಪ್ಪತ್ತು ವರ್ಷ ಅಡ್ವಕೇಟಾಗಿದ್ದೆನು. ಆ ಕಾಲದಲ್ಲಿ ಎಷ್ಟೋ ದಾವೆಗಳಲ್ಲಿ ಹೀಗೆಯೇ ಮಧ್ಯಸ್ಥಿಕೆಯ ಮೂಲಕ ರಾಜಿಯಾಗುವಂತೆ ಮಾಡಿದೆನು. ಅದರಿಂದ ನನಗೆ ಯಾವ ನಷ್ಟವೂ ಆಗಲಿಲ್ಲ; ಧನ ನಷ್ಟವೂ ಸಹ ಉಂಟಾಗಲಿಲ್ಲ.

ಧೂಮಪಾನವೂ ಮಾನಸಿಕ ಶಕ್ತಿಯೂ.

(ಆರೋಗ್ಯದ ಮೇಲೆ ಹೊಗೆಸೊಪ್ಪಿನ ಪರಿಣಾಮ; ಅಮೇರಿಕದಲ್ಲಿ ಮಾಡಿದ ಶೋಧನೆಗಳು)

ಆಧುನಿಕ ಸಮಯದಲ್ಲಿ ಧೂಮಪಾನವು ಚಟವೃದ್ಧಿಯು ಎಲ್ಲಾ ದೇಶಗಳಲ್ಲಿಯೂ ಹೆಚ್ಚುತ್ತಿರುವುದು. ಇದರಿಂದ ಆರೋಗ್ಯದ ಮೇಲಾಗುವ ಪರಿಣಾಮವೇನು? ಧೂಮಪಾನದಿಂದ ಮಾನಸಿಕ ಶಕ್ತಿಯು ಕುಂದುವುದೋ? ಅಥವಾ ಅಭಿವೃದ್ಧಿಗೊಳ್ಳುವುದೋ? ಎಂಬ ವಿಷಯವನ್ನು ವಿಚಾರಿಸಿ ಒಂದು ದೃಢ ನಿಷ್ಕರ್ಷೆಯನ್ನು ಮಾಡಿದವರಿಲ್ಲವೆನ್ನಬಹುದು. ವೈಜ್ಞಾನಿಕ ದೃಷ್ಟಿಯಿಂದ ಇದರ ಗುಣಾವಗುಣಗಳನ್ನು ಕಂಡು ಹುಡುಕಿದವರು ವಿರಳ. ಕಾಫಿ, ಚಹಾ ಪಾನಗಳನ್ನು ಬಿಟ್ಟರೆ, ಧೂಮಪಾನದಿಂದಲೇ ಮನುಷ್ಯನ ದೇಹದೊಳಗೆ ಹೆಚ್ಚಾದ ರಸಾಯನಿಕ ಪದಾರ್ಥಗಳ ಪ್ರವೇಶವಾಗುವುದೆಂಬುದು ತಿಳಿದಿದೆ. ಆದರೆ ಇದಕ್ಕೆ ವಿರೋಧವಾಗಿರುವುಗಳು, ಅನುಕೂಲವಾಗಿರುವುಗಳು, ನಿರ್ದಿಷ್ಟವಾದ ಅಭಿಪ್ರಾಯಗಳನ್ನು ಶೋಧನೆಯ ಮೂಲಕ ಕೊಟ್ಟವರು ಕಡಿಮೆ.

ಧೂಮ ಸೇವನೆಯನ್ನು ಎಷ್ಟೋ ಮಂದಿ ಹೇಯವೆಂದು ಖಂಡಿಸುತ್ತಿರುವವರೂ, ಅವಿಸ್ಸು ಉಳಿದಿದೆ; ಸಾಲುದುದಕ್ಕೆ ಆ ಚಟವು ಹೆಚ್ಚುತ್ತಿದೆ. ಈಗ ಅಲ್ಲಲ್ಲಿ ನಡೆಯುತ್ತಿರುವ ಶೋಧಗಳಿಂದ, ಧೂಮಪಾನದಿಂದ ಎಷ್ಟು ಹಾನಿಗಳಾಗುವವೆಂದು ಹೇಳುವುದು ಗಣನೆಗೆ ಬರುತ್ತಿದೆ. ... ಅನೇಕರಲ್ಲಿ ಹೆಚ್ಚಿನವುಗಳಿಗೆ ಆಧಾರವಿಲ್ಲವೆಂದು ತಿಳಿದುಬರುತ್ತಿದೆ. ಅಧಿಕವಾಗಿ ಆರೋಗ್ಯವಾದ ಪರಿಸ್ಥಿತಿಗಳಲ್ಲಿ ಉಪಯೋಗಿಸಿದರೆ ತಂಬಾಕಿನಿಂದ ಹಾನಿಯುಂಟಾಗುವುದೆಂಬ ಮಾತು ನಿರ್ವಿವಾದವಾಗಿದೆ. ಆದರೆ ಅದರ ಮೇಲೆ ಆರೋಪಿಸುವ ಹೆಚ್ಚಿನ ದೋಷಗಳು ಸುಳ್ಳೆಂದು ಕಂಡು ಬರುವುವು. ಆದರೆ ಅದರಿಂದ ಕೆಲವು ಮಟ್ಟಿಗೆ ಅಜೀರ್ಣವುಂಟಾಗುವುದೆಂಬುದು ನಿಜವಾದುದು. ಮೇಧಾಶಕ್ತಿಯನ್ನೇ ರೀತಿಯಲ್ಲಿ ಮುಂದಗೊಳಿಸುವುದರಿಂದಲೇ ಹಸಿವನ್ನು ಕಡಿಮೆ ಮಾಡುವುದೆಂದು ಜನರು ಅರಿತುಕೊಳ್ಳತಕ್ಕದ್ದು. ಅಲ್ಲದೆ ಇನ್ನು ಕೆಲವರು ಧೂಮಸೇವನೆ ಹೃದಯದ ಮೇಲೆ ದುಷ್ಪರಿಣಾಮವನ್ನುಂಟುಮಾಡುವುದೆಂದೂ ಅದರಿಂದಲೇ, ಕ್ಷಯರೋಗವು ಕ್ರಮೇಣವುಂಟಾಗುವುದೆಂದೂ ಹೇಳುವರು. ಆದರೆ ಬಡವರಲ್ಲಿ, ಜನರಲ್ಲಿ, ಕಾಲ್ತಗಳಲ್ಲಿರುವವರಲ್ಲಿ ಬಹಳ ಸಮ ಧೀರಾದ ವ್ಯಾಯಾಮವನ್ನು ಮಾಡುವ ಮಂದಿ ಧೂಮಸೇವನೆಯ ಚಟಕ್ಕೆ ಒಳಗಾದವರು, ಇದರಿಂದ ಅವರ ಗುಣದೋಷ ನಿಷ್ಕರ್ಷೆಯನ್ನು ಮಾಡುವುದಕ್ಕೆ ಸಾಕಷ್ಟು ಶೋಧನೆ ನಡೆದಿಲ್ಲವೆಂದೇ ಹೇಳಬೇಕಾಗಿರುವುದು.

ಹೃದಯದ ಮೇಲೆ ತಂಬಾಕಿನ ಪರಿಣಾಮವನ್ನು ಕಂಡು ಹಿಡಿಯುವುದಕ್ಕೆ ಅನೇಕ ವೈದ್ಯಶಾಸ್ತ್ರಜ್ಞರು ಪ್ರಯತ್ನಿಸಿದರು. ಅದರಿಂದ ಆರೋಗ್ಯ ಧೂಮಸೇವನೆಯು ಹೃದಯಕ್ಕೆ ಹಾಗೂ ಆರೋಗ್ಯವಂತರಾದ ವ್ಯಕ್ತಿಗಳ ನಾಡಿಯ ಚಲನೆಯು ಇತರರ ನಾಡಿಯ ಚಲನೆಯಂತೆ ಸ್ವಲ್ಪ ವೇಗವಾಗಿ ... ತಿಳಿದುಬಂತು. ಅದರ ಬಳಿಕ ... ಶೋಧಗಳಲ್ಲಿ ಅಮೇರಿಕದ ಕಾಲೇಜುಗಳಲ್ಲಿ ನಡೆಸಿದ ಶೋಧವು ಮುಖ್ಯವಾದುದಾಗಿದೆ. 1900ರಲ್ಲಿ ಕ್ಲಾರ್ಕ್ ಕಾಲೇಜಿನ ವಿದ್ಯಾರ್ಥಿಗಳೊಳಗೆ ಧೂಮ ಸೇವಕರು ನೂರರ 18ರಷ್ಟು, ಆ ಚಟವಿಲ್ಲದವರು ನೂರರ 68ರಷ್ಟೂ ಪರೀಕ್ಷೆಗಳಲ್ಲಿ ಬಹು ಮಾನದೊಡನೆ ತೇರ್ಗಡೆ ಹೊಂದಿದರು. ಕೊಲಂಬಿಯದ ಮೇಳಿಸಾ ಕಾಲೇಜಿನಲ್ಲಿಯೂ, ಧೂಮಸೇವಕರು ಪರೀಕ್ಷೆಯಲ್ಲಿ ಉಳಿದವರಷ್ಟು ಉತ್ತೀರ್ಣರಾಗುವುದಿಲ್ಲವೆಂದು ಕಂಡುಬಂತು. ಆದರೆ ಇನ್ನಿಬ್ಬರು ಶಾಸ್ತ್ರಜ್ಞರು ಒಹಿಯೋವಿನಲ್ಲಿ ನಡೆಸಿದ ಶೋಧದಿಂದ, ಧೂಮಸೇವನೆ ಮಾಡುವ ವಿದ್ಯಾರ್ಥಿಗಳು ಸ್ವಲ್ಪಮಟ್ಟಿಗೆ ಇತರರಿಗಿಂತ ಮಾನಸಿಕ ಶಕ್ತಿಯಲ್ಲಿ ಮಿಗಿಲಾಗಿರುವರೆಂದು ಹೇಳುತ್ತಿರುವರು. ಹುಟ್ಟೆಂದು ಪರೀಕ್ಷೆಯಲ್ಲಿ ಧೂಮಸೇವನೆಯು ಚಟವಿಲ್ಲದವರ ಬುದ್ಧಿಯು, ಹು... ಕಾಗಿರಬೇಕು ಎಂಬ ವಿಷಯವು ಶೋಧದಿಂದ ತಿಳಿದುಬಂತು.

ಸಾರಾಂಶವೇನೆಂದರೆ, ಧೂಮಪಾನದ ಗುಣಾವಗುಣಗಳನ್ನು ಸಂಪೂರ್ಣ ಕಂಡು ಹಿಡಿಯಲು ಇನ್ನು ವರೆಗೆ ವೈಜ್ಞಾನಿಕರಿಗೆ ಆಗಲಿಲ್ಲ. ಒಂದೆಡೆ ಅದರಿಂದ ಹಾನಿಯಿದೆಯೆಂದು ಕಂಡುಬಂದರೆ ಮತ್ತೊಂದೆಡೆ ಅದರಿಂದ ಗುಣಗಳುಂಟೆಂದು ಕಂಡುಬಂದಿದೆ. ಹೀಗಾಗಿ ಸರಿಯಾದ ನಿಷ್ಕರ್ಷೆಯೂ ಇನ್ನೂ ಆಗಿಲ್ಲ, ಅನೇಕ ಸುಪ್ರಸಿದ್ಧರಾಯರೂ, ಜ್ಞಾನಿಗಳೂ ಧೂಮಸೇವಕರಾಗಿದ್ದುದನ್ನು ನಾವು ಬಲ್ಲೆವು, ಅದುದರಿಂದ ಮಿತವಾಗಿ ಸೇವಿಸುವುದರಿಂದ ಯಾವ ಹಾನಿಯೂ ಇಲ್ಲ, ಎಂದು ಧೂಮಸೇವಕರು ಸಂತೋಷವನ್ನು ಹೊಂದಬಹುದಾಗಿದೆ.

"ನವಯುಗ"

ಪ್ರಕಟಣೆ.

ಕಿಗ್ಗಟ್ಟುನಾಡು ತಾಲೋಕು ಕೊಡವರಲ್ಲಿ ಮಾಚಿಮಾಡ ಪೊಜ್ಜೆಯ್ಯನ ವಿನಂತಿ.

ಬರುವ ಡಿಸಂಬರು ಯಾ ಜನವರಿ ತಿಂಗಳಲ್ಲಿ ಜರುಗಲಿರುವ ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರುತನಕ್ಕೆ ನಾನು ಕಿಗ್ಗಟ್ಟುನಾಡಿನ ಪರವಾಗಿ ಅಭ್ಯರ್ಥಿಯಾಗಿ ನಿಂತಿರುತ್ತೇನೆ. ನಾನು ನಡೆಸಬೇಕಾಗಿರುವ ಕೆಲಸಗಳನ್ನು ನಡಿಸಲು ಅರ್ಹನಾಗಿದ್ದೇನೆಂದು ನಿಮಗೆ ವಿಶದವಾಗಿ ಹೇಳುವುದು ಅತಿ ಸ್ಪಷ್ಟವಾಗಿರುತ್ತೇನೆ. ... ಎಲ್ಲಾ ಬಗೆಯ ಸರಕಾರದ ಆಡಳಿತದಲ್ಲಿ ಜಾಗ್ರತೆಯಾಗಿ ದೇಶದ ಅಭಿವೃದ್ಧಿ ಬಗ್ಗೆ ವಿಷಯಗಳನ್ನು ಚಾರಿಗೆ ತರುವುದರಲ್ಲಿ ತಕ್ಕ ವಿಷಯಗಳನ್ನು ಆಲೋಚನೆ ಪೂರ್ವಕವಾಗಿ ತೋಳಿ ಅದಕ್ಕೆ ನಡೆಯುವಂತೆ ಪ್ರಯತ್ನ ಮಾಡಬೇಕೆಂಬುದು ನನ್ನ ಅಭಿಪ್ರಾಯ. ಇವುಗಳೆಲ್ಲವನ್ನೂ ಆಲೋಚಿಸಿ ಕಿಗ್ಗಟ್ಟುನಾಡು ಪರವಾಗಿ ನಾನು ಮೆಂಬರನಾಗಲು ನನಗೆ ನಿಮ್ಮ ಮತವನ್ನು ಕೊಡುವಂತೆ ಕೇಳಿಕೊಂಡಿರುತ್ತೇನೆ.

ತಾ. 1—11—26. ಎಂ. ಪೊಜ್ಜೆಯ್ಯ.

ಕೌನ್ಸಿಲ್ ಮೀಟಿಂಗು.

(೨ ನೇ ಪುಟದಿಂದ ಮುಂದುವರಿದದ್ದು)

ತ ಮೊದಲೇ ಕೊಟ್ಟಿದ್ದ ಸೂಚನೆಗಳ ಮೇಲೆ ಚರ್ಚೆಯಾಯಿತು. ಪಂಚಾಯತಿಗಳಿಗೆ ಸಿವಿಲ್ ಕ್ರಿಮಿನಲ್ ಕೇಸ್‌ಗಳನ್ನು ತೀರ್ಮಾನಮಾಡುವ ಹಕ್ಕು ಕೊಡಬೇಕೆಂತ ಮ. ಚೌಡ್ಲು ಕಾಳಪ್ಪನವರು ಕಳುಹಿಸಿದ ಬದಲಾವಣೆ ಮೇಲೆ ಚರ್ಚೆ ನಡೆದು ಸೂಚನೆಯನ್ನು ವಾಪಸು ತೆಗೆದುಕೊಂಡರು. ಈ ಹಕ್ಕಿಲ್ಲದೆ ಪಂಚಾಯತಿಗಳಿಂದ ಪ್ರಯೋಜನವಿಲ್ಲವಂತ ಮ. ಕಾಳಪ್ಪನವರು ವಾದಿಸಿದರು. ಆ ಹಕ್ಕುಗಳನ್ನು ಈಗ ಚರ್ಚೆಯಲ್ಲಿರುವ ಬಿಲ್ಲಿಗೆ ಸೇರಿಸಲಾಗುವದಿಲ್ಲ, ಸೇರಿಸಲೇಬೇಕಂತ ವಾದಿಸಿದರೆ ಈ ಬಿಲ್ಲನ್ನು ಈಗ ಇರುವ ಕೌನ್ಸಿಲಿನಲ್ಲಿ ಪಾಸ್ ಮಾಡಲಾಗುವದಿಲ್ಲ, ಜನರಿಗೆ ಬೇಕಂತ ಅವಶ್ಯ ಇದ್ದರೆ ಬೇರೆ ಕಾನೂನು ಮಾಡಿಕೊಳ್ಳಬಹುದು ಎಂತ ಮುಂತಾಗಿ ಸಿಲೆಕ್ಟ್ ಕಮಿಟಿಯಲ್ಲಿ ಆಲೋಚಿಸಿ ತೀರ್ಮಾನಿಸಲಾಗಿದೆಯೆಂತ ಫೈನಾನ್ಸ್ ಮೆಂಬರು ತಿಳಿಸಿದ ಮೇಲೆ ಈ ಸೂಚನೆಯನ್ನು ವಾಪಸು ತೆಗೆದುಕೊಂಡದ್ದಾಗಿದೆ.

ಪಂಚಾಯತುದಾರರ ಮೇಲೆ ಕಂದಾಯ ಹಾಕಬಹುದೆಂಬ ಪಟ್ಟಿಯಲ್ಲಿ ಪ್ರೀಸ್ಟುಗಳು ಎಂತ ಇರುವದನ್ನು ವಜಾಮಾಡಬೇಕೆಂಬ ಸೂಚನೆ ಮೇಲೆ ಮ. ಪಿಂಟೋರವರು ಹೇಳಿದ್ದೇನಂದರೆ—ಇವರು ಜನರ ಮತಸಂಬಂಧವಾದ ಕೆಲಸಗಳಿಗೆ ಬೇಕಾದವರಾಗಿದ್ದಾರೆ. ಇವರಿಗೆ ಉತ್ಪತ್ತಿ ಬಹಳ ಕಡಿಮೆ. ಇವರು ಪರದೇಶದಿಂದಲೇ ಬರಬೇಕಾಗಿದೆ ಎಂತ ಹೇಳಿದರು. ಮ. ಎ. ಪಿ. ಚಂಗಪ್ಪನವರು ಅನುಮೋದಿಸಿದರು. [illegible] ಮತಸಂಬಂಧವಾದ ಕೆಲಸಗಾರರು ಪ್ರೀಸ್ಟುಗಳು ಮಾತ್ರವಲ್ಲ, ಪುರೋಹಿತರು, ಅರ್ಚಕರು, ಕಾಜಿ ಎಂಬವರು ಸಹ ಈ ಪಟ್ಟಿಗೆ ಸೇರಿದ್ದಾರೆ. ಪ್ರೀಸ್ಟುಗಳನ್ನು ಮಾತ್ರ ವಜಾಮಾಡಿದರೆ ಬಾಕಿ ಮತದವರ ಆಕ್ಷೇಪಣೆ ಬರಬಹುದು, ವಜಾ ಮಾಡುವದಾದರೆ ಈ ಎಲ್ಲಾ ಮತಸಂಬಂಧದ ಕೆಲಸಗಾರರನ್ನು ಬಿಡಬೇಕು. ಇದಕ್ಕೆ ಸಭೆಯವರೆಲ್ಲರು ಒಪ್ಪುವದಾದರೆ ಆಗಬಹುದೆಂತ ಹೇಳಿದರು. ಮ. ಬಿ. ಶ್ರೀಪತಿರಾಯರು ಪ್ರೀಸ್ಟುಗಳಂತೆಯೇ ಪುರೋಹಿತರೂ ಅರ್ಚಕರೂ ಸಹ ಕಡಿಮೆ ಉತ್ಪತ್ತಿ ಇರುವವರು. ಅವರನ್ನೂ ಸಹ ವಿನಾಯಿತಿ ಮಾಡಬೇಕೆಂತ ವಾದಿಸಿದರು. ಮ. ಪಿ. ಬಿ. ಮೇದಪ್ಪನವರು ಗ್ರಾಮದಲ್ಲಿ ವಾಸ ಇರುವ ಎಲ್ಲಾ ಕಸುಬುದಾರರಿಗೂ ಕಂದಾಯ ಹಾಕಬಹುದೆಂತ ಇರುವಾಗ ಮತದ ಕಸುಬಿನಿಂದ ಸಂಪಾದನೆ ಮಾಡುವವರನ್ನು ವಿನಾಯಿಸಲು ಆಗುವದಿಲ್ಲ ಮುಂತಾಗಿ ವಿವರಿಸಿದರು. ಮ. ಪಿ. ಟಿ. ಕುಶಾಲಪ್ಪನವರೂ ಮ. [illegible] ಸುಬ್ಬಯ್ಯನವರೂ ಸಹ ಠರಾವಿಗೆ ವಿರೋಧಿಸಿದರು. ಮ. ಪಿಂಟೋರವರು ಪುರೋಹಿತ ಕಾಜಿಯನ್ನು ಸಹ ವಜಾಮಾಡಲು ತಾನು ಒಪ್ಪುತ್ತೇನಂತ ಹೇಳಿದರು. ಕಮಿಶನರು ಇದಕ್ಕೆ ಒಪ್ಪುವದಿಲ್ಲವಂತ ಹೇಳಿದ ಮೇಲೆ ಬಹುಮತದಿಂದ ಸೂಚನೆಯು ಮಂಜೂರಾಗಲಿಲ್ಲ.

ಬಿಲ್ಲನ್ನು ಒಪ್ಪಿಕೊಳ್ಳಬೇಕೆಂಬ ಠರಾವನ್ನು ಕಮಿಶನರು ಸಭೆಯ ಮುಂದೆ ಇಟ್ಟರು. ಮ. ಬಿ. ಶ್ರೀಪತಿರಾಯರು—ಇದು ಎರಡನೇ ಬಿಲ್ ಮಂಜೂರ್ ಆಗುವದಾಗಿದೆ. ಜನರಿಗೆ ಪ್ರಯೋಜನವಾಗುವ ಈ ಕಾನೂನನ್ನು ಸಭೆಯ ಮುಂದೆ ತಂದದ್ದಕ್ಕೆ ತಾನು ಕಮಿಶನರಿಗೆ ಅಭಿನಂದಿಸುತ್ತೇನೆ. ಆದರೆ ಪಂಚಾಯತಿಗಳಿಗೆ ಹಣ ಸಹಾಯ ಮಾಡಿ ಉತ್ತೇಜನ ಕೊಡುವದು ಸರಕಾರಕ್ಕೆ ಕೂಡಿದೆ ಎಂತ ಮುಂತಾಗಿ ಹೇಳಿದರು. ಮ. ಮನಿಯಪಂಡ ಚಿಣ್ಣಪ್ಪನವರು ಎಲ್ಲಿಗೆ ಒತ್ತಾಸೆಕೊಟ್ಟು ಪಂಚಾಯತಿಗಳಿಗೆ ಸರಕಾರದ ಹಣ ಸಹಾಯ ಸಿಕ್ಕಬೇಕೆಂತ ಹೇಳಿದರು. ಮ. ಮೇದಪ್ಪನವರು—ಪಂಚಾಯತಿಗಳು ಜಯಪ್ರದವಾಗಬೇಕಾದರೆ ಹಣವಿರಬೇಕಾದದ್ದೇ ಮುಖ್ಯವಲ್ಲ, ಮೇಲ್ವಿಚಾರ ಚೆನ್ನಾಗಿ ಇರಬೇಕು. ಊರೊಳಗೆ ಒಬ್ಬಿಬ್ಬ ಮುಖ್ಯಸ್ಥರು ಸೇರಿಕೊಂಡು ಪಂಚಾಯತಿಗಳನ್ನು ದುರುಪಯೋಗಪಡಿಸಬಹುದು, ಹೀಗಾಗದಂತೆ ನೋಡಿಕೊಳ್ಳುವದು ಅಧಿಕಾರಿಗಳ ಕೆಲಸವಾಗಿದೆ. ಚೆನ್ನಾಗಿ ನಡಿಸಿದರೆ ಹಣ ಸಿಕ್ಕಿಯೇ ಸಿಕ್ಕುತ್ತೆ ಎಂತ ಹೇಳಿ ಬಿಲ್ಲಿಗೆ ಒತ್ತಾಸೆ ಕೊಟ್ಟರು.

ಅನಂತರ ಸರ್ವಸಮ್ಮತದಿಂದ ಬಿಲ್ ಮಂಜೂರಾಯಿತು.

ಇದಾದ ಕೂಡಲೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ ಠರಾವುಗಳು ಚರ್ಚಿಸಲ್ಪಟ್ಟವು.

73 ಪ್ಲಾಂಟರುಗಳಿಗೂ ಮತ್ತು ಬೇರೆ ಭೂಮಾಲೀಕರಿಗೂ ಬ್ರೀಚ್ ಆಫ್ ಕಂಟ್ರಾಕ್ಟ್ ಕರಾರುಗಳಿಗೆ ಹಚ್ಚಿಸುವ ಸ್ಟಾಂಪಿನ ದರದಲ್ಲಿರುವ ವ್ಯತ್ಯಾಸವನ್ನು ತೆಗೆದುಹಾಕಬೇಕೆಂಬ ಠರಾವನ್ನು ಮ. ಪಂದ್ಯಂಡ ಬೆಳ್ಯಪ್ಪನವರು ಸೂಚಿಸಿ ಹೇಳಿದ್ದೇನಂದರೆ—ನಾನು ಇದರ ವಿಷಯ 1924ರಲ್ಲಿ ಬಜೆಟ್ ಚರ್ಚೆ ನಡೆದಾಗ ಇದು ಚೆನ್ನಾಗಿ ಚರ್ಚಿಸಲ್ಪಟ್ಟಿದೆ. ದೊಡ್ಡ ಪ್ಲಾಂಟರುಗಳು ಆಳುಗಳನ್ನು ಹೊರಗಿನ ಪ್ರಾಂತ್ಯಗಳಿಂದ ಕರತರಿಸುವುದರಿಂದಲೂ, ಹೆಚ್ಚು ಆಳುಗಳನ್ನು ಇಡುವುದರಿಂದಲೂ ಈ ರಿಯಾಯಿತಿಯು 10 ಎಕ್ರೆ ಮೇಲೆ ತೋಟವಿರುವವರಿಗೆ ಕೊಡಲಾದದ್ದೆಂದು ಹೇಳುತ್ತಾರೆ. ಈ ದೇಶದಲ್ಲಿ ಜಮೀನ್ದಾರರಿಗೂ ಆಳುಗಳು ಹೊರಗಿನಿಂದ ಬರಬೇಕಾಗಿದೆ ಮತ್ತು (ಹತ್ತು ಎಕ್ರೆ ಕಾಫಿ ತೋಟಕ್ಕೆ ಬೇಕಾದ) ಹತ್ತು ಆಳುಗಳಿಗಿಂತ ಹೆಚ್ಚು ಆಳುಗಳನ್ನಿಟ್ಟಿರುವ ಜಮೀನುದಾರರು ಎಷ್ಟೋ ಇರುವರು. ಈ ರಿಯಾಯಿತಿಯನ್ನು ದೊಡ್ಡ ಪ್ಲಾಂಟರುಗಳಿಗಿಂತ ಸಣ್ಣ ಹಿಡುವಳಿದಾರರಾದ ಬಡವರಿಗೇ ಕೊಡಬೇಕಾದದ್ದು. ಈ ಸ್ಟಾಂಪು ಚಾರ್ಜು ಆಳುಗಳ ಮೇಲೆ ಬೀಳುವದರಿಂದ ತೋಟದಲ್ಲಿಯೂ ಗದ್ದೆಯಲ್ಲಿಯೂ ಕೆಲಸ ಮಾಡುವ ಒಂದೇ ಸ್ವಭಾವದ ಆಳುಗಳಿಗೆ ವ್ಯತ್ಯಾಸ ಮಾಡುವುದು ಸರಿಯಲ್ಲ. ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟು ದೇಶದ ಎಲ್ಲರಿಗೂ ವ್ಯಾಪಿಸುವದರಿಂದ ಅಂಥಾ ಕರಾರುಗಳ ಸ್ಟಾಂಪು ಎಲ್ಲರಿಗೂ ಒಂದೇ ಸಮಾನವಾಗಿರಬೇಕು. ಆದುದರಿಂದ ಈ ವ್ಯತ್ಯಾಸವನ್ನು ಹೋಗಲಾಡಿಸುವಂತೆ ಸ್ಟಾಂಪು ಆಕ್ಟನ್ನು ತಿದ್ದುಪಡಿ ಮಾಡಲು ಇಂಡಿಯಾ ಸರ್ಕಾರವನ್ನು ಕೇಳಿಕೊಳ್ಳಬೇಕಾಗಿದೆ.

ಈ ಠರಾವನ್ನು ಮ. ಬಿ. ಶ್ರೀಪತಿರಾಯರು ಅನುಮೋದಿಸಿದರು.

ಮ. ಟಿ. ಡಿ. ಟಾಸ್ಕರ್‌ರವರು ಇದೇ ವಿಷಯದಲ್ಲಿ ಬಜೆಟ್ ಠರಾವು ಚರ್ಚಿಸುವಾಗ [illegible] ಇದೆಯೆಂತ ನಾನು ಹೇಳಲಿಲ್ಲ. ಒಪ್ಪಿದ ಠರಾವಿಗೆ ಒಪ್ಪಿಕೊಳ್ಳಲಿಕ್ಕಾಗುವದಿಲ್ಲವೆಂತ ಹೇಳಿದ್ದೇನಷ್ಟೆ. ಈಚೆಗೆ ಪ್ರಕಟವಾದ ಟ್ಯಾಕ್ಸೇಶನ್ ಎಂಕ್ವಯರಿ ಕಮಿಟಿಯ ಶಿಫಾರಸ್ಸು ಮೇರೆ ಸ್ಟಾಂಪು ಉತ್ಪತ್ತಿಯನ್ನು ಮಧ್ಯವರ್ತಿ ಸರಕಾರವು ವಹಿಸಿಕೊಳ್ಳುವ ಅಭಿಪ್ರಾಯದಲ್ಲಿದ್ದಾರೆ. ಅದ್ದರಿಂದ ನಮ್ಮ ಆದಾಯ ಹೆಚ್ಚುವ ಈ ಠರಾವಿನಿಂದ ಬಾಧಿಸಲ್ಪಡುವದಿಲ್ಲ. ಎಲ್ಲರೂ ಒರೆಸಿ [illegible] ಕರಾರುಗಳಿಗೆ ಒಂದೇ ದರದ ಸ್ಟಾಂಪು ಇರಬೇಕೆಂಬ ವಾದಕ್ಕೆ ಈ ಕೌನ್ಸಿಲಿನಲ್ಲಿ ಪಾಸಾದ ನೌಕರ ಆಕ್ಟಿನಿಂದ ಬಲಬಂದಿದೆ. ಈಚೆಗೆ ಪ್ಲಾಂಟರುಗಳಿಗೆ ಇರುವ ಈ ರಿಯಾಯಿತಿಯನ್ನು ಯಾಕೆ ತೆಗೆದುಬಿಡಬಾರದೆಂತ ಇಂಡಿಯಾ ಸರ್ಕಾರದವರು ಯೋಚಿಸಿದ್ದಾರೆ. ಆದ್ದರಿಂದ ನಾನು ಇದರ ತೀರ್ಮಾನವನ್ನು ಈ ಸಭೆಯ ಅಭಿಪ್ರಾಯಕ್ಕೆ ಬಿಡುತ್ತೇನೆ. ಆದರೆ ಈ ಸ್ಟಾಂಪು ಖರ್ಚು ಯಾರ ಮೇಲೆ ಬೀಳುತ್ತದೆಯೆಂದು ತಿಳಿಯಬೇಕು. ದರ ಒಂದೇ ಆಣೆ ಇರಬೇಕೋ, ಯಾ ಹೆಚ್ಚಿರಬೇಕೋ ಎಂತ ತಿಳಿಯಬೇಕಾಗಿದೆ ಎಂದು ಹೇಳಿದರು.

ಸ್ಟಾಂಪು ಚಾರ್ಜು ನೌಕರರ ಮೇಲೆ ಬೀಳುವುದರಿಂದ ಈಗಿರುವ ರಿಯಾಯಿತಿಯನ್ನು ತೆಗೆದು ಹಾಕದೆ ಎಲ್ಲರಿಗೂ ಒಂದೇ ದರ ಮಾಡಬೇಕೆಂದು ಹೇಳಿ ಮ. ಟಿಪ್ಪಿಂಗ್‌ರವರು ಠರಾವಿಗೆ ಒತ್ತಾಸೆ ಕೊಟ್ಟರು.

ಮ. ಪಿ. ಟಿ. ಕುಶಾಲಪ್ಪನವರು ಹೇಳಿದ್ದೇನಂದರೆ — ಕೊಡಗಿನಲ್ಲಿ ಎಲ್ಲಾ ತರದ ಭೂಮಿ ವ್ಯವಸಾಯಕರೂ ಹೊರ ಪ್ರದೇಶಗಳಿಂದ ಕೂಲಿಗಾರರನ್ನು ಕರೆಸಬೇಕಾಗಿರುವದರಿಂದಲೇ ಎಲ್ಲರಿಗೂ ವ್ಯಾಪಿಸುವ ಒಂದು ಆಕ್ಟನ್ನು ಸರಕಾರವು ಮಂಜೂರು ಮಾಡಿದರು. ಪ್ಲಾಂಟರುಗಳಿಗೂ ಇತರ ಜಮೀನ್ದಾರರಿಗೂ ಸ್ಟಾಂಪು ದರದಲ್ಲಿ ವ್ಯತ್ಯಾಸವಿರುವುದು ನ್ಯಾಯಸಮ್ಮತವಲ್ಲ. ಬೇರೆ ದೇಶಗಳಲ್ಲಿ ವ್ಯತ್ಯಾಸವಿರುವುದರಿಂದ ಇಲ್ಲಿ ಇರಬೇಕೆಂಬುದು ಸರಿಯಲ್ಲ. ನಿಜವಾಗಿಯೂ ಕೊಡಗಿನಲ್ಲಿ ಎಲ್ಲಾ ವ್ಯವಸಾಯಕರೂ ಪ್ಲಾಂಟರುಗಳೆಂದೇ ಹೇಳಬೇಕು. ಠರಾವಿನಲ್ಲಿ ಇಂತಿಷ್ಟೇ ದರವಿರಬೇಕಾದು ಹೇಳಿಲ್ಲವಾದುದರಿಂದ ಸರ್ವಸಮ್ಮತವಾದ ಒಂದು ದರವಿಡುವುದಕ್ಕೆ ಅನುಕೂಲವಾಯಿತು. ಆದರೆ ಕಮ್ಮಿ ದರವಿಡುವುದರಿಂದ ಕೂಲಿಯವರಿಗೆ ಹೊರೆ ಕಡಿಮೆಯಾಗುವುದು. ಈ ವಿಷಯ ಲಾಗಾಯ್ತಿನಿಂದ ದೇಶದಲ್ಲಿ ಹೋರಾಟವಿರುವುದು ತಿಳಿಯದಲ್ಲ ಎಂತ ಹೇಳಿ ಠರಾವಿಗೆ ಒತ್ತಾಸೆ ಕೊಟ್ಟರು.

ಪ್ಲಾಂಟರುಗಳ ಆಳುಗಳು ಹೊರಪ್ರಾಂತ್ಯದಿಂದ ಬರುವುದರಿಂದಲೇ ಈ ರಿಯಾಯಿತಿಯು ಕೊಡಲ್ಪಟ್ಟಿರುವುದಾಗಿಯೂ ಇದನ್ನು ತೆಗೆಯದೆ ಎಲ್ಲರಿಗೂ ಇದು ವ್ಯಾಪಿಸುವಂತೆ ಮಾಡಬೇಕೆಂದೂ ಮ. ರೈಮಂಡ್‌ರವರು ಹೇಳಿದರು.

ಮ. ಪಿ. ಬಿ. ಮೇದಪ್ಪನವರು—ನಮ್ಮ ನೌಕರ ಬರಾರಿನ ಆಕ್ಟು ಪಾಸಾದ ಮೇಲೆ ಇಂಡಿಯಾ ಸರಕಾರದ ನೋಟಿಫಿಕೇಶನ್ ಆಗಬೇಕಾಗುತ್ತದೆಯೇ ಎಂಬ ಸಂಶಯವನ್ನು ಸೂಚಿಸಿದ್ದಕ್ಕೆ ಫೈನಾನ್ಸ್ ಮೆಂಬರು ನೋಟಿಫಿಕೇಶನನ್ನು ಓದಿ ಹೇಳಿ ವ್ಯಾಪಿಸುತ್ತದೆಯೆಂತ ಹೇಳಿದರು. ಅನಂತರ ಮ. ಮೇದಪ್ಪನವರು ಒಂದೇ ದರವಾಗಬೇಕೆಂಬುದಕ್ಕೆ ತಾನು ಒಪ್ಪುತ್ತೇನೆ. ಆದರೆ ಸರಕಾರಕ್ಕೆ ಬರುವ ಉತ್ಪತ್ತಿ ಕಡಿಮೆಯಾಗದಂತೆ ಎಲ್ಲರಿಗೂ ಹನ್ನೆರಡಾಣೆಯಂತೆ ಕೊಡುವಂತೆ ಮಾಡುವದು ಒಳ್ಳೇದು ಎಂತ ಹೇಳಿದರು.

ಮ. ಎ. ಬಿ. ಚಂಗಪ್ಪನವರು ಸಹ ಠರಾವಿಗೆ ಒತ್ತಾಸೆಯಾಗಿ ಮಾತನಾಡಿ ಮಾಲೀಕರು ಸ್ಟಾಂಪು ಚಾರ್ಜನ್ನು ನೌಕರರ ಮೇಲೆಯೇ ಹಾಕುತ್ತಾರೆ. ಬಹು ಕಾಲ ಒಬ್ಬನಲ್ಲೇ ಇದ್ದ ನೌಕರನಾದರೆ ಅಂಥವನಿಗೆ ಸ್ಟಾಂಪು ಖರ್ಚನ್ನು ಹಾಕದೆ ಇರುವದೂ ಇದೆ. ೨೦ರೂ ಗಿಂತ ಹೆಚ್ಚಿನ ಅಡ್ವಾನ್ಸಿಗೆ ಒಂದೇ ದರವಿರಬೇಕಾದದ್ದು ಯುಕ್ತ. ಕಡಿಮೆ ಮೊಬಲಗುಗಳಿಗೆ ಫೈನಾನ್ಸ್ ಕಮಿಟಿಯವರು ಯೋಚಿಸಿದ ಮೇರೆ ಎಲ್ಲರಿಗೂ ಸ್ವಲ್ಪ ಮಟ್ಟಿಗೆ ಅಥವಾ 12 ಆಣೆಕ್ಕೇನೇ ಹೆಚ್ಚಿಸುವದು ಉತ್ತಮ. ಅದರಿಂದ ಉತ್ಪತ್ತಿಯು ಹೆಚ್ಚು ಬರುತ್ತದೆಯೆಂತ ಹೇಳಿದರು.

ಮ. ಸಿ. ಎನ್. ವೆಂಕಪ್ಪಯ್ಯನವರು—ಈಗ ಕೇಳಿದ ಭಾಷಣಗಳಿಂದ ಒಂದೇ ದರವಿರಬೇಕೆಂಬ ತತ್ವಕ್ಕೆ ಫೈನಾನ್ಸ್ ಮೆಂಬರೂ ಪ್ಲಾಂಟರುಗಳೂ ಸಹ ಒಪ್ಪುತ್ತಾರೆಂತಾಯಿತು. ಫೈನಾನ್ಸ್ ಮೆಂಬರು ಕೇಳಿದ ಪ್ರಶ್ನೆಗೆ ಸರಿಯಾದ ಜವಾಬು ದೊರೆಯಲಿಲ್ಲ. ಸ್ಟಾಂಪು ಚಾರ್ಜು ಯಾರ ಮೇಲೆ ಬೀಳುತ್ತದೆ ಎಂಬ ಪ್ರಶ್ನೆಗೆ ಪ್ಲಾಂಟರು ಮೆಂಬರುಗಳಿಂದ ನೌಕರನ ಮೇಲೆಯೇ ಬೀಳುತ್ತದೆಯೆಂತ ತಿಳಿಯಿತು. ಹಾಗಿರುವಾಗ ದರವನ್ನು ಒಂದಾಣೆಗೇನೇ ಇಳಿಸುವದು ಯುಕ್ತವಾಗಿದೆ. ಸ್ಟಾಂಪು ಉತ್ಪತ್ತಿ ಇಂಡಿಯಾ ಸರಕಾರದ ಪಕ್ಕಾದರೆ ಈ ದರವನ್ನು ಒಂದಾಣೆಗೆ ಇಳಿಸುವದರಿಂದ ನಮ್ಮ ಸರಕಾರದ ಆದಾಯಕ್ಕೆ ಏನೂ ಬಾಧಕವಿಲ್ಲದ್ದರಿಂದ ಒಂದಾಣೆಗೆ ಇಳಿಸಲಿಕ್ಕೆ ಏನೂ ಕಷ್ಟವಿಲ್ಲದಂತಾಯಿತು. ನೌಕರ ಬರಾರುಗಳ ಹೆಚ್ಚಿನ ಸಂಖ್ಯೆ ಹತ್ತು, ಹದಿನೈದು ರೂಪಾಯಿಗಳಿಗಾಗಿ ಆಗುವದಾಗಿದೆ. ಆದ್ದರಿಂದ ಅದಕ್ಕಾಗಿ ಮೇಲೆ ಹನ್ನೆರಡಾಣೆ ಹಾಕುವದು ಯುಕ್ತವಲ್ಲ. ಮ. ಮೇದಪ್ಪನವರೂ, ಚಂಗಪ್ಪನವರೂ, 12 ಆಣೆ ಆಗಬೇಕೆಂದರೂ ಸಹ ಈ ಸಭೆಯ ಹೆಚ್ಚಿನ ಅಭಿಪ್ರಾಯವು [illegible] ಎಲ್ಲಾ ಕರಾರುಗಳನ್ನೂ ಇಳಿಸಬೇಕೆಂತ [illegible] ಎಂತ ಹೇಳಿದರು.

ಓಟಿಗೆ ಹಾಕಿ ಸರ್ವಸಮ್ಮತದಿಂದ ಮಂಜೂರಾಯಿತು.

[ಸೂಚನೆ —ಮೇಲಿನವು ಮೆಂಬರುಗಳ ಭಾಷಣದ ಸಾರಾಂಶ ಮಾತ್ರವಾಗಿದೆ]

(ಮುಂದುವರಿಯುವುದು)

ವರ್ತಮಾನ ಸಂಗ್ರಹ.

ಒಳದೇಶ

ಇಂಪೀರಿಯಲ್ ಪೊಲೀಸು ಸರ್ವೀಸ ಪರೀಕ್ಷೆಗಳು ಆರಿಸಲ್ಪಟ್ಟವರಲ್ಲಿ ಮ. ನೆರವಂಡ ಕುಟ್ಟಪ್ಪನವರೊಬ್ಬರಾಗಿರುತ್ತಾರೆ.

ಶಿವಮೊಗ್ಗದ ಮ. ಎಂ. ಮಂಜಪ್ಪನವರ ಟಿ ಮೋಟಾರು ಸರ್ವಿಸು ಈ ತಾ ಒಂದರಿಂದ ಮೈಸೂರು ಮಡಿಕೇರಿ ಟಪ್ಪಾಲನ್ನು ಸಾಗಿಸಲು ಪ್ರಾರಂಭಿಸಿದೆ.

ಚೆಟ್ಟಿಮಾಡ ಗಣಪತಿಯವರು ಮದ್ರಾಸಿನ ಈ ವರ್ಷದ ಎಲ್. ಎಂ. ಆಂಡ್ ಎಸ್. ಪರೀಕ್ಷೆಯಲ್ಲಿ ಪಾಸಾದರೆಂದು ತಿಳಿದು ಸಂತೋಷಪಡುತ್ತೇವೆ.

ಕಮಿಷನರವರು ಈ ತಾ 14ರಲ್ಲಿ ಕೊಡ್ಲಿಪೇಟೆಗೆ ಹೋಗುವರೆಂದೂ, ಅದೇ ವಾರ ಸೋಮವಾರಪೇಟೆ ಪತ್ತೆ ವಾರಸಂತೆ ಒಪ್ಪಬಂದಿಗಳನ್ನು ನಡಿಸುವರೆಂದೂ [illegible]ತ್ತಾರೆ.

ತಾವುನಾಡು, ಕಾಂತುಮುರ್ನಾಡು, ಬಿದರೂರು ಮ್ಮನೆ ಮತ್ತು ಬೇಂಗುನಾಡು ದನಗಳ ವಿಮೆ ಸಂಘದ ಡೇರೆಕ್ಟರಾಗಿ ಮ. ಪಟ್ಟಮಾಡ ಸಿ. ಚಂಗಪ್ಪನವರ ಬದಲು ಪಟ್ಟಮಾಡ ಯಂ ಪೊನ್ನಪ್ಪನವರನ್ನು ನೇಮಿಸಿರುತ್ತಾರೆ.

ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯು ಡಿಸೆಂಬರ 20ರಲ್ಲಿ ನಡೆಯುವುದು. ಕೌನ್ಸಿಲು ಚುನಾವಣೆಯು ಇನ್ನೂ ನಿಶ್ಚಯಿಸಲ್ಪಟ್ಟಿಲ್ಲವಾದರೂ ಜನವರಿ ಆಖೈರು ವಾ ಫೆಬ್ರವರಿ ಪ್ರಾರಂಭದಲ್ಲಿ ನಡೆಯಬಹುದೆಂದು [illegible]ನವಿದೆ.

ಚೀಫ್ ಕಮಿಷನರವರು ಈ ತಾ 6ರಲ್ಲಿ ಮಡಿಕೇರಿ ಬಿಟ್ಟು ಮೈಸೂರಿಗೆ ಹೋಗಿ ಅಲ್ಲಿಂದ ತಾ. 7 ರಲ್ಲಿ ಬೆಂಗಳೂರಿಗೆ ಹೋಗಿರುವರು. ಅವರು ಬೇಗನೆ ಡೆಲ್ಲಿಗೆ ಹೋಗುವರು. ಇನ್ನು ಅವರು ಕೊಡಗಿಗೆ ಬರುವದು [illegible] ತಿಂಗಳಲ್ಲಿ ಮಾತ್ರ ಬರುವರೆಂದು ತಿಳಿಯುತ್ತೇವೆ.

ಗೋಸಂರಕ್ಷಣ ಕಮಿಟಿಯ ಮೀಟಿಂಗು ತಾ. 3 ರಲ್ಲಿ ಮಡಿಕೇರಿಯಲ್ಲಿ ನಡೆಯಿತು. ಈ ತಾ 11 ಮತ್ತು 12ರಲ್ಲಿ [illegible]ಪೇಟೆ ಸುತ್ತಲೂ, 13 ರಲ್ಲಿ ಶನಿವಾರಸಂತೆ ಸುತ್ತಲೂ, [illegible]ಲ್ಲಿ ಕೊಡ್ಲಿಪೇಟೆ ಸುತ್ತಲೂ, 15 ರಲ್ಲಿ ಸೋಮವಾರಪೇಟೆ ಸುತ್ತಲೂ ಇವರು ದನಗಳ ವಿಚಾರ ನಡಿಸುವರಾಗಿ ತಿಳಿಯುತ್ತೇವೆ.

ಈ ವಾರ ಸೋಮವಾರಪೇಟೆ ನಾಡಿನ ಬಾಣಾವರದ [illegible] ಮ. ಕೊಣಂದೇರ ಅಪ್ಪಯ್ಯನವರು ಕೋವಿ ಸಮೇತ ಕಾಡಿನಲ್ಲಿ ಹೋಗುತ್ತಿದ್ದಾಗ ಒಂದು ಆನೆಯನ್ನು ಎದುರುಗೊಂಡು ಅದರ ಕೈಗೆ ಸಿಕ್ಕಿಬಿದ್ದು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು. ಅವರ ಪ್ರಯತ್ನದಲ್ಲಿ ಪಕ್ಕೆಲುಬು ಮುರಿದು ಗಾಯವಾದರೂ ಪ್ರಾಣರಕ್ಷಣೆ ಮಾಡಿಕೊಂಡರು. ಅವರು ಈಗ ಸೋಮವಾರಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲು ಮೀಟಿಂಗು ತಾ 3 ಮತ್ತು 4 ರಲ್ಲಿ ನಡೆಯಿತು. ಇದು ಕೊಡಗಿನ ಹಾಲಿ ಕೌನ್ಸಿಲಿನ ಆಖೈರು ಮೀಟಿಂಗು. ಮೀಟಿಂಗಿನ ಪ್ರಥಮ ದಿನ ಸರಕಾರಿ ಉದ್ಯೋಗಸ್ಥರಲ್ಲದ ಮೆಂಬರುಗಳು ಸೇರುವ ವರ್ಷದ ಆದಾಯ ವ್ಯಯದ ಅಂದಾಜು ಪಟ್ಟಿಯನ್ನು ಚರ್ಚಿಸುವ ಬಗ್ಗೆ ವಾಡಿಕೆಯಂತೆ ಫೈನಾನ್ಸ್ ಕಮಿಟಿ ಚುನಾವಣೆಯಾಯಿತು. ಮ. ರಾ ಬ್ರ. ಗಳಾದ ಸಿ. ಎನ್. ವೆಂಕಪ್ಪಯ್ಯನವರು, ಪಿ. ಟಿ. ಕುಶಾಲಪ್ಪನವರು ಮತ್ತು ಎ. ಬಿ. ಚಂಗಪ್ಪನವರು ಸದರಿ ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು. ಕೌನ್ಸಿಲು ಮೀಟಿಂಗಿನ ಅಂತ್ಯದಲ್ಲಿ ಅಧ್ಯಕ್ಷರಾದ ಚೀಫ್ ಕಮಿಷನರವರು ಈ ಕೌನ್ಸಿಲಿನ ಕಳೆದ ಮೂರು ವರ್ಷದ ಕೆಲಸವನ್ನು ಕುರಿತು ಮಾಡಿದ ಭಾಷಣವನ್ನು ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಕೌನ್ಸಿಲಿನ ಮೂರು ದಿವಸ ಮೀಟಿಂಗಿನ ಪ್ರೊಸೀಡಿಂಗ್ಸನ್ನು ಒಂದೇ ವಾರ ಪ್ರಕಟಿಸಲು ಸಾಧ್ಯವಿಲ್ಲದ್ದರಿಂದ ಆಗುವಷ್ಟು ಈ ವಾರ ಪ್ರಕಟಿಸಿರುತ್ತೇವೆ. ಬಾಕಿಯನ್ನು ಮುಂದಿನ ವಾರ ಕೊಡುತ್ತೇವೆ. ಕೌನ್ಸಿಲು ಪ್ರೊಸೀಡಿಂಗ್ಸಿಗೆ ಸ್ಥಳ ಸಾಲದ್ದರಿಂದ ಈ ವಾರ ಹಿಂದೂದೇಶ ಮತ್ತು ವಿದೇಶ ವರ್ತಮಾನಗಳನ್ನು ಬಾಕಿ ಮಾಡಿರುವದಾಗಿದೆ.

SALE OF SANDAL WOOD.

On 7th December 1926 at 12 noon about 185 tons of cleaned sandalwood will be sold in small lots in public auction at Fraserpet

For further particulars apply to—

The Chief Forest Officer,

3—3 Coorg, Mercara.

ನೋಟೀಸ್.

ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುತನಕ್ಕೆ ಉಮೇದುವಾರರನ್ನು ನೇಮಿಸುವಿಕೆಗೆ ಮತ್ತು ಚುನಾವಣೆಗೆ ಈ ಕೆಳಗೆ ಕೊಟ್ಟ ತಾರೀಕುಗಳು ನಿಶ್ಚೈಸಲ್ಪಟ್ಟಿವೆಯೆಂದು ಈ ಮೂಲಕ ಎಲ್ಲರಿಗೂ ತಿಳಿಸಲಾಗಿದೆ.

ಉಮೇದುವಾರರ ನೇಮಕದ ಅರ್ಜಿ ಕಳುಹಿಸತಕ್ಕ ತಾರೀಕು.	29—11—1926 ರೊಳಗೆ.
ಅರ್ಜಿಗಳನ್ನು ಪರಿಶೋಧಿಸುವುದು.	30—11—1926 ರಲ್ಲಿ.
ಉಮೇದುವಾರರುಗಳ ಹೆಸರು ಪಟ್ಟಿಯನ್ನು ಪ್ರಕಟಿಸುವುದು.	5—12—1926 ರೊಳಗೆ.
ಚುನಾವಣೆ ತಾರೀಕು.	20—12—1926

ಮಡಿಕೇರಿ, ತಾ. 29—10—26.

ಟಿ. ಜೆ. ಟಾಸ್ಕರ್,
ಪ್ರೆಸಿಡೆಂಟರು,
ಡಿಸ್ಟ್ರಿಕ್ಟ್‌ಬೋರ್ಡ್.

ಶ್ರೀಮಂಗಲನಾಡು ಓಟರುಗಳಲ್ಲಿ ಅಜ್ಜಮಾಡ ಮಾದಪ್ಪನ ವಿಜ್ಞಾಪನೆಗಳು.

ನಮ್ಮ ಈ ನಾಡಿನ ಕೆಲವು ಮಹನೀಯರು ತಾರೀಕು 8—10—26 ರಲ್ಲಿ ಹುದಿಕೇರಿಯಲ್ಲಿ ಸೇರಿ ಮಾಡಿದ ಮೀಟಿಂಗಿನಲ್ಲಿ ಈ ನಾಡಿನವರೊಬ್ಬರನ್ನೇ ಡಿಸ್ಟ್ರಿಕ್ಟ್‌ಬೋರ್ಡಿಗೆ ಇಲ್ಲಿಯ ಪ್ರತಿನಿಧಿಯಾಗಿ ಕಳುಹಿಸಬೇಕೆಂದೂ, ಈ ಪ್ರತಿನಿಧಿತ್ವಕ್ಕೆ ನಾನು ಉಮೇದುವಾರನಾಗಿ ನಿಲ್ಲಬೇಕೆಂದೂ ತೀರ್ಮಾನಿಸಿದ ಮೇರೆ ನಾನು ಉಮೇದುವಾರನಾಗಿ ನಿಲ್ಲಲು ಒಪ್ಪಿದ್ದೇನೆ. ಈ ನಾಡು ಮತ್ತು ಇಡೀ ದೇಶದ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಕೆಲಸ ಮಾಡಲು ನಾನು ತಯಾರಾಗಿರುವುದರಿಂದ ತಾ. 20—12—26ರಲ್ಲಿ ನಡೆಯುವ ಚುನಾವಣೆಯಲ್ಲಿ ನೀವೆಲ್ಲರೂ ನನಗೆ ಓಟು ಕೊಟ್ಟು ನಿಮ್ಮೆಲ್ಲರ ಸೇವೆ ಮಾಡಲು ಎಡೆ ಕೊಡುವರಾಗಿ ಕೋರುತ್ತೇನೆ.

ಕುಚೆ, ತಾ. 1—11—26

ತಮ್ಮ ವಿಧೇಯ,
ಅಜ್ಜಮಾಡ ಮಾದಪ್ಪ.

ಕೌನ್ಸಿಲ್ ಸಭೆಯ ಮುಕ್ತಾಯದಲ್ಲಿ ಚೀಫ್ ಕಮಿಷನರರು ಮಾಡಿದ ಭಾಷಣ.

ಮಹನೀಯರೆ,

ಈ ಕೌನ್ಸಿಲಿನ 8ನೇ ಮತ್ತು ಕಡೇ ಅಧಿವೇಶನದ ಮುಕ್ತಾಯದೊಂದಿಗೆ ಕೊಡಗಿನಲ್ಲಿ ಪ್ರಜಾಪ್ರತಿನಿಧಿ ಸರಕಾರದ ಮೊದಲನೇ ರೂಪವು ಅಸ್ತಮಿಸಿತು. ಈ ಸಂದರ್ಭದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಕೌನ್ಸಿಲ್ ಮಾಡಿದ ಕೆಲಸವನ್ನು ವಿಮರ್ಶಿಸುವದು ಯುಕ್ತವಾಗಿದೆ

ನಿಮ್ಮ ಚರ್ಚೆಗಳ ನಾಲ್ಕು ಅಧಿವೇಶನಗಳಲ್ಲಿ ನಾನು ಅಧ್ಯಕ್ಷನಾಗಿದ್ದುದರಿಂದ ಕೌನ್ಸಿಲಿನ ಕೆಲಸವನ್ನೂ ಮತ್ತು ಅದರಲ್ಲಿ ಪ್ರತ್ಯೇಕ ಪ್ರತ್ಯೇಕ ಮೆಂಬರುಗಳು ತೆಗೆದುಕೊಂಡ ಭಾಗವನ್ನೂ ಸಹ ನಾನು ತಿಳಿದುಕೊಂಡಿದ್ದೇನೆಂತಲೇ ಹೇಳಬಹುದು.

ಕೌನ್ಸಿಲ್ ಚರ್ಚೆಯ ಸಾಧಾರಣ ಕ್ರಮವು ಚೆನ್ನಾಗಿತ್ತೆಂತ ನಾನು ಕೌನ್ಸಿಲನ್ನು ಅಭಿನಂದಿಸುತ್ತೇನೆ. ಈ ಕೌನ್ಸಿಲಿನಲ್ಲಿ ಕಂಡುಬಂದ ನಡೆನಳಿಕೆಯ ಮತ್ತು ಗೌರವ ಭಾವದ ಮೇಲ್ಪಂಕ್ತಿಯನ್ನು ಇನ್ನು ಮುಂದಿನ ಕೌನ್ಸಿಲುಗಳು ಅನುಸರಿಸುವವೆಂತ ನಂಬುತ್ತೇನೆ

ಈ ಮೊದಲನೇ ಕೌನ್ಸಿಲು ಮಾಡಿದ ಕೆಲಸದಪ್ರಯೋಜನವನ್ನು ತೂಗಿನೋಡಲಿಕ್ಕೆ ಇನ್ನೂ ಸಮಯವಾಗಲಿಲ್ಲ. ಆಳಿಕೆಯ ಎಲ್ಲಾ ಇಲಾಖೆಗಳೂ ಹೊಸ ಮೇಲ್ವಿಚಾರಕ್ಕೆ ಒಳಪಟ್ಟಿವೆ, ಹೊಸ ತತ್ವಗಳನ್ನು ಅವಲಂಬಿಸಲು ಪ್ರಯತ್ನಿಸಲಾಗಿದೆ, ಹೊಸ ಕ್ರಮದಲ್ಲಿ ಆದಾಯ ವೆಚ್ಚದ ಸ್ಥಿತಿಯನ್ನು ಅನುಭವಿಸಿ ನೋಡಲಾಗಿದೆ.

ಎರಡು ಹೊಸ ಮುಖ್ಯ ಆಕ್ಟುಗಳನ್ನು ಚರ್ಚಿಸಿ, ಮಂಜೂರಾ ಮಾಡಲಾಗಿದೆ. ಈ ಬಿಲ್ಲುಗಳ ಮೇಲಿನ ಚರ್ಚೆಯು ಕೌನ್ಸಿಲಿನ ಮೇಲೆ ಒಳ್ಳೇ ಅನುಭವದ ಅಭಿಪ್ರಾಯಗಳನ್ನೂ, ಸೂಕ್ಷ್ಮ ವಿಚಾರವನ್ನೂ, ನಿಶ್ಚಿತ ರಾಜಕೀಯ ತತ್ವಗಳನ್ನೂ ನಿದ[illegible] ಸಂಧಾನವಾದ್ದಾಗಿತ್ತು.

ಈ ಕೌನ್ಸಿಲಿನಲ್ಲಿ ಮೂರು ಆದಾಯವೆಚ್ಚದ ಪಟ್ಟಿಗಳು, ಆದಾಯವೆಚ್ಚದ ಮೇಲೆ 68 ಠರಾವುಗಳೂ ಚರ್ಚಿಸಲ್ಪಟ್ಟವು. ಆದಾಯವೆಚ್ಚದ ವಿಷಯದಲ್ಲಿ ಮೆಂಬರುಗಳು ತೋರಿಸಿದ ಅಭಿರುಚಿಯಿಂದ ಕೌನ್ಸಿಲಿಗೆ ಗೌರವ ಒಂದಿದೆಯೆಂದು ಹೇಳಬಹುದು. ಈ ಅಭಿರುಚಿಯು ಇನ್ನು ಮುಂದೆಯೂ ವೃದ್ಧಿಯಾಗಬೇಕೆಂತಲೂ, ಉತ್ಪತ್ತಿಗೆ ಸರಿಯಾಗಿ ಖರ್ಚನ್ನಿರಿಸುವ ಕ್ರಮವನ್ನೂ, ಆರ್ಥಿಕ ವಿಷಯಗಳಲ್ಲಿ ಭೂತಕಾಲಕ್ಕಿಂತ ಭವಿಷ್ಯತ್ತೇ ಹೆಚ್ಚು ಮಹತ್ವದ್ದೆಂದು ಮೆಂಬರುಗಳು ತಿಳಿದುಕೊಂಡಾರೆಂತಲೂ ನಾನು ನಂಬುತ್ತೇನೆ.

ಈ ದೇಶದ ಅಭಿವೃದ್ಧಿಗೆ ಉಪಕಾರವಾಗುವಂಥವುಗಳಾದ ವಿಷಯಗಳನ್ನು ಆಲೋಚಿಸಲಿಕ್ಕೆ ಮುಖ್ಯವಾದಂಥ ಮಲೇರಿಯಾ ಕಮಿಟಿ ಮತ್ತು ಜಾನುವಾರುಗಳ ಕಮಿಟಿ ಎಂಬ ಎರಡು ಕಮಿಟಿಗಳು ನೇಮಕವಾಗಿವೆ. ಈ ಕಮಿಟಿಗಳ ಮೆಂಬರುಗಳ ಕೆಲಸವು ಶ್ಲಾಘನೀಯವಾಗಿದೆ. ಈ ಕಮಿಟಿಗಳ ಕೆಲಸದಿಂದ ದೇಶದ ಎಲ್ಲಾ ಭಾಗಕ್ಕೂ ಪ್ರಯೋಜನವಾದೀತೆಂತ ನಂಬಲಾಗಿದೆ.

ಆದಾಯವೆಚ್ಚದ ಮೇಲಿನ ಠರಾವುಗಳಲ್ಲದೆ ಜನಸಮುದಾಯಕ್ಕೆ ಸಾಮಾನ್ಯವಾಗಿ ವ್ಯಾಪಕವಾಗುವ ವಿಷಯಗಳ ಮೇಲೆ 123 ಠರಾವುಗಳು ಕಾರ್ಯಕ್ರಮದ ಪಟ್ಟಿಗೆ ಸೇರಿತ್ತು. ಮೆಂಬರುಗಳಿಗೆ ವಿಷಯಗಳನ್ನು ತಿಳಿದುಕೊಳ್ಳಲು ಇರುವ ಕುತೂಹಲವು, 474 ಸವಾಲುಗಳು ಹಾಕಲ್ಪಟ್ಟದಕ್ಕೆ ಉತ್ತರ ಕೊಡಲಾಗಿದೆ ಎಂಬದರಿಂದ ತಿಳಿಯುತ್ತದೆ.

ಈ ಠರಾವುಗಳ ಮತ್ತು ಸವಾಲುಗಳ ಪಟ್ಟಿಯನ್ನು ವಿಮರ್ಶಿಸುವದರಿಂದ ಉಂಟಾಗುವ ಕೆಲವು ತೀರ್ಮಾನಗಳನ್ನು ಘನವೊಂದಿದ ಮೆಂಬರುಗಳಿಗೆ ತಿಳಿಸಿಕೊಡಬೇಕಾಗಿದೆ. ಯಾಕೆಂದರೆ, 1929 ನೇ ಇಸ್ವಿಯಲ್ಲಿ ಪ್ರಾಂತೀಕ ಸ್ವಾತಂತ್ರ್ಯಕೊಡುವ ಸಂದರ್ಭದಲ್ಲಿ ಈ ಕೌನ್ಸಿಲಿನ ಈ ವರೆಗಿನ ಕೆಲಸಗಳು ಪರಿಷ್ಕಾರವಾಗಿ ಅಜಮಾಯಿಸಲ್ಪಡುತ್ತವೆ.

ಚರ್ಚಿಸಲ್ಪಟ್ಟ, ಮಂಜೂರಾದ, ಅಥವಾ ತಿರಸ್ಕರಿಸಲ್ಪಟ್ಟ ಠರಾವುಗಳ ಚರಿತ್ರೆಯಿಂದ ಜಯಾಪಜಯವು ನಿಶ್ಚೈಸಲ್ಪಡುವುದಿಲ್ಲ. ಸರಕಾರದ ಆಡಳಿತ ತತ್ವ ಹೇಗೆ ಮಾರ್ಪಾಟಾಗಿದೆ, ಈ ಮಾರ್ಪಾಡಿಗೆ ಕೌನ್ಸಿಲ್ ಕೆಲಸವು ಎಷ್ಟರ ಮಟ್ಟಿಗೆ ಕಾರಣಭೂತವಾಗಿದೆಯೆಂಬುದೇ ಮುಖ್ಯವಾಗಿ ನೋಡಬೇಕಾಗಿದೆ ಈ ಕೌನ್ಸಿಲಿನಂಥ ಆಲೋಚನೆ ಮಾತ್ರ ಕೊಡಲು ಹಕ್ಕಿರುವ ಕೌನ್ಸಿಲಿನಲ್ಲಿ ಪಾಸಾದ ಠರಾವುಗಳು ಮುಖ್ಯವಲ್ಲ, ಜಾಗರೂಕತೆಯಿಂದ ನಡಸುವ ಟೀಕೆಗಳು, ಮತ್ತು ಜಾರಿಗೆ ತರಬಹುದಾದಂಥ ಆಲೋಚನೆಗಳೇ ಮುಖ್ಯವಾದವು

"ಸಾಮಾನ್ಯವಾಗಿ ಸಮುದಾಯಕ್ಕೆ ಸಂಬಂಧಪಡುವ ವಿಷಯಗಳು" ಎಂಬಲ್ಲಿ ಒಂದೇ ಸಮುದಾಯಕ್ಕೆ ಸಂಬಂಧಪಡುವಂಥಾದ್ದು ಮಾತ್ರ ಆದರೂ ಸಾಲದು, ಸಾಮಾನ್ಯವಾಗಿ ಸಮುದಾಯಕ್ಕೆ ವ್ಯಾಪಿಸುವಂಥ ವಿಷಯಗಳಾಗಿರಬೇಕೆಂತ ಮೆಂಬರುಗಳಿಗೆ ಜ್ಞಾಪಿಸಬೇಕಾಗಿದೆ. ಈ ಸಭೆಯ ಕಾಲವು ಅಮೂಲ್ಯವಾದದ್ದೆಂತ ಯೋಚಿಸಿಯೇ ಈ ಮಾತುಗಳನ್ನು ಜೋಡಿಸಿರಬೇಕೆಂತ ನಾನು ನಂಬುತ್ತೇನೆ. ಈ ಸಭೆಯಲ್ಲಿ ಇದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯವಾಗಿದೆ.

ಹಾಕಲ್ಪಟ್ಟಿರುವ ತುಂಬಾ ಸವಾಲುಗಳಲ್ಲಿ ಹೆಚ್ಚಿನವು ಸಮುದಾಯಕ್ಕೆ ಪ್ರಯೋಜನವಾಗುವ ಸಂಗತಿಗಳನ್ನು ತಿಳಿಯಬೇಕೆಂಬ ಕುತೂಹಲತೆಯಿಂದಲೇ ಹಾಕಲ್ಪಟ್ಟಿವೆಯೆಂತ ನನಗೆ ತೋರುತ್ತದೆ. ಈ ಜವಾಬುಗಳಲ್ಲಿ ಕೊಡಲ್ಪಟ್ಟ ಸಂಗತಿಗಳು ಮುಂದಿನ ಚರ್ಚೆಗಳಲ್ಲೂ ಠರಾವುಗಳನ್ನು ತಯಾರಿಸುವದರಲ್ಲೂ ಉಪಯೋಗಿಸಲ್ಪಟ್ಟರೆ ತುಂಬಾ ಪ್ರಯೋಜನವಾದೀತೆಂತ ನಾನು ಹೇಳಬೇಕಾಗಿದೆ ಇದನ್ನು ಬಿಟ್ಟು ಹೇಳಬೇಕಾಗಿದ್ದು ಯಾಕೆಂದರೆ, ಈ ಕೌನ್ಸಿಲ್ ಸ್ಥಾಪನೆಯಿಂದ ಸರಕಾರಿ ಉದ್ಯೋಗಸ್ಥರು ಎಷ್ಟು ಹೆಚ್ಚು ಕೆಲಸ ಮಾಡಬೇಕಾಗಿದೆಯೆಂಬುದನ್ನು ಘನ ಹೊಂದಿದ ಮೆಂಬರುಗಳು ತಿಳಿದುಕೊಂಡಂತೆ ಕಾಣುವುದಿಲ್ಲ

1925ನೇ ಇಸವಿ ಮಾರ್ಚಿ ಅಧಿವೇಶನದಲ್ಲಿ ಮಿ. ಬಾರ್ಟನ್‌ರವರು ಹೇಳಿದ ಮಾತುಗಳನ್ನು ಜ್ಞಾಪಿಸಿಕೊಡಬೇಕಾಗಿದೆ. ಈ ಚಿಕ್ಕ ದೇಶದಲ್ಲಿ ಈ ಸಭೆಯ ಮೆಂಬರುಗಳಿಗೆ ಆಳಿಕೆಯ ಪ್ರತಿಯೊಂದು ಭಾಗದ ಸಂಪರ್ಕವಾಗುತ್ತದೆ. ಅಧಿಕಾರಿಗಳ ಕೆಲಸವ್ಯಾವದು, ಕೌನ್ಸಿಲಿನ ಕೆಲಸವ್ಯಾವದು ಎಂಬುದು ಮರೆತು ಹೋಗುವ ಸಂಭವವಿದೆ. ಇದು ಬಹಳ ಮುಖ್ಯ ವಿಷಯವಾದ್ದರಿಂದ ಇದನ್ನು ಮರೆಯಬಾರದು.

ಕೌನ್ಸಿಲಿನಿಂದ ಉಂಟಾದ ಹೆಚ್ಚಾದ ಕೆಲಸಗಳನ್ನು ಇಲಾಖೆಯ ಅಧಿಕಾರಿಗಳೂ, ಗುಮಾಸ್ತರುಗಳೂ ಜರುಗಿಸಿರುವದು ಬಹಳ ತೃಪ್ತಿಕರ ಮತ್ತು ಶ್ಲಾಘನೀಯವಾಗಿದೆಯೆಂತ ನಾನು ಹೇಳಬೇಕಾಗಿದೆ. ಗುಮಾಸ್ತರುಗಳ ಸಂಖ್ಯೆಯನ್ನು ಹೆಚ್ಚಿಸದೇನೇ ಕೌನ್ಸಿಲಿನ ಮುಂದೆ ಬಂದ ಎಲ್ಲಾ ಕೆಲಸಗಳನ್ನೂ ಮಾಡಿಕೊಳ್ಳುವದು ಸಾಧಾರಣ ಕಾರ್ಯವಲ್ಲ.

ಹೊಸ ಚುನಾವಣೆಯು ಸಮೀಪಿಸಿದೆ. ದೇಶದವರಿಗೆ ದೇಶದ ಅಭ್ಯುದಯಕ್ಕೆ ಬೇಕಾದ ಸಂಗತಿಗಳನ್ನು ತಿಳುವಳಿಕೆ ಕೊಡಲು ಒಳ್ಳೇ ಅವಕಾಶವಿದೆಯೆಂತ ಚುನಾವಣೆಗೆ ನಿಲ್ಲುವ ಎಲ್ಲರಿಗೂ ನಾನು ನೆನಪು ಕೊಟ್ಟರೆ ತಪ್ಪಾಗಲಾರದು. ಇದು ಜನರ ಪ್ರತಿನಿಧಿಗಳಾಗಲು ಅಪೇಕ್ಷೆ ಇರುವವರ ಮುಖ್ಯ ಕರ್ತವ್ಯವಾಗಿದೆ ಈ ವಿಷಯದಲ್ಲಿ ಜನರ ಪ್ರತಿನಿಧಿಗಳ ಮೇಲೆ ಬಹಳ ದೊಡ್ಡ ಜವಾಬ್ದಾರಿಯಿದೆ.

ಈ ಕೌನ್ಸಿಲಿನ ನಿರ್ಮಾಣದಿಂದ ಗ್ರಾಮ ಜೀವನವು ಕಳವಳಗೊಂಡಿದೆ. ರಾಜಕೀಯ ಭಿನ್ನಾಭಿಪ್ರಾಯಗಳು ಸಾಮಾಜಿಕ ಮತ್ತು ಸ್ವಂತ ವಿಷಯಗಳಿಗೆ ವ್ಯಾಪಿಸದಂತೆ ನೋಡಿಕೊಳ್ಳಿ. ಸಾರ್ವಜನಿಕ ವಿಷಯಗಳಲ್ಲಿ ಹುಟ್ಟಿದ ಈ ಜಾಗ್ರತೆಯನ್ನು ಎಲ್ಲರಿಗೂ ಪ್ರಯೋಜನವಾಗುವ ಆಲೋಚನೆಗಳಿಗೆ ಉಪಯೋಗಿಸುವಂತೆ ಮಾಡಿ. ಓಟರುಗಳಿಗೆ ನೀವು ಮಾಡಿಕೊಳ್ಳುವ ವಿಜ್ಞಾಪನೆಗಳಲ್ಲಿ ಸಮಾಧಾನ ರೀತಿಯಿಂದ, ಸಂಗಡಿಗರ ಕ್ಷೇಮವನ್ನು ಎಣಿಸಿ ಈ ಒಟ್ಟು ದೇಶದ ಅಭಿವೃದ್ಧಿಯ ಮೇಲೆ ದೃಷ್ಟಿ ಇಟ್ಟು ಬೋಧಿಸಿಕೊಟ್ಟು, ತಾಳ್ಮೆಯಿಂದ ಕೂಡಿದ ರಾಜಕೀಯ ಜ್ಞಾನವು ಹುಟ್ಟುವಂತೆ ಮಾಡಬೇಕಾದದ್ದು ಮೆಂಬರುಗಳಾಗಲು ನಿಲ್ಲುವ ಉಮೇದ್ವಾರರ ಕರ್ತವ್ಯವಾಗಿದೆ. ಈ ಕೌನ್ಸಿಲ್ ತನ್ನ ಕರ್ತವ್ಯವನ್ನು ಸಾಧಿಸಬೇಕಾದರೆ, 1924ನೇ ಜನವರಿಯಲ್ಲಿ ಈ ಕೌನ್ಸಿಲ್ ತೆರೆಯುವ ಸಮಾರಂಭಕ್ಕೆ ಕಳುಹಿಸಿದ್ದ ಲಾರ್ಡ್ ರೀಡಿಂಗ್‌ರವರ ಬಯಕೆಯು ಸಫಲವಾಗಬೇಕಾದರೆ "ಈ ಕೌನ್ಸಿಲು ಕೊಡಗು ಪ್ರಾಂತ್ಯದ, ಒಂದಾದ ಕೊಡಗಿನ ಪ್ರತಿನಿಧಿಯಾಗಲಿ" ಎಂತ ಹೇಳುವ ನನ್ನ ಮಾತುಗಳಿಗೆ ನೀವೆಲ್ಲರೂ ಒಪ್ಪೀರಿ ಎಂತ ನಾನು ನಂಬುತ್ತೇನೆ ನಾವು ವ್ಯಕ್ತಿ ಕುರಿತ ಉದ್ದೇಶಗಳನ್ನು ಅಥವಾ ಸ್ವಂತ ಉದ್ದೇಶಗಳನ್ನು ಬಿಟ್ಟು ನಮಗೆಲ್ಲರಿಗೂ ಪ್ರಿಯವಾದ ಕೊಡಗು ಪ್ರಾಂತ್ಯದ ಶ್ರೇಯೋಭಿವೃದ್ಧಿಗಾಗಿ ಒಗ್ಗಟ್ಟಾಗಿ ಕೆಲಸಮಾಡುವ.

ಮಹನೀಯರೇ, ನಿಮಗೆಲ್ಲರಿಗೂ ಕ್ಷೇಮವಾಗಲೀ ಎಂತ ಬಯಸಿ ಈ ಪ್ರಥಮ ಕೌನ್ಸಿಲನ್ನು ಮುಕ್ತಾಯಮಾಡಿದ್ದೇನೆ.

ಪ್ರಕಟಣೆ.

ಶ್ರೀಮಂಗಲನಾಡು ಡಿಸ್ಟ್ರಿಕ್ಟ್‌ಬೋರ್ಡ್ ಓಟರುಗಳಲ್ಲಿ ಚೆಪ್ಪುಡಿರ ಅಪ್ಪಯ್ಯನವರ ಮಗ ಪೊನ್ನಪ್ಪನ ವಿನಂತಿ.

ಮಹನೀಯರೇ,

ನಮ್ಮ ಈ ನಾಡಿನ ಪರವಾಗಿ ಆರಿಸಿಕೊಳ್ಳಬೇಕಾದ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುತನಕ್ಕೆ ನಾನು ಒಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ. ಈ ಮೊದಲೇ ಕೆಲವು ವರ್ಷಗಳಿಂದ ಬೆಳೆಗಾರರ ಸಂಘದಲ್ಲು ನಾನು ನಮ್ಮ ನಾಡಿನವರ ಪರವಾಗಿ ಮಾಡಿರುವ ಸೇವೆ ತಮಗಳಿಗೆಲ್ಲರಿಗೂ ತಿಳಿಯದಲ್ಲ. ನಮ್ಮ ನಾಡಿನ ಪರವಾಗಿ ತಮ್ಮ ದಾಸತ್ವವನ್ನು ಕೈಕೊಳ್ಳಲು ಉದ್ಯುಕ್ತನಾಗಿ ಈಗ ಮುಂದೆ ಬಂದಿರುತ್ತೇನೆ. ಬೇಗನೆ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲಿ ತಮ್ಮ ಓಟನ್ನು ನನ್ನ ಪರವಾಗಿ ಕೊಟ್ಟು ನಿಮಗಳ ದಯೆಯಿಂದ ದೇಶಸೇವೆಮಾಡಲು ಅವಕಾಶ ಮಾಡಿಕೊಡುವಿರಾಗಿ ಕೋರುತ್ತೇನೆ.

ಪೊನ್ನಂಪೇಟೆ, 11—10—26.

ನಿಮ್ಮ ಸೇವಕ,
ಚೆಪ್ಪುಡಿರ ಪೊನ್ನಪ್ಪ.

ಪರಾರಿ.

ತಾ. 29—10—26 ರಲ್ಲಿ 12 ಗಂಟೆಯಿಂದ, ಮಿಸ್ಟರ್ ಕೆ. ಸಿ. ತಿಮ್ಮಯ್ಯನವರ ಪೋದೂರು ಕೋಟೆನಲ್ಲಿ ಈಗಿನ ಹೊಸ ಲೇಬರ್ ಆಕ್ಟ ಮೇರೆ ಕೆಲಸ ಮಾಡುತ್ತಿದ್ದ ಯರವರ ಜೋಮ ಸಂಬನು ತನ್ನ ಹೆಂಡತಿ ಮುಂಡೆ ಸಮೇತ ಕೆಲವು ಸಾಮಾನುಗಳನ್ನು ಎತ್ತಿಕೊಂಡು ಪರಾರಿಯಾಗಿದ್ದಾನೆ. ಇವನು ಐದಡಿ ಎರಡು ಇಂಚು ಎತ್ತರ ಇದ್ದಾನೆ. 40ರಿಂದ 45 ವಯಸ್ಸಿನ ನಡೆಗೆ ಇರಬಹುದು. ಒಂಟಿ ಊನವಾಗಿ ಪ್ರಿಸೀಪಲಿಕ್ಕೆ ಬರುವುದಿಲ್ಲ. ಇವನನ್ನು ಯಾರೂ ಕೆಲಸಕ್ಕೆ ಸೇರಿಸಿಕೊಳ್ಳಕೂಡದು ಕೆಲಸಕ್ಕಿಟ್ಟುಕೊಂಡು ಅಡ್ವಾನ್ಸು ಕೊಟ್ಟರೆ ಆ ನಷ್ಟಕ್ಕೆ ಅವರೇ ಜವಾಬ್ದಾರರಾಗಬೇಕು ಅಲ್ಲದೆ ನನಗೆ ಅವನು ಇರುವ ಸ್ಥಳವನ್ನು ಗೊತ್ತುಮಾಡಿಕೊಟ್ಟರೆ ಅವರಿಗೆ ನಾನು 2 ರೂ. ಬಹುಮಾನ ಕೊಡುತ್ತೇನೆ.

ಮೇನೇಜರ್,
ಪೋದೂರು ಎಸ್ಟೇಟ್,
ಮಡಿಕೇರಿ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಕಾಕೋಟುಪರಂಬು ಮೀಟಿಂಗು

ಅಯ್ಯಾ,

ಮಿ. ಬಟ್ಟಿಯಂಡ ನಂಜಪ್ಪನವರ ಕೋರಿಕೆ ಮೇರೆ ಬೆಪ್ಪುನಾಡಿನವರ ಮೀಟಿಂಗೊಂದು ತಾ. 30—11—'26 ರಲ್ಲಿ ಕಾಕೋಟು ಪರಂಬಿನಲ್ಲಿ ನಡೆಯಿತು ಮಿ. ಮಂಡೇಟಿರ ಪೂವಯ್ಯನವರು ಅಧ್ಯಕ್ಷರಾಗಿದ್ದರು. ಡಿಸ್ಟ್ರಿಕ್ಟ್‌ಬೋರ್ಡ್ ಮತ್ತು ಕೌನ್ಸಿಲುಗಳಲ್ಲಿ ನಡೆಯುವ ಕೆಲಸಗಳನ್ನು ವಿವರಿಸಿ ಅವುಗಳಿಗೆ ಎಂಥಾ ಮೆಂಬರುಗಳನ್ನು ಆರಿಸಿ ಕಳುಹಿಸಬೇಕೆಂಬದನ್ನು ಕುರಿತೂ, ಕೊಡಗಿನಲ್ಲಿ ಉಂಟಾಗಿರುವ ಪಾರ್ಟಿಭೇದಗಳನ್ನು ಕುರಿತೂ ಚರ್ಚೆ ನಡೆಯಿತು. ಮ. ರಾ. ತ್ರಿ. ಗಳಾದ ಬಿ ನಂಜಪ್ಪನವರು, ಕೆ. ಪಿ. ಚಿಣ್ಣಪ್ಪನವರು, ಕೋದಂಡ ಚಿಣ್ಣಪ್ಪನವರು, ಕಳ್ಳಿಚಂಡ ಮಾದಪ್ಪನವರು, ಪಿ. ಐ. ಬೆಳ್ಯಪ್ಪನವರು ಮತ್ತು ಕೀತಿಯಂಡ ಉತ್ತಪ್ಪನವರು ಭಾಷಣ ಮಾಡಿದರು.

ಹಾಜರಿದ್ದವ.

ಕಾಗಡಿ ಕಟ್ಟಿ ಮೀಟಿಂಗು.

ತಾರೀಕು 19—10—26ರಲ್ಲಿ ಮ.ರಾ. ತ್ರಿ. ಕುಂರಿಪಟೇಲ್ ನಿರುವಾಣ'ಗೌಡರ ಅಧ್ಯಕ್ಷತೆಯಲ್ಲಿ ಮೀಟಿಂಗು ನಡೆಯಿಸಲಾಯಿತು. ಈ ಮೀಟಿಂಗಿಗೆ ದೊಡ್ಡಮೊಳೆ, ಸುಳಿಮೊಳೆ, ಮೂಕನಕಟ್ಟೆ, ದಬ್ಬೆಕೊಪ್ಪಲ, ದೊಡ್ಡಮಾಕೋಡು, ಗಿಚ್ಚಮಾಕೋಡು, ಹಿರಿಕಾರ, ಚನ್ನಾಪುರ, ಗೌಡಳ್ಳಿ, ಕುಂದಿ ಹಾರಳ್ಳಿ ವಗೈರೆ ಗ್ರಾಮಸ್ಥರೆಲ್ಲ ಸುಮಾರು 50—70 ಜನರವರೆಗೆ ಸೇರಿದ್ದರು. ಈ ಸಭೆಯಲ್ಲಿ ಬರುವ ಕೌನ್ಸಿಲಿಗೆ ಹೊಸ ಮೆಂಬರನ್ನಾರಿಸಬೇಕೆಂತ ಅನೇಕ ಚರ್ಚೆ ನಡೆದು, ಹೊಸಬರನ್ನೇ ಆರಿಸುವದು ಒಳ್ಳೇದೆಂದು ಸರ್ವಸಮ್ಮತದಿಂದ ತೀರ್ಮಾನವಾಯಿತು.

ಓರ್ವ ಓಟರು

ಬೆಪ್ಪುನಾಡು ಸಂಘವು ಸಹಕಾರ ತತ್ವಗಳಿಗನುಸಾರವಾಗಿ ಸರಿಯಾಗಿ ಕೆಲಸ ಮಾಡಿದೆಯೋ?

ಕಳೆದ ವಾರದ "ಕೊಡಗು" ಪತ್ರಿಕೆಯಲ್ಲಿ ಬೆಪ್ಪುನಾಡು ಪರಸ್ಪರ ಸಹಾಯ ಸಂಘದ ವರದಿಯನ್ನು ಪ್ರಕಟಿಸಿದ್ದು ನೋಡಿದೆನು

[illegible]

ಸಂಪಾದಕ.

ಗವರ್ಮೆಂಟ್ ಉದ್ಯೋಗಸ್ಥರ ವರ್ಗಾವರ್ಗ

[illegible] ... Irrespective ... [illegible]

... But it is sunshine ... patriotism ... their even pleasure ... [illegible]

... All the roads lead to Rome ... [illegible]

... Home sweet home!! ... [illegible]

[illegible] ... Duty ... [illegible]

Nor fir
Who dabbling in the fount of fictive tears
And nursed by mealy mouthed philanthropy
Divorce the feeling from her mate the deed

[illegible] ... Must hold together ... [illegible]

ಪಿ. ಪಿ. ಪಂಡ್ಯ.

ಕೊಡಗು ಪತ್ರಿಕೆ

[illegible]

"ಇತಿಹಾಸಾಭಿಮಾನಿ"

ಸುಂಟಿಕೊಪ್ಪಲು ಮಾದಾಪುರ ರಸ್ತೆ.

ಈ ರಸ್ತೆಯನ್ನು ನೋಡದ ಮಹಾಶಯರು ಯಾರೂ ಇಲ್ಲವಾಗಿ ನಂಬುತ್ತೇನೆ. ಇದರ ಹೀನಸ್ಥಿತಿಯನ್ನು ವರ್ಣಿಸಲಿ. ...

ಮ. ಎನ್. ಕುಶಾಲಪ್ಪ.

ಕೊಡಲಿಪೇಟೆ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ನಡೆಸಿದ ಮೀಟಿಂಗು.

ತಾರೀಖು 21—10—1936ರಲ್ಲು ...

ಶಾಂತವೀರಪ್ಪ.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! No License Required



Webley and Scott Air Pistol, cal ·177 or ·22 bore Powerful and Accurate, complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pweiful German Diana Air gun, Handsome and Accurate, takes B S. A. Patern No 1 Slugs and Darts, expressly recommendable for Target Practice Rs. 15/ Free delivery.

Brilliant Search Light Lamp for Night Sports Rs. 30/– Free delivery.

No License required to purchase or to possess the above items.

Reliable D B B L 12 bore guns		Rs. 60/– and upwards.	
Do. S. B B L 12	do	do. 40/–	do.
D B. M L Guns		„ 45 -	do.
S B M L. do.		„ 30/–	do.
S B B L Rifles		„ 25/–	do.
B L Revolvers and Pistols		„ 30/–	do.

Arms, Ammunition and shooting requisitesof almost every kind and quality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSAIN ALLIBHOY & SONS

Largest Importers of Firearms and Ammunition

Cheapest priced firm in India,

24. 15 210 Abdul Reman Street. BOMBAY.

ಅಮೇರಿಕಾ ಎಲಕ್ಟ್ರಿಕ್ ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.



... ಕ್ರಯ ಬ್ಯಾಟರಿ ಸಹಿತ 1ಕ್ಕೆ ರು. 3—0—0.

ವಿಳಾಸ:—ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,

52—45 ಪೋಸ್ಟ್ ಬಾಕ್ಸ್ P. B. No. 1223, ಮದರಾಸು.

ಪ್ರಭಾಕರ

ಸ್ವದೇಶಿಯ ಹಿತ್ತಾಳೆ ಕಂದೀಲು (ಲಾಂದರು).



... ಪತ್ರವ್ಯವಹಾರಕ್ಕೆ ವಿಳಾಸ:—

1. ಸಿ. ಎಸ್. ...

ಜನರಲ್ ಮರ್ಚೆಂಟ್ಸ್, ಚಿಕ್ಕಮಗಳೂರು,

ಅಥವಾ

ಕಾರ್ಖಾನೆದಾರರು.—

"ಓಗಲೆ ಗ್ಲಾಸ ವರ್ಕ್ಸ್" ಲಿಮಿಟೆಡ್, ಓಗಲೆವಾಡಿ ಸಂ. (ಔಂಧ) ಜಿ. ಸಾತಾರಾ.

52—...

ತಯಾರಾಗಿದೆ.

...

ಮ್ಯಾನೇಜರ್ "ಕೊಡಗು" ಮಡಿಕೇರಿ

ಕನ್ನಡ ಸ್ವಧರ್ಮ ಮಾಸಪತ್ರಿಕೆ

ಸಂಪಾದಕರು:—ಮ ರಾ. ಬೇಂದ್ರೆ, ಬಿ ಎ.

... ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

ಸ್ಪಿರಿಟ್‌ಸ್ಟೋವ್ ಎಂಬ ಅಡಿಗೆಮಾಡುವ ಒಲೆ.



... ಕ್ರಯ 1ಕ್ಕೆ ರೂ. 3—0—0.

52—45 ವಿಳಾಸ:—... ಕಂಪೆನಿ 16 ... ಮದರಾಸು.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಚೇರ್ಸ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ
(೨) ಕೂಡುವದಕ್ಕೆ ಆರಾಮು
(೩) ಬಾಳಿಕೆಯಲ್ಲಿ ಗಟ್ಟಿ
(೪) ತಗಣೆಗಳು ಸೇರುವದಿಲ್ಲ
(೫) ಎತ್ತಾಡಲಿಕ್ಕೆ ಬರುವಷ್ಟು ಹಗುರ

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಒಗ್ಗೆ ಓದು ತಿಳಿದುಕೊಳ್ಳಿ

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,

16—6 **ಜಿ. ಸಾತಾರ್.**

ಇಂಗ್ಲಿಷ್ ಹೇರ್ ಡಿಸ್ಟ್ರಾಯರ್ ಸೋಪ್.

ಈ ಸೋಪು ವಿಲಾಯತಿಯಲ್ಲಿ ತಯಾರಾದದು ಶರೀರದ ಯಾವ ಭಾಗದಲ್ಲಿಯಾದರೂ ಬೇಡವಾದ ಕೂದಲು ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕ್ಷೌರದಿಂದಲೂ ಚೆನ್ನಾಗಿ ಕೂದಲನ್ನು ಒಂದೇ ಒಂದು ನಿಮಿಷದಲ್ಲಿ ತೆಗೆದು...

ಕ್ರಯ 3 ಸಾಬೂನುಗಳ ಪೆಟ್ಟಿಗೆ 1ಕ್ಕೆ 1—4—0

ವಿಳಾಸ —ಮನೋಲಿಯಾ ಏಜೆನ್ಸಿ, ಪೋಸ್ಟ್ ಬಾಕ್ಸ್ ನಂ ...

52—11 ಮದ್ರಾಸ್

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪನೆಯಾದದ್ದು)

ಸಮಗ್ರ ಲಾಭ ಸಹಿತವಾದ ಪಾಲಿಸಿಗಳೇ

1927 ನೇ ಫೆಬ್ರವರಿ ತಾ 28 ಕ್ಕೆ ಮುಂಚೆ ಸೇರತಕ್ಕವರಿಗೆಲ್ಲಾ ಆ ತಾರೀಖಿಗೆ ಆಗುವ ಪಂಚಸಾಲು ಬೋನಸ್ ಮೊಬಲಗು ಕೊಡಲಾಗುವದು

ಪ್ರೊಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

ಬೆಂಗಳೂರು ಬ್ರಾಂಚ್ —		**ಮದರಾಸ್ ಬ್ರಾಂಚ್ —**
152 ಕಮ್ಮರ್ಷಿಯಲ್ ಸ್ಟ್ರೀಟ್	ಸಿ ಕೆ ಚಂಗಪ್ಪ	9 10 ಸೆಕೆಂಡ್ ಲೈನ್ ಬೀಚ್
	ಸ್ಪೆಷಲ್ ಏಜಂಟ್,	
	ರಿವರ್ ಸೈಡ್ ಎಸ್ಟೇಟ್,	
24—1	ಸಿದ್ದಾಪುರ	

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15 16% ಆಗಿರುವ ಇದು ಬೇರೆ ಯಾವ ಗೊಬ್ಬರದಲ್ಲಿರುವುದಕ್ಕಿಂತಲೂ ಮೂರು ಪಾಲಷ್ಟು ಆಗಿರುವದು ಇದರಲ್ಲಿ ಎಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಬೆಳೆಗಳಿಗೆ ದೊರೆಯಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಕೃಷಿಕರು ಇದನ್ನು ಉಪಯೋಗಿಸುತ್ತಾರೆ

ಬತ್ತ ಕಬ್ಬು ತೆಂಗು ಅಡಿಕೆ ಹೊವು ಹೊಗೆಸೊಪ್ಪು ತರಕಾರಿ ಮೊದಲಾದವುಗಳಿಗೂ ಕಾಫಿ ... ರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಲುಬಿನ ಪುಡಿ ಅಥವಾ ಇನ್ನು ಗೊಬ್ಬರ ವಗೈರೆ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟೇಷ್ ಎಂಬ ಇನ್ನೊಂದು ತರದ ಸಸ್ಯಾಹಾರವ ... ಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಬರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100 ... ತ್ತು ಸಾಕಾಗುವದು ಹಚ್ಚುವ ಮಾಹಿತಿ ಮತ್ತು ' ಕೃಷಿಸುಧಾರ ' ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಿಂದ ಧರ್ಮಾರ್ಥವಾಗಿ ಪಡೆಯಬಹುದು

52—23 **CHILEAN NITRATE COMMITTEE**
Post Box 469, CALCUTTA

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50 000
ವಸೂಲಾದ ಶೇರ್ ಮೊಬಲಗು	—	1? 870
ಜಮೆಯಿಂದ ಠೇವಣಾತಿ	—	1?8,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲ ಕೊಡತಕ್ಕದ್ದು

ಒಂದು ವರ್ಷ ಮಿಯಾದಿನ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 6 4 0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಮಿಯಾದಿಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ೫ರ ಬಡ್ಡಿ ದೊರೆಯುತ್ತೆ

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು,	ಟ್ರೆಜರರ್.
ಕೂಡಂಡೆರ ಕುಟ್ಟಯ್ಯನವರು,	? ದೇವೈಯ್ಯನವರು
ರಾಯ್ ಬಹದ್ದೂರ್	ರಾವ್‌ಸಾಹೇಬ್.

ಸೆಕ್ರೆಟರಿ

ಸಿ ಯನ್ ವೆಂಕಪ್ಪಯ್ಯನವರು, ಬಿ ಎ, ಬಿ ಎಲ್

ತಾರೀಕು 1 -7—1926

ಒಂದು ಪ್ರಬಲವಾದ ಪ್ರಶ್ನೆ

ನಮ್ಮ ಜೀವವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಏಳುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆ ಯಿಲ್ಲದೆ ಲಾಭ ಕೊಡುವ ' ಓರಿಯಂಟೆಲ್ ' ಗವರ್ನಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗಾಗಿ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ 'ಕೈರಾಟೆ'ಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ ' ಖಾದಿ. ' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚಿಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ ದಯವಿಟ್ಟು ಪ್ರೋತ್ಸಾಹಿಸಿರಿ ' ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ,	ಕೆ ಪಿ ಚಿಣ್ಣಪ್ಪ,
ದಕ್ಷಿಣ ಕೊಡಗು.	ಪ್ರೊಪ್ರೈಟರ್,
	ಖಾದಿಭಂಡಾರ

52—32.

ಕರ್ಣಾಟಕ

'ಏಗ್ಯು ಮಿಕ್ಸ್ಚರ'

ಚಳಿಜ್ವರ, ಮಲೇರಿಯ ಜ್ವರ ಇನ್‌ಫ್ಲುಯೆಂಝ ಅಡವಿಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦—೧೪—೦
ಟಪಾಲು ಚಾರ್ಜು ಬೇರೆ

ಇಂಡೋ ಬಾಮ್.

ಸಂಧಿವಾತ, ತಲೆಶೂಲೆ, ಸೊಂಟನೋವು ಉಳುಕು, ಚೇಳುಕಡಿತ ಮೊದಲಾದವುಗಳ ಮೇಲೆ ಹಚ್ಚತಕ್ಕ ದಿವ್ಯವಾದ ಔಷಧ' ಬೆಲೆ ೧೦ ಆಣೆ ಟಪಾಲುವೆಚ್ಚ ಬೇರೆ

12—10 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನಾಶಿಕರಿ ಖರಾರು ಫಾರಮುಗಳು

1926ನೇ ಇಸವಿ ಕೊಡಗಿನ ಕೂಲಿ ಕಾಯಿದೆಯನ್ನು ಕುರಿತ ಆಕ್ಟ 16 ಮೇರೆ ಅನುಭವವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನಾಶಿಕರಿ ಖರಾರು ಫಾರಮುಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಒಳ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು

ತಾ 24—6—'26	**ಮೇನೇಜರ್,**
ಮಡಿಕೇರಿ,	**" ಕೊಡಗು " ಆಫೀಸು**

ನೋಟೀಸು.

ಈ ಕೆಳಗಿನ ಮಹನೀಯರು ಕೊಡಗು ಪ... ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂ... ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರ ... ಗಂಡ ಕುಟ್ಟಪ್ಪನವರ ಜವಾಬುದಾರಿಕೆಯ ಮೇಲೆ ... ಗಿದೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ... ಲಹರಿನ ಬಾಗದಲ್ಲಿ ಪಾವತಿ ಮಾಡಬೇಕಾಗಿ ಕೋ...

ಏಜಂಟರುಗಳು

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮೆ ಚಿಣ್ಣ... ಯ್ಯನವರ.

ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ ... ಯಂಡ ದೇವೈಯ್ಯನವ...

ನಾಪೋಕ್ಲು—ಮೆ ಅಪೆಯಂಡ ಸುಬ್ಬಯ್ಯನವರು
ಮೆ ಪೊನ್ನಚಂಡ ಮುದ್ದಪ್ಪನವ...

ಗೋಣಿಕೊಪ್ಪಲು— ಮೆ ಚಿಮ್ಮಂಡ ಮಾದಪ್ಪನವ...

ಮಡಿಕೇರಿ—ಮೆ ಜಿ ಪೂವಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮೆ. ಐನಂಡ ಮಾದಪ್ಪನವ...
" ಮತ್ತು ವೀರಾಜಪೇಟೆ—ಮೆ. ಕಳಿಯಂ... ವೈಯ್ಯ...

ಮಡಿಕೇರಿ- ಸುಂಟಿಕೊಪ್ಪ ನಾಡ —ಮೆ ... ನವರು

ಪೊನ್ನಂಪೇಟೆನಾಡ — ಮೆ. ಸಿ. ಪಿ ಮುದ್ದಯ್ಯ...

ಶ್ರೀಮಂಗಲನಾಡು—ಮೆ. ಇಟ್ಟಿರ ಚಂಗಪ್ಪನವರು

ಅಲ್ಲದೆ ಈ ಸಮ್ಮಂಧ ಮೆ. ಚಂಗಂಡ ಕುಟ್ಟಪ್ಪ... ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸು... ವಾಗ ಅವರಿಗೂ ಹಣ ಮೊಬಲಗು ಕೊಡಬೇಕಾ...

' ಕೊಡಗು " ಲಿಮಿಟೆಡ್. ಮೇನೇಜರ್

Printed & published by ... Belliappa, at " Kodagu " ... Mercara for " Kodagu " Ltd.

If not delivered please return to
"KODAGU" OFFICE MERCARA

ಕೊಡಗು.

ರಿಜಿಸ್ಟರ್ಡ ನಂ ಮ—೮—೦೧

ಶಕ್ಯೇನ ಧೂಕದಯಯಾ ವಿದ್ಯಾ ಸೀತಿ ಪ್ರಯುಕ್ತಾಃ || ಐಕ್ಯಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯ ಸಂಪದಾ ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ಸನ್ ೧೯೨೬ನೇ ಇಸವಿ ನವಂಬರ್ ತಾರೀಕು ೧೨ನೇ ಶುಕ್ರವಾರ [ಸಂಚಿಕೆ ೨೩

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties		4 lbs- Rs 30/ 4 1/2 lbs- Rs. 33/ 5 lbs- Rs 36/-Doz
Digging forks 4 prongs	.. ..	Rs 48/ Doz.
Mamooty forks 4 prongs	.. ..	Rs 39/ Doz
Felling axes —	Each	Rs. 3/ & 3/4/
Planting bars—	Each	,, 3/12/
Weeding forks —	Each	,, 1/12/
Garden trowels	.. ..	,, 1/12/

GET IT AT SPENCERS- The House for all requisites

52—43

ಸ್ಥಾಪಿತವಾದ ವರ್ಷ 1874 ಮೂಲಧನ 7 ಕೋಟಿ ರೂಪಾಯಿಗಳು

ಓರಿಯಂಟಲ್ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು ಬೊಂಬಾಯಿ.

1922–1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಫಲಿತಾಂಶಗಳು —

ಲಾಭ— ರೂ 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಪೈಕಿ 45,91,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡಿರುವವರ ವಿಮೆ ಹಣಕ್ಕೆ ಇನ್ನು ಬೋನಸ್ ಒಮ್ಮೆವಾಗಿ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಸೇರಿಸಿರುತ್ತದೆ

ಜೀವಮಾನಾವಧಿಯ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 67½.

ನಿಶ್ಚಿತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ಸ್ಪಷ್ಟವಾಗುತ್ತದೆ

1923ರಲ್ಲಿ—ರೂ	1,74,00,000
1924 ,,	2,37,00,000
1925 ,,	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತ್ತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಸುಸಮಯ

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಲ್ ಆರ್. ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸೆಕ್ರೆಟರಿ

ಮನೋಲ್ಲಾಸಿನಿ ತೈಲ.

ತಲೆನೋವು, ತಲೆ ತಿರುಗುವದು, ತಲೆಯಲ್ಲಿ ಕಣ್ಣುರಿ, ಕಿವಿಯಿಂದ ಕೀವು ಸೋರುವದು, ಕಿವುಡುತನ, ಕಣ್ಣುನೋವು, ಅಜೀರ್ಣ, ನಿದ್ರೆ ಬಾರದಿರುವದು, ನೆನಪುಶಕ್ತಿ ಕುಂದಿಹೋಗುವದು ಇವುಗಳನ್ನೆಲ್ಲ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಡೆದುಕೊಳ್ಳಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ — ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಹನಿಹನಿಯಾಗಿ ಹೋಗುವದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೋಯುವಾಗ ಉರಿಯುವದು, ಮೂತ್ರನಾಳದಿಂದ ಕೀವು ಬರುವದು ಮೂತ್ರದಲ್ಲಿ ಧಾತು ಹೋಗುವದು, ಆಗಾಗ್ಗೆ ಮೂತ್ರ ಬರುವದು, ಮೂತ್ರ ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವದು ಇವುಗಳಲ್ಲಿ ಉರಿ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಹುಟ್ಟುವ ರೋಗ ಇವುಗಳಿಗೆ ಪರಮ ಔಷಧಿ ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0 3—8—0, 6—12—0

ರೋಮನಾಶಿನಿ — ಈ ಹುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವದು ಡಬ್ಬಿಗಳಿಗೆ 6 ಆಣೆ, 3 ಡಬ್ಬಿಗಳಿಗೆ ಪೋಸ್ಟೇಜಿ 3—8—0

ಟೊಳಶ್ಚಾಯ ಮಲೇರಿಯ ರಕ್ಷೆ.— ಇದು ಕ್ವಿನೈನ್ ಮತ್ತು ಸ್ಟ್ರಿಕ್ನಿನು ಸೇರಿಸಿದರೂ ಗುಣವಾಗದಿರುವ ಮಲೇರಿಯ ಜ್ವರ ದಿನಬಿಟ್ಟು ದಿನ—4 ದಿವಸಗಳಿಗೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಮತ್ತು ಜ್ವರಗಡ್ಡೆ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುವ ಸೀಸೆ 1ಕ್ಕೆ ರೂ 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—0—0,

ಪುಸ್ತಕಗಳು ಉಚಿತ ಕಳಿಸಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮೂಂಗೆಲೇನು, ಕಲಕತ್ತಾ.

—47

Good Chance! Good Chance!!

Ammunition At cheaper rate

Gun Powder per lb	1—14—0
Percussion caps per box of 250.	1—1—0
Eley Cartridges per 100	12—0—0
Lead shots per lb	0—8—0



Terms—Rs 5/ should be sent in advance for each order. Orders from coorgs should accompany the exemption certificate from the District Magistrate of Coorg

Free—6 Rubber air balloons will be given to any customer who transacts business with me for more than Rs. 20/ before 31st December, 1926.

Moffussil order Promptly attended to:

S VENKATARANGAM CHETTY,

Ammunition & Sulphur Merchant,

No. 9, China Bazaar Road, Madras.

12—7

ARMS & AMMUNITION MART.

Mahomedally-Noorbhoy.



321 Abdul Rehman Street, near Crawford Market, BOMBAY 3
Telegraphic Address - "SHOOTER" Bombay.

[52—11] Please write for Reduced net prices list for 1926.

“ಕೊಡಗು”

ಸನ್ ೧೯೩೬ನೇ ಇಸವಿ ನವಂಬರ್ ತಾ. ೧೩ನೇ ಶುಕ್ರವಾರ

ಚೀಫ್ ಕಮಿಷನರವರ ಭಾಷಣ.

ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನ ಮುಕ್ತಾಯದಲ್ಲಿ ಚೀಫ್ ಕಮಿಷನರು ಮಾಡಿದ ಭಾಷಣವನ್ನು ಕಳೆದವಾರ ಪ್ರಕಟಿಸಿದ್ದೆವು. ಇದರಲ್ಲಿ ಸೂಚಿಸಿರುವ ಕೆಲವು ಅಭಿಪ್ರಾಯಗಳನ್ನು ನಾವು ವಿಮರ್ಶಿಸಬೇಕಾಗಿದೆ. ಒಟ್ಟಿನ ಮೇಲೆ ಕೌನ್ಸಿಲಿನ ಕೆಲಸವನ್ನು ಶ್ಲಾಘಿಸಿರುತ್ತಾರೆ. ನಡತೆಯಲ್ಲಿಯೂ ಮರ್ಯಾದೆಯಲ್ಲಿಯೂ ಈ ಕೌನ್ಸಿಲಿನಂತೆ ಮುಂದಿನ ಕೌನ್ಸಿಲುಗಳೂ ನಡಕೊಂಡರೆ ಸಾಕೆಂಬ ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಅಲ್ಲದೆ ಈ ಕೌನ್ಸಿಲಿನಲ್ಲಿ ಪಾಸಾಗಿರುವ ಎರಡು ಬಾಸೂನಿನ ಆಕ್ಟುಗಳ ಮೇಲಿನ ಚರ್ಚೆಯು ನ್ಯಾಯವಾದ ಅಭಿಪ್ರಾಯಗಳಿಂದಲೂ, ಸ್ಪಷ್ಟವಾದ ಮುಂದಾಲೋಚನೆಯಿಂದಲೂ, ನಿಷ್ಕಪಟವಾದ ರಾಜಕೀಯ ತಿಳಿವಿನಿಂದಲೂ ಕೂಡಿದ್ದಾಗಿತ್ತೆಂದೂ, ದೇಶದ ಆದಾಯವೆಚ್ಚದ ವಿಚಾರದಲ್ಲಿ ಮೆಂಬರುಗಳು ತುಂಬಾ ಅಭಿರುಚಿ ತೋರಿಸಿದರೆಂತಲೂ ದೊಡ್ಡ ಪಡುತುಗಳಿಂದ ಕೌನ್ಸಿಲಿನ ಬಾಯಿಬಿಡೆ ಮಾಡುವ ಕೆಲಸವನ್ನು ಹೊಗಳಿರುತ್ತಾರೆ. ಕೌನ್ಸಿಲಿನ ಕಳೆದ ಚುನಾವಣೆಯೊದಂದಿನಿಂದಲೂ ಕೌನ್ಸಿಲಿಗೆ ಚುನಾಯಿತರಾದ ಮೆಂಬರುಗಳ ಅಭಿಪ್ರಾಯಕ್ಕೆ ಒಪ್ಪದೆ ಇರುವ ಕೆಲವರು, ನ್ಯಾಯವಾದ ಮತ್ತು ಯೋಗ್ಯರಾದ ಪ್ರತಿನಿಧಿಗಳನ್ನು ಜನರು ಆರಿಸಿಕೊಳ್ಳಲಿಲ್ಲವೆಂತಲೂ, ಅವರ ಕೌನ್ಸಿಲಿನೊಳಗಿನ ಕೆಲಸದಿಂದ ದೇಶದ ಮರ್ಯಾದೆಯು ಉಳಿಯಲಾರದೆಂತಲೂ ಹೇಳಿಕೊಳ್ಳುತ್ತಿದ್ದರು. ಚೀಫ್ ಕಮಿಷನರ ಭಾಷಣದಿಂದ ಇಂಥವರೆಲ್ಲರ ಸಂಶಯವು ಪರಿಹಾರವಾಗಿರಬಹುದೆಂತ ನಂಬುತ್ತೇವೆ

1929ನೇ ಇಸವಿಯಲ್ಲಿ ಒಟ್ಟು ಹಿಂದುಸ್ಥಾನದ ರಾಜಕೀಯ ಸುಧಾರಣೆಯನ್ನು ವಿಮರ್ಶಿಸುವಾಗ ನಮ್ಮ ದೇಶದ ಕೌನ್ಸಿಲಿನ ಕೆಲಸವನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಂತ ಹೇಳಿದ ಮಾತು ಆಶಾಜನಕವಾಗಿದೆ. ಈ ಕೌನ್ಸಿಲಿನಲ್ಲಿ ಈ ದೇಶಕ್ಕೆ ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟ ಸುಧಾರಣೆಯನ್ನೇ ಕೊಡಬೇಕೆಂತ ತಾ. 16—3—25ರಲ್ಲಿ ಠರಾವನ್ನು ಪಾಸ್ ಮಾಡಿ ಕಳುಹಿಸಿದ್ದಕ್ಕೆ ಈ ದೇಶದ ಸ್ಥಿತಿಯನ್ನೆಲ್ಲಾ ಯೋಚಿಸಿಯೇ ಈ ಕೌನ್ಸಿಲನ್ನು ಮಂಜೂರು ಮಾಡಿರುವದಾಗಿದೆ, ಹೆಚ್ಚಿನ ಸುಧಾರಣೆ ಕೊಡಲಾಗುವದಿಲ್ಲವೆಂತ ಜವಾಬು ಕೊಟ್ಟದ್ದನ್ನು ನೋಡಿದರೆ 1929ರಲ್ಲಿ ನಹ ಈ ದೇಶದ ಸುಧಾರಣೆಯನ್ನು ಮುಂದರಿಸುವ ಅಭಿಪ್ರಾಯವಿಲ್ಲವೋ ಎಂತ ತೋರುವಂತಿತ್ತು. 1929ನೇ ಇಸವಿ ವರೆಗ ನೋಡಿ ಯೋಚಿಸಲಾಗುತ್ತದೆಯೆಂಬ ಜವಾಬು ಬಾರದ್ದರಿಂದ ಆಶ್ಚರ್ಯವಾಗಲಿಕ್ಕೆ ಕಾರಣವಿತ್ತು. ಕೌನ್ಸಿಲ್ ಅಧ್ಯಕ್ಷರಾದ ಚೀಫ್ ಕಮಿಷನರ ಮಾತುಗಳಿಂದ 1929ರಲ್ಲಾದರೂ ಮುಂದರಿಸುವ ಸಂಭವವಿದೆಯೆಂಬುದು ಸ್ಪಷ್ಟವಾಗುತ್ತದೆ. ಹೆಚ್ಚಿನ ಸುಧಾರಣೆಯ ಠರಾವಿನ ಮೇಲ ಇಂಡಿಯಾ ಸರಕಾರಕ್ಕೆ ನಮ್ಮ ಸ್ಥಳೀಯ ಸರ್ಕಾರದವರು ಯಾವ ಅಭಿಪ್ರಾಯವನ್ನು ಕೊಟ್ಟಿದ್ದಾರೆಂಬದನ್ನು ತಿಳಿಸಿಕೊಡಬೇಕಾಗಿ ಕೇಳಿದ ಸವಾಲಿಗೆ ಅದಕ್ಕೆ ಸಂಬಂಧಪಟ್ಟ ಪತ್ರವ್ಯವಹಾರಗಳನ್ನು ತಿಳಿಸಲಿಕ್ಕಾಗುವದಿಲ್ಲವೆಂದು ಕಳೆದ ಅಧಿವೇಶನದಲ್ಲಿ ಜವಾಬು ಕೊಟ್ಟಿರುವರು. ಈ ಜವಾಬಿನಿಂದ ನಮ್ಮ ಸ್ಥಳೀಯ ಸರ್ಕಾರದವರು ನಮ್ಮ ದೇಶಕ್ಕೆ ಹೆಚ್ಚಿನ ಸುಧಾರಣೆ ಕೊಡಬೇಕೆಂಬವಷ್ಟೆ ಸಿಫಾರಸ್ಸು ಮಾಡಲಿಲ್ಲವೋ ಎಂಬ ಸಂಶಯವು ಹುಟ್ಟುತ್ತದೆ. ಆದ್ದರಿಂದ ದೇಶಕ್ಕೆ ಹೆಚ್ಚಿನ ಸುಧಾರಣೆ ಬೇಕೆಂತ ಹಟಹಿಡಿದು ಹೋರಾಡಬೇಕೆಂತ ಮುಂದಿನ ಕೌನ್ಸಿಲಿಗೆ ಚುನಾಯಿತರಾಗುವವರನ್ನು ಓಟರುಗಳು ಕೇಳಿಕೊಳ್ಳಬೇಕಾಗಿದೆ.

ಈ ಕೌನ್ಸಿಲಿನಂಥ ಆಲೋಚನಾ ಸಭೆಯಲ್ಲಿ ಮಂಜೂರಾದ ಠರಾವುಗಳಿಂದ ಕೌನ್ಸಿಲಿನ ಕೆಲಸದ ಯೋಗ್ಯತೆಯನ್ನು ಕಂಡುಹಿಡಿಯಲಿಕ್ಕೆ ಆಗುವದಿಲ್ಲವೆಂತಲೂ, ಚಾಗರೂಕತೆಯಿಂದ ನಡಸುವ ಟೀಕೆಗಳೂ, ಮುಂದಿನ ರಚನೆಗಳಿಗೆ ಸಹಾಯವಾಗುವಂಥ ಅಭಿಪ್ರಾಯಗಳೂ ಮುಖ್ಯವೆಂತಲೂ ಚೀಫ್ ಕಮಿಷನರು ಹೇಳಿದರು. ಈ ತರಹದ ಸಹಾಯವು ಸರ್ಕಾರಕ್ಕೆ ಕೌನ್ಸಿಲಿನಿಂದ ದೊರಕಿದೆಯೋ ಎಂಬದನ್ನು ಅವರು ಸೂಚಿಸಲಿಲ್ಲ. ಭಾಷಣವನ್ನು ಒಟ್ಟಾರೆ ತೆಗೆದುಕೊಂಡರೆ ಇಂಥಾ ಸಹಾಯವು ದೊರಕಿದೆಯೆಂಬ ಅಭಿಪ್ರಾಯ ತೋರಿಬರುತ್ತದೆ. ಬರೇ ಆಲೋಚನೆ ಕೊಡುವ ಕೆಲಸವು ಪ್ರಯೋಜನಕಾರಿಯಾಗಿದೆಯೋ ಎಂತ ಕಂಡುಹಿಡಿಯುವದು ಸುಲಭ ಸಾಧ್ಯವಲ್ಲ. ಅನೇಕ ಠರಾವುಗಳು ಪಾಸಾಗಿದಿದ್ದರೂ ಅಂಥಾ ಠರಾವುಗಳ ಚರ್ಚೆಯಿಂದ ಸರ್ಕಾರದ ವರ್ತನೆಯು ತಿಳಿಯಲಾಗುತ್ತದೆ. ಕೌನ್ಸಿಲಿಗೆ ಜವಾಬ್ದಾರಿ ಕೆಲಸಕೊಟ್ಟರೇನೇ ಅದರ ಮೆಂಬರುಗಳ ಕೆಲಸದ ಯೋಗ್ಯತೆಯು ಬಹಿರಂಗವಾಗುವುದು.

ಕೌನ್ಸಿಲು ಠರಾವುಗಳನ್ನನುಸರಿಸಿ ನೇಮಿಸಲ್ಪಟ್ಟ ಎರಡು ಕಮಿಟಿಗಳ ಕೆಲಸವನ್ನು ಚೀಫ್ ಕಮಿಷನರು ಶ್ಲಾಘಿಸಿದರು. ಕಮಿಟಿಗಳು ವಿಚಾರಿಸತಕ್ಕ ವಿಷಯಗಳೇನೋ ದೇಶದ ಅಭಿವೃದ್ಧಿಗೆ ಮುಖ್ಯವಾದವುಗಳಾಗಿವೆ. ಆದರೆ ತಯಾರಾಗಿರುವ ಮಲೇರಿಯ ಕಮಿಟಿ ರಿಪೋರ್ಟು ಪ್ರಕಟವಾಗದೆ ಅದರಿಂದ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಿದೆಯೆಂದು ಹೇಳಲಿಕ್ಕಾಗುವದಿಲ್ಲ. ಪ್ರಯೋಜನವಾಗುವಂಥ ಅಭಿಪ್ರಾಯಗಳು ರಿಪೋರ್ಟಿನಲ್ಲಿ ಎಷ್ಟಿದ್ದರೂ ಅವುಗಳನ್ನು ಸರ್ಕಾರದವರು ಜಾರಿಗ ತಾರದೆ ಇದ್ದರೆ ಕಮಿಟಿಯ ಕೆಲಸವು ಸಫಲವಾಗಲಾರದು. ಜಾನುವಾರುಗಳ ಕಮಿಟಿಯ ಕೆಲಸವು ಇನ್ನೂ ಮುಗಿದಿರುವದಿಲ್ಲ. ಈ ಕಮಿಟಿಗಳ ಕೆಲಸದಿಂದ ದೇಶಕ್ಕೆ ತುಂಬಾ ಪ್ರಯೋಜನವಾಗಬಹುದೆಂತ ಚೀಫ್ ಕಮಿಷನರು ಸೂಚಿಸಿರುವದರಿಂದ ಅವುಗಳ ಸಿಫಾರಸ್ಸುಗಳನ್ನು ಸರ್ಕಾರದವರು ಜಾರಿಗೆ ತರುವರಾಗಿ ನಂಬುತ್ತೇವೆ

ಸಾಮಾನ್ಯವಾಗಿ ಸಮುದಾಯಕ್ಕೆ ಸಂಬಂಧಪಡುವ ವಿಷಯಗಳ ಮೇಲೆ ಠರಾವು ತಂದು ಚರ್ಚಿಸುವ ಹಕ್ಕನ್ನು ಉಪಯೋಗಿಸುವಾಗ ಸಮುದಾಯಕ್ಕೆ ಸಂಬಂಧಪಡುವವಿಷಯಗಳಾದರೂ ಸಾಮಾನ್ಯವಾಗಿ ಇರುವಂಥವುಗಳಾಗಬೇಕೆಂಬದನ್ನು ಮರೆತಿದ್ದರೆಂಬ ಹಾಗೆ ಚೀಫ್ ಕಮಿಷನರು ಮಾತನಾಡಿದರು. ಮೆಂಬರುಗಳು ಈ ರೀತಿ ತಮ್ಮ ಕರ್ತವ್ಯವನ್ನು ಮರೆತಿದ್ದರೆಂತ ನಮಗೆ ತೋರಿಗಲಿಲ್ಲ. ಯಾವ ಯಾವವು ಸಾರ್ವಜನಿಕವಾದರೂ ಸಾಮಾನ್ಯವಾದವಾಗಿರಲಿಲ್ಲವೆಂಬದನ್ನು ಆಗಿಂದಾಗ್ಯೆ ತಿಳಿಸಿಕೊಟ್ಟರೆ ಉತ್ತಮವಾಗುತ್ತಿತ್ತು.

ಸವಾಲುಗಳಿಗೆ ಜವಾಬುಗಳನ್ನು ಜೋಡಿಸುವದಕ್ಕೂ, ಠರಾವುಗಳಿಗೆ ಜವಾಬುಕೊಡಲಿಕ್ಕೂ ಆಫೀಸ್ ಸಿಬ್ಬಂದಿಯವರಿಗೆ ತುಂಬಾ ಕೆಲಸ ಹೆಚ್ಚಾಗಿದೆಯೆಂಬದನ್ನು ನಾವು ಒಪ್ಪುತ್ತೇವೆ. ಇರುವ ಅಧಿಕಾರಿಗಳಿಂದ ನಡಿಸಿಕೊಳ್ಳಲು ಸಾಧ್ಯವಾಗದಷ್ಟು ಕಲಸವಿತ್ತೆಂತಾದರೆ ಅಂಥಾ ಹೆಚ್ಚು ಕೆಲಸವಿದ್ದ ಇಲಾಖೆಗಳಲ್ಲಿ ಹೆಚ್ಚಿನ ಸಿಬ್ಬಂದಿ ನೇಮಿಸಿಕೊಳ್ಳಬೇಕಾಗಿತ್ತು. ತಮಗೆ ಬಾರದಷ್ಟು ಕಲಸಕೊಟ್ಟು ಒಬ್ಬರಿಗೆ ಉಪಕಾರ ಹೇಳಿದರೆ ಸಾಲದು. ಆದರೂ ಕೆಲಸ ಮಾಡಿದವರಿಗೆ ಉಪಕಾರದ ಮಾತುಗಳಾದರೂ ದೇಶದ ಮುಖ್ಯ ಅಧಿಕಾರಿಗಳಾದ ಚೀಫ್ ಕಮಿಷನರಿಂದ ಸಿಕ್ಕಿದರೆ ಸಂತೋಷವಾಗಬಹುದು.

ಸವಾಲುಗಳಿಂದ ಅಧಿಕಾರಿಗಳಿಗೆ ಕಲಸ ಹೆಚ್ಚಾಗುತ್ತೆಂತಲೂ ಸವಾಲುಗಳಿಗೆ ದೊರಕಿದ ಜವಾಬುಗಳನ್ನು ಠರಾವುಗಳ ಚರ್ಚೆಯಲ್ಲಿ ಉಪಯೋಗಿಸಿಕೊಂಡರೆ ಸಫಲವಾದೀತೆಂತಲೂ ಹೇಳಿದ್ದು ನೋಡಿದರೆ ಅಧಿಕಾರಿಗಳಿಗೆ ಕೆಲಸ ಕೊಡಲಿಕ್ಕೇನೇ ಈ ಹಕ್ಕನ್ನು ಉಪಯೋಗಿಸಿದರು ಎಂಬ ಸಂಶಯ ಚೀಫ್ ಕಮಿಷನರಲ್ಲಿ ಇರುವಂತೆ ಕಾಣುತ್ತದೆ. ಅಧಿಕಾರಿಗಳಿಂದ ಸವಾಲು ಕೇಳಿ ಜವಾಬು ತೆಗೆದುಕೊಳ್ಳುವ ಅಮೂಲ್ಯವಾದ ಹಕ್ಕು ಈ ದೇಶದಲ್ಲಿ ಈಗ ತಾನೇ ದೊರಕಿದ್ದಾಗಿದೆ. ಹೊಸದಾಗಿ ಈ ಹಕ್ಕನ್ನು ಉಪಯೋಗಿಸುವಾಗ ಸವಾಲುಗಳ ಸಂಖ್ಯೆಯು ಹೆಚ್ಚಾಗಿರುವದು ಸ್ವಾಭಾವಿಕವಾಗಿದೆ. ಸವಾಲುಗಳಿಗೆ ದೊರಕಿದ ಜವಾಬುಗಳನ್ನು ಚರ್ಚೆಗಳಲ್ಲಿ ಉಪಯೋಗಿಸಲಿಕ್ಕಾಗಿಯೇ ಸವಾಲು ಕೇಳಬೇಕೆಂತ ಇಲ್ಲವಷ್ಟೆ. ಅಧಿಕಾರಿಗಳು ನಡಿಸುವ ಕೆಲಸಗಳ ಮೇಲೆ ಪ್ರಜಾಪ್ರತಿನಿಧಿಗಳಿಗೆ ಸವಾಲು ಹಾಕುವ ಹಕ್ಕು ಇದ್ದರೆ ಅಧಿಕಾರಿಗಳು ತಮ್ಮ ಕಲಸಗಳಿಗೆ ಹೆಚ್ಚಿಗೆ ಗಮನಕೊಡಬೇಕಾಗುತ್ತದೆ. ಅಧಿಕಾರಿಗಳ ಕೆಲಸದ ಅನೇಕ ಭಾಗಗಳು ಪ್ರಜಾಸಮುದಾಯಕ್ಕೆ ತಿಳಿಯುವದರಿಂದಲೂ ತುಂಬಾ ಪ್ರಯೋಜನವಿದೆ.

ಸಮೀಪದಲ್ಲೇ ಆಗಬೇಕಾದ ಹೊಸ ಚುನಾವಣೆಗೆ ನಿಲ್ಲುವ ಉಮೇದ್ವಾರರ ಕರ್ತವ್ಯವನ್ನು ನ್ಯಾಯ ರೀತಿಯಿಂದ ವಿವರಿಸಿದ್ದಾರೆ. ಸಮುದಾಯದ ಏಳಿಗೆ ತಿಳುವಳಿಕೆ ಕೊಡಬೇಕಾದದ್ದು ಬಹಳ ಅವಶ್ಯವಾದ ಕೆಲಸವಾಗಿದೆ. ಓಟರುಗಳಿಗೆ ಪ್ರತ್ಯೇಕ ಪ್ರತ್ಯೇಕ ಹೇಳುವದು ಕಷ್ಟ ಕೆಲಸ. ಅದಕ್ಕಿಂತಲೂ ಓಟರುಗಳ ಕೂಟಗಳನ್ನು ಕೂಡಿಸಿ ಬೋಧಿಸುವದು ಸುಲಭವಾದ ಮತ್ತು ಸರಿಯಾದ ರೀತಿಯಾಗಿದೆ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ವ್ಯಕ್ತಿ ದೂಷಣೆಗಳಲ್ಲೂ, ವ್ಯಕ್ತಿಗಳ ಉದ್ದೇಶಗಳನ್ನು ತುಚ್ಛೀಕರಿಸುವದರಲ್ಲೂ ಉಪಯೋಗಿಸಲ್ಪಡುತ್ತಿವೆ. ರಾಜಕೀಯ ಭಿನ್ನಾಭಿಪ್ರಾಯಗಳು ಬೇರೆ ಬೇರೆ ಪಂಗಡಗಳಿಗೆ ಬೇರೆ ಬೇರೆಯಾಗಿರುವದು ಸ್ವಭಾವಿಕವೆಂತ ಒಪ್ಪಿಕೊಂಡು ವ್ಯಕ್ತಿಗಳಿಗೆ ಗೌರವ ಕೊಡಬೇಕಾದದ್ದು ಅವಶ್ಯವಾಗಿದೆ. ಆದ್ದರಿಂದ "ರಾಜಕೀಯ ಭಿನ್ನಾಭಿಪ್ರಾಯಗಳು ಸಾಮಾಜಿಕ ಮತ್ತು ಸ್ವಂತವಿಷಯಗಳಿಗೆ ವ್ಯಾಪಿಸದಂತೆ ನೋಡಿಕೊಳ್ಳಿ" ಎಂಬ ಮಾತುಗಳು ಸಕಾಲದಲ್ಲಿ ಬಂದಿವೆ. ಇದಕ್ಕೆ ಎಲ್ಲರೂ ಗಮನ ಕೊಡುವದು ಯುಕ್ತವಾಗಿದೆ. ಚೀಫ್ ಕಮಿಷನರ ಇನ್ನೊಂದು ಬೋಧನೆ ಅತ್ಯಂತ ಮಹತ್ವದ್ದಾಗಿದೆ. ಪಂಗಡವಾರು ಕ್ಷೇಮವನ್ನು ಎಣಿಸದೆ ಈ ಒಟ್ಟು ದೇಶದ ಅಭಿವೃದ್ಧಿ ಮೇಲೆದೃಷ್ಟಿ ಇಟ್ಟು ಕೆಲಸಮಾಡಬೇಕೆಂತ ಹೇಳಿದ್ದಾರೆ. ಈ ದೇಶದಲ್ಲಿ ಈಚೆಗೆ ಹುಟ್ಟಿರುವ ಕೋಮುವಾರು ಜಗಳಗಳನ್ನೆಬ್ಬಿಸಿದವರು ಈ ಮಾತುಗಳಿಗೆ ಗಮನಕೊಡಬೇಕಾಗಿದೆ. "ಈ ಕೌನ್ಸಿಲು ಬಂದಾದ ಕೊಡಗಿನ, ಒಟ್ಟು ಕೊಡಗಿನ ಪ್ರತಿನಿಧಿಯಾಗಲಿ" ಎಂಬ ಮಾತುಗಳನ್ನು ಎಲ್ಲರೂ ತಮ್ಮ ಸಾರ್ವಜನಿಕ ಕೆಲಸದಲ್ಲಿ ತಮ್ಮ ಮುಂದೆ ಇಟ್ಟುಕೊಳ್ಳಬೇಕಾದದ್ದು ಅವಶ್ಯವಾಗಿದೆ. ಕೊಡಗಿನಲ್ಲಿ ವಾಸಿಸುವವರೆಲ್ಲರೂ "ನಮ್ಮ ಕೊಡಗು, ನಮ್ಮ ಕೊಡಗಿನ ಒಟ್ಟು ಜನರ ಕ್ಷೇಮಕ್ಕಾಗಿಯೇ ನಾವು ಕೆಲಸ ಮಾಡಬೇಕಾಗಿದೆ. ನಮ್ಮ ಜಾತಿಯ ಜನರು ಮಾತ್ರ ಮುಂದೆ ಬಂದರೆ ಸಾಲದು" ಎಂಬ ಧ್ಯೇಯದಿಂದ ಕೆಲಸಮಾಡಿದರೆ ದೇಶದಲ್ಲಿ ಎಲ್ಲಾ ಜಾತಿ ಜನರ ಕ್ಷೇಮವೂ ಏಕ ಕಾಲದಲ್ಲೇ ಮುಂದಕ್ಕೆ ಬರುವದರಲ್ಲಿ ಸಂಶಯವಿಲ್ಲ. ಈ ರೀತಿ ಒಗ್ಗಟ್ಟಾದರೆ ದೇಶಕ್ಕೆ ಸ್ವಾತಂತ್ರ್ಯವು ಶೀಘ್ರದಲ್ಲೇ ದೊರಕುವದರಲ್ಲಿ ಸಂದೇಹವಿಲ್ಲ.

ಓಟು ಕೊಡುವ ವಿಧಾನ.

ಡಿಸ್ಟ್ರಿಕ್ಟ್‌ಬೋರ್ಡು ಮತ್ತು ಕೌನ್ಸಿಲ್ ಚುನಾವಣೆಗಳಲ್ಲಿ ವಿದ್ಯಾವಂತರಿಗೆ ಓಟು ಕೊಡುವದರಲ್ಲಿ ಕಷ್ಟವೇನೂ ಇಲ್ಲ. ಆದರೆ ಓದುಬರಹ ತಿಳಿಯದವರಿಗೂ ಅಕ್ಷರ ... ಟು ಗುರುತು ಮಾಡುವದಕ್ಕೆ ಓದು ಬಲ್ಲವರ ಸಹಾಯ ಅಗತ್ಯವಾಗಿದೆ. ಕಳೆದ ಚುನಾವಣೆಯಲ್ಲಿ ಅಂಥವರಿಗೆ ಪೋಲಿಂಗ್ ಆಫೀಸರೇ 'ಬ್ಯಾಲೆಟ್' ಪೇಪರಿನಲ್ಲಿರುವ ಉಮೇದುವಾರರ ಹೆಸರುಗಳನ್ನು ಓದಿಹೇಳಿ, ಓಟರರು ಹೇಳಿದವರಿಗೆ ಓಟಿನ ಗುರುತುಗಳನ್ನು ಮಾಡಿಕೊಟ್ಟರು. ಓಟಿನ ಗುರುತು ಮಾಡುವಾಗ ಪೋಲಿಂಗ್ ಆಫೀಸರು ಮತ್ತು ಓಟರು ಇವರಿಬ್ಬರು ಮಾತ್ರ ಅಲ್ಲಿ ಇರುವದರಿಂದ ಪೋಲಿಂಗ್ ಆಫೀಸರು ಓಟರರ ಇಚ್ಛೆಯಂತೆ ನಡೆಯದೆ ತನಗೆ ಇಷ್ಟ ಬಂದವರಿಗೆ ಗುರುತು ಮಾಡಲು ಅವಕಾಶ ದೊರೆಯುತ್ತದೆ. ಇಂಥಾ ಅವಕಾಶವನ್ನು ಹೋಗಲಾಡಿಸಲಿಕ್ಕಾಗಿ ಮದ್ರಾಸು ಸರ್ಕಾರದವರು ಈಗಿನ ಚುನಾವಣೆಯಲ್ಲಿ ಒಂದು ಕ್ರಮವನ್ನು ಅನುಸರಿಸಿರುವರು. ಈ ಕ್ರಮದ ಪ್ರಕಾರ ಈಗ ಪೋಲಿಂಗ್ ಆಫೀಸರು ಗುರುತು ಮಾಡುವಾಗ ಉಮೇದುವಾರರಾಗಲೀ ಅವರ ಕಡೆ ಏಜಂಟರುಗಳಾಗಲೀ ಅಲ್ಲಿದ್ದು ಗುರುತು ಮಾಡುವದನ್ನು ನೋಡಬಹುದು. ಆದ್ದರಿಂದ ಪೋಲಿಂಗ್ ಆಫೀಸರು ಓಟರು ಹೇಳಿದವರಿಗೇ ಗುರುತು ಮಾಡಬೇಕಾಗುತ್ತೆ. "ಮದ್ರಾಸು ಸರ್ಕಾರದ ಕ್ರಮವು ನಮ್ಮ ಸರ್ಕಾರದ ಗೋಚರಕ್ಕೆ ಬಂದಿದೆಯೋ ಆ ಕ್ರಮವನ್ನು ಇಲ್ಲಿಯೂ ಜಾರಿಗೆ ತರಲು ಅಡ್ಡಿ ಏನಾದರೂ ಇದೆಯೋ" ಎಂದು ಕೇಳಿದ ಪ್ರಶ್ನೆಗಳಿಗೆ ಕೌನ್ಸಿಲಿನ ಕಳೆದ ಅಧಿವೇಶನದಲ್ಲಿ "ಈ ಕ್ರಮವನ್ನೊಳಕೊಂಡ ಮದ್ರಾಸ್ ಪ್ರಕಟಣೆಯ ಖಾತರಿ ನಕಲಿಗೆ ಬರೆಯಲಾಗಿದೆ. ಅದು ಬಂದ ಕೂಡಲೆ ಆಲೋಚಿಸಲಾಗುವದು". ಎಂದು ನಮ್ಮ ಸರ್ಕಾರದವರು ಜವಾಬು ಕೊಟ್ಟಿರುವರು. ಮದ್ರಾಸು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಈ ಕ್ರಮವನ್ನು ಇಲ್ಲಿಯೂ ಜಾರಿಗೆ ತರುವೆನೆಂದು ಇಲ್ಲಿ ಪ್ರಕಟಿಸಲು ನಮ್ಮ ಸರ್ಕಾರದವರು ಏಕೆ ತಡ ಮಾಡುವರೋ ತಿಳಿಯದು.

ಯಾರ್‍ಯಾರಿಗೆ ಓಟುಕೊಟ್ಟನೆಂದು ಕೊಟ್ಟವನಿಗಲ್ಲದೆ ಯಾರಿಗೂ ತಿಳಿಯಬಾರದೆಂಬ ತತ್ವವನ್ನು ತಕ್ಕಷ್ಟು ಮಟ್ಟಿಗಾದರೂ ಕಾಪಾಡಲಿಕ್ಕಾಗಿ ಬೊಂಬಾಯಿ ಸರ್ಕಾರದವರು ಈ ವಿಷಯದಲ್ಲಿ ಇನ್ನೂ ಸ್ವಲ್ಪ ಮುಂದುವರಿದಿರುವರು. ಅಲ್ಲಿ ಬ್ಯಾಲೆಟ್ ಪೇಪರಿನಲ್ಲಿ ಪ್ರತಿಯೊಬ್ಬ ಉಮೇದುವಾರರ ಹೆಸರಿನ ಎದುರುಗಡೆಯಲ್ಲಿ ಒಂದೊಂದು ಚಿತ್ರವು ಪ್ರಿಂಟು ಮಾಡಲ್ಪಟ್ಟಿರುವದು. ಇಂಥಾ ಚಿತ್ರವು ಮನುಷ್ಯ, ನಾಯಿ, ಕುದುರೆ, ಗಾಡಿ, ತಕ್ಕಡಿ ಮೊದಲಾದುವುಗಳ ಪಟವಾಗಿರಬಹುದು. ತನ್ನ ಗುರುತು ಇಂಥಾದ್ದೆಂದೇ ಉಮೇದುವಾರನು ಮೊದಲೇ ಓಟರುಗಳಿಗೆ ತಿಳಿಸುವದರಿಂದ ಆ ಚಿತ್ರದ ಹೆಸರಿಗೇನೆ ಗುರುತು (ಓಟು) ಮಾಡಲು ಓದುಬರಹ ತಿಳಿಯದವರಿಗೂ ಅನುಕೂಲವಾಗುವದು. ಇಲ್ಲವೇ ಪೋಲಿಂಗ್ ಆಫೀಸರಿಂದ ಗುರುತುಮಾಡಿಸಿಕೊಳ್ಳಬಹುದು. ಆದರೆ ಓಟರನು ಹೇಳುವ ಚಿತ್ರದ ಹೆಸರಿಗೇನೇ ಆಫೀಸರು ಗುರುತು ಮಾಡುತ್ತಾನೋ ಇಲ್ಲವೋ ಎಂದು ಅವನಿಗೆ ನೋಡಿಕೊಳ್ಳಬಹುದು. ಆದುದರಿಂದ ಇಲ್ಲಿ ಮೋಸ ಮಾಡಲಿಕ್ಕೆ ಎಡೆ ಇಲ್ಲ.

ಹೀಗೆ ಮಾಡಲು ಸಾಧ್ಯವಿಲ್ಲದಿದ್ದರೆ ಇನ್ನೊಂದು ವಿಧಾನವನ್ನು ಕೈಕೊಳ್ಳಬಹುದು. ಪೋಲಿಂಗ್ ಆಫೀಸರ ಬದಲು ಓಟರನಿಗೆ ವಿಶ್ವಾಸವಿರುವವನೊಬ್ಬನನ್ನು ತನ್ನ ಸಂಗಡ ಓಟ್ ಕೊಡುವ ಕೋಣೆಗೆ ಕರಕೊಂಡು ಹೋಗಿ ಅಲ್ಲಿ ತನಗೆ ಬೇಕಾದ ಹೆಸರುಗಳಿಗೆ ಓಟು ಗುರುತು ಮಾಡಿಸಿಕೊಳ್ಳುವಂತೆ ಬಿಡಬಹುದು. ಇದರಿಂದ ಓಟಿನ ಗುಟ್ಟು ಹೊರಬೀಳುವದಿಲ್ಲ; ತನಗೆ ಬೇಕಾದವರಿಗೇನೇ ಓಟುಕೊಟ್ಟೆನೆಂಬ ನಂಬಿಕೆಯೂ ಓಟರನಿಗೆ ಇರುತ್ತದೆ. ಸದ್ಯಕ್ಕೆ ನಮ್ಮ ದೇಶದಲ್ಲಿ ಈ ಮೂರು ವಿಧಾನಗಳಲ್ಲಿ ಯಾವದಾದರೊಂದನ್ನು ಅನುಸರಿಸಿದರೆ ಸಾಕಾಗಿದೆ. ಅದರಲ್ಲೂ ಪೋಲಿಂಗ್ ಆಫೀಸರ ಮೇಲೆ ಉಂಟಾಗಬಹುದಾದ ಸಂಶಯವನ್ನೂ, ಉಮೇದುವಾರರೂ ಅವರ ಏಜೆಂಟರುಗಳ ಮೇಲಿನ ಸುಲಭವನ್ನೂ ತಪ್ಪಿಸುವಂಥಾ ವಿಧಾನವನ್ನೇ ಜಾರಿಗೆ ತಂದರೆ ಉತ್ತಮ. ಹೇಗಾದರೂ ಸರ್ಕಾರದವರು ಈ ವಿಷಯಕ್ಕೆ ಒಡನೆ ನಿಗವಿಟ್ಟು ಕಳೆದ ಸಲದ ಚುನಾವಣೆಯಲ್ಲಿ ಉಂಟಾಗಿದ್ದಂಥ ಫಿರ್ಯಾದುಗಳಿಗೆ ಈ ಸಲ ಎಡೆ ಕೊಡದಂತೆ ಮಾಡುವರಾಗಿ ಆಶಿಸುತ್ತೇವೆ.

ಒಡನೇ ಆಗಲಿಕ್ಕಿರುವ ಡಿಸ್ಟ್ರಿಕ್ಟ್‌ಬೋರ್ಡ್ ಚುನಾವಣೆಯಲ್ಲೂ ಓದುಬರಹ ತಿಳಿಯದ ಓಟರುಗಳಿಗೆ ಸಹಾಯವಾಗಬೇಕಾಗಿದೆ. ಆಲೋಚನೆ ಮಾಡಲು ಹೆಚ್ಚು ಸಮಯಕ್ಕೆ ಅವಕಾಶವಿಲ್ಲ. ಕೂಡಲೇ ಸರಕಾರದ ತುರ್ತು ಆಜ್ಞೆ ಬರಲೆಂತ ಎದುರುನೋಡುತ್ತಿದ್ದೇವೆ.

ಕೌನ್ಸಿಲು ಮೀಟಿಂಗಿನ ವಿವರ

(ಕಳೆದ ವಾರದಿಂದ ಮುಂದುವರಿದದ್ದು)

ರಠಾವು ನಂಬರು ೯೭.— ಕೊಡಗು ದೇಶದ ಮಧ್ಯದಲ್ಲಿ ಅನುಕೂಲವಾದ ಒಂದು ಮಧ್ಯ ಸ್ಥಳದಲ್ಲಿ ಆಯುರ್ವೇದ ಔಷಧಾಲಯ ಒಂದನ್ನು ಸ್ಥಾಪಿಸಬೇಕೆಂಬ ಠರಾವನ್ನು ಬಿ. ಶ್ರೀಪತಿರಾಯರು ಕೌನ್ಸಿಲಿನ ಮುಂದಿಟ್ಟು, ಆಯುರ್ವೇದ ಔಷಧಶಾಸ್ತ್ರವು ಪಾಶ್ಚಾತ್ಯ ಕ್ರಮಕ್ಕಿಂತ ಹಿಂದುಳಿದುದಲ್ಲವೆಂಬುದಕ್ಕೂ, ಆಯುರ್ವೇದ ಪದ್ಧತಿಯನ್ನು ಪಾಶ್ಚಾತ್ಯ ಪಂಡಿತರನೇಕರು ಶ್ಲಾಘಿಸಿದ್ದಾರೆಂಬುದಕ್ಕೂ ಆಧಾರಗಳನ್ನು ಕೊಟ್ಟು, ಗ್ರಾಮವಾಸಿಗಳಿಗೆ ಒಗ್ಗಿದಂಥ ಮತ್ತು ಅತಿ ಸುಲಭ ಕ್ರಯದಲ್ಲಿ ದೊರಕುವಂಥ ಚಿಕಿತ್ಸೆಯನ್ನು ಒದಗಿಸಿಕೊಡುವದು ಸರ್ಕಾರದವರ ಕರ್ತವ್ಯವಾಗಿದೆಯೆಂತ ವಾದಿಸಿದರು. ಇದನ್ನು ವಾದಿಕೆಯಿಂದ ಅನುಮೋದಿಸಿದನಂತರ ಸ್ಟೀವನ್ಸ್ ಮೆಂಬರು ಇದಕ್ಕೆ ವಿರೋಧಿಸಿದರು. ಇವರ ವಾದವೇನೆಂದರೆ—ಆಯುರ್ವೇದ ಪದ್ಧತಿಯನ್ನು ಅನುಸರಿಸಲು ಆಕ್ಷೇಪವೇನೂ ಇಲ್ಲ. ಆದರೆ ಆಸ್ಪತ್ರೆಗಳನ್ನು ತೆರೆಯುವ ಕೆಲಸ ಡಿಸ್ಟ್ರಿಕ್ಟ್ ಬೋರ್ಡಿನದಾಗಿದೆ. ಡಿಸ್ಟ್ರಿಕ್ಟ್ ಬೋರ್ಡಿನವರು ಈ ವಿಷಯ ಚರ್ಚಿಸಿ ಸರ್ಕಾರವನ್ನು ಕೇಳಿಕೊಂಡರೆ ಆಲೋಚಿಸಬಹುದು.

ಮೆ. ಬಿ ಶ್ರೀಪತಿರಾಯರು—ಈ ತರದ ಜವಾಬು ವಿಷಯಗಳನ್ನು ಸರ್ಕಾರದವರು ಮಾಡಿ ತೆಗೆದುಕೊಳ್ಳಬೇಕೆ ಡಿಸ್ಟ್ರಿಕ್ಟ್ ಬೋರ್ಡಿನವರು ಹಿಂಬಾಲಿಸುವುದು ಉಚಿತ. ಮದ್ರಾಸಿನಲ್ಲಿ ಸರ್ಕಾರದವರೇ ಒಂದು ಆಸ್ಪತ್ರೆಯನ್ನು ರೀತಿಯಲ್ಲಿ ಆಯುರ್ವೇದಿಕ ಆಸ್ಪತ್ರೆಯನ್ನು ತೆರೆಯುವ ವಿಚಾರದಲ್ಲಿದ್ದಾರೆ. ಒಂದು ಆಯುರ್ವೇದ ಕಾಲೇಜು ಈಗಾಗಲೇ ನಡೆಸುತ್ತಿದ್ದಾರೆ, ಎಂತ ಜವಾಬು ಕೊಟ್ಟರು. ಠರಾವು ಆಗಿ ಹಾಕಲಾಗಿ ಬಹುಮತದಿಂದ ನಾಪಾಸಾಯಿತು.

ಠ ನಂ. ೯೧ ಎಲ್ಲಾ ಪ್ರೈಮರಿಶಾಲೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸಿಕೊಟ್ಟು ಅವುಗಳಿಗಾಗುವ ಖರ್ಚನ್ನು ಡಿ. ಬೋರ್ಡಿಗೆ ಕೊಡಬೇಕೆಂಬ ಠರಾವನ್ನು ಮೆ. ಎ. ಬಿ. ಚಂಗಪ್ಪನವರು ವಾಪಸು ತೆಗೆದುಕೊಂಡರು.

ಠ ನಂ. ೯೪. ಸಂಪಾಜೆ ನಾಡಿನ ರೈತರ ಜಮೀನುಗಳ ಮಾಫಿಯಾಗಿ ಬಿಟ್ಟುಬಿಡಬೇಕೆಂಬ ಠರಾವನ್ನು ಬಿ ಶ್ರೀಪತಿರಾಯರು ವಾಪಸು ತೆಗೆದುಕೊಂಡರು.

ಠ ನಂ ೧೦೨. ಜಮ್ಮದ ರೈತರು ಕೊಡಗಿನ ಹೊರಗೆ ಬ್ರಿಟಿಷ್ ಹಿಂದೂಸ್ಥಾನದಲ್ಲಿ ವಾಸಮಾಡುವಾಗ ಮತ್ತು ತಿರುಗಾಡುವಾಗ ಕೋವಿ ಮತ್ತು ರೈಫಲುಗಳನ್ನು ಕೊಡಗಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ (ರಿಯಾಯಿತಿ ಇದೆ ಎಂಬ) ಸರ್ಟಿಫಿಕೇಟಿನ ಮೇಲೆ ಇಟ್ಟುಕೊಳ್ಳಬಹುದಾದಂತೆಯೇ ರಿವಾಲ್ವರುಗಳನ್ನು ಇಟ್ಟುಕೊಳ್ಳಲು ಬಿಡುವಂತೆ ಚೀಫ್ ಕಮಿಷನರು ಇಂಡಿಯಾ ಸರ್ಕಾರಕ್ಕೆ ಬರೆಕೊಳ್ಳಬೇಕೆಂಬ ಠರಾವನ್ನು ಮೆ. ಪಿ ಬಿ ಬೆಳ್ಳಿಯಪ್ಪನವರು ಸೂಚಿಸಿ ಹೇಳಿದ್ದೇನೆಂದರೆ —

ಹೊಸ ಹಕ್ಕು ಪಡೆಯಲಿಕ್ಕೆ ಈ ಠರಾವು ತಂದದ್ದಲ್ಲ. ಜಮ್ಮದವರಿಗೆ ಮೊದಲೇ ಇದ್ದು ಮಧ್ಯದಲ್ಲಿ ಬಿಟ್ಟುಹೋಗಿದ್ದ ಹಕ್ಕನ್ನು ಮುಂದುವರಿಸಬೇಕೆಂಬುದೇ ನನ್ನ ಅಭಿಪ್ರಾಯ. ೧೮೭೮ ರ ಆರ್ಮ್ಸ್ ಆಕ್ಟು ಮತ್ತು ೧೯೨೦ ರ ಆರ್ಮ್ಸ್ ರೂಲ್ಸ್ ಪ್ರಕಾರ ಕೊಡವರು ಮತ್ತು ಜಮ್ಮದವರು ಕೊಡಗಿನೊಳಗೆ ಎಂತೆಯೇ ಹೊರಗೂ ಈ ಆಕ್ಟಿನಿಂದ ವಿನಾಯಿಸಲ್ಪಟ್ಟಿದ್ದರು. ಆದರೆ ಈ ರೂಲ್ಸನ್ನು ೧೯೨೪ ರಲ್ಲಿ ಬದಲಾಯಿಸಿದಾಗ ಇವರು ಕೊಡಗಿನ ಹೊರಪ್ರಾಂತ್ಯಗಳಲ್ಲಿ ವಾಸಿಸುವಾಗ ಆಥವಾ ಸಂಚರಿಸುವಾಗ ಒಬ್ಬನು ಒಂದು ರೈಫಲು ಮತ್ತು ಅದಕ್ಕೆ ಬೇಕಾದ ೧೦೦ ತೋಟೆಗಳು, ಒಂದು ಕೇಪಿನ ಅಥವಾ ತೋಟೆದ ಕೋವಿ ಮತ್ತು ೫೦೦ ತೋಟೆಗಳು, ಇಷ್ಟನ್ನು ಮಾತ್ರ ಇಟ್ಟುಕೊಳ್ಳಬಹುದೆಂದು ತಿದ್ದುಪಡಿಮಾಡಿದರು. ಹೀಗೆ ೧೯೨೪ ರಲ್ಲಿ ಪಿಸ್ತೂಲು ಯಾ ರಿವಾಲ್ವರನ್ನು ಇಟ್ಟುಕೊಳ್ಳುವ ರಿಯಾಯಿತಿಯನ್ನು ಯಾಕೆ ರದ್ದುಮಾಡಿದರೋ ತಿಳಿಯದು. ಹೀಗೆ ತಿದ್ದುಪಡಿ ಮಾಡುವಾಗ ಇಂಡಿಯಾ ಸರ್ಕಾರದವರು ನಮ್ಮ ಸ್ಥಳೀಯ ಸರ್ಕಾರವನ್ನು ಕೇಳಿರಬೇಕು. ಆದರೆ ನಮ್ಮ ಸರ್ಕಾರವು ಜನಸಮುದಾಯದ ಅಭಿಪ್ರಾಯ ತಿಳಿಯಲು ಪ್ರಯತ್ನಿಸಲೇ ಇಲ್ಲ. ಆದುದರಿಂದ ಇಲ್ಲಿಯ ಅಧಿಕಾರಿಗಳು ನಮ್ಮ ಹಕ್ಕನ್ನು ತೆಗೆಯುವಂತೆ ವಾದ ಮಾಡಲೇ ಇಲ್ಲವೆಂದು ತೋರುತ್ತೆ. ಹೀಗಾದರೆ ಕೊಡವರು ಮತ್ತು ಜಮ್ಮದವರು ಈ ಹಕ್ಕನ್ನು ಕ್ರಮೇಣ ಪೂರ್ತಿ ಕಳಕೊಳ್ಳುವರೆಂದು ತೋರುತ್ತದೆ. ಈಗಾಗಲೇ ಕಳಕೊಳ್ಳಲು ಪ್ರಾರಂಭಿಸಿದ್ದೇವೆ. ಬೇಗನೆ ಅದನ್ನು ಹಿಂತಿರುಗಿ ಪಡೆಯದೆ ಇದ್ದರೆ ನಮ್ಮ ಹಕ್ಕುಗಳೆಲ್ಲಾ ಹೋಗುವವು. ಆದುದರಿಂದ ಇತರ ಪ್ರತಿನಿಧಿಗಳಿಂದ ಇಲ್ಲಿಯ ಮೆಂಬರ ಗಳು ಮತ್ತು ಸರ್ಕಾರದವರು ಇದಕ್ಕೆ ಒತ್ತಾಸೆಕೊಡುವರಾಗಿ ನಂಬುತ್ತೇನೆ.

ಮೆ. ಕೆ ಪಿ ಚಿಣ್ಣಪ್ಪನವರು ಅನುಮೋದಿಸಿದರು.

ಪ್ಯೂಸೀನ್ಸ್ ಮೆಂಬರಾದ ಮೆ. ಬಾಸ್ಕರರವರು—ಕೊಡವರಿಗೂ ಮತ್ತು ಜಮ್ಮದವರಿಗೂ ಕೋವಿ ಕತ್ತಿ ಹಿಡಿಯುವ ರಿಯಾಯಿತಿಯನ್ನು ೧೮೭೮ ರಲ್ಲಿ ಕೊಟ್ಟದ್ದಾಗಿದೆ. ಈ ರಿಯಾಯಿತಿಯು ಕೊಡಗಿನೊಳಗೆ ಮಾತ್ರ ಸಂಬಂಧಿಸುವದಾಗಿತ್ತು. ಇದು ಬಹಳ ಅಮೂಲ್ಯವಾದಂಥ ಹಕ್ಕು. ರಿವಾಲ್ವರುಗಳಂಥ ಹೊಸ ಆಯುಧಗಳಿಗೂ ಈ ರಿಯಾಯಿತಿ ವ್ಯಾಪಿಸುತ್ತದೆಂದು ವಾದಿಸುವದು ಅಧಾರಕೊಡಬೇಕಾಗಿದೆ. ಕಳೆದ ಮತ್ತು ಮಹಾಯುದ್ಧಗಳಿಂದೀಚೆಗೆ ಆರ್ಮ್ಸ್ ಆಕ್ಟಿನಿಂದ ವಿನಾಯಿಸಲ್ಪಟ್ಟವರ ಪಟ್ಟಿಯಲ್ಲಿ ಇಂಡಿಯಾ ಸರ್ಕಾರದವರು ತುಂಬಾ ಬಗೆದಿದ್ದಾರೆ. ಅಂಥವರ ಪಟ್ಟಿಯು ಉದ್ದವಾಗಿದ್ದದನ್ನು ಈಗ ಬಹಳ ಸಣ್ಣದು ಮಾಡಿದ್ದಾರೆ. ಆದರೂ ಕೊಡವರ ಮತ್ತು ಜಮ್ಮದವರ ಹಕ್ಕು ಗಟ್ಟಿಯಾಗಿಯೇ ಇದೆ. ಇದರಿಂದ ಕೊಟ್ಟ ಹಕ್ಕನ್ನು ತೆಗೆಯುವ ಅಭಿಪ್ರಾಯ ಸರ್ಕಾರಕ್ಕೆ ಇಲ್ಲವೆಂದು ಗೊತ್ತಾಗುತ್ತದೆ. ರಿವಾಲ್ವರು ಅಪಾಯಕರವಾದ ಆಯುಧವಾಗಿದೆ. ಇಂಡಿಯಾ ಸರ್ಕಾರದವರ ಹುಕುಮಿನಂತೆ ಸ್ಥಳೀಯ ಸರ್ಕಾರದವರು ನಡೆಯಬೇಕಾಗಿದೆ. ಇದು ಮಿಲಿಟರಿ ಮತ್ತು ಪೋಲೀಸು ಡ್ಯೂಟಿ ಮಾಡುವವರಿಗಾಗಿ ಕೊಟ್ಟ ರಿಯಾಯಿತಿಯಾಗಿದೆ. ಈ ಠರಾವನ್ನು ಸೂಚಿಸಿದ ಮೆಂಬರರೇ 'ಹುಟ್ಟಿಬೆಟ್ಟಿ' ಬಾಕಿಯನ್ನು ರದ್ದುಮಾಡಬೇಕೆಂತ ಠರಾವು ತಂದಿದ್ದರು. ಈ ಸರ್ವಿಸನ್ನು ರದ್ದುಪಡಿಸುವದಾದರೆ ಕೋವಿ ರಿಯಾಯಿತಿಯನ್ನು ಹೆಚ್ಚಿಸಲು ಕೇಳುವದು ಹೇಗೆ? ಎಂತ ಹೇಳಿ ಠರಾವಿಗೆ ವಿರೋಧಿಸಿದರು.

ರಿವಾಲ್ವರನ್ನು ಇಟ್ಟುಕೊಳ್ಳಲು ಬಿಡುವದು ಅಪಾಯಕರ. ಹಿಂದೂದೇಶದಲ್ಲೆಲ್ಲಾ ಶಾಂತತೆ ಇರುವಾಗ ರಿವಾಲ್ವರನ್ನು ಇಟ್ಟುಕೊಳ್ಳಬೇಕಾದದ್ದು ಅನಾವಶ್ಯಕ. ಈ ರಿಯಾಯಿತಿಯಿಂದ ಪುಂಡರ ಕೈಗೆ ರಿವಾಲ್ವರು ಸಿಕ್ಕಬಹುದು. ಅದರಿಂದ ಸಮುದಾಯಕ್ಕೆ ಅಪಾಯವಾಗಬಹುದೆಂತ ಹೇಳಿ ಮೆ. ಸಿ ಜೆ. ಟಿಪ್ಪಿಂಗ್‌ರವರು ಠರಾವಿಗೆ ವಿರೋಧಿಸಿದರು.

ಮೆ. ಪಿ. ಬಿ. ಮೇದಪ್ಪನವರು—ಠರಾವಿನಲ್ಲಿ ಕೊಡವರನ್ನು ಸೇರಿಸದೆ ಇರುವುದು ಕೃತಜ್ಞರಾಗಿರಬಹುದು. ಜಮ್ಮವಿಲ್ಲದ ಕೊಡವರು ಕೆಲವರಿರುವರು. ಈ ರಿಯಾಯಿತಿ ಕೊಡುವಾಗ ರಿವಾಲ್ವರು ಇಲ್ಲದಿದ್ದರೂ ಪಿಸ್ತೂಲುಗಳಿದ್ದವು. ಇದು ಹೊಸದಾಗಿ ಕೇಳುವಂಥ ಹಕ್ಕಲ್ಲ. ಸುಮಾರು ೧೪ ವರ್ಷಗಳವರೆಗೆ ಕೊಡಗಿನಿಂದ ಹೊರಗೆ ಇದ್ದಾಗಲೆಲ್ಲಾ ನನ್ನಲ್ಲಿ ರಿವಾಲ್ವರು ಇಟ್ಟುಕೊಂಡೇ ಇದ್ದೆ. ಹಾಗೆಯೇ ಎಲ್ಲಾ ಕೊಡವರೂ ಇಟ್ಟುಕೊಳ್ಳುತ್ತಿದ್ದರು. ಆದರೂ ಅವು ಪುಂಡರ ಕೈಗೆ ಸಿಕ್ಕಿ ಕೆಡಕಾಗಲಿಲ್ಲ. ಹುಟ್ಟಿಬೆಟ್ಟಿಯು ಮಿಲಿಟರಿ ಸರ್ವಿಸಲ್ಲ ಎಂತ ಠರಾವಿನ ಪರವಾಗಿ ಮಾತಾಡಿದರು.

ಮೆ. ಎ ಬಿ. ಚಂಗಪ್ಪನವರು—ನಮ್ಮ ದೇಶವನ್ನು ಬ್ರಿಟಿಷರು ಯುದ್ಧದಲ್ಲಿ ಗೆದ್ದು ತೆಗೆದುಕೊಂಡದ್ದಲ್ಲ. ನಾವಾಗಿಯೇ ಈ ದೇಶವನ್ನು ಇಂಗ್ಲೀಷರಿಗೆ ಬಿಟ್ಟುಕೊಟ್ಟದ್ದಾಗಿದೆ. ನಮ್ಮ ಹಕ್ಕುಗಳನ್ನು ಕಾಪಾಡಬೇಕೆಂತ ಪ್ರತಿಜ್ಞೆ ಮಾಡಿದ್ದಾರೆ. ವೀರರಾಜೇಂದ್ರಪೇಟೆಯಲ್ಲಿ ಒಂದು ದಂಗೆಯಾದ ಸಮಯದಲ್ಲಿ ಕೊಡವರ ಸಹಾಯ ಕೇಳಿದಾಗ ಆಯುಧಗಳಿಗೆ ಹೋದರು ಎಂಬ ಮಾತುಗಳಿಂದ ಠರಾವನ್ನು ಪುಷ್ಟೀಕರಿಸಿದರು.

ಮೆ ಪಿ ಟಿ ಕುಶಾಲಪ್ಪನವರು—ಸರ್ಕಾರದವರು ಜಮ್ಮದವರ ಹಕ್ಕುಗಳನ್ನು ಕಸಕೊಳ್ಳಲಿಕ್ಕೆ ಪ್ರಾರಂಭಿಸಿದ್ದು ಇದು ಪ್ರಥಮವಲ್ಲ. ಜಮ್ಮಾ ಕಂದಾಯವನ್ನು ರದ್ದುಪಡಿಸಿದರು. ರೂಲ್ಸಿನಲ್ಲಿ ಮುಂದೆ ಮಾಡಲಿಕ್ಕಿರುವ ಮಿಲಿಟರಿ ಮತ್ತು ಪೋಲೀಸು ಸರ್ವಿಸಿಗಾಗಿ ಈ ರಿಯಾಯಿತಿಯನ್ನು ನಮಗೆ ಕೊಟ್ಟದೆಂತ ನಮ ಹಿರಿ ನಮ್ಮ ಹಕ್ಕಿಗೆ ಅಪಾಯಬರುವಂತೆ ಮಾಡಿದ್ದಾರೆ. ಮಿಲಿಟರಿ ಡ್ಯೂಟಿ ಮಾಡುವದಿಲ್ಲವೆಂತ ಹೇಳುವದಿಲ್ಲ. ಮಿಲಿಟರಿಗೆ ಜನ ಬೇಕೆಂತ ಕೇಳಿಕೊಂಡಾಗ ಅವಶ್ಯವಿದ್ದದಕ್ಕಿಂತ ಹೆಚ್ಚಾಗಿಯೇ ಜನರು ಮುಂದೆ ಬಂದರು. ಈ ರಿಯಾಯಿತಿಯಿಂದ ದೇಶದೊಳಗೆ ಕೆಡಕಾಗದೆ ಇದ್ದಾಗ ಹೊರಗೆ ಕೆಡಕಾಗುವುದು ಹೇಗೆ? ಎಂತ ಠರಾವಿನ ಪರವಾಗಿ ವಾದಿಸಿದರು.

"ಕೊಡವರು" ಎಂಬ ಶಬ್ದವು ಠರಾವಿನಿಂದ ಕೈತಪ್ಪಿನಿಂದ ಬಿಟ್ಟು ಹೋದದ್ದಾಗಿದೆ. ಹೆಚ್ಚಿನ ಕೊಡವರು ಜಮ್ಮ ಭೃತರಾಗಿದ್ದರೂ ಜಮ್ಮ ಇಲ್ಲದ ಕೊಡವರು ಕೆಲವರು ಇರುವರು. ಠರಾವಿನ ರಿಯಾಯಿತಿಯು ಎಲ್ಲಾ ಕೊಡವರಿಗೂ, ಜಮ್ಮದವರಿಗೂ ವ್ಯಾಪಿಸತಕ್ಕದ್ದು ಎಂತ ಮೆ. ಪಿ ಬಿ. ಬೆಳ್ಳಿಯಪ್ಪನವರು ವಿವರಿಸಿದರು.

೧೯೨೪ ರ ವರೆಗೆ ಈ ರಿಯಾಯಿತಿಯು ಅನುಭವಿಸಲ್ಪಡುತ್ತಿತ್ತಾದರೂ ಅದು ಇನ್ನು ಮುಂದೆಯೂ ಸಿಕ್ಕಬೇಕೆಂದು ವಾದಿಸಲಿಕ್ಕಾಗುವದಿಲ್ಲ, ಎಂದು ಮಿ. ಓಸ್ಲರವರು ಜವಾಬು ಕೊಟ್ಟರು.

ಠರಾವನ್ನು ಓಟಿಗೆ ಹಾಕಲಾಗಿ ಪರವಾಗಿ ಹನ್ನೆರಡು, ವಿರೋಧವಾಗಿ ಆರು ಜನರು ಓಟುಕೊಟ್ಟರು. ವಿರೋಧಿಸಿದವರು ನಾಲ್ಕು ಉದ್ಯೋಗಸ್ಥ ಮೆಂಬರುಗಳು ಮತ್ತು ಇಬ್ಬರು ಯೂರೋಪಿಯನ್ ಪ್ಲಾಂಟರ್ ಮೆಂಬರುಗಳು ಆಗಿದ್ದಾರೆ. ಮೆ. ಬಿ ಶ್ರೀಪತಿರಾಯರು ಮತ್ತು ಪಿಟಿಚೋಳಪ್ಪ ಇವರು ಯಾವ ಕಡೆಗೂ ಓಟು ಕೊಡಲಿಲ್ಲ.

ಎರಡನೇ ದಿವಸದ ಮೀಟಿಂಗು.

ನಂ. ೯೯. "ವೀರರಾಜಪೇಟೆ ಮತ್ತು ಮಡಿಕೇರಿ ಶಾಲೆಗಳು ವಿನಹ ಇತರ ಎಲ್ಲಾ ಬಾಲಿಕಾ ಪಾಠಶಾಲೆಗಳನ್ನು ಬಾಲಕರ ಶಾಲೆಗಳೊಂದಿಗೆ ಸೇರಿಸಿ ಬಿಡಬೇಕು" ಎಂಬ ಠರಾವನ್ನು ಮೆ. ಕೆ. ಪಿ. ಚಿಣ್ಣಪ್ಪನವರು ವಾಪಸು ತೆಗೆದುಕೊಂಡರು.

೧೦೦. ಫಾರೆಸ್ಟ್ ಇಂಜಿನೀಯರ ಕೆಲಸವನ್ನು ವಜಮಾಡಬೇಕೆಂಬ ಠರಾವನ್ನು ಮೆ ಕೆ ಪಿ. ಚಿಣ್ಣಪ್ಪನವರು ತಂದರು. ಮಹಾಯುದ್ಧದ ಟ್ರಾನ್ಸ್‌ಪೋರ್ಟ್ ಕೆಲಸಕ್ಕೆ ಬೇಕಾದ ಉದ್ಯೋಗಸ್ಥನನ್ನು ತಂದು ಹೇರಳ ಹಣವನ್ನು ನಮ್ಮ ದೇಶಕ್ಕೆ ನಷ್ಟ ಮಾಡಿದ್ದಾಗಿದೆ. ಈಗ ಇಂಜಿನೀಯರು ನಮ್ಮ ದೇಶದಿಂದ ಹೋದರೂ ಅವರ ಕೆಲಸವನ್ನು ಏತಕ್ಕಾಗಿ ಇಟ್ಟುಕೊಂಡಿರುತ್ತಾರೆಂದು ತಿಳಿಯುವದಿಲ್ಲ. ಸರಕಾರಕ್ಕೆ ಬೇಕಾಗುವಾಗ ಪುನಃ ನೇಮಕಮಾಡಲಿಕ್ಕಾಗಿಯೆ. ಈಗಾಗಲೇ ಫಾರೆಸ್ಟು ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಉದ್ಯೋಗಸ್ಥರಿದ್ದಾರೆ. ಅದ್ದರಿಂದ ಜನರ ಹಿತಕ್ಕಾಗಿ ಈ ಉದ್ಯೋಗವನ್ನೇ ತೆಗೆದು ಹಾಕಬೇಕು. ಹೀಗೆ ಮಾಡಿದರೆ ನಮ್ಮ ದೇಶದ ಖರ್ಚಿಗೆ ತಕ್ಕಷ್ಟು ಹಣ ಉಳಿಯುತ್ತದೆ ಎಂಬದಾಗಿ ಮಾತಾಡಿದರು.

ಮೆ. ಮನುವಮಂಡ ಚಿಣ್ಣಪ್ಪನವರು ಅನುಮೋದಿಸಿದರು.

ಚೀಫ್ ಫಾರೆಸ್ಟ್ ಆಫೀಸರು ಠರಾವಿಗೆ ವಿರೋಧಿಸಿ, ಈ ಉದ್ಯೋಗವನ್ನು ಸ್ಟೇಟ್ ಸೆಕ್ರೆಟರಿಯವರು ನಿರ್ಮಿಸಿರುವದಾಗಿದೆ. ತೆಗೆದು ಹಾಕಿಬಿಟ್ಟರೆ ಬೇಕಾದಾಗ ತೊಂದರೆಯಾಗುತ್ತದೆ. ಈ ಉದ್ಯೋಗವಿದ್ದರೂ ಅವಶ್ಯ ಆಫೀಸರನ್ನು ನೇಮಿಸಿಕೊಳ್ಳಬೇಕೆಂತ ಇಲ್ಲ ಎಂತ ಹೇಳಿದರು.

ಮೆ. ಎ ಬಿ ಚಂಗಪ್ಪನವರೂ ಠರಾವಿಗೆ ಒತ್ತಾಸೆ ಕೊಟ್ಟರು.

ಠರಾವು ಮಂಜೂರಾಯಿತು.

೧೦೩. ಸರಕಾರ ಮಂಜೂರಾತಿ ಇಲ್ಲದೆ ಬಂತಾಸ ಬೆಳೆದ ಬಾಣೆ ಜಾಗದಲ್ಲಿ ಮಾಫಿಯಾಗಿ ರಾಗಿ ಬೆಳೆಸಲು ಬಿಡಬೇಕು, ಎಂಬ ಠರಾವನ್ನು ಸೂಚಿಸುವಾಗ ಮೆ ಪಿ ಟಿ ಕುಶಾಲಪ್ಪನವರು—ಈ ಠರಾವು ಮಂಜೂರಾದರೆ ಬಂತಾಸ ಕೆಳಲು ಉತ್ತೇಜನ ದೊರೆಯುತ್ತದೆ. ಈಗ ರೂಲ್ಸ್ ಮೇರೆ ಬರೆಯ ತಿಳಿಯದ ಚಿಕ್ಕ ಮಾಲೀಕರಿಗೆ ನಡೆದುಕೊಳ್ಳಲು ಕಷ್ಟವಾಗುತ್ತದೆ. ಕ್ರಾಪ್ ಇನ್ಸ್‌ಪೆಕ್ಷನ್ ಕಾಲದಲ್ಲಿ ಬೆಳೆಸಿದ ರಾಗಿ ಪೈರನ್ನು ನೋಡಿ ದಂಡನೆ ಕಂದಾಯ ಹಾಕುತ್ತಾರೆ. ಮಂಜೂರಾತಿಗೆ ಅರ್ಜಿಗೆ ಸ್ಟಾಂಪು ಹಾಕಬೇಕು. ಅರ್ಜಿ ಬರೆಯುವವರಿಗೆ ಫೀಸ್ ಕೊಡಬೇಕು. ಈ ತರದ ತೊಂದರೆಗಳೆಲ್ಲಾ ಇದ್ದರೆ ರಾಗಿ ಬೆಳೆಸಲು ಜನರು ಹೊರಡುವದಿಲ್ಲವೆಂತ ಭಾಷಣಮಾಡಿದರು.

ಮೆ. ಕೆ ಪಿ ಚಿಣ್ಣಪ್ಪನವರು ಅನುಮೋದಿಸಿದರು.

ಮೆ ಬಾಸ್ಕರರವರು ಠರಾವಿಗೆ ವಿರೋಧಿಸಿ, ಅರ್ಜಿಗೆ ಸ್ಟಾಂಪು ಬೇಡ, ಇರುವ ರೂಲ್ಸುಗಳೇ ಸಾಕಾಗಿದೆ. ಮಂಜೂರಾತಿ ಪಡೆಯದೆ ಇದ್ದರೆ ಮಾಲಿಕರಿಗೆ ನಷ್ಟವಾಗಬಹುದೆಂತ ವಾದಿಸಿದರು.

ಮೆ ಪಿ ಟಿ ಕುಶಾಲಪ್ಪನವರು ಅರ್ಜಿಗೆ ಸ್ಟಾಂಪು ಹಾಕಲ್ಲವೆಂತ ಅರ್ಜಿಯನ್ನು ತಿರಸ್ಕರಿಸಲಾಗಿದೆಯೆಂಬದಾಗಿ ಹುಕುಂ ಬಂದದ್ದು ನಾನು ನೋಡಿದ್ದೇನೆ. ಬಂತಾಸ ತುಂಬಿದ ಜಾಗದಲ್ಲಿ ಮಾತ್ರ ರಿಯಾಯಿತಿ ಬೇಕೆಂಬದಲ್ಲ ಎಂತ ಜವಾಬು ಕೊಟ್ಟರು.

ಠರಾವು ಮಂಜೂರಾಯಿತು.

೧೦೪ "ಬಾಣೆಜಾಗದಲ್ಲಿ ಮನೆಕಟ್ಟಬೇಕಾದರೆ ಕಮಿಷನರ ಪರವಾನಗಿ ಪಡೆಯಬೇಕೆಂಬ ರೂಲನ್ನು ರದ್ದುಪಡಿಸಬೇಕು," ಎಂಬ ಠರಾವನ್ನು ಸೂಚಿಸುವಾಗ, ಮಂಜೂರಾತಿ ಇಲ್ಲದೆ ಮನೆ ಕಟ್ಟಿದರೆ ದಂಡನೆ ಕಂದಾಯ ಹಾಕುತ್ತಾರೆ. ಈಗ ಇರುವ ಐನ್ ಮನೆಗಳ ಹತ್ತಿರವೇ ತುಂಬಾ ಮನೆಗಳಾಗಿ ಬಹಳ ಇಕ್ಕಟ್ಟಾಗಿರುತ್ತದೆ. ಆರೋಗ್ಯಕ್ಕಾಗಿಯೂ, ಆಸ್ತಿಯ ಮೇಲೆ ಹೆಚ್ಚಿನ ಉಸ್ತುವಾರಿಗಾಗಿಯೂ ಬಾಣೆಯಲ್ಲಿ ಎಲ್ಲಿ ಬೇಕಾದರೂ ಮನೆಕಟ್ಟಲು ಸ್ವತಂತ್ರವಿರಬೇಕು. ಜಮೀನ್ದಾರರ ಸಂಘವು ಈ ಠರಾವನ್ನು ಪರ್ಷ ವರ್ಷವೂ ಮಂಜೂರಮಾಡುತ್ತಿದೆ ಎಂತ ಮೆ. ಪಿ ಟಿ. ಕುಶಾಲಪ್ಪನವರು ಹೇಳಿದರು.

ಮೆ. ಬಾಸ್ಕರರವರು ಠರಾವಿಗೆ ವಿರೋಧಿಸಿ, ಈ ಠರಾವನ್ನು ಮಂಜೂರು ಮಾಡಿದರೆ ಬಾಣೆ ಹಿಡುವಳಿಯ ಮೂಲತತ್ವಕ್ಕೇ ಕೇಡಾಗುತ್ತದೆ. ಬಾಣೆಯಲ್ಲಿ ತುಂಬಾ ಅಂಗಡಿ ಮನೆಗಳನ್ನು ಕಟ್ಟಿಕೊಂಡು ಬಾಣೆ ಹಕ್ಕನ್ನು ದುರುಪಯೋಗಪಡಿಸುವುದು ತಿಳಿದು ಬಂದಿದೆ. ಇದರಿಂದ ಮನೆಗಳ ಒಳಿ ಗುಂಪುಗುಂಪು ಮನೆ ಕಟ್ಟಿಕೊಳ್ಳುವ ಪದ್ಧತಿ ತಪ್ಪಬೇಕೆಂತ ನನಗೆ ತೋರುವದಿಲ್ಲವೆಂತ ಮಾತನಾಡಿದರು.

ಮೆ. ಪಿ ಬಿ ಮೇದಪ್ಪನವರು ಈ ಠರಾವನ್ನು ಒಪ್ಪಿಕೊಂಡರೆ ಆಗುವ ಕೆಡಕೇನೆಂತ ಗೊತ್ತಾಗಲಿಲ್ಲ. ಅಂಗಡಿ ಕಟ್ಟಿಕೊಂಡರೂ ಮಾಲೀಕರಿಗೆ ಸ್ವಲ್ಪ ಪ್ರಾಪ್ತಿಯಾಗುತ್ತದೆ, ಎಂತ ಹೇಳಿ ಠರಾವಿಗೆ ಒತ್ತಾಸೆ ಕೊಟ್ಟರು. ಮೆ. ಪೇಮಂಡ್‌ರವರೂ ಒತ್ತಾಸೆ ಕೊಟ್ಟರು.

ಮೆ. ಟಿಪ್ಪಿಂಗ್ ಒಬ್ಬರು ವಿನಹ ಇತರ ಎಲ್ಲಾ ಉದ್ಯೋಗಸ್ಥರಲ್ಲದ ಮೆಂಬರುಗಳ ಓಟಿನಿಂದ ಠರಾವು ಮಂಜೂರಾಯಿತು.

೧೦೫. ಒಟ್ಟಿನಿಂದ ವಿನಾಯಿತಿಯು ಇರವ ಸಿವಿಲ್‌ರಿಂದ ದ ಖಾನೇಸುಮಾರಿಯನ್ನು ರದ್ದುಪಡಿಸಬೇಕೆಂಬ ಠರಾವನ್ನು ಮೆ ಕೆ. ಪಿ. ಚಿಣ್ಣಪ್ಪನವರು ತಂದರು. ಇವರು ಹೇಳಿದ್ದೇನೆಂದರೆ—

ಈ ಠರಾವು ೧೯೨೪ರಲ್ಲಿ ಕೌನ್ಸಿಲಿನಲ್ಲಿ ಮಂಜೂರಾಗಿದೆ. ಆದರೂ, ಸರಕಾರ ಮೆಂಬರರ ಹೇಳಿಕೆಗೆ ವಿರೋಧವಾಗಿ ಓಟಿಗೆ ಬಿಟ್ಟದ್ದರಿಂದ ಜಾರಿಗೆ ತರದಂತೆ ಕಾಣುತ್ತೆ. ಇದಕ್ಕಿರುವ ಗುಣಾ ಅವಗುಣಗಳನ್ನು ಈ ಮೊದಲೇ ಅನೇಕರು ಮಾತಾಡಿರುತ್ತಾರೆ. ಇದರಿಂದ ಸರಕಾರಕ್ಕೆ ಯಾವದಾದರೂ ಸಂಬಂಧವಿಲ್ಲ ನಷ್ಟವಿದೆಯೋ? ಹಾಗೆ ಕಾಣುವಿಲ್ಲವಾಗಲೀ, ಮೂಲೆಗೆ ಯಾವ ಉಪಯೋಗವಾಗಲೀ ನಷ್ಟವಿಲ್ಲವ. ಈ ಠರಾವನ್ನು ಜಾರಿಗೆ ತಾರದೆ ಇರುವಾಗ ಈ ಕೌನ್ಸಿಲಿನಿಂದ ಜೈತರಿಗೆ ಪ್ರಯೋಜನವಿದೆಯೋ? ಇದರ ಕೆಲಸ ಬರೀ ನಟನೆಯೋ? ಹೀಗೆ ಮಾಡುವದು ಸರಕಾರಕ್ಕೆ ಧರ್ಮವೋ? ಎಲ್ಲಾ ಠರಾವನ್ನು ಪುರಸ್ಕರಿಸಿ, ಯಾ ತಿರಸ್ಕಾರ ಮಾಡುವ ಅಧಿಕಾರವನ್ನು ಅಧಿಕಾರಿಗಳು ಇಟ್ಟುಕೊಂಡು ಅದನ್ನು ದುರುಪಯೋಗ ಮಾಡುವುದು ಸರಿಯೇ? ನಾವು ಓಟಿನ ನಂಬರ್ಷದಲ್ಲಿ ಬಹಳ ಬೋಧನೆ ಕೊಡುವಾಗ ಇಂಥಾ ಅಲ್ಪ ಠರಾವನ್ನು ಮಂಜೂ

ಗ್ರೆಡನೆ ಸರಕಾರದವರು ತೊಂದರೆ ಕೊಡುವಾಗ ನೀವು ಕೌನ್ಸಿಲಿಗೆ ಹೋಗುವುದರಿಂದ ಪ್ರಯೋಜನವೇನು ಎಂಬುದಾಗಿ ಓಟರುಗಳು ಕಂಠೋಕ್ತವಾಗಿ ಹೇಳುತ್ತಾರೆ. ಇದು ಸ್ವಾಭಾವಿಕವಲ್ಲವೋ? ಈ ಸರಕಾರಕ್ಕೆ ದೂರದೃಷ್ಟಿ, ಯಾ ಮುಂದಾಲೋಚನೆ ಇದ್ದ ಪಕ್ಷದಲ್ಲಿ ಹೀಗೆ ಮಾಡುತ್ತಿರಲಿಲ್ಲ. ಇನ್ನಾದರೂ ದೂರದೃಷ್ಟಿಯಿಂದ ಈ ಠರಾವನ್ನು ಜಾರಿಗೆ ತರಬೇಕು.

ಮಿ. ಪಿ. ಬಿ. ಮೇದಪ್ಪನವರು ಹೇಳಿದ್ದೇನೆಂದರೆ—ಈ ಠರಾವಿನ ಮೇಲೆ ಮೊದಲು ಸಾಕಷ್ಟು ಚರ್ಚೆ ನಡೆದಾಗ ಫೈನಾನ್ಸ್ ಮೆಂಬರು ಒಂದು ಇಂಚು ಒಲೆಗಿಂತ ದೊಡ್ಡ ಕಣ್ಣಿನ ಬಲೆಗೆ ತಾನು ಒಪ್ಪುತ್ತೇನೆಂತ ಹೇಳಿದ್ದರಿಂದ ನಾನು ಅವರ ಮಾತು ನಂಬಿ ಠರಾವಿಗೆ ವಿರೋಧವಾಗಿ ಓಟು ಮಾಡಿದೆ. ಮೊನ್ನೆ ಹಿಂದೆ ನಡೆದ ಒಂದು ಜನಸಭೆ ಸಂಬಂಧದ ಮೀಟಿಂಗಿನಲ್ಲಿ ನಾನು ಈ ಠರಾವಿಗೆ ಯಾತಕ್ಕೆ ವಿರೋಧಿಸಿದೆನೆಂಬುದನ್ನು ವಿವರಿಸಬೇಕಾಯಿತು. ಈಗ ಗವರ್ನ್‌ಮೆಂಟಿನ ಅಭಿಪ್ರಾಯವು ಸಂಶಯ ಇರುವಂತೆ ತಿಳಿದು ಠರಾವಿಗೆ ಒತ್ತಾಸೆ ಕೊಡುತ್ತೇನೆ.

ಮಿ. ಕಾ. ಪೂಜಾರಿಯವರೂ ಎ. ಬಿ. ತಂಗಪ್ಪನವರೂ ಠರಾವಿಗೆ ಒತ್ತಾಸೆಯಾಗಿ ಮಾತನಾಡಿದರು. ಅನಂತರ ಮಿ. ಟಾಸ್ಕರವರು ಹೇಳಿದ್ದೇನೆಂದರೆ—ಜನಾಭಿಪ್ರಾಯ ಸೂಚಿಸುತ್ತಾ ಬಂದದ್ದರಿಂದ ಕೌನ್ಸಿಲಿನ ವಾತಾವರಣವು ಬದಲಾಗಿದೆ. ಜನರು ಯಾವ ವಿಧ ಅಭಿಪ್ರಾಯ ಇರುತ್ತಾರೆಂತ ಹೇಳುವುದು ಸ್ವಾಭಾವಿಕವಾಗಿದೆ. ಸಣ್ಣ ಸೂಜಿನ ಮೇಲೆ ಠರಾವನ್ನು ನಾವು ಸಾಕಷ್ಟು ವಾಪಸ್ಸು ತೆಗೆದುಕೊಂಡಿದ್ದರೆ, ಒಳಿಯ ಮಾತಿನ ವಿಷಯ [illegible] ಈಗಲೂ ಠರಾವನ್ನು ನಾನು ಮಾಡಿದರೆ ನಾನು ಅಂಗೀಕರಿಸುತ್ತೇನೆಂತ [illegible] ಗುವದಿಲ್ಲ. ಎಲ್ಲಾ ನಾಗರೀಕ ರಾಜ್ಯಗಳಲ್ಲೂ ಮೀನು ಹಿಡಿಯುವದಕ್ಕೆ ಕೆಲವು ಕಟ್ಟಳೆಗಳು ಇದ್ದೇ ಇವೆ.

ಠರಾವು ಬಹುಮತದಿಂದ ಮಂಜೂರಾಯಿತು.

106 ರೆವಿನ್ಯೂ ಮ್ಯಾನ್ಯುಯಲ್ ಮತ್ತು ರೂಲ್ಸುಗಳನ್ನು ತಿದ್ದಲಿಕ್ಕೆ ಬಡ ಉದ್ಯೋಗಸ್ಥರಲ್ಲದವರಿಂದಲೂ ಇಬ್ಬರು ಉದ್ಯೋಗಸ್ಥರಿಂದಲೂ ಕೂಡಿದ ಒಂದು ಕಮಿಟಿ ನೇಮಿಸಲ್ಪಡಬೇಕು, ಎಂಬ ಠರಾವನ್ನು ಸೂಚಿಸಿದಾಗ ಮಿ. ಕೆ. ಪಿ. ಚೆಣ್ಣಪ್ಪನವರು ಹೇಳಿದ್ದೇನೆಂದರೆ—

ಈ ಠರಾವು ಈ ಮೊದಲೇ ಅಂದರೆ 1921ರಲ್ಲಿ ಪಾಸಾದರೂ ಸರಕಾರದವರು ಮಂಜೂರ್ ಮಾಡಲಿಲ್ಲ. ರೆವಿನ್ಯೂ ಮ್ಯಾನ್ಯುಯಲ್ ಕೂಡಿ ಬರುವಾಗ ಕಮಿಷನರವರು ಕಮಿಟಿ ಮಾಡಲಿಕ್ಕೆ ಅಸಾಧ್ಯವೆಂದು ಹೇಳುವುದು ಸರಿಯಲ್ಲ. ಈಗಾಗಲೇ ಅನೇಕ ಸಣ್ಣ ಸಣ್ಣ ಚರ್ಚೆಯಲ್ಲಿದೆ. ಇದನ್ನು ಒಡನೆ ಎಲ್ಲಾ ರೂಲ್ಸುಗಳನ್ನು ಪರಿಶೀಲನೆ ಮಾಡಿ ಸರಿಪಡಿಸುವುದು ಒಳ್ಳೇದು. ಈ ವಿಷಯ ತಪ್ಪಿದ ಕಾರಣಗಳನ್ನು 1924ರಲ್ಲಿ ಈ ಠರಾವು ತಂದಿದ್ದಾಗ ಕೊಟ್ಟಿರುವುದರಿಂದ ಈಗ ಅವುಗಳನ್ನು ಪುನಃ ಹೇಳುವದಕ್ಕೆ ಅವಶ್ಯಕತೆ ಕಾಣುವುದಿಲ್ಲ. ಆದ್ದರಿಂದ ಈ ಠರಾವನ್ನು ಪುನಃ ತಂದಿರುತ್ತೇನೆ.

ಮಿ. ಚಾಮೆಡ್ಲ ಕಾಳಪ್ಪನವರು ಅನುಮೋದಿಸಿದರು.

ಮಿ. ಪಿ. ಬಿ. ಮೇದಪ್ಪನವರು ಸಹ ಅನುಮೋದಿಸಿ, ಜಾತಿ, ಒಪ್ಪ, ಪಾಲು ಪಂಗಡ ಮುಂತಾದ ವಿಷಯಗಳು ಶಾಸನಗಳು ತಿದ್ದಲ್ಪಡಲೇ ಬೇಕು, ಎಕ್ಸಿಕ್ಯೂಟಿವ್ ಆಫೀಸರು ಯಾಂತ್ರಿಕ ಬುದ್ಧಿಯಿಂದ ಕೋರ್ಟುಗಳಲ್ಲಿ ದಾವಾ ಹೂಡುವಂತೆ ಇರುವುದು ಯುಕ್ತವಲ್ಲ, ಎಂತ ಹೇಳಿದರು.

ಮಿ. ಟಾಸ್ಕರವರು—ಈ ಠರಾವಿಗೆ ನಾನು ಮೊದಲೇ ಅನುಮೋದಿಸಿದ್ದೇನೆ. ಈ ತರದ ಕಮಿಟಿಗಳಿಗೆ ನಾನು ಒಪ್ಪುವುದಿಲ್ಲ. ಯಾವ ಯಾವ ಸಣ್ಣ ನಿಯಮಗಳನ್ನು ತಿದ್ದಬೇಕಾದ್ದೆಂದು ತಿಳಿದರೆ ಅವುಗಳನ್ನು ತಿದ್ದಲಿಕ್ಕೆ ಯೋಚಿಸಬಹುದು, ಎಂತ ಹೇಳಿದರು.

ಠರಾವು ಮಂಜೂರಾಯಿತು.

107 ದೇಶದ ಜನರ ಬಡತನಕ್ಕೂ, ಜನಸಂಖ್ಯೆ ಕಡಿಮೆಯಾಗಲಿಕ್ಕೂ ಕಾರಣವೇನೆಂಬುದನ್ನು ಕಂಡುಹಿಡಿಯಲಿಕ್ಕೆ ಒಂದು ಕಮಿಟಿಯಾಗಬೇಕೆಂಬ ಠರಾವನ್ನು ಮಿ. ಕೆ. ಪಿ. ಚೆಣ್ಣಪ್ಪನವರು ತಂದು, ಈ ಠರಾವು ಮೊದಲೇ ಚರ್ಚೆಯಾಗಿದೆ, ಹೆಚ್ಚಿಗೆ ವಾದಬೇಕಾಗಿಲ್ಲವೆಂತ ಹೇಳಿದರು. ಮಿ. ಬಿ. ಶ್ರೀಪತಿರಾಯರು ಅನುಮೋದಿಸಿ ಈ ಠರಾವು ಬಹಳ ಪ್ರಮುಖವಾದದ್ದು, ಮಲೇರಿಯಾ ಮುಂತಾದ ಆರೋಗ್ಯ ನಾಶದ ಕಾರಣಗಳನ್ನು ಹೋಗಲಾಡಿಸಲಿಕ್ಕೆ ಆರ್ಥಿಕ ಸ್ಥಿತಿಯು ಅಭಿವೃದ್ಧಿಗೊಳ್ಳಬೇಕು, ಎಂತ ಮುಂತಾಗಿ ವಾದಿಸಿದರು.

ಮಿ. ಟಾಸ್ಕರವರು—ಈ ತನಿಖೆಯನ್ನು ಇಂಡಿಯಾ ಸರಕಾರದವರೇ ಮಾಡಬೇಕೆಂತ ಇದ್ದಾರೆ. ಅವರ ಹುಕುಮನ್ನು ಎದುರು ನೋಡುತ್ತಿದ್ದೇವೆ ಎಂತ ಹೇಳಿದ ಮೇಲೆ ಮಿ. ಕೆ. ಪಿ. ಚೆಣ್ಣಪ್ಪನವರು ಠರಾವನ್ನು ವಾಪಸು ತೆಗೆದುಕೊಂಡರು.

108 ಒಂದು ಇಂಚು ಮತ್ತು ಹೆಚ್ಚಿನ ಅಳತೆಯ ತೂತದ ಬಲೆಗಳಿಂದ ಮೀನು ಹಿಡಿಯುವ ಸ್ವತಂತ್ರ ಇರಬೇಕೆಂಬ ಠರಾವನ್ನು ಮಿ. ಚಾಮೆಡ್ಲ ಕಾಳಪ್ಪನವರು ವಾಪಸು ತೆಗೆದುಕೊಂಡರು.

109 ನಿತ್ಯಪದಾರ್ಥಗಳ ಸೇವನೆ ಕಡಿಮೆ ಮಾಡಿಸುವ ಬಗ್ಗೆ ಉಪಾಯಗಳನ್ನು ಕಂಡುಹಿಡಿಯಲು ಒಂದು ಕಮಿಟಿಯು ನೇಮಿಸಲ್ಪಡಬೇಕೆಂಬ ಠರಾವನ್ನು ಮಿ. ಕೆ. ಬಿ. ಚೆಟ್ಟಿಪ್ಪನವರು ವಾಪಸು ತೆಗೆದುಕೊಂಡರು.

110 ಫಾರೆಸ್ಟ್ ಇಲಾಖೆಯ ಗಂಧದ ಉತ್ಪತ್ತಿಯನ್ನು ಕೈಗಾರಿಕೆ, ವಿದ್ಯೆ, ಔಷಧಿ, ಆರೋಗ್ಯ ಸಾಧನ, ನೀರಾವರಿ ಕಾಮಗಾರಿ ಮುಂತಾದ ದೇಶದ ಬೆಳವಣಿಗೆಗೆ ಸಹಾಯವಾಗುವ ಕೆಲಸಗಳಿಗೇನೇ ಉಪಯೋಗಿಸಬೇಕೆಂತಲೂ, ಈ ಇಲಾಖೆಯು ಬೇರೆ ಉತ್ಪತ್ತಿಯಿಂದ ನಡೆಸಿಕೊಳ್ಳಬೇಕೆಂತಲೂ ಮಿ. ಕೆ. ಪಿ. ಚೆಣ್ಣಪ್ಪನವರು ಠರಾವು ಸೂಚಿಸಿದರು.

ಮಿ. ಕೆ. ಪಿ. ಮಿಣ್ಣಪ್ಪನವರು ಹೇಳಿದ್ದೇನೆಂದರೆ—ಗಂಧವು ದೇಶದ ಭಂಡವಾಳವಾಗಿದೆ. ಅದನ್ನು ಆ ಇಲಾಖೆಯ ಖರ್ಚಿಗೆ ಉಪಯೋಗಿಸಕೂಡದು. ಈ ಉತ್ಪತ್ತಿಯು ಮಾಮೂಲಿಗೆ ಅನಾವಶ್ಯಕವಾಗಿ ಖರ್ಚು ಮಾಡಲ್ಪಟ್ಟಿದೆ. ಇನ್ನು ಮೇಲಾದರೂ ಈ ಉತ್ಪತ್ತಿಯನ್ನು ದೇಶಕ್ಕೆ ಪ್ರಯೋಜನವಾಗುವ ಬಾಬುಗಳಿಗೆ ಮಾತ್ರ ಖರ್ಚು ಮಾಡಬೇಕು.

ಚೀಫ್ ಫಾರೆಸ್ಟ್ ಆಫೀಸರು ಹೇಳಿದ್ದೇನೆಂದರೆ—

ಈ ಠರಾವಿನ ವಿಷಯವು ಬಹಳ ದೊಡ್ಡ ಆದಾಯದ ಪ್ರಶ್ನೆಯಾಗಿದೆ. ಇನ್ನು ಮುಂದೆ ಬರುವ ಆದಾಯವೆಚ್ಚದಲ್ಲಿ ಮುಂಬರುವ ಸ್ಥಿತಿಗತಿಯನ್ನು ಕಲ್ಪಿಸಿದರೆ ಫಾರೆಸ್ಟ್ ಆದಾಯವೆಚ್ಚದ ಲೆಕ್ಕವನ್ನೇ ಬದಲಾಯಿಸಬೇಕೆಂಬುದು ಠರಾವಿನ ಉದ್ದೇಶವಾಗಿದೆ. ಠರಾವನ್ನು ಬಹಳ ಮಟ್ಟಿಗೆ ಒಪ್ಪಿಕೊಳ್ಳಲಿಕ್ಕಾಗುವದಿಲ್ಲ. ಬೇರೆ ವಿಧವಾಗಿ ಬರೆದಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಈಗ ಫಾರೆಸ್ಟ್ ಆದಾಯವೆಚ್ಚದಲ್ಲಿ ಒಂದು ಲಕ್ಷ ರೂಪಾಯಿ ಹೆಚ್ಚು ಉಳಿತಾಯ ಇದೆ. ಈ ಠರಾವನ್ನು ಪಾಸು ಮಾಡಿದರೆ 3 ಲಕ್ಷ ಉಳಿತಾಯವಾಗಬೇಕು. ಬೇರೆ ವಿಧವಾದ ಬರುವ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುತ್ತೇವೆ. ಆದರೆ ನಮ್ಮ ಇಲಾಖೆಯ ಉತ್ಪತ್ತಿಯಲ್ಲಿ ಬಂದದ್ದರಿಂದಾಗಿ ಕಿತ್ತಳೆ ಕೃಷಿ ತೃಪ್ತಿದ್ವಾರ ಮುಖ್ಯವಾಗಿ ದವಸ ಬೆಳೆಸಬೇಕೆನ್ನುತ್ತಾರೆ. ಖರ್ಚು ಕಡಿಮೆ ಮಾಡಲು ಪ್ರಯತ್ನಿಸುತ್ತೇನೆ. ಆದರೆ ಒಂದೇ ಸರ್ತಿ ಆಗುವಂತಿಲ್ಲ.

ಮಿ. ಬಿ. ಶ್ರೀಪತಿರಾಯರು ದೇಶದ ಕಷ್ಟಕಾಲದ ಉಪಯೋಗಕ್ಕಾಗಿ ಗಂಧವು ಕಾದು ಇಡಬೇಕು. ಈ ಇಲಾಖೆಯ ಉತ್ಪತ್ತಿ ಕಾಲದ ಬೇರೆ ಉತ್ಪತ್ತಿಗಳನ್ನು ಉಪಯೋಗಿಸುವದು ಯುಕ್ತವಲ್ಲ. ಜನರ ಅಭಿಪ್ರಾಯವನ್ನು ಕೌನ್ಸಿಲ್ ಮೂಲಕ ತಿಳಿಸಲು ನಾವು ಪ್ರಯತ್ನಿಸುವದಾಗಿದೆ ಎಂತ ಠರಾವನ್ನು ಅನುಮೋದಿಸಿದರು.

ಠರಾವಿಗೆ ಒತ್ತಾಸೆಯಾಗಿ ಮಿ. ಕುಶಾಲಪ್ಪನವರು ಹೇಳಿದ್ದೇನೆಂದರೆ—ಫಾರೆಸ್ಟ್ ಇಲಾಖೆಯು ಕಳೆದ ಯುದ್ಧಕಾಲದಲ್ಲಿ ಗಂಧದ ಉತ್ಪತ್ತಿ ವಿನಹ ಇಲಾಖೆಯ ಇತರ ಉತ್ಪತ್ತಿಯಿಂದಲೇ ಮಾಡಿದ ವೆಚ್ಚವನ್ನು ಸರಿಪಡಿಸುವ ಹಾಗೆ ನಿಶ್ಚಯಿಸಿತ್ತು. ಆ ಬಳಿಕ ಈ ಪ್ರಕಾರ ನಡೆಯಿತು. ಗಂಧವು ಕೊಡಗಿನ ಪ್ರಾಕೃತಿಕ ಸಂಪತ್ತು. ಈ ಗಂಧದ ಉತ್ಪತ್ತಿಯನ್ನು ಹಿಡಿದುಕೊಂಡು ದೇಶದ ಸಾರ್ವಜನಿಕ ಸ್ಥಿತಿಯನ್ನು ಕೆಡಿಸುತ್ತಿರುವುದು ಅನ್ಯಾಯ. ಇಲಾಖೆಯು ಮುಂಬರುವ ಸಿಬ್ಬಂದಿಯನ್ನು ಪೋಷಿಸಲಿಕ್ಕಾದರೆ ಆದರೆ ಗಂಧದ ಉತ್ಪತ್ತಿಯನ್ನು ಮಾತ್ರ ವಿನಾಯಿಸಿ ದೇಶದ ಕೌಶಲ್ಯಗಳಿಗಾಗಿ ಆದಾಯದ ವೆಚ್ಚ ಮಾಡುವದು ಈಗ ಅವಶ್ಯವೆಂದು ತೋರುತ್ತದೆ. ಮಾತ್ರವಲ್ಲ ಗಂಧದ ಆದಾಯ ವೆಚ್ಚದ ಲೆಕ್ಕವನ್ನೇ ಪ್ರತ್ಯೇಕವಾಗಿ ಇಡುವದು ನ್ಯಾಯಸಮ್ಮತವೆಂತ ನನ್ನ ಅಭಿಪ್ರಾಯ.

ಮಿ. ಪಿ. ಬಿ. ಮೇದಪ್ಪನವರು—ತತ್ವಕ್ಕೆ ಒಪ್ಪುತ್ತೇನೆ, ಆದರೆ ಈ ಠರಾವಿನಿಂದ ಬರುವ ಕಷ್ಟವಿದೆಯೆಂತ ನನಗೆ ಗೊತ್ತಿದೆ. ನಾವು ಕೊಟ್ಟಂಥ ಪ್ರಯೋಜನವಾಗುತ್ತೆಂಬ ಅರ್ಥ ಇದ್ದದ್ದು ಹೊರಟು ಹೋಯಿತು. ಪೈಸಾರಿ ಮತ್ತು ಸ್ವಂತ ಜಾಗದಲ್ಲಿ ಇರುವ ಗಂಧದ ಉತ್ಪತ್ತಿ ರೆವಿನ್ಯೂ ಇಲಾಖೆಗೆ ಸೇರಬೇಕು. ಫಾರೆಸ್ಟ್ ಇಲಾಖೆಯು ಬೇರೆ ಬಾಬುಗಳ ಹಣ ಕೂಡುವ ಒದಲು ಉತ್ಪತ್ತಿಯನ್ನು ಉಪಯೋಗಿಸುತ್ತಿದೆ, ಎಂತ ಹೇಳಿದರು.

ಠರಾವು ಮಂಜೂರಾಯಿತು.

110 ಗೌರವ ಬೆಂಚು ಮೇಜಿಸ್ಟ್ರೇಟರುಗಳಾಗಿ ನೇಮಿಸಲು ಮಹನೀಯರ ಹೆಸರುಗಳನ್ನು ಸಿಫಾರಸ್ಸು ಮಾಡಲಿಕ್ಕಾಗಿ ಈ ಕೌನ್ಸಿಲಿನ ಉದ್ಯೋಗಸ್ಥರು ಮತ್ತು ಉದ್ಯೋಗಸ್ಥರಲ್ಲದ ಮೆಂಬರುಗಳು ಮತ್ತು ಉದ್ಯೋಗಸ್ಥರಲ್ಲದವರ ಬಹುಮತದಿಂದ ಕೂಡಿದ ಒಂದು ಕಮಿಟಿಯನ್ನು ನೇಮಿಸಬೇಕೆಂಬ ಠರಾವನ್ನು ಮಿ. ಪಿ. ಬಿ. ಚೆಟ್ಟಿಪ್ಪನವರು ಸೂಚಿಸುವಾಗ ಹೇಳಿದ್ದೇನೆಂದರೆ—ಬೆಂಚು ಮೇಜಿಸ್ಟ್ರೇಟರು ಜನರಲ್ಲಿ ಆಗಾಗ್ಗೆ ನಡೆಯುವ ಚಿಕ್ಕ ಕಲಹಗಳನ್ನು ವಿಚಾರಿಸುವದರಿಂದ ಅವರ ತೀರ್ಮಾನವು ಶಿಕ್ಷಿತ ರೂಪಕ್ಕಿಂತ ನಡತೆಯನ್ನು ತಿದ್ದುವ ಸ್ವಭಾವವುಳ್ಳದ್ದಾಗಿರಬೇಕು. ಆದುದರಿಂದ ಅಂಥಾ ಮೇಜಿಸ್ಟ್ರೇಟರು ನ್ಯಾಯಪ್ರಿಯರು ಮಾತ್ರವಲ್ಲ, ಜನಪ್ರಿಯರು ಸಹ ಆಗಿರಬೇಕು. ಅವರು ಜನರ ನಂಬಿಗೆಯನ್ನು ಸಂಪಾದಿಸಿದವರಾಗಬೇಕು. ಆದುದರಿಂದ ಇವರನ್ನು ಆರಿಸುವುದರಲ್ಲಿ ಜನರ ಪ್ರತಿನಿಧಿಗಳಿಗೆ ಅಭಿಪ್ರಾಯ ಕೊಡುವ ಹಕ್ಕಿರಬೇಕು. ಈ ನೇಮಕವನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೊಬ್ಬರೇ ಮಾಡುವುದಕ್ಕಿಂತ ಇವರ ಜೊತೆಗೆ ಪ್ರಜಾಪ್ರತಿನಿಧಿಗಳು ಸೇರಿಕೊಂಡರೆ ಒಳ್ಳೆಯದಲ್ಲವೇ? ಈಗಿರುವ ಬೆಂಚು ಮೇಜಿಸ್ಟ್ರೇಟರುಗಳ ಸೇವೆ ಕೂಡಾ ದೇಶದಲ್ಲಿ ತೃಪ್ತಿಯನ್ನುಂಟುಮಾಡಿರುವುದಿಲ್ಲ. ಕಮಿಟಿಯವರೇ ಮೇಜಿಸ್ಟ್ರೇಟರನ್ನು ನೇಮಿಸುವದಲ್ಲ. ಅವರ ಸಿಫಾರಸ್ಸಿನ ಮೇಲೆ ನೇಮಿಸುವ ಹಕ್ಕು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೇನೇ ಇದೆ. ಇಂಥಾ ಠರಾವು ಸೆಂಟ್ರಲ್ ಪ್ರಾಂತ್ಯದ ಕೌನ್ಸಿಲಿನಲ್ಲಿ ಈ ಮೊದಲೇ ಮಂಜೂರಾಗಿದೆ. ಗ್ರಾಮ ಪಂಚಾಯಿತಿಯ ಠರಾವು ತಂದಾಗ ಪಂಚಾಯಿತಿಗಿಂತ ಬೆಂಚ್ ಮೇಜಿಸ್ಟ್ರೇಟರ ಕೋರ್ಟು ಉತ್ತಮವೆಂದು ಹೇಳಿದ ಕೆಲವು ಮೆಂಬರುಗಳು ಈ ಕೋರ್ಟನ್ನು ಜನರ ಅಭಿಪ್ರಾಯಕ್ಕೆ ಅನುಗುಣವಾಗಿರುವಂತೆ ಮಾಡಲು ಒತ್ತಾಸೆ ಕೊಡುತ್ತಾರೆಂದು ನಂಬುತ್ತೇನೆ.

ಮಿ. ಯಂ. ಯಂ. ಚೆಣ್ಣಪ್ಪನವರು ಅನುಮೋದಿಸಿದರು.

ಮಿ. ಪಿ. ಬಿ. ಮೇದಪ್ಪನವರು ಠರಾವಿಗೆ ವಿರೋಧಿಸುವಾಗ, ಈ ಠರಾವು ಓಟರುಗಳ ಪ್ರೀತಿಪಡೆಯಲಿಕ್ಕೆ ತಂದದ್ದಾಗಿದೆ. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ಇರುವ ಹಕ್ಕನ್ನು ಕಡಿಮೆ ಮಾಡಬಾರದು. ನ್ಯಾಯತೀರ್ಪು ಮಾಡುವವರಲ್ಲಿ ಜನರ ಪ್ರೀತಿಯೊಂದೂ ಬೇಕಾಗಿರುವದಿಲ್ಲ. ಈಗ ನೇಮಿಸಲ್ಪಟ್ಟವರ ಮೇಲೆ ಆಕ್ಷೇಪಣೆ ಏನೂ ಕೇಳಿರುವದಿಲ್ಲ. ಈಗ ಇರುವವರು ಜನರ ನಂಬಿಕೆಯನ್ನು ಸಂಪಾದಿಸಿರುತ್ತಾರೆ. ಶಕ್ತಿ ಇರುವವರಲ್ಲಿ ಉತ್ತಮರಾದವರನ್ನು ನೇಮಿಸಲಾಗಿದೆ. ಜನರ ಕ್ಷೇಮಕ್ಕಾಗಿಯೇ ಈ ಮೇಜಿಸ್ಟ್ರೇಟರುಗಳು ನಿಷ್ಪಕ್ಷಪಾತಿಗಳಾಗಿರಬೇಕು, ಎಂತ ಹೇಳಿದರು.

ಮಿ. ಟಾಸ್ಕರವರು—ಇದು ಚಕ್ರವರ್ತಿಯವರಲ್ಲಿರುವ ಹಕ್ಕನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಕಮಿಷನರ್ ಮತ್ತು [illegible] ಮುಖಾಂತರದಿಂದ ಉಪಯೋಗಿಸಲ್ಪಡುವದಾಗಿದೆ. ಸರಕಾರದ ಆಫೀಸರುಗಳ ಅಧಿಕಾರವನ್ನು ಬೇರೆಯವರ ಮೇಲೆ ಹೇರಿಸಲಾಗುವದಿಲ್ಲ. ಯಾವ ತರದ ಕಮಿಟಿಗೂ ನಾನು ಒಪ್ಪುವದಿಲ್ಲವೆಂತ ಹೇಳಿ ಠರಾವನ್ನು ವಿರೋಧಿಸಿದರು.

ಮಿ. [illegible] ಮುತ್ತಣ್ಣನವರು ಠರಾವಿಗೆ ವಿರೋಧಿಸಿದರು.

ಈ ಠರಾವು ಪಾಸಾಗಿ ಒಂದು ವರ್ಷಕ್ಕಿಂತ ಹೆಚ್ಚಿಗೆ ಆಯಿತೆಂಬುದನ್ನು ಮಿ. ಮೇದಪ್ಪನವರು ತಿಳಿದುಕೊಂಡಿದ್ದರೆ ಈ ಜನಾಭಿಪ್ರಾಯ ಕೇಳುವ ಓಟರುಗಳ ಪ್ರೀತಿಗಳಿಸುವದಕ್ಕೆ ಇದಲ್ಲ, ಈಗ ಚುನಾವಣೆಯಿಲ್ಲವೆಂದು ಅವರಿಗೆ ಗೊತ್ತಾಗುತ್ತಿತ್ತು. ಕಮಿಟಿ ನೇಮಿಸುವದರಿಂದ ನ್ಯಾಯತೀರ್ಪಿಗೆ ಭಂಗವಿಲ್ಲ. ಇದರಿಂದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಅಧಿಕಾರವು ಕಡಿಮೆಯಾಗುವುದಿಲ್ಲವೆಂದು ಚೆಟ್ಟಿಪ್ಪನವರು ಉತ್ತರ ಕೊಟ್ಟರು.

ಓಟಿಗೆ ಹಾಕಲಾಗಿ ಮಿ. ರಾ. ಬ. ಕಾಳಪ್ಪನವರು, ಕೆ. ಪಿ. ಚೆಣ್ಣಪ್ಪನವರು, ಪಿ. ಟಿ. ಕಾರ್ಯಪ್ಪನವರು, ಯಂ. ಯಂ. ಚೆಣ್ಣಪ್ಪನವರು, ಸಬ್ಬಯ್ಯನವರು, ಮಂದಣ್ಣಯ್ಯನವರು, ಬಿ. ಬಿ. ಕಾರ್ಯಪ್ಪನವರು ಮತ್ತು ಶ್ರೀಪತಿರಾಯರು ಪರವಾಗಿ ಓಟು ಕೊಟ್ಟರು. ಮಿ. ಕೆ. ಮಂದಣ್ಣನವರು ಯಾವ ಪರವಾಗಿಯೂ ಓಟು ಕೊಡಲಿಲ್ಲ. ಮಿಕ್ಕವರೆಲ್ಲರೂ ವಿರೋಧಿಸಿದರು.

ಠರಾವು ಮಂಜೂರಾಗಲಿಲ್ಲ.

ನಂತರ ಚರ್ಚಿಸಿ ತೀರ್ಮಾನವಾದ ಠರಾವುಗಳು ಈ ಕೆಳಗೆ ಕೊಡಲ್ಪಟ್ಟಿವೆ. ಅವುಗಳ ಚರ್ಚೆಯ ವಿವರವು ಬರುವ ವಾರ ಪ್ರಕಟಿಸಲ್ಪಡುವುದು.

111 ದಕ್ಷಿಣ ಕೊಡಗಿನಲ್ಲಿಯಂತೆಯೇ ಉತ್ತರ ಕೊಡಗಿನಲ್ಲಿಯೂ ಸಾಗು ಧೃತಿಗೆ ಜಾಸ್ತಿ ಜಾಗವನ್ನು ಕೊಡಬೇಕೆಂಬ ಠರಾವು ಮಂಜೂರಾಯಿತು.

113 ಸ್ವಂತ ಒಮ್ಮ ಮತ್ತು ಸಾಗು ಜಾಗದಿಂದ ಬರುವಳಿದಾರರ ಉಪಯೋಗಕ್ಕಾಗಿ ಮರ ಮತ್ತು ಸೌದೆ ಸಾಗಿಸಲಿಕ್ಕೆ ಮಾಲೀಕರ ಸ್ವಂತ ರಹದಾರಿ ಸಾಕೆಂತ ಮಾಡಿಕೊಡಬೇಕೆಂಬ ಠರಾವು ಪಾಸಾಯಿತು.

114 ಮಡಿಕೇರಿ—ಮೈಸೂರು ರಸ್ತೆಯ 6ನೇ ಮೈಲಿನಿಂದ ಹಾಕತ್ತೂರು, ಮರಗೋಡುಗಳಾಗಿ ಮಡಿಕೇರಿ ಸಿದ್ದಾಪುರ ರಸ್ತೆಯ ಬೆಟ್ಟತ್ತೂರಿಗೆ ಹೋಗಿ ಸೇರುವ ರಸ್ತೆಯನ್ನು ಪ್ರಾವಿನ್ಶಿಯಲ್ ರಸ್ತೆಯಾಗಿ ಮಾಡಿ ಗಾಡಿ ಮಗ್ಗೆರೆ ವ್ಯಾಪಾರ ನಡೆಸಲು ಯೋಗ್ಯವಾಗಿ ಮಾಡಿಕೊಡಬೇಕೆಂಬ ಠರಾವು ಪಾಸಾಗಲಿಲ್ಲ.

116 ಕೊಡಗಿನ ಪ್ರಾಂತೀಕ ಗಜೆಟೆಡ್ ಉದ್ಯೋಗಸ್ಥರ ಪದವಿಯನ್ನು ಮದ್ರಾಸು ಸರ್ವೀಸಿನ (ಕಾಡರ್) ಪಟ್ಟಿಗೆ ಸೇರಿಸಬೇಕು ಮತ್ತು ಅವರ ಸರ್ವೀಸು ಕೊಡಗಿನಲ್ಲಿ ಐದು ವರ್ಷ ಮಾತ್ರವಾಗಿರಬೇಕು ಎಂಬ ಠರಾವು ಪಾಸಾಯಿತು.

117 ರಿಜರ್ವ್ ಮಾಡದ ಸ್ವಂತ ಜಾಗದಿಂದ ತೆಗೆಯುವ ಗಂಧದ ಉತ್ಪತ್ತಿಯು ಶೇಕಡ 75% ರಷ್ಟು ಜಾಗದ ಮಾಲೀಕನಿಗೆ ಕೊಡುವಂತೆ ರೂಲ್ಸು ಮಾಡಬೇಕೆಂಬ ಠರಾವು ಮಂಜೂರಾಗಲಿಲ್ಲ.

119 ಎಲ್ಲಾ ಜಾಗಗಳಲ್ಲಿಯೂ ಎಳೆ ಮತ್ತು ಹಸಿ ಗಂಧದ ಮರಗಳನ್ನು ಕೀಳದಂತೆಯೂ ಮತ್ತು ಒಣಗಿದ ಮರಗಳನ್ನು ಮಾತ್ರ ಕೀಳುವಂತೆಯೂ ರೂಲ್ಸು ಮಾಡಬೇಕೆಂಬ ಠರಾವು ಪಾಸಾಯಿತು.

120 ಹಾರಂಗಿ ನಾಲೆಯ ಕೆಲಸವನ್ನು ಬೇಗನೆ ನಡೆಸಬೇಕೆಂಬ ಠರಾವು ಮಂಜೂರಾಯಿತು.

121 ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ 20ನೇ ರೂಲಿನಲ್ಲಿ ಮಳೆ ಇಲ್ಲದೆ ಬೆಳೆಕಟ್ಟಿ ಕಂದಾಯ ಮಾಫಿ ಕೊಡುವಾಗ, 'ಮಾಲೀಕನ ಸ್ಥಿತಿಯನ್ನು ನೋಡಿ ರಿಯಾಯಿತಿ ಕೊಡಬೇಕು' ಎಂಬದರಲ್ಲಿ 'ಮಾಲೀಕನ ಸ್ಥಿತಿಯನ್ನು ನೋಡಿ' ಎಂಬದನ್ನು ತೆಗೆದು ಹಾಕಬೇಕೆಂಬ ಠರಾವು ಮಂಜೂರಾಗಲಿಲ್ಲ.

122 ಕೊಡಗು ಲ್ಯಾಂಡ್ ಮತ್ತು ರೆವಿನ್ಯೂ ರೆಗ್ಯುಲೇಶನ 101 (1)ನೇ ರೂಲಿನಲ್ಲಿ ಹಿಡುವಳಿ ಕೊಡುವದರಲ್ಲಿ '25 ಸಂಟು' ಎಂಬದನ್ನು ತೆಗೆದು, ಅದರ ಬದಲು 'ಎರಡು ಎಕ್ರೆಗಳಿಗಿಂತ ಕಡಿಮೆ ಇಲ್ಲದೆ' ಎಂಬದನ್ನು ಸೇರಿಸಬೇಕೆಂಬ ಠರಾವು ಪಾಸಾಯಿತು.

(ಮುಂದುವರಿಯುವುದು.)

NOTICE.

Coorg District Board Office,
Mercara, the 29th October 1926.

It is hereby notified for general information the following dates are fixed for the nomination and election of Members for the District Board.

of nomination of candidates not later than	23—11—1926.
of scrutiny of nomination papers	30—11—1926.
Publication of final list of valid nomination not later than	5—12—1926.
Date of election	20—12—1926.

T. J. TASKER,
PRESIDENT, DISTRICT BOARD, Coorg.

ವರ್ತಮಾನ ಸಂಗ್ರಹ.

ಒಳ ದೇಶ

ಬೆಳೆಗಾರರ ಸಂಘದ ಕಾರ್ಯನಿರ್ವಾಹಕ ಕಮಿಟಿ ಮೀಟಿಂಗು ಈ ತಾ. 20ನೇ ಶನಿವಾರ ವೀರಾಜಪೇಟೆ ವಿಘ್ನೇಶ್ವರ ಭಂಡಾರದಲ್ಲಿ ನಡೆಯಲಿಕ್ಕಿದೆ.

"ಕೊಡಗು" ಲಿಮಿಟೆಡ್ ಕಂಪೆನಿಯ ಷೇರುದಾರರುಗಳ ಮೀಟಿಂಗು ತಾ 20—11—26 ರಲ್ಲಿ ವೀರಾಜಪೇಟೆಯಲ್ಲಿ ನಡೆಯುವುದು.

ಡಿಸೆಂಬರು ತಾ. 2ರಲ್ಲಿ ಬೆಳಿಗ್ಗೆ 11 ಗಂಟೆಗೆ ಕಮಿಷನರ ಆಫೀಸಿನ ಮೇಲೆ ... ಒಂದು ... ಸ್ಮಿತ್ ಟ್ರೈನ್ ... ಗಳನ್ನು ... ಮಾಡುತ್ತಾರೆಂದಾಗಿ ತಿಳಿಸಿರುತ್ತಾರೆ.

ತಾ. 7 ರಲ್ಲಿ ಪಾಲೂರು ದೇವಸ್ಥಾನದಲ್ಲಿ ಮೆ. ... ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ... ನಾಡಿನ ... ಸಹಕಾರ ಸಂಘಗಳ ಪ್ರತಿನಿಧಿಗಳು ಸೇರಿ ಒಂದು ಯೂನಿಯನ್ ಸ್ಥಾಪಿಸಿದರು.

ಹುತ್ತರಿ ಹಬ್ಬವು ಈ ತಾರೀಖು 20 ರಲ್ಲಿ ಪ್ರಾರಂಭವಾಗುತ್ತದೆ. ತಾ. 20 ನೇ ಶನಿವಾರ ... ತಾ. 21ನೇ ಆದಿತ್ಯವಾರ ನಾಡುಪೊಲ್ದು ಆಗುವದು.

ತಾ 7—11—26 ರಲ್ಲಿ ... ಸಹಕಾರಿ ಸಂಘಗಳ ... ರವರ ಅಧ್ಯಕ್ಷತೆಯಲ್ಲಿ ... ನಡೆಯಿತು. ಸುಮಾರು 90 ಜನರು ಹಾಜರಿದ್ದರು. ಸಹಕಾರಿ ಸಂಘಗಳ ಅಭಿವೃದ್ಧಿಗೆ ಸಂಬಂಧಪಡುವ ಹಲವು ವಿಷಯಗಳು ಚರ್ಚಿಸಲ್ಪಟ್ಟನಂತರ ಅಧ್ಯಕ್ಷರು ಸಹಕಾರದ ವಿಷಯ ... ದ ಭಾಷಣ ಮಾಡಿದರು.

ಇನ್ನು ಮುಂದೆ ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ... ಕಳುಹಿಸಲಿಕ್ಕಿರುವವರು ಆ ಹಣವನ್ನು ಅವರಿಗೆ ಸಮೀಪವಿರುವ ಖಜಾನೆಗೆ ಸಲ್ಲಿಸಿ ರಸೀತಿಯನ್ನು ಸೆಂಟ್ರಲ್ ಬ್ಯಾಂಕಿನ ಸೆಕ್ರೆಟರಿಯವರಿಗೆ ಕಳುಹಿಸಿದರೆ ಸಾಕು. ಆ ರಸೀತಿಯನ್ನು ಮಡಿಕೇರಿ ಖಜಾನೆಗೆ ಕೊಟ್ಟು ಅಲ್ಲಿಂದ ಹಣ ಹೊಂದಿಕೊಳ್ಳುವ ಏರ್ಪಾಡು ಮಾಡಲಾಗಿದೆ. ಇದೇ ರೀತಿ ಬ್ಯಾಂಕಿನಿಂದ ಸಂಘಗಳಿಗೆ ಸಾಲ ಕೊಡುವಾಗಲೂ ಬ್ಯಾಂಕಿನ ಸೆಕ್ರೆಟರಿಯವರು ಸಂಘಗಳಿಗೆ ಕಳುಹಿಸುವ ಖಜಾನೆಯ ಚೆಕ್ಕನ್ನು ಸಮೀಪದ ಖಜಾನೆಗೆ ಕೊಟ್ಟು ಅಲ್ಲಿಂದ ಹಣ ವಸೂಲು ಕೊಡಲಾಗುವುದೆಂದು ಬ್ಯಾಂಕಿನ ಸೆಕ್ರೆಟರಿಯವರು ತಿಳಿಸುತ್ತಾರೆ.

ಹಿಂದೂದೇಶ.

ಗೆದ್ದಲು ಹುಳುಗಳು ದಿನ ಒಂದರ ಸುಮಾರು 800000 ಮೊಟ್ಟೆಗಳನ್ನಿಡುತ್ತವಂತೆ.

ಎಗ್ರಿಕಲ್ಚರ್ ಕಮಿಷನಿನವರು ಬಂಗಳೂರಿಗೆ ತಾ 8 ರಲ್ಲಿ ಬಂದು ತಲಪಿದರು. ಅಲ್ಲಿ ಅವರು ಮೂರು ಮಂದಿಯ ಅಭಿಪ್ರಾಯಗಳನ್ನು ಮಾತ್ರ ತೆಗೆದುಕೊಳ್ಳುವರು.

ಛಾಟಗಾಂವ್ ಪ್ರಾಂತ್ಯದಲ್ಲಿ ಬಿರುಗಾಳಿಯ ದೆಸೆಯಿಂದ ಇನ್ನೂರು ಜನರು ಸಮುದ್ರದಲ್ಲಿ ಮುಳುಗಿ ಹೋದರೆಂದು ವರ್ತಮಾನ.

ಒಮರ್ ದೇಶದ ಮಾಲ್ಮೀನ್ ಪಟ್ಟಣದಲ್ಲಿ ಬೌದ್ಧ ದೇವಸ್ಥಾನದಲ್ಲಿ ಒಂದು ಮೇಣದ ಬತ್ತಿಯು ಮಗುಚಿದ್ದು ಬೆಂಕಿ ಹತ್ತಿ ದೇವಸ್ಥಾನವೂ ಸುತ್ತಲಿದ್ದ ಕಟ್ಟಡಗಳೂ ಸುಟ್ಟುಹೋಗಿ ಸುಮಾರು ಐವತ್ತು ಸಾವಿರ ರೂಪಾಯಿಗಳು ನಷ್ಟವಾಗಿವೆ.

ಮೆ. ಚಾರ್ಲ್ಸ್ ... ನವರ ಸಂಪಾದಕತ್ವದಲ್ಲಿ 'ಇಂಡಿಯನ್ ನೇಷನಲ್ ಹೆರಾಲ್ಡ್' ಎಂಬ ಇಂಗ್ಲೀಷ್ ದೈನಿಕ ಪತ್ರಿಕೆಯು ... ಬೊಂಬಾಯಿಯಲ್ಲಿ ಹೊರಡಲಿದೆ. ಕಳೆದ ತಿಂಗಳ 23 ರಲ್ಲಿ ಇದರ ಪ್ರಥಮ ಸಂಚಿಕೆಯು ಹೊರಬಿತ್ತು.

ಬೊಂಬಾಯಿ ಕೌನ್ಸಿಲಿಗೆ ಪ್ರತಿಯೋಗಿ ಸಹಕಾರ ಪಕ್ಷದ ... ವಾಗಿದ್ದ ಡಾಕ್ಟರ್ ... ರವರು ತಾ. 9 ರಲ್ಲಿ ಬೆಳಿಗ್ಗೆ ಹೃದಯ ಚಲನೆ ನಿಂತುಹೋಗಿ ಹಠಾತ್ತನೆ ಮೃತರಾದರು. ಆದುದರಿಂದ ಆ ದಿನ ಪೂನಾದಲ್ಲಿ ನಡೆಯಲಿಕ್ಕಿದ್ದ ಚುನಾವಣೆಯನ್ನು ಬಾಕಿಮಾಡಿರುವರು.

ತಾ. 8 ರಲ್ಲಿ ಮದ್ರಾಸು ಕೌನ್ಸಿಲು ಚುನಾವಣೆಯು ... ಪ್ರಾಂತ್ಯದಲ್ಲೆಲ್ಲಾ ನಡೆಯಿತು. ಜಸ್ಟಿಸ್ ಪಾರ್ಟಿಯ ಮುಂದಾಳಾಗಿ ಈ ವರೆಗೆ ಮದ್ರಾಸು ಕೌನ್ಸಿಲಿನಲ್ಲಿ ಮುಖ್ಯ ಮಂತ್ರಿಯಾಗಿದ್ದ ಪನಗಲ್ ರಾಜರವರು ಈ ಚುನಾವಣೆಯಲ್ಲಿ ಜಯಶೀಲರಾಗಿರುವರು.

ಮೈಸೂರಿನ ಎಗ್ಸಿಕ್ಯುಟಿವ್ ಕೌನ್ಸಿಲ್ ... ಸರ್ ಮಹಮ್ಮದ್ ಹಬಿಬುಲ್ಲಾರವರು ದಕ್ಷಿಣ ಆಫ್ರಿಕಾ ಡೆಪ್ಯುಟೇಶನಿನ ಮುಂದಾಳಾಗಿ ಹೋಗುವದರಿಂದ ಅವರ ಬದಲು ಇಂಡಿಯಾ ಸರಕಾರಕ್ಕೆ ಸೆಕ್ರೆಟರಿಯಾಗಿರುವ ಮಿ. ಜೆ. ಡಬ್ಲ್ಯು. ಭೋರ್‌ರವರನ್ನು ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರಾಗಿ ನೇಮಿಸಿರುವರು.

... ದಲ್ಲಿ ನಾಲ್ಕು ತಿಂಗಳ ... ಒಂದು ಮಗುವಿಗೆ ಹೊಟ್ಟೆ ಊದಿಕೊಂಡು ನೋಯುತ್ತಿದ್ದುದರಿಂದ ಅಲ್ಲಿಯ ಆಸ್ಪತ್ರೆಯಲ್ಲಿ ಅದರ ಹೊಟ್ಟೆಯನ್ನು ಕೊಯಿದಾಗ ಅದರೊಳಗೆ ಒಂದು ಕೂಸು ಇತ್ತಂತೆ. ಅದಕ್ಕೆ ಎರಡು ಕೈಗಳು ಮಾತ್ರ ... ಕಾಲು ಇರಲಿಲ್ಲ. ಪ್ರಾಣವೂ ಇರಲಿಲ್ಲ. ಆ ಶರೀರವನ್ನು ತೈಲದಲ್ಲಿ ಹಾಕಿ ಕಾಪಾಡಿ ಇಟ್ಟಿರುವರು. ನಾಲ್ಕು ತಿಂಗಳ ಮಗುವು ಜೀವದಲ್ಲಿದೆ ಎಂದು "ಖಿಲಾಫತ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ನೂತನ ವಸ್ತು ಪರಿಶೋಧಕರು ಕೆಲವರು ಹಿಮಾಲಯ ಪರ್ವತದ ಮೇಲಕ್ಕೇರಿ ಹಿಮಮಯವಾದ ಪ್ರದೇಶಕ್ಕೆ ಹೋದಲ್ಲಿ ಕೆಲವು ಅಪೂರ್ವ ಮೃಗಗಳು ಕಂಡು ಬಂದವಂತೆ. ಬರೀ ಹಿಮದಲ್ಲಿ ಮೃಗಗಳನ್ನು ಕಂಡು ಆಶ್ಚರ್ಯಪಟ್ಟರಂತೆ. ಬಹು ಪ್ರಯಾಸದಿಂದ ಹತ್ತಿರ ಹೋಗಿ ನೋಡಿದಲ್ಲಿ ಆ ಮೃಗಗಳ ದೊಡ್ಡ ಎಲೆಗಳಲ್ಲಿ ಕಾಲು ಕೈಗಳಿಂದ ಕೂಡಿದ ಮಾನವ ... ಕಂಡು ಬಂದವು. ಅವರ ಕಣ್ಣುಗಳು ಮಾತ್ರ ಮುಚ್ಚಿಕೊಂಡಿದ್ದವು. ಇವರನ್ನು ಕಂಡು ಮತ್ತೂ ಆಶ್ಚರ್ಯಭರಿತರಾದರು. ಚಿರಕಾಲದಿಂದ ತಪಸ್ಸು ಮಾಡುತ್ತಿರುವ ಮುನಿಗಳು ಇವರೇ ಆಗಿರಬಹುದು.

ಹುತ್ತರಿ ಹಬ್ಬದ ಮುಹೂರ್ತದ ಪಟ್ಟಿ.

(1) ಸನ್ 1926 ನೇ ಇಸವಿ ನವಂಬರ್ ತಾ. 19 ನೇ ಶುಕ್ರವಾರ ದಿನ ಕೃತಿಕ ನಕ್ಷತ್ರದಲ್ಲಿ ಪಾಡಿ ಸುಬ್ರಾಯದೇವರ (ಇಗ್ಗುತಪ್ಪದೇವರು) ಕಲಾಡ್ಚ ಹಬ್ಬವಾಗುತ್ತೆ.

(2) ಇದೇ ನವಂಬರ್ ತಾರೀಖು 20 ರಲ್ಲು ಶನಿವಾರ ದಿನ ರೋಹಿಣಿ ನಕ್ಷತ್ರದಲ್ಲು **ದೇವರ ಪೊಳ್ದು.** ಆ ದಿನ ಸಾಯಂಕಾಲ 8 ಘಂಟೆಗೆ ನೆರೆ ಕಟ್ಟುವದು, 9 ಘಂಟೆಗೆ ಕದರು ತೆಗೆಯುವದು 10ಘಂಟೆಗೆ ಊಟಮಾಡುವ ಶುಭ ಮುಹೂರ್ತ.

(3) ಮರುದಿನ ನವಂಬರ್ ತಾರೀಖು 21 ರಲ್ಲು ಆದಿತ್ಯವಾರದಿನ ಮೃಗಶಿರ ನಕ್ಷತ್ರದಲ್ಲಿ ನಾಡು ಪೊಳ್ದು. ಆ ದಿನ ಸಾಯಂಕಾಲ 9 ಘಂಟೆಗೆ ನೆರೆ ಕಟ್ಟುವದು, 10 ಘಂಟೆಗೆ ಕದರು ತೆಗೆಯುವದು, 11 ಘಂಟೆಗೆ ಊಟ ಮಾಡುವ ಶುಭ ಮುಹೂರ್ತ

ಕ. ಚಂಗಪ್ಪ,
ಪ್ರಸಿಡೆಂಟರು.
ಮುಖ್ಯಾಯಿ ಇಲಾಖೆ.

ಪ್ರ ಕ ಟ ಣೆ.

ಕೆಪ್ಪರಾಸ್ ಸಂಘದ ಮಡಿಕೇರಿ ಶಾಖೆಯವರು ಜನರ ಆರೋಗ್ಯ, ವಿಶುದ್ಧತೆಯ ಜಾಣಾರತೆಯ ... ವಸ್ತುಗಳ ಲಕ್ಷಣವನ್ನು ತಿಳಿಸಿ ಅನಾರೋಗ್ಯ ಕಮ್ಮಿ ಮಾಡುವ ಉಪಾಯಗಳನ್ನು ... ಪ್ರದರ್ಶನ ಮತ್ತು ಉಪನ್ಯಾಸಗಳನ್ನು ಸಹ ಕೊಡಲು ಏರ್ಪಾಡು ಮಾಡುವದರಿಂದ ಗ್ರಾಮಗಳಲ್ಲಿ ಈ ಬಾಬಿನಲ್ಲಿ ಆತುರವುಳ್ಳವರ ಸಭೆ ಸಂಘದ ಸೆಕ್ರೆಟರಿಯವರಿಗೆ ಮಡಿಕೇರಿಗೆ ಬರಕೊಂಡಲ್ಲಿ ಅದಕ್ಕೆ ಬೇಕಾಗುವ ಏರ್ಪಾಡು ... ಅವರ ಕಾರ್ಯಕ್ರಮವನ್ನು ನಿರ್ವಹಿಸಲು ತಕ್ಕ ಏರ್ಪಾಡು ಮಾಡಲಾಗುವದೆಂಬ ಸಂಗತಿ ಪ್ರಸಿದ್ಧಪಡಿಸಲಾಗಿದೆ.

ಎ. ಬಿ. ಕಾರ್ಯಪ್ಪ,
ಗೌರವ ಕಾರ್ಯದರ್ಶಿ.

ಮಾ ರಾ ಟ ಕ್ಕೆ.

ಮಡಿಕೇರಿ ಸಂಕದಕಟ್ಟೆಗೆ ಸಮೀಪ ಮಂಗಳೂರು ರಸ್ತೆ ಬದಿಯಲ್ಲಿ ಇರುವ ಸ್ವಲ್ಪ ಜಾಗವೂ, ಕರ್ಣಂಗೇರಿ ಗ್ರಾಮದ ಸ. ನಂ. 485/12 ರ 21—18 ಎಕರೆ 11—4—0 ಕಂದಾಯದ ಕಾಂದಿನ ಪೈಕಿಯಲ್ಲಿ ... ತೋಟವೂ ಮತ್ತು ಸ. ನಂ. 485/20 1 30 ಎಕರೆ 2—13—0 ಕಂದಾಯದ ತುಂಡೂ ಸಹ ಮಾರಾಟಕ್ಕೆ ಇದೆ. ಇದಕ್ಕೆ ಕ್ರಯ ರೂ 600—0—0. ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಡಬಹುದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

"N" C/o Manager,
"Kodagu," Mercara.
ಮ್ಯಾನೇಜರ್, 'ಕೊಡಗು'
ಮೂಲಕ "ಎನ್" ರವರಿಗೆ.

4—1.
ಮಡಿಕೇರಿ,
ತಾ 2—11—1916.

ವಿ ನಂ ತಿ.

ನನ್ನ ಬಾಬ್ತು ಕರೀ ವರ್ಣದ ಹೊಟ್ಟೆ ಕೆಳಗೆ ಬಿಳೀ ಮಚ್ಚೆ ಇರುವ, 1 ಇಂಚು ಉದ್ದದ ಅಡ್ಡ ಕೊಂಬಿನ ಎಡದ ಭಾಗದಲ್ಲಿ ... 1 ಗೂಳಿನ, ಉದ್ದವಾಗಿರುವ ಒಂದು ಕರೆಯುವ ಹಸು ಮತ್ತು ನನ್ನ ಮನೆಯ ಒಂದು ಕರಿ ವರ್ಣದ ಹೆಣ್ಣು ಕರು ತಾ 10—11—26 ರಲ್ಲು ಮಡಿಕೇರಿಯಿಂದ ತಪ್ಪಿಸಿಕೊಂಡು ಹೋಗಿರುತ್ತೆ. ಇದನ್ನು ಪತ್ತೆ ಮಾಡಿ ನನಗೆ ತಿಳಿಸಿದ್ದಲ್ಲಿ ಅಂಥವರಿಗೆ 2 ರೂಪಾಯಿ ಇನಾಮು ಕೊಡುತ್ತೇನೆ.

ಯಂ. ಎ. ಬಿದ್ದಯ್ಯ,
ಫಾರೆಸ್ಟರು, ಮಡಿಕೇರಿ.

ನಾಪೋಕ್ಲು ನಾಡು ಓಟರುಗಳಲ್ಲಿ ವಿಜ್ಞಾಪನೆ.

ಮಹಾಶಯರೇ,

ನನ್ನನ್ನು ನಾಪೋಕ್ಲು ನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಮೆಂಬರನ್ನು ಚುನಾಯಿಸಬೇಕೆಂದು ನಿಶ್ಚಯಿಸುವ ಬಗ್ಗೆ ಈ ನಾಡಿನ ಎಲ್ಲಾ ಗ್ರಾಮಗಳಿಂದಲೂ ಜನರು ಸೇರಿ ಈ ಆಕ್ಟೋಬರು ತಾರೀಖು ... ರಲ್ಲಿ ನಾಪೋಕ್ಲಿನಲ್ಲಿ ನಡೆಸಿದ ಮೀಟಿಂಗಿನಲ್ಲಿ ಬಹು ಬಹುಮತದಿಂದ ತೀರ್ಮಾನಿಸಿದ ಪ್ರಕಾರ ನಾನು ಸದರಿ ಚುನಾವಣೆಗೆ ಉಮೇದುವಾರನಾಗಿ ನಿಲ್ಲಲು ನಿಶ್ಚಯಿಸಿರುತ್ತೇನೆ. ಈ ನಾಡಿನ ವಿಷಯದಲ್ಲಿ ನಿಮ್ಮೆಲ್ಲರ ಅಭಿಪ್ರಾಯದಂತೆಯೂ, ದೇಶಕ್ಕೆ ಸಂಬಂಧ ಪಡುವ ಸಂಗತಿಗಳಲ್ಲಿ ಬಹುಜನರ ... ತೀರ್ಮಾನದಂತೆಯೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹೋರಾಡಲು ತಯಾರಾಗಿದ್ದೇನೆ. ನಿಮ್ಮ ಸೇವೆ ಮಾಡಲು ಕಂಕಣ ಬದ್ಧನಾಗಿರುವ ನನಗೆ ನಿಮಗಿರುವ ಒಂದು ಓಟನ್ನು ತಾ 20—12—'26 ರಲ್ಲಿ ಕೊಡಬೇಕಾಗಿ ಬೇಡುವ,

ನಾಪೋಕ್ಲು,
ತಾ. 10—11—'26.

ನಿಮ್ಮ ಸೇವಕ,
ಅರೆಯಡ ಸುಬ್ಬಯ್ಯ.

5—1

ಪ್ರ ಕ ಟ ಣೆ.

ಶ್ರೀಮಂಗಲನಾಡು ಓಟರುಗಳಲ್ಲಿ ಚೆಪ್ಪುಡಿರ ಐ. ಸುಬ್ಬಯ್ಯನ ವಿಜ್ಞಾಪನೆ.

ಮಹಾಶಯರೇ,

ತಾ. 20—12—'26ರಲ್ಲಿ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಈ ನಾಡಿನ ಪರವಾಗಿ ನಾನೊಬ್ಬ ಉಮೇದುವಾರನಾಗಿ ನಿಂತಿರುತ್ತೇನೆ. ನಾನು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ನಿಮ್ಮ ಪ್ರತಿನಿಧಿಯಾಗಿ ಎಷ್ಟರ ಮಟ್ಟಿಗೆ ಕೆಲಸ ಮಾಡಲು ಶಕ್ತನಾಗುತ್ತೇನೆಂಬುದು ನಿಮಗೆಲ್ಲರಿಗೂ ತಿಳಿಯದಲ್ಲ. ನಾನು ಹುಟ್ಟಿದಂದಿನಿಂದ ಈ ನಾಡಿನ ಮಧ್ಯದಲ್ಲಿಯೇ ಇದ್ದುಕೊಂಡು ಇಲ್ಲಿಯವರ ಸ್ಥಿತಿಗಳನ್ನು ಚೆನ್ನಾಗಿ ಅರಿತವನಾದುದರಿಂದ ನಿಮ್ಮ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹೋರಾಡಲು ನನಗೆ ತುಂಬಾ ಅನುಕೂಲವಿದೆ. ನೀವೆಲ್ಲರೂ ನನ್ನ ಇಷ್ಟಮಿತ್ರರಾಗಿರುವದರಿಂದ ನಿಮ್ಮಲ್ಲಿ ನನಗೆ ಇರುವ ವಿಶ್ವಾಸವೇ ... ಚುನಾವಣೆಗೆ ನಿಂತದ್ದಾಗಿದೆ. ಆದುದರಿಂದ ಬೇರೆ ಉಮೇದುವಾರರುಗಳಂತೆ ಎಲ್ಲರಿಗೂ ಪತ್ರಗಳನ್ನು ಹಂಚುವ ಆವಶ್ಯಕತೆ ಇಲ್ಲವೆಂದು ನಾನು ನಂಬಿದ್ದೇನೆ.

ನೀವು ನಿಮಗಿರುವ ಒಂದು ಓಟನ್ನು ನನಗೆ ಕೊಟ್ಟು ಡಿಸ್ಟ್ರಿಕ್ಟ್ ಬೋರ್ಡಿಗೆ ನನ್ನನ್ನು ನಿಮ್ಮ ಪ್ರತಿನಿಧಿಯಾಗಿ ಕಳುಹಿಸಬೇಕಾಗಿ ಅತಿ ವಿನಯದಿಂದ ಕೋರುತ್ತೇನೆ.

ಕೋತೂರು.
ತಾ 12—10—16.

ನಿಮ್ಮ ಸೇವಕ,
ಚೆಪ್ಪುಡಿರ ಐ. ಸುಬ್ಬಯ್ಯ.

ಪತ್ರವ್ಯವಹಾರ

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ.]

ಚುನಾವಣೆ ಮೀಟಿಂಗುಗಳು.

ತಾ. 27—10—26 ರಲ್ಲು ಪೊನ್ನಂಪೇಟೆಯಲ್ಲಿ ಮೆ. ದೇವಣಿರ ... ರವರ ಅಧ್ಯಕ್ಷತೆಯಲ್ಲಿ 13 ಗ್ರಾಮಗಳ ಸುಮಾರು ನೂರು ಜನರು ಸೇರಿದ ಮೀಟಿಂಗಿನಲ್ಲೂ, ತಾ. 2—11—26 ರಲ್ಲಿ ... ದೇವರ ಕಟ್ಟೆಯ ಮುಂದಿನ ಕಟ್ಟೆ ಮನೆಯಲ್ಲಿ ಶ್ರೀ. ... ಸಿದ್ಧಲಿಂಗ ಸ್ವಾಮಿಯವರ ಅಧ್ಯಕ್ಷತೆಯಲ್ಲಿ 9 ಗ್ರಾಮಗಳ ಸುಮಾರು 70 ಜನರು ಸೇರಿ ಮಾಡಿದ ಮೀಟಿಂಗಿನಲ್ಲೂ, ತಾ 3—11—26ರಲ್ಲು ಕುಡ್ಲೂರು ... ಯಲ್ಲಿ ... ಮಠದ ಜಂಗಮಮೂರ್ತಿಗಳು ಶ್ರೀ. ಗುರುಲಿಂಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ 13 ಗ್ರಾಮಗಳ ಸುಮಾರು 90 ಜನರು ಸೇರಿ ಮಾಡಿದ ಮೀಟಿಂಗಿನಲ್ಲೂ ಬರುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಮೆ. ... ಚನ್ನಮಲ್ಲಪ್ಪನವರೂ, ಕೌನ್ಸಿಲು ಚುನಾವಣೆಗೆ ಮೆ. ... ಚನ್ನಪ್ಪನವರೂ ಉಮೇದುವಾರರಾಗಿ ನಿಲ್ಲಬೇಕೆಂದು ತೀರ್ಮಾನವಾಯಿತು.

ಹಾಜರಿದ್ದವ.

ವೀರಾಜಪೇಟೆ ಮುನಿಸಿಪಾಲಿಟಿ.

ಅಯ್ಯಾ,

ವೀರಾಜಪೇಟೆ ಮುನಿಸಿಪಲ್ ರೋಡುಗಳು ಮತ್ತು ಚರಂಡಿಗಳು ಕಳೆದ ಒಂದು ವರ್ಷದಿಂದ ನ್ಯಾಯವಾಗಿ ರಿಪೇರಿ ಆಗದೆ ಇರುವುದು ಸ್ಥಳೀಯ ಜನರಿಗೂ ಅದಕ್ಕೆ ಸಮ್ಮಂಧಪಟ್ಟ ಮೇಲಧಿಕಾರಿಗಳಿಗೂ ಚೆನ್ನಾಗಿ ಗೊತ್ತಿರಬಹುದು. ಸಂಕದಕಟ್ಟೆಯಿಂದ ... ಇಳಿಯುವ ಮತ್ತು ... ಗುಡ್ಡೆಯಿಂದ ಧಳನಿ ಮೋರಿಯಲ್ಲಿ ಆದರ ... ಗೆ ಹೋಗುವ ಒಳದಾರಿ ಮುನಿಸಿಪಲ್ ರಸ್ತೆಯಾಗಿಯೂ ಸಾವಿರಾರು ಜನರು ಹಗಲಿರುಳು ನಡೆ ತಿರುಗಾಡುವ ದಾರಿಯಾಗಿಯೂ ಇರುವುದು ಸರ್ವರಿಗೂ ತಿಳಿಯದ್ದಲ್ಲ. ಆ ಎರಡು ಒಳರಸ್ತೆಗಳ ಮತ್ತು ಇತರ ಕೆಲವು ರಸ್ತೆಗಳ ರಿಪೇರಿಯನ್ನು ಒಂದು ವರ್ಷದಿಂದಲೂ ಮಾಡಲಾಗುವದಿಲ್ಲ. ತಕ್ಕ ರೀತಿ ಧಳನಿ ಮೋರಿ ಇಲ್ಲದ ರಸ್ತೆ ಆದರೆ ಗಡಂಗು ಬೀದಿಯಿಂದ ಆಮ್ಮತ್ತಿ ಪಟ್ಟಣ

ರಸ್ತೆಗೆ ಹೋಗಿ ಸೇರುವ ರಸ್ತೆಗಾಗಿ ಸಾವಿರಾರು ಗಾಡಿಗಳು ತಿರುಗಾಡುತ್ತಿದ್ದರೂ ಕೂಡ ಈ ಮುನಿಸಿಪಾಲಿಟಿಯವರು ರಸ್ತೆ ದುರಸ್ತು ಬಗ್ಗೆ ಯಾವ ತೊಂದರೆಯೂ ತೆಗೆದುಕೊಳ್ಳುವುದು ಕಾಣುವುದಿಲ್ಲ. ಹಣದ ಕೊರತೆಯೋ ಇಲ್ಲವೇ ಉದಾಸೀನತೆಯೋ ನಾನರಿಯೆ. ಚರ್ಚ್ ರೋಡಿನಿಂದ ಧರ್ಮಾಸ್ಪತ್ರೆಯ ಹಿಂದುಗಡೆಯಾಗಿ ವೀರರಾಜಪೇಟೆಯಿಂದ ಅಮ್ಮತ್ತಿಗೆ ಹೋಗುವ ರಸ್ತೆ ಚೌಕವಲ್ಲು ನ್ಯಾಯವಾಗಿ ಗಾಡಿ ತಿರುಗಲಿಕ್ಕೆ ಸ್ಥಳ ಇಕ್ಕಟ್ಟಾಗಿರುವುದರಿಂದ ಎತ್ತುಗಳಿಗೂ ಗಾಡಿಗಳಿಗೂ ಮತ್ತು ಗಾಡಿಯವರಿಗೂ ಸಹ ಎಷ್ಟರ ಮಟ್ಟಿಗೆ ತೊಂದರೆ ಇರಬಹುದೆಂದು ನೋಡಿದ ಮಹನೀಯರಿಗೆ ಗೊತ್ತೇ ಇರಬಹುದು. ಆಸ್ಪತ್ರೆ ಅಲ್ಲ. ಹೆಚ್ಚು ಕಮ್ಮಿ ಭರ್ತಿ, ಕಾಲಿ ಗಾಡಿಗಳು, ಬೆಪ್ಪುನಾಡು, ಕೊಂಬೆಬೆಳ್ಳೂರಿನಿಂದ ಅಮ್ಮತ್ತಿ ಕಡೆ ಹೋಗಬೇಕಾದರೆ ಆದಷ್ಟು ಹತ್ತಿರದ ಒಳರಸ್ತೆಯಾದ ಮತ್ತು ಪಟ್ಟಣದ ಗಾಡಿಗಳು ತಿರುಗಾಡುವ ಮುನಿಸಿಪಾಲಿಟಿ ರಸ್ತೆಯಾದ ದಕ್ಕಸಿಪೋಹಲ್ಲದ ರಸ್ತೆಯನ್ನು ಇದುವರೆಗೆ ರಿಪೇರಿ ಮಾಡಿಸಿದಲ್ಲ. ಎಷ್ಟರ ಮಟ್ಟಿಗೆ ಪ್ರಯೋಜನವಿರಬಹುದೆಂದು ಬರದು ಪ್ರಾರ್ಥನೆಗಾಗುವುದಿಲ್ಲ. ಈ ರಸ್ತೆ ಮತ್ತು ಸಪ್ಲೈ ರಸ್ತೆ ಸೇರುವ ಒಳಿ ಹಟ್ಟಿನ ಅಪಾಯಗಳು ಇರುವ ಕಾರಣ ರಸ್ತೆ ಬಾಜು ಕಲ್ಲಿನ ಕಟ್ಟೆ ಮತ್ತು ಉಬ್ಬುಗಳನ್ನಾಗಲಿ ಇಲ್ಲವೇ ಕಬ್ಬಿಣದ ಕಂಬಗಳನ್ನಾಗಲಿ ನಿಲ್ಲಿಸಿ ಹಗಲಿರುಳು ತಿರುಗಾಡುವ ಗಾಡಿಗಳಿಗೂ, ಜನರಿಗೂ ಅಪಾಯ ಬಾರದ ಹಾಗೆ ಈ ಮುನಿಸಿಪಾಲಿಟಿಯ ಅಧಿಕಾರಿಗಳು ತೊಂದರೆ ತೆಗೆದುಕೊಳ್ಳಬೇಕಾಗಿ ಕೋರುತ್ತೇನೆ. ಅಲ್ಲದೆ ದಕನಿವೋಹಲ್ಲದ ಬೀದಿಯನ್ನು ಮತ್ತು ಇತರ ಕೆಲವು ಬೀದಿಗಳನ್ನು ಸಹ ವಾಗಮೂಲಿಗಳು ತಿಂಗಳಿಗೊಂದಾವರ್ತಿಯಾದರೂ ಗುಡಿಸುವುದಿಲ್ಲವಾಗಿ ನೆನಸಬೇಕಾಗಿದೆ. ಆ ರಸ್ತೆಗಳಲ್ಲಿ ಕಸವುಗಳು ಯಾವಾಗಲೂ ಇದ್ದೇ ಇರುತ್ತವೆ. ಅಲ್ಲಿಯ ನಿವಾಸಿಗಳು ಮುನಿಸಿಪಾಲಿಟಿಯವರಿಗೆ ಕಂದಾಯ ಕೊಡುವುದಿಲ್ಲವೋ? ಕೊಡುತ್ತಿದ್ದ ಪಕ್ಷ ಇತರ ರಸ್ತೆಗಳ ಹಾಗೆ ಆ ರಸ್ತೆಗಳೂ ಸಹ ನ್ಯಾಯವಾಗಿಯೇ ಇರುತ್ತಿತ್ತು. ಇನ್ನಾದರೂ ಇದಕ್ಕೆ ಸಮ್ಮಂಧಪಟ್ಟ ಮುನಿಸಿಪಾಲಿಟಿಯ ಅಧಿಕಾರಿಗಳು ತೊಂದರೆ ತೆಗೆದುಕೊಳ್ಳುವರಾಗಿ ನಂಬುತ್ತೇನೆ.

ಒಬ್ಬ ಪ್ರಯಾಣಿಕ

ಮಹನೀಯರೇ,

ನಮ್ಮ ದಾರಿ ಪಟ್ಟಿಕಾಡಿನ ಸೀಮೆ ಆದಿಯಾಗಿ ಗ್ರಾಮವು ಎರಡು ಪ್ರದೇಶವಾದೂ ಎಲ್ಲಾ ರೈತರು ಕೇವಲ ಗದ್ದೆಯಿಂದಲೇ ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ವ್ಯವಸಾಯವಲ್ಲದ ಬೇರೆ ಯಾವ ಉತ್ಪತ್ತಿಯೂ ಇರುವುದಿಲ್ಲ. ಹೀಗಿದ್ದರೂ ಸರಕಾರದವರಿಗೆ ಗರೀಬ ರೈತರ ಮೇಲೆ ಕರುಣೆ ಇಲ್ಲದಿರುವುದು ಆಶ್ಚರ್ಯವಲ್ಲವೇ? ಈ ಗ್ರಾಮದ ಸಮೀಪ ನಾಲ್ಕು ಮೈಲು ದೂರ ಮತ್ತು ಮಕ್ಕಳಿಲ್ಲದ ಹೊಸತು ಗ್ರಾಮದ ಪೂರ್ವ ಭಾಗದಲ್ಲಿ ನೀರು ಸರಬರಾಯಿ ಮಾಡುವುದರಿಂದ ನಾಲೆಗಳು ಕಳೆದ ಮೂರು ವರ್ಷದ ಮಳೆಯಲ್ಲಿ ಕಾವೇರಿ ನದಿಗೆ ಹೊರಟು ಹೋಗಿ ಅಲ್ಲಿಯೇ ಮುಳುಗುವುದಾಗಿದೆ. ಇದರಿಂದ ರೈತರಿಗೆ ಉಂಟಾಗಿರುವ ಕಷ್ಟವನ್ನು ವರ್ಣಿಸಲು ಹೊರಟರೆ ಸ್ಥಳ ಸಂಕೋಚವಾದು ಎಡಿಟರವರು ನನ್ನ ಓಲೆಯನ್ನು ಮೂಲೆಗೆ ಹಾಕುವರೆಂಬ ಭಯದಿಂದ ನಿಲ್ಲಿಸಬೇಕಾಗಿದೆ. ನದಿ ಕಡೆಗಳಲ್ಲಿ ಒಡ್ಡು ಕಟ್ಟಿಸಬೇಕೆಂದು ಒಂದೆರಡು ಅರ್ಜಿಗಳಿಗೆ ಲಕ್ಷ್ಯವಿಲ್ಲ. ಇದುವರೆಗೆ ಪ್ರತಿಸಲ ಎಡೆ ಕಡಿದು ಬಡ ರೈತರ ದುರ್ಭಾಗ್ಯವೇ ಸರಿ. ಹಾಲಿ ವರ್ಷ ನೀರಿನ ಉಂಟಾದ ಕಷ್ಟವನ್ನು ವರ್ಣಿಸಲು ಸಾಧ್ಯವಿಲ್ಲ. ಹಿಂದಿನ ವರ್ಷ ನೀರಿನ ತಾಪತ್ರಯದಿಂದ ಆಗಸ್ಟ್ ತಿಂಗಳಲ್ಲಿ ಮೊಳಕೆ, ಅಕ್ಟೋಬರ್ 15ರ ವರೆಗೆ ನಾಟಿ ಮಾಡುತ್ತಾರೆ. ಇದರಿಂದ ಗದ್ದೆಗಳಲ್ಲಿ ಎಷ್ಟು ಉತ್ಪತ್ತಿ ಸಿಕ್ಕೀತೆಂದು ವಾಚಕ ಮಹಾಶಯರಿಗೆ ತಿಳಿಯದ್ದಲ್ಲ. ಇಷ್ಟು ಕಷ್ಟದಿಂದ ನಾಟಿ ಮಾಡಿದರೂ

ಈಗ ಒಸಲಿನ ಕಾವಿನಿಂದ ಆಯಾ ಕೈರಿಲ್ಲ ಬಾಯಿಬಿಡುತ್ತಿರುವುದು ನೋಡಿದರೆ ಕಲ್ಲು ಎದೆಯಾದರೂ ಒಡೆಯದಿರದು. ಹಾಲಿವರ್ಷ ಜಿಂಕ್‌ಶೀಟ್ ಇಡಿಸಿ ನೀರು ಸರಬರಾಯಿ ಮಾಡಿಸಿಕೊಡಬೇಕಾಗಿ ಅರ್ಜಿ ಬರಕೊಂಡಿದ್ದಾಯಿತು. ಆದರೆ ಸರಕಾರದವರಿಗೆ ಇದು ವರೆಗೂ ಜಿಂಕ್‌ಶೀಟ್ ಸಿಕ್ಕದ್ದು ಆಶ್ಚರ್ಯವಲ್ಲವೇ? ಬಡ ರೈತರ ಗೋಳು ಹ್ಯಾಗೂ ಇರಲಿ ಸರಕಾರ ಕಂದಾಯ ಸಲೀಸಾಗಿ ವಸೂಲಾದರೆ ಸರಿ. ಇದಂತಿರಲಿ ಗರೀಬ ರೈತರ ಗೋಳು ಈ ತಾಲೋಕಿನ ಎರಡು ಜನ ಕೌನ್ಸಿಲ್ ಮೆಂಬರಗಳ ಘನವಾದ ಚಿತ್ತಕ್ಕೆ ಬಾರದೆ ಇರುವುದು ಇನ್ನೊಂದು ಆಶ್ಚರ್ಯ. ಯಾರಿಗೆ ಹ್ಯಾಗಾದರೇನು, ತನಗೆ ಓಟು ಸಿಕ್ಕಿದರೆ ಆಯಿತು. ಗ್ರಾಮಸ್ಥರು ನಮಗೆ ತಿಳಿಸಲಿಲ್ಲವೆಂದು ಇವರು ಸುಲಭದಲ್ಲಿ ಜಾರಬಹುದು. ತನಗೆ ಓಟುಕೊಡಿ ಬೇರೆಯವರಿಗೆ ಬೇಡವೆಂದು ಸಂದಿಗೊಂದಿಯಲ್ಲಿದ್ದ ಜನರನ್ನು ಹುಡುಕುತ್ತಿದ್ದ ಹಾಗೆ ಈಗ್ಯಾಕೆ ಜನರನ್ನು ಹುಡುಕಿ ಕಷ್ಟಸುಖವನ್ನು ತಿಳಿದುಕೊಳ್ಳಬಾರದಿತ್ತು. ಇಲ್ಲವೇ ವರ್ಷಕ್ಕೊಂದು ಮೀಟಿಂಗಾದರೂ ಮಾಡಿ ಜನರ ಹಾಲ್ ಹವಾಲನ್ನು ತಿಳಿದುಕೊಳ್ಳಬಾರದಿತ್ತು. ಚುನಾವಣೆಯ ಸಮಯದಲ್ಲಿ ಹಳ್ಳಿಯ ಕುರುಬರಿಗೂ ಸಹ ಕಾಗದ ಪತ್ರಗಳು ಹಾರಾಡುತ್ತಿದ್ದಂತೆ ಈಗ್ಯಾಕೆ ಇಲ್ಲ. ಚುನಾವಣೆಯ ಸಮಯದಲ್ಲಿ ನಿಮಗೆ ಅದು ಮಾಡಿಸಿಕೊಡುತ್ತೇವೆ, ಇದು ಮಾಡಿಸಿಕೊಡುತ್ತೇವೆಂದು ಬೋಧಿಸುತ್ತಿದ್ದ ಬೋಧನ ಎಲ್ಲಿ ಅಡಗಿಕೊಂಡಿತು? ಕೆಲವು ಮಹಾಶಯರು ಸೈನ್ ಮಾಡಿ ಇಂದವರಿಗೆ ಓಟು ಕೊಡಬೇಕೆಂದು ಹೊರಡಿಸಿದ ಪತ್ರಗಳಿಗೆ ಬೆಲೆಯೆಲ್ಲಿ? ಇನ್ನು ಮುಂದಾದರೂ ಇಂಥ ಸಹಿ ಮಾಡುವ ಪತ್ರಗಳಿಗೆ ಬಹಿಷ್ಕಾರ ಇದ್ದರೆ ಚೆನ್ನಾಗಿತ್ತು. ಬರುವ ಕೌನ್ಸಿಲ್ ಮತ್ತು ಡಿಸ್ಟ್ರಿಕ್ಟ್‌ಬೋರ್ಡು ಮೆಂಬರುಗಳ ಚುನಾವಣೆ ಸಮೀಪಿಸಿದ್ದರಿಂದ ಉಮೇದುವಾರರಾಗಿ ನಿಲ್ಲುವವರು ಬಹು ಜಾಗರೂಕರಾಗಿರಬಹುದು. ಇವರು ಮಾಡುವುದು ಕಳೆದ 3 ವರ್ಷದಿಂದ ಮಾಡಿದ್ದೇ ಹಾಲಿ ಇರುವ ಮೆಂಬರುಗಳು ನಾವು ಅದು ಮಾಡಿದ್ದೇವೆ, ಇದು ಮಾಡಿದ್ದೇವೆಂದು ಹೇಳಬಹುದು. ಹಾಗೆ ಹೇಳುವುದಕ್ಕಿಂತ ಯಾವ ಯಾವ ಠರಾವು ತಂದು ಪಾಸು ಮಾಡಿಸಿದ್ದಾರೆ, ಎಷ್ಟು ಮೀಟಿಂಗ್ ಮಾಡಿ ಜನರ ಅಭಿಪ್ರಾಯವನ್ನು ತೆಗೆದುಕೊಂಡಿದ್ದಾರೆ, ಯಾವ ಯಾವ ಗ್ರಾಮಗಳನ್ನು ಸುತ್ತಿ ಜನರ ಕಷ್ಟಸುಖವನ್ನು ವಿಚಾರಿಸಿದ್ದಾರೆ ವಗೈರೆಯನ್ನು ಈ ಪತ್ರಿಕೆ ಮೂಲಕ ಸರ್ವರಿಗೂ ದಯಮಾಡಿ ತಿಳಿಸಿದ್ದರೆ ದಯವಾಗುತ್ತಿತ್ತು. ಬರುವ ಚುನಾವಣೆಯಲ್ಲಿ ಜಾತಿಭೇದ, ಮತ್ಸರ ಮುಂತಾದ ಭೇದವನ್ನು ಇಟ್ಟುಕೊಳ್ಳದೆ ಗರೀಬರ ಕಷ್ಟಸುಖವನ್ನು ತಿಳಿದು ಉಪಕಾರ ಮಾಡುವ ಮಹನೀಯರಿಗೆ ಓಟು ಕೊಡಬೇಕಲ್ಲದೆ ಮೀಟಿಂಗ ಬೇರಾಗಿ ಮೀಟಿಂಗುಗಳಲ್ಲಿ ಕೌನ್ಸಿಲ್ ಹಾಲಿನಲ್ಲಿ ಭೂಷಣ ಪ್ರಾಪ್ತ ಪಡಿಸಿ ಕೊಡುವುದಾಗಿಯೂ ಹೇಳಿಕೊಳ್ಳುವವರಿಗೆ ಓಟು ಕೊಟ್ಟು ಒಟ್ಟಿನ ಘನತೆಯನ್ನು ಕಳೆದುಕೊಳ್ಳಲಿಕ್ಕಿಲ್ಲವಾಗಿ ನಂಬುತ್ತೇನೆ.

"ಓಟರು

ಸೀರಂ—ಗೀನ, ಎರಡು ಸಿದ್ಧಾಪುರಕ್ಕೆ ಮುಟ್ಟಿದೆ!

ಆದರ್ಶ್ಯ,

ನಮ್ಮ ದೇಶದಲ್ಲಿ ವೆಟರಿನರಿ ಇಲಾಖೆಯನ್ನು ಒಂದೇ ನವ ಪಕ್ಷಕ್ಕೆ ಇಟ್ಟದ್ದಲ್ಲದ ಬೇರೆ ಅಲ್ಲ. ಬೇರೆ ಯಾವುದಕ್ಕಾದರೂ ಇಟ್ಟಿದ್ದ ಪಕ್ಷ ಅದು ದೊಡ್ಡ ಮನುಷ್ಯರ ಕದರಿಗೆ, ನಾದಿನ್ನು ಜನ ಪತ್ರ ಇಲ್ಲವೇ ವರ್ಷಕ್ಕೆ ಬರುವ ವಾರ್ಷಿಕ ವರದಿ (Administration report) ಸರ್ಕಾರಿ ವರದಿಯನ್ನು ಕಳುಹಿಸುವುದಕ್ಕೆ ಮಾತ್ರ ಇರಾವದನ್ನು ಸರಿಯಾಗಿ ನಡೆಸುವ ಒಡ ಕೊಡಗು ಸರಕಾರಕ್ಕೆ ಎಗ್ರಿಕಲ್ಚರ್ ರಾಯಲ್ ಕಮಿಶನ್ನು ನಕಲಿ ಮಾಡುವಂತೆ ಎಗ್ರಿಕಲ್ಚರ್ ಕಮಿಟಿಯಿಂದ ಏನು? ಎಗ್ರಿಕಲ್ಚರ್ ರಾಯಲ್ ಕಮಿಶನ್ ಅಡಕವಾದ ಇಂಗ್ಲೆಂಡಿನಲ್ಲಿ ಇಂಡಿಯಾದ ವ್ಯವಸಾಯಕ್ಕೆ ಬೇಕು, ಬೇರೆದು ಹೊಸ ಯಂತ್ರಗಳ ಮಾರ್ಕೆಟ್ ಒಂದನ್ನು ಸ್ಥಾಪನೆ ಮಾಡಲಿಕ್ಕೆಂದು ಶ್ರೀಯುತ ಸಿ. ರಾಜಗೋಪಾಲಾಚಾರ್ಯರು ಕಾರ್ಟೂನ್ ಆದದ್ದಕ್ಕೆ ಸರಿಯಾಗಿ ನಮ್ಮ ದೇಶದ ಎಗ್ರಿಕಲ್ಚರ್ ಭಾವಿ ಇಲಾಖೆಯು ನಡೆಯುವುದರಲ್ಲಿ ಸಂ

ಶಯವಿಲ್ಲ. ವ್ಯವಸಾಯದ ಮೂಲವಾದ ಪಶುಗಳನ್ನು ಕಾಪಾಡುವದಕ್ಕೆ ತಕ್ಕಂತೆ ವೆಟರಿನರಿ ಇಲಾಖೆಯನ್ನು ಕೊಡಗು ಸರಕಾರಕ್ಕೆ ವ್ಯವಸ್ಥೆ ಇಲ್ಲ! ಇಂಥಾ ಗೇ... ಮೇವಿಗೆ ಅನುಕೂಲಿಸುವಂತೆ ಬಾಣೆಯ ಲಾತರ್ಾ... ಯಿಸಲು ಒಡಪೈತರಿಗೆ ತಕ್ಕಂತೆ ಸಹಾಯ ಮಾಡಲು ... ಲ್ಲ" ಮಲೆನಾಡಾದ ಈ ಜಿಲ್ಲೆಯ ವ್ಯವಸಾಯಗಾರರ ... ದ ರೈತರ ಜ್ವರಭಾಧೆಯನ್ನು ತಪ್ಪಿಸುವಂತೆ ಇನಾಮಿಯಾ... ಯನಾಸರಬರಾಯಿ (Free supply of quinine) ... ಸಿ ಕೊಡಬೇಕಾಗಿ ನಮ್ಮ ಕೌನ್ಸಿಲಿನಲ್ಲಿ ಠರಾವು ತಂದರೆ ... ರಕಾರಕ್ಕೆ ಮನಸ್ಸಿಲ್ಲ. ಅಂಥಾ ಠರಾವನ್ನು ಒಬ್ಬ ... ನ. ತಂದರೂ ಮಂಜೂರು ಮಾಡಲಿಕ್ಕೆ ಬಿಡದೆ ಸಹ ಗ... ಧಿಸಿದ ನಮ್ಮ ಕೌನ್ಸಿಲ್ ಮೆಂಬರಗಳೂ ಇದ್ದಾರೆ. ... ವಿರೋಧಿಸಿದ ಮಹನೀಯ ಮೆಂಬರಗಳ ಹೆಸರನ್ನು ... ಪ್ರಕಟಿಸಬೇಕಾಗುತ್ತದೆ (ಪ್ರಿಯ ಎಡಿಟರವರೇ ಇದನ್ನು ... ಯಬೇಕೆಂದು ಪ್ರಾರ್ಥಿಸುತ್ತೇನೆ) ಇವರ ಹೆಸರನ್ನಾದರೂ ... ರುಗಳು ಗುರ್ತಿಸಿಕೊಳ್ಳಲಿ. ಗೋವುಗಳನ್ನು ಕಾಪಾಡಲು ಸರಕಾರಕ್ಕೆ ಮನಸ್ಸಿಲ್ಲ. ಗೋವುಗಳಿಂದ ವ್ಯವಸಾಯ ... ನಲು ಜನರ ಆರೋಗ್ಯವನ್ನು ಕಾಪಾಡುವದಕ್ಕೂ ಮನ... ಕವಿ. ಅಂದ ಮೇಲೆ ವ್ಯವಸಾಯ ಕಮಿಟಿಯಿಂದ ... ನೂರಾರು ಪ್ರಶ್ನೆಗಳಿಂದ ಕೂಡಿದ ಪಟ್ಟಿ ಪತ್ರಿಕೆಗಳೇ? ತಲ್ಲೀ ... ಗುವ ಸಂಗತಿಗಳಿದ್ದ ಮೇಲೆ ಉಂಡ ... ಈ ಕಮಿಟಿಯು ಓದಾಡುವದೇತಕ್ಕೆ? ಈಗ್ಯ ಆಡಳಿ... ತದಿಯನ್ನು ತೋರಿಸಿ ಜನರಿಗೆ 'ಹಾವಿಲ್ಲ" ಎಂಬ... ದೇ ಮಾತಿನಲ್ಲಿ ತೀರಿಸಿ ಈಗಿನ ವೆಟರಿನರಿ ಆಸ್ಪತ್ರೆಗಳಂತೆ ... ನಂಬದ ಕೆಲವು (experimental plots) ಮಾದರಿ ತೋ... ಳಲ್ಲಿ ಅಂತ್ಯವಾಗುವದರಲ್ಲಿ ಸಂಶಯವಿಲ್ಲ. ಒಹೋ, ... ಕ ಉಪಾದಿ ಬರಬಹುತ್ತಾ ಬಂದ ಹಾಗೆ ಎಲ್ಲಿಗೋ ಮಟ್ಟ ... ಆಗಿ, ನಮ್ಮ ದಕ್ಷಿಣ ಕೊಡಗಿನಲ್ಲಿ ಈ ವರ್ಷ ದನಗಳ ... ಗವು ಕಾಣಿದಷ್ಟು 8—10 ವರ್ಷಗಳಿಂದ ಈಚೆಗೆ ಇಲ್ಲ ... ಕ್ಕೆ ಪರಿಹಾರವಾಗಿ ನಾಪೋಕ್ಲಿನಿಂದ ಹುದಿಕೇರಿವರೆಗೆ ... ದಿಕ್ಕಿನ ವೆಟರಿನರಿ ಆಸ್ಪತ್ರೆ ಬಂದ ಅಮ್ಮತ್ತಿಯಲ್ಲಿದೆ. ... ವರಲ್ಲಿಗೆ ಹೋದರೆ ಸೀರಂ ಇಲ್ಲ, ಸೀರಂ ಇದ್ದರೆ ದಾಕ್ಟರು ಇಲ್ಲ. ಇವರನ್ನು ನಂಬಿ ನಮ್ಮ ದನದ ಹೇ... ದ್ದಗಳನ್ನು ಮರತೆವು. ಹೀಗಾಗಿ ತಿಂಗಳಿಗೆ ನೂರಾರು ... ಸಗಳು ಸಾಯುತ್ತಿವೆ. ಸೀರಂ ಇಲ್ಲ—ಸೀರಂ ಇಲ್ಲ, ... ಈಗ್ಯ 2 ತಿಂಗಳಿಂದ ಅನ್ನುತ್ತಿದ್ದು ಈಗ್ಯ ಸೀರಂ ಬಂದಿ... ದು. ಆದರೆ ನನಗೆ ಸಂತೋಷವಾಯಿತು. ಆದರೆ ... ಮಾದರಿ, 2 ಕುಪ್ಪಿ ಮಾತ್ರ ಬಂದಿದೆ, ಸಿದ್ದಾಪುರದಲ್ಲಿ ಇದ... ಅದು 6 ದನಗಳಿಗೆ ಮಾತ್ರ ಆಗುತ್ತೆ. ನಿಮಗಿಂತ ... ಬು ಎಷ್ಟೋ ಜನರು ಕೇಳಿಕೊಂಡಿರುವರು, ಯಾರಿಗೆ ಕೊಡು... ಆದರು. ನನಗೆ ವಿಸ್ಮಯವಾಯಿತು. ಮಾತಾಡಲಿಲ್ಲ. ... ರೂದನೆ ಮಾತಾಡಲಿ? ಹೀಗೆ ಜನರಿಗೆ ತಕ್ಕ ಪ್ರಯೋಜನ ದೊರೆಯದೆ 2 ತಿಂಗಳಿಗೆ 2 ಕುಪ್ಪಿ ಸೀರಂ ನಷ್ಟ ಆಗುವ ವೆಟರಿನರಿ ಆಸ್ಪತ್ರೆಯೇಕೆ? ಇದನ್ನು ತಕ್ಕಂತೆ ಇಡಲು ಆಗದಿದ್ದರೆ ಮುಚ್ಚುವದು ಉತ್ತಮವಲ್ಲವೇ? ಆ ಒಡ ವೆಟರಿನರಿ ದ್ಯಾಕ್ಟರುಗಳನ್ನು ಮದ್ರಾಸು ಪ್ರಾಂತ್ಯಕ್ಕಾದರೂ ಕಳುಹಿಸುವದು ಉತ್ತಮವಲ್ಲವೇ? ಹಸುಗಳ ಮಾತ್ರ ಕೊಡಗಿನ ಎಲ್ಲೆ ... ಇದು ಎಲ್ಲಿಯೂ ಇಲ್ಲದಂತೆ ಇಟ್ಟಿರುವದರ ಪ್ರಯೋಜನ? ದನಗಳ ರೋಗಕ್ಕೆ ತಕ್ಕ ಔಷಧಿಯನ್ನು ಒದಗಿಸಲು ಆಗದಿದ್ದರೆ ಜನರ ಸಾಧಾರಣ ಕಾಯಿಲೆಗಳಿಗೆ ದರೂ ಔಷಧ—ಉಪಾಯಂತೆ ತಕ್ಕ ಏರ್ಪಾಡುಗಳನ್ನು ಮಾಡಿ ಈಗಿನ ವೆಟರಿನರಿ ದ್ಯಾಕ್ಟರುಗಳಿಗೆ ಅವರಿಗೆ ತಕ್ಕ ಶಿಕ್ಷಣವನ್ನು ಕೊಟ್ಟರೆ ಅವರಿಂದ ಮನುಷ್ಯರಿಗಾದರೂ ಕೆಲವು ಮಟ್ಟಿಗೆ ಪ್ರಯೋಜನವಾಗಲಿಕ್ಕಿಲ್ಲವೇ? ಮೇ ಆ ಸಜ್ಜನರುಗಳಿಗೆ ಕೈ ತುಂಬ ಕೆಲಸವಾಗುತ್ತಿತ್ತಲ್ಲವೇ? ಈ ಇಲಾಖೆ ಮೇಲಾಧಿಕಾರಿಗಳೂ, ಕಮಿಶನರ್ ಸಾಹೇಬರವರೂ ಈ ವಿಷಯಕ್ಕೆ ಗಮನ ಕೊಡದಿದ್ದರೆ ಬಡ ರೈತರ ಹಣವನ್ನು ಬಂದುಗಾರಿಕೆ ಮಾಡಿದಂತೆ ಆಗುವದು.

ರೈತ.

ಪ್ರಕಟಣೆ.

ಶ್ರೀಮಂಗಲನಾಡು ಡಿಸ್ಟ್ರಿಕ್ಟ್‌ಬೋರ್ಡು ಓಟರುಗಳಲ್ಲಿ ಚೆಪ್ಪುಡಿರ ಅಪ್ಪಯ್ಯನವರ ಮಗ ಪೊನ್ನಪ್ಪನ ವಿನಂತಿ.

ಮಹಾಶಯರೇ,

ನಮ್ಮ ಈ ನಾಡಿನ ಪರವಾಗಿ ಆರಿಸಲ್ಪಡಬೇಕಾದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುತನಕ್ಕೆ ನಾನು ಒಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ. ಈ ಮೊದಲೇ ಕೆಲವು ವರ್ಷಗಳಿಂದ ಜವಾಬ ದಾರರ ಸಂಘದಲ್ಲಿ ನಾನು ನಮ್ಮ ನಾಡಿನವರ ಪರವಾಗಿ ಮಾಡಿರುವ ಸೇವೆ ತಮಗೆಲ್ಲರಿಗೂ ತಿಳಿಯದಲ್ಲ. ನಮ್ಮ ನಾಡಿನ ಪರವಾಗಿ ತಮ್ಮ ದಾಸನಾಗಿ ಸೇವೆ ಕೈಕೊಳ್ಳಲು ಉದ್ಯುಕ್ತನಾಗಿ ಈಗ ಬಂದು ನಿಂತಿರುತ್ತೇನೆ. ತಾ 20—12—'26ರಲ್ಲಿ ನಡೆಯಲಿರುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ ತಮ್ಮ ಓಟನ್ನು ನನ್ನ ಪರವಾಗಿ ಕೊಟ್ಟು ನಿಮಗಳ ದಯೆಯಿಂದ ಸೇವಿಸುವುದಕ್ಕೆ ಅವಕಾಶ ಮಾಡಿ ಕೊಡುವರಾಗಿ ಕೋರುತ್ತೇನೆ.

ಪೊನ್ನಂಪೇಟೆ, ನಿಮ್ಮ ಸೇವಕ,
11—10—26. ಚೆಪ್ಪುಡಿರ ಪೊನ್ನಪ್ಪ.

ಪ್ರಕಟಣೆ.

ಶ್ರೀಮಂಗಲನಾಡು ಓಟರುಗಳಲ್ಲಿ ಅಜ್ಜಮಾಡ ಮಾದಪ್ಪನ ವಿಜ್ಞಾಪನೆಗಳು.

ನಮ್ಮ ಈ ನಾಡಿನ ಸಕಲ ಮಹಾಶಯರು ತಾರೀಕು 18—10—26 ರಲ್ಲಿ ಹುದಿಕೇರಿಯಲ್ಲಿ ಸೇರಿ ಮಾಡಿದ ಮೀಟಿಂಗಿನಲ್ಲಿ ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ನನ್ನನ್ನು ಪ್ರತಿನಿಧಿಯಾಗಿ ಕಳುಹಿಸಬೇಕೆಂದೂ, ಆ ಪ್ರಕಾರ ನಾನು ಉಮೇದುವಾರನಾಗಿ ನಿಲ್ಲಬೇಕೆಂದೂ ತೀರ್ಮಾನಿಸಿದ ಮೇರೆಗೆ ನಾನು ಉಮೇದುವಾರನಾಗಿ ನಿಲ್ಲಲು ನಿಶ್ಚಯಿಸಿದ್ದೇನೆ. ಈ ನಾಡು ಮತ್ತು ಇಡೀ ದೇಶದ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಕೆಲಸ ಮಾಡಲು ನಾನು ತಯಾರಾಗಿರುವುದರಿಂದ ತಾ 20—12—'26ರಲ್ಲಿ ನಡೆಯುವ ಚುನಾವಣೆಯಲ್ಲಿ ನಿಮ್ಮೆಲ್ಲರ ಓಟು ಕೊಟ್ಟು ನಿಮ್ಮೆಲ್ಲರ ಸೇವೆ ಮಾಡಲು ಎಡೆ ಕೊಡುವರಾಗಿ ಕೋರುತ್ತೇನೆ.

ಕುಟ್ಟ, ತಮ್ಮ ವಿಧೇಯ,
ತಾ 1—11—26. ಅಜ್ಜಮಾಡ ಮಾದಪ್ಪ.

ಪ್ರಕಟಣೆ.

ಕಿಗ್ಗಟ್ಟುನಾಡು ತಾಲೋಕು ಕೊಡವರಲ್ಲಿ ಮಾಚಿಮಾಡ ಮಾಚೈಯ್ಯನ ವಿನಂತಿ.

ಬರುವ ಜನವರಿ ಯಾ ಪಬ್ರವರಿ ತಿಂಗಳಲ್ಲಿ ಚುನಾವಣೆಯಾಗತಕ್ಕ ಕೌನ್ಸಿಲ್ ಮೆಂಬರುತನಕ್ಕೆ ನಾನು ಕಿಗ್ಗಟ್ಟುನಾಡಿನ ಪರವಾಗಿ ಒಬ್ಬ ಉಮೇದ್ವಾರನಾಗಿರುತ್ತೇನೆ. ನಾನು ಸರಿ ಮೆಂಬರುತನದ ಕೆಲಸಗಳನ್ನು ನಡಿಸಲು ಅರ್ಹನಾಗಿದ್ದೇನೆಂಬುದು ನಿಮಗೆ ವಿವರವಾಗಿ ಹೇಳುವುದು ಬೇಕಿಲ್ಲವಾಗಿ ನಂಬುತ್ತೇನೆ. ಹೇಗೂ ಎಲ್ಲಾ ಹಿಂದಿನ ಸರಕಾರದ ಆಡಳಿತದಲ್ಲಿ ಹೆಚ್ಚಾಗಿ ದೇಶದವರ ಅಭಿವೃದ್ಧಿ ಬಗ್ಗೆ ಏರ್ಪಾಡುಗಳನ್ನು ಜಾರಿಗೆ ತರುವುದರಲ್ಲಿ ತಕ್ಕ ಸಲಹೆಗಳನ್ನು ಆಲೋಚನೆ ಪೂರ್ವಕದಿಂದ ಹೇಳಿ ಉಚಿತ ನಡಿಯುವಂತೆ ಪ್ರಯತ್ನ ಮಾಡಬೇಕೆಂಬುದೇ ನನ್ನ ಮುಖ್ಯ ಉದ್ದೇಶವಾಗಿದೆ. ನೀವುಗಳೆಲ್ಲರೂ ಆಲೋಚಿಸಿ ಕಿಗ್ಗಟ್ಟುನಾಡು ಪರವಾಗಿ ನಾನು ಮುಂಬರಾಗಿರಲು ನನಗೆ ನಿಮ್ಮ ಅಮೂಲ್ಯ ಓಟುಗಳ ಪೈಕಿ ಒಂದು ಓಟು ಕೊಡುವರಾಗಿ ಕೇಳಿಕೊಂಡಿರುತ್ತೇನೆ.

ತಾ 1—11—26. ಮಾ. ಮಾಚೈಯ್ಯ.

EMPIRE OF INDIA LIFE ASSURANCE CO. LTD.
(Established 1897.)
ALL WITH PROFIT POLICIES
Issued before 28th February, 1927
will share in the BONUS Distribution
for the five years ending on that date.
PROSPECTUS ON APPLICATION
Bangalore Branch. Madras Branch.
52 Commercial Street 9 & 10 Second Line Beach
C K Chengappa.
Special Agent. Riverside Estate.
24–15 Siddapur.

ಕರ್ಣಾಟಕ

ಎಗ್ಸ್ಯ ವಿಕ್ಷರಿಂ

ಚಳಿಜ್ವರ, ಮಲೇರಿಯ ಜ್ವರ ಇನ್‌ಫ್ಲುಯೆಂಜ ಜಹವಿ ರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲೊಂದಕ್ಕೆ ರು. ೦-೧೪-೦
ಟಪ್ಪಾಲು ಚಾರ್ಜು ಬೇರೆ

ಇಂಡೋ ಬಾಮ್.

ಸಂಧಿವಾತ, ತಲೆಶೂಲೆ, ನೊಂಟನೋವು ಉಳುಕು, ಗುಳುಕಡಿತ ಮೊದಲಾದವುಗಳ ಮೇಲೆ ಪಜ್ಞತಕ್ಷ ದಿವ್ಯವಾದ ಔಷಧ! ಬೆಲೆ. ೧೦ ಅಣೆ. ಟಪ್ಪಾಲು ಪಜ್ಞ ಬೇರೆ

12–11 ಕರ್ಣಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನೌಕರಿ ಖರಾರು ಫಾರಮುಗಳು.

1926ನೇ ಇಸವಿ ಕೊಡಗಿನ ಕಾಫಿ ತೋಟದ, ಹೊರತ ಕ್ಟ್ 1ರ ಮೇರೆ, ಅನುಭವಸ್ತರ ಯುರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿದ ನೌಕರಿ ಖರಾರು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡು ಕೊಳ್ಳಬಹುದು

ತಾ 24–6–'26 ಮ್ಯಾನೇಜರ್,
ಮಡಿಕೇರಿ "ಕೊಡಗು" ಆಫೀಸು.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜಂಟರು ಮ. ಬಾಗಂಡ ಕುಟ್ಟಪ್ಪನವರ ಒಪ್ಪಾಯಿಸಲಾಗಿರುವ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಜಾಗದಲ್ಲಿ ಪಾವತಿ ಮಾಡಬೇಕಾಗಿ ಕೋರಿದೆ.

ಏಜಂಟರುಗಳು.

ವೀರಾಜಪೇಟೆ—ಖಾದಿ ಭಂಡಾರದಲ್ಲಿ ಮ. ಐಚೆಟ್ಟಿರ ಅಪ್ಪಯ್ಯನವರು.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ, ಮ. ಪಡಿಯಂಡ ನೇಪ್ಯಯ್ಯನವರು.
ನಾಪೋಕ್ಲು—ಮ. ಅಪ್ಪಯಂಡ ಸುಬ್ಬಯ್ಯನವರು.
ಮ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮ. ಚಪ್ಪಂಡ ಮಾದಪ್ಪನವರು.
ಹುದಿಕೇರಿ—ಮ. ಜಿ ಪೂವಪ್ಪಯ್ಯನವರು.
ಅಮ್ಮತ್ತಿ ಸಿದ್ದಾಪುರ—ಮ. ಐನಂಡ ಮಾದಪ್ಪನವರು.
ಮತ್ತು ವೀರಾಜಪೇಟೆ—ಮ. ಕಲಿಯಂಡ ಸೋಮಯ್ಯನವರು.
ಮಡಿಕೇರಿ-ಸುಂಟಿಕೊಪ್ಪನಾಡು—ಮ. ಬಿಲ್ಲರಂಡ ಅಪ್ಪಯ್ಯನವರು.
ಪೊನ್ನಂಪೇಟೆನಾಡು—ಮ. ಪಿ. ಜಿ ಮುದ್ದಯ್ಯಯ್ಯನವರು.
ಶ್ರೀಮಂಗಲನಾಡು—ಮ. ಇಟ್ಟಿರ ಬಾಗಪ್ಪನವರು.

ಅಲ್ಲದೆ ಈ ಸಮ್ಮಂಧ ಮ. ಬಾಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಕೊಡಲು ಕೊಡಬೇಕಾಗಿ ಕೋರಿದೆ.

ಮ್ಯಾನೇಜರ್,
"ಕೊಡಗು" ಲಿಮಿಟೆಡ್.

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required!! **No License Required**



Webley and Scott Air Pistol, cal ·177 or 22, bore Powerful and Accurate. complete with a sample box of slugs, two spare washers, a brush forcleaning, and a bookletof instructions Rs. 30/– Free delivery.

Pwerful German Diana Air gun. Handsome and Accurate, takes B. S. A. Patern No 1 Slugs and Darts. expressly recommendable for Target Practice Rs ·15/ Free delivery

Brilliant Search Light Lamp for Night Sports Rs 30/–. Free delivery.

No License required to purchase or to possess the above Items.

Reliable D B B L 12 bore guns	Rs. 60/– and upwards		
Do S. B B L. 12	do	do. 40/–	do
D B. M L Guns		„ 43/-	do
S B M L. do.		„ 30/–	do.
S B. B L Rifles		„ 25/–	do.
B L Revolvers and Pistols		„ 30/–	do.

Arms, Ammunition and shooting requisitesof almost every kind andquality offered at exceptionally favourable rates ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS
Largest Importers of Firearms and Ammunition
Cheapest priced firm in India,

24 15 210 Abdul RemanStreet, BOMBAY.

ಅಮೇರಿಕನ್ ಎಲಕ್ಟ್ರಿಕ್ ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.



ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಇವನ್ನು ಉರಿಸಲಿಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಬೇಕಿಲ್ಲ. ಇದರ ಮಧ್ಯದಲ್ಲಿರುವ ಗುಂಡಿಯನ್ನು ಅದುಮಿದರೆ ತನ್ನಷ್ಟಕ್ಕೆ ತಾನೇ ಉರಿಯುವದು. ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ ಮುಂತಾದ ಪಟ್ಟಣಗಳಲ್ಲಿ ಇತರ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು. ಬೇಕಾದಾಗ ಉಪಯೋಗಿಸಿ ಇಟ್ಟುಕೊಳ್ಳಬಹುದು ರಾತ್ರಿಯಲ್ಲಿ ಸಂಚರಿಸುವವರಿಗೂ ಮತ್ತು ಇತರರಿಗೂ ಬಹು ಪ್ರಯೋಜನವಾದವು. ಕ್ರಯ ಬ್ಯಾಟರಿ ಸಹಿತ 1ಕ್ಕೆ ರೂ. 3–0–0.

ವಿಳಾಸ.—ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,
52–45 ಪೋಸ್ಟ್ ಬಾಕ್ಸ್ P B. No. 1233, ಮದರಾಸು.

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.
ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ನಷ್ಟೇಂದ್ರಿಯವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ. ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟಿನ ಮೂಲಕ ಅದನ್ನು ಪಡೆಯಬಹುದು. ೧೫ ದಿನಗಳ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರೆಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಉಪಯೋಗಿಸಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ. ೩–೦–೦ ಛಾಂಗಿ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦–೬–೦ ಆಣೆ. ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತಾರೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡವಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಬ್ರಾಂಚ್ ಆಫೀಸ್, } ಡಿ. ಮನ್ನಾಲಾಲ್, ಡಿಲ್ಲಿ ನೇಟಿವ್ ವೈದ್ಯರು,
ಮಿಸ್ತ್ರಿ ಬೆಂಗಳೂರು ಸಿಟಿ, } ಸಾಲಂಮಿಸ್ರಿ ಮುರಬ್ಬ ಡಿಪೋ,
ಬೆಂಗಳೂರು ಸಿಟಿ.

12—4

ಸ್ಪಿರಿಟ್ ಸ್ಟೋವ್ ಎಂಬ ಅಡಿಗೆ ಮಾಡುವ ಒಲೆ.

ಇವುಗಳನ್ನು ಪ್ರಿಟಿಷ್‌ನವರು ಹೊಸದಾದ ಮಿತ್ರಾಳಿಯಿಂದ ಮಾಡಿರುವರು. ಇದರಲ್ಲಿ ಒಬ್ಬರ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು. ಬೆರಣಿ, ಸೌದೆ ಮುಂತಾದವುಗಳು ಹಾಕಿ ಒಲೆಯನ್ನು ಉರಿಸುವದರಿಂದ ಹೊಗೆ ತುಂಬಿ ಕಣ್ಣುಗಳು ಕೆಟ್ಟುಹೋಗುವವು. ಆದರೆ ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಪಂಪುಮಾಡಿದರೆ ಸಾಕು. ಇದರಲ್ಲಿ ಎಷ್ಟು ಮಂದಿಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. ಕ್ರಯ 1ಕ್ಕೆ ರೂ. 3–0–0.

52–45 ವಿಳಾಸ:—ಸಿಟಿ ವಾಚ್ ಕಂಪೆನಿ, 16 ತಿರುಪಳ್ಳಿ ಬೀದಿ, ಮದರಾಸು.

ಕಿರ್ಲೋಸ್ಕರ

ಉಕ್ಕಿನ ತಗಡಿನ ಕುರ್ಚಿಗಳು.

(ಪೇಟಂಟ್)

ಇವುಗಳ ಮುಖ್ಯ ಗುಣವೇನೆಂದರೆ —

(೧) ಬೆಲೆಯಲ್ಲಿ ಅಗ್ಗ

(೨) ಕೂಡುವದಕ್ಕೆ ಆರಾಮು

(೩) ತಾಳಿಕೆಯಲ್ಲಿ ಗಟ್ಟಿ

(೪) ತಗಡುಗಳು ಸೇರುವದಿಲ್ಲ

(೫) ಎತ್ತಾಡಲಿಕ್ಕೆ ಬರುವಷ್ಟು ಹಗುರ

ಇತ್ಯಾದಿ.

ಸದ್ಯಕ್ಕೆ ಪೇಟೆಯಲ್ಲಿರುವ ಯಾವದೇ ಕುರ್ಚಿಯ ನಮೂನೆಯಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ಸವಿಸ್ತರ ಸಂಗತಿಯ ಬಗ್ಗೆ ಬರೆದು ತಿಳಿದುಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—7 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಗೂಬಂದ ಠೇವಣಾತಿ	—	1,08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರ ಸಂಘಗಳಿಗೇ ಪ್ರತ್ಯೇಕವಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಅದರ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಕೆಳಿನ ಸಾಲಿಯಾನ ರೂ 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ ಕಡಿಮೆ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊ ಆಪರೇಟಿವ್ ರಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರಸಿಡೆಂಟರು	ಟ್ರೆಜರರ್.
ಕೊಡಂದೆರ ಕುಟ್ಟಪ್ಪಯ್ಯನವರು,	ಸಿ. ದೇವೈಯ್ಯನವರು
ರಾಯ್ ಬಹದ್ದೂರ್	ರಾವ್ ಸಾಹೇಬ್

ಸೆಕ್ರೆಟರಿ

ಸಿ. ಯನ್ ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1926

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವನವನ್ನು ಏತಕ್ಕಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಐವತ್ತುಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ್ದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ ಕಡಿಮೆಯಲ್ಲಿದೆ ಅಧಿಕ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮಾ ಕಂಪೆನಿಯ ರೂಲ್ಸಿಗೂ, ಕರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ

ಖಾದಿಬಟ್ಟೆ ಎಂಪೋರಿಯಂ

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚೆಕ್ಕಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯ ಬೇಡಿರಿ.

ವೀರಾಜಪೇಟೆ,	ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು	ಪ್ರೊಪ್ರೈಟರ್,
	ಖಾದಿಭಂಡಾರ

52—33

ಇಂಗ್ಲಿಷ್ ಹೇರ್ ಡಿಸ್ಪ್ಯಾಯರ್ ಸೋಪ್.

ಈ ಸೋಪು ವಿಲಾಯತಿಯಲ್ಲಿ ತಯಾರಾದದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲು ತೆಗೆಯಬೇಕಾದರೆ, ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯು ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಕೂದಲು ಬಾರದೇ ಒಂದು ನಿಮಿಷದಲ್ಲಿ ತೆಗೆದ ಬಿಡುತ್ತದೆ

ಕ್ರಯ ೩ ಸಾಬೂನುಗಳ ಪೆಟ್ಟಿಗೆ 1ಕ್ಕೆ 1—4—0

ವಿಳಾಸ — ಮಗ್ನೋಲಿಯಾ ಏಜನ್ಸಿ, ಪೋಸ್ಟ್ ಬಾಕ್ಸ್ ನಂ 232, ಮದರಾಸ್.

52—46

ಪ್ರೂಣಿಕ್

ಸ್ವದೇಶಿಯ ಹಿತ್ತಾಳೆ ಕಂದೀಲು (ಲಾಂದರು).



ಇಡೀ ಕಂದೀಲ (ಲಾಂದರ) ವನ್ನು ನಮ್ಮ ಸ್ವಂತ ಕಾರ್ಖಾನೆಯಲ್ಲಿ ನಾವೇ ಸಿದ್ಧಪಡಿಸುವೆವು. ಬೆಳಕಿನಲ್ಲಿಯೂ, ಬಾಳಿಕೆಯಲ್ಲಿಯೂ, ಯಾವುದೇ ಪರದೇಶಿಯ ಕಂದೀಲಿಗಿಂತ ಮೇಲಾಗಿರುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ನಾವಿನ್ನು ಪರದೇಶದ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಬಾರದು.

ತ್ವರೆ ಮಾಡಿ ಕೇಳಿಕೊಳ್ಳಿರಿ. ನಿಮ್ಮ ಊರಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ಅಡ್ರೆಸಿಗೆ ಬರೆದುಕೊಳ್ಳಿ —

1 ಸ ಎನ್ ನಾರಾಯಣರಾವು ಅಂಡ್ ಬ್ರದರ್ಸ್,

ಜನರಲ್ ಮರ್ಚೆಂಟ್ಸ್, ಚಿತ್ರದುರ್ಗ,

ಅಥವಾ

ಕಾರ್ಖಾನೆದಾರರು —

'ಓಗಲೆ ಗ್ಲಾಸ ವರ್ಕ್ಸ' ಲಿಮಿಟೆಡ್, ಓಗಲೆವಾಡಿ ನಂ. (ಔಂಧ) ಜಿ. ಸಾತಾರಾ.

52—6.

ನೈಟ್ರೇಟ್ ಆಫ್ ಸೋಡಾ

ಎಲ್ಲಾ ಬೆಳೆಗಳಿಗೂ ಅತ್ಯುತ್ತಮವಾದ ಗೊಬ್ಬರ

Nitrate of Soda 15-16 per cent. N

ಈ ಗೊಬ್ಬರದಲ್ಲಿ ಬೆಳೆಗಳಿಗೆ ಅತ್ಯಗತ್ಯವಾದ ನೈಟ್ರೋಜನ ಸಸ್ಯಾಹಾರವು

15 16% ಅಂದರೆ ಏನು ವ ಒಳ್ಳೆಯ ಹಿಂಡಿ ಗೊಬ್ಬರದಲ್ಲಿರುವುದಕ್ಕಿಂತಲೂ ವ ಊರು ಪಾಲಷ್ಟು ಜಾಸ್ತಿಯಾಗಿರುವದು ಇದರಲ್ಲಿ ಸಿಕ್ಕುವಷ್ಟು ಸಾರಜನಕ (Nitrogen) ವು ಬೇರೆ ಯಾವ ಗೊಬ್ಬರಗಳಿಂದಲೂ ಸಿಗಲಾರದು ಆದ್ದರಿಂದಲೇ ಭೂಲೋಕದ ಎಲ್ಲಾ ಜಾಗಗಳಲ್ಲಿಯೂ ರೈತರು ಇದನ್ನು ವಿಶೇಷವಾಗಿ ಉಪಯೋಗಿಸುತ್ತಾರೆ

ಬತ್ತ, ಕಬ್ಬು, ತೆಂಗು, ಅಡಿಕೆ, ಹೊಗೆಸೊಪ್ಪು, ತರಕಾರಿ ಮೊದಲಾದವುಗಳಿಗೂ ಕಾಫಿ, ಟೀ, ರಬ್ಬರು, ಏಲಕ್ಕಿ ಮೊದಲಾದ ತೋಟ ಪೈರುಗಳಿಗೂ ಎಷ್ಟೇ ಹುಡಿ ಅಥವಾ ಏನು ಗೊಬ್ಬರ ವಗೈರ ಊರ ಗೊಬ್ಬರಗಳ ಜೊತೆಯಲ್ಲಿ ಈ ಗೊಬ್ಬರವನ್ನು ಉಪಯೋಗಿಸುವದರಿಂದ ಬೆಳೆಯು ಸಮೃದ್ಧಿಯಾಗುವದು ನೈಟ್ರೇಟ್ ಆಫ್ ಸೋಡಾದಲ್ಲಿರತಕ್ಕ ಸೋಡವು ಮಣ್ಣಿನಲ್ಲಿರುವ ಪೊಟಾಷ್ ಎಂಬ ಇನ್ನೊಂದು ತರದ ಸಸ್ಯಾಹಾರವನ್ನು ಗಿಡಗಳಿಗೆ ಒದಗಿಸಿ ಕೊಡುತ್ತದೆ

ಈ ಗೊಬ್ಬರವು ನೋಟಕ್ಕೆ ಒರೇ ಉಪ್ಪಿನ ಹಾಗಿದ್ದು ಅಪಾಯಕರವಲ್ಲ ಎಕರೆ ಒಂದಕ್ಕೆ 100 200 ರಾತ್ತಲ ಸಾಕಾಗವದು ಹೆಚ್ಚಿನ ಮಾಹಿತಿ ಮತ್ತು "ಕೃಷಿಸುಧಾರ ಎಂಬ ಪುಸ್ತಕವನ್ನು ಈ ಕೆಳಗಿನ ವಿಳಾಸದಾರರಿಂದ ಧರ್ಮಾರ್ಥವಾಗಿ ಪಡೆಯಬಹುದು

52—21

CHILEAN NITRATE COMMITTEE,
Post Box 469, CALCUTTA

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ವಾತಪಾಶ್ಚಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋತ್ಸವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿಬ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪೌಷ್ಟಿಕ, ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ, ಮನೋತ್ಸಾಹಕ ಇಂದ್ರಿಯಸ್ತಂಭಕ, ಗರ್ಮಿ (ಸೂಜಿ) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲ ತರಹದ ಬಕ್ಕೆಗಳು, ಹುಣ್ಣುಗಳು ಪಿತ್ತದ ಭಾವೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತಿತ್ವರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾ ಬತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾಗಿ ತೆ ಲವನ್ನು ಉಪಯೋಗಿಸುವದು ಉತ್ತಮ, ಕಿಮ್ಮತ್ತು ಬಾಟ್ಲಿಗೆ ರೂ ೨—೧೨—೦

ಪ್ರಮೇಹನಿವಾರಣಿ—ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಹಳದಿಯಂತೆ ಹೋಗತಕ್ಕ ಕೀವು, ಉರಿ ವಗೈರೆ ಅಗದಿ ಜಾತ್ರಿಯಿಂದ ಗುಣವಾಗುವದು ಕಿಮ್ಮತ್ತು ಬಾಟ್ಲಿಗೆ ರೂ ೩—೮—೦ ಟಿ. ಪಿ. ಚೇ. ಅನುಭವ ಸಪತ್ರಿಕೆ ಔಷಧದ ಸಂಗಡ

ವಂದಾಣ ಸ್ಟಾಂಪು ಕಳುಹಿಸಿದರೆ ಕ್ಯಾಟಲಾಗವು.

ವಿಳಾಸ,—

ವೈದ್ಯ ಜಿ ಎಲ್ ಜೋಶಿ ಮತು ಕಂಪೆನಿ.

41 ನಂ 6. ಪೋಸ್ಟ ಬನವಾಸಿ, ಉತ್ತರ ಕಾನಡಾ

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾವ ಬರೆದು ರಿಜಿಸ್ಟ್ರಾರರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಹ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾವಾ ಫಾರಮುಗಳೂ, ಕ್ಯಾಷ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬಿಸ್ವಾಸ್ ಸ್ಟೋರಿನಲ್ಲಿಯೂ ಸಿಗುತ್ತವೆ

ಮೇನೇಜರ್ 'ಕೊಡಗು' ಮಡಿಕೇರಿ

ಕನ್ನಡ	ಸ್ವಧರ್ಮ	ಮಾಸ ಪತ್ರಿಕೆ

ಸಂಪಾದಕರು. —ದ ರಾ ಬೇಂದ್ರೆ, ಬಿ ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿ. ಸದಾಚಾರದ ಬೆಳಗೆ ಸುವಿಚಾರವೇ ಸಾಧನ ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ ವಾರ್ಷಿಕ ವರ್ಗಣಿ ರೂ. ೩—೦—೦

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

Printed & published by P. I Belliappa, at "Kodagu" Press, Mercara for "Kodagu" Ltd.

If not delivered please return to
"KODAGU" OFFICE MERCARA.

ಕೊಡಗು.

[illegible] || [illegible] ||

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಪಟ ೬] ಕೊಡಗು, ಸ ೧೯೨೬ನೇ ಇಸವಿ ನವಂಬರ್ ತಾರೀಕು ೧೯ನೇ ಶುಕ್ರವಾರ [ಸಂಚಿಕೆ ೩೪

SPENCER & CO., LTD.

MERCARA & POLLIBETTA.

ESTATE TOOLS DEPARTMENT.

Yate's hammer headed mamooties		4 lbs. Rs 30/ 4 1/2 lbs. Rs 33/ 5 lbs. Rs 36/-Doz
Digging forks 4 prongs		Rs 48/ Doz.
Mamooty forks 4 prongs		Rs 39/ Doz
Felling axes —	Each	Rs 3/ & 3/4/
Planting hoes—	Each	,, 3/12/
Weeding forks -	Each	,, 1/12/
Garden trowels		,, 1/12/

GLT IT AT SPENCERS- The House for all requisites

12 11

ಮೂಲಧನ 7 ಕೋಟಿ ರೂಪಾಯಿಗಳ

ಸ್ಥಾಪಿತವಾದದ್ದು 1874

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು— ಬೊಂಬಾಯಿ.

1922–1924 ಈ ಮೂರ ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳ — [illegible] ರೂ 51,00,000 (ಐವತ್ತೊಂದು ಲಕ್ಷ ರೂಪಾಯಿಗಳು) ಈ ಸೈಕಿ 45,91 80 ರೂಪಾಯಿಗಳನ್ನು [illegible] [illegible]

ಜೀವಮಾನಾವಧಿಯ ವಿಮೆ ದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 67½

ಕ್ಲುಪ್ತಕಾಲದ ವಿಮೆದಾರರಿಗೆ ರೂ 1000 ವಿಮೆ ಹಣಕ್ಕೆ

ಈ ಮೂರು ವರ್ಷಗಳಿಗೆ ರೂ 54

ಈ ಕಂಪೆನಿಯಲ್ಲಿ ಕ್ರಮೇಣ ಹೆಚ್ಚುತ್ತಿರುವ [illegible] ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ [illegible]ವಾಗುತ್ತದೆ

1923ರಲ್ಲಿ—ರೂ	1 74 00,000
1924 ,,	2 37,00 000
1925 ,,	2 90,00,000

ಇನ್ನೂ [illegible] ಅಭಿವೃದ್ಧಿಯಾಗುತಲೇ ಇದೆ [illegible] ಪತ್ರದಲ್ಲಿ [illegible] [illegible]

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರದು ತಿಳಿದುಕೊಳ್ಳಬಹುದು:

ಓರಿಯಂಟಲ್ ಬಿಲ್ಡಿಂಗ್ಸ್,
ಪೋಸ್ಟ್ ಬಾಕ್ಸ್ 16
ಬೆಂಗಳೂರು

ಎಸ್ ಆರ್ ಕೃಷ್ಣಸ್ವಾಮಿಯ್ಯರ್
ಬ್ರಾಂಚ್ ಸಕ್ರೆಟರಿ

-33]

ಮನೋಲ್ಲಾಸಿನಿ ತೈಲ.

[illegible]

[illegible] ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗೆ 5—8—0

ಚಂದನಾಸವ — [illegible]

1, 3, 6ಕ್ಕೆ ರೂ 1—4—0, 3—8—0, 6—12—0

ಕಾಮನಾಶಿನಿ — [illegible] 6 ಆಣೆ, 3 ಡಬ್ಬಿಗಳಿಗೆ 1, 1 [illegible]

ಕಟುಕಷಾಯ [illegible] — [illegible] 1—4—0, 3ಕ್ಕೆ ರೂ 4—0—0 6ಕ್ಕೆ ರೂ 7—0—0,

ವಿಳಾಸ—ಮನೋಲ್ಲಾಸಿನಿ ಕಂಪೆನಿ,
19 [illegible], ಕಂಕನಾಡಿ.

[illegible]

52—48

Good Chance! Good Chance!!

Ammunition At cheaper rate

Gun Powder per lb	1—14—0
Percussion caps per box of 250	1—1—0
Eley Cartridges per 100	12—0—0
Lead shots per lb	0—8—0

Terms —Rs 5/ should be sent in advance for each order Orders from coorgs should accompany the exemption certificate from the District Magistrate of Coorg

Free —6 Rubber air balloons will be given to any customer who transacts business with me for more than Rs 20/ before 31st December, 1926.

Moffussil order Promptly attended to.

S VENKATARANGAM CHETTY,

Ammunition & Sulphur Merchant,

No. 9 China Bazaar Road, Madras.

12—8

ARMS & AMMUNITION MART.

Mahomedally-Noorbhoy.

321 Abdul Rehman Street, near Crawford Market, BOMBAY. 3

Telegraphic Address -"SHOOTER" Bombay.

[52—12] Please write for Reduced net prices list for 1926

"ಕೊಡಗು"

ಸನ್ ೧೯೨೬ನೇ ಇಸವಿ ನವಂಬರ್ ತಾ. ೧೯ನೇ ಶುಕ್ರವಾರ

ಕೃಷಿ ಕಮಿಷನ್.

ಕೃಷಿಕಮಿಷನಿನ ಮುಂದೆ ಕೆಲವು ಉದ್ಯೋಗಸ್ಥರ ಪಿ ಚಾರಣಾಪಡದ್ದರ ಮೇಲೆ ನಾವು ಅಕ್ಟೋಬರ್ 22ನೇ ತಾರೀ ಕಿನಲ್ಲಿ ಒಂದು ಲೇಖನವನ್ನು ಬರೆದಿದ್ದೆವು. ಆ ಕಮಿಷನಿನವರು ಹಿಂದುಸ್ಥಾನದ ಎಲ್ಲಾ ಭಾಗದಿಂದಲೂ ಅಭಿಪ್ರಾಯ ತೆಗೆದುಕೊಳ್ಳಲಿಕ್ಕಾಗಿ ತಯಾರಿಸಿದ ಸವಾಲು ಪಟ್ಟಿಯ ನಕಲು ಒಂದನ್ನು ಕೊಡಗು ಏಜೆಂಟ್‌ದಾರರ ಸಂಘಕ್ಕೆ ಕಳುಹಿಸಿದ್ದನ್ನು ನಾವು ನೋಡಿದೆವು. ಆ ಸವಾಲು ಪಟ್ಟಿಯಲ್ಲಿ ಕೇಳುವ ಸಂಗತಿಗಳನ್ನು ವಾಚಕರಿಗೆ ತಿಳುಹಿಸಲು ಅಪೇಕ್ಷಿಸುತ್ತೇವೆ.

ಕಮಿಷನನ್ನು ನೇಮಿಸಲು ಸೂಚಿಸಿರುವ ಉದ್ದೇಶವು ಅತಿ ಮಹತ್ವದ್ದಾಗಿದೆ 'ಬ್ರಿಟಿಷ್ ಹಿಂದುಸ್ಥಾನದಲ್ಲಿ ಈಗ ಇರುವ ಕೃಷಿಯ ಸ್ಥಿತಿಯನ್ನೂ ಗ್ರಾಮಗಳ ಆರ್ಥಿಕ ಸ್ಥಿತಿಯನ್ನೂ ಆಲೋಚಿಸಿ ಕೃಷಿಯ ಅಭಿವೃದ್ಧಿಗೂ ಗ್ರಾಮನಿವಾಸಿಗಳ ಕ್ಷೇಮ ಹಾಗೂ ಸಾಂಪತ್ತಿಕ ಏರ್ಪಾಟುಗಳಿಗೂ ಬೇಕಾದ ಸೂಚನೆಗಳನ್ನು ಕೊಡುವ ಬಗ್ಗೆ ಈ ಕಮಿಷನ್ ನೇಮಿಸಲ್ಪಟ್ಟಿದೆ. ಈ ಕಮಿಷನನ್ನು ಇಂಥಾ ಸದುದ್ದೇಶಕ್ಕೆ ನೇಮಿಸಿದ್ದು ಯುಕ್ತವೇ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವದಕ್ಕೂ ಪ್ರಜೆಗಳು ಆಕ್ಷೇಪಿಸಲಾರರು. ಆದರೆ ಇಂಥಾ ಕಮಿಷನುಗಳು ಸರಕಾರದ ವಶಕ್ಕೆ ಸೇರುತ್ತಿರುವ ಅಧಿಕಾರಿಗಳಿಗೆ ಒಪ್ಪಿಗೆಯಾಗುವ ಅಭಿಪ್ರಾಯಗಳನ್ನೇ ಕೊಡುವ ಮತ್ತು ಕಮಿಷನಿನವರು ಕೊಡುವ ಬಿಲ್ಲನ್ನು ಪ್ರಜಾಹಿತವಾದ ಅಭಿಪ್ರಾಯಗಳನ್ನು ಸಹ ಅಧಿಕಾರಿಗಳು ಜಾರಿಗೆ ತರದೆ ಇರುವದೂ ಪದ್ಧತಿಯಾಗಿ ಹೋಗಿರುವದರಿಂದ ಇಂಥಾ ಕಮಿಷನುಗಳಲ್ಲಿ ನಂಬಿಕೆಯೇ ಕಡಿಮೆಯಾಗಿದೆ. ಈಗ ಹಿಂದುಸ್ಥಾನದ ವೈಸರಾಯರಾಗಿರುವ ಲಾರ್ಡ್ ಇರ್ವಿನ್‌ರು ಕೃಷಿಕರ ಮೇಲೆ ತುಂಬಾ ಸಹಾನುಭೂತಿ ಇರುವವರೆಂತ ಹೆಸರು ಪಡೆದಿರುವವರಾದದರಿಂದ ಈ ಕಮಿಷನಿನಿಂದ ಹಿಂದುಸ್ಥಾನದ ಪ್ರಜಾಜನರಲ್ಲಿ ಶೇಕಡ ೭೦ ರಷ್ಟು ಇರುವ ಕೃಷಿಕರ ಬಾಳು ಉನ್ನತವಾಗಬಹುದೆಂತ ನಮಗೆ ಸ್ವಲ್ಪ ಆಶೆ ಇದೆ. ಕೃಷಿಕರ ಸ್ಥಿತಿಯು ಅಭಿವೃದ್ಧಿಯಾಗದಿದ್ದರೆ ಬ ಟ್ಟ ಒನಾಂಗದ ಸ್ಥಿತಿಯೇ ಅಭಿವೃದ್ಧಿಯಾಗುತ್ತದೆಯೆಂತ ನಂಬಬಹುದು.'

ಸವಾಲುಗಳು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿವೆ. ಮೊದಲನೇ ಭಾಗದಲ್ಲಿ ೫೨ ಸವಾಲುಗಳಿವೆ. ಮೊದಲನೇದು ಕೃಷಿ ಶಾಸ್ತ್ರದ ಮತ್ತು ಪಶುವೈದ್ಯದ ಸಂಬಂಧವಾದ ಪರೀಕ್ಷಾ ಕ್ರಮಗಳು ಈಗ ನಡೆಯುತ್ತಿವೆಯೋ, ಯಾವ ಯಾವ ವಿಷಯ ತನಿಖೆಯಾಗಬೇಕಾಗಿದೆ, ಇಂಥಾ ಪರೀಕ್ಷೆಗಳು ನಡೆಯುತ್ತಿರುವದಿಲ್ಲ. ಈ ಸವಾಲಿಗೆ ನಮ್ಮ ದೇಶದಿಂದ ಏನೂ ಪರೀಕ್ಷೆಯಾಗುತ್ತಿರುವದಿಲ್ಲವೆಂಬ ಸುಲಭವಾದ ಜವಾಬು ಕೊಡಬಹುದು. ಪರೀಕ್ಷೆಗೆ ತುಂಬಾ ಅವಕಾಶವಿದೆ. ಆದರೆ ಪರೀಕ್ಷೆಗೆ ಬೇಕಾದ ಸಿಬ್ಬಂದಿ ಇಟ್ಟುಕೊಳ್ಳಲು ನಮ್ಮ ಚಿಕ್ಕ ದೇಶದ ಸರಕಾರಕ್ಕೆ ಶಕ್ತಿ ಇಲ್ಲ. ಹೇಗಾದರೂ ಕೃಷಿಕರಿಗೆ ಸಹಾಯವಾಗುವಂಥ ಸಲಹೆಗಳನ್ನು ಕೊಡಲು ಮೈಸೂರು ಸಾಪಾರಿನಲ್ಲಿ ಪರೀಕ್ಷೆಗಳು ಆಗಲಿಕ್ಕಿವೆ. ಇದಕ್ಕೆ ತಕ್ಕ ಏರ್ಪಾಡಾಗಬೇಕು. ಜಾನುವಾರುಗಳ ಚಿಕಿತ್ಸೆ ವಿಷಯದಲ್ಲಂತೂ ವಿಶೇಷ ಅಬಿವೃದ್ಧಿ ಮಾಡುವಿಕೆಯಾಗುತ್ತಿರುವದಿಲ್ಲ. ಜಾನುವಾರುಗಳ ಬಾಯಿಲೆಯಿಂದಲೇ ಕೃಷಿಕರ ಬಡತನ ಹೆಚ್ಚುತ್ತಿರುವದು. ಜಾನುವಾರುಗಳ ಬಾಯಿಲೆ ಹೆಚ್ಚುತ್ತಿರಲು ನ್ಯಾಯವಾದ ಕಾರಣವನ್ನು ಕಂಡುಹಿಡಿದು ಬಾಯಿಲೆಯನ್ನು ತಪ್ಪಿಸಿಕೊಳ್ಳಲು ಅಥವಾ ಬಾಯಿಲೆ ತಗಲಿದರೂ ಜೀವ ಉಳಿಸಿಕೊಳ್ಳಲು ಉಪಾಯ ಕಂಡುಹಿಡಿಯಬೇಕಾದದ್ದು ಅವಸ್ಯ ಬೇಗನೆ ಆಗಬೇಕಾದ ಅವಶ್ಯಕತೆಯಾಗಿದೆ.

ಕೃಷಿ ವಿದ್ಯೆ ಕೊಡಲ್ಪಡುತ್ತಿದ್ದರೆ ಅದರಲ್ಲಿ ಲೋಪಗಳಿವೆಯೋ ಎಂಬ ಮುಂತಾದ 13 ಉಪ ಸವಾಲುಗಳಿವೆ. ಈ ದೇಶದಲ್ಲಿ ಕೃಷಿವಿದ್ಯಾಭ್ಯಾಸದ ಶಾಲೆಯೇ ಇಲ್ಲದಿರುವದರಿಂದ ಒಂದು ಶಾಲೆಯು ಅವಶ್ಯವಿದೆಯೆಂತ ಹಿಡಿಕವಾಗಿಯೂ ಹೇಳಬಹುದು. ಪ್ರಾಯಬಂದ ಜನರಿಗೂ ಕೃಷಿ ಶಾಸ್ತ್ರವನ್ನು ಕೃಷಿಯ ಸುಧಾರಿಸಿದ ಕ್ರಮಗಳನ್ನೂ ಬೋಧಿಸುವ ಏರ್ಪಾಡು ಮಾಡುವದು ಅವಶ್ಯವಾಗಿದೆ. ಕೃಷಿಕರಿಗೆ ಬೋಧನೆಕೊಡುವ ವಿಧಾನ ಹೇಗಿರಬೇಕೆಂಬದೇ ಮೂರನೇ ಸವಾಲಿನ ಸಾರಾಂಶವಾಗಿದೆ. ನಾವು ಮೊದಲೇ ಬರೆದಿರುವಂತೆ ಸನ್ನಪತ್ರಿಕೆಗಳೇ ಮುಂತಾದ ಉಪಾಯಗಳಿಂದಲ್ಲದೆ ಕೃಷಿಕರ ಕಣ್ಣಿನ ಎದುರೆ ಕೃಷಿಯ ಸುಧಾರಿಸಿದ ಕ್ರಮಗಳನ್ನು ಅನುಸರಿಸುವದರಿಂದ ಬರುವ ಪ್ರಯೋಜನವನ್ನು ನಿದರ್ಶಿಸಿ ತೋರಿಸಿದರೆ ಕೃಷಿಕರು ಅಂಥಾ ಕ್ರಮಗಳನ್ನು ಅನುಸರಿಸುವದರಲ್ಲಿ ಸಂಶಯವಿಲ್ಲ. ಆಯಾ ಪ್ರಾಂತ್ಯದ ಸರಕಾರಗಳ ಕೆಲಸಗಳನ್ನು ಆಸ್ಥೆಯಿಂದ ಪ್ರಯೋಜನವಾಗುವಂತೆ ಮಾಡಲು ಉಪಾಯವೇನೆಂತಲೂ, ಕೃಷಿ, ಪಶುವೈದ್ಯ ಇಲಾಖೆಗಳಿಂದ ಆಗಬೇಕಾದ ಪ್ರಯೋಜನವಾಗುತ್ತಿದೆಯೋ? ರೈಲ್ವೇ, ರೋಡು, ಪೋಸ್ಟು ಟೆಲಿಗ್ರಾಫ್ ಇಲಾಖೆಗಳಿಂದ ಜನರಿಗೆ ಸಿಕ್ಕಬೇಕಾದಷ್ಟು ಸಹಾಯ ಸಿಕ್ಕುತ್ತದೆಯೋ ಎಂಬದೂ 4 ನೇ ಪ್ರಶ್ನೆಯಾಗಿದೆ. ನಮ್ಮ ದೇಶದಲ್ಲಿ ಹೆಸರಿಗೆ ಮಾತ್ರ ಕೃಷಿ ಇಲಾಖೆಯ ಸ್ವರಕ್ಷಣೆಂತ ಇಟ್ಟು ಯಾರಿಗೂ ಏನೂ ಪ್ರಯೋಜನವಾಗದ ಕೆಲಸ ಮಾಡಿಸುತ್ತಿದ್ದು ಅದನ್ನು ಈಗ ನಿಲ್ಲಿಸುತ್ತಿದ್ದಾರೆ. ಪಶುವೈದ್ಯ ಇಲಾಖೆಯಿಂದ ಬಹಳ ಸ್ವಲ್ಪ ಪ್ರಯೋಜನ ದೊರೆಯುತ್ತಿದೆಯಷ್ಟೆ. ಈ ಎರಡು ಇಲಾಖೆಗಳಿಂದಲೂ ಪ್ರಯೋಜನವಾಗುವಂತೆ ಮಾಡಿಕೊಳ್ಳಬೇಕು. ಪೋಸ್ಟು ಮತ್ತು ಟೆಲಿಗ್ರಾಫ್ ಇಲಾಖೆಗಳ ಸಹಾಯವೂ ದೇಶದ ಎಲ್ಲಾ ಭಾಗಕ್ಕೂ ಸಿಕ್ಕುವಂತೆ ಮಾಡಿಕೊಡಬೇಕು. ರೈಲ್ವೇ ಸಹಾಯವನ್ನು ಕೊಡಗಿಗೆ ಆದಷ್ಟು ಬೇಗನೆ ಮಾಡಿಕೊಡಬೇಕು ರಸ್ತೆಗಳು ಅನೇಕ ಕಡೆಗಳಿಗೆ ಮಾಡಿಕೊಡಬೇಕೆಂಬ ರಾವ್ರಗಳು ಕೌನ್ಸಿಲಿನಲ್ಲೇ ಚರ್ಚಿಸಲ್ಪಟ್ಟಿವೆ.

ಕೃಷಿಕರಿಗೆ ಧನಸಹಾಯ ಹೇಗೆ ಸಿಕ್ಕಲು ಉಪಾಯವೇನೆಂತಲೂ, ಸರಕಾರ ಟಕಾವಿ ಸಾಲವನ್ನು ರೈತರು ಹೆಚ್ಚಾಗಿ ಉಪಯೋಗಿಸಲು ಏನಾದರೂ ಸೂಚನೆಯಿದೆಯೋ ಎಂತಲೂ 5ನೇ ಪ್ರಶ್ನೆಯಲ್ಲಿ ಕೇಳಿದ್ದಾರೆ. ಹೆಚ್ಚು ವಾಯಿದೆಯ ಸಲುವ ಬಡ್ಡಿಯ ಸಾಲ ಸಿಕ್ಕುವಂತೆ ಏನಾದರೂ ಏರ್ಪಾಡು ಮಾಡಬೇಕು. ನಮ್ಮ ದೇಶದಲ್ಲಿ ಟಕಾವಿ ಸಾಲವನ್ನು ಬಹು ಸಿಕ್ಕುವದನ್ನು ತೆಗೆದುಕೊಳ್ಳುವವರೇ ಇದ್ದಾರೆ. ಕೇಳಿದವರಿಗೆಲ್ಲರಿಗೂ ಕೇಳಿದಷ್ಟು ಸರಕಾರದಿಂದ ಮಂಜೂರಾದರೆ ಸಾಕಾಗುವದಷ್ಟೆ. ಕೃಷಿಕರಿಗೆ ಸಾಲ ಹೆಚ್ಚುತ್ತಿರುವದಕ್ಕೂ ಹಣ ವಾಪಸಾಗದಿರುವದಕ್ಕೂ ಕಾರಣಗಳೇನು? ಇನ್ನಾಪೆಕ್ಷೆ ಏನಾದರೂ ಬದಲಾವಣೆಯೇನಾದರೂ ಆಗಬೇಕೋ, ಕೃಷಿಕರ ಭೂಮಿ ಗಿರವಿಯಾಗದಂತೆ ಏನಾದರೂ ಕಾನೂನು ಮಾಡಿಕೊಡಬೇಕೋ ಎಂತ ಕೇಳಿದ್ದಾರೆ. ಜಮ್ಮ ಮುಂತಾದ ಕಂದಾಯದ ಬಿಡುಗಡೆ ಇರುವ ಭೂಮಿಗಳ ಗಿರವಿ ವಿಷಯದಲ್ಲಿ ಇರುವ ಆಚರಣೆಯೇ ಸಾಕಾಗಿದೆ. ಸಾಗು ಕೃತರ ಭೂಮಿ ಸಹ ಗಿರವಿಯಾಗದಂತೆ ಮಾಡಿದರೆ ಆಗಬಹುದೆಂತ ತೋರುತ್ತದೆ. ಹಿಂದುಳಿದ ವರ್ಗದವರ ಭೂಮಿ ಬೇರೆ ಅವರ ಕೈ ತಪ್ಪಿ ಹೋಗುತ್ತಿರುವದರಿಂದ ಅವರ ಭೂಮಿ ಗಿರವಿಯಾಗಬಾರದೆಂತಲೂ ಮಾರಾಟವಾಗಬಾರದೆಂತ ಕಾನೂನು ಕೂಡಲೇ ಆಗಬೇಕಾಗಿದೆ. ಭೂಮಿ ಪಾಲು ಆಗಿ ಬಹಳ ಸಣ್ಣ ಸಣ್ಣ ಭಾಗಗಳಾಗಿ ಹೋಗಿದ್ದರೆ ಅದನ್ನು ತಪ್ಪಿಸಲಿಕ್ಕೆ ಉಪಾಯ ಕೇಳಿದ್ದಾರೆ. ಈ ವಿಷಯದಲ್ಲಿ ಸರಕಾರ ತಿಳುವಳಿಕೆ ಜನರಿಗೆ ಕೊಟ್ಟು ಸಾಧ್ಯಬಿಟ್ಟರೆ ಇಂತ ಸಣ್ಣ ಪಾಲಾಗದಂತೆ ಕಾನೂನು ಮಾಡಿಕೊಳ್ಳುವದು ಒಳ್ಳೇದು.

ಎರಡನೇ ಭಾಗದಲ್ಲಿ 7 ಪ್ರಶ್ನೆಗಳಿವೆ. ಮೊದಲನೇ ಪ್ರಶ್ನೆಯು ನೀರಿನ ನಾಲೆ ಕೆರೆ ಮುಂತಾದ್ದರ ವಿಷಯವಾಗಿದೆ. ಈ ದೇಶದಲ್ಲಿ ನೀರಿನ ನಾಲೆಗಳ ಸಹಾಯ ಬಹಳ ಕಡಿಮೆಯಾಗಿದೆ. ಹಾರಂಗಿ ನಾಲೆ ಮತ್ತು ಲಕ್ಷ್ಮಣತೀರ್ಥದ ನಾಲೆಗಳು ಆದರೆ ಬಹಳ ಪ್ರಯೋಜನವಾಗುತ್ತದೆ. ಸರಕಾರದ ಸಹಾಯ ದೊರೆತರೆ ಇನ್ನು ಅನೇಕ ಚಿಕ್ಕ ಚಿಕ್ಕ ನಾಲೆಗಳನ್ನು ಮಾಡಿಕೊಳ್ಳಲು ಅನುಕೂಲವಿದೆ. ಇರುವ ಅನೇಕ ಕೆರೆಗಳನ್ನು ದುರಸ್ತು ಮಾಡಿಕೊಡಬೇಕಾದದ್ದು ಸರಕಾರದ ಕರ್ತವ್ಯವಾಗಿದೆ. ಎರಡನೇ ಪ್ರಶ್ನೆಯಲ್ಲಿ ಮಣ್ಣಿನ ಪರೀಕ್ಷೆ ವಿಷಯ ಮತ್ತು ವ್ಯವಸಾಯಕ್ಕೆ ಅನುಕೂಲವಿರುವ ಜಾಗಗಳು ವ್ಯವಸಾಯಕ್ಕೆ ಬರುವಂತೆ ಸರಕಾರದಿಂದ ಏನು ಸಹಾಯವಾಗಬೇಕು ಎಂತ ಕೇಳಿದ್ದಾರೆ. ಮಣ್ಣಿನ ಪರೀಕ್ಷೆ ವಿಷಯದಲ್ಲಿ ಸರಕಾರ ಗಮನ ಕೊಡಬೇಕಾಗಿದೆ. ವ್ಯವಸಾಯಕ್ಕೆ ಅನುಕೂಲವಿರುವ ಪ್ರದೇಶಗಳನ್ನು ಬಿಟ್ಟು ಕೊಡುವ ಬಾಬಿನಲ್ಲಿ ತುಂಬಾ ಸಮಾಧಾನಪಡಲು ಸರಕಾರಕ್ಕೆ ಅವಕಾಶವಿದೆ. ಸರಕಾರದ ಕಾಡುಗಳೊಳಗೆ ಇರುವ ವ್ಯವಸಾಯಕ್ಕೆ ಅನುಕೂಲದ ಜಾಗಗಳನ್ನು ಬಿಟ್ಟುಕೊಟ್ಟು ಅವುಗಳ ವ್ಯವಸಾಯಕ್ಕೆ ಟಕಾವಿ ಸಾಲ ಮುಂತಾದ ಸಹಾಯ ಕೊಡಬೇಕು. 3ನೇ ಪ್ರಶ್ನೆ ಗೊಬ್ಬರದ ವಿಷಯವಾಗಿದೆ. ನಮ್ಮ ದೇಶದ ಮುಖ್ಯ ವ್ಯವಸಾಯವಾದ ಭತ್ತದ ವ್ಯವಸಾಯದಲ್ಲಿ ದನಗಳ ಗೊಬ್ಬರ ವಿನಹ ಬೇರೆ ಗೊಬ್ಬರ ಉಪಯೋಗಿಸಿದ ಅನುಭವ ಬಹಳ ಜನರಿಗೆ ಇನ್ನೂ ದೊರೆಯಲಿಲ್ಲ. ಈ ವಿಷಯದಲ್ಲಿ ಕೃಷಿ ಇಲಾಖೆಯ ಅನುಭವದಿಂದ ಉತ್ತಮ ಗೊಬ್ಬರಗಳ ಉಪಯೋಗವನ್ನು ತಿಳಿಸಿಕೊಟ್ಟರೆ ಜನರು ಅಂಥಾ ಗೊಬ್ಬರಗಳ ಉಪಯೋಗವನ್ನು ಮಾಡದೆ ಇರಲಾರರು. ಸೊಪ್ಪನ್ನು ಬೆಳೆಗೆ ಉಪಯೋಗಿಸುವದನ್ನು ನಿಲ್ಲಿಸಲು ಕಾನೂನು ಮಾಡಬೇಕೆಂತ ಕೇಳಿದ್ದಾರೆ. ಈ ಪದ್ಧತಿಯು ದಕ್ಷಿಣ ಕೊಡಗಿನಲ್ಲಿ ಇದ್ದಂತೆ ಇಲ್ಲ. ಉತ್ತರ ಕೊಡಗಿನವರಿಗೆ ಸಾಗುವಳಿಯ ಸಮಯದಲ್ಲಿ ದರಕಾಸ್ತು ಗೊಬ್ಬರವನ್ನು ಕೊಡುವದರಿಂದ ಬೇರೆ ಉಪಾಯವಿಲ್ಲವಾಗಿದೆ. 4ನೇ ಪ್ರಶ್ನೆಯು ಈಗ ಬೆಳೆಸುತ್ತಿರುವ ಬೆಳೆಗಳನ್ನು ಅಭಿವೃದ್ಧಿಪಡಿಸುವ, ಹೊಸ ಬೆಳೆಗಳನ್ನು ಕೊಡುವ, ಮತ್ತು ಬೆಳೆಗಳಿಗೆ ಬರುವ ರೋಗಗಳನ್ನು ತಪ್ಪಿಸಿಕೊಳ್ಳುವ ವಿಷಯವಾಗಿದೆ. ಬೆಳೆಯನ್ನು ಒಳ್ಳೆ ಅನುಭವವು ಈ ದೇಶದಲ್ಲಿ ಜನರಿಗೆ ಇಲ್ಲ. ಈ ಪರೀಕ್ಷೆಯು ಇಲಾಖೆಯಿಂದಲೇ ಆಗಬೇಕಾಗಿದೆ. ಕಾಫಿ ತೋಟಗಳ ರೋಗಗಳ ಬಗ್ಗೆ ಮೈಸೂರು ಸರಕಾರದ ಪರೀಕ್ಷೆಯ ಸಹಾಯ ಸಿಕ್ಕುತ್ತಿದೆ. ಕೇಳಿದವರಿಗೆಲ್ಲಾ ಕೊಟ್ಟು, ಬೀಜವನ್ನು ಇಲಾಖೆಯಿಂದ ದರಕ್ಕೆ ಕಳ್ಳುಬಿಡ ಭಾಗಗಳಲ್ಲಿ ಬೇಸಾಯ ಮಾಡಲು ಅನುಕೂಲ ಇಲ್ಲದಾಗ ಮಾಡಿಕೊಡಬೇಕು. 5ನೇ ಪ್ರಶ್ನೆಯು ಉಳುವ ರೀತಿಯನ್ನು ಯಾವ ರೀತಿಯಲ್ಲಿ ಸುಧಾರಿಸಬಹುದೆಂಬದಾಗಿದೆ. ಇದನ್ನೂ ಸಹ ಅನುಭವ ಹೊಂದಿದ ಜನರು ಕಡಿಮೆ ಇರುವದರಿಂದ ಇಲಾಖೆಯವರಿಂದಲೇ ಆಗಬೇಕಾಗಿದೆ. 6ನೇ ಪ್ರಶ್ನೆಯು ಬೆಳೆಗೆ ತಗಲುವ ರೋಗ ಮತ್ತು ಕ್ರಿಮಿಕೀಟಗಳ ಬಾಧೆ ವಿಷಯವಾಗಿದೆ. ಈ ಬಾಧೆಗಳನ್ನು ಯಾವರೀತಿಯಿಂದ ದೂರವಾಗುವಂತೆ ಮಾಡಬಹುದು ಎಂಬದೇ ಪ್ರಶ್ನೆಯಾಗಿದೆ ಇದು ಇಲಾಖೆಯ ಶೋಧ ಪರಿಶೀಲನೆ ಮಾಡುವಿಕೆಯಿಂದಲೇ ಆಗಬೇಕು. ದೇಶದ ಎಲ್ಲಾ ಭಾಗದಲ್ಲಿ ಯಾವತರದ ಬಾಧೆಗಳಿವೆ ಎಂಬದನ್ನು ಪತ್ತೆ ಮಾಡಿಕೊಂಡು ಅಲ್ಲಲ್ಲಿ ಪರೀಕ್ಷೆಯಿಂದಲೂ ಸಂಶೋಧನೆಯಿಂದಲೂ ಸರಕಾರಿ ಇಲಾಖೆಯವರಿಂದ ಸಹಾಯವಾಗಬೇಕಾಗಿದೆ. ಕೃಷಿಯ ಮುಟ್ಟುಗಳಲ್ಲಿ ಸುಧಾರಣೆಯಾಗಬೇಕಾಗಿದೆಯೋ ಎಂಬದೇ ಇನ್ನೊಂದು ಪ್ರಶ್ನೆ. ಈ ಬಾಬನ್ನು ದೇಶದಲ್ಲಿ ತುಂಬಾ ಪರೀಕ್ಷೆಗೆ ಅವಕಾಶವಿದೆ. ಹೊಸ ಮಾದರಿ ನೇಗಿಲುಗಳಿಂದ ಪ್ರಯೋಜನವಾಗುವದನ್ನು ಕೃಷಿಕರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಟ್ಟು ಬರುವದನ್ನು ಬಿಟ್ಟು ಹೊಸತನ್ನು ಉಪಯೋಗಿಸಲು ಹಾಗೆ ಉಪಯೋಗಕ್ಕೆ ಬಂದನಂತರ ಅವುಗಳನ್ನು ಕೊಡಲು ತಕ್ಕ ಏರ್ಪಾಡು ಜನರಿಂದಲೋ ಸರಕಾರದಿಂದಲೋ ಆಗಬೇಕು.

ಇನ್ನು ಉಳಿದ ಎರಡು ಭಾಗಗಳ ವಿಮರ್ಶೆಯನ್ನು ಇನ್ನೊಂದು ವಾರ ಮಾಡುತ್ತೇವೆ.

ಕೌನ್ಸಿಲು ಮೀಟಿಂಗಿನ ವಿವರ.

(ಕಳೆದ ವಾರದಿಂದ ಮುಂದುವರಿದದ್ದು)

111 ದಕ್ಷಿಣ ಕೊಡಗಿನಲ್ಲಿಯಂತೆಯೇ ಉತ್ತರ ಕೊಡಗಿನಲ್ಲಿಯೂ ಸಾಗುವಳಿದಾರರಿಗೆ ಬಾಣೆ ಜಾಗವನ್ನು ಕೊಡಬೇಕೆಂಬ ರಾವನ್ನು ಮ ಸುಬ್ಬಯ್ಯನವರು ಸೂಚಿಸಿದ್ದರು. ಅವರ ಇಂಗ್ಲಿಷ್ ಭಾಷಣವನ್ನು ಮ. ವೆಂಕಪ್ಪಯ್ಯನವರು ಹೇಳಿದ್ದೇನೆಂದರೆ—ಒಂದು ಸರ್ಕಾರದ ಆಡಳಿತಕ್ಕೆ ಒಳಪಟ್ಟ ಕಡೆಗಳಿಗೂ ಒಂದೇ ತರದ ಹಕ್ಕುಗಳಿರಬೇಕಾದದ್ದು ನೀತಿಯಾಗಿದೆ. ರಾಜರ ಕಾಲದಲ್ಲಿ ಇದ್ದ ಕಾಡು ಬಾಣೆ ರೈತರ ಉಪಯೋಗಕ್ಕೆ ದೊರಕುತ್ತಿತ್ತು, ಈಚೆಗೆ ಎಲ್ಲಾ ರಿಸರ್ವ್ ಮಾಡಿಬಿಟ್ಟರು. ಆಗ ತಕರಾರು ಮಾಡಿದರೆ ಫಾರೆಸ್ಟಿನಲ್ಲಿ ರೈತರು ದನ ಮೇಯಿಸುವದು ಮುಂತಾದ ಉಪಯೋಗಮಾಡಬಹುದೆಂದು ಹೇಳಿದರು. ಈಚೆಗೆ ಎಲ್ಲಾ ಬಿಡ್ತಿ ಮಾಡಿದರು. ವ್ಯವಸಾಯ ಮಾಡಿಕೊಂಡು ಬರುವಂತೆ ಹೊಲಕ್ಕೆ ಕಂದಾಯವಿರಲಿಲ್ಲ. ಪಟ್ಟೆದಾರರು ಬಿಟ್ಟು ಬಂದ ದರಕಾಸ್ತಿಗೆ ಕಂದಾಯ ಹಾಕಿಬಿಟ್ಟರು. ಊರುಡುವೆ ಕಾಗುವದಿಲ್ಲ. ರಿಸರ್ವ್ ಫಾರೆಸ್ಟಿನಿಂದ ಜನರಿಗೆ ಬಾಣೆ ಜಾಗ ಕೊಡಬೇಕು.

ಮ. ಚೌಡ್ಲು ಕಾಳಪ್ಪನವರು ಅನುಮೋದಿಸಿದರು. ಮ. ಟಾಸ್ಕರ್ ರವರು—ಎಲ್ಲಾ ರೈತರನ್ನೂ ಒಂದೇ ರೀತಿ ನೋಡಬೇಕಾದ ತತ್ವವೇನೋ ಒಳ್ಳೇಯದೆ. ಆದರೆ ಒಂದು ನೂರವರ್ಷದಿಂದ ನಡೆದು ಬಂದ ಕ್ರಮವನ್ನು ಬದಲಾಯಿಸಲು ಆಗುವದಿಲ್ಲ. ಉತ್ತರ ಕೊಡಗಿನಲ್ಲಿ ಊರುಡುವೆ ಇದೆ. ಈಗ ಬಿಡ್ತಿಯಾಗಿ ಬಾಣೆ ಕೊಡಲು ಅನುಕೂಲವಿಲ್ಲ. ರಿಸರ್ವ್ ಫಾರೆಸ್ಟು ದೂರವಾಗಿದೆ. ರಾವಿಗೆ ನನ್ನ ಸಹಾನುಭೂತಿ ಇದ್ದರೂ ಸಹಿಸಲಿಕ್ಕೆ ಸಾಧ್ಯವಿಲ್ಲ, ಎಂಬು ಹೇಳಿದರು.

ಮ. ಯಂ. ಪೂಣಚ್ಚಯ್ಯನವರು ರಾವಿಗೆ ವಿರೋಧಿಸಿ ಉತ್ತರಕೊಡಗಿನ ಸಿಸ್ಟಮಿನಲ್ಲಿ ಬಾಣೆ ಇಲ್ಲ, ಉತ್ತರ ಕೊಡಗು ಮೈಸೂರು ಅಥವಾ ಕನ್ನಡಜಿಲ್ಲೆಯಿಂದ ಈಚೆಗೆ ಕೂಡಿಸಿಕೊಂಡದ್ದಾಗಿದೆ. ಅಲ್ಲಿ ಕುಮ್ಕಿ ನಾಗುವಳಿ ಇದ್ದದ್ದು. ತದೀ ಜಮೀನೆಲ್ಲಾ ಈಚೆಗೆ ಆದದ್ದು. ಆದುದರಿಂದ ಅವರಿಗೆ ಬಾಣೆ ಇರಲಿಲ್ಲವೆಂದು ಮುಂತಾಗಿ ಹೇಳಿದರು.

ಮ. ಬಿ. ಶ್ರೀಪತಿರಾಯರು—ಒಂದು ಶತಮಾನಕ್ಕೆ ಮೊದಲೇ ರೈತರ ಉಪಯೋಗಕ್ಕೆ ದೊರೆಯುತ್ತಿದ್ದ ಜಾಗವು ಈಗ ರಿಸರ್ವ್ ಫಾರೆಸ್ಟಾಗಿದೆ. ಉತ್ತರ ಕೊಡಗಿನಲ್ಲಿ ಹೆಚ್ಚು ಕ್ರಮ ತರದ ದನಗಳನ್ನು ಸಾಕುತ್ತಾರೆ. ಗ್ರಾಮಾಧಿಪತ್ಯ

ಪ್ರ ಕ ಟ ಣೆ.

ಪೊನ್ನಂಪೇಟೆನಾಡು ಜನ್ಮ ಮತ್ತು ಸಾಗು ಓಟರುಗಳಲ್ಲಿ ಪುತ್ತಮನೆ ಜಿ. ಮುದ್ದಮ್ಮಯ್ಯನ ವಿನಂತಿ.

ಪೂಜ್ಯರೇ,

ಈ ನಾಡಿನ ಡಿಸ್ಟ್ರಿಕ್ಟ್‌ಬೋರ್ಡು ಮೆಂಬರುತನಕ್ಕೆ ನಾನೊಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ.

ದೇಶಸೇವೆ ಮಾಡಲು ಕುತೂಹಲವುಳ್ಳ ನನಗೆ ನಿಮ್ಮ ಸಿಕ್ಕಿರುವ ಒಂದು ಓಟನ್ನು ಕೊಟ್ಟು ಪ್ರೋತ್ಸಾಹ ಕೊಡಿಸಬೇಕಾಗಿ ಈ ಮೂಲಕ ಬೇಡಿಕೊಳ್ಳುತ್ತೇನೆ.

ಈ ಸಭೆಯಲ್ಲಿ ನಮ್ಮ ನಾಡಿನ ಅಭಿವೃದ್ಧಿಗೆ ಆಗಬೇಕಾದ ವಿಷಯಗಳಲ್ಲಿ ನಮ್ಮ ನಾಡಿನ ಪರವಾಗಿ ಹೋರಾಡಲು ಉತ್ಸುಕನಾಗಿದ್ದೇನೆ.

ವಿಶ್ವಾಸವಿಟ್ಟು ಕರ್ಮರೂ ನನಗೆ 20—12—26ರಲ್ಲಿ ಓಟು ಕೊಟ್ಟು ಪ್ರೋತ್ಸಾಹ ಪಡಿಸುವರಾಗಿ ಬೇಡುತ್ತೇನೆ

ಪೊನ್ನಂಪೇಟೆ, ಇತಿ ತಮ್ಮ ಸೇವಕ,

ತಾ. 15—11—26. ಪಿ. ಜಿ. ಮುದ್ದಮ್ಮಯ್ಯ

ಗಿ ಅವರಿಗೆ ದನಮೇಯಿಸಲು ಬಾಗಣೆಯಿದೆ ಎಂದು ವಿಗೆ ಬಹಳ ಸಮಯಾಗಿ ಮಾತಾಡಿದರು.

ಮಿ. ಪಿ. ಬಿ. ಪೋದಪ್ಪನವರು—ಈ ಬಾಣೆ ಜಾಗವು ಬರಿಗೆ ಬೇಕಾಗಿಲ್ಲ. ಐಶ್ವರ್ಯವಂತರಿಗೆ ಕಾಫಿತೋಟ ಮಾಡ ಕೇಳುವುದಾಗಿದೆ. ಜನರ ಆವಶ್ಯಕತೆಯು ಏನೂ ಇಲ್ಲದಿದ್ದರೂ ಆಕ್ಷೇಪಣೆ ಇಲ್ಲವೆಂದು ಮುಂತಾಗಿ ಹೇಳಿದರು.

ಮಿ. ಸುಬ್ಬಯ್ಯನವರು—(ಕನ್ನಡದಲ್ಲಿ) ಮಿ. ಪೋದಪ್ಪನವರ ಠರಾವು ತಂದವರಿಗೆ ಉದ್ದೇಶ ಆಲೋಚಿಸಿ ಮಾತಾಡಲು ವ್ಯಸನಪಡುತ್ತೇನೆ. ಉತ್ತರ ಕೊಡಗನ್ನು ನೋಡಿದ್ದಾರೂ ಬಡವರಿಗೆ ಬಾಣೆ ಜಾಗ ಬೇಡವೆಂದು ಹೇಳಲಿ ಎಂದು ಮುಂತಾಗಿ ಜವಾಬು ಕೊಟ್ಟ ನಂತರ ಠರಾವು ಓಟಿಗೆ ಹಾಕಲಾಗಿ ಮಿ. ರಾ. ಗಣಪತಿ ಬೋಪಣ್ಣ, ಕಾಳಪ್ಪನವರು, ಕೆ. ಪಿ. ಚಿಣ್ಣಪ್ಪನವರು, ಪಿ. ಟಿ. ಕುಶಾಲಪ್ಪನವರು, ಯಂ. ಚಿಣ್ಣಪ್ಪನವರು, ಸುಬ್ಬಯ್ಯನವರು, ವೆಂಕಪ್ಪನವರು, ಬೆಳ್ಯಪ್ಪನವರು, ಮುಂದಣ್ಣನವರು, ಶ್ರೀಪತಿರಾಯರು ಮತ್ತು ಪಿಂಟೋರವರು (10) ಸಭಾಸದರೂ, ಯಾವ ಕಡೆಗೂ ಓಟುಕೊಡದ ಪೋದಪ್ಪನವರು ವಿನಃ, ಇತರರೆಲ್ಲ ವಿರೋಧವಾಗಿಯೂ (9) ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

112 ಈಗಿನ ಸೆಟ್ಲ್‌ಮೆಂಟನ್ನು ಖಾಯಂ ಮಾಡತಕ್ಕದು ಎಂಬ ಠರಾವನ್ನು ಮಿ. ಸುಬ್ಬಯ್ಯನವರು ವಾಪಸು ತೆಗೆದುಕೊಂಡರು.

113. ಸ್ವಂತ ಜಮ್ಮ ಮತ್ತು ಸಾಗೆ ಜಾಗದಿಂದ ಹಿಡುವಳಿದಾರರ ಉಪಯೋಗಕ್ಕಾಗಿ ಮರ ಮತ್ತು ಸೌದೆ ಸಾಗಿಸ ಮಾಲೀಕರ ಸ್ವಂತ ರಹದಾರಿ ಕಾಕಂತ ಮಾಡತಕ್ಕದ್ದೆಂಬ ಠರಾವನ್ನು ಮಿ. ಅಬ್ದುಲ್ ಖಾನ್ ಸಾಹೇಬರವರು ಸೂಚಿಸಿದರು. ಇವರ ಇಂಗ್ಲಿಷ್ ಭಾಷಣವನ್ನು ಮಿ. ಬೋಪಣ್ಣನವರು ಓದಿ ಹೇಳಿದೇನೆಂದರೆ—ಸ್ವಂತ ಜಾಗದ ಪ್ರಯೋಜನವನ್ನು ಮಾಡಿಕೊಳ್ಳಲಾಗುವುದಿಲ್ಲ. ಸೌದೆ ತಂದಿದ್ದರೂ ಪತ್ತೇಗಾರರಲ್ಲಿಗೆ ಹೋಗಬೇಕು. ಇವರು ಸಕ್ಕರೆಕೊಡುತ್ತಾರೆ. ಕೆಲವು ಸಾರಿ ಅಧೀನದವರು ಅನಾವಶ್ಯಕ ತೊಂದರೆಕೊಡುತ್ತಾರೆ. ಆದ್ದರಿಂದ ಮಾಲೀಕರ ರಹದಾರಿ ಕೊಡುವಂತೆ ಇದಕ್ಕೂ ಮಾಡಬೇಕು.

ಮಿ ಯಸ್. ಯಂ ಪಿಂಟೋರವರು ಅನುಮೋದಿಸಿದರು.

ಮಿ. ಟಾಸ್ಕರವರು—ಈ ಸಂಗತಿಯನ್ನು ಜಾಗ್ರತೆಯಿಂದ ನೋಡಬೇಕೆಂದು ಸರಕಾರಕ್ಕೂ ಮನಸ್ಸಿದೆ. ಆದರೆ ಮೋಸದಿಂದ ಮರ ಸಾಗಿಸುವುದನ್ನು ತಪ್ಪಿಸಲಿಕ್ಕಾಗ ವುದಿಲ್ಲ. ಹಾಗಿದ್ದರೂ ಬೆಳೆಗಳಿಗೆ ವರುಷಕ್ಕೆ 15 ದಿವಸಗಳಲ್ಲಿ ಸಾಗಿಸಲು ಕೊಡುವಂತೆ ಮೋಸವಾಗದಂತೆ ಉಪಾಯ ಸೂಚಿಸಿದರೆ ಆಲೋಚನೆ ಮಾಡಬಹುದು, ಎಂದು ಹೇಳಿದರು.

ಸರಕಾರದವರೇ ಅಂಥಾ ಉಪಾಯ ಕಂಡು ಹಿಡಿಯಬೇಕು. ಕಾಫಿ ಸಾಗಿಸುವಾಗ ಬೇಕಾದ ದಿನ ಕೊಟ್ಟರೆ ತೊಂದರೆ ಏನೂ ಬಾರದು. ಕೂಡಲು ಸಾವಕಾಶವಾಗ ವೃದ್ಧಿ. ಸಿಬ್ಬಂದಿ ಮಿ. ಎ. ಬಿ. ಜಂಗಪ್ಪನವರು ಮಾತಾಡಿದರು.

ನಾಡು ಅಧಿಕಾರಿಗಳು ಮತ್ತು ಪಟೇಲರುಗಳು ಎಚ್ಚರಿಕೆಯಿದ್ದರೆ ಮೋಸವನ್ನು ಕಂಡುಹಿಡಿಯಬಹುದು ಎಂದು ಮೇ. ವಿ. ಮಾಚಯ್ಯನವರು ಠರಾವಿಗೆ ಬೆಂಬಲ ಕೊಟ್ಟರು.

ಈಗಿನ ರೂಲು ಬಹಳ ಕಷ್ಟಕರವಿದ್ದಾಗ್ಯೂ ಕಾಫಿಯನ್ನೇ ಇದಕ್ಕೂ ಸ್ವಂತ ರಹದಾರಿಯಿಂದ ಸಾಗಿಸಲು ಬಿಡಬೇಕೆಂದು ಮಿ. ಅಬ್ದುಲ್ ಖಾದರವರು (ಹಿಂದುಸ್ತಾನಿಯಲ್ಲಿ) ಬೆಂಬಲ ಕೊಟ್ಟರು.

ಕಾಫಿಯನ್ನು ಸರಕಾರಿ ಜಾಗದಲ್ಲಿ ಬೆಳೆಸುವುದಿಲ್ಲವಾದ್ದರಿಂದ ಕಾಫಿ ಸಾಗಿಸುವ ಹೋಲಿಕೆಯು ಇದಕ್ಕೆ ಸರಿಹೋಗುವುದಿಲ್ಲ.

ಈ ಠರಾವನ್ನು ಮುಂಜೂರು ಮಾಡಿದರೆ ಸರಕಾರಕ್ಕೆ ನಷ್ಟವಾಗುವುದು ಖಂಡಿತವೆಂದು ಮಿ. ಟಾಸ್ಕರವರು ಹೇಳಿದರು. ಠರಾವು ಬಹುಮತದಿಂದ ಮುಂಜೂರಾಯಿತು.

114. ಮಡಿಕೇರಿ-ಮೂರ್ನಾಡು ರಸ್ತೆಯ ಬಳಿ ವೈಲಿ ಹಾಕತ್ತೂರು, ಮರಗೋಡಿಗಾಗಿ ಮಡಿಕೇರಿ ಸಿದ್ದಾಪುರ ರಸ್ತೆಯ ಒಂಟಿಯಂಗಡಿಗೆ ಹೋಗಿ ಸೇರುವ ರಸ್ತೆಯನ್ನು ವಿಸ್ಕ್ಯಾಲ್ ರಸ್ತೆಯಾಗಿ ಮೋಟ ಗಾಡಿ ಪಗ್ಗರೆ ವ್ಯಾಪಾರ ಯೋಗ್ಯವಾಗಿ ಮಾಡತಕ್ಕದ್ದೆಂಬ ಠರಾವನ್ನು ಕೆ ಯಂ. ಮುಂದಣ್ಣನವರು ಸೂಚಿಸಿ ಹೇಳಿದ್ದೇನೆಂದರೆ—ರಸ್ತೆಯು ಕೆಲವು ಗ್ರಾಮಗಳಿಗೆ ಮಾತ್ರವಲ್ಲ, ಅನೇಕ ಜನರಿಗೆ ಪ್ರಯೋಜನವಾದದ್ದು. ಮೈಸೂರಿನಿಂದ ಮಡಿಕೇರಿಗೆ ಬರುವ ಸಾಮಾನುಗಳಿಗೂ, ಮರ್ಕಾರಿನಿಂದ ವಿರಾಜಪೇಟೆಗೆ ಹೋಗುವ ಸಾಮಾನುಗಳಿಗೂ ಇದು ಬಹಳ ಅನುಕೂಲವಾದ ರಸ್ತೆ. ಮಳೆಗಾಲದಲ್ಲಿ ಮೂರ್ನಾಡಿನವರಿಗೆ, ವಿರಾಜಪೇಟೆಗೆ ಹೋಗಲಿಕ್ಕೆ ಹೊಳೆಯ ಅಡಚಣೆ, ಮಡಿಕೇರಿಗೆ ಹೋಗಲು ಅತಿ ಮಳೆಯ ತೊಂದರೆ. ಇದರಿಂದ ಜನರಿಗೆ ಬಹಳ ಕಷ್ಟ. ಈ ರಸ್ತೆಯ ಬಾಜಿನಲ್ಲಿರುವ ಗ್ರಾಮದ ಸ್ಥಳ ಕ್ರಯ ಬಹಳ ಕಡಿಮೆ. ಈ ರಸ್ತೆಗೆ ಬೇಕಾದ ಜಾಗವನ್ನು ರೈತರು ಕೊಡಲು ತಯಾರಿದ್ದಾರೆ. ಈ ರಸ್ತೆಯು ರೋಡ್ ಇಂಜಿನಿಯರ ಮೆಚ್ಚಿನ ಖರ್ಚು ಅವಶ್ಯವಿಲ್ಲ. ಒಂದು ಸಾವಿರ ರೂಪಾಯಿಗಳು ಸಾಕಾಗುವದು.

ದೇಶದ ಈ ಪ್ರಾಂತ್ಯದವರು ಗಾಡಿ ಪಗ್ಗರೆ ವ್ಯಾಪಾರದ ಬಹಳ ಕಷ್ಟದಲ್ಲಿದ್ದಾರೆ. ಅವರು ಕೊಡುವ ಕಂದಾಯಕ್ಕೆ ತಕ್ಕ ಫಲ ದೊರೆಯುವದಿಲ್ಲ. ಈ ರಸ್ತೆಯನ್ನು ಸರಿಮಾಡಿಕೊಟ್ಟು ಅಲ್ಲಿಯವರಿಗೆ ಅನುಕೂಲಪಡಿಸಿಕೊಡಬೇಕಾದದ್ದು ಅಗತ್ಯವೆಂದು ಹೇಳಿ ಮಿ. ಪೋದಪ್ಪನವರು ಠರಾವನ್ನು ಅನುಮೋದಿಸಿದರು.

ಮಿ ಟಾಸ್ಕರವರು—ಈ ರಸ್ತೆಯು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಡುವಂತಹದ್ದು. ಮೂರ್ನಾಡು ಪ್ರಾಂತ್ಯದವರಿಗೆ ವಿರಾಜಪೇಟೆಗೆ ಹೋಗಲು ಇದು ಅನುಕೂಲವಾಗುವುದರಿಂದ ಪ್ರಾಂತೀಯ ಸರಕಾರದವರು ಯೋಚಿಸಬಹುದೇನೋ. ಈ ರಸ್ತೆಗೆ 19,000 ರೂಪಾಯಿ ಖರ್ಚು ಬೇಕೆಂತ ಅಂದಾಜು. ಮಳೆಗಾಲದ ಬೇಸರಿಗೆ ಸೇತುವೆ ಬೇಕೆಂತ ಈ ವೇದಿಕೆ ಮಂಜೂರಾದ ಠರಾವನ್ನು ಜಾರಿಗೆ ತಂದರೆ ಈ ರಸ್ತೆಯ ಆವಶ್ಯಕತೆಯು ಕಡಿಮೆಯಾಗುತ್ತದೆ. ಇದಕ್ಕಿಂತ ಅವಶ್ಯವಾದ ಬೇರೆ ರಸ್ತೆ ಮುಂತಾದ್ದು ಮಾಡಿದ ಮೇಲೆ ಇದನ್ನು ಯೋಚಿಸಬಹುದಷ್ಟೆ. ಈ ಠರಾವಿಗೆ ಓಟು ಕೊಡುವವರು ಬೇರೆ ಸೂಚಿಸಿದ ಮುಖ್ಯ ಕೆಲಸವು ಮುಂದೆ ಆಗಬೇಕೆಂಬದನ್ನು ಯೋಚಿಸಿ ಓಟು ಕೊಡಬೇಕಾಗಿದೆ.

ಮಿ. ಮುಂದಣ್ಣನವರ—ತಾತ್ಕಾಲಿಕ ಸೇತುವೆ ಕಟ್ಟಿ ಸ್ವಲ್ಪ ಖರ್ಚು ಮಾಡಿ ರಸ್ತೆಯನ್ನು ದುರಸ್ತು ಮಾಡಬಹುದೆಂದು ಜವಾಬು ಕೊಟ್ಟರು.

ಠರಾವನ್ನು ಓಟಿಗೆ ಹಾಕಲಾಗಿ ಮಿ. ರಾ. ಗಣಪತಿ ಕೆ. ಪಿ. ಚಿಣ್ಣಪ್ಪನವರು, ಸುಬ್ಬಯ್ಯನವರು, ವೆಂಕಪ್ಪಯ್ಯನವರ, ಬೆಳ್ಯಪ್ಪನವರು, ಮುಂದಣ್ಣನವರು, ಪೋದಪ್ಪನವರ, ಮತ್ತು ಅಬ್ದುಲ್ ಖಾನ್ ಸಾಹೇಬರವರು ಪರವಾಗಿಯೂ, ನಾಲ್ಕು ಅಧಿಕಾರಿಗಳ ಮಿ. ಮಾಚಯ್ಯನವರು, ಪಿ. ಟಿ. ಕುಶಾಲಪ್ಪನವರು, ಮತ್ತು ಯಂ ಯಂ ಚಿಣ್ಣಪ್ಪನವರು ವಿರೋಧವಾಗಿಯೂ ಓಟುಕೊಟ್ಟರು. ಯಾವ ಕಡೆ ಸಮವಾದುದರಿಂದ ಅಧ್ಯಕ್ಷರು ಕ್ಯಾಸ್ಟಿಂಗ್ ಓಟು ವಿರೋಧವಾಗಿ ಕೊಟ್ಟದ್ದರಿಂದ ಠರಾವು ಬಿದ್ದುಹೋಯಿತು.

115 ಮೂರ್ನಾಡು, ಕಾರುಗುಂದ, ನಂಟಿಕೊಪ್ಪ ಮತ್ತು ಮಾದಾಪುರ ಈ ಸ್ಥಳಗಳಲ್ಲಿ 3ನೇ ಕ್ಲಾಸ್ ಮೆಜಿಸ್ಟ್ರೇಟ್ ಅಧಿಕಾರವುಳ್ಳ ಬೆಂಚ್ ಕೋರ್ಟುಗಳನ್ನು ಸ್ಥಾಪಿಸಬೇಕೆಂಬ ಠರಾವನ್ನು ಮಿ. ಕೆ ಮುಂದಣ್ಣನವರು ವಾಪಸು ತೆಗೆದುಕೊಂಡರು.

116. ಕೊಡಗಿನ ಪ್ರಾಂತೀಯ ಗಜೆಟೆಡ್ ಉದ್ಯೋಗಸ್ಥರ ಪದವಿಯನ್ನು ಮದ್ರಾಸು ಪ್ರಾಂತದ (ಕಾಡರ್) ಪಟ್ಟಿಗೆ ಸೇರಿಸಬೇಕು ಮತ್ತು ಅವರ ಸರ್ವಿಸು ಕೊಡಗಿನಲ್ಲಿ ಐದು ವರ್ಷ ಮಾತ್ರವಾಗಿರಬೇಕು ಎಂಬ ಠರಾವನ್ನು ಮಿ. ಕೆ. ಪಿ. ಚಿಣ್ಣಪ್ಪನವರು ಸೂಚಿಸಿ ಹೇಳಿದ್ದೇನೆಂದರೆ—ಪ್ರಾಂತೀಯ ಗಜೆಟೆಡ್ ಆಫೀಸರುಗಳನ್ನು ಐದು ವರ್ಷಕ್ಕೊಂದು ಸಾರಿ ವರ್ಗಾಯಿಸಬೇಕೆಂದು ನಾನು ಸೂಚಿಸುವುದರ ಉದ್ದೇಶವೇನೆಂದರೆ ಅನೇಕ ಪ್ರಾಂತ್ಯಗಳಲ್ಲಿ ಪ್ರೊವಿನ್ಷಿಯಲ್ ಮತ್ತು ಇಂಪೀರಿಯಲ್ ಉದ್ಯೋಗಸ್ಥರನ್ನು ಒಂದೆಡೆಯೇ ಇಟ್ಟಿದ್ದರೆ ಐದು ವರ್ಷಕ್ಕೊಂದು ಸಾರಿಯಾದರೂ ವರ್ಗಾಯಿಸುತ್ತಾರೆ. ಆ ರೂಲನ್ನೇ ಇಲ್ಲಿಯೂ ಜಾರಿಗೆ ತರುವಂತೆ ಕೇಳುವುದಾಗಿದೆ. ಕೆಲವು ಸಮಯ ಹಿಂದೆ ವೀರಾಜಪೇಟೆಯಲ್ಲಿ ನಡೆದ ಒಂದು ಮೀಟಿಂಗಿನಲ್ಲಿ ವರ್ಗಾವರ್ಗಿಯ ತತ್ವಕ್ಕೆ ಒಪ್ಪಿ ಸಂಗತಿಗಳ ಮುಂದಾಳುಗಳು ಒಪ್ಪಿ ಅಲ್ಲಿ ಇದರ ವಿಷಯ ಒಂದು ಠರಾವು ಸಹ ಮಂಜೂರು ಮಾಡಲಾಯಿತು. ಸದರಿ ಠರಾವನ್ನು ಜಾರಿಗೆ ತರುವದು ಅಸಾಧ್ಯವಾದರೆ ಅಲ್ಲದ ಪಕ್ಷದಲ್ಲಿರೂ ವರ್ಗಾವರ್ಗಿ ಒಪ್ಪದಂತಾಯಿತು. ಇಲ್ಲಿಯ ಸರ್ಕಾರವು ಒಂದೇ ಡಿಸ್ಟ್ರಿಕ್ಟಿನ ಸರಕಾರವಾದುದರಿಂದ ಇಲ್ಲಿರುವ ಪ್ರೊವಿನ್ಷಿಯಲ್ ಆಫೀಸರಾದರೆ ಅವರು ರಿಟೈರ್ ಆಗುವವರೆಗೂ ಅವರು ಆ ಉದ್ಯೋಗದಲ್ಲಿಯೇ ಇರಬೇಕಾಗುತ್ತೆ. ಈ ತೊಂದರೆಯನ್ನು ತಪ್ಪಿಸಲಿಕ್ಕಾಗಿಯೇ ಆಫೀಸರುಗಳನ್ನು ಬದಲಾಯಿಸಿಕೊಳ್ಳಲಿಕ್ಕೆ ನಮ್ಮ ಸರ್ಕಾರವು ಮದ್ರಾಸು ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು. ಹೀಗೆ ಮಾಡಲು ಇಲ್ಲಿಯ ಪ್ರೊವಿನ್ಷಿಯಲ್ ಗಜೆಟೆಡ್ ಉದ್ಯೋಗಸ್ಥರನ್ನು ಮದ್ರಾಸು ಸರ್ವಿಸ್ ಪಟ್ಟಿಗೆ ಸೇರಿಸಬೇಕಾಗಿದೆ. ಹೀಗೆ ಮಾಡಿದರೆ ಇಲ್ಲಿರುವ ಕೆಲವು ಗಜೆಟೆಡ್ ಉದ್ಯೋಗಗಳನ್ನು ಕೊಡಗಿನವರು ಕಳಕೊಳ್ಳವರೆಂಬ ಭಯವು ಕೆಲವರಿಗಿದೆ. ಈ ಹೆದರಿಕೆಗೆ ಕಾರಣವಿಲ್ಲ. ಏಕೆಂದರೆ ಮದ್ರಾಸಿನ ಪಟ್ಟಿಗೆ ಸೇರಿಸುವದರಿಂದ ನಮ್ಮ ವಿದ್ಯಾವಂತ ಯುವಕರಿಗೆ ಹೆಚ್ಚಿನ ಸಂದರ್ಭ ದೊರೆಯುತ್ತದೆ. ಈಗಲಾದರೋ ಮದ್ರಾಸಿನವರು, ನಮ್ಮ ಸರ್ಕಾರವು ಪ್ರತ್ಯೇಕವಾದುದರಿಂದ, ನಮ್ಮ ಯುವಕರಿಗೆ ಎಡೆಕೊಡುವದಿಲ್ಲ. ನಮ್ಮ ಉದ್ಯೋಗಸ್ಥರನ್ನು ಮದ್ರಾಸು ಸರ್ವಿಸಿನ ಪಟ್ಟಿಗೆ ಸೇರಿಸಿದರೆ ಈ ಉದ್ಯೋಗಗಳ ವಿಷಯದಲ್ಲಿ ಮದ್ರಾಸೂ, ಕೊಡಗೂ ಒಂದಾಗುವದರಿಂದ ನಮ್ಮ ಜನರಿಗೆ ಮದ್ರಾಸಿನಲ್ಲಿಯೂ ತುಂಬಾ ಎಡೆಸಿಕ್ಕುತ್ತದೆಂಬುದರಲ್ಲಿ ಸಂಶಯವಿಲ್ಲ.

ಮಿ. ಕೆ. ಪಿ. ಚಿಣ್ಣಪ್ಪನವರು ಠರಾವನ್ನು ಅನುಮೋದಿಸಿ ಹೇಳಿದ್ದೇನೆಂದರೆ— ಗಜೆಟೆಡ್ ಉದ್ಯೋಗಸ್ಥರನ್ನು 5 ವರ್ಷಕ್ಕೊಮ್ಮೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಬೇಕೆಂಬ ಠರಾವು 1½ ವರ್ಷಕ್ಕೆ ಮೊದಲು ಕೌನ್ಸಿಲಿಗೆ ಕಳುಹಿಸಲ್ಪಟ್ಟಿತು. ಈ ವರೆಗೆ ಅದಕ್ಕೆ ಅವಕಾಶ ಸಿಕ್ಕದೆ ಈಗ ತಾನೇ ಸಿಕ್ಕಿದ್ದಕ್ಕೆ ಪ್ರೆಸಿಡೆಂಟರಿಗೆ ವಂದಿಸಬೇಕಾಗಿದೆ. ಈ ವಿಷಯ ಕಳೆದ ಜನಿವರಿಯ ಸಭೆಯ ಸಾರ್ವಜನಿಕ ಸಭೆಯಲ್ಲಿಯೂ ದೇಶದ ಅನೇಕ ಕಡೆಗಳಲ್ಲಿಯೂ ಏಟಿಗೆ ಮಾತಿ ವರ್ಗ ಮಾಡುವುದು ಅವಶ್ಯವೆಂದು ತೀರ್ಮಾನವಾಗಿದೆ. ಪ್ರತಿಯೊಬ್ಬರೇ ಸ್ಥಳೀಯ ಸರಕಾರವಾಗಿಯೂ ಬೇಕಾದಷ್ಟು ತಿಳಿದಿರುವುದರಿಂದ, ನಮ್ಮ ಕಷ್ಟಗಳನ್ನು ಹೇಳದೆ ಸುಮ್ಮನಿರುವೆನು. ಸಭೆ ಈ ಠರಾವಿಗೆ ಬೇರೆ ಪ್ರತ್ಯಾಸ ಮಾತಾಡುತ್ತೇನೆ. ಕಳೆದ ಹತ್ತು ವರ್ಷಗಳಿಂದ ನಮ್ಮಲ್ಲಿಯೂ ಕೆಲವು ಗಜೆಟೆಡ್ ಉದ್ಯೋಗಸ್ಥರು ತಾವು ದೇಶದವರಾದರೂ ದೇಶದಲ್ಲಿ ತಮಗೆ ಸರ್ವ ಹಕ್ಕು ಇದೆಯೆಂಬುದಾಗಿ ಬಂದು ಕೆಲಸದ ಸಂಬಳವನ್ನು ಹೊಂದಿಕೊಂಡು ಇದ್ದುಕೊಂಡು ಕಡೆ ಪ್ರಜಾಪ್ರತಿನಿಧಿಗಳೆಂದು ಹೇಳಿಸಿಕೊಳ್ಳುವ ಜನರಿಗೆ ತಲೆನೋವಾಗಿತ್ತು. ಈಗ ರೈತರ ಪ್ರಯೋಜನಕ್ಕಾಗಿ ತೋರುವ ಕೆಲವು ಜನರಿಗೆ ಇವರಿಂದ ಅನಾವಶ್ಯಕವಾದ ಅಸ್ತಿತ್ವದವರಾಗಿದ್ದಾರೆ. ತನ್ನ ಕೆಲಸವನ್ನು ಸಾಧಿಸುವುದಕ್ಕಾಗಿ ತನಗೆ ಅನುಕೂಲವಾದ ಕೆಲವು ಯುಕ್ತಿಗಳನ್ನು ಹೂಡಿ ಒಂದು ಕಡೆ ಪ್ರಜೆಗಳನ್ನು ಇನ್ನೊಂದು ಕಡೆ ಸರಕಾರವನ್ನು ತಪ್ಪು ಭಾವನೆಗೆ ಇಳಿಸಿದ್ದಾರೆ. ಸರಕಾರದ ಸಂಬಳ ತಿಂದು, ಸಾರ್ವಭೌಮ ಸರಕಾರಕ್ಕೆ ವಿಧೇಯರಾಗಿರುವ ಕೇವಲ ನೌಕರರು ಇವರಿಗೆ ಇವೆಯಲ್ಲದೆ ರೈತರ ಪ್ರತಿನಿಧಿಗಳೆಂದೆನ್ನಿಸಿಕೊಂಡು ತಪ್ಪುಭಾವನೆಯನ್ನು ಕಲ್ಪಿಸುವುದು ಇವರಿಗೆ ಸರಿಯಲ್ಲ. ಇದೆಲ್ಲಾ ಐದು ವರ್ಷಕ್ಕೊಮ್ಮೆ ವರ್ಗಾವರ್ಗಿಯಾಗದ್ದರಿಂದ ಸಂಭವಿಸುತ್ತಿರಲಿಲ್ಲ. ದೇಶವು ಚಿಕ್ಕದಾದ್ದರಿಂದಲೂ ಈ ಉದ್ಯೋಗಸ್ಥರಿಗೆ ಅನೇಕ ಸಂಬಂಧಿಗಳೂ, ಸ್ನೇಹಿತರೂ ಇರುವುದರಿಂದಲೂ, ಮನುಷ್ಯನ ಸ್ವಭಾವವು ಬೇರೆಯಾದ್ದರಿಂದ ಎಂದಾದರೊಂದು ದಿನ ತನ್ನ ಜನರ ಮುಖನೋಡಿ ನಡೆಯಲೇ ಬೇಕಾಗಿದೆ. ಈ ಕಾರಣದಿಂದ ಯಾವ ಉದ್ಯೋಗಸ್ಥನಿಗಾದರೂ 5 ವರ್ಷಕ್ಕೊಮ್ಮೆ ವರ್ಗವಾಗದೆ ಹೋದರೆ ದೇಶದಲ್ಲಿ ನ್ಯಾಯ ಸಿಕ್ಕುವುದು ಬಹು ಕಷ್ಟ. ಹಿಂದೆ ಇದ್ದವರಾಗ ಜಿಲ್ಲೆಗಳನ್ನು ಹತ್ತು ಹದಿನೈದು ವರ್ಷದವರೆಗೆ ವರ್ಗ ಮಾಡದೆ ಒಂದೇ ಸ್ಥಳದಲ್ಲಿಟ್ಟಷ್ಟು ನ್ಯಾಯ ಸಮಸ್ಯೆ ತಪ್ಪಲ್ಲ. ಇದೇ ಕಾರಣಗಳನ್ನು ನೋಡಿ ಜನಲೋಕದಲ್ಲಿಯೂ ಮತ್ತು ನಮ್ಮ ಹಿಂದೂದೇಶದಲ್ಲಿಯೂ 5 ವರ್ಷಕ್ಕೊಮ್ಮೆ ವರ್ಗಾವರ್ಗಿ ಮಂಜೂರ ಮಾಡುವುದು ಜಾರಿಯಲ್ಲಿದೆ. ಕೌನ್ಸಿಲು ಒಂದು ಸಂಗತಿಗಳಾದ್ದರಿಂದ ಈ ಉದ್ಯೋಗಸ್ಥರು ಒಂದೊಂದು ಸಂಗತಿಯನ್ನು ಒತ್ತಾಯಿಸಿದರು. ಪ್ರಾರಂಭ ಮಾಡಿದಂದಿನಿಂದ ಇವರನ್ನು ವರ್ಗಮಾಡಿಯೇ ತೀರಬೇಕೆಂದು ನಿರೀಕ್ಷ್ಯವಾಗಿದೆ. ನಾನು ನಮ್ಮ ಉದ್ಯೋಗಸ್ಥರ ಮೇಲೆ ತಪ್ಪು ಹೊರಿಸುವುದಿಲ್ಲ. ಇಂಗ್ಲೆಂಡ್ ಜಿಲ್ಲೆಗಳಲ್ಲಿ ಸಹ 5 ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿದ್ದರೆ ಅವರ ಸಹ ಈ ಅಪಾಯಕ್ಕೆ ಒಳಗಾಗುವರು. ಸಿದ್ಧ ಈ ಠರಾವು ಮಂಜೂರಾ 3 ಮದ್ರಾಸಿನ ಕಾಡರ್ ಗೆ ಸೇರಿದಲ್ಲಿ ಮದ್ರಾಸು ಅಧಿಕಾರಿಗಳು ಇಲ್ಲಿಗೆ ಬರುವರು. ನಮ್ಮವರು ಅಲ್ಲಿ ಯಾವ ಅನ್ಯಾಯವೂ ಇರುವುದಿಲ್ಲ. ನಮ್ಮ ದೇಶದ ಯುವಕರ ಯೋಗ್ಯತೆ ನೋಡಿ ದೇಶದಲ್ಲಿ ನ್ಯಾಯವು ನಡೆಯುವಂತೆ ಮಾಡುವುದಕ್ಕೆ ಈ ಠರಾವನ್ನು ಪುಷ್ಟೀಕರಿಸುವುದು ಬಹಳ ಅವಶ್ಯವೆಂದು ಹೇಳಿದರು.

ಮಿ ಟಾಸ್ಕರವರು ಠರಾವಿಗೆ ವಿರೋಧವಾಗಿ ಹೇಳಿದ್ದೇನೆಂದರೆ—ಠರಾವಿನ ವಿಷಯವನ್ನು ಕಾರಣದಿಂದ ಯೋಚಿಸಬೇಕಾದದ್ದೇ. ಇಲ್ಲಿನ ಎರಡು ಮುಖ್ಯ ಉದ್ಯೋಗಗಳು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಮತ್ತು ಪೊಲೀಸ್ ಡಿಪ್ಯುಟಿ ಸೂಪರಿಂಟೆಂಡೆಂಟ್ ಪದವಿಗಳು ದೇಶದವರ ಕೋರಿಕೆ ಮೇರೆ ಈಗ ದೇಶೀಯರಿಗೆ ಬಿಟ್ಟುಕೊಡಲಾಗಿದೆ. ಉದ್ಯೋಗಸ್ಥರನ್ನು ಆಗಾಗ್ಗೆ ವರ್ಗಾಯಿಸುವ ಪದ್ಧತಿಯು ಪ್ರಪಂಚದಲ್ಲೆಲ್ಲಾ ಇರುವ ಸಂಗತಿಯಾಗಿದೆ ಎಂಬುದು ದೊಡ್ಡ ಮಾತಾಗಿದೆ. ಮದ್ರಾಸಿನಲ್ಲಿ ಜುಡಿಶಿಯಲ್ ಆಫೀಸರುಗಳನ್ನು 3 ವರ್ಷಕ್ಕೊಂದಾವರ್ತಿ ವರ್ಗಾಯಿಸಬೇಕೆಂಬ ರೂಲ್ ಇದೆ. ಆದರೆ ಕೆಲವು ಆಫೀಸರುಗಳನ್ನು ಹಾಗೆ ವರ್ಗಾಯಿಸಬೇಕೆಂಬ ರೂಲ್ ಇಲ್ಲ. ಆದ್ದರಿಂದ ವರ್ಗಾಯಿಸುತ್ತಿರುವದು ಸರ್ವಸಾಧಾರಣವಾಗಿ ಇಲ್ಲ. ಈ ದೇಶವು ಪ್ರತ್ಯೇಕವಾಗಿರುವದರಿಂದ ಆಫೀಸರುಗಳನ್ನು ವರ್ಗಾಯಿಸಲು ಅನುಕೂಲವಿಲ್ಲ. ಆಫೀಸರುಗಳನ್ನು ಬದಲು ಬದಲು ಮಾಡಿಕೊಳ್ಳುವ ಕ್ರಮವು ಸಾಧ್ಯವಲ್ಲ, ಸಾಧ್ಯವೂ ಇಲ್ಲ. ಮದ್ರಾಸ್ ಕಾಡರಿಗೆ (ಪಟ್ಟಿಗೆ) ಸೇರಿಸುವುದು ಒಂದೇ ಸಾಧ್ಯವಾದ ದಾರಿ. ಡಿ. ಪಿ ಡಬ್ಲ್ಯು ಮತ್ತು ಫಾರೆಸ್ಟ್ ಇಲಾಖೆಗಳಲ್ಲಿ ಮದ್ರಾಸ್ ಆಫೀಸರುಗಳನ್ನು ತರುತ್ತಾರೆಂಬ ಉದಾಹರಣೆ ಉಪಯೋಗಿಸಕೂಡದು. ಈ ಇಲಾಖೆಗಳ ಮುಖ್ಯ ಪದವಿಗಳು ದೇಶೀಯರಿಗೆ ಹತ್ತಲು ಅವಕಾಶವಿಲ್ಲ. ರೆವಿನ್ಯೂ ಮತ್ತು ಪೊಲೀಸ್ ಇಲಾಖೆಗಳಲ್ಲಿ ಅವಕಾಶವಿದೆ. ಮದ್ರಾಸ್ ಕಾಡರಿಗೆ ಸೇರಿಸಿದರೆ ಪೆನ್ಷನ್ ಮುಂತಾದ ಲೆಕ್ಕದ ತೊಂದರೆ ತುಂಬಾ ಇರುತ್ತದೆ. ಮದ್ರಾಸಿನಲ್ಲಿ ಈ ದರ್ಜೆಯ ಉದ್ಯೋಗಗಳಿಗೆ ಸಂಬಳ ಹೆಚ್ಚು. ಈ ಠರಾವಿಗೆ ಸಂಬಂಧಪಡುವ ಉದ್ಯೋಗಸ್ಥರಾದ 2 ಸಿವಿಲ್ ಜಡ್ಜಿಗಳು, ಅಸಿಸ್ಟೆಂಟ್ ಕಮಿಷನರ್, ಡಿಪ್ಯುಟಿ ಸೂಪರಿಂಟೆಂಡೆಂಟ್, ಡಿಪ್ಯುಟಿ ಸೂಪರಿಂಟೆಂಡೆಂಟ್—ಈ ಪದವಿಗಳನ್ನು ಮದ್ರಾಸ್ ಪಟ್ಟಿಗೆ ಸೇರಿಸಿದರೆ ಸರಾಸರಿ ವಾರ್ಷಿಕ 7000 ರೂಪಾಯಿ ಖರ್ಚು ಹೆಚ್ಚಾಗುತ್ತದೆ. ಮದ್ರಾಸಿಗೆ ಸೇರಿದ ಮೇಲೆ ಕೊಡಗಿನವರನ್ನು ತೆಗೆದುಕೊಳ್ಳುವುದೆಂಬ ಭರವಸೆ ಇಲ್ಲ. ಮಗುವಾದರೋ ನೇಮಿಸುವ ಅಧಿಕಾರ ಪೂರ್ತಿ ಅವರಲ್ಲಿ ಇದೆ. ಮದ್ರಾಸಿನಿಂದ ಅಧಿಕಾರಿಗಳು ಬಂದರೆ ಭಾಷೆ ಕಲಿಯಲಿಕ್ಕೆ ಅಡಚಣೆಯಾಗುತ್ತದೆ. ಫಾರೆಸ್ಟಿನಲ್ಲಿ ಮದ್ರಾಸಿನಿಂದ ಬರುವ ಆಫೀಸರುಗಳನ್ನು ವಾಪಸು ಕಳುಹಿಸಲು ಕಷ್ಟವಾಗಿದೆ ಎಂದು ಮೆಂಬರುಗಳಿಗೆ ತಿಳಿದಿದೆ. ಮದ್ರಾಸಿನಿಂದ ಬಂದ ಆಫೀಸರುಗಳನ್ನು ವರ್ಗಾವರ್ಗಿ ಮಾಡುವ ಹಕ್ಕು ನಮ್ಮ ಮೇಲಧಿಕಾರಿಗಳಿಗೆ ಇಲ್ಲದ್ದರಿಂದ ಅವರ ನಡತೆಯ ಮೇಲೆ ಹತೋಟಿಯನ್ನು ಇಡಲು ಕಷ್ಟವಾಗುತ್ತದೆ. ಮೊದ

ಪದವಿಗೆ ಹೋಗಬೇಕೆಂಬ ಆಶೆ ಇರುವವರಿಗೆ ಆಶಾಭಂಗವಾಗಬಹುದು. ಆಡಳಿತಕ್ಕೆ ಹೆಚ್ಚು ಸಹಾಯವು ದೊರೆಯುವದಿಲ್ಲ. ಈ ದೇಶದ ರಿವಾಜ್ ಮಾಮೂಲ್ ತಿಳಿಯದವರು ಬಂದರೆ ಕಷ್ಟವಾಗುತ್ತದೆ. ಆಫೀಸರುಗಳನ್ನು ಬದಲಾಯಿಸುತ್ತಿರಬೇಕೆಂತಾದರೆ ಅದನ್ನು ಬಾಬಿನೊಡಲು ಸರಕಾರಕ್ಕೆ ಬಿಡಬೇಕು. ನೆರೆಪ್ರಾಂತ್ಯದ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳುವದನ್ನು ವಿರೋಧಿಸುತ್ತೇನೆ.

ಮಿ. ಪಿ ಶ್ರೀನಿವಾಸರಾಯರು—ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಕೌನ್ಸಿಲ್ ದೊರೆತ ಇಷ್ಟು ಸ್ವಲ್ಪ ಕಾಲದಲ್ಲೇ ಈ ಠರಾವನ್ನು ಯಾಕೆ ತಂದದ್ದು ಎಂದು ಗೊತ್ತಾಗುವುದಿಲ್ಲ. ನಮ್ಮ ದೇಶವು ಪ್ರತ್ಯೇಕವಾದದ್ದಾಗಿ ಪ್ರತ್ಯೇಕ ಚರಿತ್ರೆ ಉಳ್ಳದ್ದಾಗಿದೆ. ಹೊಸ ಸುಧಾರಣೆ ಕೊಡಬೇಕಾದರೆ ಇದನ್ನೆಲ್ಲಾ ಆಲೋಚಿಸಿಯೇ ಕೊಟ್ಟದ್ದಾಗಿದೆ. ಪ್ರತ್ಯೇಕವಾಗಿರಬೇಕಾದರೆ ಕೆಲವು ಅನಾನುಕೂಲಗಳನ್ನು ಪಟ್ಟುಕೊಳ್ಳಲೇ ಬೇಕು. ಈ ಉದ್ಯೋಗಗಳನ್ನು ಮದ್ರಾಸಿಗೆ ಸೇರಿಸುವದೆ ಹೆಚ್ಚು ಖರ್ಚು ಆಗಬೇಕಾಗುತ್ತದೆ. ಒಂದು ಕಾಲದಲ್ಲಿ ದೇಶೀಯರಿಗೇನೇ ಕೆಲಸ ಕೊಡಬೇಕೆಂತ ಜನರು ಸರಕಾರವನ್ನು ಒತ್ತಾಯಪಡಿಸಿದರು. ಈಗ ಆ ಉದ್ಯೋಗಸ್ಥರಿಂದಲೇ ತೊಂದರೆ ಇದೆಯೆನ್ನುತ್ತಾರೆ. ಬೇರೆ ಪ್ರಾಂತ್ಯಗಳಲ್ಲೂ ಆಯಾ ಅಧಿಪತ್ಯದ ಉದ್ಯೋಗಸ್ಥರು ಆಯಾ ಅಧಿಪತ್ಯದಲ್ಲೇ ಇರುತ್ತಾರೆ. ಪ್ರತ್ಯೇಕ ಆಡಳಿತದಲ್ಲಿರಬೇಕಾದರೆ ಈಗ ಇರುವ ಹಾಗೆಯೇ ಇರಬೇಕು. ಮದ್ರಾಸಿನಿಂದ ಆಫೀಸರುಗಳನ್ನು ಎರವು ತೆಗೆದುಕೊಂಡದರಿಂದ ನಮಗೆ ತುಂಬಾ ನಷ್ಟವಾಗಿದೆ. ಮದ್ರಾಸ್ ಆಫೀಸರುಗಳು ಒಂದನೆ ಅವರ ಪೆನ್ಶನ್ ಸಂಬಂಧದ ನಷ್ಟವನ್ನು ನಾವು ಕೊಡಬೇಕಾಗುತ್ತದೆ. ನಮಗೆ ಏನೂ ಪ್ರತಿಫಲ ದೊರಕುವದಿಲ್ಲ. ಪಗಾರ ವರ್ಗದಿಂದ ಒಳ್ಳೇದಾದೀತೆಂತ ಒಪ್ಪುತ್ತೇನೆ. ಆದರೆ ಹಾಗೆ ಮಾಡಿಕೊಳ್ಳುವದು ತುಂಬಾ ಕಷ್ಟವಿದೆ. ಇಂಡಿಯನ್ ಉದ್ಯೋಗಸ್ಥರು ಗಟ್ಟಿಗರಲ್ಲವೆಂದು ಯಾರೂ ಹೇಳಲಾರರು. ಮದ್ರಾಸಿನಲ್ಲಿ ಸರಕಾರಿ ಉದ್ಯೋಗಸ್ಥರು ಚುನಾವಣೆಗಳಲ್ಲಿ ಕೈಹಾಕುತ್ತಾರೆಂತ ಮುಖ್ಯಮಂತ್ರಿಯವರು ಹೇಳಿದರು. ಆದರಿಂದ ಯಾವ ಆಫೀಸರುಗಳು ಆಗಲೀ ದೇಶದ ರಾಜಕೀಯ ಚಳವಳದಲ್ಲಿ ಅಭಿರುಚಿ ತೆಗೆದುಕೊಳ್ಳದೆ ಇರಲು ಸಾಧ್ಯವಿಲ್ಲ. ದೇಶೀಯರಿಗೆ ಉದ್ಯೋಗಗಳನ್ನು ಕೊಡಬೇಕೆಂತ ನಾವೇ ಕೇಳಿ ಈಗಾಗಲೇ ಇವರನ್ನು ವರ್ಗಾಯಿಸಬೇಕೆಂತ ಕೇಳಿದರ ಕಾರಣವೇನು. ಏನು ಹೇಳಿಯಾದರೂ ನಾವು ಪ್ರತ್ಯೇಕ ಪ್ರಾಂತ್ಯವಾಗಿರುವದರಿಂದ ಇರುವ ಕಷ್ಟಗಳನ್ನು ಪ್ರಕಟಿಸಬಾರದು. ಹೀಗಿದ್ದಾ ಒಂದೊಂದೇ ಮದ್ರಾಸಿಗೆ ಸೇರಬೇಕೆಂತ ಕೇಳುವ ಬದಲು ಮದ್ರಾಸಿಗೆ ದೇಶವನ್ನೇ ಸೇರಿಸಬೇಕೆಂತ ಯಾಕೆ ಕೇಳಬಾರದು? ಏನಾದರೂ ಎಕ್ಸ್‌ಪರ್ಟ್‌ಗಳು ಬೇಕಾದರೆ ಮದ್ರಾಸಿನವರಾಗಲೀ ಮೈಸೂರಿನವರಾಗಲೀ ಕೇಳಬೇಕು. ಅವರಿಗೆ ಅನುಕೂಲವಿಲ್ಲದಿದ್ದರೆ [illegible]ವುದಿಲ್ಲ. ಅದ್ದರಿಂದ ಮದ್ರಾಸಿಗೆ ಸೇರಬೇಕೆನ್ನುವದೇ ಉತ್ತಮ. ಈಗಾಗಲೇ ಕೈತರ ಮೇಲೆ ಕಂಡಾಯದ ಹೊರೆ ಹೆಚ್ಚಾಗಿದೆ. ಗಂಧದ ಉತ್ಪತ್ತಿಯೂ ಕಡಿಮೆಯಾಗುತ್ತದೆ. ಹೀಗಿರುವಾಗ ಹೆಚ್ಚಿಗೆ ಸಂಬಳ ಕೊಡಬಹುದೋ? ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲಂಚ ತುಂಬಿಹೋಗಿದೆಯೆಂತ ಮುಸಾಬರವರು ನಮ್ಮಲ್ಲಿ ಹೇಳಿದರು. ಅಂಥಾ ಆಫೀಸರುಗಳು ಈ ದೇಶಕ್ಕೆ ಬಂದರೆ ಕೆಡಕಾಗುತ್ತದೆ. ಪಗಾರವರ್ಗಾಯು ಒಳ್ಳೇದಾದ ಮಾತ್ರಕ್ಕೆ ನಾವು ಅದನ್ನೇ ಅನುಸರಿಸಬಾರದು. ಒಳ್ಳೆಯದರಲ್ಲೂ ಕೆಡುಕು ಇದ್ದೇ ಇದೆ. ಅನ್ಯೋನ್ಯ ತಾಳ್ಮೆಯಿಂದ ಎಲ್ಲವನ್ನೂ ಸರಿಪಡಿಸಿಕೊಂಡು ಹೋಗಬಹುದು. ತತ್ವಕ್ಕೆ ಒಪ್ಪುತ್ತೇನೆ. ಠರಾವಿನ ಸೂಚನೆಗಳಿಗೆ ವಿರೋಧಿಸುತ್ತೇನೆ.

ಮಿ. ಬೋಪಣ್ಣನವರು—ಫೈನಾನ್ಸ್ ಮೆಂಬರೂ, ಮಿ. ಶ್ರೀನಿವಾಸರಾಯರೂ ಚೆನ್ನಾಗಿ ಕಾರಣಗಳನ್ನು ಕೊಟ್ಟು ಠರಾವಿಗೆ ವಿರೋಧಿಸಿರುತ್ತಾರೆ. ವೀರರಾಜಪೇಟೆ ಮೀಟಿಂಗಿನ ವಿಷಯ ಠರಾವು ತಂದವರು ಹೀಗೆ ಹೇಳಿದಕ್ಕೆ ವ್ಯಸನಪಡುತ್ತೇನೆ. ಆ ಮೀಟಿಂಗಿನಲ್ಲಿ ವರ್ಗಾವರ್ಗಿಯ ಅಭಿಪ್ರಾಯವನ್ನು ತುಚ್ಛೀಕರಿಸುವದಕ್ಕಾಗಿ ಅಸಾಧ್ಯವಾದ ಉಪಾಯ ಹೇಳಿದ್ದಾಗಿದೆ. ಇಲ್ಲಿನ ಗಜೆಟೆಡ್ ಆಫೀಸರುಗಳನ್ನೆಲ್ಲಾ ಬೇರೆ ಪ್ರಾಂತ್ಯಗಳಿಗೆ ಕಳುಹಿಸಿ ಆ ಉದ್ಯೋಗಗಳಿಗೆ ದೇಶೀಯರನ್ನು ನೇಮಿಸಬೇಕೆಂತ ಠರಾವು ಮಾಡಿದ್ದಾಗಿದೆ. ಇಂಥಾ ಠರಾವಿಗೆ ಯಾರಾದರೂ ಒಪ್ಪಿಯಾರೋ? ಆ ಮೀಟಿಂಗ್ ಎಲ್ಲಾ ತರದ ಸಮುದಾಯದ ಜನರನ್ನು ಸೇರಿಸಿ ನಡಿಸಿದ್ದಾಗಿದೆ. 'ವರ್ಗಾವರ್ಗಿಯಿಂದ ತುಂಬಾ ಪ್ರಯೋಜನವಿದೆ, ನಮ್ಮ ದೇಶೀಯರು ಮದ್ರಾಸಿಗೆ ಹೋದರೆ ದೊಡ್ಡ ದೊಡ್ಡ ಪದವಿಗಳಿಗೆ ಏರುತ್ತಾರೆಂತ' ಅಲ್ಲಿ ಹೇಳಿ ಜನರನ್ನು ಮರುಳು ಮಾಡುತ್ತಿದ್ದರು. ಅದ್ದರಿಂದ ಆ ಮೀಟಿಂಗಿನಲ್ಲಿದ್ದವರು ಠರಾವಿಗೆ ಒಪ್ಪುವಂತೆ, ನಡಿಸಲು ಸಾಧ್ಯವಿಲ್ಲದ ಠರಾವು ಮಾಡಿಸಿದ್ದಾಗಿದೆ. ಅಲ್ಲಿ ಮಾತಾಡಿದವರು ಕಷ್ಟಗಳಿರುವದನ್ನು ಹೇಳಲೇ ಇಲ್ಲ. ಇಕ್ಕ ಉದ್ಯೋಗ ಮಾಡಿದವರ ಅನುಭವವು ಈಗ ನಮಗೆ ದೊರೆಯುತ್ತದೆ. ಮದ್ರಾಸಿನವರು ಬಂದರೆ ಇದನ್ನು ಕಳಕೊಳ್ಳುತ್ತೇವೆ. ವರ್ಗಾವರ್ಗಿಯ ತತ್ವಕ್ಕೆ ಒಪ್ಪುತ್ತೇನೆ. ಇದು ಸಾಧ್ಯವಿಲ್ಲದ್ದರಿಂದ ಸ್ವಲ್ಪ ತೊಂದರೆಯನ್ನು ಸಹಿಸಿಕೊಳ್ಳಬೇಕು. ಎಗ್ಸಿಕ್ಯುಟಿವ್ ಆಫೀಸರುಗಳನ್ನು ಲೆಜಿಸ್ಲೇಟಿವ್ ಕೌನ್ಸಿಲಿಗೆ ಜವಾಬ್ದಾರರನ್ನಾಗಿ ಮಾಡಿದರೆ ಈ ತೊಂದರೆಗಳು ತಪ್ಪುವವು. ಆದರೆ ಆ ಕಾಲವು ದೂರವಾಗಿದೆ. ಚುನಾವಣೆಯಲ್ಲಿ ಇಲ್ಲಿಯ ಉದ್ಯೋಗಸ್ಥರು ಪಕ್ಷವನ್ನು ವಹಿಸಿಕೊಳ್ಳುವದಿಲ್ಲ. ಆಫೀಸರುಗಳು ತಪ್ಪು ಮಾಡಿದರೆ ಕಮಿಷನರಿಗೆ ದೂರಾರು ಹೇಳಿ ಸರಿಪಡಿಸಿಕೊಳ್ಳಬಹುದು. ಈ ಉದ್ಯೋಗಸ್ಥರ ಪದವಿಯನ್ನು ಮದ್ರಾಸ್ ಪಟ್ಟಿಗೆ ಸೇರಿಸುವುದರಿಂದ ನಮ್ಮ ಯುವಕರ ಸ್ಥಿತಿಯು ಉತ್ತಮವಾಗುವುದಿಲ್ಲ. ಇಂಥಾ ಠರಾವುಗಳಿಂದ ನಮಗೆ ದೊರಕುವ ಹೆಚ್ಚಿನ ಸುಧಾರಣೆಗೆ ಅಡಚಣೆಯಾಗುತ್ತದೆ. ದೇಶದವರಿಂದಲೇ ನಡಿಸುವ ಸರಕಾರ ಬಂದರೆ ಸ್ವರಾಜ್ಯ ಬೇಕೆಂತ ಹೇಳುವವರೇ ಈ ಠರಾವನ್ನು ತಂದದ್ದು ಆಶ್ಚರ್ಯ. ಮದ್ರಾಸ್ ಸರ್ಕಾರದವರಿಗೆ ನಮ್ಮ ದೇಶೀಯರ ಮೇಲೆ ಸಹಾನುಭೂತಿ ಇಲ್ಲದ್ದರಿಂದ ನಮ್ಮ ದೇಶೀಯರಿಗೆ ಕೆಲಸ ದೊರೆಯುವದು ನಂಬಿಕೆ ಇಲ್ಲ. ದೇಶದ ಅಭಿಪ್ರಾಯವು ಈ ಠರಾವಿಗೆ ವಿರೋಧವಿದೆ. ಈ ಠರಾವಿಗೆ ಒತ್ತಾಸೆ ಮಾಡುವವರು ಬರುವ ಚುನಾವಣೆಯಲ್ಲಿ ಜನರ ಓಟು ಪಡೆದರೆ ಜನರ ಅಭಿಪ್ರಾಯ ತಿಳಿಯುತ್ತದೆ ಎಂದು ಹೇಳಿದರು.

ಪಿ. ಸಿ ಎನ್ ವೆಂಕಪ್ಪಯ್ಯನವರು ಠರಾವಿಗೆ ಒತ್ತಾಸೆಯಾಗಿ ಮಾತನಾಡಿದ್ದೇನೆಂದರೆ—ದೇಶದ ಆಡಳಿತದ ಮೇಲೆ ಪ್ರಜೆಗಳಿಗೆ ಇರುವ ನಂಬಿಕೆಯನ್ನು ಹೋಗಲಾಡಿಸಬಾರದು. ಆಫೀಸರುಗಳು ಪಾರ್ಟಿ, ಜಾತಿ ಅಥವಾ ನೆಂಟಸ್ಥಿಕೆ ಮೇರೆ ತೀರ್ಪುಗಳನ್ನು ಕೊಟ್ಟರೆ ದೇಶದ ನಂಬಿಕೆ ಕೆಡುವದು ನಿಶ್ಚಯ. ಅಂಥಾ ನಂಬಿಕೆಯನ್ನು ಉಳಿಸಿಕೊಳ್ಳಲಿಕ್ಕಾಗಿ ವರ್ಷಕ್ಕೆ ಏಳು ಸಾವಿರ ರೂಪಾಯಿ ಮಾತ್ರ ಹೆಚ್ಚಿಗೆ ಖರ್ಚಾದರೆ ದೊಡ್ಡದಲ್ಲ. ಇಂಪೀರಿಯಲ್ ಉದ್ಯೋಗಸ್ಥರಿಗೆ ಹೆಚ್ಚಿಗೆ ಸಂಬಳ ಮಂಜೂರಾದ್ದು ಕೊಡಬೇಕೆಂತ ಮೇಲಿಂದ ಹುಕ್ಕುಂ ಬಂದಾಗ 25000, 30000 ರೂಪಾಯಿ ಏನೂ ಆಕ್ಷೇಪಣೆ ಇಲ್ಲದೆ ಖರ್ಚುಮಾಡುತ್ತಿರಲ್ಲವೇ? ಮದ್ರಾಸಿನಲ್ಲಿ ಒಡಿಷಿಯಲ್ ಆಫೀಸರುಗಳನ್ನು ಮೂರು ವರ್ಷಕ್ಕೊಂದಾವರ್ತಿ ವರ್ಗಾವರ್ಗಿ ಮಾಡತಕ್ಕದೆಂತ ಫೈನಾನ್ಸ್ ಮೆಂಬರು ಒಪ್ಪಿರುವಾಗ ನಮ್ಮ ಠರಾವಿನಲ್ಲಿ 5 ವರ್ಷ ಕೇಳಿದ್ದು ಹೆಚ್ಚಾಯಿತೇ? ರೆವಿನ್ಯೂ ಇಲಾಖೆಯಲ್ಲಿ ವರ್ಗಮಾಡಬೇಕೆಂತ ರೂಲ್ ಇಲ್ಲವೆಂತ ಫೈನಾನ್ಸ್ ಮೆಂಬರು ಹೇಳಿದರು. ರೂಲಿಲ್ಲದಿದ್ದರೂ ಐದು ವರ್ಷಕ್ಕೊಂದಾವರ್ತಿ ವರ್ಗವಾಗದೆ ಇರುವ ಪ್ರಿನ್ಸಿಪಲ್ ಆಫೀಸರು ಒಬ್ಬರಾದರೂ ಮದ್ರಾಸಿನಲ್ಲಿ ಇದ್ದಾರೆಂತ ಫೈನಾನ್ಸ್ ಮೆಂಬರು ತೋರಿಸಿ ಕೊಡಲಿ. ಮದ್ರಾಸಿನ ಮುಖ್ಯಮಂತ್ರಿಯವರೇ ಆಫೀಸರುಗಳೇ ರಾಜಕೀಯ ಚಳವಳದಲ್ಲಿ ಕೈಹಾಕುತ್ತಾರೆಂತ ಹೇಳಿದ್ದರಿಂದ ಈಗರು ಆ ತತ್ವಕ್ಕೆ ಒಪ್ಪಿದರೆಂತ ಯಾರೂ ನಂಬಬಾರದು. ಇಂಥಾ ಅಕ್ರಮವು ನಡೆಯುತ್ತದೆಂತ ಅವರು ಹೇಳಿ ತೋರಿಸಿದ್ದಾಗಿದೆ. ಅಲ್ಲಿನ ಆಫೀಸರುಗಳು ಅಂಥಾ ಅಕ್ರಮ ನಡಿಸಿದರೂ ಐದು ವರ್ಷಕ್ಕೊಂದಾವರ್ತಿ ವರ್ಗವಾಗುವ್ದರಿಂದ ಧೈರ್ಯವು ಪ್ರಜೆಗಳಿಗೆ ಇರುತ್ತದೆ. ಇಲ್ಲಿ ಆಫೀಸರುಗಳು ಎಂಥಾ ಅಕ್ರಮ ಮಾಡಿದರೂ ಅವರ ಅಧಿಕಾರದ ಅಂತ್ಯ ಎಂದು ಬರುತ್ತದೆಯೆಂದು ಪ್ರಜೆಗಳಿಗೆ ಗೊತ್ತಿಲ್ಲ. ಸುಭೇದಾರರಿಂದ ಕ್ರಿಮಿನಲ್ ಪವರ್ ತೆಗೆದದ್ದು ಒಳ್ಳೇದಾಗಿದೆ. ಈ ಮಾರ್ಪಾಡಿಗೆ ದೇಶದವರು ಸರಕಾರಕ್ಕೆ ಕೃತಜ್ಞರಾಗಿದ್ದಾರೆ. ಆದರೆ ಮುಖ್ಯ ಮೆಜಿಸ್ಟ್ರೇಟರಲ್ಲಿ ಎರಡನೇ ಮುಖ್ಯ ಕೆಲಸ್ಸು ಅಧಿಕಾರವು ಇರುವದರಿಂದ ಒಬ್ಬರೇ ಆಫೀಸರು ಬಹುಕಾಲ ಒಂದೇ ಕಡೆ ಇರುವದರಿಂದ ಕೆಡಕಿಗೆ ಎಡೆ ಇದೆ. ಆಫೀಸರುಗಳು ಮಾಡಿದ ತಪ್ಪನ್ನು ಕಮಿಷನರಿಗೆ ತಿಳಿಸಿದರೆ ಚಾಡಿ ಹೇಳುತ್ತಾರೆಂತ ಕಾಣಿಸಿಕೊಳ್ಳುತ್ತಾರೆ. ಕೆಳಗಿನ ಅಧಿಕಾರಿಗಳಿಗೆ ಸ್ವೇಚ್ಛೆಯಿಂದ ತೀರ್ಮಾನ ಮಾಡುವ ಸಂಗತಿಗಳು ಎಷ್ಟೋ ಇವೆ. ಅಂಥಾದ್ದರಲ್ಲಿ ಮೇಲಧಿಕಾರಿಗಳು ಕೈಹಾಕುವದಿಲ್ಲ. ಸಿವಿಲ್ ಜಡ್ಜಿಯವರ ಮೇಲೆಯೇ ಬ್ರಿಟಿಷ್ ಸರಕಾರದ ಭದ್ರತೆಯಿರುವದಾಗಿದೆ. ಸಿವಿಲ್ ಜಡ್ಜಿಯವರು ಜಾತಿ, ಮತ, ಸಂಗಡ, ಸ್ನೇಹ ಮುಂತಾದ ಕಾರಣಗಳಿಂದ ತೀರ್ಪು ಕೊಡುವದಾದರೆ ಬ್ರಿಟಿಷ್ ಕೋರ್ಟಿನಲ್ಲಿ ಜನರಿಗೆ ಇರುವ ನಂಬಿಕೆ ಕೆಟ್ಟುಹೋಗುವುದಿಲ್ಲವೇ? ಹಾಗೆ ನಂಬಿಕೆ ಕೆಟ್ಟ ಮೇಲೆ ಜನರು ಅಂಥಾ ಅಧಿಕಾರಿಗಳ ಮುಂದೆ ತಮ್ಮ ದಾವೆಗಳನ್ನು ತೆಗೆದುಕೊಂಡು ಹೋಗುವುದೇ ಇಲ್ಲ. ಅಪೀಲ್ ಕೋರ್ಟುಗಳು ಮುಖ್ಯ ಆಡಳಿತದ ಆಫೀಸರುಗಳಲ್ಲೇ ಅಡಗಿವೆ. ಅವರು ಕೆಳಕೋರ್ಟುಗಳ ಮೇಲೆ ಡಿಸಿಷನ್ ಕೊಡಬೇಕಾದರೆ ರಾಜಕೀಯ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಹಾಗಿರುವದರಿಂದ ವರ್ಗಾವರ್ಗಿ ಅವಶ್ಯ. ಮದ್ರಾಸಿನಲ್ಲಿ ಲಂಚದ ಪದ್ಧತಿ ತುಂಬಿಹೋಗಿದೆಯೆಂತ ಒಬ್ಬರು ಹೇಳಿದರು. ಅದು ನನಗೆ ಗೊತ್ತಿಲ್ಲ. ಒಂದು ವೇಳೆ ಹಾಗಿದ್ದರೂ ಅಂಥವರು ಬಂದ ಮಾತ್ರಕ್ಕೆ ಈ ದೇಶದಲ್ಲಿ ಲಂಚ ಪದ್ಧತಿಯು ಬೆಳೆಯುವುದಿಲ್ಲ. ಆಫೀಸರುಗಳು ಹಾಗಿದ್ದರೂ ಜನರು ಲಂಚ ಕೊಡುವವರಲ್ಲದಿದ್ದರೆ ಅಂಥಾ ಆಫೀಸರುಗಳು ಜನರಿಂದ ಬುದ್ಧಿಕಲಿತು ಒಳ್ಳೆಯವರಾಗಿ ಹೋಗುತ್ತಾರೆ. ಮದ್ರಾಸಿಗೆ ಸೇರಿದರೆ ದೇಶೀಯ ಯುವಕರಿಗೆ ದೊಡ್ಡ ಉದ್ಯೋಗಗಳಿಗೆ ಏರಲು ಅವಕಾಶವಿಲ್ಲವೆಂತ ಹೇಳುತ್ತಾರೆ. ನಮ್ಮ ಉದ್ಯೋಗಗಳು ಮದ್ರಾಸಿಗೆ ಸೇರದೆ ಇರುವಾಗಲೇ ನಮ್ಮ ಯುವಕರಲ್ಲಿ ಕೆಲವರಿಗೆ ಮದ್ರಾಸಿನಲ್ಲಿ ದೊಡ್ಡ ಪದವಿಗಳು ದೊರಕಿವೆ. 'ಮೊನ್ನೆ ತಾನೇ ಒಬ್ಬರು ಡೆಪ್ಯುಟಿ ಸೂಪರಿಂಟೆಂಡೆಂಟರಾಗಿ ಆರಿಸಲ್ಪಟ್ಟದ್ದು ಎಲ್ಲರಿಗೂ ಗೊತ್ತಿದೆ. ಹೀಗಿರುವಾಗ ನಮ್ಮ ಅಧಿಕಾರಿಗಳು ಮದ್ರಾಸಿಗೆ ಸೇರಿದ ಮೇಲೆ ಆಫೀಸರುಗಳನ್ನು ಚುನಾಯಿಸುವ ಕಮಿಟಿಯಲ್ಲಿ ನಮ್ಮ ಸರಕಾರಕ್ಕೂ ಪ್ರತಿನಿಧಿತ್ವ ಸಿಕ್ಕದೆ ಇರದು. 'ಆಗ ನಮ್ಮ ದೇಶೀಯ ಯುವಕರಿಗೆ ತುಂಬಾ ಎಡೆ ದೊರೆಯುವದರಲ್ಲಿ ಸಂದೇಹವಿಲ್ಲ.' ಈಗ ದೇಶದಲ್ಲಿರುವ ದೊಡ್ಡ ಉದ್ಯೋಗಗಳಿಗೆ ದೇಶೀಯ ಯುವಕರಿಗೆ ಹತ್ತು ವರ್ಷಕ್ಕೆ ಒಂದಾವರ್ತಿಯಾದರೂ ಏರಲು ಎಡೆಸಿಕ್ಕುವದು ಸಂಶಯ. ಮದ್ರಾಸಿಗೆ ಸೇರಿದ ಮೇಲೆ ಬಾಹಿರವಾಗಿಯೂ ಹೆಚ್ಚಿನ ಅವಕಾಶ ಸಿಕ್ಕುವುದರಲ್ಲಿ ಸಂಶಯವಿಲ್ಲ. ಹೀಗೆಲ್ಲಾ ಹೇಳುವದಕ್ಕಿಂತ ಎಲ್ಲಾ ಆಡಳಿತವನ್ನೂ ಮದ್ರಾಸಿಗೆ ಸೇರಿಸಿಬಿಡುವಂತೆ ಕೇಳುವವರೇ ಎಂತ ಒಬ್ಬರು ಹೇಳಿದರು. ಈ ಬೆದರಿಕೆಗೆ ಯಾರೂ ಹೆದರುವಂತಿಲ್ಲ. ದೇಶದವರು ಆ ಅಭಿಪ್ರಾಯಕ್ಕೆ ಇನ್ನೂ ತಯಾರಾಗಿಲ್ಲ. ಆವಶ್ಯವಿದ್ದಾಗ ಅದನ್ನೂ ಕೇಳಲೇ ಬೇಕಾಗುತ್ತದೆ. ವೀರರಾಜಪೇಟೆ ಮೀಟಿಂಗಿನಲ್ಲಿ ಜನರ ಅಭಿಪ್ರಾಯವನ್ನು ತುಚ್ಛೀಕರಿಸಲಿಕ್ಕಾಗಿ ನಡಿಯಲಾರದ ಠರಾವನ್ನು ತಯಾರಿಸಿದ್ದೆಂತ ಮಿ. ಬೋಪಣ್ಣನವರು ಹೇಳಿದರು. ಇವರೇ [illegible] ಠರಾವನ್ನು ತಯಾರಿಸಿದ್ದು. ಠರಾವಿನಲ್ಲಿ ವರ್ಗಾವರ್ಗಿಯಾಗಬೇಕೆಂತ ಬರೆದಿರುವಾಗ ಇವರೆಲ್ಲರೂ ಆ ತತ್ವಕ್ಕೆ ಒಪ್ಪಿದಂತಾಗಲಿಲ್ಲವೇ? ನಡಿಯಲಾರದ ಉಪಾಯ ತೋರಿಸಿ ವರ್ಗಾವರ್ಗಿಯ ಅಭಿಪ್ರಾಯವನ್ನೇ ತುಚ್ಛೀಕಾರಮಾಡಲಿಕ್ಕೆ ವರ್ಗಾವರ್ಗಿ ಬೇಕೆಂತ ಠರಾವಿನಲ್ಲಿ ಬರೆದದ್ದೆಂತ ಹೇಳುವದು [illegible] ಆಲೋಚನೆಯ ಮಾತಾಗಿದೆ. ವರ್ಗಾವರ್ಗಿ ಬೇಕೆಂತ [illegible] ಮೇಲೆ ಅದನ್ನು ಜಾರಿ ಮಾಡುವ ವಿಧಾನವನ್ನು [illegible] ಕೊಡುವದು ಮುಂದಾಳುಗಳ ಕರ್ತವ್ಯವಾಗಿದೆ. [illegible] ಬೇಕೆಂತ ಹೇಳುವವರೇ ಈ ಠರಾವನ್ನು ತಂದದ್ದು ಆ[illegible]ವಾಗಿದೆಯೆಂತ ಮಿ. ಬೋಪಣ್ಣನವರು ಹೇಳಿದರು. ಸ್ವರಾಜ್ಯ ದೊರೆತಾಗ ಅಧಿಕಾರಿಗಳು ದಾರಿ ತಪ್ಪಿ ಹೋದರೆ ಅವರನ್ನು ಶಿಕ್ಷಿಸಿ ಸರಿಪಡಿಸಿಕೊಳ್ಳುವ ಹಕ್ಕು ಜನರ ಪ್ರತಿನಿಧಿಗಳಿಗೆ ಇರುತ್ತದೆ. ಆಗ ಇಂಥಾ ಠರಾವಿನ ಅವಶ್ಯಕತೆ ಇರುವುದಿಲ್ಲ. ಸರಕಾರವು ಜನರ ಪ್ರಯೋಜನಕ್ಕಾಗಿ ಜನರ ಪ್ರತಿನಿಧಿಗಳಿಂದ ಈಗ ನಡಿಸಲ್ಪಡದೆ ಇರುವದರಿಂದಲೇ ಈ ಠರಾವು ಬೇಕಾಗಿದೆ. ಈ ದೊಡ್ಡ ಪದವಿಗಳಿಗೆ ಪ್ರಾಯಹೋದವರನ್ನೇ ನೇಮಿಸಿಕೊಂಡರೆ ಆಗುತ್ತೆಂತ ಯಾರಾದರೂ ಹೇಳಬಹುದು. ಇದು ನ್ಯಾಯವಲ್ಲ. ಎಲ್ಲಾ ಇಲಾಖೆಗಳಲ್ಲೂ ಇರುವ [illegible]ಯ ಹೋದ ಆಫೀಸರಗಳೆಲ್ಲಾ ರಿಟೈರ್ ಆಗುವವರೆಗೆ [illegible]ಗೆ ಯುವಕರು ಕೆಳಗಿನ ದರ್ಜೆಗಳಲ್ಲಿ ಕೊಳೆಯುತ್ತಿರುವದು ಯುಕ್ತವಲ್ಲ. ವರ್ಗಾವರ್ಗಿಯ ತತ್ವಕ್ಕೆ ಫೈನಾನ್ಸ್ [illegible]ವರೇ ಮುಂತಾದ ಎಲ್ಲರೂ ಒಪ್ಪುವದಾದರೆ ಈ ಠರಾವು ಹೇಳುವ ದಾರಿಯೇ ಉತ್ತಮವಾದದ್ದಾಗಿದೆ. ಅದ್ದರಿಂದ ಠರಾವಿಗೆ ಸಂಪೂರ್ಣವಾಗಿ ಒತ್ತಾಸೆ ಕೊಡುತ್ತೇನೆ.

ಪಿ. ಎ. ಬಿ. ಚಂಗಪ್ಪನವರು ಠರಾವಿಗೆ ವಿರೋಧಿಸಿ ಮಾತನಾಡಿದ್ದೇನೆಂದರೆ—ಮದ್ರಾಸಿಗೆ ಸೇರಬೇಕು ಅಥವಾ ಪ್ರತ್ಯೇಕವಾಗಿರಬೇಕು ಎಂಬುದೇ ಈ ಠರಾವಿನ ಉದ್ದೇಶ. ಪ್ರತ್ಯೇಕ [illegible]ದೆ ನ್ಯಾಯಸಿಕ್ಕುವದಿಲ್ಲವೆಂದು ಹೇಳುವದು ಸರಿಯಲ್ಲ. ಈ ಠರಾವಿಗೆ ಒತ್ತಾಸೆ ಮಾಡುವವರು ದೇಶದ ಅಭಿಪ್ರಾಯದಂತೆ ನಡಿಯುತ್ತಾರೆಂದು ಹೇಳಲಿಕ್ಕಾಗುವುದಿಲ್ಲ. [illegible] ಸಂಘವು ದೇಶದ ಪ್ರತಿನಿಧಿ ಸಭೆಯಲ್ಲ. ಅದರಲ್ಲಿ ಕೆಲವರು ಮಾತ್ರ ಇರುತ್ತಾರೆ. ಈ ವರ್ಷ ನಾಪೋಕ್ಲಿನಲ್ಲಿ ನಡೆದ ಕಾನ್ಫರೆನ್ಸಿನಲ್ಲಿ ಹುಡುಗರೇ ಹೆಚ್ಚು ಸೇರಿದ್ದರು. ಅದಕ್ಕೆ [illegible] ಮುಖ್ಯತೆ ಕೊಡಕೂಡದು. ಒಬ್ಬ ಉದ್ಯೋಗಸ್ಥರನ್ನು ವರ್ಗಾಯಿಸುವ ಅಗತ್ಯವಿಲ್ಲ. ರೆವಿನ್ಯೂ ಉದ್ಯೋಗಸ್ಥರಿಗೆ [illegible]ಬಾ ಅನುಭವಬೇಕು. ಜನರೇ ಉದ್ಯೋಗಸ್ಥರಿಗೆ ಲಂಚಕೊಟ್ಟು ಅವರನ್ನು ಕೆಡಿಸುವದರಿಂದ ದೇಶದ ಜನರನ್ನು ತಿದ್ದಿ ಸು[illegible]ಸುವ ಉದ್ಯೋಗಸ್ಥರು ನಮ್ಮ ದಾರಿ ದರ್ಶಕರಾಗಬೇಕು. ಉದ್ಯೋಗಸ್ಥರ ಮನಸ್ಸನ್ನು ಕಡಿಸಲು, ಕೆಲವರು ನಾನಾ[illegible] ಮತ್ತು ಮತ ಸಂಬಂಧ ವಿಷಯಗಳಲ್ಲಿ ಅವರ ಮೇಲೆ ದೂ[illegible] ಹೇಳುವದಾಗಿದೆ. ಇದರಿಂದ ದೇಶವನ್ನು ಕಡಿಸಿ ಬಿಟ್ಟಿ[illegible]ರೆ ಮೈಸೂರಿನಲ್ಲಿ ಅಲ್ಲಿಯವರಿಗೇನೇ (ಡಾಮಿಸೈ[illegible]ಗೇನೇ) ದೊಡ್ಡ ಉದ್ಯೋಗ ಕೊಡುತ್ತಾರೆ. ನಮಗೆ [illegible] ಪೂರ್ಣ ಅಧಿಕಾರವು ಮಾತ್ರ ಕೊಡಿಸಿದರೆ ಬೇಕಾಗಿದೆ. [illegible]ದು ಭಾಗವನ್ನು ಮಾತ್ರ ವರ್ಗಾಯಿಸಲು ಸಾಧ್ಯವಿಲ್ಲ. [illegible]ನ ಸುಧಾರಣೆ ಸಿಕ್ಕಿದಾಗ ನಾವು ಬೇರೆ ಪ್ರಾಂತ್ಯಕ್ಕೆ [illegible]ನ್ನು ಉಳಿಸಿಕೊಂಡು ಸೇರಬಹುದು. ನಾವೆಲ್ಲರೂ [illegible]ಬ್ಬಾಗಿ ಹೆಚ್ಚಿನ ಸುಧಾರಣೆಗೆ ಹೋರಾಡುವ.

ಮಿ ಟಿ ಭಾಸ್ಕರವರು—ಆಫೀಸರುಗಳು ಪಾರ್ಟಿ ಪಕ್ಷ[illegible]ಡು ನ್ಯಾಯತಪ್ಪಿ ನಡೆಯುತ್ತಾರೆಂತ ನನಗೆ ಈ ವರೆಗೆ [illegible]ತು ಮೂಲಕ ಬಂದಿರುವದಿಲ್ಲ. ಪತ್ರಿಕೆಗಳಲ್ಲಿ ಸ್ಪೆಸಿಫಿಕ್[illegible] ಬರಹಗಳಿದ್ದರೆ ಅಂಥವಕ್ಕೆ ಗಮನ ಕೊಡಲಿಕ್ಕಾಗುವದಿಲ್ಲ. [illegible]ರದ ಮೂಲಕ ಆಫೀಸರುಗಳಿಂದ ನಡಿಯುವ ಅಕ್ರಮಗಳನ್ನು ತಿಳಿಸಿಕೊಟ್ಟರೆ ವಿಚಾರಿಸಲು ತಯಾರಿದ್ದೇನೆ. ಆಫೀಸರುಗಳೇ ಪಕ್ಷಪಾತದ ಕೆಲಸ ಮಾಡುತ್ತಿದ್ದಾರೋ, ಆಫೀಸರವರ ಮೇಲೆ ಆಕ್ಷೇಪಿಸುವವರೇ ತಮ್ಮ ಪಕ್ಷಪಾತದ ದೃಷ್ಟಿಯಿಂದ ನೋಡುತ್ತಾರೋ ಎಂಬುದನ್ನು ಅವರೇ ನೋಡಿ[illegible] ಬೇಕಾಗಿದೆ, ಎಂತ ಜವಾಬು ಕೊಟ್ಟರು.

ಠರಾವನ್ನು ಓಟಿಗೆ ಹಾಕಲಾಗಿ ಮೆ. ರಾ. ಶ್ರೀ [illegible] ಬಾಳ್ಳು ಕಾಳಪ್ಪನವರು, ಕೆ. ಪಿ. ಚಿನ್ನಪ್ಪನವರು, ಪಿ. ಟಿ [illegible] ಕಾಳಪ್ಪನವರು, ಎಂ ಎಂ. ಚಿನ್ನಪ್ಪನವರು, ಸುಬ್ಬಯ್ಯನವರು, ವೆಂಕಪ್ಪಯ್ಯನವರು, ಬೆಳ್ಯಪ್ಪನವರು ಮತ್ತು ಮಂದಣ್ಣನವರು, (8) ಪರವಾಗಿಯೂ ಯಾವ ಕಡೆಗೂ ಓಟು ಕೊಡದೆ ಮಿ. ಶ್ರೀನಿವಾಸರಾಯರು ವಿನಹ ಉಳಿದ 11 ಜನರು (4 ಉದ್ಯೋಗಸ್ಥರು ಸೇರಿ) ಠರಾವಿಗೆ ವಿರೋಧವಾಗಿಯೂ [illegible] ಮಾಡಿದ್ದರಿಂದ ಠರಾವು ಮಂಜೂರಾಗಲಿಲ್ಲ.

117. "ಸ್ವಂತ ಜಾಗಗಳಿಂದ ಕಡಿದ ಗಂಧದ ಬೆಲೆಯ ಶೇಕಡ 75ರಷ್ಟು ಮೊಬಲಗನ್ನು ಭೂಮಾಲೀಕರಿಗೆ ಕೊಡುವ ಏರ್ಪಾಡು ಮಾಡಬೇಕು," ಎಂಬ ಠರಾವನ್ನು ಮಿ. ಸುಬ್ಬಯ್ಯನವರು ಸೂಚಿಸಿ ಹೇಳಿದ್ದೇನೆಂದರೆ—ಈ ಠರಾವಿನ ತತ್ವ[illegible]ನೇ [illegible] ಜಾರಿಸಲ್ಪಟ್ಟಿದೆ. ಈ ಠರಾವಿನ [illegible] ಆ ಠರಾವನ್ನು ಜಾರಿಗೆ ತರಬೇಕೆಂತ ಕೇಳುವ [illegible] ಅತ್ಯವಶ್ಯಕರವಾಗಿತ್ತು. ಈಗ ಕೇಳಬಹುದಾದ ಗಂಧ[illegible]

ಮಾರಾಟಕ್ಕೆ.

ಮಡಿಕೇರಿ ಸುಂಕದಕಟ್ಟೆಗೆ ಸಮೀಪ ಮಂಗಳೂರು ರಸ್ತೆ ಬದಿಯಲ್ಲಿ ಇರುವ ಸ್ವಲ್ಪ ಬಾಗಸ್ಥಳ ಕರ್ಣಂಗೇರಿ ಗ್ರಾಮದ ಸ ನಂ 485/11 ರ 21—18 ಏಕರೆಸ 11—4—0 ಕಂದಾಯದ ಕುಂದಿನ ... ಮತ್ತು ಸ ನಂ 485, 2ರ 30 ಏಕರೆಸ 2—13—0 ಕಂದಾಯದ ... ಇದೆ ಇದಕ್ಕೆ ಕ್ರಯ ರೂ 600—0—0 ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಂಡಬಹುದು ಬೇಕಾದವರ ... ಬರೆದುಕೊಳ್ಳಬೇಕು

'N" C/o Manager
'Kodagu' Mercara

4—2 ಮಡಿಕೇರಿ, ಮ್ಯಾನೇಜರ್, 'ಕೊಡಗು'
ತಾ 2—11—1926 ಮೂಲಕ ಎನ್ ರವರಿಗೆ

ಪತ್ರವ್ಯವಹಾರ

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಬಾಧ್ಯರಲ್ಲ ಸಂ.]

[illegible]

COORG FOREST DEPARTMENT, SOUTH DIVISION.

TIMBER SALE NOTICE.

Mercara the 12th November 1926

It is notified that about 20,000 c ft of Teak, 1 500 c ft of Biti 10 000 c ft of Matti and 3000 c ft of Nandi lying in the Coorg Timber Depot at Hunsur, will be sold by public auction in convenient lots of about 500 c ft at Hunsur on 2nd December 1926 commencing at 10 A M. All the timber is open to inspect on For further particulars apply to the

DIVISIONAL FOREST OFFICER, SOUTH COORG, MERCARA

[illegible]

ನೋಟೀಸ್.

ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುತನಕ್ಕೆ ಉಮೇದುವಾರರ ... ಮತ್ತು ಚುನಾವಣೆಗೆ ... ಮೂಲಕ ಸರ್ವರಿಗೂ ತಿಳಿಸಲಾಗಿದೆ

ಉಮೇದುವಾರರ ನೇಮಕದ ಅರ್ಜಿ

ಕಳುಹಿಸತಕ್ಕ ತಾರೀಕು. 29—11—1926 ರೊಳಗ,

ಸದರಿ ಅರ್ಜಿಗಳನ್ನು ಪರಿಶೀಲಿಸುವು

ದು 30—11—1926 ರಲ್ಲಿ.

ಉಮೇದುವಾರರುಗಳ ಪಟ್ಟಿಯ ಪ

ಟ್ಟಿಯನ್ನು ಪ್ರಕಟಿಸುವುದು 5—12—1926 ರೊಳಗ,

ಚುನಾವಣೆ ತಾರೀಕು. 20—12—1926

ಮಡಿಕೇರಿ, ಟಿ. ಜಿ. ಟಾಮ್ಸನ್,
ತಾ. 29—10—26. ಪ್ರೆಸಿಡೆಂಟರು,
ಡಿಸ್ಟ್ರಿಕ್ಟ್ ಬೋರ್ಡು.

[illegible]

"ದೂರದ ದೃಷ್ಟಿ

ಮಡಿಕೇರಿ ಮಿನಿಟುಗಳು.

ತಾರೀಕು 8—11—26 ರಲ್ಲು ...

[illegible]

"ಹಾಜರಿದ್ದವ

ನಾಪೋಕ್ಲು ನಾಡು ಓಟರುಗಳಲ್ಲಿ ವಿಜ್ಞಾಪನೆ.

ಮಹಾಸ್ವಾಮಿಯರೇ,

[illegible]

ನಾಪೋಕ್ಲು, ನಿಮ್ಮ ಸೇವಕ,
ತಾ. 10—11—26. ಅರೆಯಡ ಸುಬ್ಬಯ್ಯ

5—2

ಕುಯ್ಯಂಗೇರಿನಾಡು ಸಹಕಾರ ಯೂನಿಯನ್.

ಅಯ್ಯಾ,

ಸಹಕಾರ ಸಂಘಗಳ ರಿಜಿಸ್ಟ್ರಾರವರ ಅಭಿಪ್ರಾಯದ ಮೇರೆ ಭಾಗಮಂಡಲ ಸರ್ಕಲಿನ ಸಹಕಾರ ಸಂಘಗಳ ಸೂಪರ್ ವೈಸರವರು ಕುಯ್ಯಂಗೇರಿ ನಾಡಿನವರ ಮೀಟಿಂಗೊಂದನ್ನು ಈ ತಾ 7ರಲ್ಲಿ ಪಾಲೂರು ದೇವಸ್ಥಾನದಲ್ಲಿ ನಡೆಸಿದರು. ಹ ದಿಮೂರು ಸಂಘಗಳ ಪ್ರತಿನಿಧಿಗಳು ಸಭೆಯಲ್ಲಿ ನೆರೆದಿದ್ದರು. ಸಭಿಕರ ಅಪೇಕ್ಷೆ ಮೇರೆ ಮ. ಚಾರಿರ ಅಪ್ಪಯ್ಯನವರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ಯೂನಿಯನಿನ ಉಪನಿಬಂಧನೆಗಳು ಓದಿ ಹೇಳಲ್ಪಟ್ಟು ಯೂನಿಯನಿನ ಮೂಲಕಾಕ್ತವು ಏರಪಡಲ್ಪಟ್ಟಿತು. ನಂತರ ಮ. ಚಾರಿರ ಅಪ್ಪಯ್ಯನವರನ್ನು ಯೂನಿಯನಿನ ಪ್ರೆಸಿಡೆಂಟರಾಗಿಯೂ, ಮ. ಕುಟ್ಟೇಟಿರ ಗಣಪತಿಯವರನ್ನು ವೈಸ್ ಪ್ರೆಸಿಡೆಂಟರಾಗಿಯೂ, ಮ. ಕಲ್ಯಂಡ ಅಪ್ಪಯ್ಯನವರನ್ನು ಸೆಕ್ರಟರಿಯಾಗಿಯೂ, ಮ. ಮುಂಡಾಂಡಿರ ನ ಚ್ಚಯ್ಯನವರು, ಮ. ಪಾಲಂದಿರ ಬೋಪ್ಪಯ್ಯನವರು, ಮ. ಐಯ್ಯಣ್ಣರ ವೆಂಕಟ ಕೃಷ್ಣಯ್ಯನವರು ಮತ್ತು ಮ. ಚಾರಿರ ಪೂವಯ್ಯನವರು – ಇವರು ನಾಲ್ವರನ್ನು ಕಮಿಟಿ ಮೆಂಬರುಗಳಾಗಿಯೂ ಚುನಾಯಿಸಿದರು. ಆನ ಧರ್ ಸ್ವರಾದ ಪ್ರೆಸಿಡೆಂಟರು ಕಮಿಟಿ ಮೆಂಬರುಗಳ ಸಹಾಯದಿಂದ ಈ ಯೂನಿಯನನ್ನು ಜಯಪ್ರದವಾಗಿ ನಡೆಸುವರೆಂದು ನಂಬುತ್ತೇನೆ

"ಹಾಜರಿದ್ದವ"

ಟೋಕರ ಫಂಡ್ ಸ್ಕೂಲುಗಳ ಪಂಚಾಯಿತದಾರರು.

ಅಯ್ಯಾ,

ಈ ವಿಷಯ ಮ. ಎ. ಕಾರ್ಯಪ್ಪನವರು ತಾರೀಕು 21–10–'26ರ "ಕೊಡಗು" ಪತ್ರಿಕೆಯಲ್ಲಿ ಬರೆದ ಚಾಕ್ಕಿಯನ್ನು ಓದಿನೋಡಬೇಕಾಗಿ ನಗೆ ಬಂತು. ಕಾರ್ಯಪ್ಪನವರೇ, ನಿಮಗೆ ಕೊಟ್ಟ ಪುರುಸಾಯುಷ್ಯದ ಸಬ್ಸಿದು ನಿಮಗೆ ಈಗ ತಾನೇ ತಿಳಿಯಬಂತೇ? ಈ ಸಬ್ಸಿದು ನಮಗೆ ದೊರೆಯ ಬೇಕೆಂದು ನೀವು ಎಲ್ಲಿದ್ದಿರಿ? ನಿಮ್ಮ ಅಭಿಪ್ರಾಯದ ಪ್ರಕಾರ ವೃದ್ಧರು ಯಾವ ಕೆಲಸವನ್ನೂ ಕೈ ಕೊಳ್ಳಬಾರದೆಂದಾಯಿತಲ್ಲವೇ? ಬರುವ ಚುನಾವಣೆಗಳಲ್ಲಿಯೂ ಯುವಕರೇ ಉಮೇದುವಾರರಾಗಿ ನಿಲ್ಲಬೇಕೋ? ಹಾಗಾದರೆ ನೀವು ವೃದ್ಧರನ್ನೆಲ್ಲಾ ಹಿಂದಕ್ಕೆ ನಿಲ್ಲಿಸಲು ಯುಕ್ತಿ ಮಾಡಿರಾ? ಹೀಗಾಗಿಯೇ ವೃದ್ಧ–ಯುವಕ, ಕೊಡವ ಸ್ತ್ರೀ–ಕೊಡವ ಪುರುಷರ ಪಕ್ಷ, ರಾಜಕೀಯ ಪಕ್ಷ–ಬ್ರಹ್ಮ ಸಮಾಜ, ಐಕ್ಯ ಸಂಘ–ಜಾತಿ ಎಂಬ ನಾನಾ ತರಹದ ಒಡಕುಗಳು ದೇಶದಲ್ಲಿ ಹುಟ್ಟಿ ಕೊಡಗು ದೇಶವು ಕೆಡುತ್ತಿರುವುದು. ಯುವಕರಾಗಿ ವೃದ್ಧರಾಗುವರೇ ಹೊರತು, ವೃದ್ಧರಾಗಿ ಯುವಕರಾಗುವುದಿಲ್ಲ. ಯಾವಾಗ ಆಗಬೇಕೋ ಅಂದು ದಿನ ಯುವಕರು ನಮ್ಮ ಜೊತೆಗೆ ಬರುವರೇ ಹೊರತು ನಾವು ಯುವಕರ ಹಿಂದೆ ಹೋಗುವುದಿಲ್ಲ.

ವೃದ್ಧ ಪಂಚಾಯಿತಿ ಮಂಡಲಿಗಳಿರುವ ಶಾಲೆಗಳನ್ನು ನೀವು ಎಷ್ಟು ಸಲ ನೋಡಿದ್ದೀರಿ? ಅಲ್ಲಿ ತಂದೆ ಕುಂದು ಕೊರತೆಗಳೇನು? ಅಲ್ಲಿ ನಿಮ್ಮ ಒಂದು ಒಳಗೆಡವರ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿವೆ? ಕೆಲಸವನ್ನು ಚೆನ್ನಾಗಿ ನಡೆಸ ಬೇಕಾದ ವೃದ್ಧರೇ ಆಗಲಿ, ಯುವಕರೇ ಆಗಲಿ ಅನುಭವದ ದಕ್ಷರಿಲ್ಲ. ಚೆನ್ನಾಗಿ ಕೆಲಸ ನಡೆಸುವವರಿಂದಲೇ ಪಂಚಾಯಿತಿ ನಡೆಯುವದು ಕಷ್ಟವಾಗಿಲ್ಲ. ಅವರ ಕೈ ಅವಶ್ಯ ಕಾರ್ಯ ಇಲಾಖೆಯವರಿಗೆ ಚೆನ್ನಾಗಿ ಗೊತ್ತಿದೆ. ಸಿ ಸ್ಕೂಲು ಪಂಚಾಯಿತದಾರರಾಗಿಯೇ ಕೆಲವಿದ್ದರೆ ಶಾಲೆಯ ವಿಷಯದಲ್ಲಿ ಆಗುವ ಅನುಭವಗಳೂ ಹೆಚ್ಚು ಉತ್ಸಾಹ ಉಳ್ಳವರಾಗಿರಿ. ನಿಮ್ಮ ಸಂಪೂರ್ಣ ಹೆಸರನ್ನು ಯಾಕೆ ಪ್ರಕಟಿಸಲಿಲ್ಲ? ನಿಮಗೆ ವೃದ್ಧ ಪಂಚಾಯಿತರ ಹೆದರಿಕೆ ಇದೆಯೋ ಏನು?

ವೃದ್ಧ ಪಂಚಾಯಿತರು.

EMPIRE OF INDIA LIFE ASSURANCE CO. LTD.

(Established 1897.)

ALL WITH PROFIT POLICIES

Issued before 28th February, 1927 will share in the BONUS Distribution for the five years ending on that date.

PROSPECTUS ON APPLICATION

Bangalore Branch — Madras Branch
152 Commercial Street — 9 & 10 Second Line Beach

C K Chengappa,
Special Agent, Riverside Estate,
24–16 — Siddapur.

ರಣಧೀರ

ತಲೆಶೂಲೆ, ಮಲೇರಿಯ ಜ್ವರ, ಇನ್‌ಫ್ಲುಯೆಂಜಾ ಆದಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧ.

ಬೆಲೆ ಬಾಟ್ಲೊಂದಕ್ಕೆ ರು. ೦–೧೨–೦
ಟಪ್ಪಾಲು ಚಾರ್ಜು ಬೇರೆ

ಇಂಡೋ ಬಾನಸ್.

ಗ್ರಂಥಿವಾತ, ತಲೆಶೂಲೆ, ಸೊಂಟನೋವು, ಉಳುಕು, ಕೀಲುಬೇನೆ ಮೊದಲಾದವುಗಳ ಮೇಲೆ ಪ್ರತ್ಯಕ್ಷ ಫಲವಾದ ಔಷಧ. ಬೆಲೆ ೧೦ ಆಣೆ. ಟಪ್ಪಾಲುವೆಚ್ಚ ಬೇರೆ

12–12 — ಕಾರ್ಲೇಕರ್ ಬ್ರದರ್ಸ್, ಗಿರಗಾಂವ, ಮುಂಬಾಯಿ

ಸ್ಪಿರಿಟ್‌ಸ್ಟೋವ್ ಎಂಬ ಅಡಿಗೆಮಾಡುವ ಒಲೆ.



ಇವುಗಳನ್ನು ಪ್ರತಿಯೊಬ್ಬನೂ ಉಪಯೋಗಿಸುವುದರಿಂದ ಅನುಕೂಲವಾಗುವುದು. ಇದರಲ್ಲಿ ಬೆಂಕಿ ಹಾಕುವ ಅವಶ್ಯವಿಲ್ಲ. ಸ್ಪಿರಿಟ್ ಹಾಕಿ ಒಲೆ ಉರಿಸುವುದರಿಂದ ಹೊಗೆ ಬರುವುದಿಲ್ಲ. ಇದರಿಂದ ಯಾವ ತೊಂದರೆಯೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಉಪಯೋಗಿಸಬಹುದು. ಇದರಲ್ಲಿ ಎಷ್ಟು ಬೇಕಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. ಕ್ರಯ 1ಕ್ಕೆ ರೂ 3–0–0.

52–46 — ವಿಳಾಸ —ಟಿ ಪಾಪಾ ಕಂಪೆನಿ, 16 ತಿರುವಳ್ಳ ಬೀದಿ, ಮದರಾಸು.

Apply for our shooting Season's Clearance Sale Catalogue of Brand New Goods

10 to 25 percent Reductions in Prices.

No License Required !! — No License Required



Webley and Scott Air Pistol, cal 177 or 22, bore Powerful and Accurate, complete with a sample box of slugs, two spare washers, a brush forcleaning, and a bookletof instructions Rs 30/- Free delivery.

Powerful German Diana Air gun Handsome and Accurate, takes B S A Patern No 1 Slugs and Darts expressly recommendable for Target Practice Rs 15/ Free delivery

Brilliant Search Light Lamp for Night Sports Rs 30/- Free delivery

No License required to purchase or to possess the above items.

Reliable D B B L 12 bore guns		Rs. 60/- and upwards.	
Do S. B B L. 12	do	do. 40/-	do.
D B. M L. Guns		" 45/-	do.
S B. M L. do		" 30/-	do.
S. B. B L Rifles		" 25/-	do.
B L. Revolvers and Pistols		" 30/-	do.

Arms, Ammunition and shooting requisitesof almost every kind and quality offered at exceptionally favourable rates. ANumber of good quality second hand weapons also offered for sale in theNew Catalogue.

GOOLAMHUSIAIN ALLIBHOY & SONS

Largest Importers of Firearms and Ammunition Cheapest priced firm in India,

24. 16 — 210 Abdul RemanStreet, BOMBAY.

ಅಮೇರಿಕನ್ ಎಲೆಕ್ಟ್ರಿಕ್ ಲೈಟ್ ಎಂಬ ವಿದ್ಯುಚ್ಛಕ್ತಿಯ ದೀಪ.

ಈ ದೀಪಗಳು ಅಮೇರಿಕಾ ದೇಶದಲ್ಲಿ ತಯಾರಾದವು. ಇವನ್ನು ಉಪಯೋಗಿಸಲಿಕ್ಕೆ ಬೆಂಕಿಕಡ್ಡಿ ಎಣ್ಣೆ ಯಾವುದೂ ಬೇಕಿಲ್ಲ. ಇದರ ಮಧ್ಯದಲ್ಲಿರುವ ಗುಂಡಿಯನ್ನು ಅದುಮಿದರೆ ತಕ್ಷಣವೇ ಬೆಳಕು ಉರಿಯುವದು. ಬೆಂಗಳೂರು, ಮೈಸೂರು, ಮದರಾಸು, ಬೊಂಬಾಯಿ ಮುಂತಾದ ಪಟ್ಟಣಗಳಲ್ಲಿ ಇರುವ ವಿದ್ಯುಚ್ಛಕ್ತಿಯ ದೀಪಗಳಂತೆಯೇ ಇರುವವು. ಬೇಕಾದಾಗ ಉಪಯೋಗಿಸಿ, ಇದನ್ನು ಜೇಬಿನಲ್ಲಿಟ್ಟುಕೊಳ್ಳಬಹುದು. ರಾತ್ರಿಯಲ್ಲಿ ಸಂಚರಿಸುವವರಿಗೂ ಮತ್ತು ಇತರರಿಗೂ ಬಹು ಪ್ರಯೋಜನವಾದವು. ಕ್ರಯ ಬ್ಯಾಟರಿ ಸಹಿತ 1ಕ್ಕೆ ರೂ. 3–0–0

ವಿಳಾಸ:—ಬ್ರಿಟಿಷ್ ಟ್ರೇಡಿಂಗ್ ಕಂಪೆನಿ,

52–46 — ಪೋಸ್ಟ್ ಬಾಕ್ಸ್ P. B. No. 1223, ಮದರಾಸು.

"ನಾಕರಿ ಖರಾರು ಫಾರಮುಗಳು."

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ, ಯುರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನಾಕರಿ ಖರಾರು ಫಾರಮುಗಳು ಇಂಗ್ಲೀಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಪೋಲೀಸಿನವರು ಕಟ್ಟಿದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡು ಕೊಳ್ಳಬಹುದು

ತಾ24–6–'26 — ಮೇನೇಜರ್,
ಮಡಿಕೇರಿ, — "ಕೊಡಗು" ಆಫೀಸು.

ನೋಟೀಸು.

ಈ ಕೆಳಗಿನ ಹೆಸರಿನವರು 'ಕೊಡಗು' ಪತ್ರಿಕೆಯ ಚಂದಾ ವಸೂಲು, ಜಾಹಿರಾತು ಮುಂತಾದ ಒಪ್ಪಿಕೊಂಡಿರುವ ಹಣ ವನ್ನು ಕೊಡುವ ಕೆಲಸವನ್ನು ನಮ್ಮ ಏಜೆಂಟರು ಮ. ಚುಗುಡ ಕಾರ್ಯಪ್ಪನವರ ಒಬ್ಬರೊಡನೆ ಮಾತ್ರವೇ ಮಾಡಬೇಕಾಗಿದೆ. ದಯವಿಟ್ಟು ಪಂಚಾಯಿತರುಗಳೂ ಅವರಿಗೆ ಸಹಾಯ ಒದಗಿಸ ಬೇಕಾಗಿರುವುದಲ್ಲದೆ ಬಾಕಿ ಹಣವನ್ನು ಕಳುಹಿಸಬೇಕಾಗಿ ಕೋರುತ್ತೇವೆ.

ಏಜೆಂಟರುಗಳು.

ವೀರರಾಜಪೇಟೆ—ಬಾಳಿ ಧುಮಾಡದಲ್ಲಿ ಮ. ಐಚೆಟ್ಟಿರ ಅಪ್ಪಯ್ಯನವರು.

ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮ. ಪಿ. ಪಿ. ಯಂಡ ಬೆಳ್ಳಿಯ್ಯನವರು.

ನಾಪೋಕ್ಲು—ಮ. ಅಪ್ಪಚ್ಚು ಸುಬ್ಬಯ್ಯನವರು.

ಮ. ಪೊನ್ನಚೆಂಡ ಸುಬ್ಬಯ್ಯನವರು.

ಗೋಣಿಕೊಪ್ಪಲು—ಮ. ಐಮ್ಮುಡ ನಂಜಪ್ಪನವರು.

ಹುದಿಕೇರಿ—ಮ. ಪಿ. ದೇವಪ್ಪಯ್ಯನವರು.

ಅಮ್ಮತ್ತಿ ಸಿದ್ದಾಪುರ—ಮ. ಬಿಸಂಡ ಮಾದಪ್ಪನವರ.

" ಮತ್ತು ವೀರರಾಜಪೇಟೆ—ಮ. ಕಳಮಂಡ ಬೆಳ್ಳಿಯಪ್ಪನವರು.

ಮಡಿಕೇರಿ–ಪ. ಟಿ. [illegible] —ಮ. ಬಲ್ಲಾರಂಡ ಅಪ್ಪಯ್ಯನವರು.

ಪೊನ್ನಂಪೇಟೆ—ಮ. ಪಿ. ಜಿ. ಮುತ್ತಪ್ಪಯ್ಯನವರು.

ಶ್ರೀಮಂಗಲನಾಡು—ಮ. ಐಟ್ಟಿರ ಚಂಗಪ್ಪನವರು.

ಅಲ್ಲದೆ ಈ ಸಮ್ಮಂಧ ಮ. ಚಂಗಪ್ಪ ಕುಕ್ಕೇರ ನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂಚರಿಸುವಾದ ಮತ್ತು ತ್ತಿರುವಾಗ ಅವರಿಗೂ ಸಹ ಹಣವನ್ನು ಕೊಡಬೇಕಾಗಿ ಕೋರಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್.

ಕಿರ್ಲೋಸ್ಕರ

ಕಬ್ಬಿನ ತಗಡಿನ ಕುರ್ಚಿಗಳು.

(ಪೇಟಂಟು)

ಇವುಗಳ ಮುಖ್ಯ ಗುಣವೇನೆಂದರೆ:—

(೧) ಬೆಲೆಯಲ್ಲಿ ಅಗ್ಗ.

(೨) ಕೂಡುವವರಿಗೆ ಆರಾಮು.

(೩) ಬಾಳಿಕೆಯಲ್ಲಿ ಗಟ್ಟಿ.

(೪) ತಗಣಿಗಳು ಸೇರುವದಿಲ್ಲ.

(೫) ಎತ್ತೊಯ್ಯಲಿಕ್ಕೆ ಬರುವಷ್ಟು ಹಗುರ

ಇತ್ಯಾದಿ.

ಕೆಲಸಕ್ಕೆ ಹೊಂದುವಂಥ ಯಾವದೇ ಕುರ್ಚಿಯ ನಮೂನೆಗಿಂತಲೂ ಈ ಕುರ್ಚಿಯು ಎಲ್ಲ ರೀತಿಯಿಂದ ಮೇಲು ಇರುತ್ತದೆ

ವಿಸ್ತೃತ ಸಂಗತಿಯು ಬಗ್ಗೆ ಬರೆದು ತಿಳಿದುಕೊಳ್ಳಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.

ಕಿರ್ಲೋಸ್ಕರವಾಡಿ,

16—9 ಜಿ. ಸಾತಾರ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಒಪ್ಪೊಂದ ಠೇವಣಾತಿ	—	1 08,9-7

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೆ ಸಾಲಕೊಡತಕ್ಕದ್ದು.

ಒಂದು ವರ್ಷ ಮಾಯಿದೆ ಆದವ ಹೆಚ್ಚಿನ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಚಲಿತ ಮಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೂರ್ಗ ಸರ್ಕಾರ್ ಅಡಿಟರ್ ಲೆಕ್ಕ ಆಡಿಟ್ ಮಾಡುತ್ತಾರೆ

ಪ್ರೆಸಿಡೆಂಟರು,	ಟ್ರೆಜರರ್.
ಕೊಪಂಡೆರ ಕುಟ್ಟಯ್ಯನವರು,	ಕೆ. ದೇವಯ್ಯನವರು
ರಾಯ್ ಬಹದ್ದೂರ್.	ರಾವ್‌ಸಾಹೇಬ್.

ಸೆಕ್ರೆಟರಿ

ಸಿ. ಎಸ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್.

ತಾರೀಕು 1—7—1926.

ಒಂದು ಪ್ರಬಲವಾದ ಪ್ರಶ್ನೆ.

ನಿಮ್ಮ ಜೀವವನ್ನು ನಿತ್ಯವಾಗಿ ವಿಮೆ ಮಾಡಬೇಕು!

ವೃದ್ಧಾಪ್ಯದಲ್ಲಿ ನಿಮ್ಮ ಮತ್ತು ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆ ಮಾಡಿರುವ ಐದು ಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆ ಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆ ಮಾಡುವವರಿಗೆ ವರ್ಷಕ್ಕೆ 15ರೂ. ಕಡಿಮೆ ಯಿಲ್ಲದೆ ಲಾಭ ಕೊಡುವ 'ಓರಿಯೆಂಟಲ್' ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಕಂಪೆನಿಯ ಕಾಗದಗಳು, ಕರಪತ್ರಗಳು ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯನ್ನು ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಾದ್ದೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಸೀರೆಗಳು ಪಂಚೆಗಳು, ಶಾಲು ವಗೈರೆ ಎಲ್ಲಾ ತರದ ಬಟ್ಟೆಯೂ ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷವೆಂಬುದನ್ನು ಮರೆಯಬೇಡಿರಿ.

ವೀರರಾಜಪೇಟೆ,	ಕೆ. ಪಿ. ಚಿಣ್ಣಪ್ಪ,
ದಕ್ಷಿಣ ಕೊಡಗು.	ಪ್ರೊಪ್ರೈಟರ್,
	ಖಾದಿಭಂಡಾರ

52—34.

ಇಂಗ್ಲಿಷ್ ಹೇರ್ ಡಿಸಪ್ಪಿಯರ್ ಸೋಪ್.

ಈ ಸೋಪು ವಿಲಾಯತಿಯಲ್ಲಿ ತಯಾರಾದದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ, ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಕೊಂಡದ್ದಕ್ಕಿಂತಲೂ ಚನ್ನಾಗಿ ಕೂದಲನ್ನು ಬೇರೆ ಒಂದು ನಿಮಿಷದಲ್ಲಿ ತೆಗೆದುಬಿಡುವದು

ಕ್ರಯ 3 ಸಾಬೂನುಗಳ ಪೆಟ್ಟಿಗೆ 1ಕ್ಕೆ 1—1—0.

ವಿಳಾಸ:—ಮನೋಲಿಯೂ ಏಜೆನ್ಸಿ, ಪೋಸ್ಟ್ ಬಾಕ್ಸ್ ನಂ. 232, ಮದರಾಸು.

52—17

ಪೂರ್ಣ

ಸ್ವದೇಶೀಯ ಹಿತ್ತಾಳೆ ಕಂದೀಲು (ಲಾಂದರು).

ಇದೇ ಕಂದೀಲ (ಲಾಂದರ) ವನ್ನು ನಮ್ಮ ಸ್ವಂತ ಕಾರ್ಖಾನೆಯಲ್ಲಿ ನಾವೇ ಸಿದ್ಧಪಡಿಸಿದು ಬೆಳಕಿನಲ್ಲಿಯೂ, ಬಾಳಿಕೆಯಲ್ಲಿಯೂ, ಯಾವುದೇ ಪರದೇಶೀಯ ಕಂದೀಲಿಗಿಂತ ಮೇಲಾಗಿರುವದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ಇನ್ನು ಪರದೇಶೀ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಲಾರದು

ತ್ವರೆ ಮಾಡಿ ಕೇಳಿಕೊಳ್ಳಿರಿ ನಿಮ್ಮೂರಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕೆಳಗಿನ ಅಡ್ರೆಸ್ಸಿಗೆ ಬರೆದುಕೊಳ್ಳಿ:—

1. ಸಿ. ಎಸ್. ನಾರಾಯಣರಾವು ಅಂಡ್ ಬ್ರದರ್ಸ್, ಜನರಲ್ ಮರ್ಚಂಟ್ಸ್, ಚಿತ್ರಲದುರ್ಗ,

ಅಥವಾ

ಕಾರ್ಖಾನೆದಾರರು —

'ಓಗಲೆ ಗ್ಲಾಸ ವರ್ಕ್ಸ' ಲಿಮಿಟೆಡ್, ಓಗಲೆವಾಡಿ ಸಂ. (ಔಂಧ) ಜಿ. ಸಾತಾರಾ.

52—7

೧೦೦೦ ರೂಪಾಯಿಗಳ ಬಹುಮಾನ.

ಲೋಕಪ್ರಸಿದ್ಧವಾದ ಸಾಲಂಮಿಸ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ

ಇದರ ಸೇವನೆಯಿಂದ ವೀರ್ಯಪುಷ್ಟಿ ಇರದಂತೆ ಇದ್ದರೂ, ನಷ್ಟೇಂದ್ರಿಯರಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ನೋವಿಲ್ಲದಂತಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೈದಾಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಸ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರಿಕಾ, ಬರ್ಮಾ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತಾ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಅವುಗಳು ಸುಳ್ಳು ಎಂದು ಸಿದ್ಧಾಂತಪಡಿಸುವವರಿಗೆ ಮೇಲೆ ಹೇಳಿದ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತರದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಟ್ರಯಲ್ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬಿ ೧ಕ್ಕೆ ರೂ ೨—೦—೦ ಅಂಚೆ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೮—೦ ಆಣೆ ಏಜಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ ರೂಲ್ಸ್ ತರಿಸಿಕೊಳ್ಳಬಹುದು ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು

ಟೆಲಿಗ್ರಾಫ್ ಅಡ್ರೆಸ್,	ಬಿ. ಮನ್ನಾಲಾಲ್, ದಿಲ್ಲಿ ನೇಟಿವ್ ವೈದ್ಯರು,
12—5 ಮಿಸ್ರಿ ಬೆಂಗಳೂರು ಸಿಟಿ,	ಸಾಲಂಮಿಸ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

ಧಾತುನಷ್ಟಕ್ಕೆ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋತ್ಸವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತು ಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಬಲವರ್ಧಕ ಇಂದ್ರಿಯ ಸ್ತಂಭಕ, ಗುಣ, (ಅತಿ) ಗುಪ್ತಸ್ತ್ರೀ ಸಂಗದ ಮೂಲಕ ಹುಟ್ಟಿರುವ ಎಲ್ಲ ತರದ ಖಾಯಿಲೆಗಳು, ಹುಣ್ಣುಗಳು ಚಿತ್ತದ ಭ್ರಾಂತಿಗಳು, ಅಶಕ್ತತೆ ವಾತರೋಗವು ಮುಂತಾದವು ಅತ್ಯಂತ ಗುಣವಾಗಿ ಶರೀರಕ್ಕೆ ಆರೋಗ್ಯವು ಕಾಂತಿಯೂ ದೊರೆಯುತ್ತದೆ. ಸಂಪೂರ್ಣ ಶಕ್ತಿಯು ಉಂಟಾಗುತ್ತದೆ ಬಟ್ಟಿರಿಗೆ ೬೦ ಗುಳಿಗೆಗಳು ಬರುತ್ತವೆ, ಪ್ರತಿನಿತ್ಯ ೬೦ ಗುಳಿಗೆಗಳಿಗೆ ೪ ದಿವಸಗಳು ಸೇವಿಸಬೇಕು. **ನಪುಂಸಕತ್ವಾರಿ** ತೈಲವನ್ನು ಉಪಯೋಗಿಸಿದರೆ ಉತ್ತಮ, ಶೀಷೆ ೧ಕ್ಕೆ ರೂ ೨—೦—೦.

ಸ್ತ್ರೀರೋಗ ನಿವಾರಣೆ—ಇದರ ಸೇವನೆಯಿಂದ ಮುಟ್ಟು ಸರಿಯಾಗಿ ಬರುವದು ಬಿಳಿಯ ಸೆರಗು, ಕೆಂಪು ಸೆರಗು, ಗರ್ಭಾಶಯದ ರೋಗಗಳು ಗುಣವಾಗುವವು. ಶೀಷೆ ೧ಕ್ಕೆ ರೂ ೩—೦—೦. ಔಷಧಿ ಚಿಕಿತ್ಸೆ ಸಂಬಂಧ ಪತ್ರವ್ಯವಹಾರ ಗುಪ್ತವಾಗಿಡಲಾಗುವುದು

ವಿಳಾಸ,—

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.

42 ನಂ. ಬಿ. ಪೋಸ್ಟ್ ಬಾಕ್ಸ್, ಬನಾರಸ್, ಉತ್ತರ ಹಿಂದೂಸ್ಥಾನ.

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅದು ಸರಿಯಾಗಿ ಬರೆಯಲ್ಪಡಲಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಪುನಃ ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟ ದಾನ ಫಾರಂಗಳೂ, ಪಾಸ್ ಬುಕ್ಕುಗಳೂ ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಬದ್ದರ್ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್ 'ಕೊಡಗು' ಮುದ್ರಣಾಲಯ

ಕನ್ನಡ **ಸ್ವಧರ್ಮ** ಮಾಸ ಪತ್ರಿಕೆ

ಸಂಪಾದಕರು:—ದ. ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರ್ವಸಾಧನ. ಸದಾಚಾರದ ತಳಹದಿಗೆ ಸದ್ವಿಚಾರವೇ ಸರ್ವಸಾಧನ. ಇಂತಹ ಸದ್ವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ ರೂ 3—0—0

ಕಾರ್ಯದರ್ಶಿ

"ಸ್ವಧರ್ಮ" ಕಾರ್ಯಾಲಯ,

ಮಾಳಮಡ್ಡಿ, ಧಾರವಾಡ.

Printed & published by P. I. Bellhappa, at "Kodagu" Press, Mercara for "Kodagu" Ltd.

"KODAGU" OFFICE, MERCARA

ಕೊಡಗು.

ಸಂಪಾದಕ– ಕೊಂಡ್ಯಂಡ ಪಿ. ಚಿಣ್ಣಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಕೊಡಗು, ... ಡಿಸೆಂಬರ್ ತಾರೀಖು ... ಶುಕ್ರವಾರ [ಸಂಚಿಕೆ ...]

A Choice of seasons' goods now in stock many attractive lines.

Prices very moderate in consistency with quality.

Pay a visit to our show room and be convinced.

SPENCER & CO., LTD

MERCARA.

(THE HOUSE FOR QUALITY GOODS)

52—45

Name of Manure	Guaranteed Percentage Nitrogen	Pure Potash	Phosphoric Acid	
...ut Poonac No 1	7 8			
No. 2	5 6			
...Poonac	5 6			
...oonac	4 5			
...Poonac	3 4		21 22	
...Bone Meal	4 4 5		22 23	Soluble in water
	4 4 5		15 17	14 15 %
... Superphosphate			42 45	Soluble in Citric
...ated "			13 14	Acid
				12 13 /
... of Potash		48 50		and about 40 /
...of Potash		50 52	17 20	lime
...g				
... Soda	15 16			
... of Ammonia	20 21			
...f Potash (70 % Refined)	9 10	30 35	-	
...f Potash				
...sh	5 7		5 7	
...e ıl (Crushed)	11 12			
" (Uncrushed)	13 14			
...me				
...s Guano				
... (Nett in mixtures)	18			
...cyanamide				
...(Gross in drums)	18			
...rtilisers No. 1	4 5	4 to 5	7 to 8	
" No 2	2 5	6¼	10	

The prices quoted above are subject to market fluctuations

... for all crops the following manures which can be had at moderate ...

B. Bettiah,

Receiving & Farwarding Agent,
SANTHEPET, MYSORE.

ಎಂಪೈರ್ ಆಫ್ ಇಂಡಿಯಾ ಲೈಫ್ ಅಷೂರೆನ್ಸ್

ಕಂಪೆನಿ, ಲಿಮಿಟೆಡ್.

(1897ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು)

ಸಮಸ್ತವೂ ಲಾಭ ಸಹಿತವಾದ ಪಾಲಿಸಿಗಳಿಗೆ

1927 ನೇ ಫೆಬ್ರುವರಿ ತಾ 28 ಕ್ಕೆ ... ಆ ತಾರೀಖಿಗೆ ...

ಪಂಚಸಾಲು ಬೋನಸ್ ...

ಪ್ರಾಸ್ಪೆಕ್ಟಸನ್ನು ಕೇಳಿದವರಿಗೆ ಕೊಡುವೆವು.

...ಂಗಳೂರು ಬ್ರಾಂಚ್:—
102, ...

ಕೆ ... ರಂಗಪ್ಪ,
...
...

ಮದರಾಸ್ ಬ್ರಾಂಚ್:—
930, ...

24—17.

Good Chance! Good Chance!!

Ammunition At cheaper rate

Gun Powder per lb	1—14—0
Percussion caps per box of 250.	1—1—0
Eley Cartridges per 100	12—0—0
Lead shots per lb	0—8—0



Terms—Rs 5/- should be sent in advance for each order. Orders from coorgs should accompany the exemption certificate from the District Magistrate ...

Free—6 Rubber air balloons will be given to any customer who transacts business with me for more than Rs 20/ before 31st December, 1926.

Moffussil order Promptly attended to

S. VENKATARANGAM CHETTY,

Ammunition & Sulphur Merchant,

No. 9. China Bazaar Road, Madras.

12—9

ARMS & AMMUNITION MART,

Mahomedally-Noorbhoy.

321 Abdul Rehman Street, near
Crawford Market, BOMBAY 3

Telegraphic Address—"SHOOTER"
Bombay.

[52—13] Please write for Reduced nett prices list for 1926.

"ಕೊಡಗು"

ಸ್ ೧೯೨೬ನೇ ಇಸವಿ ದಿಸೆಂಬರ್ ತಾ. ೩ನೇ ಶುಕ್ರವಾರ

ಕೃಷಿ ಕಮಿಷನ್.

೨.

ಕೃಷಿ ಕಮಿಷನಿನ ಸವಾಲುಗಳ ಒಂದು ಮತ್ತು ಎರಡನೇ ಭಾಗಗಳನ್ನು ಹಿಂದಿನ ಸಂಚಿಕೆಯಲ್ಲಿ ವಿಮರ್ಶಿಸಿದ್ದೆವು. ಈ ಲೇಖನದಲ್ಲಿ ಉಳಿದ ಎರಡು ಭಾಗಗಳಲ್ಲಿರುವ ಸವಾಲುಗಳ ಸಾರಾಂಶವನ್ನು ವಾಚಕರಿಗೆ ತಿಳಿಸಬಯಸುತ್ತೇವೆ. ಮೂರನೇ ಭಾಗದಲ್ಲಿ ಪಶುವೈದ್ಯ ಮತ್ತು ದನಗಳನ್ನು ಸಾಕುವ ವಿಷಯಗಳನ್ನು ಕುರಿತ ಎರಡು ಸವಾಲುಗಳಿವೆ. ಮೊದಲೇ ಪತ್ರಿಕೆಯಲ್ಲಿ ಎಷ್ಟೋ ಉಪಸವಾಲುಗಳಿವೆ. ... ವೈದ್ಯ ಇಲಾಖೆ ... ಡೈರೆಕ್ಟರರ ... ಅಥವಾ ಸ್ವತಂತ್ರ ... ಎಂಬುದೇ ಮೊದಲನೇ ಉಪಸವಾಲಾಗಿದೆ. ಈ ಇಲಾಖೆಯನ್ನು ಪ್ರತ್ಯೇಕ ಇರುವ ... ಸ್ವತಂತ್ರವಾಗಿಡುವುದು ಉತ್ತಮ. ಇದರಿಂದ ... ಅಧಿಕಾರಿಗಳಿಗಿಂತ ಹೆಚ್ಚು ತಿಳಿದ ... ಹೆಚ್ಚಿನ ... ಈ ರಾಷ್ಟ್ರದಲ್ಲಿ ತರಬೇತು ಹೊಂದಿದವರನ್ನು ... ಡೈರೆಕ್ಟರರಾಗಿ ನೇಮಿಸಿಕೊಳ್ಳುವುದು ಒಳ್ಳೆಯದು. ನಮ್ಮ ದೇಶದಲ್ಲಿ ಪಶು ... ಭಾಗದಲ್ಲಿಯೂ ದನಗಳ ಬಾಧೆ ಬಿಟ್ಟು ... ಇಲ್ಲ. ಈ ರೀತಿ ಬಾಧೆ ... ಕಾರಣಗಳನ್ನು ಕಂಡು ಹಿಡಿದು, ಈ ಕಷ್ಟವನ್ನು ಪರಿಹರಿಸಿಕೊಳ್ಳಬೇಕಾದರೆ ... ಸ್ವತಂತ್ರವಾಗಿದ್ದರೆ ಹೆಚ್ಚಿನ ಉಪಯೋಗ ದೊರೆಯುತ್ತದೆಂದು ನಂಬುತ್ತೇವೆ.

ಈ ಇಲಾಖೆಯು ಡಿಸ್ಟ್ರಿಕ್ಟ್ ಬೋರ್ಡಿನ ತಾಬೆಯಲ್ಲಿರಬೇಕೋ, ಈ ಕೈ ... ಎಂಬುದು ಇನ್ನೊಂದು ಉಪಪ್ರಶ್ನೆಯಾಗಿದೆ. ನಮ್ಮ ದೇಶದಲ್ಲಿ ಈ ಇಲಾಖೆಯು ಡಿಸ್ಟ್ರಿಕ್ಟ್ ಬೋರ್ಡಿನ ತಾಬೆಯಲ್ಲಿ ಇಲ್ಲದೆ ಇರುವದರಿಂದ ಈ ಸವಾಲಿಗೆ ಉತ್ತರ ಇಲ್ಲಿಂದ ಕೊಡಲಾಗುವುದಿಲ್ಲ. ಜನಾಯಿತ ಮೆಂಬರುಗಳ ಹೆಚ್ಚಿನ ಸಂಖ್ಯೆ ಇರುವ ಮತ್ತು ಅಧಿಕತರ ಸ್ವತಂತ್ರವಿರುವ ಡಿಸ್ಟ್ರಿಕ್ಟ್ ಬೋರ್ಡಿನ ತಾಬೆಗೆ ಈ ಇಲಾಖೆಯನ್ನು ಕೊಟ್ಟರೆ ಈ ಇಲಾಖೆಯಿಂದ ರೈತರಿಗೆ ಹೆಚ್ಚಿನ ಪ್ರಯೋಜನವಾದೀತೆಂತ ನಮಗೆ ತೋರುತ್ತದೆ. ಪಶುವೈದ್ಯ ಆಸ್ಪತ್ರೆಗಳ ಬೆಳವಣಿಗೆಗೆ ಸಾಕಷ್ಟು ಸಹಾಯ ದೊರೆಯುತ್ತಿದೆಯೋ ಎಂಬ ಪ್ರಶ್ನೆಗೆ ಇಲ್ಲಿ ಸಾಕಷ್ಟು ಸಹಾಯ ದೊರೆಯುವುದಿಲ್ಲವೆಂದೇ ಹೇಳಬೇಕು. ಈಗಿರುವ ಅಸಿಸ್ಟೆಂಟುಗಳ ಸಂಖ್ಯೆಯೂ ಸಾಲದು. ಆಸ್ಪತ್ರೆಯಲ್ಲಿ ಕಂಪೌಂಡರುಗಳಿಲ್ಲದೆ ಜನರಿಗೆ ಬೇಕಾದಾಗ ಔಷಧಿ ದೊರೆಯುವುದಿಲ್ಲ. ಪಶುವೈದ್ಯ ಆಸ್ಪತ್ರೆಗಳನ್ನು ಕೃಷಿಕರು ಪೂರ್ತಿ ಉಪಯೋಗಮಾಡಿಕೊಳ್ಳುತ್ತಿದ್ದಾರೋ, ಇಲ್ಲವಾದರೆ ಮಾಡಿಕೊಳ್ಳುವಂತೆ ಏನು ಉಪಾಯ ಸೂಚಿಸುತ್ತೀರಿ ಎಂಬುದು ಇನ್ನೊಂದು ಸವಾಲಾಗಿದೆ. ನಮ್ಮ ದೇಶದಲ್ಲಿ ಇರುವ ಆಸ್ಪತ್ರೆಗಳ ಸಹಾಯ ಸಾಲದೆಂಬ ಕೂಗು ಕೇಳುತ್ತಿರುವದರಿಂದ ಆಸ್ಪತ್ರೆಗಳನ್ನು ಉಪಯೋಗಿಸುತ್ತಿರುವದಿಲ್ಲವೆಂತ ಹೇಳಲಿಕ್ಕಾಗುವುದಿಲ್ಲ. ದನಗಳ ... ಉಪಯೋಗ ... ನೋಡಿಕೊಳ್ಳಲು ... ಕಡಿದ ದನಗಳನ್ನು ಪ್ರತ್ಯೇಕ ... ಒಗ್ಗೆ ಏನಾದರೂ ಮಾಡಬೇಕೋ, ... ಬೇರೆ ಉಪಾಯವೇನು ಸೂಚಿಸುತ್ತೀರಿ ಎಂತ ಕೇಳಿದ್ದಾರೆ. ಅಂಟುರೋಗಗಳು ಹಬ್ಬದಂತೆ ಜನರು ಯಾವ ಎಚ್ಚರಿಕೆಯನ್ನೂ ತೆಗೆದುಕೊಳ್ಳುತ್ತಿರುವುದಿಲ್ಲ. ಪ್ರತ್ಯೇಕ ಇಡುವದು, ಶವಗಳನ್ನು ಹೂಳುವುದು ಮುಂತಾದವುಗಳ ಒಗ್ಗೆ ಏನಾದರೂ ಮಾಡುವುದು ಉಚಿತವಲ್ಲ. ಜನರಿಗೆ ಚೆನ್ನಾಗಿ ಬೋಧನೆ ಕೊಟ್ಟರೆ ಕ್ರಮೇಣವಾಗಿ ಅಂಟುರೋಗ ಹರಡದಂತೆ ನೋಡಿಕೊಂಡಾರೆಂದು ಹೇಳಬಹುದು.

ಬೇಕಾದಷ್ಟು ಸೀರಂ ದೊರೆಯಲು ಅನುಕೂಲವಿದೆಯೋ ಎಂಬ ಇನ್ನೊಂದು ಪ್ರಶ್ನೆಗೆ ಸೀರಂ ದೊರೆಯುವುದೇ ಕಷ್ಟವಾಗಿದೆ ಎಂದು ನಮ್ಮ ಉತ್ತರ. ಇದಕ್ಕೆ ಹಣದ ಅಭಾವವೋ, ಅಥವಾ ಸೀರಂ ತಯಾರಿಸುವಲ್ಲಿ ಸಾವಕಾಶವೋ ಎಂಬುದು ನಮಗೆ ಹೇಳಲಿಕ್ಕಾಗುವುದಿಲ್ಲ. ಜಾನುವಾರಿಗೆ ಔಷಧಿ ಹಾಕುವಾಗ ... ಜನರು ಅಕ್ಷೇಪಣೆ ಇದೆಯೋ, ಇದಕ್ಕೆ ಚಾರ್ಜು ಮಾಡುತ್ತಾರೋ, ಎಂಬ ಪ್ರಶ್ನೆಯೂ ಇದೆ. ಔಷಧಿ ಹಾಕುವದರಿಂದ ಪ್ರಯೋಜನವಿದೆಯೆಂಬ ಭರವಸೆಯು ಇನ್ನೂ ಜನರಿಗೆ ಉಂಟಾಗಿರುವಂತೆ ಕಾಣುವದಿಲ್ಲ. ಇಂಡಿಯಾಸರಕಾರದಲ್ಲಿ ಪಶುವೈದ್ಯ ಇಲಾಖೆಯ ಮುಖ್ಯ ಅಧೀನದಲ್ಲಿದ್ದರೂ ... ಉಚಿತವೋ ಎಂಬುದಕ್ಕೆ ಬೇಡವೆಂತ ನಮ್ಮ ಅಭಿಪ್ರಾಯವಾಗಿದೆ. ಇದರಿಂದ ಇನ್ನೆಷ್ಟು ಸಾವಿರಾರು ರೂಪಾಯಿಯ ಸಂಬಳದ ಉದ್ಯೋಗಸ್ಥರನ್ನು ನೇಮಿಸಿದಂತಾಗುತ್ತದೆಯೇ ಹೊರತು ಕೃಷಿಕರಿಗೆ ಪ್ರಯೋಜನವಾಗಲಿಕ್ಕಿಲ್ಲ.

ಈ ಭಾಗದ ಎರಡನೇ ಸವಾಲು ದನಗಳನ್ನು ಸಾಕುವ ವಿಷಯವಾಗಿದೆ. ಈ ಸವಾಲಿನ ಉಪಭಾಗಗಳಲ್ಲಿ ಅಡಕವಾಗಿರುವ ವಿಷಯಗಳೆಲ್ಲಾ ನಮ್ಮ ಸರ್ಕಾರವು ನೇಮಿಸಿ ಈಗ ಕೆಲಸ ನಡೆಸುತ್ತಿರುವ ಜಾನುವಾರುಗಳ ಕಮಿಟಿಯ ಮುಂದೆ ಬರುತ್ತವೆ. ಈ ವಿಷಯ ನಾವು ಮೊದಲೇ ಬರೆದಿರುವದರಿಂದ ಇಲ್ಲಿ ಪುನಃ ಬರೆಯುವ ಅವಶ್ಯವಿಲ್ಲ.

ನಾಲ್ಕನೇ ಭಾಗವು ಮತ್ತು ಪ್ರಶ್ನೆಗಳುಳ್ಳದ್ದಾಗಿದೆ. ಮೊದಲನೇ ಸವಾಲು ಕೃಷಿಕನ ಹೊಲಗದ್ದೆಗಳ ಕೆಲಸ ತೀರಿದನಂತರ ಉಳಿಯುವ ವಿರಾಮ ಕಾಲದಲ್ಲಿ ಬೇರೆ ಯಾವ ಪ್ರಯೋಜನಕರವಾದ ಕೈಗಾರಿಕೆಗಳನ್ನು ಮಾಡಬಹುದೆಂಬದನ್ನು ಒಳಕೊಂಡ ಎಂಟು ಉಪಪ್ರಶ್ನೆಗಳುಳ್ಳದ್ದಾಗಿದೆ. ರೈತನಿಗೆ ಕೆಲಸವಿಲ್ಲದ ತುಂಬಾ ಸಮಯ ಇದೆಯೆಂಬುದರಲ್ಲಿ ಸಂಶಯವಿಲ್ಲ. ತಕ್ಕ ವಿಷಯ ಇರುವಂಥವರು ಕಾಫಿ ಇಲಾಚಿ, ಒಳ್ಳೆ ಮೆಣಸು, ಕಿತ್ತಳೆ ಮುಂತಾದ ಕಲಸಗಳನ್ನು ಬೆಳೆಸಿ ತುಂಬಾ ಪ್ರಯೋಜನಪಡಿಕೊಳ್ಳಬಹುದು. ಪ್ರತಿಯೊಬ್ಬನ ಹಕ್ಕಿನಲ್ಲಿಯೂ ತಾತ್ಕಾಲಿಕವಾದ ಪದ್ಧತಿಯು ಮೊದಲು ಇತ್ತು. ವ್ಯವಸಾಯ ಕಡಿಮೆಯಾಗಿ ಆದೆಲ್ಲಾ ಹೋಯಿತು. ಭತ್ತದ ಕೃಷಿಗೆ ಪ್ರಾಮುಖ್ಯತೆಯು ಕಡಿಮೆಯಾಗಿದೆ. ತೆ ಕಾಫಿ ಮುಂತಾದವನ್ನು ಚಿಕ್ಕ ಗದ್ದೆಗಳಲ್ಲಿ ಬೆಳೆಸಿಕೊಂಡರೆ ಕಂಡಾಯ ಮತ್ತು ನೇಲೆ ಖರ್ಚಿಗೆ ಬೇಕಾದಷ್ಟು ಉತ್ಪತ್ತಿ ಮಾಡಿಕೊಳ್ಳಬಹುದು. ತಕ್ಕ ವಿಷಯ ಇರುವವರು ಮತ್ತು ಇತರರು ಕೆಲವು ತಮ್ಮ ವಿರಾಮಕಾಲದಲ್ಲಿ ತಮ್ಮ ಕುಟುಂಬಕ್ಕೆ ಬೇಕಾದ ಒಟ್ಟೆಯನ್ನು ಕೈಮಗ್ಗದಿಂದಲೇ ತಯಾರಿಸಿಕೊಂಡರೆ ದೇಶದಲ್ಲಿ ಸಂಪನ್ನವಾಗುವುದರಲ್ಲಿ ಸಂಶಯವಿಲ್ಲ. ಮಹಾತ್ಮ ಗಾಂಧಿಯವರು ಬೋಧಿಸಿದಂತೆ ಕಾರಣದಿಂದ ಕಾಮಧೇನುವಿನಂತಿರುವ ಈ ಎರಡನೇ ಕಸಬನ್ನು ಇಲ್ಲಿಗೆಲ್ಲ ಪ್ರತಿಯೊಬ್ಬ ಮನುಷ್ಯನೂ ಅನುಸರಿಸಬೇಕೆಂತ ಕೃಷಿಕಮಿಷನಿನವರು ಸಿಫಾರಸ್ಸು ಮಾಡಿದರೆ ಈ ಕಮಿಷನು ಸಾರ್ಥಕವಾಯಿತೆಂದು ನಮ್ಮ ಅಭಿಪ್ರಾಯವಾಗಿದೆ. ಕಾಮಧೇನುವಿನ ಹಾಗೆ ... ಕಾಗದ ಮಾಡುವುದು, ಬೆಲ್ಲ ಮತ್ತು ಸಕ್ಕರೆ ಮಾಡುವುದು, ಜೇನು ಮತ್ತು ಬೆಂಕಿಕಡ್ಡಿ ಮಾಡುವುದು ಮುಂತಾದ ಕೈಗಾರಿಕೆಗಳನ್ನು ಗ್ರಾಮಾಂತರಗಳಲ್ಲಿ ಆದ್ದರಲ್ಲಿ ಸರ್ಕಾರದವರೇ ಸ್ಥಾಪಿಸಿ ರೈತರಿಗೆ ಸಂಪಾದನೆಗೆ ಎಡೆ ಮಾಡಿಕೊಡಬೇಕು. ಧಾರಾಳವಾಗಿ ಸುಂಚಳಿಗಳು ಬೆಳೆಯುವದನ್ನು ದೇಶದಲ್ಲಿ ... ತುಂಬಾ ಅನುಕೂಲವಿದೆ. ಮೂವತ್ತು ಕೋಟಿಯಲ್ಲಿ ಹಾಗೆ ... ಹತ್ತು ಇಪ್ಪತ್ತು ಲಕ್ಷ ರೂಪಾಯಿಯ ಅಲ್ಪಸ್ವಲ್ಪ ಜಾಗವನ್ನಾದರೂ ಇಂಥಾ ಕೈಗಾರಿಕೆಗಳಿಗೆ ಉಪಯೋಗಿಸಿದ್ದರೆ ಪ್ರಯೋಜನವಾಗುತ್ತಿತ್ತು.

ಎರಡನೇ ಸವಾಲು ಕೃಷಿ ಕೆಲಸಕ್ಕೆ ಬೇಕಾದಷ್ಟು ನೌಕರರು ಇಲ್ಲದಕ್ಕೆಗೆ ಒರುವಂತೆ ಮಾಡಲು ಉಪಾಯವೇನು ಎಂಬ ಮುಂತಾದ ವಿಷಯಗಳನ್ನು ಒಳಕೊಂಡದ್ದಾಗಿದೆ. ಸಕ್ಕ ದೇಶದಲ್ಲಿ ವ್ಯವಸಾಯಕ್ಕೆ ಬೇಕಾದಷ್ಟು ನೌಕರರು ಇಲ್ಲದೆಂಬುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ನಮ್ಮ ದೇಶದ ಮಲೇರಿಯ ಜ್ವರಕ್ಕಾಗಿಯೇ ಕೆಲಸವಿಲ್ಲದೆ ಇರುವ ಸೆಲೆಬಿಲ್ಲೆಯ ಜನರು ಇಲ್ಲಿಗೆ ಬರಲು ಅಂಜುತ್ತಾರೆ. ಮಲೇರಿಯವನ್ನು ಕಡಿಮೆ ಮಾಡಿದರೆ ನೌಕರರ ಕ್ಷಾಮವು ಕಡಿಮೆಯಾದೀತು.

ಕಾಡುಗಳನ್ನು ಕೃಷಿಕರು ತಮ್ಮ ಅವಶ್ಯಕತೆಗಳಿಗೆ ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೋ, ಫಾರೆಸ್ಟುಗಳಲ್ಲಿ ಬೆಳೆಯಬೇಕಾದ ಗಿಡಮರಗಳಿಗೆ ಕೇಡಾಗದಂತೆ ದನಕರುಗಳನ್ನು ಕಾಡುಗಳಲ್ಲಿ ಮೇಯಲಿಕ್ಕೆ ಬಿಡುತ್ತಾರೋ ಎಂದು ಮುಂತಾದ ವಿಷಯಗಳನ್ನು ಒಳಕೊಂಡದ್ದೇ ಮೂರನೇ ಪ್ರಶ್ನೆಯಾಗಿದೆ. ಫಾರೆಸ್ಟು ಇಲಾಖೆಯವರು ಬಡಕೂಸಾದಷ್ಟು ದನಗಳನ್ನು ಫಾರೆಸ್ಟಿನಲ್ಲಿ ಮೇಯಲು ಬಿಡುವುದಿಲ್ಲವೆಂಬುದೇ ನಮ್ಮ ದೇಶದವರ ಅಭಿಪ್ರಾಯ. ಮತ್ತು ರಿಸರ್ವ್ ಫಾರೆಸ್ಟುಗಳನ್ನು ಗ್ರಾಮಗಳ ಸಮೀಪ ತಂದು ಕೃಷಿಕರಿಗೆ ತೊಂದರೆಯನ್ನುಂಟುಮಾಡಿದ್ದಾರೆ.

ಕೃಷಿಕನ ಉತ್ಪತ್ತಿಯನ್ನು ಮಾರಾಟ ಮಾಡಲು ಅನುಕೂಲತೆಗಳು ಸರಿಯಾಗಿವೆಯೋ ಎಂಬುದು ನಾಲ್ಕನೇ ಪ್ರಶ್ನೆಯ ಸಾರಾಂಶವಾಗಿದೆ. ಈ ದೇಶದಲ್ಲಿ ಭತ್ತ ಮಾರತಕ್ಕವರು ತುಂಬಾ ನಷ್ಟ ಹೊಂದುತ್ತಿದ್ದಾರೆ. ಮಂಗಳೂರು, ಮೈಸೂರು ಮತ್ತು ಕನ್ನಡ ಜಿಲ್ಲೆಯ ಧಾರಣೆಯು ಆಗಿಂದಾಗ್ಗೆ ರೈತರಿಗೆ ತಿಳಿಯುವಂತೆ ಮಾಡಬೇಕು. ಭತ್ತವನ್ನು ಕೊಂಡುಕೊಳ್ಳುವ ಚಿಕ್ಕ ವ್ಯಾಪಾರಿಗಳು ಪರಿಯನ್ನು ಅಕ್ರಮವಾಗಿ ಉಪಯೋಗಿಸಿ ರೈತನಿಗೆ ತುಂಬಾ ನಷ್ಟವನ್ನುಂಟು ಮಾಡುತ್ತಿದ್ದಾರೆ. ಪರಿಯನ್ನು ಒಂದು ನಿಬಂಧನೆಗೆ ಒಳಪಡಿಸಬೇಕೆಂಬ ಠರಾವು ಕೌನ್ಸಿಲಿನಲ್ಲಿ ಪಾಸಾಗಿ ಸರ್ಕಾರದಿಂದ ಜಾರಿಗೆಕರಸಲ್ಪಟ್ಟು ಬಹುಕಾಲವಾದಾಗ್ಯೂ ಆ ವಿಷಯ ಇನ್ನೂ ಆಖೈರು ತೀರ್ಮಾನಕ್ಕೆ ಬಾರದೆ ಇರುವದರಿಂದ ಜನರಿಗೆ ಬಹಳ ಅತೃಪ್ತಿ ಇದೆ. ಅನೇಕ ಕಡೆಗಳಲ್ಲಿ ರಸ್ತೆಗಳಿಲ್ಲದೆ ವ್ಯವಸಾಯಗಾರನಿಗೆ ಸಿಕ್ಕಬೇಕಾದ ಧಾರಣೆಯು ದೊರೆಯುವುದಿಲ್ಲ.

ಇನ್ನೊಂದು ಪ್ರಶ್ನೆಯು ಪದಗುಗಳಲ್ಲಿ ಸಾಮಾನು ಸಾಗಿಸಲು ಇರುವ ಚಾರ್ಜು ಮತ್ತು ಒಂದರುಗಳಲ್ಲಿ ಹಾಕುವ ಸುಂಕದ ವಿಷಯವಾಗಿದೆ. ಇದರ ಸಂಗತಿ ಈ ದೇಶದವರಿಗೆ ಹೆಚ್ಚಿಗೆ ಹೇಳಲಿಕ್ಕೆ ಏನೂ ಇಲ್ಲ. ಆರನೇ ಪ್ರಶ್ನೆಯು ಸಹಕಾರಿ ಸಂಘಗಳ ಸಂಬಂಧವಾಗಿದೆ. ಇದರ ವಿಷಯ ನಾವು ಆಗಿಂದಾಗ್ಗೆ ಬರೆಯುತ್ತಲಿದ್ದೇವೆ. ಏಳನೇ ಪ್ರಶ್ನೆಯು ಸಾಧಾರಣ ವಿದ್ಯಾಭ್ಯಾಸದ ಸಂಬಂಧ. ಸಾಧಾರಣ ವಿದ್ಯಾಭ್ಯಾಸವನ್ನು ಹೆಚ್ಚಾಗಿ ... ರೈತರು ತಾವಾಗಿಯೇ ತಮ್ಮ ಸ್ಥಿತಿಯನ್ನು ... ಸಿಕೊಳ್ಳಲು ಪ್ರಯತ್ನಿಸಿಯಾರೆಂಬದರಲ್ಲಿ ಸಂಶಯವಿಲ್ಲ. ... ಅಭಿವೃದ್ಧಿಗೆ ಅಧಿಕಾರಿಗಳು ಗಮನ ಕೊಡುವ ... ಎಂಬುದೇ ಎಂಟನೇ ಪ್ರಶ್ನೆಯಾಗಿದೆ. ... ರು ವ್ಯವಸಾಯದ ಹೊಸ ಕ್ರಮಗಳನ್ನು ... ಪ್ರಯೋಜನವನ್ನು ನಿದರ್ಶಿಸಿಕೊಟ್ಟರೆ ಹೊರತಾಗಿ ... ಯೇ ಕೃಷಿಯ ಬೆಳವಣಿಗೆಗೆ ಹೆಚ್ಚಿಗೆ ಹಣ ... ಸಂಶಯವಿಲ್ಲ. ಇನ್ನೊಂದು ಪ್ರಶ್ನೆಯು ... ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಬೇರೆ ... ಎಂಬುದಾಗಿದೆ. ಸವಾಲಿನಲ್ಲೇ ಸೂಚಿಸಿರು... ಅವು ಗ್ರಾಮಗಳ ಜನರ ಉತ್ಪತ್ತಿಯನ್ನು ... ವನ್ನು ಕಂಡುಹಿಡಿದರೆ ಸ್ವಲ್ಪ ಪ್ರಯೋಜನವಾ... ತೋರುತ್ತದೆ. ಗ್ರಾಮವಾಸಿಗಳು ಸ್ಥಿತಿಯ ... ಮಾಡಿಕೊಳ್ಳಲು ಇಂಥಾ ಅಂಕೆಯು ... ಜನವಾಗಬಹುದು.

ಒಮ್ಬತ್ತನೇ ಪ್ರಶ್ನೆಯು ವ್ಯವಸಾಯದಾಗ... ವಸಾಯದಿಂದ ಬರುವ ಉತ್ಪತ್ತಿ, ... ವ ಎಂತಾದನ್ನು ಕಂಡು ಹಿಡಿಯಲು ಹೊಸ ... ಎಂಬುದಾಗಿದೆ. ಸರ್ಕಾರದವರು ಈ ಲೆಕ್ಕಗಳನ್ನು ... ಇಡುವದು ಉತ್ತಮ. ಈ ಬಗ್ಗೆ ... ಯು ತೆಗೆದುಕೊಳ್ಳಬೇಕು. ಈ ಲೆಕ್ಕಗಳಿಂದ ... ಕ ಸ್ಥಿತಿಯನ್ನು ಕಂಡುಹಿಡಿಯುವದಕ್ಕೆ ರಿಂದ ... ಷ್ಟ ಇಡುವದು ಅವಶ್ಯವಾಗಿದೆ.

ಕೃಷಿಕರಿಗೆ ಸರಕಾರದ ಅಧಿಕಾರರಿಂದ ... ಹಾಯ ಸಿಕ್ಕುತ್ತಿಲ್ಲವಾದ್ದರಿಂದ ಇಂಥಾ ... ನಂಬಿಗೆಯೇ ಕಟ್ಟುಹೋಗಿದೆ. ಈ ಕೃಷಿ ಕಮಿ... ರನ್ನಗಳಿಂದಲೂ ಅಪ್ಪಗಳನ್ನು ಜಾರಿಗೆ ತರ... ದೇಶದ ಜನರಲ್ಲಿ ಕೇವಲ ಆರಷ್ಟು ಇರುವ ಕೃ... ಕರಾದ ನಾಗರಿಕರುಗಳಲ್ಲಿ ನಂಬಿಕೆ ಹುಟ್ಟುವಂ... ತ ಹಾರೈಸುತ್ತೇವೆ.

Coorg Commissioner's
Dated, the 1st Decemb

NOTICE.

Tenders for the supply of standard

Tenders are invited for the supply 80 standard pares to be delivered ... months of January, February and Ma...

2. The pare should resemble one ... Government in the past and measuring ... exactly 10" X 10" X 7¼". Thus, when ... must hold ten standard seers heaped ... measuring internally 7" X 3¼". The pare ... be rectangular and made of light and ... wood and must have two handles ... bands on its edges and rims. The s... may be inspected at the Virajpet taluk ... the Mercara treasury.

3. Tenders should show the rates ... pares of different kinds of wood will ...

4. The tender should be superscribed "for the supply of standard pare" and ... submitted so as to reach the Commissioner ... later than the 4th January 1927.

5. The final acceptance of the tender rest with the Commissioner who does not ... himself to accept the lowest or any tender ... assign any reason whatsoever for reject... the same.

6. Tenders will be opened by the ... of the Commissioner's office on the afternoon ... the 5th January 1927 in the presence of ... the tenderers as may be present in the Commissioner's office.

7. The successful tenderer will be required ... execute a contract bond within five days of ... acceptance of the tender and deposit ... within the said five days as security; ... his tender will be considered as cancelled.

8. Payment in full will be made for the pares ... they are supplied and the amount of deposit ... be adjusted towards the close of the transaction.

T. J. Tasker,
Commissioner.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗ ೨೨ನೆಯ ಪ್ರಕರಣ

(ತಾ 5—11—೨೬ರ ಸಂಚಿಕೆಯಿಂದ ಮುಂದುವರಿದದ್ದು)

ಮತ ಸಂಘರ್ಷ

ನನ್ನ ಸ್ನೇಹಿತರಾದ ಕ್ರೈಸ್ತರ ಪರಿಚಯವನ್ನು ಕುರಿತು ಪು ಈ ಪ್ರಕರಣವನ್ನು ಬರೆಯುತ್ತೇನೆ. ನನ್ನ ಮುಂದಣ ಗತಿಯನ್ನು ಕುರಿತು ಬೇಕರವರು ಬಹಳ ಆಲೋಚನಾಪರರಾಗಿದ್ದರು. ವೆಲಿಂಗ್ಟನ್ ಸಮಾವೇಶಕ್ಕೆ ನನ್ನನ್ನು ಅವರು ಕರೆದುಕೊಂಡು ಹೋಗಿದ್ದರು. ಪ್ರಾಟೆಸ್ಟೆಂಟ್ ಕ್ರೈಸ್ತರುಗಳು ವರ್ಷಗಳಿಗೊಂದಾವರ್ತಿ ಸಮಾವೇಶವನ್ನು ಕೂಡಿಸುವರು. ಆತ್ಮ ಪರಿಶೋಧನೆ ರಣವೆಂದು ಹೆಸರು ಹೇಳಬಹುದು. ಪ್ರಸಿದ್ಧರಾದ ರೆವರೆಂಡ್ ಆಂಡ್ರ್ಯೂ ಮರ್ರೆಯವರು ಆ ಸಮಾವೇಶದ ಅಧ್ಯಕ್ಷರಾಗಿದ್ದರು. ಆ ಸಭೆಯಲ್ಲಿ ನಡೆಯುವ ಕೀರ್ತನಾದಿಗಳು ಉದ್ರೇಕವೂ ಬಹಳ ಪ್ರಬಲವಾಗಿದ್ದುದರಿಂದ ಅಲ್ಲಿಗೆ ಬಂದವರೆಲ್ಲರೂ ಕ್ರೈಸ್ತಮತಾಭಿಮಾನಾವೇಶಭರಿತರಾಗಿದ್ದುದರಿಂದ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದಲ್ಲಿ ನಾನು ತನ್ನ ಕ್ರೈಸ್ತಮತವನ್ನು ಸ್ವೀಕರಿಸುವಂತೆ ಮಾಡಬಹುದು ಎಂದು ಬೇಕರವರ ಆಶೆಯಾಗಿದ್ದಿತು. ... ಪ್ರಬಲವಾದ ನಂಬಿಗೆಯಿದ್ದಿತು. ... ದೇವರ ಪ್ರಾರ್ಥನೆಯನ್ನು ಜಗದಂತರ ... ಪ್ರಿ ... ಜಾರ್ಜ್ ಮುಲ್ಲರವರು ... ಅನುಕ್ಷಣದಲ್ಲಿ ಜಗದಂತರನ್ನು ಪ್ರಾರ್ಥಿಸುತ್ತಿರುವುದರಿಂದ ಕಾರ್ಯಸಾಫಲ್ಯವನ್ನು ಹೊಂದುತ್ತಿದ್ದರು. ಇಂತಹ ಅನೇಕ ಉದಾಹರಣೆಗಳನ್ನು ಬೇಕರವರು ಹೇಳುತ್ತಿದ್ದರು. ನಾನು ... ಶ್ರದ್ಧೆಯಿಂದ ಕೇಳುತ್ತಿದ್ದೆನು. ನನಗೆ ... ಆದಲ್ಲಿ ನಾನು ಕ್ರೈಸ್ತನಾಗಲು ... ಸಂಶಯಪಡಬೇಕಾದದ್ದಿಲ್ಲ. ನಾನು ಬಹಳ ಕಾಲದಿಂದಲೂ ಅಂತರಾತ್ಮದ ಆಜ್ಞೆಯ ಪ್ರಕಾರವೇ ನಡೆದುಕೊಳ್ಳುತ್ತಿರುವೆನು. ... ನನಗೆ ಬಹಳ ಸಂತೋಷಕರವು. ಆ ಆಜ್ಞೆಗೆ ವ್ಯತಿರೇಕವಾಗಿ ನಡೆಯುವುದು ನನಗೆ ಬಹಳ ... ಕರವಾಗಿದಿತು ಎಂದು ನಾನು ತಿಳಿಸಿದೆನು. ವೆಲ್ಲಿಂಗ್ಟನ್ನಿಗೆ ಹೋದರು. ನನ್ನನ್ನು ಕೂಡ ಕರದುಕೊಂಡು ಹೋದುದರಿಂದ ಬೇಕರವರಿಗೆ ಬಹಳ ತೊಂದರೆಯುಂಟಾಯಿತು. ... ವರ್ಣನಾದ ನನ್ನನ್ನು ಜೊತೆಯಲ್ಲಿಟ್ಟುಕೊಳ್ಳಬೇಕಾಗಿದ್ದುದರಿಂದ ಬೇಕರವರಿಗೆ ಬಹಳ ಅಸೌಕರ್ಯವನ್ನು ... ಮಾರ್ಗದಲ್ಲಿ ಭಾನುವಾರ ಪ್ರಾಪ್ತವಾಯಿತು. ಕ್ರೈಸ್ತರು ಆ ದಿವಸ ಪ್ರಯಾಣ ಮಾಡಕೂಡದಾದುದರಿಂದ ಆ ದಿವಸ ಒಂದು ಕಡೆ ನಾವೆಲ್ಲರೂ ತಂಗಿದೆವು. ಸ್ಟೇಷನ್ ಹೋಟೆಲಿನವನು ನನ್ನನ್ನು ಕರೆದುಕೊಂಡು ಹೋಗುವ ವಿಚಾರದಲ್ಲಿ ಬೇಕರವರಿಗೂ ಮ್ಯಾನೇಜರಿಗೂ ಬಹಳ ವಾಗ್ವಾದವಾಯಿತು. ನನ್ನನ್ನು ಒಳಕ್ಕೆ ಬಿಡಗೊಡಲು ಒಪ್ಪಲಿಲ್ಲ. ಮ್ಯಾನೇಜರು ಅಂಗೀಕರಿಸದ ಕಾರಣ ಎಲ್ಲರ ಕೂಡ ಕುಳಿತು ... ಊಟಮಾಡಲು ... ಬೇಕರವರು ಒಪ್ಪಲಿಲ್ಲವು. ... ಆ ಸಭೆಗೆ ಬಂದಿದ್ದರು. ಅವರ ಭಕ್ತಿಯನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ರವರೆಂಡ್ ಮರ್ರೆಯವರ ಸಂಗಡ ನಾನು ಸೇರಿಕೊಂಡೆನು. ನನ್ನಂತಹ ... ಪ್ರಾರ್ಥಿಸುತ್ತಿದ್ದುದನ್ನು ನಾನು ನೋಡಿ ಅವರ ಭಕ್ತಿ ಗೀತೆಗಳಲ್ಲಿ ಕೆಲವು ನನಗೆ ಬಹಳ ಸಂತೋಷವನ್ನುಂಟುಮಾಡಿದವು. ಅವು ಬಹಳ ಮನೋಹರವಾಗಿದ್ದವು. ಆ ಸಭೆಯು ಮೂರು ದಿವಸಗಳವರೆಗೆ ಜರುಗಿತು. ಆ ಸಭೆಗೆ ಬಂದಿದ್ದವರ ಭಕ್ತಿ ಶ್ರದ್ಧೆಗಳಿಗೆ ನಾನು ಸಂತೋಷಪಟ್ಟೆನಾದರೆ ಅಷ್ಟು ಮಾತ್ರಕ್ಕೆ ನಾನು ಹಿಂದೂಮತವನ್ನು ಪರಿತ್ಯಜಿಸಿ ಕ್ರೈಸ್ತಮತವನ್ನು ಸ್ವೀಕರಿಸಲು ನನಗೆ ಅವಶ್ಯಕತೆಯು ಕಂಡುಬರಲಿಲ್ಲವು. ಕ್ರೈಸ್ತನಾದರೆ ಮುಕ್ತಿಯಾಗುವುದು, ಇಲ್ಲದಿದ್ದಲ್ಲಿ ಮುಕ್ತಿಯಾಗುವುದಿಲ್ಲವೆಂಬುದನ್ನು ನಾನು ನಂಬುವುದಿಲ್ಲ. ಆ ಸಂಗತಿಯನ್ನು ನಾನು ಬಹಳ ಜನ ಕ್ರೈಸ್ತರಿಗೆ ತಿಳಿಸಿದೆನು. ಅದು ಅವರ ಮನಸ್ಸಿಗೆ ಬಹಳ ಕಷ್ಟವಾಗಿದ್ದಿತೆಂದೂ ಕೂಡ ನಾನು ಗ್ರಹಿಸಿದೆನು. ಆದರೂ ಗತ್ಯಂತರವಿರಲಿಲ್ಲ.

ನನಗೆ ಬಹಳ ಅತ್ಯಂತರವಿದ್ದಿತು. ಏಸುಕ್ರಿಸ್ತನೊಬ್ಬನೇ ದೇವರ ಏಕಮಾತ್ರ ಗರ್ಭಜಾತನೆಂದೂ ಭಗವದವತಾರನಾದ ಆತನನ್ನು ನಂಬಿದವರಿಗೆಲ್ಲಾ ಮೋಕ್ಷವಾಗುವುದೆಂಬುದನ್ನು ನಂಬಿದ್ದೆ. ದೇವರಿಗೆ ಮಕ್ಕಳಿರುವುದಾದರೆ ನಾವೆಲ್ಲರೂ ದೇವರ ಮಕ್ಕಳೇ ಆಗುವೆವು. ಏಸುಕ್ರಿಸ್ತನನ್ನು ದೇವರೆಂದೆನ್ನುವವನೂ ದೇವರೇ ಆದರೆ ಪ್ರತಿ ಮನುಷ್ಯನನ್ನೂ ಕೂಡ ದೇವರೆಂದೇ ನನ್ನುವವನು ದೇವರಾಗಬೇಕಾಗುವುದು. ಏಸುಕ್ರಿಸ್ತನು ತನ್ನ ಮರಣದಿಂದಲೂ, ತನ್ನ ರಕ್ತದಿಂದಲೂ ಮನುಷ್ಯರ ಪಾಪನ್ನ ಪರಿಹರಿಸಿದನು ಎಂಬ ವಿಷಯಕ್ಕೆ ಸಾಂಕೇತಿಕಾರ್ಥವನ್ನೆಲ್ಲ ಹಿಡಿದು ಎಂಬ ವಿಷಯಕ್ಕೆ ಸಾಂಕೇತಿಕಾರ್ಥವೇನಾದರೂ ಇರಬೇಕಲ್ಲದೆ ಪ್ರತಿ ಪದಾರ್ಥದ ಪ್ರಕಾರ ಆ ವಾಕ್ಯವನ್ನು ನಂಬಲು ನನ್ನ ಬುದ್ಧಿಗೆ ವಿರುದ್ಧವಾಗಿದ್ದಿತು. ಅದನ್ನು ನಾನು ನಂಬಿದ್ದೆನು. ಮನುಷ್ಯರಿಗಿಲ್ಲದೆ ಇತರ ಜಂತುಗಳಿಗೆ ಜೀವ (ಆತ್ಮ) ವಿಲ್ಲವೆಂದು ಕ್ರೈಸ್ತರು ನಂಬುವರು. ಆ ಜಂತುಗಳ ಜೀವಿತವು ಮರಣದೊಡನೆ ನಿರ್ಮೂಲವಾಗುವುದೆಂದು ಅವರ ಅಭಿಪ್ರಾಯವು. ನನ್ನ ಅಭಿಪ್ರಾಯವು ಅದಕ್ಕೆ ವ್ಯತಿರಿಕ್ತವು. ಏಸುಕ್ರಿಸ್ತನು ಜಗದ ಮೋಕ್ಷಕ್ಕಾಗಿ ಪ್ರಾಣಬಿಟ್ಟನು. ಆತನು ತ್ಯಾಗಮೂರ್ತಿ, ದೊಡ್ಡ ಮತಬೋಧಕನೆಂದು ನಾನು ನಂಬಿದೆನಲ್ಲದೆ ಅತನು ಅಕಳಂಕನಾದ ಮನಸ್ಸುಳ್ಳವನೆಂದು ಮನುಷ್ಯರಲ್ಲಿ ಅಕಳಂಕರಾದರೆ ಅವನ ವಿಷಯ ಮತ್ತಾರಿಗೂ ಹುಟ್ಟಲಿಲ್ಲವೆಂದೂ ನಾನು ... ಅತನು ಶಿಲುಬೆಯ ಮೇಲೆ ಪ್ರಾಣವನ್ನು ಬಿಟ್ಟುದರಿಂದ ಪ್ರಪಂಚಕ್ಕೆ ದೊಡ್ಡ ಆದರ್ಶವು ... ದೊರಕಿದರೂ ನಾನು ... ಕ್ರೈಸ್ತರಲ್ಲದೆ ... ಕಾರಣ ... ಇತರ ಮತದವರ ... ಜೀವಿತ ... ನನ್ನ ... ಕ್ರೈಸ್ತರ ಜೀವಿತವು ಕೂಡ ... ಇತರ ಮತದವರ ಜೀವಿತವು ಕೂಡ ಅಷ್ಟು ಮನುಷ್ಯರನ್ನು ನಾನು ಗ್ರಹಿಸಿದ ನಾಗರಿಕರ ... ತತ್ವ ವಿಚಾರದಲ್ಲಿ ಕ್ರೈಸ್ತರ ಸಿದ್ಧಾಂತದಲ್ಲಿ ನನಗೆ ಯಾವ ವಿಶೇಷವೂ ಕಂಡುಬರಲಿಲ್ಲ. ತ್ಯಾಗ ವಿಷಯದಲ್ಲಿ ಹಿಂದುಗಳು ಕ್ರೈಸ್ತರನ್ನು ಅಧಿಕವಾಗಿ ... ಮತಗಳಲ್ಲಿ ಕ್ರೈಸ್ತಮತವೇ ಶ್ರೇಷ್ಠವಾದುದೆಂದೂ ಸರ್ವಸಾಧಾರಣಮತ ... ನನ್ನ ಈ ಭಾವವನ್ನು ಕ್ರೈಸ್ತರ ಇದಿರಿಗೆ ತಿಳಿಸುತ್ತಿದ್ದ ದವೇಳೆ ಅವರು ಕೂಡ ... ನನಗೆ ತೃಪ್ತಿಕರವಾಗಿರುತ್ತಿರಲಿಲ್ಲವು. ಹಿಂದೂಮತವು ಶ್ರೇಷ್ಠ ಮತವೆಂಬ ನಂಬಿಕೆಯು ಕೂಡ ನನಗೆ ಆಗ ಹುಟ್ಟಲಿಲ್ಲವು. ಎಂದ ... ತದ್ದೋಷವುಳ್ಳ ಲೋಪವು ... ಅಸ್ಪೃಶ್ಯತೆ ... ಹಿಂದೂ ... ಅರ್ಥ ... ಹಿಂದೂ ... ಪಾಲುವ ... ಪ್ರ... ವೇದವು ... ಅಪೌರುಷೇಯವಾಗಿದ್ದಲ್ಲಿ ಬೈಬಲ್ಲು ಏಕೆ ... ಅಪೌರುಷೇಯವಾಗಕೂಡದು? ಕ್ರೈಸ್ತರು ನನ್ನನ್ನು ಕ್ರೈಸ್ತನನ್ನಾಗಿ ಮಾಡಬೇಕೆನ್ನುತ್ತಿದ್ದಂತೆಯೇ ಮಹಮ್ಮದೀಯರು ಕೂಡ ನನ್ನನ್ನು ಮಹಮ್ಮದೀಯನನ್ನಾಗಿ ಮಾಡಬೇಕೆನ್ನುತ್ತಿದ್ದರು. ... ವಿಷಯವನ್ನು ಕುರಿತು ಭಾರತವರ್ಷಕ್ಕೆ ಬರೆಯಲು ಆಗ ಮತವಿಷಯ ... ಉತ್ತರವನ್ನು ಕೊಟ್ಟರು. ರಾಯಚಂದ್ರಭಾಯಿಯವರ ಲೇಖನದಿಂದ ನನ್ನ ಮನಸ್ಸಿಗೆ ಬಹಳ ಶಾಂತಿಯುಂಟಾಯಿತು. ... ತೆರೆದು ... ಗ್ರಂಥಗಳನ್ನು ಶ್ರದ್ಧೆಯಿಂದ ಓದಬೇಕಾಗಿದೆ ಎಂದು ಬರೆದಿದ್ದಿತು. ... ಪ್ರಾಕ್ಷಿಪ್ತವಾಗಿ ... ಹಿಂದೂ ಮತದಲ್ಲಿರುವ ಅಹಿಂಸಾ ಭಾವವೂ, ಬೇರೆ ಮತಗಳಲ್ಲಿ ... ನನಗೆ ... ಜನ ... ಸಿದ್ಧರು ನಾನು ಆ ಇಂಗ್ಲಿ ಗ್ರಂಥವನ್ನು ತೆಗೆದುಕೊಂಡು ಓದಲು ಪ್ರಾರಂಭಿಸಿದೆನು. ಮಹಮ್ಮದೀಯ ಮತವನ್ನು ಕುರಿತ ಇನ್ನೂ ಕೆಲವು ಗ್ರಂಥಗಳನ್ನು ಕೂಡ ಕೊಂಡೆನು. ಇಂಗ್ಲೆಂಡಿನಲ್ಲಿದ್ದ ನನ್ನ ... ತವರಲ್ಲೆಲ್ಲ ... ನನಗೂ ... ಎಡ್ವರ್ಡ್ ಮೇಟ್ಲೆಂಡ್ ... ಕಾರ್ ... ಇನ್ನಾ ಕಿಂಗ್ಸ್ ಫರ್ಡ್ ಅವರ ... ಪರ್ಫೆಕ್ಟ್ ವೇ ಎಂಬ ಗ್ರಂಥವನ್ನು ಮೈಟ್ಲೆಂಡ್ ರವರು ನನಗೆ ಕಳುಹಿಸಿಕೊಟ್ಟರು. ಪ್ರಸ್ತುತ ... ಬೈಬಲಿನ ನವ ... ಆ ಗ್ರಂಥವು ಖಂಡಿಸುತ್ತದೆ. ... 'ಬೈಬಲ್ ಇಂಟರ್‌ಪ್ರಿಟೇಷನ್ ಆಫ್ ಕ್ರಿಶ್ಚಿಯನಿಟಿ' ಎಂಬ ಗ್ರಂಥವನ್ನು ಕೂಡ ಮೆಯ್ಟಲೆಂಡ್‌ರವರು ಕಳುಹಿಸಿಕೊಟ್ಟರು. ಈ ಎರಡು ಗ್ರಂಥಗಳೂ ನನ್ನ ಮನಸ್ಸಿಗೊಪ್ಪಿದುವು. ಅವು ಹಿಂದೂ ಮತಗಳಿಗೆ ... ದಿ ಕಿಂಗ್‌ಡಮ್ ಆಫ್ ಗಾಡ್ ಈಸ್ ವಿದಿನ್ ಯು ಎಂಬ ಗ್ರಂಥವನ್ನು ಟಾಲ್‌ಸ್ಟಾಯಿಯವರು ಬರೆದಿರುವರು. ಅದನ್ನು ಓದಿದುದರಿಂದ ನನಗೆ ಅಪರಿಮಿತವಾದ ಆನಂದವುಂಟಾಯಿತು. ಅದನ್ನು ನಾನು ಎಂದಿಗೂ ಮರೆಯುವಂತಿಲ್ಲ. ಆ ಗ್ರಂಥದಲ್ಲಿ ಸ್ವತಂತ್ರಾಲೋಚನೆಯೂ, ಉತ್ಕೃಷ್ಟವಾದ ನೀತಿಯೂ, ಸತ್ಯವೂ ತೀವ್ರವುದರಲ್ಲಿ ಕೋಟ್ಸರವರು ಕೊಟ್ಟ ಗ್ರಂಥಗಳಲ್ಲ ... ಈ ರೀತಿಯಾಗಿ ನನ್ನ ... ಅಭ್ಯಾಸ ... ಬೆಳವಣಿಗೆ ... ಕ್ರೈಸ್ತರ ... ರಾಯಚಂದ್ರಭಾಯಿಯವರು ... ಅವರಿಗೂ ನನಗೂ ಪತ್ರವ್ಯವಹಾರವು ನಡೆಯುತ್ತಿದ್ದಿತು. ... ಪಾಂಚೀಕರಣ, ಮಣಿರತ್ನಮಾಲ, ಯೋಗವಾಸಿಷ್ಠದಲ್ಲಿನ ಮುಮುಕ್ಷುಪ್ರಕರಣ ... ಷಡ್ದರ್ಶನಸಮುಚ್ಚಯ ... ಗ್ರಂಥಗಳನ್ನು ರಾಯಚಂದ್ರಭಾಯಿಯವರು ಕಳುಹಿಸಿದರು. ನಾನು ಅವುಗಳನ್ನೂ ಓದಿದನು. ಆದುದರಿಂದ ನಾನು ಕ್ರೈಸ್ತನಾಗಲಿಲ್ಲ. ... ಮತ ವಿಷಯದಲ್ಲಿ ಮೊದಲು ನನಗೆ ಆಸಕ್ತಿಯನ್ನು ಹುಟ್ಟಿಸಿದವರು ಅವರೇ. ಆದುದರಿಂದ ನಾನು ಅವರ ... ಎಂದಿಗೂ ಮರೆಯಲಾರೆನು. ಬಹಳ ವೇಳೆ ನನಗೆ ಅಂತಹ ಸಹವಾಸವು ಲಭಿಸಿದ್ದಿತು.

ಪ್ರಸಿದ್ಧಪತ್ರಿಕೆ.

ಕೊಡಗು ಮುಜರಾಯಿ ಇಲಾಖೆಯಿಂದ

ಇದರಿಂದ ಸಮಸ್ತರಿಗೂ ಪ್ರಸಿದ್ಧಪಡಿಸುವದೇನೆಂದರೆ:—ಕೊಡಗು ದೇವಸ್ಥಾನಗಳ ಅಧೀನ ಒಟ್ಟು ಜಮೀನು ಸರ್ ಸಾಹೇಬರವರ ರೆಗ್ಯುಲೇಶನ್ ಮೇರೆ ಮಡಿಕೇರಿ ನಂಜರಾಜಪಟ್ಣ ಮತ್ತು ಮಡಿಕೇರಿ ಪಾಡಿನಾಲ್ಕುನಾಡು ತಾಲೋಕುಗಳಿಗೆ ನೇಮಕವಾಗಿರುವ ಮೆಂಬರುಗಳು ಮೆ. ಕೆ. ನಂಜಾಮಣರಾಯರವರ ಮತ್ತು ಮೆ. ಪಿ. ಬಿ. ಮೇದಪ್ಪನವರ ಅವಧಿಯು ಪೂರೈಸುವದರಿಂದ ಇವರುಗಳ ಸ್ಥಾನ ... ನೇಮಿಸುವದಕ್ಕೆ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲು ಸನ್ 1927 ನೇ ಇಸವಿ ಜನವರಿ ತಾರೀಕು 7 ನೇ ಶುಕ್ರವಾರ ದಿನ ಜಮೆಯಾಗತಕ್ಕ ... ಟ್ಯುನಾಕಶ್ ಮಾಡಿಕೊಳ್ಳತಕ್ಕ ... ಬಿಟ್ಟು ... ರಾಜರವರ ... ಸ್ಥಾನಗಳಿಗೆ ... ನೇಮಕಮಾಡಿ ... ಕೊಂಡಿದೆ. ಎಡೆನಾಲ್ಕುನಾಡು ಮತ್ತು ಕಿಗ್ಗಟ್ನನಾಡು ತಾಲೋಕುಗಳಿಗೆ ನೇಮಕವಾಗಿರುವ ಮೆಂಬರು ಮೆ. ಸಿ. ... ಯವರ ... ಜುನಾಯಿಸುವದಕ್ಕೆ ವೀರರಾಜೇಂದ್ರಪೇಟೆ ಮೆ. ಅಡಿಕೆ ... ನವರ ... ಸನ್ 1927 ನೇ ಇಸವಿ ಜನವರಿ ತಾರೀಕು 5 ನೇ ಬುಧವಾರ ದಿನ ಅಧಿಕಾರದ ಪರವಾಗಿ ಓಟ್ಯುನಾಕಶ್ ಮಾಡಿಕೊಳ್ಳತಕ್ಕ ಬಗ್ಗೆ ... ವೀರರಾಜಪೇಟೆ ನಾಡು ... ಸಿ ... ಮಾಡಿಕೊಂಡಿದೆ. ಇವರುಗಳ ಸಮಕ್ಷಮದಲ್ಲು ಆಯಾಯ ತಾರೀಕು ದಿನ ಹಗಲು 11 ಘಂಟೆಯಿಂದ ಸಾಯಂಕಾಲ 5 ಘಂಟೆ ವರೆಗೆ ಆಯಾಯ ಸ್ಥಳದಲ್ಲು ಓಟ್ ... ಆಗಬೇಕಾಗಿರುವವರು ... ಇರತಕ್ಕವರು ಓಟ್ಯುನಾಕಶ್ ... ಮಾಡಿಕೊಂಡು ವ ತಾರೀಕಿಗೆ ಮೂರು ದಿನ ಮುಂದಾಗಿ ತಿಳಿಯುವಂತೆ ಈ ಕಳಗ ... ನೋಡಿದನಂತರ ಬರಕೊಳ್ಳುವದು.

ತಾ 19—11—1926 ಕೆ ಚಂಗಪ್ಪ
ಪ್ರೆಸಿಡೆಂಟ್

ಪೊನ್ನಂಪೇಟೆ ವೇದಾಂತಸಂಘ.

॥ ಓಂ ॥

ಬೆಂಗಳೂರು ಶ್ರೀ ರಾಮಕೃಷ್ಣ ಮಠದ ಪ್ರಸಿದ್ಧರು ಸ್ವಾಮಿ ಶ್ರೀ ನಿರ್ಮಲಾನಂದಾಜಿಯವರ ನಿರ್ಭಿನ್ನ ಪಲ್ಲಿ ತಾ ... 11—26 ರಲ್ಲು ಪೊನ್ನಂಪೇಟೆಯಲ್ಲು ನಡೆದ ಪೊನ್ನಂಪೇಟೆ ಶ್ರೀ ರಾಮಕೃಷ್ಣ ವೇದಾಂತಸಂಘದ ಜನರಲ್ ಮೀಟಿಂಗ್ ನ ಪ್ರೋಸಿಡಿಂಗ್ಸ್.

1 ಈ ಸಂಘಕ್ಕೆ ಸಭೆಯು ಕಟ್ಟಡ ಒಂದು ಈ ವರ್ಷ ಕಟ್ಟಿಸುವದರಾಗುವೂ, ಇದಕ್ಕಾಗಿ ದೇಶದ ಎಲ್ಲಾ ಭಾಗದಿಂದಲೂ ಚಂದ ಪಡೆಯಬಹುದಾಗಿಯೂ ತೀರ್ಮಾನವಾಯಿತು.

2 ದಿವಂಗತ ಮೆ. ಪಿ. ಗಣಪಯ್ಯನವರ ಪುತ್ರ ಮೆ. ಪಿ. ಮುದ್ದಯ್ಯನವರು ಕಟ್ಟಡದ ಒಳ ತೆಗೆಯುವ ಭಾವಿಯ ಲ್ಲಿ ದಿವಂಗತ ಮೆ. ಪಿ. ಗಣಪಯ್ಯನವರ ಹೆಸರನ್ನು ಶಿಲಾಶಾಸನ ಇಡುವುದೆಂತ ತೀರ್ಮಾನವಾಯಿತು.

3 ಕಟ್ಟಡಕ್ಕೆ ... ರೂ ಚಂದ ಹಣ ಕೊಟ್ಟವರ ಹೆಸರುಗಳನ್ನು ಅಷ್ಟು ... ಕನ್ನಡಿ ಚೌಕಟ್ಟು ಕಟ್ಟಿ ಕಟ್ಟಡದ ಗೋಡೆಯಲ್ಲಿ ತೂಗುಹಾಕುವುದೆಂತಲೂ ನಿಶ್ಚಯವಾಯಿತು.

4 ದಿವಂಗತ ಮೆ. ಪಿ. ಗಣಪಯ್ಯನವರ ಸ್ಮಾರಕ ಫಂಡಿಗೆ ... ಸ್ವಾಮಿಜಿಯವರ ಅಪ್ಪಣೆ ... ವಿಷಯಗಳಿಗೆ ... ರಕ್ಕಾಗಿ ... ಎಂದು ತೀರ್ಮಾನಿಸಲಾಯಿತು.

5 ಈ ಕಟ್ಟಡಕ್ಕಾಗಿ ಸ್ವಾಮಿಜಿಯವರು ಅಪೇಕ್ಷಿಸಿದ್ದಂತೆ ... ಸರ್ವೆ ನಂಬರು 113—114 ರ ... ದಿಕ್ಕಿಗೆ ಹೋಗುವ ರಸ್ತೆ ಬದಿ ... ಕಟ್ಟುವುದೆಂತ ತೀರ್ಮಾನವಾದುದ್ದಲ್ಲದೆ ... ಕೊಟ್ಟ ... ಸ್ಥಳವನ್ನು ಸ್ವಾಮಿಜಿಯವರಿಂದ ಆದರದಿಂದ ಸ್ವೀಕರಿಸಲಾಯಿತು. ಮತ್ತು ಕಟ್ಟಡ ಕಟ್ಟಿಸುವ ವಿಚಾರ ಪ್ರತ್ಯೇಕ ಮಾಡಿಕೊಳ್ಳಬಹುದೆಂತಲೂ ಸಹ ತೀರ್ಮಾನವಾಗಿ ಸ್ವಾಮಿಜಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಸಭೆ ಬರಕಾಸ್ತು ಮಾಡಲಾಯಿತು.

6 (1) ಚಂದ ಪಡೆಯುವ ಬಗ್ಗೆ ಮೆ. ಪುಕ್ಕೇರಿ ... ಮುದ್ದಯ್ಯನವರು ಪ. ಯು. ಆರ್ ... ಗಳವರು ಮೆ. ಗುಮ್ಮಟ್ಟೀರ ಅಪ್ಪಯ್ಯನವರು ಮತ್ತು ... ಕಾರ್ಯಪ್ಪನವರನ್ನು ನೇಮಕ ಮಾಡಲಾಗಿದೆ.

(2) ಭಕ್ತಿ ಪೂರ್ವಕವಾಗಿ ಸಹಾಯ ಮಾಡತಕ್ಕ ಮಹನೀಯರು ಪೊನ್ನಂಪೇಟೆ ... ವಿಳಾಸಕ್ಕಾಗಲಿ ಕಳುಹಿಸಬಹುದು.

ವಿಳಾಸ:— ಸೆಕ್ರೆಟರಿ, ವೇದಾಂತಸಂಘ, ಪೊನ್ನಂಪೇಟೆ
ಎ ಕಾಳಪ್ಪ

ಕೆಂಬಟ್ಟೆ ಹೊಲೆಯರ ಮೀಟಿಂಗು.

(ಹಾಜರಿದ್ದವರಿಂದ)

ತಾರೀಕು 25—11—26 ರಲ್ಲು ಕೈಕೇರಿ ಗ್ರಾಮದ ಪಂತಮ ನೆಲ್ಲಾ ... ಗ್ರಾಮದ ಕೆಂಬಟ್ಟೆ ಹೊಲೆಯರು ಅಂದರೆ ಕೈಕೇರಿ, ನಾಂಗಾಲ, ಬಿಟ್ಟಂಗಾಲ ... ಮೂರ್ನಾಡು ಮತ್ತು ... ಗ್ರಾಮದವರು ಕೂಡಿ ... ನಾಯಿಡ ಚಂಗಪ್ಪನವರ ಅಧ್ಯಕ್ಷತೆಯಲ್ಲು ...

ಡೆದ ಮೀಟಿಂಗಿನ ಸಾರಾಂಶ—ಹಾಜರು ಇದ್ದವರು ಸುಮಾರು 90 ಜನ ಕಂಬಟ್ಟಿ ಹೊಲೆಯರು ಮೆ. ಐಸ್ಮಂಡ ಮೊದಪ್ಪನವರೂ ಸಹ ಹಾಜರು ಇದ್ದರು.

(1) ಸ್ಕೂಲಿಗೆ ಹೋಗುವ ಅನುಕೂಲವಿರುವ ಸ್ಥಳದ ಕಂಬಟ್ಟಿ ಹೊಲೆಯರ ಮಕ್ಕಳೆಲ್ಲರನ್ನು ಖಂಡಿತವಾಗಿಯೂ ಸ್ಕೂಲಿಗೆ ಕಳುಹಿಸುವಂತೆ ಅವರವರ ತಂದೆತಾಯಿಗಳು ಪೆದ್ದ ಮೇಳವನ್ನು ತೆಗೆದುಕೊಳ್ಳುವಂತೆ ಸರ್ವಸಮ್ಮತದಿಂದ ಮಂಜೂರಾಯಿತು.

(2) ಸತ್ತ ದನ ಜೇಪವಿರುವ ದನಕರಗಳ ಮಾಂಸವನ್ನು ತಿನ್ನುವದಿಲ್ಲವೆಂದು ಏಕೋ ಭಾವದಿಂದ ಎಲ್ಲರೂ ಒಪ್ಪಿಕೊಂಡ ಮೇರೆ ಫೈಸಲಾಯಿತು.

(3) ಶುಭ ಶೋಭನ, ಮದುವೆ ಕ್ಲ್ಯಾಮ, ಸಂಘ ಸಂಸ್ಥೆಗಳಲ್ಲಿ ಕೂಡಿ, ಮೇಲ್ಕಂಡ ಸಂಗತಿಗಳಲ್ಲಿ ಕಲವು ಗ್ರಾಮಸ್ಥರೂ ಈ ರಾಮು ನಡಿಸುತ್ತಾ ಬರುವ ಹಾಗೆ, ಸಮಾಜದ ಸೇವಕನಾದ ಕರದೆಂದು ಸರ್ವಸಮ್ಮತದಿಂದ ತೀರ್ಮಾನವಾಯಿತು

(4) ಮೇಲ್ಕಂಡ ಸಂಗತಿಗಳನ್ನು ಜಾತಿ ಮೀಟಿಂಗಿಗೆ ಸೇರದ ಇರುವವರ ತಿಳುವಳಿಕೆ ಬಗ್ಗೆ 'ಕೊಡಗು' ಪತ್ರಿಕೆಯಲ್ಲು ಪ್ರಕಟಿಸುವಂತೆ ಕಂಬಟ್ಟಿ ಹೊಲೆಯರ ಕೈಕೇರಿ ಗ್ರಾಮದ ಅಪ್ಪ, ಮಂಡ ಪಗ್ಗೈದು ಮೊಕನಾಚಿಪ್ಪನ್ನು ಇತರ ಗ್ರಾಮದ ಸಕೇಟಿ, ಮಷ್ಕ ಇತರರು ಬಹುಮತದಿಂದ ಪ್ರಸ್ತಾಪಿಸಿದ ನಂತರ ಮಂಜೂರು ಮಾಡಲಾಯಿತು.

(5) ಅಧ್ಯಕ್ಷರು ಹಿಂದುಳಿದವರ ಜೀರ್ಣೋದ್ಧಾರದ ಬಗ್ಗೆ, ಅವರು ಸಿದ್ಧದ ಏನು ಹಿಂದುಳಿದಿರುವದನ್ನು ಮುಂದಕ್ಕೆ ತರುವ ಉದ್ದೇಶ ಬಹು ಪ್ರಯತ್ನವನ್ನು ತಮ್ಮ ಹೆಚ್ಚಿನ ಸಮಯವನ್ನು ಅದಕ್ಕಾಗಿಯೇ ವಿನಿಯೋಗಿಸಲು ತಯಾರಾಗಬೇಕೆಂದೂ ಭಾಷಣ ಮಾಡಿದನಂತರ ಮೀಟಿಂಗನ್ನು ಅಧ್ಯಕ್ಷರಿಗೆ ವಂದನಾಪೂರ್ವಕ ಬರಕಾಸ್ತು ಮಾಡಲಾಯಿತು.

ಪ್ರಕಟಣೆ.

ಅಮ್ಮತ್ತಿನಾಡು ಓಟರುಗಳಲ್ಲಿ ಪುಲಿಯಂಡ ಉತ್ತಯ್ಯನ ವಿಜ್ಞಾಪನೆ.

ಮಾನ್ಯರೆ

ನಮ್ಮ ಈ ನಾಡಿನ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿನ ಮೆಂಬರುತನಕ್ಕೆ ನಾನೊಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ.

ನಾನು ಇಲ್ಲಿಯ ವರೆಗೆ ಬಹೂಜನೋದ್ಧಾರ ಸಂಘದಲ್ಲೂ ಮತ್ತು 'ಕೊಡಗು' ಪತ್ರಿಕೆಯಲ್ಲೂ ದೇಶಸೇವೆ ಮಾಡಿದ್ದು ತಮಗೆಲ್ಲ ತಿಳಿಯದ ಸಂಗತಿಯಲ್ಲ.

ಈಗ ಡಿಸ್ಟ್ರಿಕ್ಟ್‌ಬೋರ್ಡಿನಲ್ಲಿ ಈ ನಾಡಿನ ಪರವಾಗಿ ಹೋರಾಡಲು ಉದ್ಯುಕ್ತನಾಗಿರುತ್ತೇನೆ.

ನನ್ನ ಮೇಲೆ ವಿಶ್ವಾಸವಿಟ್ಟು ತಮ್ಮ ಹಕ್ಕಿನ ಓಟನ್ನು ತಾ. 20—12—26ರಲ್ಲಿ ನನಗೆ ಒಟುಕೊಟ್ಟು ಪ್ರೋತ್ಸಾಹಿಸಬೇಕಾಗಿ ಬೇಡುತ್ತೇನೆ.

ಮೇಕೂರು, ನಿಮ್ಮ ಸೇವಕ,

ತಾ. 30-11-1926. ಪಿ. ಐ. ಉತ್ತಯ್ಯ.

3—1

ನೋಟೀಸು.

ಬಿಳುಗುಂದ 'ಕ್ರೆಸೆಂಟ್' ಹಾಕಿ ಟೂರ್ನಮೆಂಟು 1926ನೇ ಡಿಸೆಂಬರು 20ರಲ್ಲಿ ಪ್ರಾರಂಭವಾಗುತ್ತದೆ. ಈ ಟೂರ್ನಮೆಂಟಿನಲ್ಲಿ ಭಾಗಗಳಾಗಿ ಇಚ್ಛೈಸುವ ಟೀಮುಗಳು ಡಿಸೆಂಬರು 10ನೇಯಳಗೆ ಈ ಕಳಗಿನ ಅಡ್ರಸಿಗೆ ರೂ. 7 ಫೀಜನ್ನು ತ ಒಹಿಸತಕ್ಕದ್ದು. ಸದರಿ ಓಟ್ಲ ಪ್ರತಿವರ್ಷವೂ ಟೂರ್ನಮೆಂಟಿಗೆ ಇಡಲ್ಪಡತಕ್ಕದ್ದು (ever rolling). ಈ ಒಟ್ಲನ್ನು ಎಡೆಬಿಡದೆ ಮೂರು ವರ್ಷಗಳು ಗೆದ್ದ ಟೀಮಿಗೆ ಒಂದು ಮೆಡಲು ಕೊಡಲಾಗುವುದು. ಹೆಚ್ಚಿನ ವಹಿಮಿಗ ಕಳಗಿನ ಅಡ್ರೆಸಿಗ ಬರಕೊಳ್ಳತಕ್ಕದ್ದು.

ಎ. ಯಂ. ಖಾನ್,
ಸೆಕ್ರೆಟರಿ,
ಬಿಳುಗುಂದ ಕ್ರಸೆಂಟ್ ಕ್ಲಬ್,
ಅಮ್ಮತ್ತಿ.

ನಾಪೋಕ್ಲು ನಾಡು ಓಟರುಗಳಲ್ಲಿ ವಿಜ್ಞಾಪನೆ.

ಮಹನೀಯರೇ,

ನಮ್ಮ ನಾಪೋಕ್ಲು ನಾಡಿನ ಪರವಾಗಿ ಡಿಸ್ಟ್ರಿಕ್ಟ್‌ಬೋರ್ಡಿಗೆ ನನ್ನನ್ನು ಚುನಾಯಿಸಬೇಕೆಂದು ನಿಶ್ಚೈಸುವ ಬಗ್ಗೆ ಈ ನಾಡಿನ ಎಲ್ಲಾ ಗ್ರಾಮಗಳಿಂದಲೂ ಜನರು ಸೇರಿ ಈ ಅಕ್ಟೋಬರು ತಾರೀಕು 31 ರಲ್ಲಿ ನಾಪೋಕ್ಲಿನಲ್ಲಿ ನಡಿಸಿದ ಮೀಟಿಂಗಿನಲ್ಲಿ ದೊಡ್ಡ ಬಹುಮತದಿಂದ ತೀರ್ಮಾನಿಸಿದ ಮೇರೆ ನಾನು ಸದರಿ ಚುನಾವಣೆಗೆ ಉಮೇದುವಾರನಾಗಿ ನಿಲ್ಲಲು ನಿಶ್ಚೈಸಿರುತ್ತೇನೆ. ಈ ನಾಡಿನ ವಿಷಯದಲ್ಲಿ ನಿಮ್ಮೆಲ್ಲರ ಅಭಿಪ್ರಾಯದಂತೆಯೂ, ದೇಶಕ್ಕೆ ಸಂಬಂಧ ಪಡುವ ಸಂಗತಿಗಳಲ್ಲಿ ಬಹುಜನದಾರರ ಸಂಘದ ತೀರ್ಮಾನದಂತೆಯೂ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಹೋರಾಡಲು ತಯಾರಾಗಿದ್ದೇನೆ. ನಿಮ್ಮ ಸೇವೆ ಮಾಡಲು ಕಂಕಣ ಬದ್ಧನಾಗಿರುವ ನನಗ ನಿಮಗಿರುವ ಒಂದ ಓಟನ್ನು ತಾ 20—12—'26 ರಲ್ಲಿ ಕೊಡಬೇಕಾಗಿ ಬೇಡುವ

ನಾಪೋಕ್ಲು, ನಿಮ್ಮ ಸೇವಕ,

ಅಲೆಯಂಡ ಸುಬ್ಬಯ್ಯ.

15—3

COORG FOREST DEPARTMENT

NOTICE

Mercara, dated the 27th November 1926

Tenders are invited by the 10th January 1927 for the supply of the following quantities of rations required for the use of Forest Department subordinates and coolies of the Bhagamandla Range.—

1 Paddy 300 batties

2 Boiled rice 6000 seers

For further particulars, apply to —

The Chief Forest Officer, Coorg,
Mercara.

ನೋಟೀಸು.

ಮಹನೀಯರೇ,

ನಮ್ಮ ದಾವಾಖಾನೆಯ ಆಸ್ಪತ್ರೆ 1926ನೇ ಡಿಸೆಂಬರ್ ತಾ 28ರಿಂದ ರವಿವಾರ ಹೊರ್ತಾಗಿಯು ಒಂದು ವಾರದೊಳಗೆ ಗೋಣಿಕೊಪ್ಪಲಲ್ಲಿ ತೆರೆಯಲಾಗುವದೆಂಬುದನ್ನು ತಮಗೆ ತಿಳುವಳಿಕೆ ಕೊಟ್ಟಿರುತ್ತೇನೆ. ಪ್ರತಿ ಆದಿತ್ಯವಾರ ದಿನ ಹೊರ್ತು ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ ೦ ಗಂಟೆಯ ವರೆಗೆ ತೆರೆದು ಇಡಲ್ಪಡುತ್ತದೆ.

ಪಿ. ಯಸ್ ರಾಮಸ್ವಾಮಿ ಅಯ್ಯರ್,
ಯಲ್. ಯಂ. ಪಿ. ಡಾಕ್ಟರು,
ಪೊನ್ನಂಪೇಟೆ.

4—2.

ಮಾರಾಟಕ್ಕೆ.

ಮಡಿಕೇರಿಯಿಂದ ನಾಪೋಕ್ಲಿಗೆ ಹೋಗುವ ರಸ್ತೆ ಬದಿಯಲ್ಲಿ ಮಡಿಕೇರಿಯಿಂದ ಆರು ಮೈಲು ದೂರದಲ್ಲಿ ನನ್ನ ಬಾಬ್ತು 51—75 ಎಕರೆ ಕಾಫಿತೋಟ, 5—72 ಎಕರೆ ಭೂಮಿ, 3 ಎಕರೆ ಏಲಕ್ಕಿ ತೋಟ ಮತ್ತು ಸುಮಾರು 69 ಎಕರೆ ಇತರ ಜಾಗ ಸಹ ಮಾರಾಟಕ್ಕೆ ಇದೆ. ನೀರಿನ ಅನುಕೂಲಕ್ಕೆ ಮತ್ತು ಮಣ್ಣಿನ ಗುಣವೂ ಚನ್ನಾಗಿದೆ. ಎರಡು ಹುಲ್ಲು ಮನೆಗಳು, ಒಂದು ಹುಲ್ಲಿನ ಲೈನ್, ಒಂದು ಹಂಚಿನ ಲೈನ್, ಒಂದು ಹುಲ್ಲಿನ ಮಾಲಾಟ ಮನೆ ಸಹ ಇವೆ. ಈಗಿನ ಫಸಲು ಅಂದಾಜು 20 ಖಂಡಿ ಕಾಫಿ ಸಮೀಪ ಮಾರಲಾಗುತ್ತದೆ. ಅಪೇಕ್ಷೆ ಇರುವವರು ನನಗೆ ಬರೆದು ಕ್ರಯ ನಿಂತಿತ ಮಾಡಿ ತೆಗೆದುಕೊಳ್ಳಬಹುದು.

ಕುಂಬೂರು, ಸೋಮವಾರಪೇಟೆ,

ತಾ. 1—12—1926. ಬಿ. ಸಾಕಮ್ಮ

2—1

ವರ್ತಮಾನ ಸಂಗ್ರಹ.

ಒಳದೇಶ

ಡಿಸ್ಟ್ರಿಕ್ಟ್‌ಬೋರ್ಡ್ ಮೀಟಿಂಗು ಈ ತಾ 13 ನೇ ಸೋಮವಾರ ದಿನ ಮಡಿಕೇರಿ ಕೌನ್ಸಿಲ್ ಹಾಲಿನಲ್ಲಿ ನಡೆಯ...

ಮೆ. ಕೊಂಗಂಡ ಅಪ್ಪಯ್ಯನವರ ಮಗಳು ಶ್ರೀಮತಿ ...ಕೃಷ್ಣಮ್ಮನವರು ಯಲ್ ಟಿ. ಟಿ. ಎಸ್. ಪರೀಕ್ಷೆಯಲ್ಲಿ ಸ...ರ್ಣವಾಗಿ ತೇರ್ಗಡೆ ಹೊಂದಿರುತ್ತಾರೆ.

"ಕೊಡಗು" ಕಂಪೆನಿಯ ಡೈರೆಕ್ಟರುಗಳ ಮೀಟಿಂ... ತಾ. 13ನೇ ಸೋಮವಾರ ದಿನ ಸಾಯಂಕಾಲ 3 ಗ... ಕಂಪೆನಿಯ ಆಫೀಸಿನಲ್ಲಿ ನಡಿಯಲಿಕ್ಕಿದೆ.

ಸಂಟ್ರಲ್ ಹೈಸ್ಕೂಲಿನ ಮೇಲಿನ ಮೆಜರ... ವೈಲಿ ಕಚ್ಚೆಯು ತಲೆಗೇರಿರುವದರಿಂದ ಸದರಿ ... ಟೀಕ್ಷೆಯನ್ನು ತೀರಿಸಿ ಬೇಗನೆ ಮುಚ್ಚುವರೆಂದು ಸು...

ಕೊಡಗು ಜಮೀನ್ದಾರರ ಸಂಘದ ಎಕ್ಸಿಕ್ಯೂಟಿ...ಟಿ ಮೀಟಿಂಗು ಇದೇ ತಾ 13ನೇ ಸೋಮವಾರ ದಿನ ... ಯಂಕಾಲ 4 ಗಂಟೆಗೆ ಸಂಘದ ಆಫೀಸಿನಲ್ಲಿ ನಡಿಯ...

ಸ್ಕೂಲುಗಳ ಸಬ್ ಅಸಿಸ್ಟೆಂಟ್ ಇನ್‌ಸ್ಪೆಕ್ಟರರ ... ನಿನ ಹೆಡ್‌ಕ್ಲಾರ್ಕ ರಾದ ಮೆ. ಚಟಗೋಪಾಲಚಾರ್ಯ... ಮೆ ಬಲ್ಲಡಂಡ ಅಪ್ಪಯ್ಯನವರ ಸ್ಥಳಕ್ಕೆ ಇಂಗ್ಲಿಷ್ ... ನ ಸೆಕೆಂಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ವೀರಾಜಪೇಟೆ ಮ್ಯುನಿಸಿಪಲ್ ಸಭೆಯಾದ ಮೆ. ಸಿ ಯಸ್. ... ತ್ಯಣ್ಣನವರು ಈ ತಿಂಗಳು 1ರಿಂದ ನಾಲ್ಕು ತಿಂಗಳು ರಜೆಯಲ್ಲಿ ಹೋಗಿರುವರು. ಅವರ ಬದಲು ಮೆ. ಯು. ... ಜನಾರ್ಧನಯ್ಯನವರು ಮುನ್ಸೀಫರಾಗಿ ನೇಮಿಸಲ್ಪಟ್ಟಿರು...

ವೆಸ್ಟರನ್ ಇಮೂಂಡ್ ಸರ್ವೆ ಕಂಪನಿಯಲ್ಲಿ ಪ್ರೊಬೇಷನರಾಗಿದ್ದ ಮೆ. ಬೇಕೇರಂಡ ಜಿ. ಕುಟ್ಟಪ್ಪನವರು ಈಗ ಸೇರಿ...ದ ಸರ್ವೆ ಆಫ್ ಇಂಡಿಯಾದ 18ನೇ ಪಾರ್ಟಿಯಲ್ಲಿ ಸಬ್ ... ಸ್ಟಂಟ್ ಸುಪರಿಂಟೆಂಡೆಂಟರಾಗಿ ಕಾಯಂ ಕೆಲಸಕ್ಕೆ ... ನೇಮಿಸಲ್ಪಟ್ಟಿರುತ್ತಾರೆಂತ ತಿಳಿಸಲು ಸಂತೋಷಪಡುತ್ತೇವೆ

ಕೆಲವೇತು ರಜೆಯಲ್ಲಿ ಹೋಗಿದ್ದ ಮೆ. ಟಿಸ್ಸಥಾ... ಯವರು ಈ ತಾ. 1ರಲ್ಲಿ ವೀರಾಜಪೇಟೆ ಆಸ್ಪತ್ರೆಗೆ ಹಿಂತಿರುಗಿ ಬಂದಿರುವರು. ಮೆ. ನಾಯುಡುರವರು ವೀರಾಜಪೇಟೆಯಿಂದ ಸಿದ್ದಾಪುರಕ್ಕೂ, ಮೆ ಪಟ್ಟಡ ಕಾರ್ಯಪ್ಪನವರು ... ದ್ದಾಪುರದಿಂದ ಮಡಿಕೇರಿ ಆಸ್ಪತ್ರೆಗೂ ವಾಪಸು ಬಂದಿರುವ

ನಲ್ವತೊಕ್ಲು ಗ್ರಾಮದ ಮುಕ್ಕಾಟಿರ ಬೋತಿ... ಪ್ಪನವರ ಪತ್ನಿ ಅಮ್ಮವ್ವನವರು ತಾ 27—11—1926 ರ... ಕಾಡ್ಲಿಪೇಟೆಯಲ್ಲಿ ಅವರ ಅಳಿಯ ಬೆಳ್ಯಪ್ಪನವರ ಬಿಡಾರದಲ್ಲಿ ... ತಿವಾಧೀನರಾಗಿಹೋದವರನ್ನು ಅಲ್ಲಿಂದ ಒಡವರೆಲ್ಲರೂ ... ಕೊಡವ ಪದ್ಧತಿ ಮೇರೆ ಕೊಡವ ಸ್ಮಶಾನದಲ್ಲಿ ದಫನ ಮಾಡಿದರು.

ಉಡುಪಿಯ ಪಿ ಎ ಸ್ಟ್ರಿಬ್ಯೂಷನರು ಕಳುಹಿಸಿದ ಮೆ. ಡಿ ಕೆ. ಬರದ್ವಾಜರವರ 1927 ನೇ ಇಸವಿಯ ... ರಾಜ್ಯ ಡೈರಿಯನ್ನು ವಂದನೆಯಿಂದ ಸ್ವೀಕರಿಸುತ್ತೇವೆ ... ದರಲ್ಲಿ ಹಲವು ಉಪಯುಕ್ತ ಮಾಹಿತಿಗಳು ಸಂಗ್ರಹಿಸಲ್ಪಟ್ಟಿವೆ. ಇದರ ಪ್ರಕಟಣೆಯು ಇನ್ನೊಂದು ಕಡೆ ಹಾಕಲ್ಪಟ್ಟಿದೆ ಕನ್ನಡಿಗರೆಲ್ಲರೂ ಇದರ ಪ್ರಯತ್ನವನ್ನು ಪ್ರೋತ್ಸಾಹಿಸುವರೆಂದು ನಂಬುತ್ತೇವೆ

ಬೆಂಗಳೂರಿನ ರಾಮಕೃಷ್ಣ ಮಠದ ಸ್ವಾಮಿ ನಿರ್ಮಲಾನಂದರವರು ಮತ್ತು ಸ್ವಾಮಿ ಶಂಭು ಆನಂದರವರು (ಪೂರ್ವಾಶ್ರಮದಲ್ಲಿ ಕೇಲುಪಂಡ ಚಂಗಪ್ಪನವರು) ಕಳೆದ ತಾ. 25 ರಲ್ಲಿ ಪೊನ್ನಂಪೇಟೆಗೆ ಬಂದು ಅಲ್ಲಿಂದ ತಾ 28ರಲ್ಲಿ ವೀರಾಜಪೇಟೆಗೆ ಬಂದಿದ್ದರು. ತಾ. 30 ರಲ್ಲಿ ಸ್ವಾಮಿನಿರ್ಮಲಾನಂದರವರು ತಲಚೇರಿಗೂ, ಸ್ವಾಮಿ ಶಂಭುವಾನಂದರವರು ಬೆಂಗಳೂರಿಗೂ ತೆರಳಿಹೋದರು

ಹೊಳ ಉದ್ದ ನೆಟ್ಟ ಗೆರೆಯ ಕೆಂಪು ಮತ್ತು ಕಪ್ಪು ಮಿಶ್ರ ಬಣ್ಣದ ಪ್ರಾಯದ ಹಸು ಒಂದು, ಕಪ್ಪು ವರ್ಣದ ಪ್ರಾಯದ ಹಣ್ಣು ಕರು ಒಂದು, ಒಡ್ಡಗೋಡಿನ ಬೀಜ ಇರುವ ಹೋರಿ ಒಂದು, ಈ ಮೂರು ರಾಸುಗಳು ಈಗ ಸುಮಾರು ಮೂರು ವಾರಗಳಿಂದ ಚೇರಳ ಶ್ರೀಮಂಗಲ ಗ್ರಾಮದಲ್ಲಿ ಪೋಲಿಯಾಗಿ ಬಂದು ಸೇರಿಕೊಂಡು ಸಿಕ್ಕಿದವರ ಗದ್ದೆ ತೋಟಗಳಿಗೆ ನುಗ್ಗಿ ನಷ್ಟ ಮಾಡುತ್ತಾ ಇವೆ. ಇವುಗಳ ಮಾಲೀಕರು ಮೆ ಕೊಂಗಟ್ಟೀರ ಬೆಳ್ಯಪ್ಪನವರನ್ನು ವಿಚಾರಿಸಿದರೆ ತಪಶೀಲ್ ಗೊತ್ತಾಗುವದೆಂದು ಒಬ್ಬರು ಬರೆದಿರುತ್ತಾರೆ.

ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರುತನಕ್ಕೆ ಉಮೇದುವಾರರಾಗಿ 1. ವೀರಾಜಪೇಟೆನಾಡಿಗೆ ಮೆ. ಬಟ್ಟಿಯಂಡ ನಂಜಪ್ಪನವರೂ ಮೆ. ಕೇತಿಯಂಡ ಕುಶಾಲಪ್ಪನವರೂ ಮತ್ತು ಮೆ ನೆಲ್ಲಮಡ ಬೆಳ್ಳಿಯಪ್ಪನವರೂ, 2. ನಾಪೋಕ್ಲುನಾಡಿಗೆ ಮೆ. ಅಲೆಯಂಡ ಸುಬ್ಬಯ್ಯನವರೂ, ಮೆ. ಬಿದ್ದಂಡ ಸುಬ್ಬಯ್ಯನವರೂ ಮತ್ತು ಮೆ. ಉದಿಯಂಡ ಮಾಚ್ಚಯ್ಯನವರು, 3. ಅಮ್ಮತ್ತಿನಾಗ ಮೆ. ಐಸಂಡ ಮೊದಪ್ಪನವರು ಮತ್ತು ಪುಲಿಯಂಡ ಉತ್ತಯ್ಯನವರೂ, 4. ಪೊನ್ನಂಪೇಟೆನಾಡಿಗೆ ಮೆ. ಪುತ್ತರಿಮಂಡ ನಂಜಯ್ಯನವರೂ ಮೆ. ಚೆಪ್ಪುಡೀರ ಪೂವಯ್ಯನವರೂ ಮತ್ತು ಮೆ. ಪುಚ್ಚಿಮಾಡ ಪೊದ್ಧಯ್ಯನವರೂ 5. ಶ್ರೀಮಂಗಲನಾಡಿಗೆ ಮೆ. ಅಜ್ಜಮಾಡ ಮೊದಪ್ಪನವರೂ, ಮೆ. ಚೆಪ್ಪುಡೀರ ಪೊನ್ನಪ್ಪನವರೂ ಮತ್ತು ಮೆ. ಕ್ರಿಯಮಾಡ ನಾಣಪ್ಪನವರೂ 6. ಮಡಿಕೇರಿನಾಡಿಗೆ ಮೆ. ಮನೆಯಪಂಡ ಯಂ. ಬೆಳ್ಯಪ್ಪನವರೂ ಮತ್ತು ಮೆ. ಪಾಲಚಂಡ ಚಂಗಪ್ಪನವರೂ 7. ಸಂಪಾಜೆನಾಡಿಗೆ ಮೆ. ಕೊಂಗಟ್ಟೀರ ಅಪ್ಪಯ್ಯನವರೂ ಮತ್ತು

ಈ ಸಮಯವನ್ನು ಬಿಡಬೇಡಿ! ಈ ಸಮಯವನ್ನು ಬಿಡಬೇಡಿ!!

ಪ್ರತಿಯೊಬ್ಬರಿಗೂ ಉಪಯೋಗವಾಗುವ 18ರೂಪಾಯಿಗಳ ಕ್ರಯ ಬಾಳುವಂಥ ವಿಲಾಯತಿಯ ಸಾಮಾನುಗಳು ಅಡಗಿರುವ

ಪ್ರೆಜೆಂಟೇಷನ್ ಬಾಕ್ಸ್

ಎಂಬ ಪೆಟ್ಟಿಗೆ ರೂ. 3—8—0 ಕ್ರಯಕ್ಕೆ ಸಿಕ್ಕುವದು.



ಈ ನಕ್ಷೆಯಲ್ಲಿ ತೋರಿಸಿರುವ

WEMBLY FOUNTAIN PEN ವೆಂಬ್ಲಿ ಫೌಂಟೇನ್ ಪೆನ್

ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಟಿನ ಭಂಗಾರದ ನಿಬ್ಬು ಹಾಕಿದೆ ಈ ಪೇನಾವನ್ನು ನಮ್ಮ 5ನೆಯ ಕಿಂಗ್ ಜಾರ್ಜ್ ಚಕ್ರವರ್ತಿಯವರು ಕೊಂಡು ಸಂತೋಷಪಟ್ಟು ಬಹು ಮೇಲಾದ ಯೋಗ್ಯತಾಪತ್ರ(Certificate) ಕೊಟ್ಟಿರುವರು. ಇದರ ವಿಷಯವಾಗಿ ಬರೆದು ತಿಳಿಸಲು ಸ್ಥಳ ಸಂಕೋಚ ಒಂದನ್ನು ತರಿಸಿ ನೋಡಿದರೆ ಸಂತೋಷ ಪಡುವಿರಿ.

ಬಹುಮಾನಗಳ ವಿವರ:—2 ರೋಲ್ಡ್‌ಗೋಲ್ಡ್ ಭಂಗಾರದ ಡೈಮಂಡ್ ಉಂಗುರ, 2 ಪಾಕೆಟ್ ಕನ್ನಡಿ, 1 ದಂತದ ಬಾಚಣಿಗೆ, 1 ವಿಲಾಯತಿ ಚೀಲ, 12 ನೀಮ ಭಂಗಾರದ ಸೇಫ್ಟಿ ಪಿನ್‌ಗಳು, 24 ಜರ್ಮನ್ ಸೇಫ್ಟಿ ಪಿನ್‌ಗಳು, 6 ಪೆನ್ಸಿಲ್‌ಗಳು, 6 ಪೇನಾಗಳು, 144 ವಿಲಾಯತಿಯ ಇಂಕ್ ಮಾತ್ರೆಗಳು ಇರುವ ಬಾಟಲ್, 1 ವಿಲಾಯತಿಯ ಪೇನಾಕತ್ತಿ, 40 ಸಿಂಪನ್ನುಗಳು ಇರುವ ಒಂದು ಸ್ಟೋನ್ ಯಂತ್ರ 1, ಕತ್ರಿನ ಗುಂಡಿಗಳು, 4 ಪಟ್ಟಿನ ಕೈ ಗುಂಡಿಗಳು, 2 ಕ್ಲಿಪ್‌ಗಳು 1 ವಿಲಾಯತಿಯ ಸೆಂಟ್ ಬಾಟಲ್. ಇಷ್ಟು ಸಾಮಾನುಗಳು ಅಡಗಿರುವ ಪ್ರೆಜೆಂಟೇಷನ್ ಬಾಕ್ಸ್ ಎಂಬ ಪೆಟ್ಟಿಗೆಯನ್ನು ಮೇಲ್ಕಂಡ ಫೌಂಟನ್ ಪೇನಾವನ್ನು ತರಿಸಿಕೊಳ್ಳುವವರಿಗೆ ಇನಾಮಾಗಿ ಕೊಡುವೆವು.

ಕ್ರಯ ಬಹುಮಾನದ ಪೆಟ್ಟಿಗೆ ಸಹಿತ ಪೇನಾ 1ಕ್ಕೆ ರೂ 3—8—0.

ಮ್ಯಾನೇಜರ್—ಜನರಲ್ ಮೇಲ್ ಆರ್ಡರ್ ಕಂಪನಿ,
ಪೋಸ್ಟ್‌ಬಾಕ್ಸ್ ನಂ. 232, ಮದರಾಸು.

[illegible]ಗಳು ಸಾಂತ್ವೈಯ್ಯ ಸಮಸ್ತ ಅಪ್ಲಿಕೇಶನ್ ದಾಖಲ್ ಮಾಡಿರುತ್ತಾರೆ. [illegible], ಪ್ರೈಬರ್ [illegible] ಮತ್ತು ಕಸಿನಾಥನಂತೆ ನೋಟಿಸಿಗೆ ಇದ್ದೋದು [illegible] ಅಪ್ಲಿಕೇಶನ್ ದಾಖಲು ಮಾಡಿದವರ ಹೆಸರು ಇನ್ನೂ [illegible] ತಿಳಿಯಬಂದಿರುವುದಿಲ್ಲ.

ಪ್ರಕಟಣೆ.

ಸೋಮವಾರಪೇಟೆ ನಾಡು ಡಿಸ್ಟ್ರಿಕ್ಟ್ ಬೋರ್ಡ್ ಓಟರುಗಳವರಲ್ಲಿ ಬೇಳೂರು ಗುರುವೇ ಗೌಡರ ಮಗ ಬಸಪ್ಪನ ವಿನಂತಿ.

ಸ್ನೇಹಿತರೇ,

ದೇಶಸೇವೆಯೇ ಈಶಸೇವೆಯೆಂದು ಭಾವಿಸಿ ನನ್ನ [illegible] ಪರವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ತನಕ್ಕೆ [illegible] ಒಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ. ಆದ್ದರಿಂದ ಇದೇ ಡಿಸೆಂಬರ್ ತಾರೀಕು 20 ರಲ್ಲಿ ನಡೆಯತಕ್ಕಿರುವ [illegible] ತಮಗಳಿಗೆ ಇರುವ ಒಂದು ಓಟನ್ನು ನನ್ನ ಪರವಾಗಿ ಉಪಯೋಗಿಸಿ ದೇಶ ಸೇವೆ ಮಾಡಲು ಅವಕಾಶ [illegible] ಒದಗಿಸಿಕೊಡಬೇಕಾಗಿ ಅತಿ ವಿನಯದಿಂದ ಕೇಳಿ ಕೊಳ್ಳುತ್ತೇನೆ.

ತಾ. 30—11—26 ತಮ್ಮ ಗೌರವಿಯ

3—1. ಬಿ. ಜಿ. ಬಸಪ್ಪ.

ಹಿಂದೂದೇಶ.

ಮಹಾತ್ಮಾ ಗಾಂಧಿಯವರು ಸಬರ್ಮತಿ ಆಶ್ರಮದಿಂದ [illegible] ತಾರೀಕಿನಲ್ಲಿ ಹೊರಟು ಗೌಹತಿ ಕಾಂಗ್ರೆಸ್ಸಿಗೆ ಪ್ರಯಾಣಮಾಡುತ್ತಾರೆ.

ಮಿ ಹಾರ್ನಿಮನ್‌ರವರ ಸಂಪಾದಕತ್ವದಲ್ಲಿ "ಇಂಡಿಯನ್ ನೇಷನಲ್ ಹೆರಾಲ್ಡ್" ಎಂಬ ಇಂಗ್ಲಿಷ್ ದೈನಿಕ ಪತ್ರಿಕೆ ಒಂದು ಬೊಂಬಾಯಿಯಲ್ಲಿ ಹೊರಟಿದೆ. ಕಳೆದ ತಿಂಗಳಲ್ಲಿ ಇದರ ಪ್ರಥಮ ಸಂಚಿಕೆಯು ಹೊರಟಿತು.

ಕಲ್ಕತ್ತ ಕುಟೀರ ಎಂಬ ಊರಿನಲ್ಲಿ [illegible] ಬಟ್ಟೆಯನ್ನು ತಯಾರಿಸಲು ಒಂದು ಸಮಾಜವು [illegible] ಕಳೆದ ವರ್ಷ [illegible] ಈಗ [illegible] ರೂಪಾಯಿ ಲಾಭವಾಗಿದೆ. ಈ ವರ್ಷ [illegible] ಲಾಭವಾಗಿದೆ.

ಒರ್ಮ ದೇಶದ [illegible] ಪಟ್ಟಣದಲ್ಲಿ ಒಂದು ದೇವಸ್ಥಾನದಲ್ಲಿ ಬಂದ ಮಯಣದ ಬತ್ತಿಯು [illegible] ಬಿದ್ದು ಬೆಂಕಿ ಹತ್ತಿ ದೇವಸ್ಥಾನವೂ ಸುತ್ತಲಿದ್ದ ಕಟ್ಟಡಗಳೂ ಸುಟ್ಟು ಹೋಗಿ ಸುಮಾರು [illegible] ರೂಪಾಯಿಗಳು ನಷ್ಟವಾಗಿವೆ.

ಸರ್ ಪಿ ಸಿ ರೇಮಂಡರು ಮೈಸೂರು ವಿಶ್ವವಿದ್ಯಾಲಯದ ಕಾನ್ವೊಕೇಶನ್ ಎಡ್ರೆಸ್ (ಹೊಸ ಗ್ರ್ಯಾಜುಯೇಟುಗಳಿಗೆ ಉಪನ್ಯಾಸ) ಕೊಡಲಿಕ್ಕೆ ಬಂದು ಬೆಂಗಳೂರಲ್ಲಿಯೂ ಮೈಸೂರಲ್ಲಿಯೂ ಅನೇಕ ಉಪನ್ಯಾಸಗಳನ್ನು ಕೊಟ್ಟು ಹಿಂದಕ್ಕೆ ಹೋದರು.

ಬೊಂಬಾಯಿ ಅಧಿಪತ್ಯದ [illegible] ಜಿಲ್ಲೆಯಲ್ಲಿ [illegible] ಎಂಬವನು ಸರಬರಾಜು [illegible] ಗುರಿಪಡಿಸಲ್ಪಟ್ಟಿದ್ದಾನೆ. ಒಂದು ಸಿದಿಯನ್ನು ಒಗೆದು [illegible] ಕದ್ದು ಕದ್ದ 18 ತಿಂಗಳ ಪ್ರಾಯದ ಒಂದು ಮಗುವನ್ನು ಒಲಿಕೊಟ್ಟು ನಿದಿಯನ್ನು ಒಗೆದು ಅದೇ ಗುಂಡಿಯಲ್ಲಿ ಆ ಮಗುವಿನ ಶವವನ್ನು ಹೂಳಿದುದರಿಂದ ಒಂದು ಮೊಕದ್ದಮೆ ನಡೆದಿದ್ದಾಗಿದೆ.

ಬಂಗಾಳದ [illegible] ಎಂಬ ಊರು ಮತ್ತು ನೆರೆ ಗ್ರಾಮಗಳ ಸುಮಾರು 1000 ಕ್ರಿಶ್ಚಿಯನರು ತಮ್ಮ ಮನಃಪೂರ್ತಿಯಾಗಿ ಹಿಂದೂ ಮತಕ್ಕೆ ಸೇರಿದರು. ಇವರನ್ನು ಹಿಂದೂ ಮತಕ್ಕೆ ತೆಗೆದುಕೊಳ್ಳುವಾಗ ಹೋಮ ಮುಂತಾದ ಶಾಸ್ತ್ರ ವಿಧಿಗಳು ಆಚರಿಸಲ್ಪಟ್ಟವು. ಸುಮಾರು 20000 ಜನರಿಗೆ ಊಟ ಕೊಡಲಾಯಿತು ಎಂತ ಸತ್ಯಚರಣರಾಯರು ತಿಳಿಸುತ್ತಾರೆ.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಹೆಚ್ಚು ಸಂಖ್ಯೆ ಇರುವ ಪಾರ್ಟಿಯ ಮುಂದಾಳನ್ನು ಕರೆದು ಮಂತ್ರಿಗಳನ್ನು ಆರಿಸಿಕೊಳ್ಳಲು ಹೇಳುವ ಪದ್ಧತಿಮೇರೆ ಸ್ವರಾಜ್ಯ ಪಕ್ಷದ ಮುಂದಾಳಾದ ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ಇವರಿಗೆ ಗವರ್ನರು ಹೇಳಿದ್ದಕ್ಕೆ ತಮ್ಮ ಪಾರ್ಟಿಯ ತತ್ತ್ವಕ್ಕನುಗುಣವಾಗಿ ತಾವು ಸರಕಾರದ ಉದ್ಯೋಗವನ್ನು ಕೈಕೊಳ್ಳುವದಿಲ್ಲವಾಗಿ ಹೇಳಿದ್ದಾರೆ. ಸ್ವತಂತ್ರ ಪಕ್ಷದ ಮುಂದಾಳುಗಳನ್ನು ಕರೆದು ಕೇಳುತ್ತಿದ್ದಾರೆ. ಸ್ವತಂತ್ರ ಪಕ್ಷದವರು ತಾವು [illegible] ಜೊತೆ [illegible] ನೆರವಿನಿಂದ [illegible] ಮಂತ್ರಿಮಂಡಲ [illegible]

ಸ್ಟ್ರೀವನ್, ನಾರ್ಟ್ [illegible] ಬೆಂಗಳೂರಿನಲ್ಲಿ 40000 [illegible] ಕರ್ನಾಟಕದಲ್ಲಿ [illegible] ಸಮಯದಲ್ಲಿ ಮಹಾತ್ಮ ಗಾಂಧಿಯವರನ್ನು ಕರ್ನಾಟಕಕ್ಕೆ ಬರಮಾಡಿಕೊಂಡು ಅವರಿಗೆ ಸಂಭಾವನೆ [illegible] ಅವರು "ನಾನೂ ಒಬ್ಬ ಮಾರವಾಡಿಯವನಾಗಿ ಒಂದು 40000ದ ಸಾವಿರದ ಖಾದಿ ಬಟ್ಟೆ ಮಾಡಿದರೆ ಸಾಲದು. ನನ್ನ ಉಪವಾಸಿಗ ಹೊಟ್ಟೆಗೆ ಬೇಕಾದ [illegible] ನನ್ನ [illegible] ಕೆಲಸ ಮಾಡಲು [illegible] ನನ್ನನ್ನು ನೋಡಿ [illegible] ಕಾರ್ಯಕರ್ತರುಗಳು ಅನೇಕರುಂಟಾಗಲಿ. ನಗರದ [illegible] ದಾರಿಯು ದೊಡ್ಡದಾಗಬೇಕು" ಎಂತ ಜವಾಬು ಕೊಟ್ಟಿದ್ದಾರೆ. ಆದಕ್ಕೆ ಕರ್ನಾಟಕದ ಸಂಪಾದಕರವರು ಕೊಟ್ಟಿರುವ ಜವಾಬೇನೆಂದರೆ—"ನಿಮ್ಮಂಥಾ ಜಗತ್ಪ್ರಖ್ಯಾತ ವ್ಯಕ್ತಿಯನ್ನು ಪಡೆಯುವ ಸ್ಪರ್ಧೆಗೆ ಸೇರಲು ಕರ್ನಾಟಕವು ತಯಾರಾಗಿದೆ. ನಿಮ್ಮ ದಾರಿಯು ದೊಡ್ಡದು ಮಾತ್ರ ಎಷ್ಟು ಎಂಬದನ್ನು ತಿಳಿಸಿದರೆ ನಮ್ಮ ಧೈರ್ಯದಿಂದಲೂ ಸಾಹಸದಿಂದಲೂ, ತ್ಯಾಗದಿಂದಲೂ ನಿಮಗೆ ಬೇಕಾಗುವ ದಾರಿಯನ್ನು ಮಾಡಿಕೊಟ್ಟು ನಿಮ್ಮ ಪ್ರೀತಿಯನ್ನು ಪಡೆಯಲು ಪ್ರಯತ್ನಿಸುತ್ತೇವೆ." ಇಂಥಾ ಕನ್ಯೆಯನ್ನು ಪಡೆಯಲು ಕರ್ನಾಟಕದ [illegible] ಒಪ್ಪಿ ಕಂಕಣಬದ್ಧರಾಗಬೇಕೆಂತ ಸಂಪಾದಕರವರು ಪ್ರೇರಿಸುತ್ತಾರೆ.

ಕಲ್ಕತ್ತಾ ಪಟ್ಟಣದ ಬಿಶಪ್ ವಾಲ್ಶ್ ಎಂಬವರು ಒಂದು ಅದ್ಭುತ ಮತ್ತು ವಿಚಿತ್ರ ಸಂಗತಿಯನ್ನು ತಿಳಿಸಿರುತ್ತಾರೆ. ಪ ಶ್ಚಿಮ ಬಂಗಾಳದ ಒಂದು ಕಡೆ ರೆವೆರೆಂಡ್ [illegible] ಎಂಬವರು ತಿರುಗುತ್ತಿರುವಾಗ ಒಂದು ಪ್ರಾಂತ್ಯದಲ್ಲಿ ಭಯಂಕರ ಕಾಟ ಇರುವುದರಿಂದ ಅಲ್ಲಿ ಹೋಗಕೂಡದೆಂತ ಊರವರು ಹೇಳಿದರು. ಅಲ್ಲಿಗೆ ಇವರು ಹೋಗಿ ಒಂದು ಗವಿಯನ್ನು ನೋಡುವಾಗ ಎರಡು ತೋಳಗಳು ಹೊರಟವು. ಇವನ್ನು ಕೊಂದಮೇಲೆ ಗವಿಯನ್ನು ಪರೀಕ್ಷಿಸುವಾಗ ಎರಡು ಕೋಳದ ಸಂಗಡ ಇಬ್ಬರು ಹುಡುಗಿಯರೂ—ಒಂದಕ್ಕೆ 8 ವರ್ಷ ಪ್ರಾಯ, ಇನ್ನೊಂದಕ್ಕೆ 2 ವರ್ಷ ಪ್ರಾಯ, ಕಂಡುಬಂತು. ಈ ಹುಡುಗಿಯರು ಚಿಕ್ಕವರಾಗಿದ್ದಾಗ ಹುಡುಗಿಯರು ತಪ್ಪಿ [illegible] ಗಳಿಂದ ಒಯ್ಯಲ್ಪಟ್ಟು ತೋಳಗಳಂತೆ ಬೆಳೆಯುತ್ತಿದ್ದರು. ಒಂದು ಪ್ರಾಂತ್ಯದಲ್ಲಿ ಅನಾಥಾಲಯದಲ್ಲಿ ಇವರನ್ನು ಹಿಡಿದರು. [illegible] ಪ್ರಾಂತ್ಯದಲ್ಲಿ ಸದ್ಗತಿ ಇರುವುದರಿಂದ ಹಾಗೆ ಮಾಡಿದ ಪಕ್ಷಿಗಳನ್ನು ತೋಳವು ಸಾಕಿ ಬೆಳೆಸಿದಂತೆ ಊಹಿಸಲಾಗಿದೆ. ಆ ಶಹರ ಮಿದ್ನಾಪುರದ ಅನಾಥಾಲಯದಲ್ಲಿ ಇವರನ್ನು ಇಟ್ಟುಕೊಂಡಲ್ಲಿ ಚಿಕ್ಕ ಮಗು ಸತ್ತುಹೋಯಿತು. ದೊಡ್ಡವಳು ಈಗೀಗ ಒಂದೊಂದು ಮಾತು ಕಲಿಯುತ್ತಾಳೆ. [illegible] ಮಾಂಸವನ್ನು ಕೈಯಿಂದ ಮುಟ್ಟದೆ ಬಾಯಿಂದಲೇ ಕಚ್ಚಿ ತಿನ್ನುವ ಅಭ್ಯಾಸವಿದ್ದದ್ದು ಬಿಟ್ಟು ಕೈಯನ್ನು ಉಪಯೋಗಿಸಲು ತೊಡಗಿದ್ದಾಳೆ. ಇವಳನ್ನು ಕ್ರಿಶ್ಚಿಯನ್ ಜಾತಿಗೆ ಸೇರಿಸಿಕೊಂಡಿದ್ದಾರೆ. ಮೃಗಗಳಿಗೆ ಬದಲು ಮನುಷ್ಯರಿಗೆ ತೋರಿಸುತ್ತಾ ಅವುಗಳ ಹಿಂದೆ ಮುಂದೆ ತಿರುಗುತ್ತಾಳೆ.

ಸಿದ್ಧವಾಗಿದೆ! ತರಿಸಿಕೊಳ್ಳಿರಿ!!

[illegible] ಹೊಸ ಆವೃತ್ತಿ

ಸ್ವರಾಜ್ಯ ಡೈರಿ!

ಸಂಪಾದಕ—ಟಿ. ಕೆ. ಭಾರದ್ವಾಜ

ಹಿಂದೂಸ್ಥಾನದ ರಾಜಕೀಯ, ಸಾಮಾಜಿಕ ಸಾಂಪತ್ತಿಕ ವಿದ್ಯೆ, ವೈಜ್ಞಾನಿಕ, ವ್ಯಾಪಾರ ಮೊದಲಾದ ಮಹತ್ವ ವಿಷಯಗಳ ಮಾಹಿತಿಯೂ ದೇಶಭಕ್ತರ ಭಾವ ಚಿತ್ರಗಳೂ ಇವೆ. ಇಂಥ ಸರ್ವಾಂಗ ಸುಂದರವಾದ ಮತ್ತು ಅಗ್ಗವಾದ ಡೈರಿಯು ಕರ್ನಾಟಕದಲ್ಲಿ ಬೇರೆ ಇಲ್ಲ.

ಸಣ್ಣ ಸೈಜು ೦—೮—೦, ಮುಚ್ಚಳದ್ದು ೦—೧೦—೦. ದೊಡ್ಡ ಸೈಜು ೦—೧೨—೦, ಮುಚ್ಚಳದ್ದು ೦—೧೪—೦ ವ್ಯಾಪಾರಸ್ಥರಿಗೆ ಕಮಿಶನ್ ಕೊಡಲ್ಪಡುವದು. ಪ್ರತಿ ಮೂರು ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿ ದೊರಕುವದು.

ಪಿ. ಎ. ಪೈ ಬ್ರದರ್ಸ್,

ಪ್ರಕಾಶಕರು—ಉಡುಪಿ ದ. ಕ.

ಮಾರಾಟಕ್ಕೆ.

ಮಡಿಕೇರಿ ಸಂತವರಕಟ್ಟೆಗೆ ಸಮೀಪ ಮಂಗಳೂರು ರಸ್ತೆ ಬದಿಯಲ್ಲಿ ಇರುವ ಸ್ವಲ್ಪ ಜಾಗವೂ, ಕರ್ಣಂಗೇರಿ ಗ್ರಾಮದ ಸ ನಂ 485 1 ನ 21—18 ಎಕರೆ 11—4—0 ಕಂದಾಯದ ಕಾಫಿನ ತೋಟ್ಟವೂ ಸಾಲಿ ಎಂಬ ಒಂದು ತೋಟವೂ ಮತ್ತು ಸ ನಂ 485, 2ರ 1 40 ಎಕರೆ 2—13—0 ಕಂದಾಯದ ಕಂಭವೂ ಸಹ ಮಾರಾಟಕ್ಕೆ ಇದೆ. ಆದಕ್ಕೆ ಕ್ರಯ ರೂ 600—0—0 ಸ್ವಲ್ಪ ಹೆಚ್ಚು ಕಡಿಮೆ ಮಾಡಿಕೊಡಬಹುದು. ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು

'N" C/o Manager.

4—2 "Kodagu" Mercara

ಮಡಿಕೇರಿ ಮ್ಯಾನೇಜರ್, "ಕೊಡಗು"

ತಾ 2—11—1926 ಮುಖಾಂತರ "ಎನ್" ರವರಿಗೆ

ಪತ್ರವ್ಯವಹಾರ

[ವಾಚಕರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. ಸಂ]

ಮಹಾಶಯರೇ,

ಲೋಕಪಾವನದ ಕಳೆದ ಎರಡು ಸಂಚಿಕೆಗಳಲ್ಲಿ ಹೊರಟ ನನ್ನನ್ನು ಕುರಿತ ವಿಷಯಗಳನ್ನು ನೀವು ನೋಡಿರ ಬಹುದು. ಸಾಧಾರಣವಾಗಿ ಲೋಕಪಾವನದಲ್ಲಿ ಹೊರಡುವ ಟೀಕೆಗಳಿಗೆ ಉತ್ತರವನ್ನೀಯಲು ನನಗೆ ಇಚ್ಛೆಯಿಲ್ಲವಾದರೂ ಒಂದು ಮನಸ್ಸಿನಲ್ಲಿ ನಾನು ಬೇರೆಯವರ ಮೇಲೆ ಇಲ್ಲದ ಅಪವಾದಗಳನ್ನು ಹೊರಿಸಿದ್ದೇನೆಂತ ತಪ್ಪು ಅಭಿಪ್ರಾಯಗಳು ನೆಲೆಗೊಳ್ಳಬಹುದೆಂಬ ಅನುಮಾನದಿಂದ ಸ್ವಲ್ಪ ವಿಷಯಗಳನ್ನು ಬರೆಯುತ್ತೇನೆ.

ಭಾಗಮಂಡಲದ ಇನ್ಸ್ಪೆಕ್ಟರ್ ಬಂಗ್ಲೆ ಬಳಿ ನಡೆದ ಗೌಡ ಮಹಾ ಜನರ ಮೀಟಿಂಗಿನಲ್ಲಿ ಮಿ ಶ್ರೀಪತಿರಾಯರು ಮಲೆಗಳನ್ನು ಪಕ್ಕಿಗೆ ಜಡ ದರಕಾಸ್ತು ಹಾಕುವವರಿಗೆ ಕೊಡುವಂತೆ ಕಮಿಶನರಲ್ಲಿ ಹೇಳಿರುತ್ತಾರೆಯೆಂದೂ ಆ ವಿಷಯ ನನಗೆ ಗೊತ್ತಿದೆಯೆಂದೂ ನಾನು ಹೇಳಿದಂತೆ ಲೋಕಪಾವನದಲ್ಲಿ ಹೊರಟಿದೆ. ಆದು ಸುಳ್ಳು. ಮಿ. ಶ್ರೀಪತಿರಾಯರು ಹಾಗೆ ಮಾತಾಡಿದ್ದಾರೆಂತ ನನಗೆ ಗೊತ್ತಿಲ್ಲ. ನನಗೆ ಅದು ಗೊತ್ತುಂಟೆಂದು ನಾನು ಹೇಳಿದ್ದೂ ಇಲ್ಲ. ಅಲ್ಲದೆ ಮಿ ಶ್ರೀಪತಿರಾಯರ ಮೇಲೆ ನಾನು [illegible] ಅವರಿಗೆ ಕೊಡುವ ಉದ್ದೇಶ ಪ್ರಯುಕ್ತ ನನ್ನ್ಯಾವುದೂ ಆವಶ್ಯಕವಿದೆ. ಆಂಥ ಅಪವಾದವನ್ನು ನೀವು ನಂಬತಕ್ಕದ್ದಲ್ಲವೆಂದು ಹೇಳುತ್ತೇನೆ. ಅಲ್ಲದೆ ಮಿ. ಶ್ರೀಪತಿರಾಯರ ಮೇಲೆ ಯಾವ ಅಪವಾದವನ್ನು ನಾನು ಹೊರಿಸಿಲ್ಲ. ಆದೇ ಸಂಚಿಕೆಯಲ್ಲಿ ಹೊರಟ ಇನ್ನು ಕೆಲವು ಸುಳ್ಳು ಮಾತುಗಳು ನನ್ನ ವಿಷಯವಾಗಿರುವುದರಿಂದ ಅದನ್ನು ನಾನು ಖಂಡಿಸಿ ಬರೆಯುವದು ಅವಶ್ಯ ಕಾಣುವುದಿಲ್ಲ.

ತಾರೀಕು 25—11—'26ರಲ್ಲಿ ಹೊರಟ 'ಲೋಕಪಾವನ'ದಲ್ಲಿ ನಾನು ಮಿ. ಶ್ರೀಪತಿರಾಯರನ್ನು ದೂಷಿಸಿದ್ದೇನೆಂದು ಬರೆದಿರುತ್ತಾರೆ. ಅಲ್ಲದೆ ಮಿ ಶ್ರೀಪತಿರಾಯರು ಅನೇಕ ಕೆಲಸಗಳನ್ನು ಕೌನ್ಸಿಲಿನಲ್ಲಿ ಮಾಡಿರುವರೆಂದು ಸಹ ಬರೆದಿರುತ್ತಾರೆ. ಮಿ. ಶ್ರೀಪತಿರಾಯರ ಕಡೆಯವರಿಗೆ ಶ್ರೀಪತಿರಾಯರು ಮಾಡಿದ ಸಹಾಯಗಳನ್ನು ಪಟ್ಟಿಯಿಟ್ಟು ಒಂದು ಸಮಯ ಬೇಕಿತ್ತು ಅಷ್ಟೇ ವಿನಃ ನಾನು ಮಿ ಶ್ರೀಪತಿರಾಯರನ್ನು ಎಂದೂ ದೂಷಿಸಿಲ್ಲ.

ಮಿ ಶ್ರೀಪತಿರಾಯರು ಮೇರು ಪರ್ವತವನ್ನೇ ಕಿತ್ತರಲಿ, ಯಾ ಸಮುದ್ರಕ್ಕೆ ಸೇತುವೆಯನ್ನೇ ಕಟ್ಟಿರಲಿ ಆ ವಿಷಯ ನಾನು ಮಾತಾಡುವಂತಿಲ್ಲ. ನಾನು ಕೌನ್ಸಿಲು ಬಗೆಗೆ ಯೋಗ್ಯನಾದು ತಿಳಿದರೆ ಮಹತ್ವ ನನಗೆ ಜನರು ಓಟುಗಳನ್ನು ಕೊಟ್ಟರೆ ಸಾಕು. ನಾನು ಮಿ. ಶ್ರೀಪತಿರಾಯರನ್ನು ದೂಷಿಸಿ ಜನರ ಓಟುಗಳನ್ನು ಪಡೆಯಬೇಕಿಲ್ಲ. ಮತ್ತು ಹಾಗೆ ಅವರನ್ನು ದೂಷಿಸಲು ಆಗತ್ಯವೂ ಇಲ್ಲ. ಯಾಕಂದರೆ ಸುಮಾರು ಮೂರು ತಿಂಗಳ ಹಿಂದೆ ಮಿ. ಶ್ರೀಪತಿರಾಯರೇ ನನಗೆ ಕೌನ್ಸಿಲ್ ಚುನಾವಣೆಗೆ ಸಹಾಯ ಮಾಡುತ್ತೇನೆಂದೂ ಅವರು ಈ ಸಾರಿ ಕೌನ್ಸಿಲಿಗೆ ನಿಲ್ಲುವುದಿಲ್ಲವೆಂದೂ ಹೇಳಿರುವರು. ಅಷ್ಟೇ ಅಲ್ಲ, ಅವರು ಇದೇ ಮಾತುಗಳನ್ನು ಬೇರೆಯವರಲ್ಲಿ ಸಹ ಹೇಳಿರುವರು. ಹೀಗೆ ನನಗೆ ಸಹಾಯ ಮಾಡ ಬದ್ಧರಾದ ಮಿ. ಶ್ರೀಪತಿರಾಯರನ್ನು ನಾನು ಏಕೆ ದೂಷಿಸಬೇಕು? ಅಷ್ಟಾದರೂ ಮಿ. ಶ್ರೀಪತಿರಾಯರ ಕಡೆಯವರು ತಿಳಿಯಬೇಕಲ್ಲವೇ.

ಎನ್. ಮುದ್ದಪ್ಪ.

ಬೆಂಗಳೂರಿನ ಕೊಡಗರ ಪುತ್ತರಿ ಹಬ್ಬ.

ಬೆಂಗಳೂರಿನ ಕೊಡಗರೆಲ್ಲರೂ ಸೇರಿ ತಮ್ಮ ಪುತ್ತರಿ ಹಬ್ಬವನ್ನು ಇದೇ ತಾರೀಕು 21ನೇ ಬಾನುವಾರ ರಾತ್ರಿ ಬಹದೂರ್ ಆರ್ಕಾಟ್ ನಾರಾಯಣ ಸ್ವಾಮಿಯವರ ಸ್ಕೂಲ್ ಹಾಲಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿಸಿದರು. ಸುಮಾರು 45 ಮಂದಿ ಕೊಡಗರು ಹಾಜರಿದ್ದರು. ಕೊಡವ ಪದ್ಧತಿ ಪ್ರಕಾರ 'ತಂಬಿಟ್ಟು' ಮೊದಲಾದುವುಗಳನ್ನು ಸೇವಿಸಿದನಂತರ ಮಿ. ಬಿಟ್ಟಿಯಂಡ ಮುತ್ತಣ್ಣನವರು ಮತ್ತು ಕೆ. ಬಿ. ತಿಮ್ಮಯ್ಯ (ಬಿ ಟಿ) ಮೊದಲಾದವರು ಕನ್ನಡ ಮತ್ತು ಇಂಗ್ಲಿಷ್ ಹಾಡುಗಳಿಂದ ನೆರೆದವರನ್ನು ಸಂತೋಷಗೊಳಿಸಿದರು. ತದನಂತರ ಸೆಕ್ರೆಟರಿಯವರಾದ ಮಿ. ಸಿ. ಸಿ. ಮಾದಪ್ಪನವರು ಅಲ್ಲಿ ನೆರೆದವರಿಗೆಲ್ಲ ತಮ್ಮ ಸಂತೋಷವನ್ನು ಸೂಚಿಸಿ ಇನ್ನು ಮುಂದನ್ನೂ ಹೀಗೆಯೇ ಒಗ್ಗಟ್ಟಿನಿಂದ ಇಂಥ ಶುಭಕಾರ್ಯಗಳನ್ನು ನಡೇಸಲು ಎಲ್ಲರೂ ಸಹಾಯಕರಾಗಬೇಕೆಂದು ಒಂದು ಸಣ್ಣ ಭಾಷಣವನ್ನು ಮಾಡಿದರು.

ಇದಾದ ಕೂಡಲೆ ಪ್ರೆಸಿಡೆಂಟರಾದ ಮಿ. ಸಿ. ಮಾಚಯ್ಯನವರು ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅವರು ಹೇಳಿದ್ದೇನೆಂದರೆ—"ಕೊಡಗರ ಮುಖ್ಯವಾದ ಹಬ್ಬಗಳಲ್ಲಿ ಪುತ್ತರಿ ಹಬ್ಬವು ಒಂದು. ಈ ಹಬ್ಬದಲ್ಲಿ ಎಲ್ಲರೂ 'ಪೊಲಿಪೊಲಿ' ಯಾ "ಪೊಲಿದೇವ" ಎಂದು ಕೂಗುತ್ತಾರೆ. ಕಳೆದ ವರ್ಷದ ಬೆಳೆಗಿಂತಲೂ ಈ ವರ್ಷದ ಬೆಳೆಯು ಒಂದಕ್ಕೆ ಹತ್ತು ಅಥವಾ ನೂರಾಗಬೇಕೆಂಬುವುದೇ ಇದರ ಅರ್ಥವು. ನಮ್ಮ ಯಾವ ಹಬ್ಬದಲ್ಲಿಯಾದರೂ, ನಾವು ದೇವರ ನಾಮವನ್ನು ಹೇಳಲು ಮರೆಯುವುದಿಲ್ಲವು. ಯಾವ ಸಂತೋಷ ಕಾಲದಲ್ಲಿಯೂ ನಮ್ಮ ನಾಲಗೆಯಲ್ಲಿ ದೇವ ಸ್ಮರಣೆಯು ಇದ್ದೇ ಇರುತ್ತದೆ. ದೇವ ಭಕ್ತಿಯು ಎಲ್ಲರಲ್ಲಿಯೂ ಇದ್ದೇ ಇರಬೇಕು. ಆದರೆ ಅನೇಕ ಕೊಡಗರಲ್ಲಿ ನೆಲಸಿರುವ ಭ್ರಾಂತಿಭಾವನೆ ಅಥವಾ ಮಿಥ್ಯಾಭ್ರಮೆ (Superstition) ಯಲ್ಲಿ ನನಗೆ ಎಳ್ಳಷ್ಟು ನಂಬಿಕೆ ಇಲ್ಲವು. ಈ ಮೂಢ ಭಾವನೆ ಇದ್ದೇ ನಮ್ಮ ಜನರು ಇಷ್ಟು ಹಿಂದುಳಿದಿರುವರು. ಇಂಥಾ ಮೂಢ ಭಾವನೆಯಿಂದ [illegible] ಪೂರ್ವಜರು ನಮ್ಮ ದೇಶಕ್ಕೆ ಗಳಿಸಿದ್ದ ಕೀರ್ತಿ [illegible] ನಾಶವಾಗುತ್ತಿರುವುದು. ನಮ್ಮ [illegible] ಇಂಥ ವ್ಯವಹಾರದಲ್ಲಿ ನಂಬಿಕೆ ಇಟ್ಟಿದ್ದರೆ [illegible] ಇಂಥಾ ವಿಷಯಗಳಲ್ಲಿ ನಂಬಿಕೆ ಇಟ್ಟಿದ್ದರೆ 1837 ನೇ ಇಸವಿಯಲ್ಲಿ ಅವರಿಗೆ ಅಂಥ ಕಾರ್ಯವನ್ನು ತೋರಿಸಿ ಕೀರ್ತಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲವು. ನಮ್ಮ ಪೂರ್ವಜರು ತಮ್ಮ ಸಾಹಸ ಕಾರ್ಯಗಳಿಂದ ದಕ್ಷಿಣ ಹಿಂದೂದೇಶದಲ್ಲಿಯೇ ಕೀರ್ತಿಹೊಂದಿರುವರು. [illegible], ಮಂದರಾಸ್, ಮೊದಲಾದ ಪ್ರದೇಶಗಳಲ್ಲಿ [illegible], ಧೀರರು ಎಂದು ಹೇಳುತ್ತಿರುವರು. ಈಗ ನಾವು ಹೀಗೆ ಕತ್ತಲೆಯಲ್ಲಿದ್ದರೂ ಎಂದೂ ಬೇರೆಯವರಿಗಿಂತ ಕಡಿಮೆ ಇಲ್ಲವು ಅಂಥ ಸಂದರ್ಭವು

ಗಳಿಗೆ ಹುಟ್ಟಿದ ನಾವು ಇಂದು ಪರರನ್ನು ದೂಷಿಸುವುದರಲ್ಲಿಯೂ ಇಬ್ಬರಿಗೆ ಜಗಳವನ್ನುಂಟುಮಾಡುವುದರಲ್ಲಿಯೂ ಅನಾವಶ್ಯ ಕಾಲ ಕಳೆಯುತ್ತೇವೆ. ಇದರ ಜೊತೆಗೆ ಮಿಥ್ಯಾಭ್ರಮೆಯೊಂದು. ನಮ್ಮ ತಂದೆತಾಯಿಗಳೇ ನಶ್ಯಹೋಗಿರಲಿ, ಅಥವಾ ನಮ್ಮ ತಂಗಿಯ ಮಾನಭಂಗವಾಗುತ್ತಿರಲಿ ನಾವು ಟಿಕ್ಕೆಸದೆ ಹಿಂತಿರುಗಿ ಹೋಗಿಬಿಡುತ್ತೇವೆ. ದಾರಿಯಲ್ಲಿ ಬೆಕ್ಕು ಮೊದಲಾದ ಬಡ ಪ್ರಾಣಿಗಳು, ಅಥವಾ ಒಬ್ಬ ಕೋಣವಾಣ ಕಂಡಿದುದೇ ಇದಕ್ಕೆಲ್ಲಾ ಕಾರಣವು. ಇಂಥ ಅಲ್ಪ ಭಾವನೆಯನ್ನು ಮಡಗಿಕೊಂಡಿದುದರಿಂದಲ್ಲವೇ ನರೆ ಊರಿನ ದೇಶಗಳೆಲ್ಲವೂ ಮುಂದುವರಿಯುತ್ತಿರುವಾಗ ನಾವು ಇಷ್ಟು ಹಿಂದುಳಿದಿರುವುದು. ನಾವು ಪರ ಊರಿನವರಿಂದ ಎಷ್ಟೋ ಕಲಿಯಲಿಕ್ಕಿದೆ. ಸ್ಕೂಲು ಮತ್ತು ಕಾಲೇಜುಗಳಲ್ಲಿ ಓದಿದ ಮಾತ್ರ ನಮಗೆ ಭೂಲೋಕದ ವಿಷಯ ತಿಳಿದಂತಾಗುವುದಿಲ್ಲವು. ಪರ ಊರಿನವರ ಬುದ್ಧಿವಂತಿಕೆ ಬೆರೆತು, ಅವರ ಸದ್ಗುಣಗಳನ್ನು ಕಂಡು ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ಹಾಳುಮಾತುಗಳಲ್ಲಿ ಕಾಲವನ್ನು ಕಳೆಯದೆ ದಿನಂಪ್ರತಿ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾ ಬಂದರೆ ಅವನಿಗೆ ಬಂದಿತೆಂಬಾಗಿಯೂ ದೇವರು ಒಲಿಯುವನು. ತಾನು ತನ್ನ ನಿತ್ಯ ಕೆಲಸವನ್ನು ಮರೆಯದೆ ಯಾವಾಗಲೂ ಮಾಡುತ್ತಾ ಬಂದರೆ, ದೇವರನ್ನು ಪೂಜಿಸುವುದು ಅವಶ್ಯವಿಲ್ಲವೆಂದು ಗೀತೆಯಲ್ಲಿ ಹೇಳಿರುವುದು. ದೇವರನ್ನೇ ಭಜಿಸಬಾರದೆಂಬುದು ನನ್ನ ಅಭಿಪ್ರಾಯವಲ್ಲವು. ದೇವರನ್ನು ಪ್ರತಿ ಒಬ್ಬರೂ ನೆನೆಯಬೇಕು. ಆದರೆ ಇನ್ನೊಬ್ಬನಿಂದ ತಾನು ಗೊತ್ತ ಸನ್ಯಾಸಿ ಎನ್ನಿಸಿಕೊಳ್ಳಬೇಕೆಂದು ಕಪಟ ವೇಷಧಾರಿಯಾಗಿರಬಾರದು. ಸತ್ಯಸಂಧತೆಯಿಂದ ದೇವರನ್ನು ಮನಸ್ಸಿನಲ್ಲಿ ದಿನಂಪ್ರತಿ ನೆನೆದರೆ ದೇವರು ಹಿಂತೆ ಒಲಿಯುವನು. ಗೊಡ್ಡು ಹರಟೆಗಳಲ್ಲಿ ಕಾಲವನ್ನು ಕಳೆಯದೆ, ಭ್ರಾಂತಿಪದಗಳಲ್ಲಿ ನಂಬಿಕೆಯನ್ನಿಡದೆ, ತಮ್ಮ ಕೊಡಗಿನ ಕೀರ್ತಿಯನ್ನು ಬಿಟ್ಟು ಎಲ್ಲರಲ್ಲಿಯೂ ಶಾಂತಿಗುಣದಿರುವ ಒಬ್ಬಶಕ್ತಿಯನ್ನು ವೃದ್ಧಿಪಡಿಸಿದರೆ ನಮ್ಮ ಕೊಡಗು ದೇಶವು ಇನ್ನೂ ಹೆಚ್ಚು ಕೀರ್ತಿ ಹೊಂದುವುದಕ್ಕೆ ಯಾವ ಸಂಶಯವೂ ಇಲ್ಲ" ವೆಂದು ಹೇಳಿ ತಮ್ಮ ಭಾಷಣವನ್ನು ಪೂರ್ತಿಗೊಳಿಸಿದರು.

ಇದಾದ ಮೇಲೆ ಎಲ್ಲರೂ ಹೋಗಿ ಕಡಿರು ಕುಡಿದುಕೊಂಡು ಬಂದೆವು. ಇಷ್ಟರಲ್ಲಿಯೇ ಕಾಲವು ಬಹಳ ಮೀರಿದುದರಿಂದ ಎಲ್ಲರೂ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

"ಹಾಜರಿದ್ದವ."

ಲೋಕಲ್‌ಫಂಡ್ ರೋಡು

ಅಯ್ಯಾ,

ಪೊನ್ನಂಪೇಟೆಯಿಂದ ಶಾನೂರಿಗೆ ಹೋಗುವ ರಸ್ತೆಯ ಮಧ್ಯ ತಾವರೆ ಕೆರೆಯಿಂದ ಪರಪರ ವರೆಗೆ ಇರುವ ಲೋಕಲ್ ಫಂಡ್ ರಸ್ತೆಯನ್ನು ಈ ವರ್ಷ ಮಿ. ಮುತ್ತುಸ್ವಾಮಿ ಪಿಳ್ಳೆಯವರು ಸರಕಾರದಿಂದ ರಸ್ತೆ ರಿಪೇರಿಗೆ ವಹಿಸಿಕೊಂಡು ಲಾಭದ ಮೇಲೆ ದೃಷ್ಟಿ ಇಡದೆ ತುಂಬಾ ತೊಂದರೆ ತೆಗೆದುಕೊಂಡು ಕೆಲಸ ಚೆನ್ನಾಗಿ ಮಾಡಿಸಿರುತ್ತಾರೆ. ಇದರಂತೆ ಬೇರೆ ರೋಡಿನ ಕಂಟ್ರಾಕ್ಟರುಗಳು ಸಹ ಧನ ಲಾಭ ನೋಡದೆ ಇಂಥಾ ಕೆಲಸವನ್ನು ಆಗುವಷ್ಟು ಮನಃಪೂರ್ತಿಯಿಂದ ಮೇಲ್ಕಂಡವರಂತೆ ನಡೆಸುವರೆಂದು ನಂಬಿದ್ದೇನೆ.

ಪೊನ್ನಂಪೇಟೆಯಿಂದ ಶಾನೂರಿಗೆ ಹೋಗುವ ರಸ್ತೆಯ ಕೆಲಸವು ತೃಪ್ತಿಕರವಾಗಿ ಆಗುವುದಿಲ್ಲ. ಈ ರಸ್ತೆಯಿಂದ ಅನೇಕ ಗ್ರಾಮಕ್ಕೆ ಉಪಯೋಗವಿರುವುದರಿಂದ ಇದನ್ನು ನ್ಯಾಯವಾದ ರಿಪೇರಿ ಮಾಡದಿದ್ದಲ್ಲಿ ತುಂಬಾ ತೊಂದರೆ ಇರುತ್ತೆ. ಸರಕಾರದವರು ಜನರಿಗೆ ಹೆಚ್ಚಿನ ಪ್ರಯೋಜನ ತೋರುವ ರಸ್ತೆಯನ್ನು ನ್ಯಾಯವಾಗಿ ಮಾಡಿಸಿಯಾರೆಂದು ನಂಬಿದ್ದೇನೆ.

ಪ್ರಯಾಣಿಕ.

ಪಟ್ಟಿಬಾಣೆ ಮೀಟಿಂಗು.

ತಾರೀಕು 13—11—26 ರಲ್ಲಿ ಪಟ್ಟಿಬಾಣೆ ನಾಡು ಮಂದಿನಲ್ಲಿ ಪಟ್ಟಂಗಾಲ, ನಾಂಗಾಲ ಮತ್ತು ಬಿಳುಗೋಡು ಗ್ರಾಮಸ್ಥರು ಮಿ. ಚೇಂದ್ರಿಮಾಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗ್ ಮಾಡಿದರು. ಮೀಟಿಂಗಿನಲ್ಲಿ ಮಿ. ಬಿಟ್ಟಿಯಂಡ ಸಂಜಪ್ಪನವರೂ, ಮಿ. ಕೋಟೀರ ಚಿಂಗಪ್ಪನವರೂ, ಕೌನ್ಸಿಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸ ಕುರಿತು ಮಾತಾಡಿ ತಮ್ಮ ಪಾರ್ಟಿಯ ತತ್ವವನ್ನು ವಿವರಿಸಿದರು. ಅಲ್ಲದೆ ಕೊಡವ ಸಭೆಯ ತತ್ವವನ್ನು ಪೂರ್ತಿಯಾಗಿ ವಿರೋಧಿಸಿ ಈ ಸಭೆಯಿಂದ ದೇಶಕ್ಕೆ ಬಹಳ ಕೆಡಕೆಂದು ದೇಶದಲ್ಲಿ ಜನರಿಗೆ ಐಕ್ಯಮತ್ಯ, ಸಹನಶೀಲತ್ವ ಇರುವುದಿಲ್ಲವೆಂತಲೂ, ಈ ಕಾರಣದಿಂದ ಪಾರ್ಟಿ ತತ್ವ ಪ್ರಕಾರ ಜನಾಂಗದ ಸಂಘದ ತತ್ವಕ್ಕನುಗುಣವಾದ ಅಭಿಪ್ರಾಯವಿರುವ ಪಂಗಡದಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂದು ಕಂಡು ಬಂದರೆ ಅದಕ್ಕೇನೇ ಓಟು ಮಾಡಬೇಕೆಂತಲೂ, ಕೊಡವ ಸಭೆಯವರ ಪಾರ್ಟಿಗೆ ಸರಿಯಾದ ಅಭಿಪ್ರಾಯವಿರುವವರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಂದು ಕಂಡುಬಂದರೆ ಅವರಿಗೇನೇ ಓಟು ಮಾಡುವುದು ಒಳ್ಳೆಯದೆಂತಲೂ, ಕೌನ್ಸಿಲಿನಲ್ಲಿ ಸರಕಾರಕ್ಕೆ ವಿರೋಧ ನಿಲ್ಲುವ ಬಹುಮತದ ಒಂದೇ ಪಾರ್ಟಿಯು ನಮಗೆ ಪೂರ್ತಿ ಹಕ್ಕು ಸಿಕ್ಕುವ ಕೌನ್ಸಿಲ್ ಸಿಕ್ಕುವ ವರೆಗೆ ಇರಬೇಕೆಂತಲೂ ಓಟರುಗಳು ಎಚ್ಚತ್ತು ಕೆಲಸ ಮಾಡಬೇಕೆಂತಲೂ ವಗೈರೆಯಾಗಿ ಭಾಷಣ ಮಾಡಿದರು. ಇದಕ್ಕೆ ಉತ್ಸಾಹಿಯಾಗಿ ಮಿ. ನಾಯಡ ಕುಟ್ಟಪ್ಪನವರು ಮಾತಾಡಿದನಂತರ, ಮಿ. ಬಿಟ್ಟಿಯಂಡ ಸಂಜಪ್ಪನವರಿಗೆ ಈ ನಾಡಿನವರು ಡಿಸ್ಟ್ರಿಕ್ಟ್ ಬೋರ್ಡಿಗೆ ಓಟು ಕೊಡಬೇಕೆಂಬ ಠರಾವನ್ನು ತಂದರು. ಇದಕ್ಕೆ ಉತ್ಸಾಹವಾಗಿ ಭರವಸೆಯನ್ನು ಮಿ. ಮಾಚೆಟ್ಟೀರ ಮಾದಯ್ಯನವರು ನಾಡಿನ ಪರವಾಗಿ ಕೊಟ್ಟದ್ದಕ್ಕೆ ಎಲ್ಲರೂ ಸರ್ವಸಮ್ಮತದಿಂದ ಒಪ್ಪಿದರು.

ಮಿ. ನಾಯಡ ಬೆಳ್ಯಪ್ಪನವರು, ಕೊಡವ ಸಭೆಯ ಒಳ್ಳೆಯ ಉದ್ದೇಶವನ್ನು ಕುರಿತು ಮಾತಾಡಿದ್ದಲ್ಲದೆ ತಾನು ಡಿಸ್ಟ್ರಿಕ್ಟ್ ಬೋರ್ಡಿಗೆ ನಿಲ್ಲುತ್ತೇನೆಂತಲೂ ತನಗೆ ಓಟುಕೊಡಬೇಕೆಂತಲೂ ಹೇಳಿದರು. ಇವರು ಮಾತಾಡುವಾಗ, ಮಿ. ಸಂಜಪ್ಪನವರನ್ನೂ, ಚಿಂಗಪ್ಪನವರನ್ನೂ ವ್ಯಕ್ತಿ ಕುರಿತು ನಾನಾ ಬಹಳ ಆರೋಪಣೆಗಳನ್ನು ಹೊರಿಸಿದ್ದಕ್ಕೆ ಮಿ. ಸಂಜಪ್ಪನವರು, ಚಂಗಂಡ ಪುಟ್ಟಪ್ಪನವರು ಮತ್ತು ಚಿಂಗಪ್ಪನವರು ತಕ್ಕ ಜವಾಬನ್ನು ಕೊಟ್ಟರು. ಮಿ. ನಾಯಡ ಬೆಳ್ಯಪ್ಪನವರ ಮಾತನ್ನು ಯಾರೂ ಅನುಮೋದಿಸಲಿಲ್ಲ.

ಆ ದಿನ ತೀರ್ಮಾನ ಮಾಡಿದಂತೆ ನಮ್ಮ ಓಟನ್ನು ಮಿ. ಸಂಜಪ್ಪನವರಿಗೆ ಕೊಡಬೇಕೆಂತ ಅಧ್ಯಕ್ಷರು ಸ್ವಾರಸ್ಯವಾದ ಭಾಷಣ ಮಾಡಿದರು.

ಅಧ್ಯಕ್ಷರಿಗೆ ವಂದನೆಯನ್ನು ಸಮರ್ಪಿಸಿದನಂತರ ಮೀಟಿಂಗ್ ಮುಕ್ತಾಯವಾಯಿತು.

ಕೋಂಗಂಡ ಐ. ಮೇದಪ್ಪ

ಕೊಡಗು ವಿದ್ಯಾರ್ಥಿಗಳ ಸಂಘ.

ಎಲ್ಲಾ ದೇಶದಲ್ಲಿಯೂ ಎಲ್ಲಾ ಕಸಬಿನವರಿಗೂ ಒಂದೊಂದು ಸಂಘವಿರುವುದು ಈಗಿನ ಕಾಲಮಹಿಮೆ. ಆದುದರಿಂದ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳ ಸಂಘವೊಂದಿರುವುದು ಅನೇಕರಿಗೆ ತಿಳಿಯದಿದ್ದರೂ ಆಶ್ಚರ್ಯವಲ್ಲ. ಈ ಸಂಘದ ಕೆಲಸವು ವಿದ್ಯಾರ್ಥಿಗಳಿಗೆ ವಿಶೇಷವಾಗಿ ಪ್ರಯೋಜನಕ್ಕೆ ಬರಬೇಕಾದರೆ ಇದರ ವರ್ಷಾಂತ್ಯದ ಅನೇಕ ಕೆಲಸಗಳೂ ಮೇ ತಿಂಗಳಲ್ಲಿ ಅಂದರೆ ಬೇಸಿಗೆ ರಜದಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಹೊರತು ಬೇರೆ ಯಾವ ಸಂಘದ ಕೂಟವೂ ಇಲ್ಲದ ಪ್ರತ್ಯೇಕವಾಗಿ ನಡೆಯಬೇಕಾಗಿದೆ. ಹಳೆ ಮತ್ತು ಹೊಸ ವಿದ್ಯಾರ್ಥಿಗಳ ಸಂಗಮವು ನಮ್ಮ ವಿದ್ಯಾಭಿವೃದ್ಧಿಗೂ, ಸದ್ಗುಣ ಸಾಧನೆಗೂ ಪವಿತ್ರಸ್ಥಾನವು. ಹೊಸ ವಿದ್ಯಾರ್ಥಿಗಳಲ್ಲಿ ಕಾಲೇಜು, ಸ್ಕೂಲು ಮತ್ತು ಟ್ರೈನಿಂಗ್ ವಿದ್ಯಾರ್ಥಿಗಳೆಲ್ಲರೂ ಸೇರಬೇಕಾಗುವುದು. ಹೊಸ ವಿದ್ಯಾರ್ಥಿಗಳನ್ನು ಪ್ರೇಮಭಾವದಿಂದ ಸರಿಸಮಾನರಂತೆ ಕಾಣುತ್ತಾ ವಿದ್ಯಾರ್ಥಿಗಳ ಸಂಘದಲ್ಲಿ ವಿದ್ಯಾರ್ಥಿಗಳಂತಿರುವ ಮಹನೀಯರೇ ಹಳೆ ವಿದ್ಯಾರ್ಥಿಗಳಾಗಬೇಕಾಗುವುದು. ಈ ಸಂಘದಲ್ಲಿ ಬಾಲಕರಿಗೆಷ್ಟೋ ಅಷ್ಟೇ ಬಾಲಕಿಯರಿಗೂ, ಮಹನೀಯರಿಗೆಷ್ಟೋ ಅಷ್ಟೇ ಮಹಿಳೆಯರಿಗೂ ಅಧಿಕಾರವೂ, ಸ್ವಾಗತವೂ ಮತ್ತು ಸನ್ಮಾನವೂ ಇದ್ದರೆ ಸಂಘಕ್ಕೆ ಉತ್ಸವ.

ಹೀಗೆ ಸೇರಿದ ಸಮೂಹ ವಿದ್ಯಾರ್ಥಿಗಳಿಗೆ ಬೇಕಾದಂಥ ಬುದ್ಧಿವಾದಗಳನ್ನು ಸಂಘದ ಇನಾಗರಲ್ ಅಡ್ರೆಸ್ ಮೂಲಕ ಕಮಿಷನರ್ ಸಾಹೇಬರವರಿಂದಲೇ ತಿಳಿಯುವುದರಲ್ಲಿಯೂ, ಮಿಕ್ಕ ಅನೇಕ ಸಂಗತಿಗಳನ್ನು ತಾವೇ ಉಪನ್ಯಾಸ ಅಥವಾ ಡಿಬೇಟ್ ಮೂಲಕ ನಿಶ್ಚಯಿಸಿ ಠರಾವುಗಳನ್ನು ಕೌನ್ಸಿಲಿಗೆ ಕಳುಹಿಸುವುದರಲ್ಲಿಯೂ, ಮತ್ತು ಒಂದು ಸೋಷ್ಯಲ್ ಮೂಲಕ ಪರಸ್ಪರ ಪ್ರೀತಿಯಿಂದ ಸಂತೋಷಹೊಂದುವುದರಲ್ಲಿಯೂ ಶ್ರದ್ಧೆಯಿಟ್ಟು ಕೆಲಸ ಮಾಡಿದರೆ, ನಾವು ಕಲಿಯುವ ವಿದ್ಯೆಯು ನಮ್ಮ ಯೋಗ್ಯತೆಯನ್ನು ಕಾಪಾಡಬಹುದು.

ಹೊಸ ವಿದ್ಯಾರ್ಥಿಗಳು ಪರೀಕ್ಷೆಗಳ ಮನೆಯಿಂದ ಹೆಚ್ಚಿನ ತೊಂದರೆ ತೆಗೆಯಲಾರದಾದುದರಿಂದ ಸಂಘದ ಸರ್ವಭಾರವನ್ನು ಹಳೆಯ ವಿದ್ಯಾರ್ಥಿಗಳೂ, ಮತ್ತು ದೇಶದ ಉಪಾಧ್ಯಾಯರೂ, ಪತ್ರಿಕೆಗಳ ಸಂಪಾದಕರೂ ಹೊತ್ತು, ಸಂಘಕ್ಕೆ ಸಹಾಯಮಾಡಬೇಕಾಗುವುದು. ಖರ್ಚು ಕಮ್ಮಿಯಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ನಡೆಸೇರಲಿಕ್ಕೆ ಅನುಕೂಲವಾಗುವಂತೆ ಮಡಿಕೇರಿಯಲ್ಲೊಂದು, ವಿರಾಜಪೇಟೆಯಲ್ಲೊಂದು, ಹೀಗೆ ಒಂದೇ ಸಂಘದ ಎರಡು ಶಾಖೆಗಳಾಗಿ ಕೆಲಸ ನಡೆಸುವುದೂ ಸಹ ಸಾಧ್ಯವಿದೆ.

ಇದರ ವಿಷಯ ಮದ್ರಾಸು, ಬೊಂಬಾಯಿ, ಮಂಗಳೂರು, ಬೆಂಗಳೂರು, ಮೈಸೂರು ಮೊದಲಾದ ಹೊರಗಿನ ಸ್ಥಳಗಳಲ್ಲಿರುವ ಕೊಡಗಿನವರ ಮುಖ್ಯ ಸಂಘಗಳೂ, ಮತ್ತು ಕೊಡಗಿನಲ್ಲೇ ಇರುವ ಮುಖ್ಯ ಸಂಘಗಳೂ ತಮ್ಮ ಅಭಿಪ್ರಾಯಗಳನ್ನು ಪತ್ರಿಕೆಯ ಮೂಲಕ ಸಂಕ್ಷೇಪವಾಗಿ ತಿಳಿಸಬೇಕಾಗಿ ನನ್ನ ಪ್ರಾರ್ಥನೆ.

ವಿದ್ಯಾರ್ಥಿ.

ಸಂಬಾಯ ಪಟ್ಟದ ತಾಲೋಕು ಓಟರುಗಳಲ್ಲಿ ವಿನಂತಿ

ಅಯ್ಯಾ,

ತಾರೀಕು 24—10—26ರಲ್ಲು ಕೊಡ್ಲಿಪೇಟೆ ಬಸ್ವೇಶ್ವರ ದೇವಸ್ಥಾನದಲ್ಲು ಶನಿವಾರಸಂತೆ ಹೋಬಳಿಯ ಕೆಲವು ಗ್ರಾಮಸ್ಥರು ಸೇರಿ ಮುಂದಿನ ಚುನಾವಣೆ ನಿಮಿತ್ತ ಕೌನ್ಸಿಲಿಗೆ ಒಬ್ಬ ಹೊಸ ಮೆಂಬರನ್ನು ಚುನಾಯಿಸುವ ವಿಷಯದಲ್ಲಿ ನಡೆಸಿದ ಮೀಟಿಂಗಿನ ಬಾತ್ಮಿಯೊಂದನ್ನು ತಾ. 4—11—26ರ "ಲೋಕಪಾವನ" ಪತ್ರಿಕೆಯಲ್ಲಿ ಓದಿ ನೋಡಿದೆನು. ಸಂತೇರಿ ಮ ರಾ. ಶ್ರೀ ಸಣ್ಣಪ್ಪನವರನ್ನು ಕೌನ್ಸಿಲ್ ಮೆಂಬರಾಗಿ ನಿಲ್ಲಿಸಬೇಕೆಂತ ಠರಾವು ಮಂಜೂರಾದ್ದು ನಿಜವಷ್ಟೆ. ಆದರಿ ಮೀಟಿಂಗಿನಲ್ಲಿ ಮಿ. ಸಣ್ಣಪ್ಪನವರು "ನಾನು [illegible] ಮಾಡಲು ಶಕ್ತನಲ್ಲದಿದ್ದರೂ ತಮಗಳ ಕೃಪಾಕಟಾಕ್ಷ[illegible] ಶ್ರೀ ದೇವರ ಅನುಗ್ರಹದಿಂದಲೂ, ಅಸಾಧ್ಯವಾದ [illegible] ವನ್ನು ತಮಗಳ ಅನುಮತಿಯಂತೆ ಕೌನ್ಸಿಲಿನಲ್ಲಿ ಆಗ[illegible] ಕಾಯಿದೆ ಬಾಸರಿಸುಗಳನ್ನು ನಮ್ಮ ಸ್ವಾಮಿಯ ಭಕ್ತ[illegible] ವರ್ಗಾಮಿಯರವರ ಸತ್ಕಾರದಲ್ಲಿ ಪಾಲ್ ಸಭಾಲಯಗಳ[illegible] ಕೆಮಾಡಿ ದಯಾಳುಗಳಿಂದ ಲಭಿಸಿದವರ ಪ್ರಸಾದಗ[illegible] ಗಳಿಗೆ ಹಂಚಲು ಸ್ವಲ್ಪವೂ ಮರೆಯಲಾರೆನು" [illegible] ಣ ಮಾಡಿರುತ್ತಾರೆ. ಕೌನ್ಸಿಲ್ ಸಭೆಯು ಕೋ[illegible] ಶ್ವರ ದೇವಸ್ಥಾನವೆಂತ ತಿಳಿದಿರ ಬಹುದೋ? ಇದು [illegible] ನವಲ್ಲ, ದೇಶದ ಆದಾಯವೆಷ್ಟು ಮತ್ತು ದೇಶದ ಕ[illegible] ಗಳ ಆಲೋಚಿಸುವ ಸ್ಥಳ. ಬಸ್ವೇಶ್ವರ ದೇವರ[illegible] ಮಾಡಿ ಸೇರಿದ್ದವರಿಗೆ ಪ್ರಸಾದವನ್ನು ಹಂಚುವ[illegible] ನವಲ್ಲ, ಅಲ್ಲದೆ ಸದರಿ ಕೌನ್ಸಿಲ್ ಸಭೆಯು ಮೆಂಬರ[illegible] ಬೆಯಂತೆ ಅಲಂಕಾರಕ್ಕೆ ಕುಳಿತುಕೊಳ್ಳುವ ಸ್ಥಳ[illegible] ಮಾಡತಕ್ಕ ಕೆಲಸಗಳು ಈಗ ಮೂರು ವರ್ಷಗಳಿಂ[illegible] ಭವಶಾಲಿಗಳಾದ ಮೆಂಬರುಗಳಿಂದಲೇ ಮಾಡ[illegible] ವಾಗುತ್ತವೆ. ಹೀಗಿರುವಲ್ಲಿ ಮಿ. ಸಣ್ಣಪ್ಪನ[illegible] ಮಟ್ಟಿಗೆ ಧೃತರ ಪರವಾಗಿ ಕೆಲಸಮಾಡಿಯಾರೆಂ[illegible] ಅಲ್ಲಾ ತಿಳುವಳಿಕೆಯುಳ್ಳ ಓಟರುಗಳು ಯೋಚಿಸ[illegible] ಲ್ಲದೆ ಇವರು ಈ ವರೆಗೆ ಯಾವ ದೇಶಸೇವೆ ಮಾಡಿ[illegible] ಬಂದನ್ನು ಸಹ ಯೋಚಿಸಬೇಕಾಗಿದೆ. ಕಣ್ಣೆದುರಿಗೆ ಇಲ್ಲದ[illegible] ದಿನದಲ್ಲಿಯೂ ದೇಶಸೇವೆಮಾಡಿಯೂ, ಹಾಲಿ ಮಾಡುತ್ತಲೂ ಇರುವವರನ್ನು ಮರೆಯದೆ ನಿಮ್ಮ ಓಟುಗಳನ್ನು ಕೊಟ್ಟು ದೇಶಸೇವೆಮಾಡಿಕೊಳ್ಳುವುದು ದೇಶಕ್ಕೆ ಹಿತಕರ. ಅನ್ಯಥಾ ಕಾರ್ಯ[illegible] ಕಾರಣದಿಂದ ಒಂದು ಓಟುಗಳನ್ನು ತೆಗೆದುಕೊಂಡು ದೇಶಸೇವೆ ಮಾಡುವುದಿಲ್ಲವೆಂದು ತುಚ್ಛೀಕರಿಸುವುದು ತಿಳುವಳಿಕೆ ಇರುವ ಓಟರುಗಳ ಸ್ವಭಾವವಲ್ಲ. ಮೇಲ್ಕಂಡ ವಿಷಯಗಳೆಲ್ಲವನ್ನು ಚೆನ್ನಾಗಿ ಓದಿ ತಿಳಿದು ಯಾರು ದೇಶಸೇವೆಯಲ್ಲಿ ನಿರತರಾದ್ದಾರೆಂಬುವ ವಿಷಯದಲ್ಲಿ ಪುನಃ ಒಂದು ಮೀಟಿಂಗ್ ಮಾಡಿ ಈಗ ಇರುವ ಕೌನ್ಸಿಲರುಗಳನ್ನು ಮತ್ತು ಅವರು ಮಾಡಿದ ಕೆಲಸ ರಿಕಾರ್ಡುಗಳನ್ನು ಸಹ ತರಿಸಿಕೊಂಡು ಪರಿಶೋಧಿಸಿ ಮುಂದೆ ಬರುವ ಕೌನ್ಸಿಲಿಗೆ ಮೆಂಬರುಗಳನ್ನು ಚುನಾಯಿಸುವುದು ಓಟರುಗಳ ಕರ್ತವ್ಯವಾಗಿದೆ. ಹಾಗೆ ಮಾಡದಿದ್ದರೆ ಓಟರುಗಳು ನ್ಯಾಯವಾದ ಉಮೇದಾವರನ್ನು ಬರುವ ಕೌನ್ಸಿಲಿಗೆ ಕಳುಹಿಸಿದಂತಾಗುವದಿಲ್ಲ.

"ಒಬ್ಬ ಓಟರು."

ಡೈನಾಮೈಟಿನ ತೊಡಕು.

ವೀರರಾಜೇಂದ್ರಪೇಟೆ ಎಂಬುದು ಕೊಡಗಿನ ಎರಡನೇ ಮುಖ್ಯ ಪಟ್ಟಣವಾಗಿರುವದರಿಂದ ಸದರಿ ಸ್ಥಳದಲ್ಲಿ ಸಿವಿಲ್ ಮತ್ತು ಕ್ರಿಮಿನಲ್, ರೆವೆನ್ಯೂ ಕೋರ್ಟುಗಳು ಸಹ ಇರುವ ಸ್ಥಳವಾಗಿದೆ. ಅಲ್ಲದೆ ಸಂತೆ ನಡೆಯುವ ಮುಖ್ಯ ಸ್ಥಳವಾಗಿರುವದರಿಂದ ಜನರ ಅನುಕೂಲಕ್ಕಾಗಿ ಕೋರ್ಟಿನವರು ಸಹ ಬುಧವಾರದ ಸಂತೆ ದಿನವೇ ಮೊಕದ್ದಮೆಯನ್ನು ಹೆಚ್ಚಾಗಿ ವಿಚಾರಕ್ಕೆ ಇಟ್ಟು ಜನರ ಅನುಕೂಲದ ರೀತಿ ಮಾಡುವದು ಸಾಧಾರಣ ವಾಡಿಕೆಯಾಗಿರುತ್ತೆ. ಇಂಥಾ ಸಂದರ್ಭದಲ್ಲಿ ವಿರಾಜಪೇಟೆಗೆ ಬರುವ ಸಂತೆ ದಿನವೇ ಕೆಲವು ಕಡೆ ರಸ್ತೆಯಲ್ಲಿ ಇಂಜಿನೀಯರಿಂಗ್ ಇಲಾಖೆಯವರು ಡೈನಾಮೈಟು ಹಾರಿಸುವದು ವಾಡಿಕೆಯಾಗಿದೆ. ಇದರಿಂದ ಸದರಿ ದಿವಸದಲ್ಲಿ ಕೋರ್ಟಿನಲ್ಲಿ ಆಗುವ ಮೊಕದ್ದಮೆಯ ಸಮಯಕ್ಕೆ ಹಾಜರಾಗಲೂ ಪೂರಾ ಅಡಚಣೆ ಉಂಟಾಗುತ್ತೆ. ಮತ್ತು ಕಾಲಕ್ಕೆ ಸರಿಯಾಗಿ ಹಾಜರಾಗದೆ ಹೋದರೆ ಕೋರ್ಟಿನಲ್ಲಿ ಆಗುವ ಶಿಕ್ಷೆಗೂ ಸಹ ರೈತರು ಗುರಿಯಾಗಬೇಕಾಗುತ್ತೆ. ಆದ್ದರಿಂದ ಬುಧವಾರದ ದಿನ ವೀರರಾಜಪೇಟೆ ಸಂತೆಗೆ ಬರುವ ಎಲ್ಲಾ ಕಡೆ ರಸ್ತೆಗಳಲ್ಲಿ ಆ ದಿನ ಮಾತ್ರ ಟಿ. ಪಿ. ಡಬ್ಲ್ಯು. ಇಲಾಖೆಯವರು ಡೈನಾಮೈಟು ಹಾರಿಸುವದನ್ನು ವರ್ಜಿಸಿ ಜನರ ಕೆಲಸಕ್ಕೆ ಅಡಚಣೆ ಆಗದ ರೀತಿ ಸರಕಾರದವರು ತಕ್ಕ ಏರ್ಪಾಡು ಮಾಡಬೇಕಾಗಿ ಕೋರುವ,

ರೈತ.

ಪ್ರಕಟಣೆ.

ಪೊನ್ನಂಪೇಟೆನಾಡು ಜಮ್ಮಾ ಮತ್ತು ಸಾಗು ಓಟರುಗಳಲ್ಲಿ ಪುತ್ತಮನೆ ಜಿ. ಮುದ್ದಮ್ಮಯ್ಯನ ವಿನಂತಿ.

ಪೂಜ್ಯರೇ,

ಈ ನಾಡಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುತನಕ್ಕೆ ನಾನೊಬ್ಬ ಉಮೇದ್ವಾರನಾಗಿ ನಿಂತಿರುತ್ತೇನೆ.

ದೇಶಸೇವೆ ಮಾಡಲು ಕುತೂಹಲವುಳ್ಳ ನನಗೆ ನಿಮ್ಮ ಹಕ್ಕಿರುವ ಒಂದು ಓಟನ್ನು ಕೊಟ್ಟು ಪ್ರೋತ್ಸಾಹ ಕೊಡಿಸಬೇಕಾಗಿ ಈ ಮೂಲಕ ಬೇಡಿಕೊಳ್ಳುತ್ತೇನೆ.

ಈ ಸಭೆಯಲ್ಲಿ ನಮ್ಮ ನಾಡಿನ ಅಭಿವೃದ್ಧಿಗೆ ಆಗಬೇಕಾದ ವಿಷಯಗಳಲ್ಲಿ ನಮ್ಮ ನಾಡಿನ ಪರವಾಗಿ ಹೋರಾಡಲು ಉದ್ಯುಕ್ತನಾಗಿದ್ದೇನೆ.

ವಿಶ್ವಾಸವಿಟ್ಟು ಸರ್ವರೂ ನನಗೆ 20—12—26ರಲ್ಲಿ ಓಟು ಕೊಟ್ಟು ಪ್ರೋತ್ಸಾಹ ಪಡಿಸುವರಾಗಿ ಬೇಡುತ್ತೇನೆ.

ಪೊನ್ನಂಪೇಟೆ, ಇತಿ ತಮ್ಮ ಸೇವಕ,
ತಾ. 15—11—26 ಪು. ಜಿ. ಮುದ್ದಮ್ಮಯ್ಯ.
4—2

ಕೆಮಿಸ್ಟ್ರಿ ಮತ್ತು ನೇಚರಲ್ ಸೈನ್ಸ್.

ವೀರರಾಜಪೇಟೆಯಲ್ಲಿ ಪೆ 'ಪ್ರೆಪೇಟರಿ' ಕ್ಲಾಸ್ ತೆರೆಯುವ ವಿಷಯ ಸರಕಾರದವರು ಹಿಂದಿನಿಂದ ಯೋಚಿಸಿ ಬೇಕಾದೆವೆಂದು ಹೇಳಿದ್ದು ನ್ಯಾಯವೆಂದು ತೋರುತ್ತೆ. ಏಕೆಂದರೆ—ಗಣಿತ ಮತ್ತು ಚರಿತ್ರೆ ಸೆಕ್ಷನುಗಳನ್ನು ನಾವು ಒಹಳ ವರ್ಷಗಳಿಂದಲೇ ಅನುಭವಿಸುತ್ತಾ ಬಂದಿದ್ದೇವೆ. ಆದರೆ ಕೆಮಿಸ್ಟ್ರಿ ಮತ್ತು ನೇಚರಲ್ ಸೈನ್ಸ್ ವಿದ್ಯೆಯ ರುಚಿ ಕೊಡಗಿನ ಸ್ಕೂಲುಗಳು ಇನ್ನೂ ನೋಡಿಲ್ಲ. ಈ ವಿದ್ಯೆಯು ಪ್ರತಿಯೊಂದ ಕೂಡಿದ ನಮ್ಮ ದೇಶಕ್ಕೆ ಅತ್ಯಾವಶ್ಯಕವೆಂದು ವಿದ್ಯಾರ್ಥಿಯಾದ ನಾನು ಹೇಳಿದರೆ ಕೊಡಗಿನ ವಿದ್ವಾಂಸರು ಸಂಶಯದಲ್ಲಿ ಒಪ್ಪಲಾರರು. ಆದುದರಿಂದ ಇಡೀ ಹಿಂದೂ ದೇಶವನ್ನು ಸುತ್ತುತ್ತಾ ತನಿಖೆಮಾಡುತ್ತಿರುವ ಎಗ್ರಿಕಲ್ಚರ್ ಕಮಿಷನರವರ ಕಮಿಟಿಯವರೂ, ಕೊಡಗು ದೇಶವನ್ನು ಸುತ್ತಿ ತನಿಖೆಮಾಡುತ್ತಿರುವ ಕೊಡಗಿನ ರಯಿಯತ ಮತ್ತು ಚಾವು ನಾರ್ಥಗಳ ಕಮಿಟಿಯವರೂ ಈ ಅಭಿಪ್ರಾಯವನ್ನು ಕೇಳುತ್ತಿರೋ ಆದರ ವಿಷಯ ನನ್ನ ಕೆಲವು ವಿಚಾರಗಳು ತಿ[illegible]ಗಿ ಯೋಚಿಸಬೇಕೆಂದು ನನ್ನ ಕೋರಿಕೆ. ಮುಖ್ಯವಾಗಿ [illegible]ಸೈನ್ಸ್ ಲೇಬೋರೇಟರಿಗಳನ್ನು ಇಲ್ಲಿ ತೆರೆದು ಸಾವಾರಣ [illegible]ಕಾಯಿಲೆಯ ಮತ್ತು ವ್ಯವಸಾಯದಲ್ಲಿ ಕಂಡ ಕೊರತೆಗಳ ವಿಷಯ ಜನರಿಗೆ ಬೋಧಿಸಬೇಕೆಂಬುದೇ ಅನೇಕ ಎಗ್ರಿಕಲ್ಚರ್ ಡಿಪಾರ್ಟುಮೆಂಟಿನವರ ಅಭಿಪ್ರಾಯ. ಹೈಸ್ಕೂಲಿನ ಇಂಟರ್ ಮಿಡಿಯೇಟ್ ಕ್ಲಾಸಿನಲ್ಲಿ ಅನೇಕ ವಿದ್ಯಾರ್ಥಿಯರ ಕೆಮಿಸ್ಟ್ರಿ ಮತ್ತು ನೇಚರಲ್ ಸೈನ್ಸಿನಲ್ಲಿ ಕಲಿಸ ತಕ್ಕ ಸಂಗತಿಗಳೆಂಬಲೇ ತರಬೇತಿ ಇಲ್ಲದ್ದರಿಂದ ಹೆಚ್ಚಾಗಿ ಕಷ್ಟಪಡುವುದೂ, ಸರಿಯಾಗಿ ಆಗದೆ. ಇದರ ವಿಷಯ ಹೆಚ್ಚಿನ ಸಂಗತಿಗಳನ್ನು ತಿಳಿಯಬೇಕಾದರೆ ಕಾಲೇಜು ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಕೇಳುವುದು ಆವಶ್ಯಕ

ಕಾಲೇಜು ವಿದ್ಯಾರ್ಥಿ.

ಜ್ವರ, ಮಲೇರಿಯ ಜ್ವರ, ಇನ್‌ಫ್ಲುಯೆಂಜ್ಞು ಛಳಿ ಜ್ವರ, ಮೊದಲಾದವುಗಳ ಮೇಲೆ ಅಪ್ರತಿಮವಾದ ಔಷಧವು

ಬೆಲೆ ಬಾಟ್ಲಿಯೊಂದಕ್ಕೆ ರು. ೦-೧೪-೦
ಟಪಾಲು ಚಾರ್ಜು ಬೇರೆ

ಇಂಡೋ ಬಾಮ್.

ಸಂಧಿವಾತ, ತಲೆಶೂಲೆ, ಸೊಂಟನೋವು, ಉಳುಕು, ಚೇಳುಕಡಿತ ಮೊದಲಾದವುಗಳ ಮೇಲೆ ಪಡ್ಡತಕ್ಕ ದಿವ್ಯವಾದ ಔಷಧ! ಬೆಲೆ ೧೦ ಆಣೆ ಟಪಾಲುವೆಚ್ಚ ಬೇರೆ.

12--1 ಕರ್ನಾಟಕ ಬ್ರದರ್ಸ್,
ಗಿರಗಾಂವ, ಮುಂಬಾಯಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರಿಗೆ ರಶೀತಿ ಪುಸ್ತಕಗಳನ್ನು ನಮ್ಮ ಏಜೆಂಟರು ಮ. ಚಂಗಂಡ ಕುಟ್ಟಪ್ಪನವರ ಒವಾಬುದಾರಿಕೆಯ ಮೇಲೆ ಕೊಡಲಾಗಿದೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಭಾಗದಲ್ಲಿ ಹಣವನ್ನು ಕೊಡಬೇಕಾಗಿ ಕೋರಿಕೆ.

ಏಜೆಂಟರುಗಳು.

ವೀರರಾಜಪೇಟೆ—ಖಾದಿ ಭಂಡಾರದಲ್ಲಿ ಮೆ. ಐಚೆಟ್ಟಿರ ಅಪ್ಪಯ್ಯನವರು.
ಮೂರ್ನಾಡು—ಕಮರ್ಷಿಯಲ್ ಸ್ಟೋರಿನಲ್ಲಿ ಮೆ. ಪ.ತಮ್ಮಂಡ ದೇವಯ್ಯನವರು.
ನಾಪೋಕ್ಲು—ಮೆ. ಅರೆಯಂಡ ಸುಬ್ಬಯ್ಯನವರು.
ಮೆ. ಪೊನ್ನಚಂಡ ಮುದ್ದಪ್ಪನವರು.
ಗೋಣಿಕೊಪ್ಪಲು—ಮೆ ಬಲ್ಲಡ ಮಾದಪ್ಪನವರು.
ಹುದಿಕೇರಿ—ಮೆ. ಜಿ ಮಾದಯ್ಯನವರು.
ಅಮ್ಮತ್ತಿ, ಸಿದ್ದಾಪುರ—ಮೆ ಐನಂಡ ಮಾದಪ್ಪನವರು.
" ಮತ್ತು ವೀರರಾಜಪೇಟೆ—ಮೆ. ಕಲಿಯಂಡ ಸೋಮಯ್ಯನವರು.
ಮಡಿಕೇರಿ- ಸುಂಟಿಕೊಪ್ಪನಾಡು—ಮೆ ಒಲ್ಲಚಂಡ ಅಪ್ಪಯ್ಯನವರು.
ಪೊನ್ನಂಪೇಟೆನಾಡು — ಮೆ. ಪಿ. ಜಿ ಮುದ್ದಯ್ಯನವರು.
ಶ್ರೀಮಂಗಲನಾಡು—ಮೆ. ಇಟ್ಟಿರ ಚಂಗಪ್ಪನವರು.

ಅಲ್ಲದೆ ಈ ಸಮ್ಬಂಧ ಮೆ. ಚಂಗಂಡ ಕುಟ್ಟಪ್ಪನವರು ಕೊಡಗಿನ ಎಲ್ಲಾ ಕಡೆಗಳಲ್ಲೂ ಸಂದರ್ಭಾನುಸಾರ ಸುತ್ತುತ್ತಿರುವಾಗ ಅವರಿಗೂ ಹಣ ಕೊಡಬೇಕಾಗಿ ಕೋರಿಕೆ.

ಮೇನೇಜರ್,
"ಕೊಡಗು" ಲಿಮಿಟೆಡ್.

ಸ್ಥಾಪಿತವಾದದ್ದು 1874. **ಮೂಲಧನ 7 ಕೋಟಿ ರೂಪಾಯಿಗಳು**

ಓರಿಯಂಟಲ್ ಗವರ್ನ್ಮೆಂಟ್ ಸೆಕ್ಯೂರಿಟಿ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆಫೀಸು:— ಬೊಂಬಾಯಿ.

1922—1924 ಈ ಮೂರು ವರ್ಷಗಳಲ್ಲಿ ಕಂಪೆನಿಯಲ್ಲಿ ನಡೆದ ಕೆಲಸದ ಪರಿಣಾಮಗಳು. —

ರೂ. 51[illegible] (ಐವತ್ತೊಂದು ಲಕ್ಷ ರೂಪಾಯಿಗಳು) ಈ ಸೈಕಿ 45,94,80 ರೂಪಾಯಿಗಳನ್ನು ಲಾಭ ಸಹಿತ ವಿಮೆ ಮಾಡುವವರ [illegible] ಈ ಕೆಳಗೆ [illegible] ರೀತಿಯಲ್ಲಿ ಸೇರಿಸಿರುತ್ತದೆ.

[illegible] ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 67½.
ಕ್ಲುಪ್ತಕಾಲದ ವಿಮೆದಾರರಿಗೆ ರೂ. 1000 ವಿಮೆ ಹಣಕ್ಕೆ
ಈ ಮೂರು ವರ್ಷಗಳಿಗೆ ರೂ. 54.

ಈ ಕಂಪೆನಿಯಲ್ಲಿ ಪ್ರಮೇಣ ಹೆಚ್ಚುತ್ತಿರುವ ಜನಾನುರಾಗವು ಈ ಕೆಳಗೆ ಕೊಟ್ಟಿರುವ ಹೊಸ ಕೆಲಸದ ಪಟ್ಟಿಯಿಂದ ವ್ಯಕ್ತವಾಗುತ್ತದೆ.

1923ರಲ್ಲಿ—ರೂ		1,74,00,000
1924	„	2,37,00,000
1925	„	2,96,00,000

ಇನ್ನೂ ದಿನದಿನಕ್ಕೂ ಅಭಿವೃದ್ಧಿಯಾಗುತಲೇ ಇದೆ. ಜೀವವಿಮೆ ಪತ್ರದಲ್ಲಿ ಹಣವನ್ನು ಲಾಭಕರವಾಗಿ ತೊಡಗಿಸಲು ಇದೇ ಸಮಯ.

ಬೇಕಾದ ವಿಷಯಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು

ಓರಿಯಂಟಲ್ ಬಿಲ್ಡಿಂಗ್ಸ್
ಪೋಸ್ಟ್ ಬಾಕ್ಸ್ 56
ಬೆಂಗಳೂರು

ಎಸ್. ಆರ್. ಕೃಷ್ಣಸ್ವಾಮೈಯ್ಯರ್
ಬ್ರ್ಯಾಂಚ್ ಸೆಕ್ರೆಟರಿ

52—34

ಮನೋಲ್ಲಾಸಿನಿ ತೈಲ.

ಕಪಿನೋವು, ತಲೆ ತಿರುಗುವುದು, ದೃಷ್ಟಿ ಮಾಂದ್ಯ, ಕಿವಿಯಿಂದ ಕೀವು ಸೋರುವುದು, ಕಿವುಡುತನ, ಕಣ್ಣುನೋವು, ಅಪಸ್ಮಾರ ನಿದ್ರೆ ಬಾರದಿರುವುದು, ನೆನಪು ಶಕ್ತಿ ಕುಂದಿಹೋಗುವುದು ಇವುಗಳೆಲ್ಲ ಹಿಂದಿತ ಗುಣವಾಗುತ್ತದೆ. ಉದುರುವ ಕೂದಲನ್ನು ನಿಲ್ಲಿಸಿ ಗಿಡ್ಡಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗೆ ಸೌಂದರ್ಯವನ್ನೂ ಹೊಳಪನ್ನೂ ಕೊಟ್ಟು ಅಕಾಲಿಕ ಹಣ್ಣಾಗುವ ಕೂದಲನ್ನು ಕಪ್ಪು ಮಾಡಿ, ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಬೆಲೆ ಸೀಸೆಗೆ ರೂ 1, 3 ಸೀಸೆಗೆ 2—10—0, ಒಂದು ದೊಡ್ಡ ಸೀಸೆಗೆ ರೂ 2, 3 ಸೀಸೆಗಳಿಗೆ 5—8—0

ಚಂದನಾಸವ.— ಇದು ಪ್ರಮೇಹ ಮೂತ್ರಕೃಚ್ಛ್ರ, ಮೂತ್ರ ಪಡಪಡಿಯಾಗಿ ಹೋಗುವುದು, ಮೂತ್ರಕೋಶದ ಉರಿ, ಮೂತ್ರಪಿಂಡಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೋಗುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು, ಮೂರ್ಛೆ ಹೋಗುವುದು, ಆಗಾಗ ಮೂತ್ರ ಬರುವುದು, ಮೈ ನವೆ, ನಡೆಯುವುದಕ್ಕೆ ಸಾಮರ್ಥ್ಯವಿಲ್ಲದಿರುವುದು, ಬೆವರು, ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಗಂಡಸರಿಗೂ ಹೆಂಗಸರಿಗೂ ಇದು ಅತ್ಯುತ್ತಮ. ಬೆಲೆ—ಬಾಟ್ಲಿ 1, 3, 6ಕ್ಕೆ ರೂ 1—4—0, 3—8—0, 6—12—0,

ರೋಮನಾಶಿನಿ — ಈ ಪುಡಿಯನ್ನು ನೀರಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು ದಬ್ಬಿ ಗಳಿಗೆ 6 ಆಣೆ, 3 ದಬ್ಬಿಗಳಿಗೆ ರೂ 1, 1 ಡಜನಿಗೆ 3—8—0

ಅಮೃತಕಷಾಯ ಮಲೇರಿಯ ರಕ್ಷೆ.—ಇದು ಇಂಜಕ್ಷನ್ ಮತ್ತು ಕ್ವಿನೈನು ಸೇವಿಸಿದರೂ ಗುಣವಾಗದಿರುವ ಮಲೇರಿಯ, ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಮ್ಮೆ ಬರುವ ಜ್ವರ, ನಡುಗಿ ಬರುವ ಜ್ವರ, ಶೀತ ಜ್ವರಗಳು ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ 1ಕ್ಕೆ ರೂ. 1—8—0, 3ಕ್ಕೆ ರೂ 4—0—0, 6ಕ್ಕೆ ರೂ 7—8—0,

ನಮ್ಮ ಔಷಧಗಳು ಹರಿಸಿ ನೋಡಿರಿ

ವಿಳಾಸ—ಮನೋಲ್ಲಾಸಿನಿ ಕಂಪೆನಿ,
9 ಮಂಗಳೂರು, ಕೆಂಕನಾಡಿ.

52—49

Apply for our shooting Season's Clearance Sale Catalogue of Brand New Goods.

10 to 25 percent Reductions in Prices.

No License Required !! No License Required



Webley and Scott Air Pistol, cal ·177 or 22, bore Powerful and Accurate complete with a sample box of slugs, two spare washers, a brush forcleaning, and a bookletof instructions Rs. 30/— Free delivery.

Pwerful German Diana Air gun. Handsome and Accurate, takes B. S. A. Patein No 1 Slugs and Darts. expressly recommendable for Target Practice Rs 15/ Free delivery

Brilliant Search Light Lamp for Night Sports Rs 30/—. Free delivery.

No License required to purchase or to possess the above items.

Reliale D. B. B L. 12 bore guns		Rs	60/— and upwards	
Do S. B B L 12	do	do	40/—	do.
D B M L Guns		„	45/—	do.
S B. M L. do.		„	30/—	do.
S. B. B L Rifles		„	25/—	do.
B. L. Revolvers and Pistols		„	30/—	do.

Arms, Ammunition and shooting requisitesof almost every kind and quality offered at exceptionally favourable rates. A Number of good quality second hand weapons also offered for sale in the New Catalogue.

GOOLAMHUSIAIN ALLIBHOY & SONS
Largest Importer of Firearms and Ammunition
Cheapest priced firm in India,

24. 17 **210 Abdul Reman Street, BOMBAY.**

1926

ಕಿರ್ಲೋಸ್ಕರರ
ನೇಗಿಲು ಮತ್ತು ಗಾಣಗಳು.

ಇವುಗಳ ಒಳ್ಳೆ ಹೊಸ್ತ ಪೂಣೆಯಲ್ಲಿ ಕೂಡಿದ ಒಕ್ಕಲತನ ಪ್ರದರ್ಶನದಲ್ಲಿ ಬಹುಮಾನದ ಪದಕಗಳು ದೊರೆತಿರುವುವು.

ಈ ವರ್ಷ ಇವುಗಳ ಬೆಲೆಯಲ್ಲಿ ಕಡಿಮೆಯಾಗಿದೆ ಹಾಗು ಸುಧಾರಣೆ ಮಾಡಲ್ಪಟ್ಟಿವೆ.

ಸಂಗಾಮವು ಒದಗಿನ್ನುಂದ ಮುಂದಾಗಿ ಆರ್ಡರ್ ಕೊಟ್ಟಲ್ಲಿ ವೇಳೆಗೆ ಸರಿಯಾಗಿ ಮಾಲು ದೊರಕುವದು

ಕಿರ್ಲೋಸ್ಕರ ಬಂಧು, ಲಿಮಿಟೆಡ್.
ಕಿರ್ಲೋಸ್ಕರವಾಡಿ,
10—9 ಜಿ. ಸಾತಾರ್.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ಸ ಪ್ರಕಾರ ರಿಜಿಸ್ಟರಾಗಿದೆ.

		ರೂ.
ಶೇರ್ ಬಂಡವಾಳ	—	50,000
ವಸೂಲಾದ ಶೇರ್ ಮೊಬಲಗು	—	12,870
ಜಮೆಬಂದ ಠೇವಣಾತಿ	—	1 08,927

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 6-4-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 5ರ ಬಡ್ಡಿ ದೊರೆಯುತ್ತೆ.

ಹೆಚ್ಚು ಕ್ಕೊಂದಾವರ್ತಿ ಕೂಲ ಪರೇಟಿನ್ ರಿಜಿಸ್ಟ್ರಾರವರು ಲೆಕ್ಕ ಆಡಿಟು ಮಾಡುತ್ತಾರೆ.

ಪ್ರೆಸಿಡೆಂಟರು, ಟ್ರೆಜರರ
ಕೊಡಂದೆರ ಕುಟ್ಟಯ್ಯನವರು, ಓ. ದೇವಯ್ಯನವರು
ರಾಯ್ ಬಹದ್ದೂರ್. ರಾವ್ ಸಾಹೇಬ್.
ಸೆಕ್ರೆಟರಿ
ಸಿ. ಯಸ್. ವೆಂಕಟೈಯ್ಯನವರು, ಬಿ.ಎ, ಬಿ.ಎಲ್.
ತಾರೀಕು 1—7—1926

ಒಂದು ಪ್ರಬಲವಾದ ಪ್ರಶ್ನೆ.

ನಮ್ಮ ಜೀವವನ್ನು ನಿಶ್ಚಯವಾಗಿ ವಿಮೆಮಾಡಬೇಕು!

ವೃದ್ಧಾಪ್ಯದಲ್ಲಿ ನಮ್ಮ ಹೆಂಡತಿ ಮಕ್ಕಳ ಪೋಷಣೆಗಾಗಿ!

ಈಗಾಗಲೇ ಸಾವಿರಾರು ಜನರು ವಿಮೆಮಾಡಿರುವ ಪಂಚಕೋಟಿ ರೂಪಾಯಿಗಿಂತ ಹೆಚ್ಚು ಬಂಡವಾಳವಿರುವ ದೇಶೀಯ ವಿಮೆಕಂಪೆನಿಯಲ್ಲಿ ಅತ್ಯಂತ ದೊಡ್ಡದಾದ ಸಾವಿರ ರೂಪಾಯಿ ವಿಮೆಮಾಡಿದವರಿಗೆ ವರ್ಷಕ್ಕೆ 18ರೂ. ಕಡಿಮೆಯಿಲ್ಲದೆ ಲಾಭ ಕೊಡುವ 'ಓರಿಯಂಟಲ್' ಗವರ್ನಮೆಂಟ್ ಜೀವವಿಮೆ ಕಂಪನಿಯ ರೂಲ್ಸಿಗೂ, ಶರತಿಗೂ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಿ.

ಖಾದಿಬಟ್ಟೆ ಎಂದರೇನು?

ದೇಶೀಯ ಹತ್ತಿಯಲ್ಲಿ ಕೈರಾಟೆಯಿಂದ ನೂಲು ತೆಗೆದು ಇಲ್ಲಿಯೇ ತಯಾರಿಸುವ ಬಟ್ಟೆಯೇ 'ಖಾದಿ.' ಈಗಾಗಲೇ ನಮ್ಮ ಸ್ಟೋರಿನಲ್ಲಿ ಪರದೇಶೀ ಬಟ್ಟೆಗಿಂತ ಗಟ್ಟಿಯಲ್ಲಿಯೂ ಅಂದದಲ್ಲಿಯೂ ಕಡಿಮೆ ಇಲ್ಲದಂತ, ಎಲ್ಲಾ ತರದ ಶೀರೆಗಳು ಚಿಕ್ಕಗಳು, ಶಾಲು ವಸ್ತ್ರ ಎಲ್ಲಾ ತರದ ಬಟ್ಟೆಯು ತಯಾರಾಗಿದೆ. ದಯವಿಟ್ಟು ಪ್ರೋತ್ಸಾಹಿಸಿರಿ! ಖಾದಿಯಿಂದಲೇ ಸ್ವರಾಜ್ಯ. ಖಾದಿಯಿಂದಲೇ ಮೋಕ್ಷನೆಂಬುದನ್ನು ಮರೆಯಬೇಡಿರಿ.

ವೀರಾಜಪೇಟೆ, ಕ. ಪಿ. ಚೆಣ್ಣಪ್ಪ,
ದಕ್ಷಿಣ ಕೊಡಗು. ಪ್ರೊಪ್ರೈಟರ್,
ಖಾದಿಭಂಡಾರ
52—35

ನೌಕರಿ ಬಿರಾದು ಫಾರಮುಗಳು

1926ನೇ ಇಸವಿ ಕೊಡಗಿನ ಕೂಲಿ ಕೆಲಸವನ್ನು ಕುರಿತ ಆಕ್ಟ್ 1ರ ಮೇರೆ ಅನ್ವಯವುಳ್ಳ ಯೂರೋಪಿಯನ್ ಮತ್ತು ಇಂಡಿಯನ್ ಪ್ಲಾಂಟರುಗಳೂ ಸೇರಿ ತಯಾರಿಸಿರುವ ನೌಕರಿ ಬಿರಾದು ಫಾರಮುಗಳು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಪ್ರಿಂಟಾಗಿ ಮಾರಾಟಕ್ಕೆ ತಯಾರಿವೆ. ಬೇಕಾದವರು ಸೆಂಟ್ರಲ್ ಹೈಸ್ಕೂಲಿನ ಬಳಿ ಇರುವ (ಹಳೇ ಗಡಂಗ ಕಟ್ಟಡದ) ನಮ್ಮ ಹೊಸ ಆಫೀಸಿನಲ್ಲಿ ಕೊಂಡುಕೊಳ್ಳಬಹುದು

ತಾ24—6—'26 ಸೇಕ್ರೆಟರಿ,
ಮಡಿಕೇರಿ, ಆಫೀಸು.

ಇಂಗ್ಲಿಷ್ ಹೇರ್ ಡಿಸ್ಟ್ರಾಯರ್ ಸೋಪ್.

ಈ ಸೋಪು ವಿಲಾಯತಿಯಲ್ಲಿ ತಯಾರಾದದು. ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ, ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತಿಯಿಂದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚನ್ನಾಗಿ ಕೂದಲನ್ನು ಬಾವೇ ಬಾಡು ನಿಮಿಷದಲ್ಲಿ ತೆಗೆದುಬಿಡುವದು.

ಕ್ರಯ 3 ಸಾಬೂನುಗಳ ಪೆಟ್ಟಿಗೆ 1ಕ್ಕೆ 1—1—0

ವಿಳಾಸ:—ಮನೋಲಿಯಾ ಏಜೆನ್ಸಿ, ಪೋಸ್ಟ್ ಬಾಕ್ಸ್ ನಂ. 232,
52—48 ಮದರಾಸ್.

ಪೂರ್ಣ
ಸ್ವದೇಶಿಯ ಹಿತ್ತಾಳೆ ಕಂದೀಲು (ಲಾಂದರು).

ಇದೀ ಕಂದೀಲ (ಲಾಂದರ) ವನ್ನು ನಮ್ಮ ಸ್ವಂತ ಕಾರ್ಖಾನೆಯಲ್ಲಿ ನಾವೇ ಸಿದ್ಧಪಡಿಸಿದ. ಬೆಳಕಿನಲ್ಲಿಯೂ, ಬಾಳಿಕೆಯಲ್ಲಿಯೂ, ಯಾವುದೇ ಪರದೇಶಿಯ ಕಂದೀಲಿಗಿಂತ ಮೇಲಾಗಿರುವದಂಬದಕ್ಕೆ ನಾವು ಜವಾಬ್ದಾರರಾಗಿದ್ದೇವೆ.

ನಮ್ಮ ದೇಶದಲ್ಲಿ ಈಗೀಗ ಇಷ್ಟು ಉಪಯೋಗವುಳ್ಳ ಮತ್ತು ಬಾಳಿಕೆಯ ಪದಾರ್ಥಗಳು ತಯಾರಾಗುತ್ತಿರುವುದರಿಂದ, ನಾವಿನ್ನು ಪರದೇಶದ ವಸ್ತುಗಳನ್ನು ಕಣ್ಣೆತ್ತಿ ಕೂಡ ನೋಡಬಾರದು.

ಕೃಪೆ ಮಾಡಿ ಕೇಳಿಕೊಳ್ಳುತ್ತೇವೆ. ನಿಮ್ಮೂರಲ್ಲಿಯ ವ್ಯಾಪಾರಸ್ಥರಿಗೆ ಪ್ರಭಾಕರ ಕಂದೀಲು (ಲಾಂದರು) ಗಳನ್ನು ತರಿಸಿ ಕೊಡಲಿಕ್ಕೆ ಒತ್ತಾಯಪಡಿಸಿರಿ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ಈ ಕಳಗಿನ ಅಡ್ರೆಸಿಗೆ ಬರೆದುಕೊಳ್ಳಿ.—

1. ಸಿ. ಎನ್. ನಾರಾಯಣರಾವು ಅಂಡ್ ಬ್ರದರ್ಸ್,
ಜನರಲ್ ಮರ್ಚೆಂಟ್ಸ್, ಚಿತ್ರದುರ್ಗ,
ಅಥವಾ
ಕಾರ್ಖಾನೆದಾರರು.—
'ಓಗಲೆ ಗ್ಲಾಸ ವರ್ಕ್ಸ' ಲಿಮಿಟೆಡ್, ಓಗಲೆವಾಡಿ ನಂ. (ಔಂಧ) ಜಿ. ಸಾತಾರಾ.
52—8

೧೦೦೦ ರೂಪಾಯಿಗಳ ಬಹುಮಾನ.
ಲೋಕಪ್ರಸಿದ್ಧವಾದ ಸಾಲಂಮಿಶ್ರಿ ಮುರಬ್ಬಾ.

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧ ತೆಗೆದುಕೊಳ್ಳಿ



ಇದರ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನಸ್ಖಲನವಾದರೂ, ಸ್ತ್ರೀ ಸಂಘಕ್ಕೆ ಮೊದಲೇ ಸ್ಖಲನವಾದರೂ, ಮೂತ್ರದೊಂದಿಗೆ ಹೋಗುತ್ತಿದ್ದರೂ ದೋಷರಹಿತವಾಗಿ ಶರೀರಕ್ಕೆ ಆರೋಗ್ಯವನ್ನೂ ಧಾರ್ಢ್ಯತೆಯನ್ನೂ ಆಯುಸ್ಸು, ಬಲ, ತೇಜಸ್ಸು ಉಂಟು ಮಾಡುವದು. ಅಜೀರ್ಣ ಮಲಬದ್ಧತೆ, ಮೆದುಳಿನ ಬಲಹೀನತೆ, ಕೈಕಾಲು, ಸೊಂಟ ನೋವುಗಳಿಗೆ ಇದು ದಿವ್ಯ ಔಷಧವು. ಈ ಸಾಲಂಮಿಶ್ರಿ ಎಂಬುವದು ಕಾಬೂಲ್ ಕಂದಾಹಾರ ಪ್ರಾಂತ್ಯದಲ್ಲಿ ಬೆಳೆಯುತ್ತದೆ.

ಈ ಔಷಧದಿಂದ ಗುಣಹೊಂದಿದ ನ ಅನೇಕ ಮಹನೀಯರು ತಾವಾಗಿಯೇ ಅನೇಕ ದೇಶಗಳಿಂದಲೂ ಆಫ್ರೀಕ, ಬರ್ಮ, ಪಿನಾಂಗ್, ಸಿಂಗಪೂರ್, ಸಿಲೋನ್, ಬೊಂಬಾಯಿ, ಕಲ್ಕತ್ತ, ಮದ್ರಾಸು ಮತ್ತು ಇಂಡಿಯಾದೇಶದಲ್ಲಿ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾ ಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆ ಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. ೧ ಡಬ್ಬವನ್ನು ೧೫ ದಿನ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. ೨ ಯಾ ೩ ಡಬ್ಬಿಗಳು ಜನ್ಮಾಂತ್ಯದವರಿಗೂ ಪೂರ್ಣವಾಗಿ ಗುಣವನ್ನುಂಟು ಮಾಡುವವು. ಹೆಸರು ವಿಳಾಸಗಳನ್ನು ವಿವರವಾಗಿ ಬರೆಯಬೇಕು. ಒಂದಾವರ್ತಿ ಅಜಮಾಯಿಸಿ ಮಾಡಿ ನೋಡಿದಲ್ಲಿ ಖಾತ್ರಿ ಉಂಟಾಗುತ್ತೆ.

ಕ್ರಯ ಡಬ್ಬ ೧ಕ್ಕೆ ರೂ. ೩—೦—೦ ಥಪಾಲ ಚಾರ್ಜು ೧ರಿಂದ ೩ ಡಬ್ಬಿಗಳಿಗೆ ೦—೬—೦ ಆಣೆ. ಏಜೆಂಟರುಗಳು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿರುತ್ತೆ. ರೂಲ್ಸ್ ತರಿಸಿಕೊಳ್ಳಬಹುದು. ಆರ್ಡರು ಕೊಡತಕ್ಕ ಕಾಲದಲ್ಲಿ ಈ ಪತ್ರಿಕೆಯ ಹೆಸರನ್ನು ಬರೆಯಬೇಕು.

ಟೆಲಿಗ್ರಾಫ್ ಆಫೀಸ್, } ಬಿ. ಮನ್ಸೂರ್‌ಬಾಗ್, ಡಿಲ್ಲಿ ನೇಟಿವ್ ವೈದ್ಯರು,
12—6 ಮಿನ್ಸಿ, ಬೆಂಗಳೂರು ಸಿಟಿ, } ಸಾಲಂಮಿಶ್ರಿ ಮುರಬ್ಬ ಡಿಪೋ, ಬೆಂಗಳೂರು ಸಿಟಿ.

ಸತ್ಯಮೇವಜಯತೇ.
(ಗುಣವಾನಗಿ ವಿಜ್ಞಾಂ ಪಣ ಪರತ.)
ಧಾತುಪುಷ್ಟಿಕ ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ
ಮದನೋತ್ಸವ ಗುಳಿಗೆ.

ಜನನೇಂದ್ರಿಯದ ಶಿಥಿಲತ ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವುದು. ಧಾತು ಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ ಇಂದ್ರಿಯಸ್ತಂಭಕ, ನರ್ವ್, (ಟಾನಿಕ್) ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರಹದ ಬೊಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗವು ಮುಂತಾದವು ಅತ್ಯುತ್ತಮ ಗುಣವಾಗಿ ಶರೀರಕ್ಕೆ ನವೀನತ್ವವೂ ಕಾಂತಿಯೂ ರತಿಸುಖಕ್ಕೆ ಸಂಭೋಗ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಇದನ್ನು ಸೇವಿಸುವಾಗ್ಗೆ **ನಪುಂಸಕತ್ವಾರಿ** ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩—೦—೦.

ಪ್ರಮೇಹನಿವಾರಣೆ— ಇದರ ಸೇವನೆಯಿಂದ ಮೂತ್ರಸ್ಥಾನದಿಂದ ಕೆಂಪು ಬಿಳಿಯಂತ ಹೋಗತಕ್ಕ ಕೀವು, ಉರಿ, ವಗೈರೆ ಅನುಭವಾತ್ರಿಯಿಂದ ಗುಣವಾಗುವದು. ಕಿಮ್ಮತ್ತು ಬಾಟ್ಲಿ ೧ಕ್ಕೆ ರೂ. ೩—೮—೦. ಟ ಖ ಚೀರ ಅನುಪಾನ ಪತ್ರಿಕೆ ಔಷಧದ ಸಂಗಡ.

ಪಂಡಿತ ಸ್ಟ್ಯಾಂಪು ಕಳುಹಿಸಿದರೆ ಕ್ಯಾಟಲಾಗವು.
ವಿಳಾಸ.—
ವೈದ್ಯ ಜಿ. ಎಲ್. ಜೋಶಿ ಮತು ಕಂಪೆನಿ.
13 ನಂ ಗ. ಪ್ಲೇಸ್ಟ್ರ ಬಜಾರು, ಉತ್ತರ ಕಾನಡಾ.

ತಯಾರಾಗಿವೆ.

ಸಹಕಾರ ಸಂಘಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಉಪನಿಬಂಧನೆಗಳೂ, ದಾನ ಬರೆದು ರಿಜಿಸ್ಟ್ರಾರವರ ಆಫೀಸಿಗೆ ಕಳುಹಿಸಿದಾಗ ಅವು ಸರಿಯಾಗಿ ಬರೆಯಲ್ಪಡದಿಲ್ಲವೆಂದು ವಾಪಸು ಕಳುಹಿಸಿ ಅದನ್ನು ಹೊಸದು ಸರಿಯಾಗಿ ಬರೆಯುವ ತೊಂದರೆಯನ್ನು ನಿವಾರಿಸಲಿಕ್ಕಾಗಿ ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟದಾನಾ ಫಾರಮುಗಳೂ, ಪಾಸ್ ಬುಕ್ಕುಗಳು ನಮ್ಮಲ್ಲಿಯೂ ಮತ್ತು ವಿರಾಜಪೇಟೆ ಚಿನ್ನಪ್ಪಾ ಸ್ಟೋರಿನಲ್ಲಿಯೂ ಮಾರಾಟಕ್ಕಿವೆ.

ಮೇನೇಜರ್ 'ಕೊಡಗು' ಮಡಿಕೇರಿ.

ಕನ್ನಡ
ಸ್ವಧರ್ಮ ಹೊಸ ಪತ್ರಿಕೆ

ಸಂಪಾದಕರು:—ದ ರಾ. ಬೇಂದ್ರೆ, ಬಿ. ಎ.

ಸಮಾಜದಲ್ಲಿ ಶಾಂತಿಪುಷ್ಟಿತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿ. ಸದಾಚಾರದ ಬೆಳಗಿಗೆ ಸುವಿಚಾರವೇ ನಿಶ್ಚಯದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೊರಡುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ ರೂ. 3—0—0.

ಕಾರ್ಯದರ್ಶಿ
"ಸ್ವಧರ್ಮ" ಕಾರ್ಯಾಲಯ,
ಮಾಳಮಡ್ಡಿ, ಧಾರವಾಡ.

Printed & published by P. I. Belliappa, at "Kodagu" Press, Mercara for "Kodagu" Ltd.

If not delivered please return to "KODAGU" OFFICE MERCARA

ಕೊಡಗು.

[illegible] || [illegible] ||

ಸಂಪಾದಕ—ಪಂದ್ಯಂಡ ಬಿ ಪಳ್ಳಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೬] ಕೊಡಗು, ೧೯೨೬ನೇ ಇಸವಿ ಡಿಸೆಂಬರ್ ತಾರೀಖು ೩೧ನೇ ಶುಕ್ರವಾರ [ಸಂಚಿಕೆ ೫೮

SPORTS OUTFITTING DEPARTMENT.

Fsco No 1 Indian made Tennis Rackets	Rs	7	Gut Peserver in box of 2 bottles	Rs	1/12
No 2 „		6 8	Regulation pattern press	,	2/
Vintage	,	10/	Racket covers at	Rs	3/8, 1/2, 1/6, & 2/
The wonder ,	„	13/	Badminston recquets at	Rs	1/8 & 2
The marvel		14/8	Canary wool badminston balls C	„	1/2 each
Wisden's Tennis balls per doz	Rs	14 8	Gut for badminton recquets per bundle	,	/12/
Dunlop „	„	15 8	Referee's whistles C	Rs	1/4 & 1/ each
Ayre's		16/8			

PLEASE WRITE FOR OTHER DETAILS

SPENCER & CO., LTD. SPORTS OUTFITTERS MERCARA.

52 49

USE FOR ALL CROPS THE FOLLOWING MANURES:-

Name of Manure	Guaranteed Percentage Nitrogen	Pure Potash	Phosphoric Acid	
Groundnut Poonac No 1	7 8			
„ No 2	5 6			
Castor Ponac	5 6			
Neem Poonac	4 5			
Hongay Poonac	3 4			
Steamed Bone Meal	4 45		21 22	
Raw	4 4 5		22 23	Soluble in water
Ordinary Superphosphate			15 17	14 15 %
Concentrated ,			42 45	Soluble in Citric
Basic			13 14	Acid
Crushed Groundnut Poonac	7 8			12 13 /
Sulphate of Potash		48 50		and about 40
Muriate of Potash		50 52		lime
Kainit		12 13		
Basic Slag			17 20	
Nitrate of Soda	15 16			
Sulphate of Ammonia	20 21			
Nitrate of Potash (70 % Refined)	9 10	30 35		
Nitrate of Potash			5 7	
Dried Fish	5 7			
Blood Meal (Crushed)	11 12			
„ „ (Uncrushed)	13 14			
Slaked Lime				
Seychelles Guano				
Petrolim (Nett in mixtures)	18			
Calcium cyanamide				
Do (Gross in drums)	18			
Coffee Fertilisers No 1	4 5	4 to 5	7 to 8	
„ No 2	2 5	01	10	

THE ABOVE MANURES AND OTHER ESTATE REQUISITES, SUCH AS DATE MATS, BASKETS, BARBED WIRE, CEMENT, PETROL OILS, ETC CAN BE HAD AT MODERATE PRICE AT THE FOLLOWING ADDRESS. PLEASE APPLY FOR FURTHER PARTICULARS TO.—

B. Bettiah,

Receiving & Forwarding Agent,
SANTHEPET, MYSORE.

12—5

ಸತ್ಯಮೇವ ಜಯತೇ.

(ಗುಣವಾಗದಿದ್ದರೆ ಹಣ ವಾಪಸ)

[illegible]

ಮದನೋದ್ಭವ ಗುಳಿಗೆ.

[illegible]

ವೈದ್ಯ ಜಿ. ಎಲ್ ಜೋಶಿ ಮತ್ತು ಕಂಪನಿ.

17 ನಂ 6. [illegible]

ARMS & AMMUNITION MART

Mahomedally-Noorbhoy



331 Abdul Rehman Street, near Crawford Market, BOMBAY 3

Telegraphic Address—"S [illegible]" Bombay.

[52—7] Please write for Reduced prices list for 1926.

ಇಂಗ್ಲಿಷ್ ಹೇರ್ ಡಿಸ್ಟ್ರೋಯರ್ ಸೋಪ್.

[illegible]

ಕ್ರಯ 1 [illegible] 1—4—0.

[illegible] ನಂ 232,

ಮದರಾಸು.

32—52

"ಕೊಡಗು"

ಸಂ ೧೯೨೬ ನೇ ಇಸವಿ ಡಿಸೆಂಬರ್ ತಾ. ೩೧ನೇ ಶುಕ್ರವಾರ

ಗತಿಸಿದ ರಾಯ್ ಬಹದ್ದೂರ್ ಕೊಡಂದೇರ ಕುಟ್ಟಯ್ಯನವರು.

ರಾಯ್ ಬಹದ್ದೂರ್ ಕುಟ್ಟಯ್ಯನವರ ಕೆಲವು ದಿವಸಗಳಿಂದಲೇ ಖಾಯಿಲೆಯಿಕ್ಕಿದ್ದವರು ತಾ. 27–12–26ನೇ ದಿನ ರಾತ್ರಿ ಎಂಟು ಗಂಟೆಗೆ ಸ್ವರ್ಗಸ್ಥರಾದರು. ಇವರ ಮರಣದಿಂದ ದೇಶಕ್ಕೆ ದೊಡ್ಡ ನಷ್ಟವಿದೆ. ಇವರಂಥ ಅನುಭವಶಾಲಿಗಳು ದೇಶದ ಸಾರ್ವಜನಿಕ ಕಾರ್ಯಗಳಿಗೆ ದೊರಕುವದು ಅಪರೂಪ. ಈಗೀಗ ಇವರು ಸಂಚೆಕೊಂಡಿದ್ದ ಒಂದೆರಡು ಚಳುವಳಿಂದ ದೇಶದಲ್ಲಿ ಅನೇಕರಿಗೂ ಇವರಿಗೂ ಅಭಿಪ್ರಾಯ ಭೇದ ಬಂದಿದ್ದರೂ ದೇಶದವರಿಗೆ ಇವರ ಮೇಲೆ ಇದ್ದ ಗೌರವವು ಕಡಿಮೆಯಾಗಿರಲಿಲ್ಲ.

ಮ. ಕುಟ್ಟಯ್ಯನವರು 1853 ನೇ ಇಸವಿಯಲ್ಲಿ ಹುಟ್ಟಿ 73 ವರ್ಷ ಎಂಟು ತಿಂಗಳು ಬಾಳಿದರು. ಇವರು ವಿದ್ಯಾಭ್ಯಾಸ ಮಾಡುವಾಗ ಈಗಿನಂತೆ ಅನುಕೂಲಗಳು ಬಹಳ ಕಡಿಮೆ ಇತ್ತು. ಇವರೂ ರಾ ಬ ಮನೆಯಪಂಡ ಮುತ್ತಣ್ಣನವರೂ, ರಾ ಬ ಕೋದಂಡ ಮಾದೈಯ್ಯನವರೂ ಸಹ ಬೆಂಗಳೂರಲ್ಲಿ ಸಹಪಾಠಿಗಳಾಗಿದ್ದರು. ವಿದ್ಯಾಭ್ಯಾಸ ತೀರಿದನಂತರ ಕೂರ್ಗಿನಲ್ಲಿ ಸರಕಾರಿ ಉದ್ಯೋಗಕ್ಕೆ ಸೇರಿಕೊಂಡರು. ಕ್ರಮೇಣ ಸಂಬಳಪಡೆಯುತ್ತಾ ತಾಲೋಕಿನ ಸುಭೇದಾರರಾಗಿದ್ದು 1901ನೇ ಇಸವಿಯಲ್ಲಿ ಅಸಿಸ್ಟಂಟ್ ಕಮಿಷನರಾದರು. 1909 ನೇ ಇಸವಿಯಲ್ಲಿ ಕೆಲಸದಿಂದ ಬಿಡುಗಡೆ ಹೊಂದಿದರು. ಅನಂತರವೇ ಇವರ ಸಾರ್ವಜನಿಕ ಕೆಲಸಗಳು ಪ್ರಾರಂಭವಾದದ್ದು. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಕಿಗ್ಗಟ್ಟುನಾಡಿನ ಸದಸ್ಯರಾಗಿ ಕೆಲವು ವರ್ಷ ನಿಯಮಿತ ಮೆಂಬರರಾಗಿದ್ದರು. ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ಅಧ್ಯಕ್ಷರನ್ನು ಪ್ರಜಾಪ್ರತಿನಿಧಿಗಳೇ ಚುನಾಯಿಸಿಕೊಳ್ಳಬಹುದೆಂತ ಸರಕಾರದ ಮಂಜೂರಾತಿ ಬಂದ ಹಾಗೆಯೇ ಮ. ಕುಟ್ಟಯ್ಯನವರೇ ಒಮ್ಮತದಿಂದ ಆರಿಸಲ್ಪಟ್ಟು ಆ ಗೌರವವನ್ನು ಮತ್ತೆ ಪುನಃ ಎರಡು ಚುನಾವಣೆಯಲ್ಲಿ ಪುರನಿವಾಸಿಗಳ ಪ್ರತಿನಿಧಿಗಳು ಇವರಿಗೆ ಕೊಟ್ಟರು. ಇವರ ಅಧಿಕಾರದ ಅವಧಿಯಲ್ಲಿ ಮುನ್ಸಿಪಲ್ ಆಡಳಿತವನ್ನು ಚೆನ್ನಾಗಿ ನಡಿಸಿದರು. ಇವರು ಮುನ್ಸಿಪಾಲಿಟಿಯ ಚುನಾಯಿತ ಅಧ್ಯಕ್ಷರಾಗಿದ್ದಾಗ ಇವರ ಸಮಯದ ಹೆಚ್ಚಿನ ಭಾಗವನ್ನೆಲ್ಲಾ ಮುನ್ಸಿಪಾಲಿಟಿಗೆ ಕೊಟ್ಟದ್ದು ಮಾತ್ರವಲ್ಲದೆ ಬಹಳ ಕಷ್ಟಾಗಿ ವಾಸ ಮಾಡುತ್ತಿದ್ದ ಮಡಿಕೇರಿಯ ಬಾಣೆಮೊಟ್ಟೆ ಮತ್ತು ಪೆನ್ಷನ್ ಲೈನ್ ಎಂಬ ಭಾಗಗಳಿಗೆ ನೀರು ಸರಬರಾಯಿಗಾಗಿ ಎರಡು ಸಾವಿರ ರೂಪಾಯಿ ಖರ್ಚು ಮಾಡಿಸಿ ನೀರಿನ ನಳ್ಳಿ ಹಾಕಿಸಿದರು ಈ ಕೆಲಸವನ್ನು ಇವರು ಇವರ ಪತ್ನಿ ದೇಚವ್ವನವರ ಹೆಸರಿನಲ್ಲಿ ಮಾಡಿದ್ದರಿಂದ ಮುನ್ಸಿಪಾಲಿಟಿಯವರು ಪಟ್ಟಣದ ಬಾಣೆಮೊಟ್ಟೆ ಎಂಬ ಭಾಗಕ್ಕೆ ದೇಚೂರು ಎಂಬ ಹೆಸರನ್ನು ಕೊಟ್ಟಿರುತ್ತಾರೆ.

ಇವರು ಅಸಿಸ್ಟಾಂಟ್ ಕಮಿಷನರಾಗಿದ್ದಾಗಲೇ ಮುಜರಾಯಿ ಇಲಾಖೆಯ ಪ್ರಸಿಡೆಂಟರಾಗಿ ಕೆಲವು ಕಾಲ ಕೆಲಸ ನಡಿಸಿದರು. ಆ ಆಡಳಿತದಲ್ಲಿ ದೇವಸ್ಥಾನಗಳ ನೌಕರರಿಂದ ಸಹಾಯವಾಗ ಕೆಲಸ ನಡಿಸಿ ದೇವಸ್ಥಾನಗಳನ್ನು ಒಳ್ಳೇ ಸ್ಥಿತಿಗೆ ತಂದರು. ಇವರು ಕೈಯಾಕಿದ ಕೆಲಸಗಳೆಲ್ಲಾ ಸ್ವಚ್ಛತೆಯಿಂದಲೂ ಕ್ರಮದಿಂದಲೂ ಪ್ರಮಾಣಿಕತೆಯಿಂದಲೂ ನಡೆಯುತ್ತಿತ್ತು.

ಜಮೀನ್ದಾರರ ಸಂಘವು ಸರಿಯಾಗಿ ಕೆಲಸ ಮಾಡಲು ಪ್ರಾರಂಭಿಸಿದ 1910 ನೇ ಇಸವಿಯಿಂದಲೂ 1920 ನೇ ಇಸವಿವರೆಗೆ ಇವರು ಸಂಘದ ಉಪಾಧ್ಯಕ್ಷರಾಗಿದ್ದರು. ಆ ಮಧ್ಯದಲ್ಲಿ ... ವರ್ಷ ಸಂಘದ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಯ್ ಬಹದ್ದೂರ್ ಮನೆಯಪಂಡ ಮುತ್ತಣ್ಣನವರು ಅನಾರೋಗ್ಯದ ದೆಸೆಯಿಂದ ಪ್ರಸಿಡೆಂಟ್ ಸ್ಥಾನವನ್ನು ಬಿಟ್ಟಂದಿನಿಂದ ಅಂದರೆ 1920 ನೇ ಇಸವಿಯಿಂದ 1924 ನೇ ಫೆಬ್ರವರಿ ತಿಂಗಳ ವರೆಗೆ ಇವರು ಸಂಘದ ಅಧ್ಯಕ್ಷರಾಗಿದ್ದರು. ಆಗ ಆ ಸಂಘದವರು ಇವರ ಅಧ್ಯಕ್ಷಸ್ಥಾನವನ್ನು ಬಿಡಿಸಿದ್ದಲ್ಲ. ಇವರಾಗಿ ರಾಜಿನಾಮೆ ಕೊಟ್ಟರು.

ಈ ಪತ್ರಿಕೆಯನ್ನು ಪ್ರಕಟಿಸಲಿಕ್ಕಾಗಿ "ಕೊಡಗು" ಲಿಮಿಟೆಡ್ ಕಂಪೆನಿಯು 1921 ನೇ ಇಸವಿಯಲ್ಲಿ ಸ್ಥಾಪಿತವಾದಂದಿನಿಂದ 1924 ನೇ ಇಸವಿ ಫೆಬ್ರವರಿ ತಿಂಗಳ ವರೆಗೂ ಇವರು ಕಂಪೆನಿಯ ಅಧ್ಯಕ್ಷರಾಗಿದ್ದರು. ಈ ಕಾಲದಲ್ಲಿ ಕಂಪೆನಿಯ ಕೆಲಸಕ್ಕೆ ತುಂಬಾ ಸಹಾಯಕರಾಗಿದ್ದರು. ಇವರು ಅಧ್ಯಕ್ಷರಾಗಿದ್ದಾಗಲೇ ಈ ಕಂಪೆನಿಯನ್ನು ಅಲ್ಪಸ್ವಲ್ಪ ಜನ ಭಾಗ್ಯವಶಪಡಿಸಿಕೊಳ್ಳಬೇಕೆಂತ ಎಷ್ಟೋ ಪ್ರಯತ್ನ ಪಟ್ಟರೂ ಕಂಪೆನಿಯ ಮೆಂಬರುಗಳ ಬಹುಮತಕ್ಕೆ ಅನುಗುಣವಾಗಿ ಸಂಸ್ಥೆಯನ್ನು ನಡೆಸಿಕೊಂಡು ಬಹಳ ಬುದ್ಧಿ ಕುಶಲತೆಯಿಂದಲೂ, ತಾಳ್ಮೆಯಿಂದಲೂ ಕೆಲಸ ನಡಿಸಿ ದೇಶದ ಪ್ರೀತಿಯನ್ನು ಸಂಪಾದಿಸಿದರು.

1924 ನೇ ಇಸವಿಯ ಅನಂತರ ಸಹ ಇವರಿಗೂ ಇವರ ಸಹೋದ್ಯೋಗಿಗಳಿಗೂ ಯುಕ್ತ ತೋರಿದ್ದ ರೀತಿ ಸಾರ್ವಜನಿಕ ಕೆಲಸಗಳನ್ನು ನಡಸುತ್ತಲೇ ಇದ್ದರು. ಶ್ರೀ ಕಾವೇರಿ ಒಸ್ಸೋಸಿಯೇಷನ್ನು ಸ್ಥಾಪಿಸಿದರು. ಇದು ಬರೀ ಅದಾಯದ ಬಾಬಿನ ಕೆಲಸವಾದರೂ ಕೆಲವು ಮಟ್ಟಿಗಾದರೂ ದೇಶದ ಉತ್ಪತ್ತಿಯನ್ನು ದೇಶದಲ್ಲೇ ಉಳಿಸಬೇಕೆಂಬ ತತ್ವವನ್ನನುಸರಿಸಿ ಆ ಕೆಲಸವನ್ನು ನಡಿಸುತ್ತಿದ್ದರು. ಅನಂತರ "ಲೋಕಪಾವನ" ಪ್ರೆಸ್ಸನ್ನು ಏರ್ಪಡಿಸಿ ಆ ಪತ್ರಿಕೆಯನ್ನು ಹೊರಡಿಸಿದರು. ಇದರಿಂದ ಇವರಿಗೆ ಸಾರ್ವಜನಿಕ ಕೆಲಸದಲ್ಲಿ ಇದ್ದ ಉತ್ಸಾಹವು ನಿದರ್ಶನವಾಗುತ್ತದೆ.

ಇತ್ತೀಚಿಗಿನ ಇವರ ಸಾಮಾಜಿಕ ಮತ್ತು ರಾಜಕೀಯ ಚಳವಳಿ ದೇಶದ ಬಹುಮತಕ್ಕೆ ಒಪ್ಪಿಗೆಯಾಗಿರದಿದ್ದರೂ ಇವರ ಮೇಲೆ ಜನರಿಗೆ ಇದ್ದ ಗೌರವವು ಕಡಿಮೆಯಾಗಿರಲಿಲ್ಲವೆಂಬದಕ್ಕೆ ಇವರು ಸಂಟ್ರಲ್ ಬ್ಯಾಂಕಿನ ಅಧ್ಯಕ್ಷರಾಗಿ ಅವರ ಮರಣದ ವರೆಗೂ ಇದ್ದರೆಂಬುದರಿಂದಲೇ ಗೊತ್ತಾಗುತ್ತದೆ. ದೇಶಕ್ಕೆ ಪ್ರಯೋಜನಕಾರಿಯಾದ ಆ ಸಂಸ್ಥೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ಅಭಿಪ್ರಾಯಗಳು ಚರ್ಚೆಗೆ ಬರಲು ಎಡೆಯಿಲ್ಲ. ಆದ್ದರಿಂದ ಇವರನ್ನು ಅಧ್ಯಕ್ಷರನ್ನಾಗಿ ಕಳೆದ ವರ್ಷ ನಡೆದ ಆಖೈರ್ ಚುನಾವಣೆಯಲ್ಲಿ ಸಹ ಒಮ್ಮತದಿಂದ ಆರಿಸಿಕೊಂಡಿದ್ದರು.

ಇವರ ಕಾರ್ಯ ತತ್ಪರತೆಯನ್ನು ಸರಕಾರದವರು ಮನ್ನಿಸಿ ಇವರಿಗೆ 1906 ನೇ ಇಸವಿಯಲ್ಲೇ ರಾಯ್ ಬಹದ್ದೂರ್ ಟೈಟಲ್ ಕೊಟ್ಟರು. ವೈಸ್ರಾಯರ ಭೇಟಿಗೆ ಅನೇಕ ವೇಳೆ ಸರಕಾರದವರಿಂದ ಕಳುಹಿಸಲ್ಪಟ್ಟಿದ್ದಲ್ಲದೆ ಜಮೀನ್ದಾರರ ಸಂಘದ ಪ್ರೆಸಿಡೆಂಟರಾಗಿ ಸಂಘದಿಂದ ಆರಿಸಲ್ಪಟ್ಟು 1923 ನೇ ಇಸವಿಯಲ್ಲಿ ಲಾರ್ಡ್ ರೀಡಿಂಗರ ಭೇಟಿಗೆ ಡೆಪ್ಯುಟೇಶನ್ ತೆಗೆದುಕೊಂಡು ಹೋಗಿದ್ದರು.

ಇವಲ್ಲದೆ ಇನ್ನೂ ಅನೇಕ ಇತರ ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗಿದ್ದರು. ಪ್ಲಾಂಟೇಶನ್ ಫಂಡಿನ ಮೆಂಬರಾಗಿಯೂ, ಮಡಿಕೇರಿ ಗರ್ಲ್ಸ್ ಸ್ಕೂಲ್ ಕಮಿಟಿಯ ಮೆಂಬರಾಗಿಯೂ, ಬೋರ್ಡಿಂಗ್ ಕಮಿಟಿಯ ಮೆಂಬರಾಗಿಯೂ ಮತ್ತು ಕೊಡಗು ವಿದ್ಯಾಸಂಘದ ಅಧ್ಯಕ್ಷರಾಗಿಯೂ ಇದ್ದರು.

ಇವರು ಎಂ. ಸಿ. ಎಂ. ಹೀರು ಸೊಸೈಟಿಗೆ ಧರ್ಮ ಸಹಾಯ ಮಾಡಿದ್ದಲ್ಲದೆ ಪಿರಿಯಾಪಟ್ಟಣದ ಬೋರ್ಡಿಂಗ್ ಕಟ್ಟಡಕ್ಕಾಗಿ 5000 ರೂಪಾಯಿ ಸಹ ಕೊಟ್ಟಿದ್ದಾರೆಂತ ತಿಳಿಯುತ್ತೇವೆ. ಮಡಿಕೇರಿ ಗರ್ಲ್ಸ್ ಸ್ಕೂಲಿನಲ್ಲಿ ಇವರ ಗತಿಸಿದ ಮಗಳ ಸ್ಮಾರಕವಾಗಿ ಮೂರು ... ರೂಪಾಯಿನ ಫಂಡುವಾಗ ಕೊಟ್ಟ ವೇತನವೊಂದನ್ನು ... ರೆಂತಲೂ ತಿಳಿಯುತ್ತೇವೆ. ಅಲ್ಲದೆ ಗರ್ಲ್ಸ್ ಸ್ಕೂಲ್ ಕಟ್ಟಡಕ್ಕೂ ಹಣ ಸಹಾಯ ಮಾಡಿದ್ದಾರೆ.

ಈ ರೀತಿ ಇವರಿಲ್ಲದ ಸಾರ್ವಜನಿಕ ಸಂಸ್ಥೆಯಿರಲಿಲ್ಲವೆನ್ನುವ ಗೌರವವು ಇವರಿಗೆ ಇತ್ತು. ತಮ್ಮ ಆಯುಷ್ಯದ ದೊಡ್ಡ ಭಾಗವನ್ನು ಸರಕಾರದ ಕೆಲಸದಲ್ಲಿ ಕಳೆದು ಅನಂತರ ದೊರಕಿದ ವಿಶ್ರಾಂತಿಯನ್ನು ಸ್ವಾರ್ಥಕ್ಕೆ ಉಪಯೋಗಿಸದೆ ಬಿಡುವಿಲ್ಲದೆ ರಾತ್ರಿ ಹಗಲೆನ್ನದೆ ದೇಶಕ್ಕೆ ಉಪಯೋಗಿಸಿದಕ್ಕೆ ದೇಶವು ಇವರಿಗೆ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಸ್ವಲ್ಪವೇ. ಸರಕಾರಿ ಉದ್ಯೋಗಕ್ಕೆ ಹೋಗದ ವಿದ್ಯಾವಂತ ಯುವಕರು ಸಹ ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಗಳಾಗುವದು ಅಪರೂಪವಾಗಿರುವಾಗ ವಿಶ್ರಾಂತಿ ತೆಗೆದುಕೊಳ್ಳಬಹುದಾಗಿದ್ದ ಕಾಲವನ್ನು ಇವರು ದೇಶಕ್ಕೆ ಉಪಯೋಗಿಸಿದ್ದು ದೇಶದ ಭಾಗ್ಯವೇ ಸರಿ. ಇವರ ಸಾರ್ವಜನಿಕ ಕಾರ್ಯದ ಉತ್ಸಾಹತೆಯನ್ನು ದೇಶದ ಜನರು ಹಿಂಬಾಲಿಸಲಿ ಎಂತಲೂ ಮತ್ತು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂತಲೂ ದೇವರನ್ನು ಪ್ರಾರ್ಥಿಸುತ್ತೇವೆ.

ಕಮಿಷನರ್ ಮ. ಟಿ. ಜೆ. ಟಾಸ್ಕರ್‌ರವರು.

ಈಗ ಮೂರು ವರ್ಷಗಳಿಂದ ಕೊಡಗಿನ ಕಮಿಷನರಾಗಿದ್ದ ಮ. ಟಿ ಜೆ ಟಾಸ್ಕರ್, ಐ.ಸಿ ಯಸ್, ಓ. ಬಿ. ಇ. ಇವರು ನಮ್ಮ ದೇಶದಿಂದ ಜನವರಿ 3ನೇ ತಾರೀಖಿನಲ್ಲೇ ವರ್ಗವಾಗಿ ಹೋಗುತ್ತಾರೆ. ಇವರು ಹೊರಟು ಹೋಗುವದರಿಂದ ದೇಶದಲ್ಲಿ ದುಃಖವಿದೆಯೆಂಬದರಲ್ಲಿ ಸಂಶಯವಿಲ್ಲ. ಈ ಪ್ರಟಿಷ್ ರಾಜ್ಯಾಡಳಿತ ಪದ್ಧತಿಯಲ್ಲಿ ಎಷ್ಟೇ ದಯಾಳುವಾದ ಅಧಿಕಾರಿಯಾದರೂ ಪ್ರಜೆಗಳಿಗೆ ವಿಶೇಷ ಪ್ರಯೋಜನ ಮಾಡಲು ಸಾಧ್ಯವಿಲ್ಲವೆಂಬದನ್ನು ನೆನಪಿನಲ್ಲಿಡಬೇಕು. ಮ. ಟಾಸ್ಕರವರು ದಯಾಳುವಾಗಿಯೂ, ತಾಳ್ಮೆಯುಳ್ಳವರಾಗಿಯೂ, ಪ್ರಜೆಗಳ ಕಷ್ಟ ಸುಖಗಳಲ್ಲಿ ಸಹಾನುಭೂತಿಯುಳ್ಳವರಾಗಿಯೂ, ನ್ಯಾಯಪ್ರಿಯರಾಗಿಯೂ ಇದ್ದರು. ಆದರೂ ಇವರ ಮೂರು ವರ್ಷಗಳ ಆಡಳಿತದಿಂದ ದೇಶದಲ್ಲಿ ಯಾವ ಮಹತ್ವದ ಹೊಸ ಕಾರ್ಯವೂ ಆಗಲಿಲ್ಲ. ಯಾವ ವಿಶೇಷ ಕಾರ್ಯ ನಡೆದಿದ್ದರೂ ಪ್ರಜಾ ಹಿತಕ್ಕಾಗಿ ಪ್ರಜಾ ಪ್ರತಿನಿಧಿಗಳು ಕೌನ್ಸಿಲಿನಲ್ಲಿ ತರುವ ಸಂಗತಿಗಳನ್ನು ತುಂಬಾ ಶ್ರಮಪಟ್ಟು ತಿಳಿದು ಕೊಂಡು ಸಹಾನುಭೂತಿ ತೋರಿಸುವ ಬಾಬಾಬತ್ತುಗಳನ್ನು ಕೊಡುತ್ತಿದ್ದರು. ದೇಶದ ಕೆಲವು ಪ್ರಾಂತ್ಯದ ಜನರಿಗೆ ಪ್ರಯೋಜನವಾಗುವಂಥ ಹಾಕತ್ತೂರ್ ನಾಲೆ, ಮರನಾಡು ರಸ್ತೆ ಮುಂತಾದ ಕೆಲಸಗಳಲ್ಲಿ ಸಂಪೂರ್ಣ ಸಹಾನುಭೂತಿ ತೋರಿಸಿದರು. ಆದರೆ ಅವರ ಸಹಾನುಭೂತಿಯು ಬರೀ ಮಾತಿನಲ್ಲಿ ತೀರದೆ ಕಾರ್ಯತಃ ಪ್ರಯೋಜನವಾಗುವ ಮುಂಚೆ ಇವರು ಹೊರಟು ಹೋಗುವದು ಬಹಳ ವ್ಯಸನಕರವಾಗಿದೆ. ಪ್ರಜಾಹಿತಕ್ಕೆ ಅತ್ಯಂತ ಆಗತ್ಯವಾದ ಇಂಥಾ ಕೆಲಸಗಳನ್ನು ಹಿಂದಕ್ಕೆ ಇಟ್ಟದ್ದರಿಂದ ಇವರ ಒಳ್ಳೇ ಉದ್ದೇಶವು ದೇಶಕ್ಕೆ ಹಿಡಿಯಲು ಅವಕಾಶವಿಲ್ಲದೆ ಹೋಯಿತು. ಇವರು ಕೈಕೊಂಡ ಈ ಕೆಲಸಗಳು ಮೂಲೆಗೆ ಬೀಳದಂತೆ ಮುಂದೆ ಬರುವ ಕಮಿಷನರಿಗೆ ಇವರು ಸೂಚನೆಕೊಟ್ಟು ಹೋದಾರೆಂದು ಆಶಿಸುತ್ತೇವೆ.

ಉತ್ತರ ಕೊಡಗಿನಲ್ಲಿ ರಿಜರ್ವ್ ಫಾರೆಸ್ಟ್‌ಗಳ ಕಾಟದಿಂದ ಪ್ರಜೆಗಳಿಗೆ ತೊಂದರೆಯಾಗಿರುವದನ್ನು ಇವರು ಈ ದೇಶಕ್ಕೆ ಬಂದ ಕೆಲವು ಕಾಲದೊಳಗೆ ತಿಳಿದುಕೊಂಡು ಆನೆಗಳನ್ನು ಓಡಿಸುವ ಏರ್ಪಾಡು ಮಾಡಿದ್ದಲ್ಲದೆ 500 ಎಕರೆ ರಿಜರ್ವ್ ಫಾರೆಸ್ಟನ್ನು ವ್ಯವಸಾಯಕ್ಕೆ ಬಿಟ್ಟುಕೊಟ್ಟು ನಿರ್ಜನ ಪ್ರದೇಶವನ್ನು ಫಲವತ್ತಾಗಿಯೂ, ಜನಭರಿತವಾಗಿಯೂ ಮಾಡಲು ಏರ್ಪಾಡು ಮಾಡಿದ್ದಾರೆ.

ಮ. ಟಾಸ್ಕರವರು ಸ್ವತಃ ನಿಸಾ ಸೇವನೆ ಬಿಟ್ಟವರಾಗಿದ್ದದರಿಂದ ನಿಸಾ ಸೇವನೆಯನ್ನು ಕಡಿಮೆ ಮಾಡಲು ಉಪಾಯಗಳನ್ನು ಹುಡುಕುತ್ತಲೇ ಇದ್ದರು. ನಿಸಾ ಅಂಗಡಿಗಳು ತೆರೆದಿಡುವ ಕಾಲವನ್ನು ಕಡಿಮೆ ಮಾಡಿಯೂ ಸಾರಾಯಿ ... ಬಲವನ್ನು ಕಡಿಮೆ ಮಾಡಿ ಕ್ರಯವನ್ನು ಹೆಚ್ಚಿಸಿಯೂ ... ಕತನವನ್ನು ಕೆಲವು ಮಟ್ಟಿಗಾದರೂ ಕಡಿಮೆ ಮಾಡಿದ್ದಾರೆ.

ಡಿಸ್ಟ್ರಿಕ್ಟ್ ಜಡ್ಜಿಯಾಗಿ ಮ. ಟಾಸ್ಕರರವರು ಪಕ್ಷಪಾತವಿಲ್ಲದೆ ಕೆಲಸದಿಂದ ಕಕ್ಷಿಗಾರರಿಗೂ ಲಾಯರುಗಳಿಗೂ ಪ್ರಿಯರಾಗಿದ್ದರೆಂತ ತಿಳಿಯುತ್ತೇವೆ. ಇವರು ಜಡ್ಜಿಸ್ಥಾನದಲ್ಲಿ ಕೂತಾಗ ತುಂಬಾ ಸಮಾಧಾನ ಯುಕ್ತರಾಗಿ ಕಕ್ಷಿಗಾರರ ರುಜುವಾತಿಗೂ ಮತ್ತು ವಾದಗಳಿಗೂ ಎಡೆಕೊಡುತ್ತಿದ್ದರು.

ಮ. ಟಾಸ್ಕರವರು ಆಟ, ಬೇಟೆ, ಊಟಗಳಲ್ಲಿ ವ್ಯರ್ಥ ಕಾಲ ಕಳೆಯಲಿಲ್ಲ. ಕೌನ್ಸಿಲ್ ಕೆಲಸಕ್ಕೇನೇ ಹೆಚ್ಚಿಗೆ ಗಮನ ಕೊಟ್ಟದ್ದರಿಂದ ಕೌನ್ಸಿಲಿನಲ್ಲಿ ಆದ ತೀರ್ಮಾನಗಳನ್ನೂ ಮತ್ತು ಆಡಳಿತದಿಂದ ಪ್ರಜೆಗಳಿಗೆ ಪ್ರಯೋಜನವಾಗುವ ಕೆಲಸಗಳನ್ನೂ ಮಾಡಲು ಹೆಚ್ಚಿಗೆ ಸಮಯ ಸಿಕ್ಕಲಿಲ್ಲ. ಪ್ರಜಾಪ್ರತಿನಿಧಿಗಳಿಗೆ ಏನೂ ಅಧಿಕಾರ ದೊರಕದೆ ಬರೀ ಆಲೋಚನೆ ಕೊಡಲು ಹಕ್ಕಿರುವ ಕೌನ್ಸಿಲಿಗೆ ಗೌರವ ಬರುವಂಥ ರೀತಿಯಲ್ಲಿ ಕೌನ್ಸಿಲಿನ ಚರ್ಚೆಗಳು ನಡೆಯಬೇಕೆಂಬದಕ್ಕೆ ಪ್ರೋತ್ಸಾಹ ಕೊಟ್ಟಿದ್ದರು. ಇವರು ದೇಶಕ್ಕೆ ಬರುವ ಸಮಯದಲ್ಲೇ ಕೌನ್ಸಿಲ್ ಮಂಜೂರಾಗಿ ಬಂದದ್ದರಿಂದ ಆದಾಯ ವಿಷಯದ ಬಾಬನ್ನು ಇವರಿಗೆ ತುಂಬಾ ಜವಾಬ್ದಾರಿಕ ಇತ್ತು. ಕೊಡಗಿನ ಸರಕಾರದ ಉತ್ಪತ್ತಿಯನ್ನು ಮುಂದಿನ ಜನಾಂಗಕ್ಕೆ ಕಡಕಾಗದಂತೆ ಉಪಯೋಗಿಸುವದು ಸಾಧಾರಣ ಕೆಲಸವಲ್ಲ. ಮೂವ್ವತ್ತೊಂದಕ್ಕಾಗಿ ಲಕ್ಷಾಂತರ ರೂಪಾಯಿ ದಂಡ ಖರ್ಚು ಮಾಡಲಿಕ್ಕಾಗಿ ಬೇಕಿದ್ದ ಗಂಧವನ್ನು ... ಕೈಗಾರಿಕಾ ಫಾರೆಸ್ಟ್ ಇಲಾಖೆಯನ್ನು ಅವಶ್ಯಕ್ಕಿಂತ ಮಿತಿಮೀರಿ ಹೆಚ್ಚಾಗಿ ಬಳಸಿಕೊಂಡು ಬಿಟ್ಟದ್ದರಿಂದ. ಮ. ಟಾಸ್ಕರವರು ಕೊಡದ ಲೂಟಿಯನ್ನು ಪ್ರಜಾಪ್ರತಿನಿಧಿಗಳ ಅಭಿಪ್ರಾಯಕ್ಕನುಗುಣವಾಗಿ ನಿಲ್ಲಿಸಿದರೂ ಫಾರೆಸ್ಟ್ ಇಲಾಖೆಯ ಅನಾಹುತವನ್ನು ಇದರಿಂದ ನಿಲ್ಲಿಸಲು ಸಾಧ್ಯವಾಗಲೇ ಇಲ್ಲ. ಈ ವಿಷಯದಲ್ಲಿ ಮುಂದಿನ ಅಧಿಕಾರಿಗಳು ಸರಿಯಾದ ರೀತಿಯಿಂದ ವರ್ತಿಸುವಂತೆ ನೋಡಿಕೊಳ್ಳುವದು ದೇಶದ ಕರ್ತವ್ಯವಾಗಿದೆ.

ಕೌನ್ಸಿಲ್ ಈ ದೇಶಕ್ಕೆ ಬಂದಾಗ ಇಂಡಿಯಾ ಸರಕಾರವು ಹಿಂದಿನ ಉಳಿತಾಯದಿಂದ ಸಿಲ್ಕು ಸಾಲಗಳು ಸ್ವಲ್ಪವನ್ನಾದರೂ ಕೊಡಬೇಕೆಂತಲೂ ಅದರ ಮೇಲೆಗೆ ಇಂಡಿಯಾ ಸರಕಾರವು ಹಣ ಕೊಡಬೇಕೆಂತಲೂ ನಮ್ಮ ದೇಶದ ಪರವಾ ಇಂಡಿಯಾ ಸರಕಾರಕ್ಕೆ ಬಲವಾಗಿ ಮ. ಟಾಸ್ಕರವರು ಬರೆದಿದ್ದಾರೆಂತ ನಂಬುತ್ತೇವೆ. ಈ ಬಾಬಿನಲ್ಲಿ ಇವರ ಪತ್ರವ್ಯವಹಾರವನ್ನು ಪ್ರಕಟಿಸುವಂತೆ ಕೌನ್ಸಿಲಿನವರು ಕೇಳಿದರೆ ಪ್ರಯೋಜನವಾದೀತು. ಸಿಲ್ಕಿನಲ್ಲಿ ಸ್ವಲ್ಪ ಭಾಗವನ್ನು ಕೊಡಲು ಇಂಡಿಯಾ ಸರಕಾರದವರು ಒಪ್ಪಿದ್ದಾರೆಂತ ತಿಳಿಯುತ್ತೇವೆ. ದೇಶಕ್ಕೆ ದೊರಕಿಸಿಕೊಟ್ಟ ಈ ಲಾಭಕ್ಕೆ ಮ. ಟಾಸ್ಕರರೇ ಜವಾಬ್ದಾರರು.

ಮ. ಟಾಸ್ಕರರವರು ಬಂದ ಮೊದಲನೇ ವರ್ಷವನ್ನು ದೇಶದ ಸ್ಥಿತಿಗಳನ್ನು ತಿಳಿದುಕೊಳ್ಳುತ್ತೇನೆಂತ ಹೇಳಿದರು. ಎರಡನೇ ವರ್ಷದಲ್ಲಿ ಕೌನ್ಸಿಲ್ ಕೆಲಸಕ್ಕೆ ಹೆಚ್ಚಿಗೆ ಗಮನ ಕೊಟ್ಟದ್ದಾಯಿತು. ಮೂರನೇ ವರ್ಷದ ಅರ್ಧಭಾಗವು ರಜೆಯಲ್ಲಿ ಹೋಯಿತು. ನಾಲ್ಕನೇ ವರ್ಷ ಹಿಡಿಯುವ ಮುಂಚೆ ಹೊರಟು ಹೋಗುತ್ತಾರೆ. ಇವರ ಸದುದ್ದೇಶಗಳು ಕಾರ್ಯಗತವಾಗಲು ಅವಕಾಶ ಸಿಕ್ಕದೇ ಹೋದದ್ದು ದೇಶದ ದುರದೃಷ್ಟವೇ ಸರಿ. ದೇಶದ ಆಡಳಿತದ ಯಾವ ಕೆಲಸದಿಂದಲೂ ಪ್ರಯೋಜನವಾಗುವ ಸಂಭವ ಕಡಿಮೆಯಾಗಿದ್ದರೂ ದೇಶದಲ್ಲಿ ಸಂಗಡಭೇದಗಳು ತಲೆದೋರಿರುವಾಗ ನ್ಯಾಯಶೀಲ ಅಧಿಕಾರಿಯು ಇರಬೇಕಾದದ್ದು ಅವಶ್ಯವಾಗಿದೆ. ಈ ಗುಣವು ಮ. ಟಾಸ್ಕರವರಲ್ಲಿ ಇತ್ತೆಂತ ಜನರಿಗೆ ಕೆಲವು ಮಟ್ಟಿಗೆ ನಂಬಿಕೆ ಇತ್ತು. ಇಂಥವರು ಇವರ ಅವಧಿಗೆ ಮುಂಚೆ ಹೊರಟು ಹೋಗುವದರಿಂದಲೇ ಬೇಸರಕ್ಕೆ ಹೆಚ್ಚಿಗೆ ಕಾರಣ. ಇವರು ವರ್ಗವಾಗಿ ಎಲ್ಲಿಗೆ ಹೋಗುತ್ತಾರೆಂಬದು ಖಂಡಿತವಾಗಿ ತಿಳಿಯಲ್ಲವಾದರೂ ಈ ದೇಶದ ಚೀಫ್ ಕಮಿಶನರಾಗಿದ್ದ ಈಗ ಹೈದರಾಬಾದಿನ ರೆಸಿಡೆಂಟರಾಗಿರುವ ಮ. ಬಾರ್ಟನ್‌ರವರು ಇವರನ್ನು ಅಲ್ಲಿಗೆ ಕರಸಿಕೊಂಡಿರಬಹುದೆಂತ ನೆನಸುತ್ತೇವೆ. ಮ. ಬಾರ್ಟನ್‌ರವರು ಇಲ್ಲಿಂದ ಹೊರಟು ಹೋಗುವಾಗ ಮ. ಟಾಸ್ಕರವರನ್ನು ಕಮಿಶನರಾಗಿ ಈ ದೇಶಕ್ಕೆ ತಂದದ್ದೇ ತಾನು ಈ ದೇಶಕ್ಕೆ ಮಾಡಿದ ಒಳ್ಳೇ ಕೆಲಸವೆಂತ ಹೇಳಿದ್ದರು. ಆ ಮಟ್ಟಿಗೆ ಇವರನ್ನು ನಂಬಿದ್ದರಿಂದ ಮ. ಬಾರ್ಟನ್‌ರವರು ಇವರನ್ನು ಕರೆಸಿಕೊಂಡಿರಬಹುದೆಂತ ನಂಬಬಹುದು. ಹೈದರಾಬಾದು ಸಂಸ್ಥಾನದ ಮುಖ್ಯ ರೆವಿನ್ಯೂ ಅಧಿಕಾರಿಯಾಗಿ ನೇಮಿಸಲ್ಪಟ್ಟರೆಂಬ ವರ್ತಮಾನವಿದೆ. ಇವರಿಗೆ ಮುಂದೆ ಶ್ರೇ ಪದವಿಗಳು ಬರಲಿ ಎಂತ ಹಾರೈಸುತ್ತೇವೆ.

ಮಹಾತ್ಮಗಾಂಧಿಯವರ ಸ್ವಚರಿತ್ರೆ.

ಎರಡನೆಯ ಭಾಗದಲ್ಲಿ 19 ನೆಯ ಪ್ರಕರಣ

ನೆಟಾಲಿನ ಭಾರತೀಯರ ಕಾಂಗ್ರೆಸ್ಸು

